
ಪೂಜಾರಿ ಶಿವಣ್ಣ ಹೇಳಿದ

ಜುಂಜಪ್ಪ ಮಹಾಕಾವ್ಯ

ಸಂಪಾದಕರು

- ಡಾ. ತೀ.ನಂ. ಶಂಕರನಾರಾಯಣ
- ಡಾ. ಎಂ.ಎನ್. ವೆಂಕಟೇಶ



ಪೂಜಾರಿ ಶಿವಣ್ಣ ಹೇಳಿದ

ಜುಂಜಪ್ಪ ಮಹಾಕಾವ್ಯ

ಸಂಪಾದಕರು

ಪ್ರೊ. ತೀ.ನಂ. ಶಂಕರನಾರಾಯಣ

ಡಾ. ಎಂ.ಎನ್. ವೆಂಕಟೇಶ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ಗೊಟಗೋಡಿ - ೫೮೧ ೧೯೭, ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

'POOJAARI SHIVANNA HELIDA JUNJAPPA MAHAKAAVYA'
(Epic of Junjappa narrated by Poojaari Shivanna)

Edited by
Prof. T.N. Shankaranarayana
Prathibha, Ist Cross, ARB Colony, Ashoka Nagara
Shivamogga-577 205 Karnataka.
Mob: 919448885175, E-mail: tnsnarayana@gmail.com

Dr. M.N. Venkatesha
Head, Department of Folklore and Tribal Studies
Dravidian University, Kuppam- 517 426, Andhra Pradesh
Mob: 917382753182, E-mail: mnvkuppam@gmail.com

Published by
Prof. S.C. Ramesh
Director
Centre for Extension and Consultancy
Karantaka Jaanapada University
Gotagodi - 581 197
Shiggavi Taluk, Haveri Dist, Karnataka
Phone: 0836 - 2255180

Pages: xiv + 280 = 294   **Price:** ₹ 170/-
www.janapadauni.in
First Impression : 2014
ISBN - 978-93-83149-28-5

ಬೆಲೆ : ೧೭೦/-
ಮುಖಪುಟ: ಕೆ.ಕೆ. ಮಕಾಳಿ

ಪುಸ್ತಕ ದೊರೆಯುವ ಸ್ಥಳ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ
ಗೊಟಗೋಡಿ ೫೮೧ ೧೯೭,
ಶಿಗ್ಗಾವಿ ತಾಲೂಕು, ಹಾವೇರಿ ಜಿಲ್ಲೆ

ಮುದ್ರಣ
ರಾಜಾ ಪ್ರಿಂಟರ್ಸ್, ಬೆಂಗಳೂರು
ದೂರವಾಣಿ : 22234066

ದೇಶ ಸುತ್ತು ಕೋಶ ಓದು

ಕನ್ನಡನಾಡು ಅಮೂಲ್ಯ ಹಾಗೂ ಸಮೃದ್ಧ ಜಾನಪದ ಸಂಪತ್ತಿನ ಆಗರವಾಗಿದೆ. ಅಪಾರವಾದ ಜ್ಞಾನದ ಅನನ್ಯತೆಯನ್ನು ಶೋಧಿಸುವ, ಸಂರಕ್ಷಿಸುವ ಹಾಗೂ ಸಂವರ್ಧಿಸುವ ಕಾರ್ಯಗಳು ಯಾವ ಕಾಲಕ್ಕೂ ಆಗಬೇಕಾದ ಕಾರ್ಯವೇ ಆಗಿದೆ. ಈ ಮಹತ್ವದ ಉದ್ದೇಶಗಳ ಈಡೇರಿಕೆಗಾಗಿ ಜಾನಪದ ವಿಶ್ವವಿದ್ಯಾಲಯದ ಸ್ಥಾಪನೆಯ ಅಗತ್ಯವಿತ್ತು. ನೆಲದ ಸಂಸ್ಕೃತಿಯನ್ನು ಉಸಿರಾಗಿಸಿಕೊಂಡು ಬದುಕುತ್ತಿರುವ ನಾಡಿನ ಸಮಸ್ತರ ಒಲವು ಮತ್ತು ನಿರೀಕ್ಷೆಗಳು ನಿಜವಾಗಬೇಕೆಂಬ ಮಹದಾಸೆಯೊಂದಿಗೆ ಜಗತ್ತಿನ ಪ್ರಪ್ರಥಮ ಕರ್ನಾಟಕ ಜಾನಪದ ವಿಶ್ವವಿದ್ಯಾಲಯ ಸ್ಥಾಪನೆಯಾಗಿದೆ. ಇದು ಕನ್ನಡದ ಮಟ್ಟಿಗೆ ಅಷ್ಟೇ ಅಲ್ಲ ದೇಶೀ ಸಂಸ್ಕೃತಿಯ ಮೂಲವನ್ನು ಶೋಧಿಸುವ ಮತ್ತು ಅದರ ಹರವು ವಿಸ್ತಾರಗೊಳ್ಳುವಂತೆ ಮಾಡಬೇಕಾದ ಮಹತ್ವದ ಜವಾಬ್ದಾರಿಯನ್ನು ಹೊತ್ತಿರುವುದರಿಂದ ವಿಶ್ವವಿದ್ಯಾಲಯದ ಸ್ಥಾಪನೆ ಚಾರಿತ್ರಿಕವಾಗಿ ಮಹತ್ವದ್ದೆನಿಸಿದೆ.

ಸಮಾಜದ ಎಲ್ಲ ಸಮುದಾಯಗಳ ಜ್ಞಾನ ಸಂಗ್ರಹಣೆ, ಸಂಪಾದನೆ, ಕಲಿಕೆ, ಪ್ರದರ್ಶನ ಕಾರ್ಯಗಳು ಇನ್ನೂ ತೀವ್ರಗತಿಯಲ್ಲಿ ಅತ್ಯಂತ ಪರಿಣಾಮಕಾರಿಯಾಗಿ ಹಾಗೂ ಪ್ರಮಾಣಬದ್ಧವಾಗಿ ಮತ್ತು ವೈಜ್ಞಾನಿಕವಾಗಿ ನಡೆಸುವ ಉದ್ದೇಶವೇ ವಿಶ್ವವಿದ್ಯಾಲಯದ ಮೂಲ ಧ್ಯೇಯವಾಗಿದೆ. ಬಹುಭಾಷಿಕ ಹಾಗೂ ಬಹುಸಂಸ್ಕೃತಿಗಳು ಇರುವ ನಾಡಿನಲ್ಲಿ ಇನ್ನೂ ಅನಾವರಣಗೊಳ್ಳಬೇಕಾದ ಜ್ಞಾನ ಸಂಪತ್ತು ಅಗಾಧ ಪ್ರಮಾಣದಲ್ಲಿದೆ. ಈವರೆಗೆ ಆದ ಜಾನಪದ ಕ್ಷೇತ್ರ ಸಂಬಂಧೀ ಕಾರ್ಯಗಳ ಬಗೆಗೆ ನಾವು ಅಷ್ಟೇನೂ ಬೀಗುವಂತಿಲ್ಲ. ಇನ್ನೂ ಆಗಬೇಕಾದ ಕೆಲಸ–ಕಾರ್ಯಗಳು ಬೇಕಾದಷ್ಟು ಇವೆ ಎಂಬ ವಿನಯದಿಂದಲೇ ಜಾನಪದ ವಿಶ್ವವಿದ್ಯಾಲಯ ಕಾರ್ಯಪ್ರವೃತ್ತವಾಗಿದೆ. ಜನಪದರ ಲೋಕದೃಷ್ಟಿ, ಅವರ ವಿವೇಕ ಹಾಗೂ ಜಾಗತೀಕರಣದಿಂದಾಗಿ ತೀವ್ರಗತಿಯಲ್ಲಿ ಬದಲಾಗುತ್ತಿರುವ ಪ್ರಪಂಚಕ್ಕೆ ಪರ್ಯಾಯ ದೇಶೀ ಜ್ಞಾನ ಆಕರವಾಗಿ ಅದರ ಪ್ರಸ್ತುತತೆಗೆ ವಿಶ್ವವಿದ್ಯಾಲಯ ವಿಶೇಷವಾಗಿ ಗಮನಹರಿಸಿದೆ. ಶಿಷ್ಟ ಭಾಷೆಯ ಯಾಜಮಾನ್ಯಕ್ಕೆ ಭಿನ್ನವಾಗಿ ಮೌಖಿಕತೆಯಲ್ಲಿನ ಸಾಂಸ್ಕೃತಿಕ ಅಭಿವ್ಯಕ್ತಿ ಹಾಗೂ ಮೌಖಿಕ ಸಂಕಥನಕ್ಕೆ ಹೆಚ್ಚು ಒತ್ತು ಕೊಡುವ ಜರೂರತ್ತು ನಮ್ಮ ಮುಂದಿದೆ.

ಜಾನಪದ ಎಂದರೆ ಆಧುನಿಕ ಜ್ಞಾನ ಮತ್ತು ತಂತ್ರಜ್ಞಾನಕ್ಕೆ ವಿರುದ್ಧವಾದುದು ಎಂಬ ತಿಳಿವಳಿಕೆ ಬಲವಾಗಿ ಬೇರೂರಿದೆ. ಅಷ್ಟೇ ಅಲ್ಲ ಹಳೆಯದನ್ನು ಸಂಗ್ರಹಿಸುವುದು, ಮುಂದಿನ ವರ್ಗಕ್ಕೆ ಕೂಡಿಟ್ಟು ಕೊಡುವುದು ಎಂಬ ಸ್ಥಾಪಿತ ತಿಳಿವಳಿಕೆಯ ಚೌಕಟ್ಟಿನಾಚೆಗೂ, ಜಾನಪದವನ್ನು ವಿಶಾಲ ಮನೋಭೂಮಿಕೆಯಲ್ಲಿ ಅರ್ಥೈಸಿಕೊಳ್ಳಬೇಕಾದುದು ಇಂದಿನ ಅಗತ್ಯ ವಾಗಿದೆ. ಜಾನಪದವು ಭೂಮಿತೂಕದ್ದು,

ಆಕಾಶದಷ್ಟು ವಿಸ್ತಾರವಾದುದು, ನೀರಿನಷ್ಟು ಚಲನಶೀಲವಾದುದು, ಗಾಳಿಯಂತೆ ನಮ್ಮ ಉಸಿರು ಎಂಬುದು ನಮ್ಮ ಅರಿವಿಗೆ ಬರಬೇಕಾಗಿದೆ. ಒಟ್ಟಿನಲ್ಲಿ ಜಾನಪದ ಎಂದರೆ ಎಲ್ಲವನ್ನೂ ಅಖಂಡವಾಗಿ ಅನುಸರಿಸಿದ ಒಂದು ಜೀವನ ವಿಧಾನ; ಜ್ಞಾನವನ್ನು ವಿಶೇಷ ರೀತಿಯಲ್ಲಿ ಹಂಚಿಕೊಂಡಿರುವ ಒಂದು ತವನಿಧಿಯಾಗಿದೆ. ಹಾಗಾಗಿ 'ಹೊನ್ನ ಬಿತ್ತೇವು ಹೊಲಕೆಲ್ಲ' ಎಂಬ ಧ್ಯೇಯ ವಾಕ್ಯವನ್ನು ತನ್ನ ಮೂಲಮಂತ್ರವಾಗಿಸಿಕೊಂಡು ವಿಶ್ವವಿದ್ಯಾಲಯ ಕಾರ್ಯೋನ್ಮುಖವಾಗಿದೆ. ಈವರೆಗೆ ಗುಪ್ತನಿಧಿಯಾಗಿದ್ದ ತವನಿಧಿ ಹೊನ್ನು ಈಗ ಜಗತ್ಪ್ರಕಟವಾಗಬೇಕಿದೆ. ವಿದ್ಯೆಯನ್ನು ಬೋಧಿಸುವುದು, ಸಂರಕ್ಷಿಸುವುದು ಅಷ್ಟೇ ಅಲ್ಲ ಹಂಚುವುದು–ಪ್ರಸರಣ ಮಾಡುವುದು ಜ್ಞಾನ ಕೇಂದ್ರವಾದ ವಿಶ್ವವಿದ್ಯಾಲಯದ ಮೂಲ ಗುರಿಯಾಗಿರಬೇಕು. ಈ ನಾಡು ಮೊದಲ ಬಾರಿಗೆ ವಿಶ್ವವಿದ್ಯಾಲಯದ ಮೂಲಕ ದೇಸೀ ಜ್ಞಾನಸಂಪತ್ತನ್ನು ಜಾಗತಿಕ ಪರಿಸರದಲ್ಲಿ ಬಿತ್ತುವ ಕಾರ್ಯಕ್ಕೆ ಕಂಕಣಬದ್ಧವಾಗಿದೆ. ಬಿತ್ತುವ, ಬೆಳೆಯುವ ಪ್ರಕ್ರಿಯೆ ಹೊಸಹುಟ್ಟಿಗೆ ನಾಂದಿ ಹಾಡುವುದಲ್ಲದೆ ಜ್ಞಾನಪರಂಪರೆಯ ಸತತ ಮುಂದುವರಿಕೆ ಸಂರಕ್ಷಣೆ, ಅಭಿವೃದ್ಧಿಯ ರೂಪವೂ ಆಗಿದೆ.

ಪಾರಂಪರಿಕ ಜ್ಞಾನ/ಸಮುದಾಯ ಜ್ಞಾನ ಮತ್ತು ಆಚರಣೆಯ ಮೂಲ ನೆಲೆಯಿಂದಲೇ ಈ ಹೊತ್ತಿನ ಜ್ಞಾನಪದ್ಧತಿ ಬೆಳೆದು ಬಂದಿದೆ. ಸಮುದಾಯ ಜ್ಞಾನದಿಂದ ತಂತ್ರಜ್ಞಾನ ಕೌಶಲಗಳ ಬಳಕೆಯನ್ವಯ ನಮ್ಮ ಗ್ರಾಮ ವ್ಯವಸ್ಥೆಯನ್ನು ಹೆಚ್ಚು ಉತ್ಪಾದಕವಾಗಿಯೂ, ಪ್ರಾಯೋಜಕವಾಗಿಯೂ, ದೃಢವಾಗಿಯೂ ರೂಢಿಸಬೇಕಾಗಿದೆ. ಆದರೆ ಇವೊತ್ತಿನ ಜಾಗತೀಕರಣ, ಉದಾರೀಕರಣ, ಖಾಸಗೀಕರಣಗಳ ಪ್ರಭಾವದಿಂದಾಗಿ ಜಾನಪದದಲ್ಲಿ ತೀವ್ರ ಸ್ವರೂಪದ ಬದಲಾವಣೆಗಳು ಆಗಿವೆ. ಅದರಲ್ಲೂ ಉದ್ಯಮಪತಿತ್ವ ತನಗೆ ಬೇಕಾದ ಜ್ಞಾನವನ್ನು ಮಾತ್ರ ಸೆಳೆದುಕೊಂಡು ಲಾಭದಾಯಕವಲ್ಲದ್ದನ್ನು ಹಿಂದಕ್ಕೆ ತಳ್ಳುತ್ತಲೇ ಬರುತ್ತಿದೆ. ಪಾರಂಪರಿಕ ಜ್ಞಾನ –ವಿಜ್ಞಾನ ಕುರಿತು ಅತ್ಯಂತ ವೈಜ್ಞಾನಿಕ ತಳಹದಿಯ ಮೇಲೆ ಹಾಗೂ ವರ್ತಮಾನಕ್ಕೆ ಹೊಂದಿಕೆಯಾಗುವ ಅಧ್ಯಯನ ಮಾದರಿಗಳನ್ನು ರೂಪಿಸಿಕೊಳ್ಳುವುದು ಆವಶ್ಯಕವಾಗಿದೆ. ಬದಲಾದ ಸನ್ನಿವೇಶದಲ್ಲಿ ಜಾನಪದ ಎನ್ನುವುದು ನಿತ್ಯದ ಬದುಕಿನ ಒಡಲಾಳದಿಂದಲೇ ರೂಪಾಂತರವನ್ನು ಹೊಂದುತ್ತಿರುವುದರಿಂದ ಜಾನಪದದಲ್ಲಿಯೇ ಅದಕ್ಕೆ ಪರ್ಯಾಯವಾಗಿ, ಪ್ರತಿರೋಧ ಒಡ್ಡುವ ಶಕ್ತಿ ಇರುವುದನ್ನು ಗುರುತಿಸಬೇಕಾಗಿದೆ. ಈ ನಿಟ್ಟಿನಲ್ಲಿ ನಮ್ಮದೇ ಜ್ಞಾನ, ಸಂಸ್ಕೃತಿಯನ್ನು ಆಧುನಿಕ ಸಂದರ್ಭಕ್ಕೆ ಅನ್ವಯಿಸಿಕೊಂಡು ನೋಡಲು ಯತ್ನಿಸಬೇಕಾಗಿದೆ. ಜನಪದರ ನಾಣ್ಣುಡಿಯಂತೆ, ಜ್ಞಾನ ಸಂಪಾದನೆಗೆ ಸಾಮಾನ್ಯವಾಗಿ ಅನುಸರಿಸುವ ಮಾರ್ಗಗಳು ಎರಡೇ; ಅವುಗಳಲ್ಲಿ ಒಂದು ದೇಶ ಸುತ್ತುವುದು, ಮತ್ತೊಂದು ಕೋಶ ಓದುವುದು. ಮನುಷ್ಯ ತನ್ನ ಜ್ಞಾನದಾಹವನ್ನು ನೀಗಿಸಿಕೊಳ್ಳಲು ಎರಡೂ ಮಾರ್ಗಗಳನ್ನು ಅನುಸರಿಸುವುದು ಅಗತ್ಯ. ಆದರೆ ಜ್ಞಾನ ಸಂಪಾದನೆಗೆ ಅವೆರೆಡರಲ್ಲಿ ಒಂದನ್ನಾದರೂ ಮಾಡಲೇಬೇಕು. ವಿಶ್ವವಿದ್ಯಾಲಯವು ಮೌಲಿಕವಾದ ಕೋಶಗಳನ್ನು ಪ್ರಕಟಿಸಿ ಓದುವಂತೆ ಪ್ರೇರೇಪಿಸುವ ಮೂಲಕ ಮಹತ್ವದ ಪ್ರಯತ್ನವನ್ನು ಮಾಡುತ್ತಿದೆ. ವಿಶ್ವವಿದ್ಯಾಲಯ ನೆಲಮೂಲವಾದ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿ ಪರಂಪರೆಗಳ ಕುರಿತು ವಿಶೇಷ

ಅಧ್ಯಯನ, ಅಧ್ಯಾಪನ, ಸಂಶೋಧನೆ ಸೇರಿದಂತೆ ಹತ್ತು ಹಲವು ಕಾರ್ಯಯೋಜನೆಗಳನ್ನು ರೂಪಿಸಿಕೊಂಡು ತನ್ನ ಕಾರ್ಯಕ್ಷೇತ್ರವನ್ನು ವಿಸ್ತರಿಸಿ ಕೊಳ್ಳುತ್ತಲಿದೆ. ದೇಶೀ ಎನ್ನಬಹುದಾದ ಎಲ್ಲ ಜ್ಞಾನವನ್ನು ಸಂಗ್ರಹಿಸುವ, ನಿರಂತರವಾಗಿ ಚಲನಶೀಲಗೊಳ್ಳುವ ಜಾನಪದವನ್ನು ಅದೇ ನೆಲೆಯಿಂದಲೇ ಗ್ರಹಿಸಿ, ಹೊಸ ಹೊಸ ಜ್ಞಾನ ಶೋಧದೊಂದಿಗೆ ಜಾನಪದವನ್ನು ಇಟ್ಟು ನೋಡುವ ಮತ್ತೆ ಹೊಸದಾಗಿ ಕಟ್ಟಿಕೊಳ್ಳುವ ಕಾರ್ಯವನ್ನು ನೋಂಪಿಯಂತೆ ಮುನ್ನಡೆಸಿಕೊಂಡು ಹೋಗುವುದೇ ಜಾನಪದ ವಿಶ್ವವಿದ್ಯಾ ಲಯದ ಮೂಲ ಆಶಯವಾಗಿದೆ. ಅದರ ಭಾಗವಾಗಿ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಪುಸ್ತಕ ಪ್ರಕಟಣೆಗೆ ಮುಂದಾಗಿದೆ. ಈ ಮೂಲಕ ಅಂತರ್‌ಶಿಸ್ತೀಯ ಜ್ಞಾನಶೋಧದ ವಿನೂತನ ಮಾರ್ಗಗಳು ತೆರೆದುಕೊಳ್ಳಲು ವಿಶ್ವವಿದ್ಯಾಲಯ ನಾಂದಿ ಹಾಡಿದೆ.

ಕನ್ನಡದ ನೆಲದಲ್ಲಿ ಶಿಷ್ಟ ಸಾಹಿತ್ಯ ಪ್ರಕಾರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಜಾನಪದದಲ್ಲಿ ಆ ಪ್ರಮಾಣದ ಕೆಲಸಗಳ ಕೊರತೆ ಎದ್ದುಕಾಣುತ್ತದೆ. ಶಿಷ್ಟ ಸಾಹಿತ್ಯ ಅದರಲ್ಲೂ ಶಿಷ್ಟ ಮಹಾಕಾವ್ಯಗಳ ಅಧ್ಯಯನಗಳು ಪ್ರಾಮುಖ್ಯತೆ ಪಡೆದವು. ಪರಿಣಾಮ ಜನಪದ ಮಹಾಕಾವ್ಯಗಳ ಅಧ್ಯಯನಗಳು ಹಿನ್ನೆಲೆಗೆ ಸರಿದವು. ಸಾಹಿತ್ಯ ಅಧ್ಯಯನಗಳು 'ಸಾಂಸ್ಕೃತಿಕ' ಎನ್ನುವ ವಿಶಾಲ ನೆಲೆಯಲ್ಲಿ ಅಧ್ಯಯನಕ್ಕೆ ಒಳಗಾಗುತ್ತಿರುವುದು ಗಮನಾರ್ಹ. ಇದು ದೇಶೀ ಸಾಹಿತ್ಯ ಅಧ್ಯಯನದಲ್ಲಿ ಚಾರಿತ್ರಿಕವಾಗಿ ಮಹತ್ವದ ಪಲ್ಲಟ. ಬುಡಕಟ್ಟು ಸಮುದಾಯಗಳ ಧಾರ್ಮಿಕ ಪರಂಪರೆಯ ಪ್ರಾತಿನಿಧಿಕ ಅಂಶಗಳನ್ನು ಒಡಲಾಳದಲ್ಲಿ ಹುದುಗಿಸಿಕೊಂಡಿರುವ ಜನಪದ ಮಹಾಕಾವ್ಯಗಳು ವಿಶಿಷ್ಟವಾಗಿವೆ. ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಅಭಿವ್ಯಕ್ತಿಸುವ ಜನಪದ ಕಾವ್ಯಗಳ ಪೈಕಿ ಜುಂಜಪ್ಪ ಕಾವ್ಯವೂ ಒಂದು. ಕಾವ್ಯವೊಂದರ ನಿರ್ದಿಷ್ಟ ಪಠ್ಯವು ಕಾಲದಿಂದ ಕಾಲಕ್ಕೆ ಸ್ವೀಕಾರ ಮತ್ತು ವಿಸರ್ಜನೆ ಪ್ರಕ್ರಿಯೆಗೆ ಒಳಪಡುತ್ತವೆ. ಈ ಹಿನ್ನೆಲೆಯಲ್ಲಿ ಜುಂಜಪ್ಪ ಕಾವ್ಯ ಭಿನ್ನ ಪಠ್ಯಗಳನ್ನು ಹೊಂದಿಯೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಇಂತಹ ಕಾವ್ಯವನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಮೆಣಸಿನಹಳ್ಳಿ ಗೊಲ್ಲರಹಟ್ಟಿಯ 'ಪದಹೇಳುವ ಶಿವಣ್ಣ' ಎಂದೇ ಖ್ಯಾತರಾದ ಶ್ರೀ ಪೂಜಾರಿ ಶಿವಣ್ಣ ನಿರೂಪಿಸಿದ ದೀರ್ಘಕಥಾರೂಪದ ಪಠ್ಯವನ್ನು ಪ್ರೊ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಸಂಪಾದಿಸಿದ್ದಾರೆ. ಜುಂಜಪ್ಪ ಕಾವ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ವಿಶ್ಲೇಷಿಸುವ ಕಾರ್ಯಗಳು ಈವರೆಗೆ ನಡೆದಿವೆಯಾದರೂ ಜುಂಜಪ್ಪ ಕಾವ್ಯವನ್ನು ಕುರಿತ ಅಧ್ಯಯನಕ್ಕೆ ಪ್ರಕೃತ ಕೃತಿ ಸಹಾಯಕವಾಗಲಿದೆ. ಮೌಲಿಕ ಮೌಖಿಕ ಪಠ್ಯವೊಂದನ್ನು ಸಂಪಾದಿಸಿಕೊಟ್ಟಿರುವ ಪ್ರೊ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

ಗ್ರಂಥವನ್ನು ಅಚ್ಚುಕಟ್ಟಾಗಿ ಹೊರತುವಲ್ಲಿ ತುಂಬ ಮುತುವರ್ಜಿ ವಹಿಸಿದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರೂ, ಮೌಲ್ಯಮಾಪನ ಕುಲಸಚಿವರೂ ಆದ ಪ್ರೊ. ಸ.ಚಿ. ರಮೇಶ ಹಾಗೂ ಸಿಬ್ಬಂದಿ ವರ್ಗಕ್ಕೆ ಅಭಿನಂದನೆಗಳು

ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ನಿರ್ದೇಶಕರ ಮಾತು

ಕರ್ನಾಟಕ ಜಾನಪದ ವಿಶ್ವವಿದ್ಯಾಲಯವು ಸಮಾಜದ ಸಮಸ್ತ ಸಮುದಾಯಗಳ ಜ್ಞಾನ ಸಂಗ್ರಹಣೆ, ಅಧ್ಯಯನ, ಅಧ್ಯಾಪನ, ಸಂಶೋಧನೆಯಂತ ಶೈಕ್ಷಣಿಕ ಕಾರ್ಯಚಟುವಟಿಕೆಗಳನ್ನು ರೂಪಿಸಿಕೊಂಡು ಕಾರ್ಯ ಪ್ರವೃತ್ತವಾಗಿದೆ. ವಿಶ್ವವಿದ್ಯಾಲಯವು ಇನ್ನೊಂದು ಹೆಜ್ಜೆ ಮುಂದೆ ಹೋಗಿ ತನ್ನ ಕಾರ್ಯಕ್ಷೇತ್ರಗಳನ್ನು ವಿಸ್ತರಿಸಿಕೊಳ್ಳುವ ಭಾಗವಾಗಿ 'ವಿಸ್ತರಣೆ ಹಾಗೂ ಸಲಹಾ ಕೇಂದ್ರ' ವನ್ನು ಆರಂಭಿಸಿದೆ. ವಿಶ್ವವಿದ್ಯಾಲಯಗಳು ನಿಜವಾದ ಅರ್ಥದಲ್ಲಿ ಜ್ಞಾನದ ಪುನರುತ್ಪಾದನೆಯಲ್ಲಿ ತೊಡಗಿಕೊಳ್ಳಬೇಕು. ಸ್ಥಾಪಿತ ಸಿದ್ಧ ಜ್ಞಾನದ ಸಂಗ್ರಹದ ಜೊತೆಗೆ ನಿತ್ಯನೂತನವಾದ ಜನಪದ ಸಂಸ್ಕೃತಿಯನ್ನು ಪುನರ್‌ನಿರ್ವಚಿಸುವ, ಹೊಸ ರೀತಿಯಲ್ಲಿ ಸ್ಥಾಪಿತಗೊಳಿಸುವ ಕೈಂಕರ್ಯಕ್ಕೆ ಕೈ ಹಾಕಬೇಕು. ಋತುಮಾನಗಳು ಬದಲಾದಂತೆ ಮನುಷ್ಯ ಬದುಕು ಬದಲಾಗುತ್ತಲೇ ಸಂವೇದನಾಶೀಲಗೊಳ್ಳುತ್ತ ಹೋಗುತ್ತದೆ. ನಮ್ಮ ಜನಪದ ಕಲೆ, ಸಾಹಿತ್ಯ, ಸಂಸ್ಕೃತಿಗಳು ತನ್ನತನದ ಛಾಯೆಯನ್ನು ಕಳೆದುಕೊಳ್ಳುತ್ತ ನಡೆದ ಇವೊತ್ತಿನ ಸಂದಿಗ್ಧತೆಯಲ್ಲಿ ನಾವು ಮಾಡುವ ವಿನೂತನ ಜ್ಞಾನಶೋಧಗಳು, ಪ್ರಯೋಗಗಳು ಕಳೆಗುಂದುತ್ತಿರುವ ಜನಪದ ಸಂಸ್ಕೃತಿಯನ್ನು ಕಳೆಗಟ್ಟುವಂತೆ ಮಾಡದೇ ಹೋದರೆ ನಮ್ಮ ಪ್ರಯತ್ನಗಳು ನಿರರ್ಥಕ. ಆ ಎಚ್ಚರಿಕೆಯನ್ನು ಇಟ್ಟುಕೊಂಡೇ ಜಾನಪದ ವಿಶ್ವವಿದ್ಯಾಲಯವು ವಿಸ್ತರಣೆ ಹಾಗೂ ಸಲಹಾ ಕೇಂದ್ರದ ಮೂಲಕ ಅತ್ಯುಪಯುಕ್ತ ಕಾರ್ಯಯೋಜನೆಗಳನ್ನು ರೂಪಿಸಿದೆ.

ಅಂತರ್‌ಶಿಸ್ತೀಯ ಜ್ಞಾನ ಶಾಖೆಗಳಲ್ಲಿ ಜಾನಪದವೂ ಒಂದು. ನೆಲಮೂಲ ಜೀವನ, ಕಲೆ, ಸಾಹಿತ್ಯ, ಸಂಸ್ಕೃತಿಗೆ ಸಂಬಂಧಿಸಿದ ಹೊಸ ಹೊಸ ಜ್ಞಾನವನ್ನು ಶೋಧಿಸಿ, ಜಗತ್ತಿನ ಮೂಲೆ ಮೂಲೆಗೆ ತಲುಪಿಸುವ ಗುರುತರ ಜವಾಬ್ದಾರಿ ವಿಶ್ವವಿದ್ಯಾಲಯದ ಮೇಲಿದೆ. ಅದನ್ನು ಸಾಧ್ಯವಾಗಿಸುವ ಉದ್ದೇಶ ಇಟ್ಟುಕೊಂಡೇ ಆರಂಭವಾದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರವು ಜಾನಪದ ಕ್ಷೇತ್ರದ ಬಾಹುಳ್ಯತೆ, ವಿಶ್ವವ್ಯಾಪಕತೆ, ಅದರ ಮೂಲ-ಚೂಲಗಳನ್ನು ಕಂಡರಿಸುವ ಪ್ರಯತ್ನ ಮಾಡುವ ಮಹದಾಸೆ ಹೊಂದಿದೆ. ಜೊತೆಗೆ ಹೊಸ ಅಧ್ಯಯನಗಳು, ನೂತನ ಮಾದರಿಯ ಸಂಶೋಧನೆಗಳು, ನಾಡಿನ ಶ್ರೇಷ್ಠ ವಿದ್ವಾಂಸರ ಕೃತಿಗಳನ್ನು ಪ್ರಕಟಿಸುವ ಮೂಲಕ ಜ್ಞಾನ ಪ್ರಸಾರದ ಉದ್ದೇಶಕ್ಕೆ ಒತ್ತಾಸೆಯಾಗಿ ನಿಲ್ಲಲಿದೆ. ಕೇಂದ್ರವು ಜ್ಞಾನ ಪ್ರಸರಣಕ್ಕೆ ಟೊಂಕಕಟ್ಟಿ ನಿಂತಿದ್ದು, ಮೌಲಿಕವಾದ ಪುಸ್ತಕಗಳ ಪ್ರಕಟಣೆಗೆ ಮುಂದಾಗಿದೆ. ನಾವು ಪ್ರಕಟಮಾಡುವ ವೈವಿಧ್ಯಪೂರ್ಣವಾದ ಮೌಲಿಕ ಕೃತಿಗಳು ನಾಡಿನ ಓದುಗರಿಗೆ ತಲುಪಿ, ಅವು ಸದುಪಯೋಗವಾದರೆ ಮಾತ್ರ ನಮ್ಮ ಶ್ರಮ ಸಾರ್ಥಕ ಎಂದು ಭಾವಿಸುತ್ತೇನೆ.

ಜನಪದ ಮಹಾಕಾವ್ಯಗಳಿಗೆ ತಮ್ಮದೇ ಆದ ಸಾಂಸ್ಕೃತಿಕ ಅನನ್ಯತೆ ಇದೆ. ಸಮುದಾಯವೊಂದರ ಸಾಂಸ್ಕೃತಿಕ ಅಂಶಗಳನ್ನು ಗರ್ಭೀಕರಿಸಿಕೊಂಡಿರುವ ಜನಪದ ಕಾವ್ಯಗಳು ನೆಲಮೂಲ ಸಂಸ್ಕೃತಿ ಅಧ್ಯಯನದ ಮುಖ್ಯ ಆಕರಗಳು. ಮಂಟೇಸ್ವಾಮಿ, ಜುಂಜಪ್ಪ, ಮಲೆಮಾದೇಶ್ವರ, ಎಲ್ಲಮ್ಮ, ಸಿರಿ, ಹಾಲುಮತ, ಮೈಲಾರ, ಕುಮಾರರಾಮ ಇತ್ಯಾದಿ ನೂರಾರು ಜನಪದ ಮಹಾಕಾವ್ಯಗಳ ಪರಂಪರೆಯೇ ನಮ್ಮಲ್ಲಿದೆ. ಅವುಗಳಲ್ಲಿ ಹೆಚ್ಚಿನವು ಧಾರ್ಮಿಕ ಪರಿಭಾಷೆಯ ನೆಲೆಯಲ್ಲಿ ಅಧ್ಯಯನಕ್ಕೊಳಪಟ್ಟಿವೆ. ಅಲ್ಲದೆ ಸಾಮಾಜಿಕ, ಮನೋವಿಶ್ಲೇಷಣಾತ್ಮಕ, ಸಾಂಸ್ಕೃತಿಕ ಮಾನವಶಾಸ್ತ್ರೀಯ ಹಿನ್ನೆಲೆಯಲ್ಲಿ ಜನಪದ ಕಾವ್ಯಗಳ ಕುರಿತು ಸಂಶೋಧನೆಗಳು ಆಗಿರುವುದು ಗಮನಾರ್ಹ. ಜನಸಮುದಾಯವನ್ನು ಕೇಂದ್ರೀಕರಿಸಿ ಹುಟ್ಟಿಕೊಂಡಿರುವ ಜನಪದ ಕಾವ್ಯಗಳು ಇಂದು ಬಹುಶೀಸ್ತೀಯ ನೆಲೆಯಲ್ಲಿ ಅಧ್ಯಯನಕ್ಕೊಳಪಡುತ್ತಿವೆ. ಇದು ನೆಲಮೂಲ ಸಂಸ್ಕೃತಿಯ ಬಹುತ್ವವನ್ನು ಗುರುತಿಸಲು ಮತ್ತು ಕಂಡುಕೊಳ್ಳಲು ನಡೆಸುವ ಪ್ರಯತ್ನವಾಗಿದೆ. ಜನಪದ ಮಹಾಕಾವ್ಯಗಳು ಸಮುದಾಯವೊಂದರ ಅನನ್ಯತೆಯನ್ನು ಒಳಗೊಂಡಿರುವಂತೆಯೇ ಅದರ ಜೀವನ ಮೌಲ್ಯಗಳನ್ನು ಕನ್ನಡಿಸುವ ಕನ್ನಡಿ ಎಂಬುದಂತು ನಿಸ್ಸಂದೇಹ. ಅವುಗಳಲ್ಲಿ ಜುಂಜಪ್ಪ ಕಾವ್ಯವೂ ಒಂದು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಮೇಣಸಿನಹಳ್ಳಿ ಗೊಲ್ಲರಹಟ್ಟಿಯ ಶ್ರೀ ಪೂಜಾರಿ ಶಿವಣ್ಣ ಹೇಳಿದ ದೀರ್ಘ ಕಥಾರೂಪದ ಪಠ್ಯವನ್ನು ಡಾ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಸಂಪಾದಿಸಿದ್ದಾರೆ. ಜುಂಜಪ್ಪ ಕಾವ್ಯದ ವಿಸ್ತೃತ ಅಧ್ಯಯನಕ್ಕೆ ಅನುಕೂಲವಾಗಲಿರುವ ಪ್ರಸ್ತುತ ಕೃತಿಯನ್ನು ಸಂಪಾದಿಸಿಕೊಟ್ಟಿರುವ ಡಾ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಅವರಿಗೆ ಕೃತಜ್ಞತೆಗಳು.

ಈ ಗ್ರಂಥವು ಅಚ್ಚುಕಟ್ಟಾಗಿ ಪ್ರಕಟಗೊಳ್ಳಲು ಸರ್ವ ರೀತಿಯಲ್ಲೂ ಸಹಕಾರ ನೀಡಿದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಯವರಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ, ಕುಲಸಚಿವರಾದ ಪ್ರೊ. ಡಿ.ಬಿ. ನಾಯಕ, ನಿರ್ದೇಶಕ ಹಾಗೂ ಪ್ರಾಧ್ಯಾಪಕ ಡಾ. ಕೆ. ಪ್ರೇಮಕುಮಾರ, ಅನ್ವಯಿಕ ಜಾನಪದ ನಿಕಾಯದ ಡೀನ್‌ರಾದ ಪ್ರೊ. ಎಂ. ಚಂದ್ರ ಪೂಜಾರಿ, ತಾಂತ್ರಿಕ ಪುಟಗಳ ಸಿದ್ಧತೆ ಹಾಗೂ ಮುದ್ರಣಪೂರ್ವ ಕೆಲಸಗಳಲ್ಲಿ ಸಹಕರಿಸಿದ ಶ್ರೀ ಸಂಗಮೇಶ ಎಸ್. ಗಣಿ, ಶ್ರೀ ವಿಶ್ವ ಗುಜ್ಜರ್, ಅಂದವಾದ ಮುಖಪುಟ ವಿನ್ಯಾಸ ಮಾಡಿಕೊಟ್ಟ ಶ್ರೀ ಕೆ.ಕೆ. ಮಕಾಳಿ, ಕಚೇರಿ ಸಹಾಯಕ ಶ್ರೀ ಕೆ.ಎಲ್. ಲಕ್ಷ್ಮಣ ಅವರಿಗೆ ಹಾಗೂ ಗ್ರಂಥವು ಪ್ರಕಟಗೊಳ್ಳುವಲ್ಲಿ ಪ್ರತ್ಯಕ್ಷ ಮತ್ತು ಪರೋಕ್ಷವಾಗಿ ಶ್ರಮಿಸಿದ ಎಲ್ಲರಿಗೂ ಕೃತಜ್ಞತೆಗಳು.

ಪ್ರೊ. ಸ.ಚಿ. ರಮೇಶ

ನಿರ್ದೇಶಕ

ವಿಸ್ತರಣೆ ಹಾಗೂ ಸಲಹಾ ಕೇಂದ್ರ

ಪರಿವಿಡಿ

ಅರಿಕೆ

ಜುಂಜಪ್ಪ ಮಹಾಕಾವ್ಯವನ್ನು ಸೂಕ್ಷ್ಮವಾಗಿ ಮತ್ತು ಆಳವಾಗಿ ಅಧ್ಯಯನ ಮಾಡುವ ದೃಷ್ಟಿಯಿಂದ ಈ ಕಾವ್ಯವನ್ನು ಹಾಡಿದ ಹಾಗೂ ಕಥೆಯ ರೂಪದಲ್ಲಿ ಹೇಳಿದ ವಿವಿಧ ಕಲಾವಿದರಿಂದ ಪಠ್ಯಗಳನ್ನು ಸಂಗ್ರಹಿಸಲು ೧೯೯೧–೯೩ ರ ಸಾಲಿನಲ್ಲಿ ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದಿಂದ, ಫೋರ್ಡ್ ಫೌಂಡೇಶನ್ ಮೂಲಕ, ಆರ್ಥಿಕ ಅನುದಾನವನ್ನು ಪಡೆದು, ಆ ಯೋಜನೆಯನ್ನು ಕೈಗೊಳ್ಳಲಾಯಿತು. ೨೫೦ ಘಂಟೆಗಳ ಆಡಿಯೋ ಕ್ಯಾಸೆಟ್‌ಗಳ ರೂಪದಲ್ಲಿ ಆ ಸಾಮಗ್ರಿ ಉಡುಪಿಯ ಆರ್. ಆರ್. ಸಿ. ಯಲ್ಲಿ ಸುರಕ್ಷಿತವಾಗಿದೆ. ಈ ಕಾವ್ಯವನ್ನು ದೀರ್ಘವಾಗಿ ಹಾಡಿದ / ಕಥೆಯ ರೂಪದಲ್ಲಿ ಹೇಳಿದ ಶ್ರೀ ಮೂಡಲಪ್ಪ, ಶ್ರೀ ಪೂಜಾರಿ ಈರಣ್ಣ, ಹಾಗೂ ಶ್ರೀ ಪೂಜಾರಿ ಶಿವಣ್ಣ ಈ ಮೂವರ ದೀರ್ಘವಾದ ಪಾಠಗಳು ಮತ್ತು ಸಿರಿಯಜ್ಜಿ ಹಾಡಿದ ಸಂಕ್ಷಿಪ್ತ ಪಾಠಗಳು ಇದರಲ್ಲಿದೆ. ಇದಲ್ಲದೆ ಇನ್ನೂ ಹಲವು ಕಲಾವಿದರು ಜುಂಜಪ್ಪನ ಕಾವ್ಯದ ಕೆಲವು ಪ್ರಸಂಗಗಳನ್ನು ಹಾಡಿದ್ದಾರೆ. ಒಟ್ಟು ೩೦ ಜನ ಕಲಾವಿದರಿಂದಲೂ ೨೦ ಜನ ಕಲಾವಿದೆಯರಿಂದಲೂ ಪಠ್ಯಗಳನ್ನು ಸಂಗ್ರಹಿಸಲಾಗಿದೆ. ಇದರಲ್ಲಿ ಹಲವರು ಜುಂಜಪ್ಪ ಮಹಾಕಾವ್ಯದ ಕೆಲವು ನಿರ್ದಿಷ್ಟ ಭಾಗಗಳನ್ನು ಮಾತ್ರ ಹಾಡಿದ್ದಾರೆ.

ಇದಕ್ಕೆ ಸಂಬಂಧಿಸಿದ ಒಂದು ವರದಿ *Epic of Junjappa: Text and Performance* ಎಂಬ ಶೀರ್ಷಿಕೆಯಲ್ಲಿ ಪ್ರಕಟವಾಗಿದೆ. ಆದರೆ, ದೀರ್ಘ ಸ್ವರೂಪದ ಪಠ್ಯಗಳಲ್ಲಿ ಪೂಜಾರಿ ಶಿವಣ್ಣ ಹೇಳಿದ ಕಥೆಯನ್ನು ಮಾತ್ರ ಸಂಪೂರ್ಣವಾಗಿ ಲಿಪೀಕರಣ ಮಾಡಲಾಯಿತು. ಉಳಿದವುಗಳನ್ನು ಲಿಪೀಕರಿಸಿ, ಸಂಪಾದಿಸಿ ಪ್ರಕಟಿಸಬೇಕಾದ ಅಗತ್ಯವಿದೆ. ಆದರೆ ಇವುಗಳ ಪ್ರಕಟಣೆ ಮಾಡಲು ಸಾಧ್ಯವಾಗಿರಲಿಲ್ಲ. ಜಾನಪದ ವಿಶ್ವವಿದ್ಯಾಲಯದ ಮಾನ್ಯ ಕುಲಪತಿಗಳಾದ ಪ್ರೊ. ಅಂಬಳಿಕೆ ಹಿರಿಯಣ್ಣ ಅವರು ಇವುಗಳಲ್ಲಿ ಯಾವುದಾದರೂ ಒಂದು ದೀರ್ಘ ಪಠ್ಯವನ್ನು ಹಾಗೂ ಅದರ ಇಂಗ್ಲಿಷ್ ಆವೃತ್ತಿಯನ್ನು ಪ್ರಕಟಿಸಬಹುದೆಂದೂ ನಮಗೆ ತಿಳಿಸಿದರು. ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಮೆಣಸಿನಹಳ್ಳಿ ಗೊಲ್ಲರಹಟ್ಟಿಯ 'ಪದಹೇಳುವ ಶಿವಣ್ಣ' ಎಂದು ಖ್ಯಾತರಾದ ಪೂಜಾರಿ ಶಿವಣ್ಣ ಹೇಳಿದ ಕಥಾರೂಪದ ಈ ಪಠ್ಯವನ್ನು ಸಂಪಾದಿಸಿ ಇಲ್ಲಿ ಪ್ರಕಟಿಸಲಾಗಿದೆ. ಇದಕ್ಕಾಗಿ ಪ್ರೊ. ಅಂಬಳಿಕೆ ಹಿರಿಯಣ್ಣ ಅವರಿಗೆ ವಿಶೇಷವಾಗಿ ನಮ್ಮ ವಂದನೆಗಳನ್ನು ತಿಳಿಸುತ್ತಿದ್ದೇವೆ. ಹಾಗೆಯೇ ನಾವು ಸಂಗ್ರಹಿಸಿದ ಈ ಪಠ್ಯ ಪ್ರಕಟವಾಗಬೇಕೆಂಬ ಸಲಹೆಯನ್ನು ನೀಡಿದ ಪ್ರೊ. ವಿವೇಕ ರೈ ಅವರಿಗೂ ನಮ್ಮ ವಂದನೆಗಳು. ಉಡುಪಿಯ ಆರ್.ಆರ್.ಸಿ. ಯಲ್ಲಿ ಈ ಬಗೆಯ ಯೋಜನೆಯನ್ನು ಕೈಗೊಳ್ಳಬಹುದೆಂದು ಸಲಹೆ ನೀಡಿದ ಅಮೆರಿಕಾದ ಹೇವರ್ಡ್‌ನಲ್ಲಿರುವ ಕ್ಯಾಲಿಫೋರ್ನಿಯಾ ವಿಶ್ವವಿದ್ಯಾಲಯದ ಮಾನವವಿಜ್ಞಾನ

ಪ್ರಾಧ್ಯಾಪಕರಾದ ಡಾ. ಪೀಟರ್ ಜೆ. ಕ್ಲಾಸ್ ಅವರಿಗೆ, ಆಗ ಆರ್.ಆರ್.ಸಿ. ಯ ನಿರ್ದೇಶಕರಾಗಿದ್ದ ದಿವಂಗತ ಪ್ರೊ. ಕು. ಶಿ. ಹರಿದಾಸ ಭಟ್ ಅವರಿಗೆ ಹಾಗೂ ಅವರ ಜೊತೆಯಲ್ಲಿದ್ದ ಡಾ. ಹೆರಂಜೆ ಕೃಷ್ಣ ಭಟ್, ಪ್ರೊ. ರಾಮದಾಸ್, ಡಾ. ಎನ್.ಟಿ. ಭಟ್ ಅವರುಗಳಿಗೂ ನಮ್ಮ ವಂದನೆಗಳು. ನಮ್ಮ ಕ್ಷೇತ್ರಕಾರ್ಯಕ್ಕೆ ಸಂಬಂಧಿಸಿದಂತೆ ನಮಗೆ ಬಹಳಷ್ಟು ಸಹಕಾರ ನೀಡಿದ ಶ್ರೀ ಎಸ್. ಎ. ಕೃಷ್ಣಯ್ಯ , ಶ್ರೀ ಹರ್ಷವರ್ಧನ್ ಭಟ್, ಡಾ. ಅಶೋಕ ಆಳ್ವ, ಶ್ರೀ ಲಚ್ಚೇಂದ್ರ ಮೊದಲಾದವರಿಗೂ ನಮ್ಮ ವಂದನೆಗಳು.

ನಮ್ಮ ಈ ಕ್ಷೇತ್ರಕ್ಕೆ ಸಂಬಂಧಿಸಿದಂತೆ ನಾವು ಕಾಡುಗೊಲ್ಲರ ವಿವಿಧ ಹಟ್ಟಿಗಳಲ್ಲಿ ಪರ್ಯಾನ್ವೇಷಣೆ ನಡೆಸುತ್ತಿದ್ದಾಗ ಪೂಜಾರಿ ಶಿವಣ್ಣನವರಿಗೆ ಜುಂಜಪ್ಪನ ಕಾವ್ಯ ಚೆನ್ನಾಗಿ ಗೊತ್ತಿದೆಯೆಂದೂ ಉತ್ತಮವಾಗಿ ಕಥೆ ಹೇಳಬಲ್ಲರೆಂದೂ ತಿಳಿದುಬಂದಿತು. ದೊಡ್ಡ ಅಗ್ರಹಾರದ ಶ್ರೀ ಅನಂತರಾಮಯ್ಯ ಅವರು ಶಿವಣ್ಣ ಎಂಬ ಈ ಕಲಾವಿದರ ಪರಿಚಯ ಮಾಡಿಕೊಡಲು ನೆರವಾದರು. ಮೆಣಸಿನಹಳ್ಳಿಯಲ್ಲಿ ಶ್ರೀ ಶಿವಪ್ರಕಾಶ್ ಎಂಬುವವರನ್ನು ಪರಿಚಯ ಮಾಡಿಕೊಂಡು ಅವರ ಮೂಲಕ ಶಿವಣ್ಣನವರನ್ನು ಭೇಟಿಯಾಗಿ ನಮ್ಮ ಉದ್ದೇಶವನ್ನು ಅವರಿಗೆ ವಿವರಿಸಿದೆವು. ಈ ಪಠ್ಯದಲ್ಲಿ ಎಲ್ಲೆಲ್ಲಿ 'ಗುಂಡಣ್ಣನವರೇ' ಎಂದು ಹಾಡುಗಾರ ಶಿವಣ್ಣ ಸಂಬೋಧಿಸುತ್ತಾರೋ ಅವೆಲ್ಲವೂ ಈ ಶಿವಪ್ರಕಾಶ್ ಅವರನ್ನು ಕುರಿತದ್ದೇ ಆಗಿದೆ. ಶ್ರೀ ಶಿವಪ್ರಕಾಶ್ ಅವರಿಗೆ ಈ ಕಾರಣಕ್ಕಾಗಿ ವಿಶೇಷ ಧನ್ಯವಾದಗಳು.

ಜುಂಜಪ್ಪನ ಪದ ಹಾಡುವ ಶಿವಣ್ಣನವರನ್ನು ಅವರ ಗೊಲ್ಲರ ಹಟ್ಟಿಯಲ್ಲಿ ಹಾಗೂ ಸುತ್ತಮುತ್ತಲ ಹಳ್ಳಿಗಳಲ್ಲಿ 'ಪದ ಹೇಳುವ ಶಿವಣ್ಣ', 'ಪೂಜಾರಿ ಶಿವಣ್ಣ', 'ಜುಂಜಪ್ಪ ಸ್ವಾಮಿ' ಎಂಬೆಲ್ಲಾ ಹೆಸರಿನಿಂದ ಕರೆಯುತ್ತಾರೆ. ಅವರು ಪಟ್ಟದ ಪೂಜಾರಿ ಅಲ್ಲದಿದ್ದರೂ ಹಟ್ಟಿಯಲ್ಲಿ ಪಟ್ಟದ ಪೂಜಾರಿಗೆ ಇರುವಷ್ಟೇ ಗೌರವ ಅವರಿಗೆ ಇದೆ. ಪದ ಹೇಳುವ ಕಾರಣಕ್ಕಾಗಿ ಊರೂರು ಅಲೆಯುವ ಶಿವಣ್ಣ ಈ ಕಾರಣಕ್ಕಾಗಿ ಒಂದೆಡೆ ನೆಲೆನಿಲ್ಲುವುದು ಕಷ್ಟ. ಆದರೂ ಮೆಣಸಿನಹಳ್ಳಿ ಗೊಲ್ಲರಹಟ್ಟಿಯವರಿಗೆ ಶಿವಣ್ಣ ತಮ್ಮವರು ಎಂಬ ಹೆಮ್ಮೆಯಿದೆ. ಕಳೆದ ಏಳು ವರುಷಗಳ ಹಿಂದೆ ಶಿವಣ್ಣ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಈ ಪಠ್ಯವನ್ನು ಮೆಣಸಿನಹಳ್ಳಿ ಗೊಲ್ಲರಹಟ್ಟಿಯಲ್ಲಿ ದಿನಾ ಸಂಜೆ ೭ ಘಂಟೆಯಿಂದ ಮಧ್ಯರಾತ್ರಿಯವರೆಗೂ ಓಬಳ ನರಸಿಂಹ ದೇವರ ಗುಡಿ ಎದುರು ಹಾಡುತ್ತಿದ್ದ ಸಹಜ ಸಂದರ್ಭದಲ್ಲಿ ಆಡಿಯೋ ದಾಖಲಾತಿ ಮಾಡಿಕೊಳ್ಳಲಾಯಿತು. ಈ ಕಥೆಯನ್ನು ಹೇಳಿದ ಶಿವಣ್ಣನವರಿಗೂ ಹಾಗೂ ಸಂತೋಷದಿಂದ ಕುಳಿತು ಕೇಳಿ ಪ್ರೋತ್ಸಾಹಿಸಿದ ಮೆಣಸಿನಹಳ್ಳಿ ಗೊಲ್ಲರಹಟ್ಟಿಯ ಕಾಡುಗೊಲ್ಲರಿಗೂ ನಮ್ಮ ಹೃತ್ಪೂರ್ವಕ ವಂದನೆಗಳು. ಅನುಬಂಧದಲ್ಲಿ ಶ್ರೀ ಮೂಡಲಪ್ಪ ಅವರು ಹೇಳಿರುವ ಜುಂಜಪ್ಪನ ಮರಣೋತ್ತರ ಸಾಹಸಗಳ ಕಥಾಭಾಗವನ್ನು ಬಳಸಿಕೊಳ್ಳಲಾಗಿದೆ. ಶ್ರೀ ಮೂಡಲಪ್ಪ ಅವರಿಗೂ ನಮ್ಮ ವಂದನೆಗಳು.

ನಮ್ಮ ಈ ಕ್ಷೇತ್ರಕಾರ್ಯ ಸಂದರ್ಭದಲ್ಲಿ ಹಾಗೂ ನಂತರದ ಲಿಪೀಕರಣ ಹಾಗೂ ಕೃತಿ ಸಂಪಾದನಾ ಸಂದರ್ಭದಲ್ಲಿ ನೆರವಾದ ಶ್ರೀಮತಿ ನಾಗಲಕ್ಷ್ಮಿ ಶಂಕರನಾರಾಯಣ, ಶ್ರೀಮತಿ ಮಾಲಾ ವೆಂಕಟೇಶ ಮತ್ತು ಕು. ಪೂರ್ಣಿಮಾ ಅವರುಗಳಿಗೆ ನಮ್ಮ ವಂದನೆಗಳು. ಡಿ.ಟಿ.ಪಿ.ಗೆ ಸಹಕರಿಸಿದ ಶ್ರೀ ಟಿ.ಎಸ್. ನರಸಿಂಹ ಪ್ರಸಾದ್ ಅವರಿಗೆ ವಂದನೆಗಳು.

ಈ ಕೃತಿ ಅಚ್ಚುಕಟ್ಟಾಗಿ ಪ್ರಕಟವಾಗಲು ನೆರವಾಗಿರುವ ಜಾನಪದ ವಿಶ್ವವಿದ್ಯಾಲಯದ ವಿಸ್ತರಣೆ ಹಾಗೂ ಸಲಹಾ ಕೇಂದ್ರದ ನಿರ್ದೇಶಕರಾದ ಪ್ರೊ. ಸ. ಚಿ. ರಮೇಶ ಹಾಗೂ ಹಿರಿಯ ಸಂಶೋಧನಾ ಅಧಿಕಾರಿಗಳಾದ ಡಾ. ಕೆ. ಪ್ರೇಮ್‌ಕುಮಾರ ಅವರಿಗೂ ಮುದ್ರಣ ಪ್ರತಿ ಸಿದ್ಧಪಡಿಸುವಲ್ಲಿ ನೆರವಾದ ಇತರರಿಗೂ ಧನ್ಯವಾದಗಳು.

ನಮ್ಮ ಈ ಕ್ಷೇತ್ರ ಕಾರ್ಯದಲ್ಲಿ ವಿಶೇಷ ನೆರವು ನೀಡಿದ ಹಾಗೂ ಕಾಡುಗೊಲ್ಲರ ಹಿತೈಷಿಯಾಗಿದ್ದ ದಿ॥ ಬೆಳಗೆರೆ ಕೃಷ್ಣಶಾಸ್ತ್ರಿಯವರಿಗೆ ಗೌರವದಿಂದ ಈ ಕೃತಿಯನ್ನು ಅರ್ಪಿಸುತ್ತಿದ್ದೇವೆ.

ಡಾ. ತೀ.ನಂ. ಶಂಕರನಾರಾಯಣ
ಡಾ. ಎಂ.ಎನ್. ವೆಂಕಟೇಶ

೧. ಪ್ರಸ್ತಾವನೆ

೧.೧ ಜನಪದ ಮಹಾಕಾವ್ಯಗಳು ಮತ್ತು ಸಮುದಾಯಗಳು

ಕಾಡುಗೊಲ್ಲರು ಮತ್ತು ಆ ಬುಡಕಟ್ಟಿನ ದೈವವಾದ ಜುಂಜಪ್ಪನ ಜನಪದ ಮಹಾಕಾವ್ಯ ಇವೆರಡೂ ಇಂದು ಚರ್ಚೆಗೆ ಒಳಗಾಗಿರುವ ವಿಷಯಗಳು. ಆದರೆ ೧೯೬೦ರ ವರೆಗೆ ಕನ್ನಡ ಸಾಹಿತ್ಯಲೋಕಕ್ಕೆ ಈ ಎರಡರ ಪರಿಚಯವೂ ಇರಲಿಲ್ಲ. ನಾನು ಕನ್ನಡ ಎಂ.ಎ. ತರಗತಿಯಲ್ಲಿ ೧೯೬೭ರಿಂದ ೬೯ರವರೆಗೆ ಜಾನಪದವನ್ನು ಐಚ್ಛಿಕ ವಿಷಯವಾಗಿ ಅಭ್ಯಾಸ ಮಾಡುತ್ತಿದ್ದಾಗ ನಮ್ಮ ಅಧ್ಯಾಪಕರಾಗಿದ್ದ ಜೀ. ಶಂ.ಪರಮಶಿವಯ್ಯನವರು ಕಾಡುಗೊಲ್ಲರ ಬಗ್ಗೆ ಮತ್ತು ಆ ಬುಡಕಟ್ಟಿನ ಜುಂಜಪ್ಪ ದೈವ ಮತ್ತು ಮಹಾಕಾವ್ಯದ ಬಗ್ಗೆ ತಿಳಿಸಿದರು. ಹಾಗೆಯೇ ಫಿನ್ಲೆಂಡ್‌ನಲ್ಲಿ ಕಲೆವಲ ಎಂಬ ಜನಪದ ಮಹಾಕಾವ್ಯವಿದೆ ಎಂಬುದನ್ನು ನನ್ನ ಗಮನಕ್ಕೆ ತಂದರು. ೧೯೭೦ರಲ್ಲಿ ನಾನು ಕಲೆವಲದ ಬಗ್ಗೆ ಒಂದು ಲೇಖನವನ್ನು ಬರೆದೆ. ಈ ಮಹಾಕಾವ್ಯ ಫಿನ್‌ಲೆಂಡ್ ದೇಶ ಸ್ವಾತಂತ್ರ್ಯ ಗಳಿಸಿಕೊಳ್ಳಲು ನೆರವು ನೀಡಿತ್ತು. ಫಿನ್‌ಲೆಂಡ್‌ನ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ಹಿಡಿಯುವ ಈ ಮಹಾಕಾವ್ಯ ಜಗತ್ತಿನ ಜನಪದ ಮಹಾಕಾವ್ಯಗಳ ಅಧ್ಯಯನದಲ್ಲಿ ವಿಶೇಷವಾದ ಮಹತ್ವವನ್ನು ಗಳಿಸಿಕೊಂಡಿದೆ.

ಕನ್ನಡ ಸಾಹಿತ್ಯದಲ್ಲಿ ಸಂಸ್ಕೃತದ ಮಹಾಕಾವ್ಯಗಳ ಬಗ್ಗೆ, ಹಳೆಗನ್ನಡ, ನಡುಗನ್ನಡದ ಮಹಾಕಾವ್ಯಗಳ ಬಗ್ಗೆ, ೨೦ ನೆಯ ಶತಮಾನದಲ್ಲಿ ಪ್ರಕಟವಾದ ಆಧುನಿಕ ಕನ್ನಡ ಮಹಾಕಾವ್ಯಗಳ ಬಗ್ಗೆ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಇವುಗಳೆಲ್ಲಕ್ಕಿಂತ ಭಿನ್ನ ಸ್ವರೂಪದ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ ಮೊದಲಾದ ಮಹಾಕಾವ್ಯಗಳಿವೆ. ಇವುಗಳು ನಿರ್ದಿಷ್ಟ ಜಾತಿ, ಬುಡಕಟ್ಟುಗಳ ಪರಂಪರೆಗೆ ಸೇರಿವೆ ಎಂಬುದನ್ನು ಕನ್ನಡ ಸಾಹಿತ್ಯ ಲೋಕಕ್ಕೆ ತಮ್ಮ ಕ್ಷೇತ್ರಕಾರ್ಯ ಆಧಾರಿತ ಸಂಶೋಧನೆಯ ಮೂಲಕ ತಿಳಿಸಿಕೊಟ್ಟವರು ಜೀ.ಶಂ. ಪರಮಶಿವಯ್ಯನವರು. ಅವರ ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು (೧೯೭೯) ಎಂಬ ಕೃತಿ ಈ ಕ್ಷೇತ್ರದಲ್ಲಿ ಅತ್ಯಂತ ಮಹತ್ವಪೂರ್ಣವಾದುದು. ಇದು ಜಾನಪದ ವಿದ್ವತ್ತಿನ ಒಂದು ಪಂಥದ ಬೆಳವಣಿಗೆಗೆ ಕಾರಣವಾದ ಕೃತಿ. ತುಳು ಭಾಷೆಗೆ ಬಿ. ಎ. ವಿವೇಕ ರೈ ಅವರ ತುಳು ಜನಪದ ಸಾಹಿತ್ಯ (೧೯೮೫) ಇಷ್ಟೇ ಮಹತ್ವದ ಕೃತಿ. ಈ ಕೃತಿಗಳಿಂದ ಜನಪದ ಮಹಾಕಾವ್ಯಗಳನ್ನು ಸಾಹಿತ್ಯಕವಾಗಿ ಮಾತ್ರವಲ್ಲದೆ ಸಾಂಸ್ಕೃತಿಕವಾಗಿಯೂ ಅಧ್ಯಯನ ಮಾಡಲು ಸಾಧ್ಯ ಎಂಬ ವಿಷಯ ಮನವರಿಕೆಯಾಯಿತು. ಅನಂತರದಲ್ಲಿ ಪಿ.ಕೆ. ರಾಜಶೇಖರ ಅವರು ಮಲೆ ಮಾದೇಶ್ವರ (೧೯೭೩) ಹಾಗೂ ಜೀ.ಶಂ. ಪರಮಶಿವಯ್ಯನವರು ಮಂಟೇಸ್ವಾಮಿ ಕಾವ್ಯ (೧೯೭೩) ಇವುಗಳನ್ನು ಪ್ರಕಟಿಸಿದರು.

ಪಿ. ಕೆ. ರಾಜಶೇಖರ ಜನಪದ ಮಹಾಭಾರತ ಹಾಗೂ ಇತರ ಕೆಲವು ಕಾವ್ಯಗಳನ್ನು ಪ್ರಕಟಿಸಿದರು. ಅಲ್ಲಿಂದೀಚೆಗೆ ಕನ್ನಡ ವಿಶ್ವವಿದ್ಯಾಲಯದಿಂದ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಕುಮಾರರಾಮ, ಕೃಷ್ಣಗೊಲ್ಲರ ಕಾವ್ಯ ಇವುಗಳು ಪ್ರಕಟವಾಗಿವೆ. ವೀರಣ್ಣ ದಂಡೆಯವರು ಕುರುಬ ಸಮುದಾಯಕ್ಕೆ ಸೇರಿದ ಹಾಲುಮತ ಮಹಾಕಾವ್ಯವನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಈ ವರೆಗೆ ಮಲೆ ಮಾದೇಶ್ವರ ಮತ್ತು ಮಂಟೇಸ್ವಾಮಿ ಕಾವ್ಯಗಳ ಬಗ್ಗೆ ಹೆಚ್ಚು ಚರ್ಚೆನಡೆದಿದೆ. ಆದರೆ ಕಾಡುಗೊಲ್ಲರು, ಕುರುಬರು, ಮ್ಯಾಸಬೇಡರು, ಮತ್ತು ಕುಂಚಿಟಿಗರಿಗೆ ಸಂಬಂಧಿಸಿದ ಮಹಾಕಾವ್ಯಗಳ ಬಗ್ಗೆ ಹಾಗೂ ಈ ಪಶುಪಾಲಕ ಸಮುದಾಯಗಳ ಬಗ್ಗೆ ಹೆಚ್ಚಿನ ಅಧ್ಯಯನ ನಡೆಯಬೇಕಾಗಿದೆ.

ಜನಪದ ಮಹಾಕಾವ್ಯಗಳು ಇತರ ಮಹಾಕಾವ್ಯಗಳಿಗಿಂತ ಭಿನ್ನವಾಗಿರುವುದು ಇವು ನಿರ್ದಿಷ್ಟವಾದ ಸಮುದಾಯಗಳ ಧಾರ್ಮಿಕ ಪರಂಪರೆಗಳಿಗೆ ಸೇರಿವೆ ಎಂಬ ಕಾರಣಕ್ಕೆ. ಇವು ತಲೆಮಾರಿನಿಂದ ತಲೆಮಾರಿಗೆ ಹಾಡುಗಾರರಿಂದ, ಕಥೆಗಾರರಿಂದ ಮೌಖಿಕ ಸಂಪ್ರದಾಯದ ಮೂಲಕ ಮುಂದುವರಿದುಕೊಂಡು ಬಂದಿವೆ. ಇವು ಒಂದು ಸಮುದಾಯದ ಸಂಸ್ಕೃತಿಯ ಎಲ್ಲ ಲಕ್ಷಣಗಳನ್ನೂ ಒಳಗೊಂಡಿದ್ದು ಅವುಗಳ ಅನನ್ಯತೆಯ (Identity) ಅಭಿವ್ಯಕ್ತಿಗಳಾಗಿವೆ. ಕನ್ನಡ ಜಾನಪದ ಅಧ್ಯಯನದಲ್ಲಿ ಕಳೆದ ಮೂರು ದಶಕಗಳಲ್ಲಿ ಒಂದು ಪ್ರಮುಖವಾದ ಬೆಳವಣಿಗೆಯಾಗಿದೆ. ಮೊದಲಿಗೆ ಜಾನಪದದ ವಿವಿಧ ಪ್ರಕಾರಗಳ ಸಂಗ್ರಹ, ಅಧ್ಯಯನ ಮತ್ತು ಸಂಶೋಧನೆಗಳು ಪ್ರದೇಶ ಕೇಂದ್ರಿತವಾಗಿದ್ದವು. ಉತ್ತರ ಕರ್ನಾಟಕ, ದಕ್ಷಿಣ ಕರ್ನಾಟಕ, ಕರಾವಳಿ, ಕೊಡಗು, ಬಯಲುಸೀಮೆ, ಜಿಲ್ಲೆಗಳು, ತಾಲ್ಲೂಕುಗಳು, ಹಾಗೂ ಹಳ್ಳಿಗಳ ಶೀರ್ಷಿಕೆಗಳಲ್ಲಿ ಜಾನಪದ ಸಂಗ್ರಹ ಮತ್ತು ಅಧ್ಯಯನಗಳು ನಡೆಯುತ್ತಿದ್ದವು. ಇವುಗಳಲ್ಲಿ ಬಿಡಿಗೀತೆಗಳು, ಕಥನಗೀತೆಗಳು, ಕಥೆಗಳು, ಗಾದೆಗಳು, ಒಗಟುಗಳು, ಹಾಗೂ ವಿವಿಧ ಕಲಾ ಪ್ರಕಾರಗಳ ಅಧ್ಯಯನಗಳು ನಡೆಯುತ್ತಿದ್ದವು. ಆದರೆ ಕಳೆದ ಮೂರು ದಶಕಗಳಿಂದೀಚೆಗೆ ಸಮುದಾಯಗಳ ಬಗ್ಗೆ ಮತ್ತು ಸಮುದಾಯ ಕೇಂದ್ರಿತ ಕಥನಗೀತೆಗಳು, ಖಂಡಕಾವ್ಯಗಳು, ಮಹಾಕಾವ್ಯಗಳು ಇವುಗಳ ಬಗ್ಗೆ ಹೆಚ್ಚು ಕೆಲಸ ನಡೆಯುತ್ತಿವೆ.

ಕರ್ನಾಟಕದಲ್ಲಿ ಮೊದಲಿಗೆ ಜಾತಿಗಳ ಅಧ್ಯಯನ ಸಮಾಜ ವಿಜ್ಞಾನ ವಿಭಾಗಗಳಲ್ಲಿಯೂ, ಬುಡಕಟ್ಟುಗಳ ಅಧ್ಯಯನ ಮಾನವ ವಿಜ್ಞಾನ ವಿಭಾಗಗಳಲ್ಲಿಯೂ ಇಂಗ್ಲಿಷ್ ಮಾಧ್ಯಮದಲ್ಲಿ ನಡೆಯುತ್ತಿದ್ದವು. ಆದರೆ ಇದು ಕನ್ನಡ ಮತ್ತು ಜಾನಪದ ವಿಭಾಗಗಳಲ್ಲಿ ಕನ್ನಡ ಮಾಧ್ಯಮದಲ್ಲಿ ನಡೆಯಲು ಆರಂಭವಾದದ್ದು ನಾಲ್ಕು ದಶಕಗಳ ಹಿಂದೆ. ೧೯೭೭ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ದೇ. ಜವರೇಗೌಡರ ಮಾರ್ಗದರ್ಶನದಲ್ಲಿ ನಾನು ಸಿದ್ಧಪಡಿಸಿದ ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು ಎಂಬ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿಯನ್ನು ನೀಡಿದಾಗ. ಈ ಕೃತಿಯು ೧೯೮೨ರಲ್ಲಿ ಮೈಸೂರು ವಿಶ್ವವಿದ್ಯಾನಿಲಯದ ಪ್ರಸಾರಾಂಗದಿಂದ ಪ್ರಕಟವಾದ ನಂತರ ಕರ್ನಾಟಕದ ಎಲ್ಲಾ ವಿಶ್ವವಿದ್ಯಾನಿಲಯಗಳಲ್ಲಿಯೂ ನೂರಾರು

ಎಂ. ಫಿಲ್. ಮತ್ತು ಪಿ.ಎಚ್.ಡಿ. ಮಹಾಪ್ರಬಂಧಗಳು ಪ್ರಕಟವಾಗಿವೆ. ವಿಶ್ವವಿದ್ಯಾಲಯಗಳು ಮಾತ್ರವಲ್ಲದೆ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಕನ್ನಡ ಸಾಹಿತ್ಯ ಪರಿಷತ್ತು ಮೊದಲಾದ ಸಂಸ್ಥೆಗಳು, ವಿವಿಧ ಸಮುದಾಯಗಳ ಸಂಘಟನೆಗಳು ಜಾತಿ ಮತ್ತು ಬುಡಕಟ್ಟುಗಳ ಅಧ್ಯಯನ ಮತ್ತು ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡಿವೆ. ಉಪಸಂಸ್ಕೃತಿ ಮಾಲೆಯಲ್ಲಿ ಬರಗೂರು ರಾಮಚಂದ್ರಪ್ಪ ಅವರು ವಿವಿಧ ಜಾತಿ ಬುಡಕಟ್ಟುಗಳ ಗ್ರಂಥಗಳನ್ನು ಪ್ರಕಟಿಸಿದ್ದು, ಎಚ್. ಜೆ. ಲಕ್ಕಪ್ಪಗೌಡರು ಬುಡಕಟ್ಟುಗಳ ಬಗ್ಗೆ ಎರಡು ಸಂಪುಟಗಳನ್ನು ಪ್ರಕಟಿಸಿದ್ದು ಮುಖ್ಯವಾದ ಘಟನೆಗಳು. ಕರ್ನಾಟಕ ಸರ್ಕಾರ ೧೯೭೩ರಲ್ಲಿ ಜಾರಿಗೆ ತಂದ ಹಾವನೂರು ವರದಿ ಹಾಗೂ ದಲಿತ ಬಂಡಾಯ ಚಳುವಳಿಗಳು ಈ ಬಗೆಯ ಅಧ್ಯಯನಗಳಿಗೆ ಪ್ರೇರಣೆ ನೀಡಿವೆ. ಇಂದು ಸಮುದಾಯಗಳ ಅಧ್ಯಯನ ಕೇವಲ ಅಕಾಡೆಮಿಕ್ ಆಗಿ ಉಳಿದಿಲ್ಲ. ಇದಕ್ಕೆ ಸಾಮಾಜಿಕ, ಸಾಂಸ್ಕೃತಿಕ, ರಾಜಕೀಯ ಕಾರಣಗಳಿವೆ. ಸಮಾಜದ ಹಿಂದುಳಿದ ಹಾಗೂ ಪರಿಶಿಷ್ಟ ಜಾತಿ ಬುಡಕಟ್ಟುಗಳಿಗೆ ಸೇರಿದ ಸಮುದಾಯಗಳು ಇಂದು ಸಾಂಸ್ಕೃತಿಕವಾಗಿ ತಮ್ಮ ಪರಂಪರೆಗಳನ್ನು ಕಟ್ಟಿಕೊಳ್ಳಬೇಕಾಗಿದೆ. ಪ್ರತಿಯೊಂದು ಸಮುದಾಯಕ್ಕೂ ಒಂದು ಮಹತ್ವದ ಇತಿಹಾಸವಿದೆ, ಸಾಂಸ್ಕೃತಿಕ ಪರಂಪರೆ ಇದೆ ಎಂಬುದನ್ನು ತೋರಿಸಿ ಕೊಡಬೇಕು. ಪ್ರತಿಯೊಂದು ಸಮುದಾಯವೂ ಜಾತಿ ವ್ಯವಸ್ಥೆಯ ಮೇಲು ಕೀಳು ಧೋರಣೆಯಿಂದ ಬೆಳೆಸಿಕೊಂಡ ಕೀಳರಿಮೆಯನ್ನು ಮೀರಿ ತಾವು ಯಾರಿಗಿಂತಲೂ ಕಡಿಮೆಯಲ್ಲ. ಎಲ್ಲ ಸಮುದಾಯಗಳಂತೆಯೇ ತಮ್ಮ ಸಮುದಾಯವೂ ಸಮಾಜದಲ್ಲಿ ತಲೆಯೆತ್ತಿ ನಿಲ್ಲಬೇಕು, ಒಳ್ಳೆಯ ಜೀವನ ಸಾಗಿಸಬೇಕೆಂಬ ವಿಚಾರಗಳಿಂದ ಮಾನಸಿಕ ಸ್ಥೈರ್ಯವನ್ನು ಗಳಿಸಿಕೊಳ್ಳುವಂತೆ ಮಾಡುವುದು, ತಮ್ಮ ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಎತ್ತಿ ತೋರಿಸುವುದು ಇವುಗಳ ಉದ್ದೇಶ. ಹಾಗೆಯೇ ಸಾಮಾಜಿಕವಾಗಿ ಹಿಂದುಳಿದಿರುವಿಕೆಯ ಕಾರಣದಿಂದ ರಾಜ್ಯದ ರಾಜಕೀಯದಲ್ಲಿ, ಸರ್ಕಾರಿ ಉದ್ಯೋಗಗಳಲ್ಲಿ ಹಾಗೂ ಶಿಕ್ಷಣ ಕ್ಷೇತ್ರದಲ್ಲಿ ತಮಗೆ ನ್ಯಾಯವಾಗಿ ದೊರಕಬೇಕಾಗಿರುವ ಪ್ರಾತಿನಿಧ್ಯವನ್ನು ಪಡೆಯುವುದೂ ಪ್ರಮುಖವಾದ ಉದ್ದೇಶವಾಗಿದೆ. ಈ ಪ್ರಕ್ರಿಯೆ ಕರ್ನಾಟಕಕ್ಕೆ ಮಾತ್ರ ಸೀಮಿತವಾದುದಲ್ಲ, ಭಾರತದಾದ್ಯಂತ ಇರುವಂತಹುದು. ಜಗತ್ತಿನ ಮಟ್ಟದಲ್ಲಿಯೂ ವಸಾಹತುಶಾಹಿಯ ಹಿಡಿತದಿಂದ ಬಿಡಿಸಿಕೊಂಡು ಸ್ವತಂತ್ರವಾಗಿರುವ ಏಷ್ಯಾ, ಆಫ್ರಿಕಾ ಮತ್ತು ಲ್ಯಾಟಿನ್ ಅಮೆರಿಕಾದ ರಾಷ್ಟ್ರಗಳು ಹಾಗೂ ಆ ರಾಷ್ಟ್ರಗಳೊಳಗೆ ಇರುವ ವಿವಿಧ ಸಮುದಾಯಗಳು ತಮ್ಮ ತಮ್ಮ ಸಾಂಸ್ಕೃತಿಕ ಪರಂಪರೆಗಳನ್ನು ಕಟ್ಟಿಕೊಂಡು, ಸಾಂಸ್ಕೃತಿಕ ಅನನ್ಯತೆಯನ್ನು ಖಚಿತಪಡಿಸುತ್ತಿರುವುದು ಒಂದು ವಿಶಿಷ್ಟ ಪ್ರಕ್ರಿಯೆಯಾಗಿದ್ದು ಇದಕ್ಕೆ ಪೂರಕವಾಗಿ ಜನಪದ ಮಹಾಕಾವ್ಯಗಳ ಅಧ್ಯಯನ ನಡೆಯುತ್ತಿರುವುದಕ್ಕೆ ಪ್ರಮುಖ ಕಾರಣವಾಗಿದೆ.

೧.೨ ಮಹಾಕಾವ್ಯ: ಶಿಷ್ಟ ಮತ್ತು ಜನಪದ

ಸಾಹಿತ್ಯ ಪ್ರಕಾರಗಳಲ್ಲಿ ಮಹಾಕಾವ್ಯ ಬೇರೆ ಬೇರೆ ಕಾರಣಗಳಿಗಾಗಿ ಮೊದಲಿನಿಂದಲೂ ವಿಶೇಷ ಮಹತ್ವ ಪಡೆದಿದೆ. ಭಾವಗೀತೆ, ಕಥನಕಾವ್ಯ, ಖಂಡಕಾವ್ಯ, ಮಹಾಕಾವ್ಯ ಈ ನಾಲ್ಕೂ ಪ್ರಕಾರಗಳಲ್ಲಿ ಭಾವಗೀತೆಗೆ ಮತ್ತು ಇತರ ಮೂರು ಪ್ರಕಾರಗಳಿಗೆ ಮೂಲಭೂತವಾದ ವ್ಯತ್ಯಾಸವಿದೆ. ಭಾವಗೀತೆ ವ್ಯಾಪ್ತಿಯಲ್ಲಿ ಚಿಕ್ಕದಾಗಿದ್ದು ಭಾವತೀವ್ರತೆಯಿಂದ ಕೂಡಿರುತ್ತದೆ. ಆದರೆ ಉಳಿದ ಮೂರು ಪ್ರಕಾರಗಳು ಮೂಲತಃ ಕಥಾಪ್ರಧಾನವಾದ ಪ್ರಕಾರಗಳಾಗಿವೆ. ಇವುಗಳಲ್ಲಿ ಭಾವಗೀತೆಯ ಅಂಶಗಳು ಬರಬಹುದಾದರೂ ಪಾತ್ರಚಿತ್ರಣ ಹಾಗೂ ಕಥನಕ್ರಮ ಇವುಗಳಿಗೆ ಮಹತ್ವ ಹೆಚ್ಚು. ಈ ಮೂರೂ ಪ್ರಕಾರಗಳಲ್ಲಿ ಕಥನಗೀತೆಯ ವ್ಯಾಪ್ತಿ ಚಿಕ್ಕದು. ಒಂದು ಕಥನಕವನ ಕಡಿಮೆ ವ್ಯಾಪ್ತಿಯಲ್ಲಿ ಒಂದು ಕಥೆಯನ್ನು ಕಾವ್ಯ ರೂಪದಲ್ಲಿ ಹೇಳುತ್ತಾ, ಪಾತ್ರ ಚಿತ್ರಣ ಮಾಡುತ್ತಾ ಒಂದು ವಿಷಯವನ್ನು ಪ್ರತಿಪಾದಿಸಲು ನೆರವಾಗುತ್ತದೆ. ಕುವೆಂಪು ಅವರ 'ಬೊಮ್ಮನಹಳ್ಳಿಯ ಕಿಂದರಿಜೋಗಿ', 'ತಾನಾಜಿ', ಮಾಸ್ತಿಯವರ ನವರಾತ್ರಿ ಸಂಕಲನದಲ್ಲಿರುವ ಕಥನಕವನಗಳು ಒಳ್ಳೆಯ ಉದಾಹರಣೆಗಳಾಗುತ್ತವೆ. ಕಥನಕವನಗಳ ಮುಂದುವರಿದ ರೂಪವೇ ಖಂಡಕಾವ್ಯ. ಇದರ ವ್ಯಾಪ್ತಿ ಕಥನಕಾವ್ಯಕ್ಕಿಂತ ದೊಡ್ಡದು; ಮಹಾಕಾವ್ಯಕ್ಕಿಂತ ಚಿಕ್ಕದು. ರಚನೆಯ ದೃಷ್ಟಿಯಿಂದ ಇದು ಮಹಾಕಾವ್ಯ ಸ್ವರೂಪಕ್ಕೆ ಹೆಚ್ಚು ಹತ್ತಿರವಾದ ಒಂದು ಪ್ರಕಾರ. ಕುವೆಂಪು ಅವರ ಚಿತ್ರಾಂಗದ ಇದಕ್ಕೆ ಒಳ್ಳೆಯ ನಿದರ್ಶನ. ಈ ಬಗೆಯ ಖಂಡಕಾವ್ಯಗಳು ಗಾತ್ರದಲ್ಲಿ ಚಿಕ್ಕವು ಎಂಬುದನ್ನು ಬಿಟ್ಟರೆ ಉಳಿದಂತೆ ಮಹಾಕಾವ್ಯದ ಭಾಗವಾಗಿರುವಂತೆಯೇ ತೋರುತ್ತವೆ. ಖಂಡಕಾವ್ಯದ ಮುಂದುವರೆದ ರೂಪವೇ ಮಹಾಕಾವ್ಯ. ಮಹಾಕಾವ್ಯ ವ್ಯಾಪಕವಾದ ನೆಲೆಯನ್ನು ಉಳ್ಳದ್ದು. ಅನೇಕ ಪಾತ್ರಗಳು ಮತ್ತು ಘಟನೆಗಳಿಂದ ಕೂಡಿದ ದೀರ್ಘವಾದ ಕಥೆಯುಳ್ಳ, ವಿಸ್ತಾರವಾದ ಹರವುಳ್ಳ ಮಹಾಕಾವ್ಯ ಒಂದು ದೇಶದ, ಒಂದು ಸಾಂಸ್ಕೃತಿಕ ವರ್ಗದ ಆಕಾಂಕ್ಷೆಗಳನ್ನು ಅಭಿವ್ಯಕ್ತಿಸುವ ಸಾಧನವಾಗುತ್ತದೆ. ಧೀರೋದಾತ್ತನಾದ ನಾಯಕ, ಅವನಿಗೆ ಪ್ರತಿಯಾಗಿ ಖಳನಾಯಕ, ಈ ಎರಡು ಶಕ್ತಿಗಳ ನಡುವಣ ಹೋರಾಟ, ಒಳಿತು ಕೆಡುಕುಗಳ ಸಂಘರ್ಷ, ಈ ಸಂಘರ್ಷದಲ್ಲಿ ಒಳ್ಳೆಯದಕ್ಕೆ ಗೆಲುವಾಗುವುದು, ದುಷ್ಟ ಶಕ್ತಿಗಳು ಸೋಲುವುದು ಇಲ್ಲವೇ ನಾಶವಾಗುವುದು, ಮನುಷ್ಯರ ಜೀವನವನ್ನು ದೈವಿಕ ಹಾಗೂ ದೈವಿಕವಲ್ಲದ ಶಕ್ತಿಗಳು ನಿಯಂತ್ರಿಸುವುದು, ನಿರ್ಧರಿಸುವುದು, ಇಡೀ ಸಮುದಾಯದ ಆಸೆ, ಆಶೋತ್ತರಗಳು ಈ ಮೂಲಕ ಮಹಾಕಾವ್ಯದ ಸಂರಚನೆಯಲ್ಲಿ ಅಭಿವ್ಯಕ್ತಿಗೊಳ್ಳುವುದನ್ನು ಕಾಣಬಹುದು. ಹೀಗಾಗಿ ಮಹಾಕಾವ್ಯ ಎನ್ನುವುದು ಸಾಹಿತ್ಯದ ಇತರ ಯಾವುದೇ ಪ್ರಕಾರಕ್ಕಿಂತ ಹೆಚ್ಚಿನ ಮನ್ನಣೆಯನ್ನು ಪಡೆಯಲು ಸಾಧ್ಯವಾಗಿದೆ. ಮಹತ್ತು, ಬೃಹತ್ತು ಮಹಾಕಾವ್ಯಗಳ ಪ್ರಮುಖ ಲಕ್ಷಣವಾಗಿರುತ್ತವೆ.

ಮಹಾಕಾವ್ಯಗಳನ್ನು ಮುಖ್ಯವಾಗಿ ಮೂರು ಬಗೆಯಾಗಿ ವರ್ಗೀಕರಿಸಲು ಸಾಧ್ಯ. ರಾಮಾಯಣ, ಮಹಾಭಾರತ, ಇಲಿಯಡ್, ಒಡಿಸ್ಸೆ ಮೊದಲಾದುವು ಒಂದು ದೇಶದ

ಸಂಸ್ಕೃತಿಯನ್ನು, ಅಂತಃಸತ್ವವನ್ನು ಅಭಿವ್ಯಕ್ತಿಸುವ ರಾಷ್ಟ್ರೀಯ ಮಹಾಕಾವ್ಯಗಳು. ರಾಮಾಯಣ ಮಹಾಭಾರತಗಳು ಭಾರತದ ಹಿಂದೂ ಸಂಸ್ಕೃತಿಯನ್ನು ಅಭಿವ್ಯಕ್ತಗೊಳಿಸಿದರೆ ಇಲಿಯಡ್, ಒಡಿಸ್ಸಿ ಮಹಾಕಾವ್ಯಗಳು ಗ್ರೀಸ್ ದೇಶದ ಸಂಸ್ಕೃತಿಯನ್ನು ಅಭಿವ್ಯಕ್ತಪಡಿಸುತ್ತವೆ. ಈ ರಾಷ್ಟ್ರಗಳ, ಈ ಸಂಸ್ಕೃತಿಗಳ, ಈ ಸಮಾಜಗಳ ಜನ ಈ ಮಹಾಕಾವ್ಯಗಳಿಗೆ ವಿಶೇಷವಾದ ಗೌರವವನ್ನು, ಮಹತ್ವವನ್ನು ಕೊಡುತ್ತಾರೆ. ಈ ಜನಕ್ಕೆ ಇವು ಪೂಜ್ಯವಾಗಿಯೂ ಪರಿಣಮಿಸುತ್ತವೆ.

ಈ ಮಹಾಕಾವ್ಯಗಳನ್ನು ಬಿಟ್ಟರೆ ನಾವು ಗಮನಿಸಬಹುದಾದ ಎರಡನೆಯ ಬಗೆಯ ಮಹಾಕಾವ್ಯಗಳೆಂದರೆ ಏಕಕರ್ತೃಕ ಮಹಾಕಾವ್ಯಗಳು. ವರ್ಜಿಲನ ಈನಿಯಡ್, ಡಾಂಟೆಯ ಡಿವೈನ್ ಕಾಮೆಡಿ, ಮಿಲ್ಟನ್ನನ ಪ್ಯಾರಡೈಸ್ ಲಾಸ್ಟ್, ಕುವೆಂಪು ಅವರ *ರಾಮಾಯಣ ದರ್ಶನಂ*, ಗೋಕಾಕರ *ಭಾರತ ಸಿಂಧುರಶ್ಮಿ*, ಪು.ತಿ.ನ. ಅವರ *ಶ್ರೀಹರಿಚರಿತೆ* ಮೊದಲಾದವು. ವಿಕ್ರಮಾರ್ಜುನ ವಿಜಯ, ಕುಮಾರವ್ಯಾಸ ಭಾರತ ಮೊದಲಾದುವು ಏಕಕರ್ತೃಕ ಮಹಾಕಾವ್ಯಗಳೇ ಆಗಿವೆ. ಈ ಮಹಾಕಾವ್ಯಗಳನ್ನು ರಚಿಸಿದವರು ತಾವು ಮಹಾಕಾವ್ಯವನ್ನು ಬರೆಯುತ್ತಿದ್ದೇವೆ ಎಂಬ ಪ್ರಜ್ಞೆಯಿಂದಲೇ ಬರೆಯುತ್ತಾರೆ. ಈ ಪ್ರಜ್ಞಾಪೂರ್ವ ರಚನೆಯ ಕಾರಣದಿಂದಾಗಿಯೇ ಈ ಮಹಾಕಾವ್ಯಗಳ ಸ್ವರೂಪ ರಾಷ್ಟ್ರೀಯ ಮಹಾಕಾವ್ಯಗಳಿಗಿಂತ ಭಿನ್ನವಾಗಿರುತ್ತದೆ. ಇವುಗಳಲ್ಲಿ *ಪಂಪ ಭಾರತ*, *ಕುಮಾರವ್ಯಾಸ ಭಾರತ* ಮೊದಲಾದ ಹಳೆಯ ಮಹಾಕಾವ್ಯಗಳಿಗೂ, *ರಾಮಾಯಣ ದರ್ಶನಂ*, *ಭಾರತ ಸಿಂಧು ರಶ್ಮಿ* ಮೊದಲಾದ ಆಧುನಿಕ ಮಹಾಕಾವ್ಯಗಳಿಗೂ ದೃಷ್ಟಿಕೋನ, ರಚನಾವಿನ್ಯಾಸಗಳಲ್ಲಿ ಭಿನ್ನತೆಗಳಿವೆ. ಪ್ರಾಚೀನ ಹಾಗೂ ಮಧ್ಯಕಾಲೀನ ಮಹಾಕಾವ್ಯಗಳು ಹೆಚ್ಚು ಸಾಂಪ್ರದಾಯಿಕ ಸ್ವರೂಪವನ್ನು ಪಡೆದುಕೊಂಡಿರುತ್ತವೆ. ಅವುಗಳಲ್ಲಿ ಅಷ್ಟಾದಶ ವರ್ಣನೆಗಳು, ನವರಸಗಳು, ಧೀರೋದಾತ್ತ ನಾಯಕ, ಪ್ರತಿನಾಯಕ ಪಾತ್ರಗಳು ಪ್ರಮುಖವಾಗುತ್ತವೆ. ಆದರೆ ಆಧುನಿಕ ಕಾಲದ ಏಕಕರ್ತೃಕ ಮಹಾಕಾವ್ಯಗಳು ಉದಾರವಾದಿ, ಪ್ರಜಾಸತ್ತಾತ್ಮಕ ನಿಲುವಿನಿಂದ ಕೂಡಿದ್ದು ಅವುಗಳ ದರ್ಶನವು ಪ್ರಾಚೀನ ಹಾಗೂ ಮಧ್ಯಕಾಲೀನ ಮಹಾಕಾವ್ಯಗಳಿಗಿಂತ ಭಿನ್ನವಾಗಿರುತ್ತದೆ. ಅವುಗಳಲ್ಲಿ ಅಷ್ಟಾದಶ ವರ್ಣನೆಗಳು, ನವರಸಗಳು ಕಡ್ಡಾಯವಾಗಿ ಬರಲೇಬೇಕೆಂದಿಲ್ಲ; ಅಗತ್ಯವಿದ್ದಲ್ಲಿ ಬರಬಹುದು.

ಮೂರನೆಯ ಬಗೆಯ ಮಹಾಕಾವ್ಯಗಳೇ ಜನಪದ ಮಹಾಕಾವ್ಯಗಳು. ರಾಷ್ಟ್ರೀಯ ಮಹಾಕಾವ್ಯಗಳ ಕರ್ತೃಗಳು ಯಾರೆಂಬುದರ ಬಗ್ಗೆ, ಕರ್ತೃಗಳ ಖಚಿತತೆಯ ಬಗ್ಗೆ, ಕರ್ತೃಗಳ ಕಾಲದ ಬಗ್ಗೆ ಚರ್ಚೆಗಳಿದ್ದು, ಭಿನ್ನಾಭಿಪ್ರಾಯಗಳಿದ್ದರೂ ಕೂಡ ಒಂದು ನಿರ್ದಿಷ್ಟವಾದ ಹೆಸರಿನ ಸುತ್ತ ಈ ಚರ್ಚೆಗಳು ಕೇಂದ್ರಿಕೃತವಾಗಿರುತ್ತವೆ. ಉದಾಹರಣೆಗೆ ರಾಮಾಯಣವನ್ನು ಬರೆದ ವಾಲ್ಮೀಕಿಯ ಬಗ್ಗೆ, ಮಹಾಭಾರತವನ್ನು ಬರೆದ ವ್ಯಾಸರ ಬಗ್ಗೆ ಈ ಬಗೆಯ ಚರ್ಚೆಗಳಿವೆ. ಈ ಭಿನ್ನಾಭಿಪ್ರಾಯಗಳ ನಡುವೆಯೂ ವಾಲ್ಮೀಕಿ, ವ್ಯಾಸರೇ ಇವುಗಳ ಕರ್ತೃಗಳು ಎಂಬ ಸಾಮಾನ್ಯ ಅಭಿಪ್ರಾಯ ರೂಪುಗೊಂಡಿದೆ. ಈ ಮಹಾಕಾವ್ಯಗಳನ್ನು ಈ ವ್ಯಕ್ತಿಗಳು ಮೂಲರೂಪದಲ್ಲಿ ಬರೆದಿದ್ದರೂ, ಕಾಲದಿಂದ

ಕಾಲಕ್ಕೆ ಹಲವಾರು ಜನರ ಸೃಜನಶೀಲತೆಯಿಂದಾಗಿ ಪಾಠ ಪ್ರಕ್ಷೇಪಗೊಂಡು ಈ ಮಹಾಕಾವ್ಯಗಳು ವಿಸ್ತಾರಗೊಳ್ಳುತ್ತಾ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳುತ್ತವೆ. ಈ ಮಹಾಕಾವ್ಯಗಳು ಒಟ್ಟಾರೆ ಒಂದು ಸಮಷ್ಟಿ ಸೃಷ್ಟಿಯಾಗಿರುತ್ತವೆ. ಏಕಕರ್ತೃಕ ಮಹಾಕಾವ್ಯಗಳಲ್ಲಿ ಸಮೂಹ ಸೃಷ್ಟಿಯ ಪ್ರಶ್ನೆಯೇ ಇಲ್ಲ. ಖಚಿತವಾಗಿ ಇಂತಹ ವ್ಯಕ್ತಿಯ ಕಲಾಸೃಷ್ಟಿ ಇದು ಎಂಬುದು ಸ್ಪಷ್ಟವಾಗಿರುತ್ತದೆ. ಜನಪದ ಮಹಾಕಾವ್ಯಗಳು ಈ ಮೊದಲೆರಡು ಬಗೆಯ ಮಹಾಕಾವ್ಯಗಳಿಗಿಂತ ಭಿನ್ನವಾಗಿ ನಿಲ್ಲುತ್ತದೆ. ಈ ಮಹಾಕಾವ್ಯಗಳ ಕರ್ತೃ ಯಾರೆಂಬುದು ತಿಳಿದಿರುವುದಿಲ್ಲ. ಅಜ್ಞಾತ ಕರ್ತೃಕವಾದ ಈ ಮಹಾಕಾವ್ಯಗಳು ಸಮೂಹ ಸೃಷ್ಟಿಯಾಗಿವೆ. ಮೊದಲೆರಡು ಬಗೆಯ ಮಹಾಕಾವ್ಯಗಳು ಬರವಣಿಗೆಯ ರೂಪದಲ್ಲಿ ಮೊದಲಿನಿಂದಲೂ ಉಳಿದುಕೊಂಡು ಬಂದಿದ್ದರೆ, ಜನಪದ ಮಹಾಕಾವ್ಯಗಳು ಮೌಖಿಕ ಸ್ವರೂಪದಲ್ಲಿ ಉಳಿದುಕೊಂಡು ಬಂದಿವೆ.

ಈ ವರೆಗೆ ಸೂಚಿಸಿದ ವರ್ಗೀಕರಣ ಕ್ರಮ ಒಂದು ಬಗೆಯದಾದರೆ ಶಿಷ್ಟ ಮಹಾಕಾವ್ಯಗಳು ಮತ್ತು ಜನಪದ ಮಹಾಕಾವ್ಯಗಳು ಎಂಬ ವರ್ಗೀಕರಣ ಇನ್ನೊಂದು ಬಗೆಯದು. ಈ ದೃಷ್ಟಿಕೋನದಿಂದ ರಾಷ್ಟ್ರೀಯ ಮಹಾಕಾವ್ಯಗಳು ಮತ್ತು ಏಕಕರ್ತೃಕ ಮಹಾಕಾವ್ಯಗಳು ಶಿಷ್ಟ ಮಹಾಕಾವ್ಯಗಳ ಪಟ್ಟಿಯಲ್ಲಿ ಸೇರುತ್ತವೆ. ರಾಷ್ಟ್ರೀಯ ಮಹಾಕಾವ್ಯಗಳು, ಒಂದು ರೀತಿಯಲ್ಲಿ ನೋಡಿದಾಗ, ಶಿಷ್ಟ ಮತ್ತು ಜನಪದಗಳ ಸಮ್ಮಿಶ್ರಣವಾಗಿ ತೋರುತ್ತವೆ. ಆದರೆ ಏಕಕರ್ತೃಕ ಮಹಾಕಾವ್ಯಗಳು ಮಾತ್ರ ಸಂಪೂರ್ಣ ಶಿಷ್ಟ ಸ್ವರೂಪದವು ಎಂದು ಹೇಳಬಹುದು.

ಮಹಾಕಾವ್ಯಗಳು ಒಂದು ಸಂಸ್ಕೃತಿಯ ಮೌಲ್ಯಗಳನ್ನು ಪ್ರತಿಪಾದಿಸುವ ಬೃಹತ್ ಗ್ರಂಥಗಳು; ಒಂದು ರೀತಿಯಲ್ಲಿ ತಲೆತಲಾಂತರಗಳಿಂದ ಮೌಲ್ಯಗಳು ಹರಿದುಬಂದು ಸೃಷ್ಟಿಸಲ್ಪಟ್ಟ ಪರಂಪರೆಗಳ ಆಸ್ತಿಗಳು. ಪ್ರತಿಯೊಂದು ಸಂಸ್ಕೃತಿಯೂ ಪರಂಪರಾಗತವಾಗಿ ಬಂದಿರುವ ಮಹಾಕಾವ್ಯಗಳನ್ನು ಗೌರವಿಸುತ್ತದೆ. ಅವು ತಮ್ಮ ಬಗ್ಗೆ ಹೆಮ್ಮೆಯಿಂದ ಹೇಳಿಕೊಳ್ಳಲು ಒದಗುವ ಆಧಾರಗಳು ಎಂಬ ಭಾವನೆ ಇರುತ್ತದೆ. ನಮ್ಮಲ್ಲಿ ರಾಮಾಯಣ, ಮಹಾಭಾರತಗಳು ಮಹಾಕಾವ್ಯಗಳು. ಅವುಗಳ ಬಗ್ಗೆ ನಮಗೆ ಹೆಮ್ಮೆ ಇದೆ. ಅವನ್ನು ನಾವು ಗೌರವಿಸುತ್ತೇವೆ. ಅಲ್ಲಿನ ಪುರಾಣ ವ್ಯಕ್ತಿಗಳ ಆದರ್ಶವೇ ನಮ್ಮ ಜೀವನಕ್ಕೂ ಆದರ್ಶ ಎಂಬ ನಂಬಿಕೆ ಇದೆ. ಅವು ಶಿಷ್ಟ ಮೂಲದಿಂದ ರೂಪ ಪಡೆದಿವೆ ಹಾಗೂ ಅವು ಶಿಷ್ಟ ಸಾಹಿತ್ಯ ಪ್ರಕಾರಗಳಲ್ಲಿ ಮಹತ್ವದ ಸ್ಥಾನ ಪಡೆದಿವೆ. ಮಹಾಕಾವ್ಯ ಎನ್ನಿಸಿಕೊಳ್ಳುವುದು ಎಲ್ಲಾ ಕಾವ್ಯಗಳಿಗೂ ಸಾಧ್ಯವಿಲ್ಲ. ಅದಕ್ಕೆಂದೇ ಕೆಲವು ವಿಶೇಷ ಲಕ್ಷಣಗಳಿರುವುದನ್ನು ಶಿಷ್ಟ ಸಾಹಿತ್ಯದಲ್ಲಿ ವಿದ್ವಾಂಸರು ಗುರುತಿಸಿದ್ದಾರೆ. ಶಿಷ್ಟ ಮಹಾಕಾವ್ಯದ ಬೆಳವಣಿಗೆ, ಸಾಕಷ್ಟು ಸಾಕ್ಷ್ಯಾಧಾರಗಳ ಸಹಾಯದಿಂದ, ಯಾವ ರೀತಿ ಸಾಗಿಬಂದಿತೆಂಬುದನ್ನು ಅರಿಯಲು ಸಾಕಷ್ಟು ಅವಕಾಶವಿದೆ. ಇಡೀ ಸಮುದಾಯದ ಲಕ್ಷಣಗಳನ್ನು ಪ್ರತಿಬಿಂಬಿಸುವ, ಆಶೋತ್ತರಗಳಿಗೆ ಸ್ಪಂದಿಸುವ, ಜನಜೀವನಕ್ಕೆ ಹತ್ತಿರವಾದ, ಸಾಂಸ್ಕೃತಿಕ ವಿವರಗಳಿಂದ ಕೂಡಿದ ಕೃತಿಯಾಗಿರುತ್ತದೆ. ಐತಿಹಾಸಿಕ, ಚಾರಿತ್ರಿಕ, ಪೌರಾಣಿಕ ನೆಲೆಗಟ್ಟಿನಲ್ಲಿ ಆ ಸಂಸ್ಕೃತಿಗೂ ಮಹಾಕಾವ್ಯಕ್ಕೂ ಒಂದು ನಂಟು ಬೆಳೆದಿರುತ್ತದೆ.

ನಮಗೊಂದು ಪರಂಪರೆ ಇದೆ, ನಮಗೊಂದು ಸಂಸ್ಕೃತಿಯ ಮೂಲ ಸೆಲೆ ಇದೆ, ನಮ್ಮ ಆದರ್ಶಗಳನ್ನು, ಮೌಲ್ಯಗಳನ್ನು ಸೂಚಿಸುವ ಆಕರ ಗ್ರಂಥವೊಂದಿದೆ ಎಂಬುದನ್ನು ವಿವರಿಸುವುದು ನಮ್ಮ ಮಹಾಕಾವ್ಯಗಳನ್ನು ವೈಭವೀಕರಿಸುವ ಮೂಲಕ ಸಾಧ್ಯವಾಗುತ್ತದೆ. ಮಹಾಕಾವ್ಯವೊಂದನ್ನು ಪರಿಚಯಿಸುವ, ಅಧ್ಯಯನ ನಡೆಸುವ ಮೂಲಕ ಭವ್ಯತೆಯನ್ನು ತಿಳಿಸುವ, ನಮ್ಮತನವನ್ನು ಗಟ್ಟಿಗೊಳಿಸಿಕೊಳ್ಳುವ, ಸಾಂಸ್ಕೃತಿಕ ನೆಲೆಗಟ್ಟನ್ನು ಭದ್ರಗೊಳಿಸುವ ತೀವ್ರತೆ ಇರುತ್ತದೆ. ಒಂದು ಶಿಷ್ಟ ಸಂಸ್ಕೃತಿಯಾಗಲಿ ಅಥವಾ ಒಂದು ದೇಶವೇ ಆಗಲಿ ತನ್ನ ಮಹಾಕಾವ್ಯಗಳ ಬಗ್ಗೆ ಹೊಂದಿರುವ ಭಾವನೆಗಳು ಹಾಗೂ ಅದರ ಹಿಂದಿನ ಸೂಕ್ಷ್ಮಗಳು ಈ ಕಾರಣದಿಂದಾಗಿ ಬಹಳ ಅಮೂಲ್ಯ ವಿಚಾರಗಳಾಗುತ್ತವೆ.

ಶಿಷ್ಟ ಮಹಾಕಾವ್ಯಗಳ ಈ ಎಲ್ಲಾ ಸಂಬಂಧಗಳನ್ನು ಹಾಗೂ ಲಕ್ಷಣಗಳನ್ನು ಹೊಂದಿರುವ ಅನೇಕ ಜನಪದ ಮಹಾಕಾವ್ಯಗಳು ಕ್ರಮೇಣ ಬೆಳಕಿಗೆ ಬಂದವು. ಮಹಾಕಾವ್ಯ ಎಂಬ ಹಣೆಪಟ್ಟಿ ಹೊತ್ತ ಶಿಷ್ಟ ಕಾವ್ಯಗಳು ಎಲ್ಲೋ ಬೆರಳೆಣಿಕೆಯಷ್ಟು ಪ್ರತಿ ದೇಶದಲ್ಲೂ ಕಾಣಿಸಿಕೊಂಡಿವೆ. ಆದರೆ ಪ್ರತಿಯೊಂದು ಸಂಸ್ಕೃತಿಯೂ ತನ್ನ ಮೌಲ್ಯಗಳನ್ನು ಪ್ರತಿಪಾದಿಸಬಲ್ಲಂತಹ, ತನ್ನ ಸಮುದಾಯದಲ್ಲಿ ವಿಶಿಷ್ಟ ಎನ್ನಿಸಿಕೊಳ್ಳುವಂತಹ ಮೌಖಿಕ ಮಹಾಕಾವ್ಯಗಳನ್ನು ಹೊಂದಿರುತ್ತವೆ. ಎ.ಕೆ. ರಾಮಾನುಜನ್ ಅವರು ಭಾರತದಲ್ಲಿ ಮುನ್ನೂರು ರಾಮಾಯಣಗಳಿವೆ ಎನ್ನುವ ಮೂಲಕ ಜನಪದ ಮಹಾಕಾವ್ಯಗಳು ಬಹು ಸಂಖ್ಯೆಯಲ್ಲಿ ಇರುವುದನ್ನು ಸ್ಪಷ್ಟಪಡಿಸಿದ್ದಾರೆ.

ಜನಪದ ಮಹಾಕಾವ್ಯಗಳು ಜಗತ್ತಿನಾದ್ಯಂತ ಇಂದು ಅಧ್ಯಯನಕ್ಕೆ ಒಳಪಡಲು ವಿಶೇಷ ಕಾರಣಗಳಿವೆ. ಜನಪದ ಮಹಾಕಾವ್ಯಗಳ ಅಧ್ಯಯನ ಆರಂಭವಾದುದು ರೊಮ್ಯಾಂಟಿಕ್ ಯುಗದಲ್ಲಿ. ತಮ್ಮ ದೇಶಾಭಿಮಾನವನ್ನು ಎತ್ತಿಹಿಡಿಯಲು, ತಮ್ಮವರನ್ನು ಒಗ್ಗೂಡಿಸಲು, ತಮ್ಮ ಪರಂಪರೆಯ ಭವ್ಯತೆಯನ್ನು ನಿಚ್ಚಳವಾಗಿ ಎತ್ತಿ ತೋರಿಸಲು ಜನಪದ ಮಹಾಕಾವ್ಯಗಳನ್ನು ಬಳಸಿಕೊಳ್ಳಲಾಯಿತು. ಜನಪದ ಮಹಾಕಾವ್ಯಗಳಿಗೆ ಪ್ರಾಮುಖ್ಯತೆ ಬಂದುದು ಈ ಕಾರಣಕ್ಕಾಗಿಯೇ. ಹಾಗೆಯೇ ಅವುಗಳ ಸಂಗ್ರಹಣೆ ಹಾಗೂ ಈ ರೀತಿಯಲ್ಲಿ ಅವನ್ನು ಬಳಸಿಕೊಳ್ಳಲು ಪ್ರಯತ್ನಪಟ್ಟಿದ್ದುದು ಜನಪದ ಮಹಾಕಾವ್ಯಗಳನ್ನು ಕುರಿತ ಅಧ್ಯಯನಕ್ಕೆ ನಾಂದಿ ಹಾಡಿದಂತಾಯಿತು.

ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಒಂದು ಒಳ್ಳೆಯ ನೆಲೆ ದೊರೆತದ್ದು ಫಿನ್‌ಲೆಂಡ್‌ನಲ್ಲಿ. ಇವುಗಳ ಅಧ್ಯಯನಕ್ಕೆ ಏಕೆ ಪ್ರಾಮುಖ್ಯತೆ ಬಂದಿದೆ ಎಂಬುದನ್ನೂ ಇಲ್ಲಿ ಗಮನಿಸಲು ಸಾಧ್ಯವಿದೆ. ಈ ಮೊದಲೇ ಹೇಳಿದಂತೆ ರೊಮ್ಯಾಂಟಿಕ್ ಭಾವನೆಗಳ ಹಿನ್ನೆಲೆಯಲ್ಲಿ ತನ್ನ ದೇಶ, ತನ್ನ ಪೂರ್ವಿಕರ ಪರಂಪರೆ ಇವುಗಳ ಬಗ್ಗೆ ಉತ್ಕಟವಾದ ಅಭಿಮಾನವನ್ನು ಪ್ರಕಟಿಸಲೇಬೇಕಾದ ಅವಶ್ಯಕತೆ ಉಂಟಾದಾಗ ಅಲ್ಲಿನ ಜನಪದ ಮಹಾಕಾವ್ಯ ಈ ಅವಶ್ಯಕತೆಗಳನ್ನು ಪೂರೈಸುವ ಸಾಧನವಾಗಿ ಲಭ್ಯವಾಗುತ್ತದೆ. ಫಿನ್‌ಲೆಂಡ್‌ನ ಸ್ವಾತಂತ್ರ್ಯಪೂರ್ವ ದಿನಗಳಲ್ಲಿ ಹಾಗೂ ಸ್ವೀಡನ್ ಮತ್ತು ರಷ್ಯಾ ದೇಶಗಳ ಹಿಡಿತದಿಂದ ಹೊರಬರುವ ಪ್ರಯತ್ನ ನಡೆಸುತ್ತಿದ್ದ ದಿನಗಳಲ್ಲಿ ಜನರಲ್ಲಿ ಆತ್ಮವಿಶ್ವಾಸ ತುಂಬುವ, ದೇಶದ ಬಗ್ಗೆ ಅಭಿಮಾನ ಹೆಚ್ಚಿಸುವ ಹಾಗೂ ತಮ್ಮದೂ ಒಂದು ಮಹಾಕಾವ್ಯ

ಇದೆ ಎಂದು ಗುರುತಿಸಿಕೊಳ್ಳುವ ಬಯಕೆಗೆ ಉತ್ತರವೋ ಎಂಬಂತೆ ಎಲಿಯಾಸ್ ಲೆನ್ರೊಟ್ ಕಲೆವಲವನ್ನು ಸಂಪಾದಿಸಿ ಪ್ರಚುರಗೊಳಿಸಿದರು. ಪರಿಣಾಮವಾಗಿ ಫಿನ್‌ಲೆಂಡ್‌ನಲ್ಲಿ ಕಲೆವಲ ಒಂದು ಹೊಸ ಅಭಿಮಾನದ ಅಲೆಯನ್ನೇ ಎಬ್ಬಿಸಿತು. ಕಲೆವಲ ಹಾಗೂ ಅದರ ಸಂಪಾದಕ ಎಲಿಯಾಸ್ ಲೆನ್ರೊಟ್ ದಿನ ಬೆಳಗಾಗುವಷ್ಟರಲ್ಲಿ ಸಾಕಷ್ಟು ಜನಪ್ರಿಯರಾದರು. ಕಲೆವಲ ವಿವಿಧ ರೀತಿಯ ಅಧ್ಯಯನಗಳಿಗೆ ತನ್ನನ್ನು ಒಗ್ಗಿಸಿಕೊಂಡ ಪ್ರಥಮ ಜನಪದ ಮಹಾಕಾವ್ಯ ಎನ್ನಬಹುದು. ಯಾವ ಸಂಸ್ಕೃತಿ ಬೇರೊಂದು ಸಂಸ್ಕೃತಿಯ ದಮನಕ್ಕೆ ಒಳಗಾಗಿ ಸುಪ್ತಾವಸ್ಥೆಯಲ್ಲಿದ್ದು, ತನ್ನ ಅಸ್ತಿತ್ವವನ್ನು ಪ್ರಕಟಪಡಿಸಲು ಹಾತೊರೆಯುತ್ತದೆಯೋ ಅಂತಹ ಸಂಸ್ಕೃತಿ ತನ್ನ ಜನಪದ ಮಹಾಕಾವ್ಯಕ್ಕೆ ಹೆಚ್ಚಿನ ಮಹತ್ವವನ್ನು ನೀಡುತ್ತದೆ. ಕ್ಷೀಣಗೊಂಡ ತನ್ನ ಸತ್ವವನ್ನು ಗಟ್ಟಿಗೊಳಿಸಿಕೊಂಡು ಪುನಃ ಪ್ರಾತಿನಿಧ್ಯ ಸ್ಥಾಪಿಸಿಕೊಳ್ಳಲು ಇದು ಒಂದು ರೀತಿಯ ಚೇತಕ ಶಕ್ತಿಯಾಗಿ ಕೆಲಸ ಮಾಡುತ್ತದೆ. ಫಿನ್‌ಲೆಂಡ್‌ನಲ್ಲಿ ಇಂತಹ ಕಾರಣಕ್ಕಾಗಿಯೇ ಕಲೆವಲ ಅಧ್ಯಯನಕ್ಕೆ ಅತಿ ಹೆಚ್ಚಿನ ಮಹತ್ವ ದೊರೆಯಿತು. ಅವರು ಆ ಮೂಲಕ ತಮ್ಮ ಪರಂಪರೆಯನ್ನು ಪುನಃ ಕಟ್ಟಿಕೊಂಡರು. ಈ ಪರಂಪರೆಯ ಪುನರ್‌ಸೃಷ್ಟಿಕಾರರಾಗಿ ಎಲಿಯಾಸ್ ಲೆನ್ರೊಟ್ ಜೊತೆಗೆ ಈ ಜನಪದ ಮಹಾಕಾವ್ಯದ ಇನ್ನಷ್ಟು ಆಳವಾದ ಅಧ್ಯಯನ ಕೈಗೊಳ್ಳುವ ಮೂಲಕ ಕಾರ್ಲೆಕ್ರಾನ್ ಹಾಗೂ ಜೂಲಿಯಸ್ ಕ್ರಾನ್ ಅವರುಗಳು ಫಿನ್‌ಲೆಂಡ್‌ನ ಜಾನಪದ ಅಧ್ಯಯನಕ್ಕೆ ಒಂದು ಹೊಸ ಆಯಾಮವನ್ನೇ ಒದಗಿಸಿಕೊಟ್ಟರು.

ಫಿನ್‌ಲೆಂಡ್‌ನಲ್ಲಿ ನಡೆದ ಈ ಪ್ರಯತ್ನ ಕಂಡ ಯಶಸ್ಸು ಜಗತ್ತಿನ ವಿವಿಧ ಕಡೆಗಳಲ್ಲಿ ಮಹಾಕಾವ್ಯಗಳ ಅಧ್ಯಯನಕ್ಕೆ ಸ್ಫೂರ್ತಿ ನೀಡಿತು. ಆರಂಭದ ಹಂತದಲ್ಲಿ ಎಲ್ಲ ಕಡೆಯೂ ಸಂಗ್ರಹ ಕಾರ್ಯ ಆರಂಭವಾಯಿತು. ಪ್ರತಿಯೊಂದು ಸಂಸ್ಕೃತಿಯೂ ಜನಪದ ಮಹಾಕಾವ್ಯವೊಂದನ್ನು ಹೊಂದಿರುವುದರ ಅನಿವಾರ್ಯತೆಯ ಬಗ್ಗೆ ಪ್ರಶ್ನೆಗಳು, ಸಂದೇಹಗಳು ಎದ್ದವು. ಕೊನೆಗೆ ಅವುಗಳ ಇರುವಿಕೆಯನ್ನು ಖಚಿತಪಡಿಸಿಕೊಳ್ಳುವ ಹಂತದಲ್ಲಿ ಅವುಗಳ ಸಂಗ್ರಹಣಾ ಕಾರ್ಯ ನಡೆಯಿತು.

ಸಾಹಿತ್ಯಾಧ್ಯಯನ ಕ್ಷೇತ್ರದಲ್ಲಿ ಬಹುಕಾಲದವರೆಗೆ ಶಿಷ್ಟ ಮಹಾಕಾವ್ಯಗಳನ್ನು ಮಾತ್ರವೇ ಪರಿಗಣಿಸುವ ವ್ಯವಸ್ಥೆ ಹಾಗೂ ಮನೋಭಾವ ಇತ್ತು. ಆದರೆ ಸಮಾಜದ ವಿವಿಧ ಸ್ತರಗಳ ಅಧ್ಯಯನ ಹೆಚ್ಚು ವ್ಯಾಪಕವಾಗಿ ಹಾಗೂ ಸೂಕ್ಷ್ಮವಾಗಿ ನಡೆಯುತ್ತಾ ಸಾಗಿದಂತೆ ಕೇವಲ ಶಿಷ್ಟ ಮಹಾಕಾವ್ಯಗಳು ಮಾತ್ರವೇ ಇಡೀ ಸಂಸ್ಕೃತಿಯನ್ನು ಅರ್ಥೈಸಬಲ್ಲ ಸಾಹಿತ್ಯಾಧಾರಗಳಲ್ಲ ಎಂಬ ಅಂಶ ಸ್ಪಷ್ಟವಾಗುತ್ತಾ ಬಂತು. ಜನಪದ ಸಾಹಿತ್ಯ ಸಂಗ್ರಹ ಕೇವಲ ಹವ್ಯಾಸದ ಮಟ್ಟದಿಂದ, ಆಸಕ್ತಿಯ ಅಧ್ಯಯನದ ಕೇಂದ್ರವಾಗಿ ಮಾರ್ಪಡುವವರೆಗಿನ ಬೆಳವಣಿಗೆಯಲ್ಲಿ, ಬರವಣಿಗೆಯ ರೂಪಕ್ಕೆ ಬಾರದಿದ್ದ, ಕೇವಲ ಬಾಯಿಂದ ಬಾಯಿಗೆ ಹರಡಿಕೊಂಡಿದ್ದ, ಸಮೃದ್ಧ ಜನಪದ ಸಾಹಿತ್ಯ ತನ್ನ ವಿಶಿಷ್ಟ ಲಕ್ಷಣಗಳನ್ನು ನಿಚ್ಚಳವಾಗಿ ತೋರುವ ಮಟ್ಟಕ್ಕೇರಿತು. ಶಿಷ್ಟ ಮಹಾಕಾವ್ಯಗಳಷ್ಟೇ ಪ್ರಭಾವಶಾಲಿಯಾಗಿ ಸಂಸ್ಕೃತಿಯ ವಿವಿಧ ಸ್ತರಗಳ ಲಕ್ಷಣಗಳನ್ನು ಬಿಂಬಿಸುವ ಜನಪದ ಮಹಾಕಾವ್ಯಗಳೂ ಅಸ್ತಿತ್ವದಲ್ಲಿರುವುದನ್ನು ಗುರುತಿಸಲು ಸಾಧ್ಯವಾಯಿತು. ಜನಪದ

ಮಹಾಕಾವ್ಯಗಳು ಉಳಿದ ಜನಪದ ಪ್ರಕಾರಗಳಿಗಿಂತ ಹೆಚ್ಚು ದೀರ್ಘವಾಗಿರುತ್ತವೆ. ಸಾಮಾನ್ಯವಾಗಿ ಜನಪದ ಪುರಾಣ ಅಥವಾ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಒಂದು ಸಂಸ್ಕೃತಿ ಅಥವಾ ಸಂಪ್ರದಾಯ ಪ್ರಚಲಿತವಿರುತ್ತದೆ. ಆ ಸಂಸ್ಕೃತಿಯ ವೀರನಾಯಕನ, ಜೀವನ ಸಾಧನೆ ಇವುಗಳನ್ನು ಹಾಡಿ ಹೊಗಳುವ, ಆತನ ಕಷ್ಟ ಸುಖಗಳನ್ನು ಕಣ್ಣಿಗೆ ಕಟ್ಟುವಂತೆ ವರ್ಣಿಸುವ ವರ್ಣನೆಗಳನ್ನು ಇವು ಹೊಂದಿರುತ್ತವೆ. ಜನಪದ ಮಹಾಕಾವ್ಯಗಳು ಬರೆದಿಟ್ಟ ಓಲೆಗರಿಗಳನ್ನು ಜೋಪಾನವಾಗಿಟ್ಟಿದುದರಿಂದ ಉಳಿದಿಲ್ಲ, ಬದಲಾಗಿ ಅವು ಆಚರಣೆಗೊಳಗಾಗುತ್ತಿರುವುದರಿಂದ ಉಳಿದಿವೆ.

೧.೩ ಜನಪದ ಮಹಾಕಾವ್ಯದ ಸ್ವರೂಪ

ಪ್ರಾಚೀನ, ಮಧ್ಯಕಾಲೀನ ಮತ್ತು ಆಧುನಿಕ ಶಿಷ್ಟ ಮಹಾಕಾವ್ಯಗಳ ಲಕ್ಷಣ, ಸ್ವರೂಪ ಮತ್ತಿತರ ವಿಷಯಗಳಿಗೆ ಸಂಬಂಧಿಸಿದಂತೆ ಭಾರತೀಯ ಭಾಷೆಗಳಲ್ಲಿ ಸಾಕಷ್ಟು ಚರ್ಚೆ ನಡೆದು ಶಿಷ್ಟ ಮಹಾಕಾವ್ಯದ ಸ್ವರೂಪ ಮತ್ತು ಲಕ್ಷಣಗಳನ್ನು ಗುರುತಿಸಲಾಗಿದೆ. ಆದರೆ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದಂತೆ ಹೆಚ್ಚು ಚರ್ಚೆ ನಡೆದಿಲ್ಲ. ಭಾರತದ ಜಾನಪದ ಅಧ್ಯಯನದ ಸುಮಾರು ಇನ್ನೂರು ವರ್ಷಗಳ ಇತಿಹಾಸದಲ್ಲಿ ಜನಪದ ಕಾವ್ಯ, ಕಥೆ, ಗಾದೆ, ಒಗಟು ಮತ್ತಿತರ ಚಿಕ್ಕ ಚಿಕ್ಕ ಪ್ರಕಾರಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಆದರೆ ಶಿಷ್ಟ ಸಾಹಿತ್ಯದಲ್ಲಿರುವಂತೆ ಜನಪದ ಸಾಹಿತ್ಯದಲ್ಲಿಯೂ ಮಹಾಕಾವ್ಯಗಳು ಇರಲು ಸಾಧ್ಯ ಎಂಬುದರ ಬಗ್ಗೆ ಹೆಚ್ಚು ಅಧ್ಯಯನಗಳು ನಡೆದಿಲ್ಲ. ಕಳೆದ ಒಂದೆರಡು ದಶಕಗಳಿಂದ ಈ ಬಗ್ಗೆ ಅಲ್ಲಲ್ಲಿ ಅಲ್ಪ ಸ್ವಲ್ಪ ಚರ್ಚೆ ನಡೆದಿದೆ. ಆದರೆ ಪಾಶ್ಚಾತ್ಯ ದೇಶಗಳಲ್ಲಿ ಫಿನ್ಲೆಂಡ್‌ನ ಮಹಾಕಾವ್ಯ ಕಲೆವಲ ಪ್ರಕಟವಾದಾಗಿನಿಂದಲೂ ಜಾನಪದದಲ್ಲಿ ಮಹಾಕಾವ್ಯಗಳಿವೆ ಎಂಬುದನ್ನು ಗುರುತಿಸಿ ಅವುಗಳ ಲಕ್ಷಣ ಮತ್ತು ಸ್ವರೂಪದ ಬಗ್ಗೆ ಸಾಕಷ್ಟು ಚರ್ಚೆ ನಡೆಸಲಾಗಿದೆ.

ಜನಪದ ಮಹಾಕಾವ್ಯ ಎಂಬ ಪರಿಕಲ್ಪನೆ ಅದನ್ನು ಹಾಡುವ ಮತ್ತು ಕೇಳುವ ಜನರಲ್ಲಿ ಸಹಜವಾಗಿ ಇರುವಂತಹುದಲ್ಲ. ಈ ಪರಿಕಲ್ಪನೆಯನ್ನು ವಿದ್ವಾಂಸರು ಅಭ್ಯಾಸದ ಸಲುವಾಗಿ ರೂಪಿಸಿಕೊಂಡರು. ವಿದ್ವಾಂಸರ ಈ ಪರಿಕಲ್ಪನೆಯನ್ನು ವಿಶ್ಲೇಷಣಾತ್ಮಕ ಪ್ರಕಾರ (Analytical Category) ಎಂದು ಹೇಳಬಹುದು. ವಿದ್ವಾಂಸರು ಯಾವುದನ್ನು ಜನಪದ ಮಹಾಕಾವ್ಯ ಎನ್ನುತ್ತಾರೋ ಅದನ್ನು ಹಾಡುವವರು ಮತ್ತು ಕೇಳುವವರು ಹಾಡು, ಪದ, ಕಥೆ ಎಂದು ಕರೆಯುತ್ತಾರೆ. ಇದು ಅವರಲ್ಲಿ ಸಹಜವಾಗಿ ಇರುವಂತಹುದು. ಇದನ್ನು ಸಾಂಸ್ಕೃತಿಕ ಪ್ರಕಾರ (Ethnic Genre) ಎಂದು ಕರೆಯಬಹುದು. ಪಾಶ್ಚಾತ್ಯರೇ ಈ ಬಗ್ಗೆ ಹೆಚ್ಚಿನ ಅಧ್ಯಯನ ನಡೆಸಿರುವುದರಿಂದ ಅವರ ಅಭಿಪ್ರಾಯಗಳ ಆಧಾರದ ಮೇಲೆ ಜನಪದ ಮಹಾಕಾವ್ಯದ ಲಕ್ಷಣ ಮತ್ತು ಸ್ವರೂಪವನ್ನು ಕುರಿತು ಸ್ಥೂಲವಾಗಿ ಇಲ್ಲಿ ವಿಚಾರ ಮಾಡಲಾಗಿದೆ. ಜನಪದ ಮಹಾಕಾವ್ಯಗಳ ಬಗ್ಗೆ ಚರ್ಚೆಯನ್ನು ಆರಂಭಿಸಿದವರು ಫಿನ್‌ಲೆಂಡ್‌ನ ಜಾನಪದ ವಿದ್ವಾಂಸರು. ಜರ್ಮನಿಯ ಚಿಂತಕ

ಹರ್ಡರ್ ಅವರ ರೊಮ್ಯಾಂಟಿಕ್ ರಾಷ್ಟ್ರೀಯವಾದ (Romantic Nationation) ಜನಪದ ಮಹಾಕಾವ್ಯಗಳ ಅಸ್ತಿತ್ವವನ್ನು ಗುರುತಿಸಲು ಮತ್ತು ಅದರ ಬಗ್ಗೆ ಅಧ್ಯಯನಗಳನ್ನು ನಡೆಸಲು ಪ್ರೇರಣೆಯನ್ನು ಒದಗಿಸಿತು. ಫಿನ್‌ಲೆಂಡ್‌ನಲ್ಲಿ ಆರಂಭವಾದ ಈ ಬಗೆಯ ಅಧ್ಯಯನ ಪೂರ್ವ ಯುರೋಪಿನ ದೇಶಗಳಲ್ಲಿ, ರಷ್ಯಾ, ಚೈನಾ, ಜಪಾನ್ ಹಾಗೂ ಭಾರತದಲ್ಲಿ ಮುಂದುವರೆದಿದೆ. ಸಾಮಾನ್ಯವಾಗಿ ಎಲ್ಲಾ ದೇಶಗಳ ಜನಪದ ಮಹಾಕಾವ್ಯಗಳೂ ವೀರರ ಸಾಹಸಗಳನ್ನು ಕುರಿತದ್ದಾಗಿರುತ್ತವೆ; ಗಾತ್ರದಲ್ಲಿ ದೊಡ್ಡದಾಗಿರುತ್ತವೆ. ನಿರ್ದಿಷ್ಟ ವೀರ ಆಯಾದೇಶದ ಅಥವಾ ಸಾಂಸ್ಕೃತಿಕ ಗುಂಪಿನ ಹಿತರಕ್ಷಣೆಗಾಗಿ ವಿರೋಧಿಗಳೊಡನೆ ಸೆಣಸಿ ಪ್ರಾಣತ್ಯಾಗ ಮಾಡುತ್ತಾನೆ. ಅವನು ಸತ್ತನಂತರ ಅವನನ್ನು ಆ ದೇಶದ ಅಥವಾ ಆ ಸಮುದಾಯದ ಜನರು ದೇವರೆಂದು ಪೂಜೆ ಮಾಡುತ್ತಾರೆ. ಆ ದೇವತೆಗೆ ಹೊಂದಿಕೊಂಡಂತೆ ಕಾವ್ಯ ರಚಿತವಾಗಿರುತ್ತದೆ. ಆ ಕಾವ್ಯ ಚಿಕ್ಕದಾಗಿದ್ದರೆ ಖಂಡಕಾವ್ಯದ ವ್ಯಾಪ್ತಿಯನ್ನೂ, ದೀರ್ಘವಾಗಿದ್ದರೆ ಮಹಾಕಾವ್ಯದ ವ್ಯಾಪ್ತಿಯನ್ನೂ ಪಡೆದುಕೊಳ್ಳುತ್ತದೆ. ಆ ದೇವತೆಯ ಪ್ರೀತ್ಯರ್ಥವಾಗಿ ಜಾತ್ರೆಗಳು ನಡೆಯುತ್ತವೆ. ಜಾತ್ರೆಗಳಲ್ಲಿ ನಡೆಯುವ ಆಚರಣೆಗಳಲ್ಲಿ (Rituals) ಆ ಕಾವ್ಯದ ಕೆಲವು ಭಾಗಗಳನ್ನು ಹಾಡುಗಾರರು ಹಾಡುತ್ತಾರೆ, ಇಲ್ಲವೇ ನಾಟ್ಯೀಕರಣಗೊಳಿಸಿ (Dramatisation) ಆ ಪುರಾಣದ ಕಥೆಯನ್ನು ಪುನರಭಿನಯಿಸುತ್ತಾರೆ (Ritual enactment). ಹೀಗಾಗಿ ಜನಪದ ಮಹಾಕಾವ್ಯ ಆಯಾ ಸಮುದಾಯದ ಅಥವಾ ದೇಶದ ಜನರ ಪವಿತ್ರವಾದ ಪುರಾಣವೇ ಆಗಿರುತ್ತದೆ. ಇದಕ್ಕೆ ಜಾನಪದದ ಯಾವುದೇ ಪ್ರಕಾರಕ್ಕಿಂತಲೂ ಹೆಚ್ಚಿನ ಮನ್ನಣೆಯನ್ನು ಕೊಡುತ್ತಾರೆ. ಜನಪದ ಮಹಾಕಾವ್ಯದ ಎಲ್ಲಾ ಭಾಗಗಳನ್ನೂ ಜಾತ್ರೆಗಳ ಸಂದರ್ಭದಲ್ಲಿ ಅಥವಾ ಇತರ ಸಂದರ್ಭಗಳಲ್ಲಿ ಹಾಡುವುದಿಲ್ಲ. ಯಾವುದೋ ಕೆಲವು ಭಾಗಗಳನ್ನು ಮಾತ್ರ ಹಾಡಲಾಗುತ್ತದೆ. ವಾಸ್ತವವಾಗಿ ಜನಪದ ಮಹಾಕಾವ್ಯಗಳ ಸುದೀರ್ಘ ವ್ಯಾಪ್ತಿಯ ಕಲ್ಪನೆ ಉಂಟಾಗುವುದು ಅವುಗಳನ್ನು ದಾಖಲು ಮಾಡಿಕೊಂಡಾಗ ಮಾತ್ರ. ಇದನ್ನು ಸಂಗ್ರಹಿಸಿ, ಸಂಪಾದಿಸುವ ವ್ಯಕ್ತಿ ಆ ಮಹಾಕಾವ್ಯದ ಘಟನೆಗಳನ್ನು, ಪ್ರಸಂಗಗಳನ್ನು ಕಾಲಾನುಕ್ರಮವಾಗಿ ಜೋಡಿಸಿ ಅವುಗಳಿಗೆ ಒಂದು ರೂಪವನ್ನು ಕೊಡುತ್ತಾನೆ. ಹೀಗಾಗಿ ವಿಭಿನ್ನ ವೀರರ ಸಾಹಸಗಳಿಗೆ ಸಂಬಂಧಿಸಿದಂತೆ ಕಥನಗೀತೆಗಳ ಚಕ್ರ (Ballad cycle) ಒಂದು ಮಹಾಕಾವ್ಯದ ಒಂದು ಸ್ವರೂಪವನ್ನು ಪಡೆದುಕೊಳ್ಳಲು ಸಾಧ್ಯ. ಓಯಿನಾಸ್ ಎಂಬ ವಿದ್ವಾಂಸರು ಜನಪದ ಮಹಾಕಾವ್ಯದ ಲಕ್ಷಣವನ್ನು ಈ ರೀತಿ ಗುರುತಿಸಿದ್ದಾರೆ: "Folk or oral epic songs are narrative poems in formulaic and ornamental style dealing with the adventures of extraordinary people" (1978:99).

ಜನಪದ ಮಹಾಕಾವ್ಯಗಳ ಗಾತ್ರ ಎಷ್ಟಿರಬೇಕು ಎಂಬುದರ ಬಗ್ಗೆ ದೇಶದಿಂದ ದೇಶಕ್ಕೆ ವಿವಿಧ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ವಾಸ್ತವವಾಗಿ ರಷ್ಯಾದಲ್ಲಾಗಲಿ, ಫಿನ್‌ಲೆಂಡ್‌ನಂತಹ ದೇಶದಲ್ಲಾಗಲಿ ಸಾವಿರ ಸಾಲುಗಳಿಗೆ ಹೆಚ್ಚಾಗಿರುವ ಜನಪದ ಮಹಾಕಾವ್ಯಗಳಿಲ್ಲ. ಈ ಎರಡೂ ದೇಶಗಳಲ್ಲಿ ಕಥನಕಾವ್ಯಗಳು ಸಮೃದ್ಧವಾಗಿದ್ದರೂ

ಹಲವಾರು ಸಾವಿರ ಸಾಲಿನ ಮಹಾಕಾವ್ಯಗಳು ಸಹಜ ಸ್ಥಿತಿಯಲ್ಲಿ ಇಲ್ಲ. ಆದರೆ ಕಲೆವಲ ಮಹಾಕಾವ್ಯವನ್ನು ಮೊದಲಬಾರಿಗೆ ಸಂಗ್ರಹಿಸಿ ಸಂಪಾದಿಸಿ ಕ್ರಿ.ಶ.೧೮೩೫ರಲ್ಲಿ ಪ್ರಕಟಿಸಿದ ಎಲಿಯಾಸ್ ಲೆನ್ರೂಟ್ ಫಿನ್‌ಲೆಂಡ್‌ನ ವೀರರಿಗೆ ಸಂಬಂಧಿಸಿದ ಕಥನಗೀತೆಗಳನ್ನು ವ್ಯವಸ್ಥಿತವಾಗಿ ಜೋಡಿಸಿ ಅದಕ್ಕೆ ಮಹಾಕಾವ್ಯದ ಆಕಾರವನ್ನು ನೀಡಿದರು. ಈ ಕಥನಗೀತೆಗಳೆಲ್ಲವನ್ನೂ ಹಾಡಿದವನು ಒಬ್ಬ ಕಲಾವಿದನಲ್ಲ; ಹಲವಾರು ಕಲಾವಿದರು. ಅಂದರೆ ಹಲವರು ಹಾಡುಗಾರರು ಹಾಡಿದ ಫಿನ್‌ಲೆಂಡ್‌ನ ವಿಭಿನ್ನ ವೀರರಿಗೆ ಸಂಬಂಧಿಸಿದ ಕಥನ ಗೀತೆಗಳಿಗೆ ಒಂದು ಸಂಬಂಧದ ಎಳೆಯನ್ನು ಜೋಡಿಸಿ ಒಂದು ಮಹಾಕಾವ್ಯವನ್ನು ರೂಪಿಸಿದರು. ಇದು ಜನಪದ ಮಹಾಕಾವ್ಯ ರೂಪಗೊಂಡ ಒಂದು ಬಗೆ. ಚಿಕ್ಕ ಪುಟ್ಟ ದೇಶಗಳು ತಮಗಿದ್ದ ಕೀಳರಿಮೆಯಿಂದ ತಮ್ಮ ಜನರಲ್ಲಿ ಸ್ವಾಭಿಮಾನ, ದೇಶಾಭಿಮಾನಗಳನ್ನು ಉದ್ದೀಪನಗೊಳಿಸುವ ದೃಷ್ಟಿಯಿಂದ ಉದ್ದೇಶಪೂರ್ವಕವಾಗಿ ಈ ಜನಪದ ಮಹಾಕಾವ್ಯವನ್ನು ರೂಪಿಸಲಾಯಿತೆಂದು ಆಲೆನ್ ಡಂಡೆಸ್ ಅಭಿಪ್ರಾಯ ಪಡುತ್ತಾರೆ. (Dundes:1985)

ಎರಡನೆಯ ಬಗೆಯ ಜನಪದ ಮಹಾಕಾವ್ಯ ಎಂದರೆ ಒಬ್ಬನೇ ಹಾಡುಗಾರ ಒಬ್ಬ ವೀರನಿಗೆ ಅಥವಾ ವೀರಸ್ತ್ರೀಗೆ ಸಂಬಂಧಿಸಿದಂತೆ ಹಾಡುವ ಸುದೀರ್ಘವಾದ ರಚನೆ. ಇದರಲ್ಲಿ ಬರುವ ಅನೇಕ ಪ್ರಸಂಗಗಳಲ್ಲಿ ಎಲ್ಲಾ ಪ್ರಸಂಗಗಳನ್ನೂ ಎಲ್ಲಾ ಸಂದರ್ಭಗಳಲ್ಲಿಯೂ ಹಾಡದಿದ್ದರೂ ಹಾಡುಗಾರನಿಗೆ ಈ ಎಲ್ಲಾ ಪ್ರಸಂಗಗಳೂ ತಿಳಿದಿರುತ್ತವೆ. ಕನ್ನಡದ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಮೊದಲಾದ ಮಹಾಕಾವ್ಯಗಳು ಈ ಸಾಲಿಗೆ ಸೇರುತ್ತವೆ. ಇವುಗಳ ಲಕ್ಷಣಗಳನ್ನು ದೇಜಗೌ, ಜೀಶಂಪ, ಪಿ.ಕೆ.ರಾಜಶೇಖರ ಮೊದಲಾದವರು ಈಚಿನ ವರ್ಷಗಳಲ್ಲಿ ಗುರುತಿಸುವ ಪ್ರಯತ್ನ ಮಾಡಿದ್ದಾರೆ. ಅನೇಕ ಸಾವಿರ ಸಾಲುಗಳ ಈ ಮಹಾಕಾವ್ಯಗಳನ್ನು ಒಬ್ಬೊಬ್ಬ ಹಾಡುಗಾರರೇ ಅನೇಕ ಘಂಟೆಗಳ ಕಾಲ ಹಾಡುತ್ತಾರೆ. ಸುಮಾತ್ರ ದ್ವೀಪದ ಆಂಗುನ್ನಾನ್ ತುಂಗಾ ಎಂಬ ವೀರನಿಗೆ ಸಂಬಂಧಿಸಿದ ಮಹಾಕಾವ್ಯವನ್ನು ಅನೇಕ ರಾತ್ರಿಗಳ ಕಾಲ ಹಾಡುತ್ತಾರೆ. ಅವರು ಹಾಡುವ ಅತ್ಯಂತ ಕನಿಷ್ಟ ಅವಧಿ ಇಪ್ಪತ್ತಮೂರು ಘಂಟೆಗಳಾಗಿರುತ್ತವೆ ಎಂದೂ ಅದು ನಲವತ್ತು ಸಾವಿರ ಸಾಲುಗಳಿಂದ ಕೂಡಿರುತ್ತದೆ ಎಂದೂ ಈ ಬಗ್ಗೆ ಅಧ್ಯಯನ ಮಾಡಿರುವ ಫಿಲಿಪ್ಸ್ ಎಂಬುವವರು ತಿಳಿಸುತ್ತಾರೆ. ಇಷ್ಟು ದೀರ್ಘವಾದ ಕಾವ್ಯಕ್ಕೆ ಹೋಲಿಸಿದಾಗ ರಷ್ಯಾದ ಮಹಾಕಾವ್ಯಗಳು ಕೇವಲ ಖಂಡಕಾವ್ಯಗಳು ಎನಿಸಿದರೆ ಆಶ್ಚರ್ಯವಿಲ್ಲ. ರಷ್ಯಾದ ಜನಪದ ಮಹಾಕಾವ್ಯಗಳ ಬಗ್ಗೆ ಅಧ್ಯಯನ ಮಾಡಿದ ವ್ಲಾಡಿಮಿರ್ ಪ್ರಾಪ್ ಅವರು ಜನಪದ ಮಹಾಕಾವ್ಯದ ಗಾತ್ರದ ಬಗ್ಗೆ ಹೆಚ್ಚು ಗಮನ ಕೊಡುವುದಿಲ್ಲ. ಆ ಕಾವ್ಯದಲ್ಲಿ ವೀರರಿರಬೇಕು, ವೀರರ ಸಾಹಸದ ಕಥನವಿರಬೇಕು ಮತ್ತು ಒಂದು ಸಮುದಾಯ ಅಥವಾ ರಾಷ್ಟ್ರದ ಸಂಘಟನೆಗೆ ನೆರವಾಗುವಂತಿರಬೇಕು ಎಂದು ಅಭಿಪ್ರಾಯ ಪಡುತ್ತಾರೆ. ಪ್ರಾಪ್ ಅವರಿಗೆ ಜಗತ್ತಿನ ಇತರ ಜನಪದ ಮಹಾಕಾವ್ಯಗಳ ಪರಿಚಯವಿರಲಿಲ್ಲ. ಹೀಗಾಗಿ ಅವರು ಜನಪದ ಖಂಡಕಾವ್ಯಗಳನ್ನೇ ಜನಪದ ಮಹಾಕಾವ್ಯಗಳೆಂದು ಭಾವಿಸಿದಂತೆ ತೋರುತ್ತದೆ. ಜನಪದ

ಮಹಾಕಾವ್ಯಗಳ ಅಧ್ಯಯನ ಮಾಡುವಾಗ ಅವುಗಳ ಗಾತ್ರವನ್ನು ಗಮನದಲ್ಲಿಟ್ಟುಕೊಂಡು, ಕಡಿಮೆ ವ್ಯಾಪ್ತಿಯ ಕಾವ್ಯಗಳನ್ನು ಖಂಡಕಾವ್ಯಗಳೆಂದೂ, ದೀರ್ಘ ವ್ಯಾಪ್ತಿಯ ಕಾವ್ಯಗಳನ್ನು ಮಹಾಕಾವ್ಯಗಳೆಂದೂ ವರ್ಗೀಕರಿಸುವುದು ಸೂಕ್ತ.

ಬಹಳ ಕಾಲದವರೆಗೆ ಯೂರೋಪಿನ ವಿದ್ವಾಂಸರಿಗೆ ಯೂರೋಪಿನಾಚೆಗೆ ಇತರ ದೇಶಗಳಲ್ಲಿ ಜನಪದ ಮಹಾಕಾವ್ಯಗಳಿವೆ ಎಂಬ ಕಲ್ಪನೆ ಇರಲಿಲ್ಲ. ಆದರೆ ಕಳೆದ ಎರಡು ಮೂರು ದಶಕಗಳಲ್ಲಿ ನಡೆದಿರುವ ಅಧ್ಯಯನಗಳಿಂದ ಭಾರತ, ಇಂಡೋನೇಷಿಯಾ, ಚೈನಾ, ಮಧ್ಯ ಏಷ್ಯಾ, ಆಫ್ರಿಕಾ, ದಕ್ಷಿಣ ಅಮೆರಿಕಾ ದೇಶಗಳಲ್ಲಿ ಇಂದಿಗೂ ಜೀವಂತ ಸ್ಥಿತಿಯಲ್ಲಿರುವ ಅನೇಕ ಜನಪದ ಮಹಾಕಾವ್ಯಗಳಿರುವ ವಿಷಯ ತಿಳಿದು ಬಂದಿದೆ. ಹೀಗಾಗಿ ಜನಪದ ಮಹಾಕಾವ್ಯದ ಲಕ್ಷಣಗಳ ಬಗ್ಗೆ ಯೂರೋಪಿನ ಜನಪದ ಮಹಾಕಾವ್ಯಗಳ ಅಧ್ಯಯನದ ಆಧಾರದ ಮೇಲೆ ಯೂರೋಪಿನ ಜಾನಪದ ವಿದ್ವಾಂಸರು ಹೊಂದಿದ್ದ ಕಲ್ಪನೆಗಿಂತ ಭಿನ್ನವಾದ ಕಲ್ಪನೆಯನ್ನು ಇಂದು ಪಡೆದುಕೊಳ್ಳಲು ಸಾಧ್ಯವಾಗಿದೆ.

ಈ ಹಿನ್ನೆಲೆಯಲ್ಲಿ ಹಾಟ್ಟೊ ಎಂಬ ಜಾನಪದ ವಿದ್ವಾಂಸರು ಜಗತ್ತಿನ ಮಹಾಕಾವ್ಯಗಳನ್ನು ನಾಲ್ಕು ಬಗೆಗಳಾಗಿ ವರ್ಗೀಕರಿಸುತ್ತಾರೆ. ಅವು,

೧. ಪೂರ್ಣ ಮೌಖಿಕ (Oral): ಮಂಗೋಲಿಯಾ, ಭಾರತ, ಆಫ್ರಿಕಾ ಮೊದಲಾದ ಕಡೆ ಇವೆ.

೨. ಅರೆಮೌಖಿಕ (Sub-oral): ಹೋಮರನ ಮಹಾಕಾವ್ಯಗಳು.

೩. ಮೌಖಿಕೋತ್ತರ (Post-oral): ಹಳೆಯ ಫ್ರೆಂಚ್ ಮತ್ತು ಮಧ್ಯಕಾಲೀನ ಸ್ಪ್ಯಾನಿಷ್ ಮಹಾಕಾವ್ಯಗಳು.

(ಈ ಮೊದಲ ಮೂರು ಬಗೆಗಳನ್ನು ಪ್ರಾಥಮಿಕ ಹಂತದ ಮಹಾಕಾವ್ಯಗಳು ಎನ್ನುತ್ತಾರೆ.)

೪. ದ್ವಿತೀಯ ಹಂತದ ಮಹಾಕಾವ್ಯಗಳು: ಈನಿಯಡ್, ಪ್ಯಾರಡೈಸ್ ಲಾಸ್ಟ್ ಇತ್ಯಾದಿ. (Hatto:1980)

ಜನಪದ ಮಹಾಕಾವ್ಯಗಳನ್ನು ಕುರಿತು ಬದಲಾಗುತ್ತಿರುವ ಕಲ್ಪನೆಗಳ ಹಿನ್ನೆಲೆಯಲ್ಲಿ ಭಾರತೀಯ ಜನಪದ ಮಹಾಕಾವ್ಯಗಳ ಅಧ್ಯಯನ ಬಹಳ ಮುಖ್ಯ ಎನಿಸಿದೆ. ಈ ಜನಪದ ಮಹಾಕಾವ್ಯಗಳ ಬಗ್ಗೆ ಭಾರತದ ವಿದ್ವಾಂಸರು ತಮ್ಮ ತಮ್ಮ ಭಾಷೆಗಳ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ ಹಾಗೂ ಆ ಬಗ್ಗೆ ಅಧ್ಯಯನ ಮಾಡಿದ್ದಾರೆ. ಪಾಶ್ಚಾತ್ಯ ವಿದ್ವಾಂಸರು ಭಾರತದ ಒಂದೊಂದು ಭಾಷೆಯ ಜನಪದ ಮಹಾಕಾವ್ಯವನ್ನು ಸೂಕ್ಷ್ಮ ಅಧ್ಯಯನ ಮಾಡುವುದರ ಜೊತೆಗೆ ಭಾರತದ ಜನಪದ ಮಹಾಕಾವ್ಯಗಳ ಸ್ವರೂಪವೇನು ಎಂಬುದನ್ನು ಕುರಿತು ತೌಲನಿಕವಾಗಿ ಅಭ್ಯಾಸ

ಮಾಡಿದ್ದಾರೆ. ಸ್ಟುವರ್ಟ್ ಬ್ಲಾಕ್‌ಬರ್ನ್, ಬ್ರೆಂಡಾಬೆಕ್, ಪೀಟರ್ ಕ್ಲಾಸ್ ಮೊದಲಾದ ಅಮೆರಿಕನ್ ವಿದ್ವಾಂಸರು ಮತ್ತು ಫ್ಲಿನ್‌ಲೆಂಡ್‌ನ ಜಾನಪದ ವಿದ್ವಾಂಸರಾದ ಲೌರಿ ಹಾಂಕೊ ಭಾರತದ ಜನಪದ ಮಹಾಕಾವ್ಯಗಳನ್ನು ವಿಭಿನ್ನ ದೃಷ್ಟಿಕೋನಗಳಿಂದ ಪರಿಶೀಲಿಸಿದ್ದಾರೆ.

ಬ್ರೆಂಡಾ ಬೆಕ್ ಅವರು 'ಮಹಾಕಾವ್ಯವೆಂದರೆ ಅದೊಂದು ಮಹೋನ್ನತ ಕಥೆ. ಅದೊಂದು ಜನಪದ ಪ್ರಕಾರವಾಗಿದ್ದು ನಿರೂಪಣಾ ಕಾವ್ಯವಾಗಿರುತ್ತದೆ' ಎಂದಿದ್ದಾರೆ. ಅವರು ಜನಪದ ಮಹಾಕಾವ್ಯವೊಂದರಲ್ಲಿ (ತಮಿಳುನಾಡಿನ ಅವಳಿ ವೀರ ಸಹೋದರರ ಕಥೆಯಲ್ಲಿ) ಐದು ಅಂಶಗಳನ್ನು ಗುರುತಿಸಿದ್ದಾರೆ. (1982:196)

೧. ಅದು ವೃತ್ತಿಗಾಯಕರಿಂದ ಪ್ರದರ್ಶನಗೊಳ್ಳುತ್ತದೆ.

೨. ಈ ಪ್ರದೇಶದಲ್ಲಿ ಗಮನಕ್ಕೆ ಬಂದ ಕಾವ್ಯಗಳಲ್ಲಿ ಅತ್ಯಂತ ದೀರ್ಘಕಾವ್ಯ.

೩. ಈ ಕಾವ್ಯದ ವೀರರು ಸ್ಥಳೀಯ ದೇವಾಲಯಗಳಲ್ಲಿ ಆರಾಧಿಸಲ್ಪಡುತ್ತಿದ್ದಾರೆ.

೪. ಅದು ವಿಸ್ತೃತ ಪೌರಾಣಿಕ ಹಾಗೂ ನಾಗರಿಕ ಪರಂಪರೆಗಳ ಜೊತೆ ಹೊಂದಾಣಿಕೆಯುಳ್ಳದ್ದು.

೫. ಈ ಕಥೆಯಲ್ಲಿ ನಿರೂಪಿಸಿದ ಸಂಗತಿಗಳು ಒಂದು ಕಾಲದಲ್ಲಿ ನಡೆದಿದ್ದವು ಎಂದು ಗಾಯಕರು ಹಾಗೂ ಪ್ರೇಕ್ಷಕರು ಬಹುವಾಗಿ ನಂಬಿದ್ದಾರೆ.

ಜಗತ್ತಿನ ಇತರ ಕಡೆಗಳಲ್ಲಿನ ಮಹಾಕಾವ್ಯಗಳಿಗಿಂತ ಭಾರತೀಯ ಜನಪದ ಕಾವ್ಯಗಳು ಭಿನ್ನವಾಗಿವೆ ಎಂಬ ಸ್ಪಷ್ಟ ಅಭಿಪ್ರಾಯವನ್ನು ಹಲವಾರು ವಿದ್ವಾಂಸರು ನೀಡಿದ್ದಾರೆ. ಅದರಲ್ಲಿ ಬ್ಲಾಕ್‌ಬರ್ನ್ ಅವರ ಅಭಿಪ್ರಾಯೊಂದು ಹೀಗಿದೆ: "Indian oral epics are characterized by several formal features that literary and folklore scholars have identified with the epic genre worldwide…Epic is narrative, it is poetic and it is heroic". (1989:11)

ಪಾಶ್ಚಾತ್ಯ ವಿದ್ವಾಂಸರು ತಮ್ಮ ಜಾನಪದ ಅಧ್ಯಯನಕ್ಕೆ ಸಾಮಗ್ರಿಗಳನ್ನು ಹುಡುಕಲು ದಾಖಲಾತಿ ಸಂಗ್ರಹಾಲಯಗಳಿಗೆ ಹೋಗಬೇಕಾಗಿತ್ತು. ಆದರೆ ಭಾರತದಲ್ಲಿ ಹಾಗಿಲ್ಲ. ಈ ಜನಪದ ಮಹಾಕಾವ್ಯಗಳ ನಾಯಕರುಗಳಾದ ದೇವರುಗಳು ಹಾಗೂ ಅವುಗಳ ಆಚರಣೆಗಳ ಕಾರಣದಿಂದಾಗಿ ಇಂದಿಗೂ ಜನಮನದಲ್ಲಿ ನೆಲೆನಿಂತಿರುವುದನ್ನು ಕಣ್ಣಾರೆ ಕಾಣಬಹುದು. ಇದು ಭಾರತೀಯ ಮಹಾಕಾವ್ಯದ ವಿಶಿಷ್ಟ ಲಕ್ಷಣ. ಅನೇಕ ರಾತ್ರಿಗಳ ಕಾಲ ಹಾಡಿದರೂ ಮುಗಿಯದಷ್ಟು ದೀರ್ಘವಾಗಿರುವ ಈ ಹಾಡು ಹಾಗೂ ಕಥೆಗಳನ್ನು ವಿವಿಧ ಕಥಾ ಘಟಕಗಳಾಗಿ ವಿಭಾಗಿಸಿಕೊಳ್ಳುವ ಸುಲಭ ಸಾಧ್ಯತೆಗಳನ್ನು ಇವು ಹೊಂದಿವೆ. ಸಾಮಾನ್ಯವಾಗಿ ಇವುಗಳ ಕಥೆಗಳಲ್ಲಿನ ಎಲ್ಲಾ ಭಾಗಗಳು ಇವುಗಳನ್ನು ಪ್ರದರ್ಶಿಸುವ ರಂಗದಲ್ಲಿ ಬಿತ್ತರಗೊಳ್ಳುವುದಿಲ್ಲ.

ಸ್ಟುವರ್ಟ್ ಬ್ಲಾಕ್‌ಬರ್ನ್ ಅವರು ಭಾರತದ ಜನಪದ ಮಹಾಕಾವ್ಯಗಳ ಪ್ರಸರಣದ ವ್ಯಾಪ್ತಿಯನ್ನು ಗಮನದಲ್ಲಿಟ್ಟುಕೊಂಡು ಅವುಗಳನ್ನು ನಾಲ್ಕು ಬಗೆಗಳಾಗಿ ವರ್ಗೀಕರಿಸಿದ್ದಾರೆ :

೧. **ಸ್ಥಳೀಯ ಮಹಾಕಾವ್ಯಗಳು: (Local epics)**

ಸುಮಾರು ೧೦ ಮೈಲಿಗಳಿಂದ ನೂರು ಮೈಲಿಗಳ ತ್ರಿಜ್ಯದ (Radius) ವ್ಯಾಪ್ತಿಯಲ್ಲಿ ಮಾತ್ರ ಇರುವ ಮಹಾಕಾವ್ಯಗಳು.

ಉದಾ: ತಮಿಳುನಾಡಿನ *ತಂಪಿಮಾರ್*, ದ.ಕ.ಜಿಲ್ಲೆಯ ಕೊರ್ದಬ್ಬು ಪಾಡ್ದನ.

೨. **ಉಪ–ಪ್ರಾದೇಶಿಕ ಮಹಾಕಾವ್ಯಗಳು: (Sub-regional epics)**

ಸುಮಾರು ೧೦೦ರಿಂದ ೨೦೦ ಮೈಲಿಗಳ ತ್ರಿಜ್ಯದ ವ್ಯಾಪ್ತಿಯಲ್ಲಿ ಇರುವ ಮಹಾಕಾವ್ಯಗಳು.

ಉದಾ: ಆಂಧ್ರದ *ಪಾಲ್ನಾಡುವೀರಚರಿತ್ರೆ*, ತಮಿಳುನಾಡಿನ *ಅಣ್ಣನ್ಮಾರ್‌ಕಥೈ*, ಕರ್ನಾಟಕದ *ಜುಂಜಪ್ಪ* ಇತ್ಯಾದಿ.

೩. **ಪ್ರಾದೇಶಿಕ ಮಹಾಕಾವ್ಯಗಳು: (Regional epics)**

ಸುಮಾರು ೨೦೦ರಿಂದ ೩೦೦ಮೈಲಿಗಳ ತ್ರಿಜ್ಯದ ವ್ಯಾಪ್ತಿಯುಳ್ಳ ಮಹಾಕಾವ್ಯಗಳು.

ಉದಾ: ರಾಜಸ್ಥಾನದ *ಪಾಬೂಜಿ*, *ದೇವನಾರಾಯಣ* ಮೊದಲಾದುವು.

೪. **ಅತಿ–ಪ್ರಾದೇಶಿಕ ಮಹಾಕಾವ್ಯಗಳು: (Supra-regional epics)**

೩೦೦ಮೈಲಿಗಿಂತ ಹೆಚ್ಚಿನ ತ್ರಿಜ್ಯದ ವ್ಯಾಪ್ತಿಯುಳ್ಳ ಮಹಾಕಾವ್ಯಗಳು.

ಉದಾ: ರಾಜಾಸ್ಥಾನ, ಉತ್ತರಪ್ರದೇಶ, ಹಾಗೂ ಛತ್ತೀಸ್ ಘರ್ ಪ್ರದೇಶದಲ್ಲಿರುವ *ಧೋಲಾ*, *ಅಲ್ಹಾ* (ಉತ್ತರ ಭಾರತದ ಹಿಂದಿ ಮಾತನಾಡುವ ಪ್ರದೇಶದಲ್ಲಿ ಇದೆ), ರಾಜಾಸ್ಥಾನದ *ಗೂಗಾ* ಇತ್ಯಾದಿ.

ಈ ಪಟ್ಟಿ ಅಪರಿಪೂರ್ಣ ಮತ್ತು ಈ ಪಟ್ಟಿಯನ್ನು ಮುಂದಿನ ಸಂಶೋಧನೆಗಳು ಖಚಿತಪಡಿಸಬೇಕಾದ ಅಥವಾ ಪರಿಷ್ಕರಿಸಬೇಕಾದ ಅವಶ್ಯಕತೆ ಇದೆ ಎಂಬುದನ್ನು ಸ್ಟುವರ್ಟ್ ಬ್ಲಾಕ್‌ಬರ್ನ್ ಅವರೇ ಹೇಳಿದ್ದಾರೆ.

ಬ್ಲಾಕ್‌ಬರ್ನ್ ಅವರು ಗುರುತಿಸಿದಂತೆ ಈ ನಾಲ್ಕೂ ಬಗೆಯ ಮಹಾಕಾವ್ಯಗಳಲ್ಲಿ ಮೊದಲ ಮೂರು ಬಗೆಗಳು ಧಾರ್ಮಿಕ ಸ್ವರೂಪದ್ದಾಗಿದ್ದು, ಆಚರಣಾತ್ಮಕ ಸ್ವರೂಪ ಹೊಂದಿರುತ್ತವೆ. ಸ್ಥಳೀಯ ಹಂತದಲ್ಲಿ ಕೇವಲ ಮನುಷ್ಯ ರೂಪದವನೆಂದು

ಆರಾಧಿಸಲ್ಪಡುತ್ತಿದ್ದ ವೀರನಿಗೆ ಆ ಹಂತಕ್ಕಿಂತ ಹೆಚ್ಚಿನ ವಿಸ್ತಾರ ಪ್ರದೇಶದಲ್ಲಿ ಪ್ರಭಾವ ಬೆಳೆದಾಗ ಅತಿಮಾನುಷ ಹುಟ್ಟು ಹಾಗೂ ಅತೀಂದ್ರಿಯ ಶಕ್ತಿಗಳ ಜೋಡಣೆಯೊಂದಿಗೆ ಪವಾಡ ಸದೃಶ ಕಾರ್ಯವ್ಯಾಪ್ತಿಯ ಹೊಸ ಆಯಾಮ ದೊರಕುತ್ತದೆ. ಜೊತೆಗೆ ಅವನನ್ನು ಶಿಷ್ಟ ದೈವವೊಂದರ ಅವತಾರವೆಂಬಂತೆ ಚಿತ್ರಿಸಲಾಗುತ್ತದೆ. ಭಾರತೀಯ ಜನಪದ ಮಹಾಕಾವ್ಯಗಳಲ್ಲಿನ ಪಠ್ಯಗಳು ಕೇವಲ ವಿವರಣಾತ್ಮಕವಾದವು, ಹಾಡಲು ಬರುವಂತಹುದು ಹಾಗೂ ವೀರೋಚಿತವಾದುವುಗಳಷ್ಟೇ ಅಲ್ಲ; ಅವು ಮಹಾಕಾವ್ಯವಾಗಬೇಕಾದರೆ ಅದಕ್ಕಿಂತ ಹೆಚ್ಚಿನ ಇನ್ನೊಂದು ವಿಶಿಷ್ಟ ಗುಣ ಹೊಂದಿವೆ. ಆ ವಿಶಿಷ್ಟ ಗುಣವೆಂದರೆ ಆ ಮಹಾಕಾವ್ಯಗಳು ಅವು ಪ್ರದರ್ಶನಗೊಳ್ಳುವ ಸಮುದಾಯದೊಂದಿಗೆ ಹೊಂದಿರುವ ಸಂಬಂಧ. ಈ ಸಂಬಂಧವು ಪ್ರದರ್ಶಕ ಹಾಗೂ ಶ್ರೋತೃಗಳು ಇಬ್ಬರಿಂದಲೂ ಗುರುತಿಸಲ್ಪಡುತ್ತದೆ. ಈ ಪುರಾಣಗಳನ್ನು ಅವರು 'ನಮ್ಮ ಕಥೆ' ಎಂದೇ ಕರೆಯುತ್ತಾರೆ. 'ಜನಪದ ಮಹಾಕಾವ್ಯ' ಎಂಬುದು ಜನಪದರು ಬಳಸುವ ಪದವಲ್ಲ; ಅದನ್ನು ವಿದ್ವಾಂಸರು ಅಧ್ಯಯನದ ಅನುಕೂಲಕ್ಕೆ ಬಳಸುತ್ತಾರೆ ಅಷ್ಟೇ. ಭಾರತೀಯ ಜನಪದ ಮಹಾಕಾವ್ಯಗಳ ಪ್ರದರ್ಶನದಲ್ಲಿ ಗಾಯನ–ವಾಚನ (Song-recitation) ಮತ್ತು ನೃತ್ಯ–ನಾಟಕ (Dance-drama) ಕಥೆ–ಹಾಡು (Story-song) ಈ ಮೂರು ವಿಧಗಳನ್ನು ಗುರುತಿಸಬಹುದು.

ಭಾರತೀಯ ಜನಪದ ಮಹಾಕಾವ್ಯಗಳ ವಿಷಯದ ಆಧಾರದ ಮೇಲೆ ಸ್ಟುವರ್ಟ್ ಬ್ಲಾಕ್‌ಬರ್ನ್ ಅವರು ವೀರ (Martial), ತ್ಯಾಗ (Sacrificial), ಹಾಗೂ ರಮ್ಯ (Romantic) ಸ್ವರೂಪದ ಮಹಾಕಾವ್ಯಗಳೆಂಬ ಮೂರು ಬಗೆಗಳನ್ನು ಗುರುತಿಸಿದ್ದಾರೆ. ಇದು ಭಾರತೀಯ ಜನಪದ ಮಹಾಕಾವ್ಯಗಳ ವಿಷಯ ಆಧಾರಿತ ವರ್ಗೀಕರಣವಾಗಿದೆ. (*Oral Epics in India:* 1989)

ಶಿಷ್ಟ ಮಹಾಕಾವ್ಯಗಳು ಇಡೀ ಭಾರತದ ಸಂಸ್ಕೃತಿಯನ್ನು ಬಿಂಬಿಸುತ್ತವೆ ಎಂಬ ಭ್ರಮೆ ಹುಟ್ಟಿಸಿವೆ. ವಾಸ್ತವವಾಗಿ ಪ್ರತಿ ಸಂಸ್ಕೃತಿಯೂ ತನ್ನೊಳಗೆ ವಿಶಿಷ್ಟ ಗುಣಲಕ್ಷಣಗಳನ್ನು ಬಿಂಬಿಸುವ ತನ್ನದೇ ಆದ ಜನಪದ ಖಂಡಕಾವ್ಯಗಳನ್ನೋ, ಮಹಾಕಾವ್ಯಗಳನ್ನೋ ಹೊಂದಿರುತ್ತದೆ. ಈ ಮಹಾಕಾವ್ಯಗಳು ಅಥವಾ ಖಂಡಕಾವ್ಯಗಳು ಆಯಾ ಸಾಂಸ್ಕೃತಿಕ ವರ್ಗದ ಲೋಕದೃಷ್ಟಿಯನ್ನು (Worldview) ತಿಳಿಸುತ್ತವೆ. ಹೀಗಾಗಿ ಇತರ ಜನಪದ ಪ್ರಕಾರಗಳಿಗಿಂತ ಈ ಜನಪದ ಮಹಾಕಾವ್ಯಗಳಿಗೆ ಸಂಸ್ಕೃತಿಯಲ್ಲಿ ವಿಶಿಷ್ಟವಾದ ಸ್ಥಾನವಿದೆ.

ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಮೊದಲಿಗೆ ವಿಚಾರ ಮಾಡಿದವರು ಜೀ.ಶಂ. ಪರಮಶಿವಯ್ಯನವರು. ದಕ್ಷಿಣ ಕರ್ನಾಟಕದ ವೃತ್ತಿಗಾಯಕ ಪರಂಪರೆಗಳನ್ನು ಮೊದಲಬಾರಿಗೆ ಬೆಳಕಿಗೆ ತಂದ ಅವರು ಈ ಪರಂಪರೆಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂಬ ಎರಡು ಬಗೆಗಳಾಗಿ ವರ್ಗೀಕರಿಸಿ ಈ ವೃತ್ತಿಗಾಯಕರು ಹಾಡುವ ಕಾವ್ಯಗಳನ್ನು ಕುರಿತು ವಿಚಾರಮಾಡಿದ್ದಾರೆ. ಈ ಕಾವ್ಯಗಳು ಮಹಾಕಾವ್ಯ ಅಥವಾ ಖಂಡಕಾವ್ಯ ಸ್ವರೂಪದಲ್ಲಿರುತ್ತದೆ ಎಂಬುದನ್ನು ಗುರುತಿಸಿ ಈ ಪರಂಪರೆಗಳ ಲಕ್ಷಣಗಳನ್ನು ಈ ರೀತಿ ಪಟ್ಟಿ ಮಾಡಿದ್ದಾರೆ:

೧. ತಮ್ಮ ಅಧಿದೈವಕ್ಕೆ ಸಂಬಂಧಿಸಿದ ಜನಪದ ಕಾವ್ಯವೊಂದನ್ನು ಪರಂಪರಾನುಗತವಾಗಿ ಕಾಪಾಡಿಕೊಂಡು ಬಂದ, ಹಾಡಿಕೊಂಡು ಬಂದ ವಿಶಿಷ್ಟ ಕಾಯಕ ವರ್ಗವೊಂದು ಇರುತ್ತದೆ.

೨. ದೈವದ ಸಂಕೇತವಾದ ಜನಪದ ವಾದ್ಯಗಳನ್ನು ಬಳಸಿ ಮೇಳಗಳೋಪಾದಿಯಲ್ಲಿ ಆ ಕಾವ್ಯಗಳನ್ನು ಹಾಡಲಾಗುತ್ತದೆ. ಆ ವಾದ್ಯಗಳನ್ನು ಉಳಿದ ಸಂದರ್ಭಗಳಲ್ಲಿ ದೇವರ ಗದ್ದುಗೆಯ ಮೇಲೆ ಇಟ್ಟು ಪೂಜಿಸಲಾಗುತ್ತದೆ.

೩. ದೇವರ ಲಾಂಛನಗಳನ್ನು ಧರಿಸಿ ವಿಶೇಷ ಮತಾಚರಣೆಯ ಸಂದರ್ಭದಲ್ಲಿ ಅಥವಾ ಪೂಜಾ ಸಂದರ್ಭದಲ್ಲಿ, ಹಬ್ಬಹರಿದಿನಗಳಲ್ಲಿ ಯಾತ್ರೆ, ಜಾತ್ರೆಗಳಲ್ಲಿ ಮಾತ್ರ ಹಾಡಬಹುದಾದ ಕಾವ್ಯಗಳಾಗಿರುತ್ತವೆ.

೪. ಕೊನೆಯ ಪಕ್ಷ ಒಂದು ರಾತ್ರಿಯಾದರೂ ಹಾಡುವಷ್ಟು ವ್ಯಾಪಕತೆ ಆ ಕಾವ್ಯಗಳಿಗಿರುತ್ತದೆ. ಸಾಮಾನ್ಯವಾಗಿ ಅಧಿದೈವ ಕಥಾನಾಯಕನಾಗಿ ಅಥವಾ ಮುಖ್ಯಪಾತ್ರವಾಗಿ ಕಾಣಿಸಿಕೊಳ್ಳಬಹುದು. ಇಲ್ಲವೆ ಆ ದೈವದ ದಳಪತಿ, ಶಿಷ್ಯ, ಹಿಂಬಾಲಕ ಆ ಸ್ಥಾನದಲ್ಲಿ ಸ್ಥಾಪಿತವಾಗಬಹುದು.

೫. ಕಥೆ ಎಲ್ಲಿಂದಲೋ ಆರಂಭವಾಗಿ ಸಂಬಂಧಪಟ್ಟ ಪುಣ್ಯಕ್ಷೇತ್ರದಲ್ಲಿ ಐಕ್ಯಗೊಳ್ಳಬಹುದು. ಇಲ್ಲವೇ ಅಲ್ಲಿಂದಲೇ ಆರಂಭವಾಗಿ ಹತ್ತು ದಿಕ್ಕಿನಲ್ಲಿ, ಹತ್ತು ಪ್ರದೇಶಗಳಲ್ಲಿ ನಡೆದಾಡಬಹುದು.

೬. ಒಕ್ಕಲು ಮಾಡಿಕೊಳ್ಳುವ ಭಕ್ತರನ್ನು, ಶಿಷ್ಯರನ್ನು ಪಡೆಯುವ ಉದ್ದೇಶದಲ್ಲಿ ಕಥಾನಾಯಕ ತಮ್ಮ ಮಹಿಮೆಗಳನ್ನು ಮೆರೆಯಬಹುದು. ಇಲ್ಲವೇ ದುಷ್ಟ ಶಿಕ್ಷಣ, ಶಿಷ್ಟ ರಕ್ಷಣೆಯ ಉದ್ದೇಶವನ್ನು ಹೊಂದಿರಬಹುದು.

೭. ಶುದ್ಧ ಪದ್ಯರೂಪದಲ್ಲಿ ಇಲ್ಲವೇ ಗದ್ಯ ಪದ್ಯ ಮಿಶ್ರಿತ ರೀತಿಯಲ್ಲಿ ಕಾವ್ಯ ಇರಬಹುದು. ಬರಿಯ ಗದ್ಯದಲ್ಲೇ ಇರುವ ಕಥೆ ಈ ವ್ಯಾಪ್ತಿಗೆ ಬರಲಾರದು. ವಾದ್ಯವನ್ನು ಹಿಡಿದುಕೊಂಡು ಹಾಡಬೇಕಾದುದರಿಂದ ಅನಿವಾರ್ಯವಾಗಿ 'ಹಿಮ್ಮೇಳ-ಮುಮ್ಮೇಳ'ಗಳು ಇದ್ದೇ ಇರುತ್ತವೆ.

೮. ಯಾವ ದೈವದ ಕಥೆಯನ್ನು ಹಾಡುತ್ತಾರೋ ಅಂಥವರಿಗೆ ಆ ದೈವದ ಹೆಸರಿನಲ್ಲಿ ದೀಕ್ಷೆ ಆಗಿರಬೇಕು. ದೀಕ್ಷೆಯನ್ನು ನೀಡುವವನು ಹಿರಿಯ ಗುಡ್ಡನಾಗಿರಬಹುದು. ಇಲ್ಲವೇ ಕ್ಷೇತ್ರಕ್ಕೆ ಸಂಬಂಧಿಸಿದ ಶ್ರೀಮಠವೊಂದರಲ್ಲಿನ ಗುರುವೊಬ್ಬನಿಂದ ದೀಕ್ಷೆ ಪಡೆಯಬಹುದು.

೯. ಕಥಾನಾಯಕ ದೈವದ ವ್ಯಾಪ್ತಿಗೆ ಏರಿದ ಒಬ್ಬ ಮಹಾಪುರುಷನಾಗಿರಬಹುದು, ಅನಿರೀಕ್ಷಿತವಾಗಿ ಉದ್ಭವವಾದ ಶಕ್ತಿ ವಿಶೇಷವಾಗಿರಬಹುದು.

೧೦. ಕಥೆಗೆ ಸಂಬಂಧಿಸಿದ, ನಾಯಕನಿಗೆ ಸಂಬಂಧಿಸಿದ ಅವಶೇಷಗಳು ಅವುಗಳ ಐತಿಹ್ಯಗಳೂ ನಿರ್ದಿಷ್ಟ ಸ್ಥಳಗಳಲ್ಲಿ ದೊರೆಯಬೇಕು.

೧೧.ಹಿಂದೊಮ್ಮೆ ನಿಜವಾಗಿ ನಡೆದ ಕಥೆಯೇ ಎಂಬಂತೆ ಅದು ನಿರೂಪಿತವಾಗಿರಬೇಕು. (೧೯೭೯:೨೫೧-೨೫೨)

ಜೀಶಂಪ ಅವರು ವ್ಯಾಪಕವಾದ ಅಧ್ಯಯನದಿಂದ ಜನಪದ ಧಾರ್ಮಿಕ ಮಹಾಕಾವ್ಯ ಪರಂಪರೆಯ ಲಕ್ಷಣ ಹಾಗೂ ಸ್ವರೂಪವನ್ನು ಸಮರ್ಪಕವಾಗಿ ಗುರುತಿಸಿದ್ದಾರೆ. ಅವರ ಪ್ರಕಾರ ಮಲೆ ಮಾದೇಶ್ವರ ಕಾವ್ಯ ಮಹಾಕಾವ್ಯವಾಗುತ್ತದೆ; ಮಂಟೆಸ್ವಾಮಿ, ಜುಂಜಪ್ಪ ಮೊದಲಾದವು ಖಂಡಕಾವ್ಯಗಳಾಗುತ್ತವೆ. ಆದರೆ ಈಚೆಗೆ ಮಂಟೇಸ್ವಾಮಿ ಮತ್ತು ಜುಂಜಪ್ಪ ಕಾವ್ಯಗಳ ದೀರ್ಘ ಪಠ್ಯಗಳು ಲಭ್ಯವಾಗಿದ್ದು ಇವುಗಳನ್ನು ಮಹಾಕಾವ್ಯಗಳೆಂದೇ ಪರಿಗಣಿಸಬೇಕಾಗುತ್ತದೆ. ಧಾರ್ಮಿಕ ವೃತ್ತಿಗಾಯಕ ಪರಂಪರೆಗಳಲ್ಲಿ ಮಾತ್ರವಲ್ಲದೆ ಲೌಕಿಕ ವೃತ್ತಿಗಾಯಕ ಪರಂಪರೆಗಳಲ್ಲಿಯೂ ಜನಪದ ಮಹಾಕಾವ್ಯಗಳು ಲಭ್ಯವಾಗುವುದೆಂದು ಜೀಶಂಪ ಹೇಳಿದ್ದಾರೆ: "ಸಮಗ್ರ ಕರ್ನಾಟಕದಲ್ಲಿ ಕುಮಾರರಾಮನ ಕಥೆಯ ಶೋಧ ನಡೆದು ಚದುರಿ ಹೋಗಿರುವ ಬೇರೆಬೇರೆಯ ಭಾಗಗಳನ್ನು ಫಿನ್‌ಲೆಂಡ್‌ನ ಕಲೆವಾಲ ಜನಪದ ಮಹಾಕಾವ್ಯದ ಮಾದರಿಯಲ್ಲಿ ಕೂಡಿಸಲು ಮೂಲಕಥೆಯನ್ನು ಪುನಾರಚಿಸಲು ಇನ್ನೂ ಸಾಧ್ಯತೆಯಿದೆ"(೧೯೭೯:೩೦೯). ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಈಚೆಗೆ ಹೆಚ್ಚಿನ ಅಧ್ಯಯನ ನಡೆಯುತ್ತಿದೆ.

ಬಿ.ಎ.ವಿವೇಕ ರೈ ಅವರು ತುಳುವಿನಲ್ಲಿ ಜನಪದ ಮಹಾಕಾವ್ಯಗಳಿರುವುದನ್ನು ಗುರುತಿಸಿದ್ದಾರೆ. "ಭೂತಗಳಿಗೆ ಸಂಬಂಧಿಸಿದ ಪಾಡ್ದನಗಳನ್ನು ಜನಪದ ಮಹಾಕಾವ್ಯ (Folk epic) ಎಂದು ಕರೆಯುವಲ್ಲಿ ಲಾವಣಿ ಚಕ್ರವನ್ನು (Ballad cycle) ಜನಪದ ಮಹಾಕಾವ್ಯ ಎಂದು ಪರಿಗಣಿಸುವ ಇತ್ತೀಚಿನ ಜಾನಪದ ವಿದ್ವಾಂಸರ ಪ್ರವೃತ್ತಿಯನ್ನು ನಾನು ಗಮನಿಸಿದ್ದೇನೆ." (೧೯೮೫ : ೩೨) ಎಂದು ಹೇಳಿ ದೀರ್ಘತೆಯ ದೃಷ್ಟಿಯಿಂದ ಸ್ವತಂತ್ರವಾದ ಕೋಟಿ-ಚೆನ್ನಯ ಮತ್ತು *ಸಿರಿ ಪಾಡ್ದನ*ಗಳನ್ನು ತುಳುನಾಡಿನ ಅವಳಿ ಜನಪದ ಮಹಾಕಾವ್ಯಗಳು ಎಂದು ಗುರುತಿಸಿದ್ದಾರೆ. ತುಳುವಿನಲ್ಲಿಯೂ ಈಚೆಗೆ ಹೆಚ್ಚಿನ ಅಧ್ಯಯನ ನಡೆಯುತ್ತಿವೆ.

೧.೪ ಜನಪದ ಮಹಾಕಾವ್ಯಗಳ ಅಧ್ಯಯನದ ಇತಿಹಾಸ

೧.೪.೧ ಜಗತ್ತಿನ ಜನಪದ ಮಹಾಕಾವ್ಯಗಳ ಅಧ್ಯಯನ

ಜನಪದ ಮಹಾಕಾವ್ಯಗಳ ಬಗ್ಗೆ ಹತ್ತೊಂಬತ್ತನೆಯ ಶತಮಾನದ ಪೂರ್ವಾರ್ಧದಿಂದಲೇ ಯುರೋಪಿನ ದೇಶಗಳಲ್ಲಿ ಆಸಕ್ತಿ ಮೂಡಿ ತಮ್ಮ ತಮ್ಮ ದೇಶದ ಜನಪದ ಮಹಾಕಾವ್ಯಗಳ ಸಂಗ್ರಹ ಹಾಗೂ ಸಂಪಾದನ ಕಾರ್ಯದಲ್ಲಿ ವಿದ್ವಾಂಸರು ತೊಡಗಿದರು. ಹೀಗೆ ಮೊದಲ ಬಾರಿಗೆ ತಮ್ಮ ದೇಶದ ಸಂಸ್ಕೃತಿಯಲ್ಲಿ ಜನಪದ ಮಹಾಕಾವ್ಯ ಒಂದನ್ನು ಕಂಡುಕೊಳ್ಳಲು ಸಾಧ್ಯ ಎಂಬ ವಿಚಾರ ಬಂದುದು ಫಿನ್‌ಲೆಂಡ್‌ನಲ್ಲಿ. ಫಿನ್‌ಲೆಂಡ್‌ನ ಎಲಿಯಾಸ್ ಲೆನ್ರೂಟ್ ವೃತ್ತಿಯಿಂದ ವೈದ್ಯರು;

ಪ್ರವೃತ್ತಿಯಿಂದ ಜಾನಪದ ವಿದ್ವಾಂಸರು. ಇವರು ಫಿನ್‌ಲೆಂಡ್‌ನಲ್ಲಿ ಕೆಲವು ಕಥನಗೀತೆಗಳ ಸಂಗ್ರಹ ಕಾರ್ಯದಲ್ಲಿ ತೊಡಗಿದರು. ಸಂಗ್ರಹ ಮಾಡುತ್ತಾ ಹೋದಂತೆ ಇವರಿಗೆ ಕಲೇವಾ, ವೆನ್ನಾಮೊಯನಿನ್, ಇಲ್‌ಮೇರಿನನ್ ಎಂಬ ಮೂವರು ಸಾಂಸ್ಕೃತಿಕ ವೀರರು ಹಾಗೂ ಲೌಹಿ ಎಂಬ ಸ್ತ್ರೀ ಪಾತ್ರಕ್ಕೆ ಸಂಬಂಧಿಸಿದ ಕಥನಗೀತೆಗಳು ಲಭ್ಯವಾದವು. ಈ ವೀರರ ಕಥನಗೀತೆಗಳ ಚಕ್ರವನ್ನು ಅಭ್ಯಾಸ ಮಾಡಿದಾಗ ಇವುಗಳು ಒಬ್ಬೊಬ್ಬರ ಬಗ್ಗೆ ಪ್ರತ್ಯೇಕವಾದ ಕಥನಗೀತೆಗಳು ಎಂದು ಮೇಲುನೋಟಕ್ಕೆ ಅನ್ನಿಸಿದರೂ ಆ ನಾಲ್ವರನ್ನು ಕುರಿತ ಕಥನಗೀತೆಗಳಲ್ಲಿ ಒಂದು ಏಕಸೂತ್ರತೆ ಇದೆ ಎಂಬ ಅಂಶ ಅವರ ಗಮನಕ್ಕೆ ಬಂದಿತು. ಈ ಕಥನಗೀತೆಗಳನ್ನು ತಮಗೆ ಸರಿ ಎನಿಸಿದಂತೆ ವ್ಯವಸ್ಥಿತ ರೂಪದಲ್ಲಿ ಜೋಡಿಸಿಕೊಂಡು ಒಂದಕ್ಕೊಂದಕ್ಕೆ ಸಂಬಂಧ ಕಲ್ಪಿಸಿದಾಗ ಇದು ಮಹಾಕಾವ್ಯದ ಸ್ವರೂಪವನ್ನು ಹೊಂದಿದೆ ಎಂಬ ಅಂಶ ಅವರಿಗೆ ಮನವರಿಕೆಯಾಯಿತು. ಹೀಗಾಗಿ ಅವರು ಇದನ್ನು ಕಲೆವಲ ಎಂಬ ಹೆಸರಿನಿಂದ ಸಂಪಾದಿಸಿ ೧೮೩೫ರಲ್ಲಿ ಪ್ರಕಟಿಸಿದರು. ಫಿನ್‌ಲೆಂಡ್‌ನ ಜಾನಪದ ಅಧ್ಯಯನದ ಇತಿಹಾಸದಲ್ಲಿ ಇದು ಮೊದಲನೆಯ ಮಹತ್ವಪೂರ್ಣ ಘಟನೆ ಎನಿಸಿತು. ಫಿನ್‌ಲೆಂಡ್‌ನ ಜಾನಪದ ವಿದ್ವಾಂಸರಿಗೆ ಮಾತ್ರವಲ್ಲದೆ ಫಿನ್‌ಲೆಂಡ್‌ನ ಜನತೆಗೂ ಕೂಡ ಇದು ತುಂಬಾ ಮಹತ್ವಪೂರ್ಣ ಎನ್ನಿಸಿತು. ಇದಕ್ಕೆ ಕಾರಣಗಳನ್ನು ಈ ರೀತಿ ವಿವರಿಸಬಹುದು: ಫಿನ್‌ಲೆಂಡ್ ಸುಮಾರು ೬೦೦ ವರ್ಷಗಳ ಕಾಲ ಸ್ವೀಡನ್ನ ಆಳ್ವಿಕೆಯಲ್ಲಿಯೂ, ಒಂದು ನೂರು ವರ್ಷಗಳ ಕಾಲ ರಷ್ಯಾದ ಆಳ್ವಿಕೆಯಲ್ಲಿಯೂ ಇದ್ದುದರಿಂದ ಏಳು ಶತಮಾನಗಳ ಕಾಲ ಪರಕೀಯ ಆಳ್ವಿಕೆಯಲ್ಲಿದ್ದ ಜನ ಆತ್ಮವಿಶ್ವಾಸವನ್ನು ಕಳೆದುಕೊಂಡಿದ್ದರು. ತಾವು ಒಂದು ಸ್ವತಂತ್ರ ದೇಶದ ಪ್ರಜೆಗಳು, ತಮ್ಮ ಭಾಷೆಗೆ, ಸಂಸ್ಕೃತಿಗೆ ಒಂದು ಪ್ರತ್ಯೇಕವಾದ ಮಹತ್ವವಿದೆ, ತಮಗೂ ಒಂದು ಸಾಂಸ್ಕೃತಿಕ ಇತಿಹಾಸವಿದೆ ಎಂಬ ಪ್ರಜ್ಞೆಯೇ ಜನಗಳಲ್ಲಿರಲಿಲ್ಲ. ವಸಾಹತುಶಾಹಿಯ ದಬ್ಬಾಳಿಕೆಯಿಂದಾಗಿ ಕೀಳರಿಮೆ (Inferiority complex) ಅವರಲ್ಲಿ ಉಂಟಾಗಿತ್ತು.

ಫಿನ್‌ಲೆಂಡ್‌ನಲ್ಲಿ ಬರವಣಿಗೆಯ ರೂಪದ ಪ್ರಬಲವಾದ ಶಿಷ್ಟ ಸಾಹಿತ್ಯದ ಪರಂಪರೆ ಇರಲಿಲ್ಲ. ಅವರಿಗೆ ಇದ್ದ ಏಕೈಕ ಸಾಂಸ್ಕೃತಿಕ ಆಸ್ತಿ ಎಂದರೆ ಜಾನಪದ ಎಂದೇ ಹೇಳಬೇಕು. ಅಂತಹ ಸಂದರ್ಭದಲ್ಲಿ ಎಲಿಯಾಸ್ ಲೆನ್ರೂಟ್ ಸಂಪಾದಿಸಿ ಪ್ರಕಟಿಸಿದ ಕಲೆವಲ ಎಂಬ ಜನಪದ ಮಹಾಕಾವ್ಯ ಸ್ವಾತಂತ್ರ್ಯಕ್ಕಾಗಿ ಹೋರಾಟ ನಡೆಸುತ್ತಿದ್ದ ಫಿನ್‌ಲೆಂಡ್‌ನ ಜನರಲ್ಲಿ ರಾಷ್ಟ್ರಾಭಿಮಾನವನ್ನು ಮೂಡಿಸಲು ಕಾರಣವಾಯಿತು. ಅವರು ಕೀಳರಿಮೆಯನ್ನು ಕೊಡವಿಕೊಂಡು ಮೇಲೇಳಲು ಇದರಿಂದ ಸಾಧ್ಯವಾಯಿತು. ಜನರಲ್ಲಿ ಹೆಚ್ಚಿನ ಆತ್ಮಾಭಿಮಾನ ಹಾಗೂ ಆತ್ಮವಿಶ್ವಾಸವನ್ನು ಮೂಡಿಸಿತು. ಇದರ ಪ್ರೇರಣೆಯಿಂದ ಆರಂಭವಾದ ರಾಷ್ಟ್ರೀಯ ಚಳುವಳಿ ರಷ್ಯಾದ ಹಿಡಿತದಿಂದ ಫಿನ್‌ಲೆಂಡ್‌ನ್ನು ಬೇರ್ಪಡಿಸಿ ಸ್ವಾತಂತ್ರ್ಯಗಳಿಸಿಕೊಳ್ಳಲು ನೆರವಾಯಿತು. ಈ ಕಾರಣಕ್ಕಾಗಿ ಫಿನ್‌ಲೆಂಡ್‌ನ ಜನರಿಗೆ ಕಲೆವಲ ಇಂದಿಗೂ ಒಂದು ಮಹತ್ವದ ಮಹಾಕಾವ್ಯವಾಗಿದೆ. ಭಾರತೀಯರಿಗೆ ರಾಮಾಯಣ ಮಹಾಭಾರತಗಳು ಹೇಗೋ ಫಿನ್‌ಲೆಂಡ್‌ನ ಜನರಿಗೆ ಕಲೆವಲ ಮಹಾಕಾವ್ಯ ಹಾಗೆ ಎಂದು ಹೇಳಬಹುದು. ಫಿನ್‌ಲೆಂಡ್‌ನ ಪ್ರಮುಖ ಜಾನಪದ ವಿದ್ವಾಂಸರೆಲ್ಲಾ

ಅಂದಿನಿಂದ ಇಂದಿನವರೆಗೂ ಒಂದಲ್ಲ ಒಂದು ಪ್ರಮಾಣದಲ್ಲಿ ಕಲೆವಾಲವನ್ನು ಕುರಿತು ಸಂಶೋಧನೆ ನಡೆಸಿದ್ದಾರೆ. ಫಿನ್‌ಲೆಂಡ್‌ನ ಸಾಹಿತಿಗಳು ಕಲೆವಲ ಮಹಾಕಾವ್ಯವನ್ನು ಹಾಡುವ ಸಂದರ್ಭದಲ್ಲಿ ಬಳಸುತ್ತಿದ್ದ ಕಂತಲೆ ಎಂಬ ವಾದ್ಯ, ಆ ಸಂಬಂಧವಾದ ಸಂಗೀತ, ಕಲೆವಲದ ಛಂದಸ್ಸು ಇವೆಲ್ಲಾ ಫಿನ್‌ಲೆಂಡ್‌ನ ಸಾಹಿತ್ಯ, ಸಂಗೀತ, ಕಲೆ ಮೊದಲಾದ ಹಲವಾರು ಕ್ಷೇತ್ರಗಳ ಮೇಲೆ ದಟ್ಟವಾದ ಪ್ರಭಾವವನ್ನು ಬೀರಿವೆ. ಫಿನ್‌ಲೆಂಡ್‌ನ ಜಾನಪದ ವಿದ್ವಾಂಸರು ರೂಪಿಸಿದ ಐತಿಹಾಸಿಕ–ಭೌಗೋಳಿಕ ಕ್ರಮ (Historic-Geographic Method) ಜಾನಪದ ಅಧ್ಯಯನದ ಕ್ಷೇತ್ರದಲ್ಲಿ ಫಿನ್‌ಲೆಂಡ್‌ನ ಕೊಡುಗೆ ಎಂದು ಪ್ರಖ್ಯಾತವಾಗಿದೆ. ಜನಪದ ಸಾಹಿತ್ಯ ಪಠ್ಯದ ಮೂಲ ಮತ್ತು ಪ್ರಸರಣವನ್ನು ಕುರಿತ ಈ ಸಿದ್ಧಾಂತದ ಮೂಲ ರೂಪರೇಷೆಗಳನ್ನು ಫಿನ್‌ಲೆಂಡ್‌ನ ಜಾನಪದ ವಿದ್ವಾಂಸರಾದ ಎಲಿಯಾಸ್ ಲೆನ್ರೂಟ್, ಕಾರ್ಲೆಕ್ರಾನ್ ಮೊದಲಾದವರು ರೂಪಿಸಲು ಮೂಲ ಆಕರವೆಂದರೆ ಕಲೆವಲ ಎಂದೇ ಹೇಳಬೇಕು. ಆನಂತರ ಜನಪದ ಕಥೆಗಳ ಅಧ್ಯಯನದಿಂದ ಐತಿಹಾಸಿಕ ಭೌಗೋಳಿಕ ಕ್ರಮ ಖಚಿತ ರೂಪವನ್ನು ಪಡೆಯಿತು.

ಫಿನ್‌ಲೆಂಡ್‌ನ ಈ ಪ್ರಯೋಗದಿಂದ ಪ್ರಭಾವಕ್ಕೆ ಒಳಗಾದ ಯೂರೋಪಿನ ಮತ್ತು ಜಗತ್ತಿನ ಇತರ ದೇಶಗಳ ಜಾನಪದ ವಿದ್ವಾಂಸರು ತಮ್ಮತಮ್ಮ ಜಾನಪದ ಕ್ಷೇತ್ರದಲ್ಲಿ ಇಂತಹ ಮಹಾಕಾವ್ಯಗಳು ಇವೆಯೇ ಎಂಬುದನ್ನು ಕಂಡುಕೊಳ್ಳಲು ತೊಡಗಿದರು. ಇದರಿಂದಾಗಿ ಯೂರೋಪಿನ ಲಿದುವೇನಿಯ, ಲ್ಯಾಟ್‌ವಿಯ, ಎಸ್ಟೋನಿಯ ಮೊದಲಾದ ದೇಶಗಳಲ್ಲಿ ಜನಪದ ಮಹಾಕಾವ್ಯಗಳ ಸಂಗ್ರಹ ಮತ್ತು ಸಂಪಾದನಾ ಕ್ರಿಯೆಗಳು ನಡೆದು ಕೆಲವು ಮಹಾಕಾವ್ಯಗಳು ಪ್ರಕಟವಾದವು. ಕೈಗಾರಿಕೀಕರಣದ ಕಾರಣದಿಂದ ನಾಶವಾಗುತ್ತಿದ್ದ ಗ್ರಾಮೀಣ ಜಾನಪದವನ್ನು ಸಂಗ್ರಹಿಸಿ ಉಳಿಸಿಕೊಳ್ಳುವ ಉದ್ದೇಶದಿಂದ ಈ ಬಗೆಯ ಕಾರ್ಯ ಚಟುವಟಿಕೆಗಳು ನಡೆದವು. ಹಾಗೆಯೇ ಇಂದು ಸ್ವಾತಂತ್ರ್ಯ ಪಡೆಯಲು ಪ್ರಯತ್ನಿಸುತ್ತಿರುವ, ಜಾನಪದ ಪರಂಪರೆಯೇ ಏಕೈಕ ಸಾಂಸ್ಕೃತಿಕ ಆಸ್ತಿಯಾಗಿರುವ, ತೃತೀಯ ಜಗತ್ತಿನ ಆಫ್ರಿಕಾ, ಲ್ಯಾಟಿನ್ ಅಮೆರಿಕಾ, ಏಷ್ಯಾದ ದೇಶಗಳ ಜಾನಪದ ವಿದ್ವಾಂಸರಿಗೂ ಜನಪದ ಮಹಾಕಾವ್ಯಗಳ ಅಧ್ಯಯನ ತುಂಬಾ ಮಹತ್ವಪೂರ್ಣ ಎನಿಸಿದೆ. ಈ ಕ್ಷೇತ್ರದಲ್ಲಿ ೧೯ನೆಯ ಶತಮಾನದಲ್ಲಿ ಎಲಿಯಾಸ್ ಲೆನ್ರೂಟ್, ಜೂಲಿಯಸ್ ಕ್ರಾನ್, ಕಾರ್ಲೆಕ್ರಾನ್ ಮೊದಲಾದ ವಿದ್ವಾಂಸರು ಈ ಬಗ್ಗೆ ವಿಶೇಷ ಆಸಕ್ತಿವಹಿಸಿದಂತೆ ಈ ಶತಮಾನದ ಕೊನೆಯ ದಶಕಗಳಲ್ಲಿ ಫಿನ್‌ಲೆಂಡ್‌ನ ಪ್ರಖ್ಯಾತ ಜಾನಪದ ವಿದ್ವಾಂಸರಾದ ಲೌರಿ ಹಾಂಕೊ ಅವರು ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಅಂತರರಾಷ್ಟ್ರೀಯ ಮಟ್ಟದಲ್ಲಿ ಹೆಚ್ಚಿನ ಮಹತ್ವವನ್ನು ನೀಡಿದ್ದಾರೆ ಹಾಗೂ ಆ ಸಂಬಂಧವಾದ ಅಧ್ಯಯನಗಳನ್ನು ನಡೆಸಿದ್ದಾರೆ. ಜಗತ್ತಿನಲ್ಲಿ ಸಂಗ್ರಹವಾಗಿ ಪ್ರಕಟಗೊಂಡ ಜನಪದ ಮಹಾಕಾವ್ಯಗಳಲ್ಲಿ ಕಲೆವಲ ಮೊದಲನೆಯದು ಎಂಬ ಅಭಿಮಾನ ಅವರಿಗಿರುವುದರಿಂದ ಅವರು ಜಗತ್ತಿನ ಅನೇಕ ದೇಶಗಳಲ್ಲಿ ಕಲೆವಾಲದ ಮಹತ್ವವನ್ನು ತಿಳಿಸಲು ಎಲ್ಲಾ ಪ್ರಯತ್ನಗಳನ್ನೂ ಮಾಡಿದ್ದಾರೆ. ಕಲೆವಲ ಮಹಾಕಾವ್ಯಕ್ಕೆ ಮತ್ತು ಜಗತ್ತಿನ ಇತರ ದೇಶಗಳ ಮಹಾಕಾವ್ಯಗಳಿಗೆ ಇರುವ ಸಾಮ್ಯ, ವ್ಯತ್ಯಾಸ ಮೊದಲಾದವುಗಳ

ಬಗ್ಗೆ ಮತ್ತು ಅಧ್ಯಯನದ ಮೂಲಕ ಕಲೆವಾಲದ ಐತಿಹಾಸಿಕ ಹಾಗೂ ಸಮಕಾಲೀನ ಮಹತ್ವ ಮತ್ತು ಅದರ ವೈಶಿಷ್ಟ್ಯವೇನು ಎಂಬುದನ್ನು ಕಂಡುಕೊಳ್ಳಲು ವಿಶೇಷವಾಗಿ ಶ್ರಮಿಸಿದ್ದಾರೆ. ತಾರಿ ಹಾಂಕೊ ನಿಧನರಾದದ್ದು ಜಗತ್ತಿನ ಜಾನಪದ ಅಧ್ಯಯನದ ಕ್ಷೇತ್ರಕ್ಕೆ ಬಹು ದೊಡ್ಡ ನಷ್ಟವಾಗಿದೆ.

ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಕಳೆದ ಎರಡು ದಶಕಗಳಿಂದ ಇನ್ನೂ ಹೆಚ್ಚಿನ ಪ್ರೇರಣೆ ಬರಲು ಯುನೆಸ್ಕೋ ಜಾನಪದ ಸಂಬಂಧವಾಗಿ ಮಾಡಿರುವ UNESCO Recommendations for Safeguarding of Folklore and Traditional Culture ಎಂಬ ನಿಯಮಾವಳಿಗಳು ಮಹತ್ವಪೂರ್ಣ ಎನಿಸಿವೆ. ಈ ಶಿಫಾರಸುಗಳ ಪ್ರಕಾರ ಯುನೆಸ್ಕೊ ಶಿಷ್ಟ ಸಂಸ್ಕೃತಿಗೆ ತನ್ನ ವ್ಯವಸ್ಥೆಯಲ್ಲಿ ನೀಡುತ್ತಿದ್ದಷ್ಟೇ ಮಹತ್ವವನ್ನು ಜಾನಪದಕ್ಕೂ ನೀಡಲು ಒಪ್ಪಿಕೊಂಡಿದೆ. ಜಗತ್ತಿನ ಸಂಸ್ಕೃತಿಯನ್ನು ರೂಪಿಸಿರುವುದು ಕೇವಲ ಶಿಷ್ಟ ಸಂಸ್ಕೃತಿ ಮಾತ್ರವಲ್ಲ, ಅಷ್ಟೇ ಮುಖ್ಯವಾಗಿ ಜನಪದ ಸಂಸ್ಕೃತಿಯೂ ಕೂಡ. ಆದ್ದರಿಂದ ಶಿಷ್ಟ ಸಂಸ್ಕೃತಿಯ ರಕ್ಷಣೆಗೆ ಮತ್ತು ಪ್ರವರ್ಧನೆಗೆ ನೀಡುವಷ್ಟೇ ಸಮಾನವಾದ ಮಹತ್ವವನ್ನು ಮತ್ತು ಆರ್ಥಿಕ ನೆರವನ್ನು ಜನಪದ ಸಂಸ್ಕೃತಿಗೂ ಅದರ ಉತ್ಪನ್ನವಾದ ಜಾನಪದಕ್ಕೂ ನೀಡುತ್ತಿದೆ. ಇದರಿಂದಾಗಿ ಜಗತ್ತಿನ ಸಾಂಸ್ಕೃತಿಕ ವಲಯದಲ್ಲಿ ಜಾನಪದದ ಮಹತ್ವ ಎಂದಿಗಿಂತಲೂ ಹೆಚ್ಚಾಗಿದೆ. ಯುನೆಸ್ಕೊ ನೆರವಿನಿಂದ ಪ್ಯಾರಿಸ್‌ನಲ್ಲಿ ಜಗತ್ತಿನ ಎಲ್ಲಾ ಜನಪದ ಮಹಾಕಾವ್ಯಗಳನ್ನು ದಾಖಲಾತಿ ಸಂಗ್ರಹಾಲಯದಲ್ಲಿ ವ್ಯವಸ್ಥಿತವಾಗಿ ದಾಖಲು ಮಾಡುವ ಪ್ರಯತ್ನ ನಡೆಯುತ್ತಿದೆ. ಈ ಯೋಜನೆ ಕಾರ್ಯರೂಪಕ್ಕೆ ಬಂದರೆ ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಒಂದು ಉನ್ನತ ಸ್ಥಾನ ಮತ್ತು ಹೊಸ ಆಯಾಮ ಲಭ್ಯವಾಗುತ್ತದೆ.

Folklore Fellows ಎನ್ನುವುದು ಒಂದು ಶತಮಾನದಷ್ಟು ದೀರ್ಘವಾದ ಇತಿಹಾಸವುಳ್ಳ ಫಿನ್‌ಲೆಂಡ್‌ನ ಒಂದು ಪ್ರಮುಖ ಸಂಸ್ಥೆ. ಜಾನಪದ ಕ್ಷೇತ್ರದಲ್ಲಿ ಅಂತರರಾಷ್ಟ್ರೀಯ ಅಧ್ಯಯನವನ್ನು ಪ್ರೋತ್ಸಾಹಿಸುವ, ಆ ಮೂಲಕ ಜಗತ್ತಿನ ಜಾನಪದ ವಿದ್ವಾಂಸರು ಒಂದು ಕಡೆ ಸೇರಿ ವಿಚಾರ ವಿನಿಮಯ ಮಾಡಿಕೊಳ್ಳುವ ಒಂದು ವೇದಿಕೆಯಾಗಿ ಕಳೆದ ಶತಮಾನದ ಕೊನೆಯ ಭಾಗದಲ್ಲಿ ಕಾರ್ಲೆಕ್ರಾನ್ ಎಂಬ ವಿದ್ವಾಂಸರು ಈ ಸಂಸ್ಥೆಯನ್ನು ರೂಪಿಸಿದರು. ಈ ಸಂಸ್ಥೆ ಕೆಲವು ವರ್ಷಗಳ ಕಾಲ ಯಶಸ್ವಿಯಾಗಿ ಕಾರ್ಯ ನಿರ್ವಹಿಸಿದರೂ ಕಾಲಕ್ರಮೇಣ ಕಾರಣಾಂತರಗಳಿಂದ ನಿಂತುಹೋಯಿತು. ೧೯೯೦ರಲ್ಲಿ ಫಿನ್‌ಲೆಂಡ್‌ನ ಜಾನಪದ ವಿದ್ವಾಂಸರಾದ ಪ್ರೊ. ಲೌರಿ ಹಾಂಕೊ ಈ ಸಂಸ್ಥೆಯನ್ನು ಪುನರುಜ್ಜೀವನಗೊಳಿಸಿ ಇದಕ್ಕೆ ಒಂದು ಹೊಸ ಆಕೃತಿಯನ್ನೂ, ಉದ್ದೇಶವನ್ನೂ ನೀಡಿದರು. ಅಂತಾರಾಷ್ಟ್ರೀಯ ಜಾನಪದ ವಿದ್ವತ್ತಿನ ಕ್ಷೇತ್ರದಲ್ಲಿ ವಿಶೇಷ ಮಹತ್ವ ಗಳಿಸಿರುವ ಇವರು ಈ ಸಂಸ್ಥೆಯ ಮೂಲಕ ೧೯೯೧, ೧೯೯೩, ೧೯೯೫ರಲ್ಲಿ ಅಂತರರಾಷ್ಟ್ರೀಯ ಜಾನಪದ ಕಮ್ಮಟಗಳನ್ನು ನಡೆಸಿದರು. ಇದರಿಂದಾಗಿ ಭಾರತವೂ ಸೇರಿದಂತೆ ಜಗತ್ತಿನ ಅನೇಕ ದೇಶಗಳ ಜಾನಪದ ವಿದ್ವಾಂಸರು ಜಾನಪದ ಅಧ್ಯಯನ ಕ್ಷೇತ್ರದಲ್ಲಿ ಹೆಚ್ಚಿನ ತರಬೇತಿಯನ್ನು ಪಡೆಯಲು ಸಾಧ್ಯವಾಯಿತು. Folklore Fellows

ಎಂಬ ಬಳಗ ಇದರಿಂದ ರೂಪುಗೊಳ್ಳಲು ಸಾಧ್ಯವಾಗಿದೆ. ಈ ಸಂಸ್ಥೆಯ ಮೂಲಕ ಜನಪದ ಮಹಾಕಾವ್ಯಗಳ ಅಧ್ಯಯನ ನಡೆಸುವ Folklore Fellows Group of Folk Epics ಎಂಬ ಒಂದು ಒಳಗುಂಪು ರೂಪುಗೊಂಡಿದೆ. ಜಗತ್ತಿನ ವಿವಿಧ ದೇಶಗಳಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಕೆಲಸ ಮಾಡುತ್ತಿರುವ ವಿದ್ವಾಂಸರು ಒಂದೆಡೆ ಸೇರಿ ವಿಚಾರವಿನಿಮಯ ಮಾಡಿಕೊಳ್ಳುವುದಕ್ಕೆ, ಅದು ಸಾಧ್ಯವಾಗದಿದ್ದಲ್ಲಿ ಮಾಹಿತಿಯನ್ನು ಹಂಚಿಕೊಳ್ಳುವುದಕ್ಕೆ ಇದೊಂದು ಸೂಕ್ತವಾದ ವೇದಿಕೆಯಾಗಿದೆ. ಇದರಿಂದಾಗಿ ಜನಪದ ಮಹಾಕಾವ್ಯಗಳ ಅಧ್ಯಯನ ಸಂಗ್ರಹ ಮತ್ತು ಸಂಪಾದನೆಯ ಹಂತವನ್ನು ಮೀರಿ ಹೊಸ ಹೊಸ ಆಯಾಮಗಳನ್ನು ಪಡೆದುಕೊಳ್ಳಲು ಸಾಧ್ಯವಾಗಿದೆ.

೧೯೯೬ ರಲ್ಲಿ ಲೌರಿ ಹಾಂಕೊ ಅವರು 'Textualisation of Oral Epics' ಎಂಬ ವಿಷಯವಾಗಿ ಒಂದು ವಿಚಾರ ಸಂಕಿರಣವನ್ನು ಫಿನ್ಲೆಂಡಿನ ತುರ್ಕು ನಗರದಲ್ಲಿ ಏರ್ಪಡಿಸಿದ್ದರು. ಈ ಸಮ್ಮೇಳನದಲ್ಲಿ ಕರ್ನಾಟಕದ ಬಿ. ಎ. ವಿವೇಕರೈ ಮತ್ತು ಕೆ. ಚಿನ್ನಪ್ಪಗೌಡ ಅವರು ಪ್ರಬಂಧಗಳನ್ನು ಮಂಡಿಸಿದರು. ಜನಪದ ಮಹಾಕಾವ್ಯಗಳನ್ನು ಹಾಡುವ ಹಾಡುಗಾರರು ಯಾವ ರೀತಿ ಪಠ್ಯವನ್ನು ರೂಪಿಸಿಕೊಳ್ಳುತ್ತಾರೆ, ವಿವಿಧ ಶ್ರೋತೃವರ್ಗಕ್ಕೆ, ವಿವಿಧ ಸಂದರ್ಭದಲ್ಲಿ ಹಾಡುವಾಗ ಪದ್ಯದಲ್ಲಿ ಮಾಡಿಕೊಳ್ಳುವ ಬದಲಾವಣೆಗಳೇನು ಎಂಬುದನ್ನು ಕುರಿತು ಈ ಸಮ್ಮೇಳನದಲ್ಲಿ ಚರ್ಚಿಸಲಾಯಿತು. ರಾಮಾಯಣ, ಮಹಾಭಾರತ, ಇಲಿಯಡ್, ಒಡಿಸ್ಸಿ, ಬಿಯೊಉಲ್ಫ್ ಮೊದಲಾದ ಮಹಾಕಾವ್ಯಗಳು ಮೊದಲಿಗೆ ಮೌಖಿಕ ರೂಪದಲ್ಲಿದ್ದು, ಅನಂತರ ಬರವಣಿಗೆಯ ರೂಪದಲ್ಲಿ ದಾಖಲಾದವು. ಯೂರೋಪಿನಲ್ಲಿ ಜನಪದ ಮಹಾಕಾವ್ಯಗಳನ್ನು ಹಾಡುವ ಪದ್ಧತಿಯೇ ನಿಂತುಹೋಗಿದೆ. ಭಾರತ, ಚೈನಾ, ಆಫ್ರಿಕಾ ಮೊದಲಾದ ದೇಶಗಳಲ್ಲಿ ಜನಪದ ಮಹಾಕಾವ್ಯಗಳನ್ನು ಹಾಡುವ ಪರಂಪರೆ ಇನ್ನೂ ಜೀವಂತವಾಗಿರುವುದು ಈ ಬಗೆಯ ಚರ್ಚೆಗಳಿಗೆ ಅವಕಾಶ ಮಾಡಿಕೊಟ್ಟಿತು. ಈ ವಿಚಾರ ಸಂಕಿರಣದಲ್ಲಿ ಮೂವತ್ತು ಜನ ಜನಪದ ಮಹಾಕಾವ್ಯಗಳ ಪಠ್ಯೀಕರಣದ (Textualisation) ಬಗ್ಗೆ ತಮ್ಮ ತಮ್ಮ ದೇಶದ ಜನಪದ ಮಹಾಕಾವ್ಯದ ಕ್ಷೇತ್ರಕಾರ್ಯ, ಲಿಪೀಕರಣ (Transcription) ಹಾಗೂ ಸಂಪಾದನೆ(Editing)ಯಲ್ಲಿ ಎದುರಿಸಿದ ಸಮಸ್ಯೆಗಳ ಬಗ್ಗೆ ವಿಚಾರಮಾಡಿದರು. ಲೌರಿ ಹಾಂಕೊ ಅವರ ಪ್ರಕಾರ ಹಾಡುಗಾರ ಮತ್ತು ಜಾನಪದ ವಿದ್ವಾಂಸ ಇಬ್ಬರೂ ಜನಪದ ಮಹಾಕಾವ್ಯದ ಪಠ್ಯಕ್ಕೆ ಸಂಬಂಧಿಸಿದ ಸಮಸ್ಯೆಯನ್ನು ಎದುರಿಸುತ್ತಿದ್ದಾರೆ. ಹಾಡುಗಾರ ವಿವಿಧ ಸಂದರ್ಭಗಳಲ್ಲಿ ಹಾಡುವಾಗ ಪಠ್ಯದಲ್ಲಿ ಬದಲಾವಣೆ ಮಾಡಿಕೊಳ್ಳಬೇಕಾಗುತ್ತದೆ, ವಾದ್ಯಗಳಿಗೆ ಹೊಂದಿಕೊಂಡು ಹಾಡಬೇಕಾಗುತ್ತದೆ, ಶ್ರೋತೃಗಳನ್ನು ಗಮನದಲ್ಲಿಟ್ಟುಕೊಂಡು ಹಾಡಬೇಕಾಗುತ್ತದೆ. ಮಾನಸಿಕ ಪಠ್ಯವನ್ನು (Mental Text) ರೂಪಿಸಿಕೊಂಡು, ಮರೆತದ್ದನ್ನು ನೆನಪಿಸಿಕೊಂಡು ಹಾಡಬೇಕಾಗುತ್ತದೆ, ಹಾಡಿನ ಧಾಟಿಗಳನ್ನು ಬದಲಾಯಿಸಬೇಕಾಗುತ್ತದೆ. ಹೀಗಾಗಿ ಒಂದೊಂದು ಸಲ ಹಾಡುವುದೂ ಅವನಿಗೆ ಒಂದು ಸವಾಲೇ ಆಗುತ್ತದೆ. ಜಾನಪದ ವಿದ್ವಾಂಸ ಹಾಡುಗಾರನ ಹಾಡನ್ನು ಟೇಪ್ ರೆಕಾರ್ಡ್ ಮಾಡಿಕೊಂಡು, ಲಿಪೀಕರಣ

ಮಾಡಬೇಕಾಗುತ್ತದೆ. ಆಚರಣೆಯ ಸಂದರ್ಭದಲ್ಲಿ ವಾದ್ಯಗಳ ಹಾಗೂ ಜನಗಳ ಶಬ್ದದಿಂದಾಗಿ ಹಾಡುಗಳು ಸ್ಪಷ್ಟವಾಗಿ ಕೇಳುವುದಿಲ್ಲ, ಆದ್ದರಿಂದ ಹಾಡುಗಾರನನ್ನು ಪ್ರತ್ಯೇಕವಾಗಿ ಕೂರಿಸಿಕೊಂಡು ಹಾಡಿಸಿ ದಾಖಲು ಮಾಡಬೇಕಾಗುತ್ತದೆ. ಹಾಡುಗಾರನಿಗೆ ಹಾಡಲು ಮುಕ್ತವಾದ ವಾತಾವರಣವನ್ನು ನಿರ್ಮಿಸಬೇಕಾಗುತ್ತದೆ. ಪಠ್ಯವನ್ನು ಲಿಪೀಕರಣ ಮಾಡುವುದೂ ಸಂಪಾದಿಸುವುದೂ ಕಷ್ಟದ ಕೆಲಸ. ತಾನು ಹಾಡಿದ ಮಹಾಕಾವ್ಯದ ಪ್ರಕ್ರಿಯೆಯ ಬಗ್ಗೆ ಹಾಡುಗಾರನ ಅಭಿಪ್ರಾಯವನ್ನು ಅಗತ್ಯವಾಗಿ ಪಡೆಯಬೇಕಾಗುತ್ತದೆ. ಜಾನಪದ ವಿದ್ವಾಂಸರ ಅಭಿಪ್ರಾಯದಷ್ಟೇ ಹಾಡುಗಾರನ ಅಭಿಪ್ರಾಯವೂ ಮುಖ್ಯವಾಗುತ್ತದೆ. ಈ ಎರಡು ದೃಷ್ಟಿಕೋನಗಳಿಂದ ಅಭ್ಯಾಸ ಮಾಡಿದಾಗ ಮಾತ್ರ ಮಹಾಕಾವ್ಯ ಪ್ರಕ್ರಿಯೆಯ ಬಗ್ಗೆ ಸಮಗ್ರ ತಿಳುವಳಿಕೆ ಉಂಟಾಗಲು ಸಾಧ್ಯ. ಜಾನಪದ ವಿದ್ವಾಂಸ ಹಾಡುಗಾರನಿಂದ ಹಾಡಿನ ರೂಪದಲ್ಲಿ, ಪಠನದ ರೂಪದಲ್ಲಿ, ಉಕ್ತ ಲೇಖನದ ರೂಪದಲ್ಲಿ ಸಂಗ್ರಹ ಮಾಡುವಾಗ ಪಠ್ಯ ಬದಲಾಗುತ್ತದೆ. ಸಹಜ ಸನ್ನಿವೇಶದಲ್ಲಿ, ಪ್ರೇರಿತ ಸಂದರ್ಭದಲ್ಲಿ, ಸ್ಟುಡಿಯೋದಲ್ಲಿ ಸಂಗ್ರಹಮಾಡುವಾಗಲೂ ಪಠ್ಯ ಬದಲಾಗುತ್ತದೆ. ವಾಸ್ತವವಾಗಿ ಯಾವುದೇ ಜನಪದ ಮಹಾಕಾವ್ಯದ ಪ್ರಕಟಣೆಯಲ್ಲಿಯೂ ಸಮಸ್ಯೆಗಳು ಎದುರಾಗುತ್ತವೆ. ಜಾನಪದ ವಿದ್ವಾಂಸ ಈ ಎಲ್ಲಾ ಸಮಸ್ಯೆಗಳನ್ನೂ ಪರಿಹರಿಸಿಕೊಂಡು ಮುಂದುವರಿಯಬೇಕಾಗುತ್ತದೆ. ಲೌರಿ ಹಾಂಕೊ ನೇತೃತ್ವದ ಈ ವಿಚಾರ ಸಂಕಿರಣದ ಪ್ರಬಂಧಗಳು ಮತ್ತು ಚರ್ಚೆಗಳು ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಹೊಸ ಆಯಾಮವನ್ನು ನೀಡಿವೆ.

೧೯೮೯ರಲ್ಲಿ UNESCO Recommendations for Safeguarding of Folklore and Traditional Culture ಅಂಗೀಕೃತವಾದ ನಂತರ ಯುನೆಸ್ಕೊ ತನ್ನ ಸದಸ್ಯ ರಾಷ್ಟ್ರಗಳಿಗೆ ಜಾನಪದ ಸಂಬಂಧವಾದ ಅಧ್ಯಯನಗಳಿಗೆ ಆರ್ಥಿಕ ನೆರವು ನೀಡಲು ಆರಂಭಿಸಿತು. ಮಧ್ಯ ಏಷ್ಯಾ, ದಕ್ಷಿಣ ಏಷ್ಯಾ ಮತ್ತು ಆಗ್ನೇಯ ಏಷ್ಯಾ ದೇಶಗಳಿಂದ ಭೂಮಾರ್ಗ ಮತ್ತು ಸಮುದ್ರ ಮಾರ್ಗಗಳ ಮೂಲಕ ಯೂರೋಪಿಗೆ ರೇಷ್ಮೆ ವ್ಯಾಪಾರ ಬಹಳ ಹಿಂದಿನಿಂದ ನಡೆಯುತ್ತಿತ್ತು. ಚೈನಾ, ಜಪಾನ್, ಟಿಬೆಟ್, ಇಂಡಿಯಾ ದೇಶಗಳನ್ನು ಒಳಗೊಂಡ ಈ ಮಾರ್ಗವನ್ನು ರೇಷ್ಮೆ ಮಾರ್ಗ (Silk Route) ಎಂದು ಕರೆಯುತ್ತಾರೆ. ಈ ದೇಶಗಳ ನಡುವೆ ವ್ಯಾಪಾರ ಹಾಗೂ ಸಾಂಸ್ಕೃತಿಕ ಸಂಬಂಧಗಳನ್ನು ವೃದ್ಧಿಪಡಿಸುವ ದೃಷ್ಟಿಯಿಂದ ಯುನೆಸ್ಕೋ Integral study of the Silk Roads: Roads of Dialogue ಎಂಬ ಹತ್ತು ವರ್ಷಗಳ (೧೯೮೮– ೯೭) ಯೋಜನೆಯನ್ನು ಹಾಕಿಕೊಂಡು ಅನೇಕ ಕಾರ್ಯಕ್ರಮಗಳನ್ನು ನಡೆಸಿದೆ. ಜಾನಪದಕ್ಕೆ ಸಂಬಂಧಿಸಿದಂತೆ ೧೯೯೦ರಲ್ಲಿ Epics along the Silk Roads ಯೋಜನೆಯಲ್ಲಿ ಚೈನಾ, ಭಾರತ, ಮಂಗೋಲಿಯಾ, ಜಪಾನ್, ಯೂರೋಪ್ ಮೊದಲಾದ ದೇಶಗಳ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದ ಕಮ್ಮಟಗಳನ್ನು ಏರ್ಪಡಿಸಲಾಯಿತು. ೧೯೯೩ರಲ್ಲಿ ಲೌರಿ ಹಾಂಕೊ ಅವರು ಈ ಯೋಜನೆಯಲ್ಲಿ ತುರ್ಕು ವಿಶ್ವವಿದ್ಯಾನಿಲಯದಲ್ಲಿ Epics along the Silk Roads: Problems of Mental Text, Performance and Written Codification ಎಂಬ

ಕಮ್ಮಟವನ್ನು ಏರ್ಪಡಿಸಿದ್ದರು. ಇದರಲ್ಲಿಯೂ ಕರ್ನಾಟಕದ ವಿವೇಕ ರೈ ಮತ್ತು ಚಿನ್ನಪ್ಪಗೌಡ ಅವರು ಭಾಗವಹಿಸಿದ್ದರು. ಭೂ ಮಾರ್ಗ ಮತ್ತು ಸಮುದ್ರ ಮಾರ್ಗಗಳೆರಡನ್ನೂ ಒಳಗೊಂಡು ರೇಷ್ಮೆ ಮಾರ್ಗದ ದೇಶಗಳಲ್ಲಿ ಜನಪದ ಮಹಾಕಾವ್ಯಗಳು ಜೀವಂತರೂಪದಲ್ಲಿವೆ ಹಾಗೂ ಸಾಕಷ್ಟು ಸಂಖ್ಯೆಯಲ್ಲಿವೆ. ಮಂಗೋಲಿಯಾದಲ್ಲಿಯೇ ೩೫೦ ಜನಪದ ಮಹಾಕಾವ್ಯಗಳನ್ನು ಸಂಗ್ರಹಿಸಲಾಗಿದೆ, ಅದರಲ್ಲಿ ನೂರಕ್ಕೂ ಹೆಚ್ಚು ಮಹಾಕಾವ್ಯಗಳನ್ನು ಪ್ರಕಟಿಸಿ ಅಭ್ಯಾಸ ಮಾಡಲಾಗಿದೆ ಎಂಬ ಅಂಶ ಈ ಕಮ್ಮಟದಿಂದ ತಿಳಿದು ಬಂದಿದೆ. ೧೦-೧೨ ತಲೆಮಾರುಗಳಲ್ಲಿ ತಮ್ಮ ಪೂರ್ವಿಕರು ಯಾರು ಯಾರು ಈ ಮಹಾಕಾವ್ಯಗಳನ್ನು ಹಾಡುತ್ತಿದ್ದರೆಂಬುದನ್ನೂ ಮಂಗೋಲಿಯನ್ ಜನಪದ ಮಹಾಕಾವ್ಯದ ಹಾಡುಗಾರರು ಹೇಳುತ್ತಾರೆ. ಕನಿಷ್ಟ ಪಕ್ಷ ೨೦೦ ವರ್ಷಗಳಿಂದಲೂ ಇವುಗಳನ್ನು ಹಾಡುತ್ತಿರುವುದರ ಬಗ್ಗೆ ಆಧಾರಗಳು ದೊರಕುತ್ತವೆ. ಮಹಾಕಾವ್ಯದ ವಸ್ತುಗಳು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಪ್ರಸರಣಗೊಂಡಿರುವ ಅಂಶಗಳನ್ನೂ, ಆಯಾ ದೇಶದ ಪರಿಸರಕ್ಕೆ ಅನುಗುಣವಾಗಿ ಅವುಗಳ ಆಶಯಗಳು ಹೇಗೆ ಬದಲಾಗಿವೆ ಎಂಬುದನ್ನೂ ಈ ಕಮ್ಮಟದಲ್ಲಿ ಚರ್ಚಿಸಲಾಯಿತು. ಉದಾಹರಣೆಗೆ ಗೇಸರ್ ಎಂಬ ಟಿಬೆಟ್ಟಿನ ಮಹಾಕಾವ್ಯ ಮಂಗೋಲಿಯಾಕ್ಕೆ ಪ್ರಸರಣಗೊಂಡಾಗ ಅದಕ್ಕೆ ಅನೇಕ ಭಾಗಗಳು ಸೇರ್ಪಡೆಯಾದವು. ಇಲ್ಲವೇ ಉಪ ಮಹಾಕಾವ್ಯಗಳು (Sub epics) ರೂಪುಗೊಂಡವು. ಈ ವಿಷಯಗಳ ಬಗ್ಗೆ ಚರ್ಚೆ ನಡೆಯಿತು. ಲೌರಿ ಹಾಂಕೊ ಅವರು ಜನಪದ ಮಹಾಕಾವ್ಯದ ಮೂಲಕ ರಾಷ್ಟ್ರೀಯ, ಪ್ರಾದೇಶಿಕ, ಸಾಮುದಾಯಿಕ, ಹಾಗೂ ವೈಯುಕ್ತಿಕ ಅನನ್ಯತೆಗಳು ಹೇಗೆ ಅಭಿವ್ಯಕ್ತಿ ಪಡೆಯುತ್ತವೆ ಎಂಬುದರ ಬಗ್ಗೆ ವಿಚಾರ ಮಾಡಿದರು. ಈ ಕಮ್ಮಟದಿಂದ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದ ಅನೇಕ ಕುತೂಹಲಕರವಾದ ಮತ್ತು ಮಹತ್ವಪೂರ್ಣವಾದ ವಿಷಯಗಳು ಜಗತ್ತಿನ ವಿದ್ವಾಂಸರ ಗಮನಕ್ಕೆ ಬರಲು ಸಾಧ್ಯವಾಯಿತು. ಜಗತ್ತಿನ ಅನೇಕ ದೇಶಗಳ ಜಾನಪದ ವಿದ್ವಾಂಸರು ಈಚಿನ ವರ್ಷಗಳಲ್ಲಿ ಜನಪದ ಮಹಾಕಾವ್ಯಗಳ ಸಂಗ್ರಹ, ಸಂಪಾದನೆ, ಪ್ರಕಟಣೆ, ಹಾಗೂ ಸಂಶೋಧನೆಯ ಬಗ್ಗೆ ವಿಶೇಷವಾದ ಆಸಕ್ತಿಯನ್ನು ತೋರಿಸುತ್ತಿದ್ದಾರೆ. ಜನಪದ ಮಹಾಕಾವ್ಯವು ಜನಪದ ಸಾಹಿತ್ಯದ ಯಾವುದೇ ಪ್ರಕಾರಕ್ಕಿಂತಲೂ ಆಯಾ ಭಾಷೆಯ, ಸಮುದಾಯದ, ಅಥವಾ ದೇಶದ ಅನನ್ಯತೆಯ, ಅಭಿಮಾನದ ಸಂಕೇತವಾಗಿರುತ್ತದೆ. ಹೀಗಾಗಿ ಇವುಗಳನ್ನು ಒಂದು ಅಂತರರಾಷ್ಟ್ರೀಯ ದಾಖಲಾತಿ ಸಂಗ್ರಹಾಲಯದಲ್ಲಿ ಸುರಕ್ಷಿತವಾದ ರೀತಿಯಲ್ಲಿ ಶ್ರೇಷ್ಠ ಜಾನಪದ ವಿದ್ವಾಂಸರ ಸಮಿತಿಯ ನೇತೃತ್ವದಲ್ಲಿ, ಆಡಿಯೊ ಹಾಗೂ ವಿಡಿಯೊ ಮಾಧ್ಯಮಗಳಲ್ಲಿ ದಾಖಲಾತಿ ಮಾಡುವುದು ತೀರ ಅಗತ್ಯ ಎಂದು ಲೌರಿ ಹಾಂಕೊ ನೇತೃತ್ವದ ಈ ಕಮ್ಮಟದ ವಿದ್ವಾಂಸರು ಯನೆಸ್ಕೊಗೆ ಸಲಹೆ ಮಾಡಿದ್ದಾರೆ. ಇದು ಕಾರ್ಯರೂಪಕ್ಕೆ ಬಂದರೆ ಲೌರಿ ಹಾಂಕೊ ಅವರ ಬಹುದೊಡ್ಡ ಸಾಧನೆಯಾಗುತ್ತದೆ. ಈ ಕಮ್ಮಟದ ಪ್ರಬಂಧಗಳು ಮತ್ತು ಚರ್ಚೆ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ.

ಈ ಯೋಜನೆಗೆ ಹೊಂದಿಕೊಂಡಂತೆ ೧೯೯೦ ರಲ್ಲಿ 'Epics and Oral Poetry' ಎಂಬ ವಿಷಯವಾಗಿ ಮಂಗಳೂರು ವಿಶ್ವವಿದ್ಯಾಲಯದಲ್ಲಿ ಪ್ರೊ. ವಿವೇಕರೈ ಅವರು ಒಂದು ವಿಚಾರ ಸಂಕಿರಣವನ್ನು ಏರ್ಪಡಿಸಿದ್ದರು.

ಲೌರಿ ಹಾಂಕೊ ಅವರು ಗೋಪಾಲನಾಯ್ಕ ಎಂಬ ಹಾಡುಗಾರ ಹಾಡಿದ ಸಿರಿ ಪಾಡ್ದನದಿಂದ ಪ್ರಭಾವಿತರಾಗಿ ಚಿನ್ನಪ್ಪಗೌಡ, ವಿವೇಕ ರೈ ಅವರ ಜೊತೆಗೂಡಿ ಈ ಕಾವ್ಯವನ್ನು ಸಮಗ್ರವಾಗಿ ಸಂಗ್ರಹ ಮಾಡಿದ್ದಾರೆ. ಹಾಡುಗಾರನಿಗೆ ಪೂರ್ಣ ಸ್ವಾತಂತ್ರ್ಯವನ್ನು, ಸಮಯವನ್ನು ಕೊಟ್ಟುದರಿಂದ ೧೫೬೮೩ ಸಾಲುಗಳ ಮಹಾಕಾವ್ಯ ಲಭ್ಯವಾಯಿತು. ನಿರ್ದಿಷ್ಟ ಉದ್ದೇಶಕ್ಕಾಗಿ ಪ್ರೇರಿತ ಸಂದರ್ಭದಲ್ಲಿ (Induced context) ಈ ಮಹಾಕಾವ್ಯವನ್ನು ಲೌರಿ ಹಾಂಕೊ ಸಂಗ್ರಹಿಸಿದರು. ಗೋಪಾಲನಾಯ್ಕ ಅವರೇ ಈ ಕಾವ್ಯವನ್ನು ಇಷ್ಟು ದೀರ್ಘವಾಗಿ ಯಾವಾಗಲೂ ಹಾಡಿರಲಿಲ್ಲ. ಹೀಗಾಗಿ ಇವರು ಹಾಡಬಹುದಾದ ಪರಮಾವಧಿ ಸಾಲುಗಳನ್ನು ಹಾಡಲು ಇದರಿಂದ ಸಾಧ್ಯವಾಗಿದೆ. ಈ ಸುದೀರ್ಘವಾದ ಮಹಾಕಾವ್ಯವನ್ನು *The Siri Epic as performed by Gopalanaika part -1* ಮತ್ತು *part -2* ಈ ಶೀರ್ಷಿಕೆಗಳಲ್ಲಿ ಫಿನ್ಲೆಂಡಿನ ಪ್ರತಿಷ್ಠಿತ Folklore Fellows communications ಮಾಲಿಕೆಯಲ್ಲಿ ಪ್ರಕಟಿಸಲಾಗಿದೆ. ಈ ಸಂಪುಟಗಳಲ್ಲಿ ಈ ಮಹಾಕಾವ್ಯದ ತುಳು ರೂಪವನ್ನು ರೋಮನ್ ಲಿಪಿಯಲ್ಲಿ ಲಿಪ್ಯಂತರ (Tranliteration) ಮಾಡಲಾಗಿದೆ. ಹಾಗೆಯೇ ಇದರ ಇಂಗ್ಲಿಷ್ ಅನುವಾದವನ್ನೂ ಕೊಡಲಾಗಿದೆ. ಇದರಿಂದಾಗಿ ತುಳುವಿನಲ್ಲಿ ಮಾತ್ರ ಪ್ರಕಟವಾಗಿದ್ದರೆ ದಕ್ಷಿಣ ಕನ್ನಡ ಜಿಲ್ಲೆಗೆ ಸೀಮಿತವಾಗಬಹುದಾಗಿದ್ದ ಈ ಮಹಾಕಾವ್ಯ ಸೊಗಸಾದ ರೀತಿಯಲ್ಲಿ ಅಖಿಲಭಾರತೀಯವಾದ, ಅಂತರರಾಷ್ಟ್ರೀಯವಾದ ವ್ಯಾಪ್ತಿಯನ್ನು ಪಡೆದುಕೊಂಡಿದೆ. ಲೌರಿ ಹಾಂಕೊ, ಚಿನ್ನಪ್ಪಗೌಡ, ಅನ್ನೇಲಿ ಹಾಂಕೊ ಮತ್ತು ವಿವೇಕ ರೈ ಈ ಕೃತಿಯ ಸಂಪಾದಕರು. ಈ ಕ್ಷೇತ್ರಕಾರ್ಯ ಮತ್ತು ದಾಖಲಾತಿಯ ಸಂದರ್ಭದಲ್ಲಿ ತೆಗೆದ ೪೭ ಫೋಟೋಗಳು ಈ ಕೃತಿಯ ಸಂದರ್ಭವನ್ನು ಅರ್ಥಮಾಡಿಕೊಳ್ಳಲು ನೆರವಾಗುತ್ತವೆ. ಎರಡು ಸಂಪುಟಗಳ ಈ ಮಹಾಕಾವ್ಯವನ್ನು ಕೆ.ಎಸ್. ಹರಿದಾಸಭಟ್ಟ ಮತ್ತು ವೀರೇಂದ್ರ ಹೆಗ್ಗಡೆಯವರಿಗೆ ಅರ್ಪಿಸಲಾಗಿದೆ. ಎರಡೂ ಸಂಪುಟಗಳ ಮುಖಪುಟದಲ್ಲಿ ಗೋಪಾಲನಾಯ್ಕ ಅವರ ಸುಂದರವಾದ ಭಾವಚಿತ್ರವಿದೆ. ೧೦ ಸಾಲುಗಳ ಅಂತರದಲ್ಲಿ ಸಾಲುಗಳ ಸಂಖ್ಯೆಯನ್ನು ನಮೂದಿಸಲಾಗಿದೆ. ಇದರಿಂದ ಈ ಮಹಾಕಾವ್ಯದ ಅಭ್ಯಾಸಕ್ಕೆ ನೆರವಾಗಿದೆ. ೬೦ ಪುಟಗಳ ಪ್ರಸ್ತಾವನೆಯಲ್ಲಿ ಈ ಮಹಾಕಾವ್ಯದ ಹಾಡುಗಾರ, ಹಾಡಿನ ಸಂದರ್ಭಗಳು, ದಾಖಲಾತಿ ವಿಧಾನ, ತುಳುಸಂಸ್ಕೃತಿ ಮೊದಲಾದ ವಿಷಯಗಳ ಬಗ್ಗೆ ಅನೇಕ ವಿವರಗಳಿವೆ. ವಿಶೇಷವಾದ ಶ್ರಮದಿಂದ ನಡೆದಿರುವ ಈ ಕಾರ್ಯ ಏಳು ವರ್ಷಗಳಲ್ಲಿ ಮುಕ್ತಾಯವಾಗಿದೆ. ಜಗತ್ತಿನ ಜನಪದ ಮಹಾಕಾವ್ಯಗಳ ಬಗ್ಗೆ ಅತ್ಯಂತ ಅಧಿಕೃತವಾಗಿ ಮಾತನಾಡಬಲ್ಲ ಲೌರಿ ಹಾಂಕೊ ಅವರ ವಿದ್ವತ್ತು ಹಾಗೂ ಚಿನ್ನಪ್ಪಗೌಡ ಮತ್ತು ವಿವೇಕ ರೈ ಮಾತೃಭಾಷೆಯಾಗಿ ಗಳಿಸಿಕೊಂಡ ತುಳು ಭಾಷೆಯ ಸಾಹಿತ್ಯದ ಗಾಢವಾದ ವಿದ್ವತ್ತು ಈ ಸಂಪುಟಗಳ ಮಹತ್ವವನ್ನು

ಹೆಚ್ಚಿಸಿದೆ. ಒಬ್ಬನೇ ಹಾಡುಗಾರ ಹಾಡುವ ಜನಪದ ಮಹಾಕಾವ್ಯವನ್ನು ಹೇಗೆ ಅಚ್ಚುಕಟ್ಟಾಗಿ ಸಂಗ್ರಹಿಸಿ, ಸಂಪಾದಿಸಿ ಸುಂದರವಾಗಿ ಪ್ರಕಟಿಸಬಹುದು ಎಂಬುದಕ್ಕೆ ಇವು ಉತ್ತಮ ನಿದರ್ಶನವಾಗಿವೆ. ಲೌರಿ ಹಾಂಕೊ ಕಲೆವಾಲ ಮಹಾಕಾವ್ಯವನ್ನು ಕೇಂದ್ರವಾಗಿಟ್ಟುಕೊಂಡು ಜಗತ್ತಿನ ಜನಪದ ಮಹಾಕಾವ್ಯಗಳನ್ನು ಅಭ್ಯಾಸ ಮಾಡಿರುವ ವಿದ್ವಾಂಸರು. ಎಲಿಯಾಸ್ ಲೆನ್ರೊಟ್‌ನಂತೆ ತಾವೂ ಒಂದು ಜನಪದ ಮಹಾಕಾವ್ಯವನ್ನು ಸಂಪಾದಿಸಿ ಪ್ರಕಟಿಸಿರುವುದು ಸಹಜವಾಗಿಯೇ ಇದೆ. ಎಲಿಯಾಸ್ ಲೆನ್ರೊಟ್ ಸಂಪಾದಿಸಿದ ಮಹಾಕಾವ್ಯವನ್ನು ಒಬ್ಬ ಹಾಡುಗಾರ ಹಾಡಲಿಲ್ಲ. ಅನೇಕ ಹಾಡುಗಾರರ ಹಾಡುಗಳನ್ನು ಒಟ್ಟು ಗೂಡಿಸಿ, ತಾವೂ ನಡುನಡುವೆ ಕೆಲವು ಸಾಲುಗಳನ್ನು ಸೇರಿಸಿ, ಸಂಪಾದಿಸಿ ಪ್ರಕಟಿಸಬೇಕಾಯಿತು. ಆದರೆ ಹಾಂಕೊ ಸಂಪಾದಿಸಿದ ಮಹಾಕಾವ್ಯವನ್ನು ಹಾಡಿದ್ದು ಗೋಪಾಲನಾಯ್ಕ ಮಾತ್ರ. ಈ ದೃಷ್ಟಿಯಿಂದ *ಸಿರಿ* ಮಹಾಕಾವ್ಯದ ಸಂಪಾದನ ಕ್ರಮ ಕಲೆವಲ ದ ಸಂಪಾದನ ಕ್ರಮಕ್ಕಿಂತ ಭಿನ್ನವಾಗಿದೆ. ಕನ್ನಡ ವಿಶ್ವವಿದ್ಯಾನಿಲಯದಿಂದ ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ ಮಹಾಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಲಾಗಿದೆ. ಇವುಗಳ ಸಂಪಾದನಾ ಕ್ರಮಕ್ಕೂ ಲೌರಿ ಹಾಂಕೊ, ಚಿನ್ನಪ್ಪಗೌಡ, ವಿವೇಕ ರೈ ಅವರು ಸಂಪಾದಿಸಿರುವ ಕ್ರಮಕ್ಕೂ ಇರುವ ವ್ಯತ್ಯಾಸಗಳನ್ನು ಅಧ್ಯಯನ ಮಾಡುವುದು ಅಗತ್ಯ.

ಹಾಂಕೊ ಅವರು ದೇಶೀಯ ವಿದ್ವಾಂಸರೊಡಗೂಡಿ ಸಿರಿ ಮಹಾಕಾವ್ಯವನ್ನು ಸಂಪಾದಿಸಿದ್ದು ಮಾತ್ರವಲ್ಲದೆ *Textualising The Siri Epic* ಎಂಬ ಇನ್ನೊಂದು ಸ್ವತಂತ್ರವಾದ, ವಿದ್ವತ್ ಪೂರ್ಣವಾದ ಗ್ರಂಥವನ್ನು Folklore Fellows Communications ಮಾಲೆಯಲ್ಲಿ ಪ್ರಕಟಿಸಿದ್ದಾರೆ. ಇದರಲ್ಲಿ ಸಿರಿ ಕಾವ್ಯವನ್ನು ಹಾಡುವ ವಿವಿಧ ಸಂದರ್ಭಗಳು, ಆ ಸಂದರ್ಭಗಳಲ್ಲಿ ಕಾವ್ಯ ಪ್ರಕಟವಾಗುವ ರೀತಿಗಳನ್ನು ವಿವರವಾಗಿ ಅಭ್ಯಾಸಮಾಡಿದ್ದಾರೆ. ಗೋಪಾಲನಾಯ್ಕ ಹಾಡುವಾಗ ಸಾಲುಗಳನ್ನು ನೆನಪಿಸಿಕೊಳ್ಳುವ ಕ್ರಮ, ಹೊಸದಾಗಿ ಸಾಲುಗಳನ್ನು ಸೃಷ್ಟಿಸಿಕೊಳ್ಳುವ ಕ್ರಮ ಮೊದಲಾದ ಪಠ್ಯೀಕರಣಕ್ಕೆ (Textualisation) ಸಂಬಂಧಿಸಿದ ವಿವರಗಳನ್ನೆಲ್ಲಾ ಈ ಕೃತಿಯಲ್ಲಿ ವಿವರವಾಗಿ ಚರ್ಚಿಸಿದ್ದಾರೆ. ಸಂಗ್ರಹಕಾರ್ಯದಿಂದ ಸಂಪಾದನೆ ಮತ್ತು ಪ್ರಕಟಣೆಯವರೆಗೆ ಎದುರಾದ ಸಮಸ್ಯೆಗಳು, ಈ ಸವಾಲುಗಳನ್ನು, ಸಮಸ್ಯೆಗಳನ್ನು ಎದುರಿಸಿದ ವಿಧಾನ, ಕಂಡುಕೊಂಡ ಉತ್ತರಗಳು ಮೊದಲಾದ ವಿವರಗಳು ಈ ಕೃತಿಯಲ್ಲಿವೆ.

ಈ ಕೃತಿಯಲ್ಲಿ ೪ ಭಾಗಗಳಿವೆ. ಮೊದಲನೆಯ ಭಾಗದಲ್ಲಿ ಮಹಾಕಾವ್ಯದ ಲಕ್ಷಣಗಳನ್ನು ಮತ್ತು ಬಗೆಗಳನ್ನು ಕುರಿತು ವಿಚಾರಮಾಡಿದ್ದಾರೆ. ಮಹಾಕಾವ್ಯದಲ್ಲಿ ಸಾಹಿತ್ಯಕ ಮಹಾಕಾವ್ಯಗಳು (Literary Epics) ಅರೆ ಸಾಹಿತ್ಯ ಮಹಾಕಾವ್ಯಗಳು (Semi-literary epics) ಮತ್ತು ಮೌಖಿಕ ಮಹಾಕಾವ್ಯಗಳು (Oral Epics) ಎಂಬ ಮೂರು ಪ್ರಭೇಧಗಳನ್ನು ಗುರುತಿಸುತ್ತಾರೆ. *Paradise Lost* ಮಹಾಕಾವ್ಯವನ್ನು ಸಾಹಿತ್ಯಕ ಮಹಾಕಾವ್ಯಗಳಿಗೂ, ಕಲೆವಲ ಮಹಾಕಾವ್ಯವನ್ನು ಅರೆ ಸಾಹಿತ್ಯಕ ಮಹಾಕಾವ್ಯಗಳಿಗೂ, ಸಿರಿ ಮಹಾಕಾವ್ಯವನ್ನು ಮೌಖಿಕ ಮಹಾಕಾವ್ಯಗಳಿಗೂ ಉದಾಹರಣೆಯಾಗಿ ಕೊಡುತ್ತಾರೆ.

ಮಹಾಕಾವ್ಯಗಳಿಗೂ ಖಂಡಕಾವ್ಯಗಳಿಗೂ ಇರುವ ವ್ಯತ್ಯಾಸಗಳನ್ನು ಗುರುತಿಸುತ್ತಾರೆ. ಮೌಖಿಕ ಮಹಾಕಾವ್ಯದಲ್ಲಿ ಪಠ್ಯ ಮತ್ತು ಪ್ರದರ್ಶನದ ಸ್ವರೂಪ ಮತ್ತು ಪರಸ್ಪರ ಸಂಬಂಧಗಳು, ಮೌಖಿಕ ಮಹಾಕಾವ್ಯ ಪರಂಪರೆಯಲ್ಲಿ ಪ್ರತಿ ಹಾಡುಗಾರನ ಅಥವಾ ಹಾಡುಗಾರ್ತಿಯ ವೈಶಿಷ್ಟ್ಯ, ಪಠ್ಯದ ಬದಲಾವಣೆಯ ಪ್ರಕ್ರಿಯೆ, ಪ್ರದರ್ಶನದ ಬಗೆಗಳು ಮತ್ತು ಶೈಲಿಗಳು, ಅಧಿ ಜಾನಪದ (Meta Folklore) ಮೌಖಿಕ ಸಾಹಿತ್ಯ ವಿಮರ್ಶೆ (Oral Litrerary Criticism) ಹಾಡುಗಾರಿಕೆಯ ಪ್ರಕ್ರಿಯೆಯಲ್ಲಿ ಮಾನಸಿಕ ಪಠ್ಯ (Mental Text), ಬಹುರೂಪಗಳು (Multiforms), ಸೂತ್ರಗಳು (Formulas), ನುಡಿಗಟ್ಟುಗಳು (Idioms) ಇವುಗಳ ಪಾತ್ರ, ವರ್ಣನೆಗಳು, ಘಟನೆಗಳು, ಸನ್ನಿವೇಶಗಳು, ಮಹಾಕಾವ್ಯದ ಒಳರಚನೆ, ಪಠ್ಯೀಕರಣದ ಸಮಸ್ಯೆಗಳು ಮೊದಲಾದ ವಿಷಯಗಳ ಬಗ್ಗೆ ಒಟ್ಟಾರೆಯಾಗಿ ಹಾಗೂ ಸಿರಿ ಮಹಾಕಾವ್ಯದ ಹಿನ್ನೆಲೆಯಲ್ಲಿ ವಿಚಾರಮಾಡಿದ್ದಾರೆ.

ಎರಡನೆಯ ಭಾಗದಲ್ಲಿ ಈವರೆಗೆ ಜಗತ್ತಿನಲ್ಲಿ ಹನ್ನೊಂದು ಜನಪದ ಮಹಾಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿರುವ ಬಗೆಯನ್ನು ಕುರಿತು ವಿಚಾರ ಮಾಡಿದ್ದಾರೆ. ಫಿನ್ಲೆಂಡಿನ ಕಲೆವಲ, ರಷ್ಯಾದ ಮಾನಸ್, ನಾರ್ತ್ ಅಮೆರಿಕನ್ ಇಂಡಿಯನ್ ಬುಡಕಟ್ಟಿನ ಮೊಹವೆ, ಸೂಡಾನಿನ ಸುನ್‌ಜಾತ, ಯುಗೋಸ್ಲೋವಿಯಾದ *ಸರ್ಬೋಕ್ರೋಷಿಯನ್*, ಸುಮಾತ್ರಾದ *ಅಂಗುನಾನ್ ತುಂಗ*, ತಮಿಳುನಾಡಿನ *ಅಣ್ಣನ್ಮಾರ್ ಕಥೈ*, ತೆಲುಗಿನ ಪಾಲ್ನಾಡು, ಮಾಲಿಯ *ಸೊನ್-ಜಾರ*, ಅರೇಬಿಯಾದ *ಸೀನತ್ ಬಾಲಿ ಹಿಲಾಲ್*, ರಾಜಾಸ್ಥಾನದ ಪಾಬೂಜಿ ಈ ಮಹಾಕಾವ್ಯಗಳನ್ನು ಸಂಪಾದಿಸಿ ಪ್ರಕಟಿಸಿದ ವಿದ್ವಾಂಸರು ಎದುರಿಸಿದ ಸಮಸ್ಯೆಗಳು ಹಾಗೂ ಕಂಡುಕೊಂಡ ಪರಿಹಾರಗಳನ್ನು ಕುರಿತು ವಿಮರ್ಶಾತ್ಮಕವಾಗಿ ಪರಿಶೀಲಿಸಿದ್ದಾರೆ. ಇವುಗಳ ಅಧ್ಯಯನದಿಂದ ಸಿರಿ ಮಹಾಕಾವ್ಯದ ಸಂಪಾದನೆಗೆ ಹೇಗೆ ನೆರವಾಗಿದೆ ಎಂಬುದನ್ನು ವಿವರಿಸಿದ್ದಾರೆ.

ಮೂರನೆಯ ಭಾಗ ಸಿರಿಯ ಮಹಾಕಾವ್ಯದ ಸಂಗ್ರಹಕ್ಕೆ ತೊಡಗಿದಾಗಿನಿಂದ ಅದನ್ನು ಸಂಪಾದಿಸಿ ಪ್ರಕಟಿಸುವವರೆಗೆ ಅನುಭವಿಸಿದ ಕಷ್ಟ ಸುಖಗಳು, ಕ್ಷೇತ್ರಕಾರ್ಯದ ಅನುಭವಗಳು, ತುಳು ಸಂಸ್ಕೃತಿಯ ಪರಿಚಯ, ಪುರಾಣ ಮತ್ತು ಆಚರಣೆಯ ನೆಲೆಯಲ್ಲಿ ತುಳು ಜನಪದ ಮಹಾಕಾವ್ಯಗಳು, ಹಾಡುಗಾರ ಗೋಪಾಲನಾಯ್ಕ ಅವರ ಬಗ್ಗೆ ವಿವರಗಳು, ಗೋಪಾಲನಾಯ್ಕ ಅವರಿಂದ ಚೆನ್ನಪ್ಪಗೌಡ ಸಂಗ್ರಹಿಸಿದ್ದ ಸಿರಿ ಮಹಾಕಾವ್ಯದ ಉಕ್ತಲೇಖನ ಪಠ್ಯದ (Dictated Text) ಪರಿಚಯ ಮತ್ತು ವಿಮರ್ಶೆ, *ಸಿರಿ* ಮಹಾಕಾವ್ಯಕ್ಕೆ ಸಂಬಂಧಿಸಿದ ಫಿನ್ನಿಷ್ ತುಳು ಸಂಶೋಧನಾ ಯೋಜನೆಯ ವಿವರಗಳು, ಗೋಪಾಲನಾಯ್ಕ ಹಾಡಿದ *ಸಿರಿ* ಮಹಾಕಾವ್ಯದ ಪಠ್ಯ ಪ್ರದರ್ಶನ ವಿವರಗಳು, ಸಿರಿಮಹಾಕಾವ್ಯದ ಕಥೆ ನಡೆದಿರಬಹುದಾದ ಪ್ರದೇಶಗಳ ಸಂಶೋಧನೆ, ಭೂತಾರಾಧನೆ ಮತ್ತು ಚೆನ್ನೆಮಣೆ ಆಟದ ವಿವರಗಳು, *ಸಿರಿ* ಮಹಾಕಾವ್ಯದ ಬಗ್ಗೆ ಗೋಪಾಲನಾಯಕ ಅವರ ಅನುಭವಗಳು ಹಾಗೂ ಅವರ ದೃಷ್ಟಿಕೋನವನ್ನು ಸಂದರ್ಶನದ ಮೂಲಕ ಕಂಡುಕೊಂಡ ವಿಧಾನ ಮೊದಲಾದ ಅನೇಕ ವಿಷಯಗಳನ್ನು ಒಳಗೊಂಡಿದೆ. ನಾಲ್ಕನೆಯ ಭಾಗದಲ್ಲಿ *ಸಿರಿ* ಮಹಾಕಾವ್ಯದ ಕಥೆಯನ್ನು ಸ್ಥೂಲವಾಗಿ ಕೊಡಲಾಗಿದೆ.

ಇದು ಜನಪದ ಮಹಾಕಾವ್ಯಗಳ ಬಗ್ಗೆ ಅಧ್ಯಯನ ಮಾಡುವ ಪಾಶ್ಚಾತ್ಯ ವಿದ್ವಾಂಸರಿಗೆ ಮತ್ತು ಪೌರ್ವಾತ್ಯ ವಿದ್ವಾಂಸರಿಗೆ ಅತ್ಯಂತ ಉಪಯುಕ್ತವಾದ ಹಾಗೂ ಮೌಲಿಕವಾದ ಕೃತಿಯಾಗಿದೆ. ಜೀವಂತವಾದ ಜನಪದ ಮಹಾಕಾವ್ಯಗಳಿಲ್ಲದಿರುವ ಪಾಶ್ಚಾತ್ಯ ಜಗತ್ತಿನ ವಿದ್ವಾಂಸರ ಕಣ್ಣುತೆರೆಸಿರುವ ಕೃತಿಯಾಗಿದೆ. ತಮ್ಮಲ್ಲಿ ಎಷ್ಟು ಅಮೂಲ್ಯವಾದ ಸಾಂಸ್ಕೃತಿಕ ಸಂಪತ್ತು ಇದೆ, ಅದನ್ನು ಹೇಗೆ ಸಂಪಾದಿಸಬೇಕು ಎಂಬುದನ್ನು ಪೌರ್ವಾತ್ಯ ವಿದ್ವಾಂಸರು ಈ ಕೃತಿಯಿಂದ ತಿಳಿಯಬಹುದು. ಒಟ್ಟಾರೆ ಹೇಳುವುದಾದರೆ ಜಗತ್ತಿನ ಜನಪದ ಮಹಾಕಾವ್ಯಗಳ ಕ್ಷೇತ್ರದಲ್ಲಿ ಇದು ಆಚಾರ್ಯಕೃತಿಯಾಗಿದೆ.

ಜನಪದ ಮಹಾಕಾವ್ಯಗಳ ಅಧ್ಯಯನದ ದೃಷ್ಟಿಯಿಂದ International Society for Folk Narrative Reesearch (ISFNR) ಹಾಗೂ Central Institute of Indian Languages (CIIL) ಸಂಸ್ಥೆಗಳು ಮೈಸೂರಿನಲ್ಲಿ ೧೯೯೫ರಲ್ಲಿ ನಡೆಸಿದ ISFNRನ ೧೧ನೆಯ ಅಂತರರಾಷ್ಟ್ರೀಯ ಜಾನಪದ ಸಮ್ಮೇಳನ ಬಹು ಮುಖ್ಯವಾದುದು. ಇದರಲ್ಲಿ ಮಂಡಿತವಾದ ಪ್ರಬಂಧಗಳು *The Epic: Oral and Written* ಎಂಬ ಶೀರ್ಷಿಕೆಯಲ್ಲಿ ಪುಸ್ತಕರೂಪದಲ್ಲಿ ಪ್ರಕಟವಾಗಿವೆ. ಲೌರಿ ಹಾಂಕೊ, ಜವಹರಲಾಲ್ ಹಂಡೂ ಮತ್ತು ಜಾನ್ ಮೈಲ್ಸ್ ಫೋಲೆ ಇದರ ಸಂಪಾದಕರು. ಇದರಲ್ಲಿ ನಾಲ್ಕು ವಿಭಾಗಗಳಿವೆ. ಮೊದಲ ವಿಭಾಗದಲ್ಲಿ ಜನಪದ ಮಹಾಕಾವ್ಯದ ಮೌಖಿಕ ರಚನೆಯ ಸ್ವರೂಪವನ್ನು ಕುರಿತು ಹಾಂಕೊ, ಫೋಲೆ ಮತ್ತು ಜೆನಸನ್ ಅವರ ಬರಹಗಳಿವೆ. ಎರಡನೆಯ ವಿಭಾಗದಲ್ಲಿ ಹೇಡಾ ಜೇಸನ್ ಅವರು ಭಾರತದ ಹಾಗೂ ಯೂರೋಪ್, ಆಫ್ರಿಕಾ ಮತ್ತು ಏಷಿಯಾದ ಜನಪದ ಮಹಾಕಾವ್ಯಗಳ ಬಗ್ಗೆ ಬರೆದಿದ್ದಾರೆ. ಜಾನ್ ಬ್ರಾಕಿಂಗ್ಟನ್ ಅವರು ರಾಮಾಯಣ ಮೂಲತಃ ಮೌಖಿಕ ಕಾವ್ಯವಾಗಿತ್ತು ಎಂಬುದರ ಬಗ್ಗೆ ಹಾಗೂ ಸೂಸಾನ್ ವ್ಯಾಡ್ಲೇ ಅವರು ಹಿಂದಿ ಜನಪದ ಮಹಾಕಾವ್ಯ ಢೋಲಾ ಬಗ್ಗೆ ಲೇಖನಗಳನ್ನು ಬರೆದಿದ್ದಾರೆ. ಮೂರನೆಯ ವಿಭಾಗದಲ್ಲಿ ಜನಪದ ಮಹಾಕಾವ್ಯ ಮತ್ತು ಇತಿಹಾಸದ ಬಗೆಗೆ ಎರಡು ಲೇಖನಗಳಿವೆ. ಇವು ಕ್ರಮವಾಗಿ ಐರಿಷ್ ಮತ್ತು ಯೋರೂಬಾ ಪರಂಪರೆಗಳಿಗೆ ಸಂಬಂಧಿಸಿವೆ. ನಾಲ್ಕನೆಯ ವಿಭಾಗದಲ್ಲಿ ಮೌಖಿಕ ಮತ್ತು ಗ್ರಾಂಥಿಕ ಜನಪದ ಮಹಾಕಾವ್ಯಗಳ ಪರಸ್ಪರ ಕೊಳುಕೊಡುಗೆಗಳ ಬಗ್ಗೆ ನಾಲ್ಕು ಲೇಖನಗಳಿವೆ. ಲೌರಿ ಹಾರ್ವಿಲಾತಿ, ಕ್ರಿಸ್ಸನ್ ಥಿಸ್ಟೆಡ್, ಜಿಯಾಕುವೊ, ಹಿಯಾಜೀ ಅವರುಗಳು ಈ ವಿಷಯದ ಬಗ್ಗೆ ವಿಚಾರಮಾಡಿದ್ದಾರೆ. ಇದೊಂದು ಉಪಯುಕ್ತವಾದ ಗ್ರಂಥವಾಗಿದೆ.

೧.೪.೨ ಭಾರತದ ಜನಪದ ಮಹಾಕಾವ್ಯಗಳ ಅಧ್ಯಯನ

ಭಾರತ ಅನೇಕ ಜನಾಂಗಗಳು, ಧರ್ಮಗಳು, ಭಾಷೆಗಳು, ಜಾತಿಗಳು ಮತ್ತು ಬುಡಕಟ್ಟುಗಳಿಂದ ಕೂಡಿದ ದೇಶ. ಹಿಂದೂ ಧರ್ಮವೇ ಭಾರತದಲ್ಲಿ ಪ್ರಧಾನ ಧರ್ಮವಾದರೂ ಬೌದ್ಧ, ಜೈನ, ಇಸ್ಲಾಂ, ಕ್ರೈಸ್ತ ಮೊದಲಾದ ಅನೇಕ ಧರ್ಮಗಳು

ಕಾಲದಿಂದ ಕಾಲಕ್ಕೆ ಭಾರತೀಯ ಸಂಸ್ಕೃತಿಯನ್ನು ರೂಪಿಸಿವೆ. ರಾಮಾಯಣ, ಮಹಾಭಾರತ, ಭಾಗವತ ಭಾರತದ ರಾಷ್ಟ್ರಿಯ ಮಹಾಕಾವ್ಯಗಳಾಗಿವೆ. ಈ ಮಹಾಕಾವ್ಯಗಳು ಕೂಡ ಕಾಲದಿಂದ ಕಾಲಕ್ಕೆ ಬೆಳೆದು ವಿಕಾಸವಾಗುತ್ತಾ ಈಗಿರುವ ಸ್ಥಿತಿಯನ್ನು ಮುಟ್ಟಿವೆ. ಈ ಮಹಾಕಾವ್ಯಗಳ ಪ್ರಭಾವ ನಮ್ಮ ದೇಶದ ಎಲ್ಲಾ ಭಾಷೆಗಳ ಶಿಷ್ಟ ಮತ್ತು ಜನಪದ ಕವಿಗಳ ಮೇಲೆ ಆಗಿರುವುದನ್ನು ಗುರುತಿಸಬಹುದು. ರಾಮಾಯಣ, ಮಹಾಭಾರತ, ಭಾಗವತ ಗಳನ್ನು ಆಧಾರವಾಗಿಟ್ಟುಕೊಂಡು ಭಾರತದ ಎಲ್ಲಾ ಪ್ರಮುಖ ಭಾಷೆಗಳಲ್ಲಿಯೂ ಹತ್ತನೆಯ ಶತಮಾನದಿಂದೀಚೆಗೆ ಕವಿಗಳು ಮಹಾಕಾವ್ಯಗಳನ್ನು ರಚಿಸುತ್ತಲೇ ಬಂದಿದ್ದಾರೆ. ಉದಾಹರಣೆಗೆ, ಹತ್ತನೆಯ ಶತಮಾನದ ಪಂಪ ಆ ಶತಮಾನದ ಯುಗಧರ್ಮಕ್ಕೆ ಅನುಗುಣವಾಗಿ ವೀರ, ಶೌರ್ಯ, ತ್ಯಾಗ, ಬಲಿದಾನ ಈ ಮೌಲ್ಯಗಳಿಗೆ ಅನುಗುಣವಾಗಿ ವಿಕ್ರಮಾರ್ಜುನ ವಿಜಯವನ್ನು ರಚಿಸಿದರೆ, ೧೫ನೆಯ ಶತಮಾನದಲ್ಲಿ ಕುಮಾರವ್ಯಾಸ ಭಕ್ತಿಪ್ರಸಾರಕ್ಕಾಗಿ *ಕರ್ನಾಟ ಭಾರತ ಕಥಾಮಂಜರಿಯನ್ನು* ರಚಿಸಿದ. ಜೈನಧರ್ಮದ ತತ್ವಗಳನ್ನು ಪ್ರತಿಪಾದಿಸಲು ನಾಗಚಂದ್ರ *ಪಂಪ ರಾಮಾಯಣವನ್ನು*, ಬರೆದರೆ ವೈದಿಕ ಧರ್ಮದ ಪ್ರತಿಪಾದನೆಗಾಗಿ ನರಹರಿ *ತೊರವೆ ರಾಮಾಯಣವನ್ನು* ಬರೆದಿದ್ದಾನೆ. ಇಪ್ಪತ್ತನೆಯ ಶತಮಾನದಲ್ಲಿ ಕುವೆಂಪು ಭಾರತೀಯ ಮತ್ತು ಪಾಶ್ಚಾತ್ಯ ತತ್ವಜ್ಞಾನ ಮತ್ತು ವಿಜ್ಞಾನ ಹಾಗೂ ಧಾರ್ಮಿಕ ಚಿಂತನೆಗಳ, ರಾಮಕೃಷ್ಣ ಪರಮಹಂಸ, ವಿವೇಕಾನಂದರ ಸರ್ವಧರ್ಮ ಸಮನ್ವಯ ತತ್ವಗಳ ಪ್ರಭಾವದಿಂದಾಗಿ ಹೆಚ್ಚು ಉದಾರವಾದಿಯಾದ ನಿಲುವಿನಿಂದ ರಾಮಾಯಣವನ್ನು *ರಾಮಾಯಣದರ್ಶನ* ವಾಗಿ ಪುನರ್ ಸೃಷ್ಟಿಸಿದ್ದಾರೆ. ಹೀಗೆಯೇ ಇತರ ಭಾಷೆಗಳಲ್ಲಿ *ತುಳಸಿ ರಾಮಾಯಣ*, *ಕಂಬ ರಾಮಾಯಣ* ಮೊದಲಾದ ಕೃತಿಗಳು ರಚಿತವಾಗಿವೆ. ಇಲ್ಲೆಲ್ಲಾ ಆಯಾ ಕವಿಗಳು ಆ ಕಾಲದ ಯುಗಧರ್ಮ ಹಾಗೂ ತಮ್ಮ ವೈಯಕ್ತಿಕ ಅಭಿವ್ಯಕ್ತಿಗಾಗಿ *ರಾಮಾಯಣ*, *ಭಾಗವತ*, *ಮಹಾಭಾರತ* ಗಳನ್ನು ಬಳಸಿಕೊಂಡಿದ್ದಾರೆ. ಹೀಗಾಗಿ *ರಾಮಾಯಣ ಮಹಾಭಾರತ* ಗಳು ಸಂಸ್ಕೃತದಲ್ಲಿ ಈಗಿರುವ ವಿಸ್ತೃತರೂಪದಲ್ಲಿ ದೊರಕಿರುವುದು ಮಾತ್ರವಲ್ಲದೇ ಕಾಲದಿಂದ ಕಾಲಕ್ಕೆ ಹೊಸಹೊಸ ಸೃಷ್ಟಿಗಳಿಗೂ ಅವಕಾಶ ಮಾಡಿಕೊಟ್ಟಿವೆ. ಭಾರತದಲ್ಲಿ ಮುನ್ನೂರಕ್ಕೂ ಹೆಚ್ಚು ರಾಮಾಯಣಗಳಿವೆ ಎಂದು ಎ.ಕೆ.ರಾಮಾನುಜನ್ ಅಭಿಪ್ರಾಯಪಟ್ಟಿದ್ದಾರೆ. *ಮಹಾಭಾರತ* ಹಾಗೂ *ಭಾಗವತ* ಗಳ ಬಗ್ಗೆಯೂ ಹೀಗೆಯೇ ಹೇಳಬಹುದೇನೋ? ಈ ಮಹಾಕಾವ್ಯಗಳ ಪ್ರಭಾವ ಶಿಷ್ಟ ಕವಿಗಳಿಗೇ ಮುಗಿಯುವುದಿಲ್ಲ. ಜನಪದರ ಮಟ್ಟದಲ್ಲಿಯೂ ಇದರ ಗಾಢ ಪ್ರಭಾವಗಳನ್ನು ಗುರುತಿಸಬಹುದು. ಭಾರತದ ಬಹಳಷ್ಟು ಭಾಷೆಗಳಲ್ಲಿ ಈ ಮೂರೂ ಮಹಾಕಾವ್ಯಗಳನ್ನು ಆಧಾರವಾಗಿಟ್ಟುಕೊಂಡು ಅನೇಕ ಜನಪದ ಕಥನಗೀತೆಗಳು ರಚಿತವಾಗಿವೆ. ರಾಮಾಯಣದ ರಾಮ, ಸೀತೆ, ರಾವಣ ಮೊದಲಾದವರು, ಮಹಾಭಾರತದ ದ್ರೌಪದಿ, ಪಾಂಡವರು, ಕೌರವರು, ಭೀಷ್ಮ, ದ್ರೋಣ, ಕರ್ಣ, ಭಾಗವತದ ಕೃಷ್ಣ, ಜರಾಸಂಧ, ಕಂಸ, ರಾಧೆ, ಸತ್ಯಭಾಮೆ ಮೊದಲಾದವರು ಬೇರೆ ಬೇರೆ ರೂಪಗಳಲ್ಲಿ ಭಾರತದ ಜನಪದ ಕಾವ್ಯದಲ್ಲಿ ಅಭಿವ್ಯಕ್ತಿ ಪಡೆದಿದ್ದಾರೆ. ಈ ಸಂಬಂಧವಾಗಿ ಇರುವ ಕಥನ ಗೀತೆಗಳನ್ನು ಒಟ್ಟುಗೂಡಿಸಿ ವ್ಯವಸ್ಥಿತವಾಗಿ ಸಂಪಾದಿಸಿದರೆ ಕನಿಷ್ಟಪಕ್ಷ ಭಾರತದ ಪ್ರತಿಯೊಂದು ಭಾಷೆಯಲ್ಲಿಯೂ, ಒಂದೊಂದು ಜಾತಿಯಲ್ಲಿಯೂ,

ಒಂದೊಂದು ಬುಡಕಟ್ಟಿನಲ್ಲಿಯೂ ಒಂದೊಂದು ಜನಪದ ಮಹಾಕಾವ್ಯ ಅಥವಾ ಖಂಡಕಾವ್ಯ ಲಭ್ಯವಾದರೆ ಖಂಡಿತ ಆಶ್ಚರ್ಯವೇನಿಲ್ಲ.

ಹಾಗೆಯೇ ಭಾರತದ ವಿವಿಧ ರಾಜ್ಯಗಳಲ್ಲಿನ ಇತಿಹಾಸ ಪ್ರಸಿದ್ಧ ಪುರುಷರ, ಸ್ತ್ರೀಯರ ಬಗ್ಗೆಯೂ ಮಹಾಕಾವ್ಯಗಳೋ, ಖಂಡಕಾವ್ಯಗಳೋ ಲಭ್ಯವಾಗಬಹುದು. ವೀರಪಾಂಡ್ಯ ಕಟ್ಟಬೊಮ್ಮನ್, ಕುಮಾರರಾಮ, ಬಸವಣ್ಣ ಮೊದಲಾದ ವ್ಯಕ್ತಿಗಳ ಬಗ್ಗೆ ಅನೇಕ ಕಥನಗೀತೆಗಳು ಲಭ್ಯವಾಗುತ್ತವೆ. ಭಾರತದ ಇತರ ರಾಜ್ಯಗಳಲ್ಲಿಯೂ ಈ ಬಗೆಯ ಐತಿಹಾಸಿಕ ವ್ಯಕ್ತಿಗಳ ಬಗ್ಗೆ ಕಥನಗೀತೆಗಳು ದೊರೆಯುತ್ತವೆ. ಈ ಬಗೆಯ ಕಥನಗೀತೆಗಳನ್ನು ಸಂಗ್ರಹಿಸಿ, ಪ್ರಕಟಿಸಿದರೆ ಖಂಡಕಾವ್ಯ ಅಥವಾ ಮಹಾಕಾವ್ಯದ ಸ್ವರೂಪವನ್ನು ಪಡೆಯಬಹುದು. ಈ ಬಗೆಯ ಸಂಗ್ರಹ ಹಾಗೂ ಅಧ್ಯಯನ ನಡೆಯುವುದು ಅಗತ್ಯ. ಪ್ರತಿಯೊಂದು ಜಾತಿ ಬುಡಕಟ್ಟುಗಳಲ್ಲಿಯೂ ಮಹಾಕಾವ್ಯಗಳು ಲಭ್ಯವಾಗಬಹುದು. ಉದಾಹರಣೆಗೆ, ಹರಿಜನರಲ್ಲಿ ಮಲೆ ಮಾದೇಶ್ವರ ಹಾಗೂ ಮಂಟೇಸ್ವಾಮಿ ದೇವರುಗಳನ್ನು ಬಲಗೈ ಹಾಗೂ ಎಡಗೈನವರು ಪ್ರತ್ಯೇಕವಾಗಿ ಸ್ವೀಕರಿಸಿದ ಹಾಗೆ, ಜುಂಜಪ್ಪನನ್ನು ಕಾಡುಗೊಲ್ಲರು ತಮ್ಮ ಸಾಂಸ್ಕೃತಿಕ ವೀರನನ್ನು ಮಾಡಿಕೊಂಡಂತೆ, ವೈಶ್ಯರು ಕನ್ನಿಕಾಪರಮೇಶ್ವರಿಯನ್ನು ತಮ್ಮ ಸಾಂಸ್ಕೃತಿಕ ವೀರಳನ್ನಾಗಿಸಿಕೊಂಡಂತೆ ಹಾಗೂ ಮಹಾಕಾವ್ಯಗಳನ್ನು ಸೃಷ್ಟಿಸಿಕೊಂಡಂತೆ ಭಾರತದ ವಿವಿಧೆಡೆಗಳಲ್ಲಿ ಪಾಬೂಜಿ, *ಅಲ್ಹಾ, ಗೂಗಾ, ಢೋಲಾ, ದೇವನಾರಾಯಣ, ಚಾಂದೇನಿ, ಅಣ್ಣನ್ಮಾರ್* ಮೊದಲಾದ ಮಹಾಕಾವ್ಯಗಳು ಸೃಷ್ಟಿಯಾಗಿವೆ. ಈ ದೃಷ್ಟಿಯಿಂದ ವಿಚಾರ ಮಾಡಿದರೆ ಭಾರತದಲ್ಲಿ ವಿವಿಧ ಭಾಷೆ, ಮತ, ಧರ್ಮ, ಜಾತಿ, ಬುಡಕಟ್ಟುಗಳ ಕಾರಣದಿಂದ ಅನೇಕ ಸಮಸ್ಯೆಗಳು ಸೃಷ್ಟಿಯಾಗಿರುವುದು ಎಷ್ಟು ನಿಜವೋ, ಇದೇ ಕಾರಣದಿಂದಾಗಿ ವೈವಿಧ್ಯಮಯವಾದ ಹಾಗೂ ಸಮೃದ್ಧಿಯಾದ ಸಾಹಿತ್ಯ ಸೃಷ್ಟಿಯಾಗಿರುವುದು ಅಷ್ಟೇ ನಿಜ. ಯೂರೋಪ್ ಮತ್ತು ಅಮೆರಿಕಾ ದೇಶಗಳು ವಿಜ್ಞಾನ ಮತ್ತು ತಂತ್ರಜ್ಞಾನದ ಬೆಳವಣಿಗೆಯಿಂದ, ಕೈಗಾರಿಕಾ ಕ್ರಾಂತಿಯಿಂದ, ರಾಜಕೀಯ ಪ್ರಾಬಲ್ಯದಿಂದ, ಆರ್ಥಿಕ ಶ್ರೀಮಂತಿಕೆಯಿಂದ ಭಾರತ ಮೊದಲಾದ ತೃತೀಯ ಜಗತ್ತಿನ ರಾಷ್ಟ್ರಗಳಿಗಿಂತ ಮುಂದಿದ್ದರೂ ಕೂಡ ಸಾಂಸ್ಕೃತಿಕವಾದ ವೈವಿಧ್ಯ ಮತ್ತು ಸಂಸ್ಕೃತಿ ಅಲ್ಲಿ ಕಂಡು ಬರುವುದಿಲ್ಲ. ಅಲ್ಲಿ ಈಗ ಜನಪದ ಮಹಾಕಾವ್ಯಗಳು ಜೀವಂತರೂಪದಲ್ಲಿಲ್ಲ. ಯಾವುದೋ ಕಾಲದಲ್ಲಿ ಕೈಬರಹದ ರೂಪದಲ್ಲಿ ಬರೆದುಕೊಂಡ, ಟೇಪ್ ರೆಕಾರ್ಡರ್‌ನಲ್ಲಿ ದಾಖಲು ಮಾಡಿಕೊಂಡ ಸಾಮಗ್ರಿಯ ಆಧಾರದ ಮೇಲೆ ಅಲ್ಲಿನ ಜಾನಪದ ವಿದ್ವಾಂಸರು ಅಧ್ಯಯನ ನಡೆಸುತ್ತಾರೆ. ಆದರೆ ಜನಪದ ಮಹಾಕಾವ್ಯಗಳನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಹೇಗೆ ಹಾಡುತ್ತಾರೆ, ಹೇಗೆ ಅಭಿನಯ ಮಾಡಿ ತೋರಿಸುತ್ತಾರೆ ಮತ್ತು ಮಹಾಕಾವ್ಯದ ಪಠ್ಯ ಹಾಡುಗಾರನಿಂದ ಹಾಡುಗಾರನಿಗೆ, ಹಾಡುಗಾರ್ತಿಯಿಂದ ಹಾಡುಗಾರ್ತಿಗೆ, ಸಂದರ್ಭದಿಂದ ಸಂದರ್ಭಕ್ಕೆ, ಪ್ರೇಕ್ಷಕರಿಂದ ಪ್ರೇಕ್ಷಕರಿಗೆ ಹೇಗೆ ಬದಲಾಗುತ್ತದೆ ಎಂಬುದನ್ನು ಅಭ್ಯಾಸ ಮಾಡಲು ಅಲ್ಲಿ ಸಾಧ್ಯವಿಲ್ಲ. ಆ ಬಗೆಯ ಅಧ್ಯಯನಕ್ಕೆಲ್ಲಾ ಭಾರತದಂತಹ ದೇಶವೇ ಅತ್ಯಂತ ಸೂಕ್ತವಾದದ್ದು. ಜನಪದ ಮಹಾಕಾವ್ಯದ ಬಗ್ಗೆ ಇಂದು ಸಂಶೋಧನೆ ನಡೆಸುತ್ತಿರುವ

ಯೂರೋಪಿಯನ್ ಮತ್ತು ಅಮೆರಿಕನ್ ಜಾನಪದ ವಿದ್ವಾಂಸರು ಭಾರತದ ಜನಪದ ಮಹಾಕಾವ್ಯಗಳ ಸಂಗ್ರಹ, ಸಂಪಾದನೆ ಬಗ್ಗೆ ಹಾಗೂ ಸಂಶೋಧನೆಗಳಲ್ಲಿ ಹೆಚ್ಚು ಆಸಕ್ತಿಯಿಂದ ತೊಡಗಿಸಿಕೊಳ್ಳಲು ಇದು ಮುಖ್ಯವಾದ ಕಾರಣವಾಗಿದೆ. ಆದರೆ ಇಷ್ಟೆಲ್ಲಾ ವೈವಿಧ್ಯ ಮತ್ತು ಸಮೃದ್ಧಿಯುಳ್ಳ ಭಾರತದ ರಾಷ್ಟ್ರೀಯ ಮಹಾಕಾವ್ಯಗಳು ಇತರ ದೇಶದ ಜನಗಳಿಗೆ ತಿಳಿದಿದ್ದವೇ ಹೊರತು ಜನಪದ ಮಹಾಕಾವ್ಯಗಳ ಬಗ್ಗೆ ಕಲ್ಪನೆಯೂ ಇರಲಿಲ್ಲ. ೧೯೬೦ರವರೆಗೆ ವಿದೇಶಿ ವಿದ್ವಾಂಸರಿಗೆ ಕರೇಲಿಯಾ, ಉತ್ತರ ಏಶಿಯಾ, ಮಧ್ಯ ಏಷ್ಯಾ ಮತ್ತು ಬಾಲ್ಕನ್ ದೇಶಗಳಲ್ಲಿ ಜನಪದ ಮಹಾಕಾವ್ಯಗಳಿವೆ ಎಂಬುದಷ್ಟೇ ತಿಳಿದಿತ್ತು. ಆದರೆ ಈಚೆಗೆ ನಡೆದ ಸಂಶೋಧನೆಗಳಿಂದ ದಕ್ಷಿಣ ಏಷ್ಯಾ, ಆಗ್ನೇಯ ಏಷ್ಯಾ, ಮಧ್ಯಪೂರ್ವ ದೇಶಗಳು, ಆಫ್ರಿಕಾ ಮೊದಲಾದ ದೇಶಗಳಲ್ಲಿ ಅನೇಕ ಜೀವಂತ ಜನಪದ ಮಹಾಕಾವ್ಯಗಳಿವೆ ಎಂಬ ತಿಳುವಳಿಕೆ ಬಂದಿದೆ. ಆದರೆ ಭಾರತದಲ್ಲಿ ಕೆಲಸ ಮಾಡಿದ ಬ್ರಿಟಿಷ್ ವಿದ್ವಾಂಸರು ಮತ್ತು ಆಡಳಿತಗಾರರು ಕೆಲವು ಜನಪದ ಕಾವ್ಯಗಳನ್ನು ೧೯ನೆಯ ಶತಮಾನದಲ್ಲಿ ಉಲ್ಲೇಖಮಾಡಿದ್ದರು. ೧೯೬೦ರಿಂದೀಚೆಗೆ ಇಂಡಾಲಜಿಯ ಕ್ಷೇತ್ರದಲ್ಲಿ ಕೆಲಸ ಮಾಡುತ್ತಿರುವ ವಿದ್ವಾಂಸರು ಭಾರತದ ಜನಪದ ಮಹಾಕಾವ್ಯಗಳ ಬಗ್ಗೆ ಗಂಭೀರವಾದ ಅಧ್ಯಯನದಲ್ಲಿ ತೊಡಗಿದ್ದಾರೆ. ಮೊದಲಿಗೆ ವಿದೇಶಿ ಭಾರತಶಾಸ್ತ್ರಜ್ಞರು ಹಿಂದೂ ಧರ್ಮ ಎಂದರೆ ಸಂಸ್ಕೃತ ವೈದಿಕ ಮತ್ತು ವಿವಿಧ ಭಾರತೀಯ ಭಾಷೆಗಳ ಶಿಷ್ಟ ಪರಂಪರೆ ಮಾತ್ರ ಎಂದು ಭಾವಿಸಿದ್ದರು. ಆದರೆ ಈಗ ಭಾರತದ ಜಾನಪದವನ್ನು ಅರ್ಥಮಾಡಿಕೊಳ್ಳದಿದ್ದರೆ ಭಾರತೀಯ ಸಂಸ್ಕೃತಿಯನ್ನು ಸಮರ್ಥವಾಗಿ ಅಧ್ಯಯನ ಮಾಡಲು ಸಾಧ್ಯವಿಲ್ಲ ಎಂಬ ಅಭಿಪ್ರಾಯಕ್ಕೆ ಬಂದಿದ್ದಾರೆ.

ಜರ್ಮನಿಯ ಇಂಡಾಲಜಿಸ್ಟ್ ಸಾಂಥೈಮರ್ ಅವರು ಎರಡು ದಶಕಗಳಿಗೂ ಹೆಚ್ಚಿನ ಕಾಲದಲ್ಲಿ ಮಹಾರಾಷ್ಟ್ರದಲ್ಲಿ ಸಂಶೋಧನೆ ಮಾಡಿ ಪಶ್ಚಿಮ ಭಾರತದ ಜನಪದ ಪಶುಪಾಲನಾ ದೇವತೆಗಳಾದಂತಹ ಬೀರೋಬ, ಖಂಡೋಬಾ, ಮಾಸೋಬಾ ಮೊದಲಾದವರ ಬಗ್ಗೆ ಬರೆದಿರುವ *Pestoral Deities In Western India* ಎಂಬ ಕೃತಿ ಹಿಂದೂಧರ್ಮವನ್ನು ಹೊಸದೃಷ್ಟಿಯಿಂದ ನೋಡಲು ಅವಕಾಶಮಾಡಿಕೊಟ್ಟಿದೆ.

ಹೋಮರನ ಇಲಿಯಡ್ ಮತ್ತು ಒಡೆಸ್ಸಿ ಮಹಾಕಾವ್ಯಗಳ ಪ್ರಸರಣ ಕಾರ್ಯ ಹೇಗೆ ನಡೆಯುತ್ತಿತ್ತು ಎಂಬುದನ್ನು ಯುಗೋಸ್ಲಾವಿಯಾದ ಜನಪದ ಹಾಡುಗಾರರ ಕಥನಗೀತೆಗಳ ಹಾಡುಗಾರಿಕೆಯ ಆಧಾರದ ಮೇಲೆ ಅರ್ಥಮಾಡಿಕೊಳ್ಳಲು ೧೯೩೦ರ ವೇಳೆಗೆ ಹಾರ್ವರ್ಡ್ ವಿಶ್ವವಿದ್ಯಾನಿಲಯದ ಕ್ಲಾಸಿಕಲ್ ಭಾಷೆಗಳ ತಜ್ಞರಾದ ಮಿಲ್ಮನ್‌ಪ್ಯಾರಿ ಮತ್ತು ಅಲ್ಬರ್ಟ್ ಲಾರ್ಡ್ ಅವರು ವಿಶೇಷ ಶ್ರಮಪಡಬೇಕಾಯಿತು. ಆದರೆ ಇಂದು ಜನಪದ ಮಹಾಕಾವ್ಯಗಳು ಎಲ್ಲಿವೆ ಎಂದು ಹುಡುಕಿಕೊಂಡು ಹೋಗಬೇಕಾಗಿಲ್ಲ. ಸಮೃದ್ಧಿ ಮತ್ತು ವೈವಿಧ್ಯ ಎಷ್ಟರ ಮಟ್ಟಿಗೆ ಇದೆ ಎಂದರೆ ಯಾವುದನ್ನು ಅಭ್ಯಾಸಮಾಡಬೇಕು ಎಂಬುದನ್ನು ಆಯ್ಕೆಮಾಡಿಕೊಳ್ಳುವುದೇ ಕಷ್ಟವಾಗುತ್ತದೆ.

ಭಾರತದ ಜನಪದ ಮಹಾಕಾವ್ಯಗಳ ಬಗ್ಗೆ ೧೯೭೦ರಿಂದಲೂ ಅಮೆರಿಕನ್ ಜಾನಪದ ವಿದ್ವಾಂಸರು ಅಭ್ಯಾಸ ಮಾಡುತ್ತಾ ಬಂದಿದ್ದಾರೆ. ಬ್ರೆಂಡಾ ಬೆಕ್ ಎಂಬ

ಮಹಿಳೆ ತಮಿಳುನಾಡಿನ ಅಣ್ಣನ್ಮಾರ್ ಕಥೈ ಬಗ್ಗೆ ಅಧ್ಯಯನ ಮಾಡಿ *The Three Twins* ಎಂಬ ಗ್ರಂಥವನ್ನು ೧೯೮೨ರಲ್ಲಿ ಪ್ರಕಟಿಸಿದ್ದಾರೆ. ತೆಲುಗು ಮೂಲದವರಾಗಿದ್ದು ಈಗ ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ದಕ್ಷಿಣ ಏಷ್ಯಾ ಅಧ್ಯಯನ ವಿಭಾಗದಲ್ಲಿ ತೆಲುಗು ಪ್ರಾಧ್ಯಾಪಕರಾಗಿರುವ ವಿ. ನಾರಾಯಣರಾವ್ ಅವರ ಮಾರ್ಗದರ್ಶನದಲ್ಲಿ ಜಿನೇ ರೋಗೇರ್ ಎಂಬ ಅಮೆರಿಕನ್ ವಿದ್ವಾಂಸರು ಪಾಲ್ನಾಡು ವೀರ ಚರಿತ್ರೆ ಎಂಬ ಮಹಾಕಾವ್ಯದ ಬಗ್ಗೆ ಮಹಾಪ್ರಬಂಧ ರಚಿಸಿ ಪಿಎಚ್.ಡಿ ಪದವಿ ಪಡೆದರು. ಆ ಗ್ರಂಥ ಕೂಡ ಪ್ರಕಟವಾಗಿದೆ. ಇದರ ನಂತರ ಭಾರತದ ಮತ್ತು ಅಮೆರಿಕದ ಜಾನಪದ ವಿದ್ವಾಂಸರು ವಿಸ್ಕಾನ್ಸಿನ್ ವಿಶ್ವವಿದ್ಯಾಲಯದಲ್ಲಿ ೧೯೮೨ರಲ್ಲಿ 'Oral Epics in India' ಎಂಬ ವಿಚಾರಸಂಕಿರಣವನ್ನು ನಡೆಸಿದರು. ಇದರಲ್ಲಿ ಭಾರತದಿಂದ ಜೀ.ಶಂ ಪರಮಶಿವಯ್ಯ, ವಿ. ನಾರಾಯಣರಾವ್, ಕೋಮಲ್ ಕೊಥಾರಿ, ಆರ್.ವಿ.ಎಸ್. ಸುಂದರಂ ಮೊದಲಾದ ವಿದ್ವಾಂಸರು, ಅಮೆರಿಕಾದ ಸ್ಟುವರ್ಟ್ ಬ್ಲಾಕ್‌ಬರ್ನ್, ಪೀಟರ್ ಜೆ. ಕ್ಲಾಸ್, ಜಾಯ್ಸ್ ಫ್ಲೂಕ್ಕಿಗರ್, ಸೂಸನ್ ವ್ಯಾಡ್ಲೇ, ಬ್ರೆಂಡಾ ಬೆಕ್ ಮೊದಲಾದ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದರು. ಈ ಪ್ರಬಂಧಗಳನ್ನು ಪರಿಷ್ಕರಿಸಿ ೧೯೮೯ರಲ್ಲಿ *Oral Epics in India* ಎಂಬ ಗ್ರಂಥವನ್ನೂ ಪ್ರಕಟಿಸಲಾಯಿತು. ಈ ಕೃತಿಗೆ ಸ್ಟುವರ್ಟ್ ಬ್ಲಾಕ್‌ಬರ್ನ್ ಅವರು ವಿದ್ವತ್ಪೂರ್ಣವಾದ ಪ್ರಸ್ತಾವನೆಯನ್ನು ಬರೆದಿದ್ದಾರೆ. ಭಾರತದ ಜನಪದ ಮಹಾಕಾವ್ಯಗಳ ಸ್ವರೂಪ, ಉದ್ದೇಶ, ರಚನೆ, ಈ ಮಹಾಕಾವ್ಯಗಳನ್ನು ಹಾಡುವ ಹಾಡುಗಾರರ ಜಾತಿ, ಬುಡಕಟ್ಟು, ಇವುಗಳಿಗಿರುವ ಪರಸ್ಪರ ಸಂಬಂಧಗಳು, ರಾಮಾಯಣ ಮತ್ತು ಮಹಾಭಾರತಗಳನ್ನು ಆಧರಿಸಿ ಸೃಷ್ಟಿಗೊಂಡಿರುವ ಜನಪದ ಮಹಾಕಾವ್ಯಗಳು, ಶಿಷ್ಟ ಮತ್ತು ಜನಪದ ಮಹಾಕಾವ್ಯಗಳ ಪರಸ್ಪರ ಸಂಬಂಧಗಳು ಇವುಗಳ ಬಗ್ಗೆ ಮುನ್ನುಡಿಯಲ್ಲಿಯೂ ಮತ್ತು ಈ ಗ್ರಂಥದಲ್ಲಿ ಸೇರ್ಪಡೆಯಾಗಿರುವ ಪ್ರಬಂಧದಲ್ಲಿಯೂ ವಿಚಾರ ಮಾಡಲಾಗಿದೆ. ಭಾರತದ ಜನಪದ ಮಹಾಕಾವ್ಯಗಳ ಕೆಲವು ಸಾಮಾನ್ಯ ಲಕ್ಷಣಗಳನ್ನು ಗುರುತಿಸಲು ಈ ಗ್ರಂಥದಲ್ಲಿ ಸಾಧ್ಯವಾಗಿದೆ. ಈ ಗ್ರಂಥದ ಇನ್ನೊಂದು ವೈಶಿಷ್ಟ್ಯವೆಂದರೆ ಜನಪದ ಮಹಾಕಾವ್ಯಗಳನ್ನು ಸೂಕ್ಷ್ಮವಾದ ಅಧ್ಯಯನಕ್ಕೆ ಒಳಪಡಿಸಿರುವುದು. ಸಂದರ್ಭಸಿದ್ಧಾಂತ (Contextual Theory), ಅನನ್ಯತೆ (identity)ಯ ಪರಿಕಲ್ಪನೆ ಮೊದಲಾದ ತಾತ್ವಿಕ ನಿಲುವುಗಳಿಂದ ಈ ಮಹಾಕಾವ್ಯಗಳ ಪಠ್ಯ (Text) ಮತ್ತು ಅವುಗಳ ರಚನೆ(Structure)ಯನ್ನು ಮಾತ್ರವಲ್ಲದೆ ಆಯಾ ಸಮಾಜದಲ್ಲಿ ಈ ಮಹಾಕಾವ್ಯಗಳು ವಹಿಸುವ ಪಾತ್ರ, ಕೇಳುಗರ ಮೇಲೆ ಬೀರುವ ಪ್ರಭಾವ ಮೊದಲಾದ ವಿಷಯಗಳನ್ನು ಅಭ್ಯಾಸ ಮಾಡಲಾಗಿದೆ. ೧೯೮೨ರವರೆಗೆ ಭಾರತದ ಜನಪದ ಮಹಾಕಾವ್ಯಗಳ ಬಗೆಗೆ ನಡೆದಿದ್ದ ಮತ್ತು ಇಂಗ್ಲಿಷ್‌ನಲ್ಲಿ ಲಭ್ಯವಾಗಿದ್ದ ಸಾಮಗ್ರಿಗಳ ಆಧಾರದ ಮೇಲೆ ಈ ಕೃತಿಯು ರಚಿತವಾಗಿದೆ. ಅಲ್ಲಿಂದೀಚೆಗೆ ಭಾರತದ ಅನೇಕ ಕಡೆಗಳಲ್ಲಿ ಆಯಾ ಭಾಷೆಗಳಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಅಧ್ಯಯನಗಳು ನಡೆದಿವೆ. ಆದರೆ ಇಂಗ್ಲಿಷಿನಲ್ಲಿ ಪ್ರಕಟವಾಗಿರುವುದು ಕಡಮೆ. ಈ ಬಗೆಯ ಅಧ್ಯಯನದಿಂದ ಸ್ಟುವರ್ಟ್ ಬ್ಲಾಕ್‌ಬರ್ನ್ ಅವರು ಒಂದು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ಅದು ಹೀಗಿದೆ: ಜನಪದ ಮಹಾಕಾವ್ಯ ಒಂದು ಜನಪದ ಗುಂಪಿನ ಸ್ವಯಂಪ್ರತಿಮೆ (Self-Image)

ಏನೆಂಬುದನ್ನು ತಿಳಿಸುತ್ತದೆ. ಆ ಗುಂಪಿನ ಇತಿಹಾಸದ ಯಾವುದೋ ಒತ್ತಡದ ಸ್ಥಿತಿಯಲ್ಲಿ ಹುಟ್ಟಿಕೊಂಡಿರಬೇಕು ಅಥವಾ ಒಂದು ವ್ಯವಸ್ಥೆಯಿಂದ ಇನ್ನೊಂದು ವ್ಯವಸ್ಥೆಗೆ ಆ ಸಮುದಾಯ ವರ್ಗಾವಣೆಗೊಳ್ಳುವ ಒತ್ತಡದ ಸಂಕ್ರಮಣಾವಸ್ಥೆಯಲ್ಲಿ ಈ ಮಹಾಕಾವ್ಯಗಳು ಹುಟ್ಟಿಕೊಳ್ಳುತ್ತವೆ. ಈ ಬಗೆಯ ಮಹಾಕಾವ್ಯಗಳ ರಚನೆಗೆ ಐತಿಹಾಸಿಕವಾದ ಆಧಾರಗಳು ದೊರಕುವ ಸಾಧ್ಯತೆಯೂ ಉಂಟು. ಉದಾಹರಣೆಗೆ ಅಲ್ಹಾ ಮತ್ತು ಪಾಲ್ನಾಡು ೧೨ನೆಯ ಶತಮಾನಕ್ಕೆ ಸಂಬಂಧಿಸಿದ ಕಥೆಗಳು. ಪಾಬೂಜಿ ೧೪ನೆಯ ಹಾಗೂ ಅಣ್ಣನ್ಮಾರ್ ಕಥೆ ೧೫ನೆಯ ಶತಮಾನದಲ್ಲಿ ರೂಪಗೊಂಡಿವೆ. “What Kalevala did for Finnish Nationalism in 19th Century, Oral epics continue to do for caste, language and regional groups in India today” - (*Oral Epics in India*.P.7) ಎಂಬ ಮಾತು ತುಂಬಾ ಮಹತ್ವಪೂರ್ಣವಾದುದು. ಇಂದು ಜನಪದ ಮಹಾಕಾವ್ಯಗಳು ಹೆಚ್ಚು ಮಹತ್ವ ಗಳಿಸಿಕೊಳ್ಳುತ್ತಿರುವುದಕ್ಕೆ ಕೇವಲ ಅಕಾಡೆಮಿಕ್ ಆಸಕ್ತಿಗಳು ಮಾತ್ರವಲ್ಲದೆ ಸಾಂಸ್ಕೃತಿಕ ರಾಜಕಾರಣದ ಈ ಅಂಶಗಳೂ ಕಾರಣವಾಗಿವೆ. ಈ ಎಲ್ಲಾ ಅಂಶಗಳನ್ನು ಒಳಗೊಂಡಿರುವ ಈ ಕೃತಿಗೆ ಐತಿಹಾಸಿಕವಾದ ಮಹತ್ವವಿದೆ.

ನವದೆಹಲಿಯ Indira Gandhi Centre for the Arts ಸಂಸ್ಥೆಯು ೧೯೯೭ರಲ್ಲಿ ಯುನೆಸ್ಕೊ ನೆರವಿನಿಂದ ನಡೆಸಿದ ವಿಚಾರ ಸಂಕಿರಣದ ಪ್ರಬಂಧಗಳು *Chanted Narratives: The living katha-vachana Tradition* ಎಂಬ ಕೃತಿರೂಪದಲ್ಲಿ ಪ್ರಕಟವಾಗಿವೆ. ಇದರಲ್ಲಿ ನಾಲ್ಕು ಭಾಗಗಳಿವೆ. ಇದರ ಸಂಪಾದಕರಾದ ಮಾಲಿ ಕೌಶಲ್ ಅವರ ಪ್ರಸ್ತಾವನೆ ಇದೆ. ಮೊದಲನೆಯ ಭಾಗದಲ್ಲಿ ಮೌಖಿಕ ಸಂಪ್ರದಾಯದ ಗುಣಲಕ್ಷಣಗಳ ಬಗ್ಗೆ ಹಾಗೂ ಸಂವಹನದ ಬಗ್ಗೆ ಲೇಖನಗಳಿವೆ. ಎರಡನೆಯ ಭಾಗದಲ್ಲಿ ಭಾರತದ ಜನಪದ ಮಹಾಕಾವ್ಯಗಳ ಸಂರಚನೆ ಹಾಗೂ ಸಾಮಾಜಿಕ ಆರ್ಥಿಕ ಸಂದರ್ಭಗಳನ್ನು ಕುರಿತ ವಿವಿಧ ಭಾರತೀಯ ಭಾಷೆಗಳ ವಿದ್ವಾಂಸರ ೯ ಲೇಖನಗಳಿವೆ. ಮೂರನೆಯ ಭಾಗದಲ್ಲಿ ಜನಪದ ಮಹಾಕಾವ್ಯಗಳ ಹಾಡುಗಾರರು, ಹಾಡುಗಾರಿಕೆ, ಹಾಗೂ ಶ್ರೋತೃಗಳ ಸಂಬಂಧಗಳನ್ನು ಕುರಿತು ವಿವಿಧ ಜನಪದ ಮಹಾಕಾವ್ಯಗಳನ್ನು ವಿಶ್ಲೇಷಿಸಿರುವ ೮ ಲೇಖನಗಳಿವೆ. ನಾಲ್ಕನೆಯ ಭಾಗದಲ್ಲಿ ನೇಪಾಳ ಮತ್ತು ಶ್ರೀಲಂಕಾ ಮಹಾಕಾವ್ಯಗಳ ಬಗ್ಗೆ ಒಂದೊಂದು ಲೇಖನವಿದೆ. ಇದರಲ್ಲಿ ನೇಪಾಳ, ಶ್ರೀಲಂಕಾ, ಇಂಡೋನೇಷಿಯಾ, ಫ್ರಾನ್ಸ್, ಜರ್ಮನಿ ದೇಶಗಳ ವಿದ್ವಾಂಸರು ಮಾತ್ರವಲ್ಲದೆ ಭಾರತದ ಹಿಂದಿ, ಭೋಜಪುರಿ, ಮಣಿಪುರಿ, ಆಸ್ಸಾಂ, ತಮಿಳು, ಕನ್ನಡ, ಒರಿಯಾ, ತೆಲುಗು ಭಾಷೆಗಳ ಜಾನಪದ ವಿದ್ವಾಂಸರು ಪ್ರಬಂಧಗಳನ್ನು ಮಂಡಿಸಿದ್ದಾರೆ. ಇದರಲ್ಲಿ ಜುಂಜಪ್ಪನ ಕಾವ್ಯದ ಬಗ್ಗೆ ನನ್ನ ಪ್ರಬಂಧವಿದೆ. ಭಾರತದ ವಿವಿಧ ಭಾಷೆಗಳ ಜನಪದ ಮಹಾಕಾವ್ಯಗಳ ಬಗ್ಗೆ ವಿಭಿನ್ನ ನೆಲೆಗಳಿಂದ ಭಾರತದ ಮತ್ತು ವಿದೇಶದ ಹಲವಾರು ವಿದ್ವಾಂಸರು ವಿಚಾರ ಮಾಡಿರುವುದು ಈ ಗ್ರಂಥದ ವೈಶಿಷ್ಟ್ಯವಾಗಿದೆ. ಈ ನಿಟ್ಟಿನಲ್ಲಿ ಇದೊಂದು ಮಹತ್ವದ ಕೃತಿಯಾಗಿದೆ.

ಚೆನ್ನೈನಲ್ಲಿರುವ Indian Folklore Support Centreನಿಂದ ಶಂಕರನಾರಾಯಣ ಡಿ. ಪೂಜಾರಿ ಅವರು ಮಾಡಿರುವ *ಕೋಟಿ ಚೆನ್ನಯ* ಮಹಾಕಾವ್ಯದ ಅನುವಾದ *Epic of the warriors,* ಮಹೇಂದ್ರಕುಮಾರ್ ಮಿಶ್ರ ಅವರ *Oral Epics of Kalahandi,* ಎಂ. ಎನ್. ವೆಂಕಟೇಶ ಅವರ *Mailaralinga Jaatre* ಪ್ರಕಟವಾಗಿವೆ.

೧.೪.೩ ಕರ್ನಾಟಕದ ಜನಪದ ಮಹಾಕಾವ್ಯಗಳ ಅಧ್ಯಯನ

ಕರ್ನಾಟಕದಲ್ಲಿ ಜಾನಪದ ಅಧ್ಯಯನ ಬಹಳಷ್ಟು ಕಾಲ ಬಿಡಿಗೀತೆಗಳು, ಕಥನ ಕಾವ್ಯಗಳು, ಲಾವಣಿಗಳು, ಕಥೆ, ಗಾದೆ, ಒಗಟು ಈ ಕ್ಷೇತ್ರಗಳಿಗೆ ಸೀಮಿತವಾಗಿತ್ತು. ಏಳುಕೊಳ್ಳದ ಎಲ್ಲಮ್ಮ ಎಂಬ ಕೃತಿಯಲ್ಲಿ ಶೀ ಮತಿಘಟ್ಟ ಕೃಷ್ಣಮೂರ್ತಿಯವರು ಸವದತ್ತಿ ಎಲ್ಲಮ್ಮನ ಕಾವ್ಯ ಹಾಗೂ ಸಂಪ್ರದಾಯದ ಕುರಿತು ಸ್ಥೂಲವಾಗಿ ಪ್ರಸ್ತಾಪಸಿದ್ದಾರೆ. ಅದನ್ನು ಬಿಟ್ಟರೆ *ಮಲೆ ಮಾದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಸವದತ್ತಿ ಎಲ್ಲಮ್ಮ* ಈ ಮಹಾಕಾವ್ಯಗಳ ಬಗ್ಗೆ ಸಂಗ್ರಹ ಮಾಡಿ, ಅದರ ಬಗ್ಗೆ ಸಂಶೋಧನಾತ್ಮಕವಾಗಿ ಕೆಲಸ ಮಾಡಿದ ಮೊದಲ ವಿದ್ವಾಂಸರೆಂದರೆ ಜೀ.ಶಂ. ಪರಮಶಿವಯ್ಯನವರೆಂದೇ ಹೇಳಬೇಕು. *ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು* ಎಂಬ ಅವರ ಮಹತ್ವದ ಕೃತಿಯಲ್ಲಿ ಅವರು ಈ ಧಾರ್ಮಿಕ ಸಂಪ್ರದಾಯಗಳ ಬಗ್ಗೆ ಮತ್ತು ಅದಕ್ಕೆ ಹೊಂದಿಕೊಂಡು ಬಂದಿರುವ ಮಹಾಕಾವ್ಯಗಳ ಬಗ್ಗೆ ಸಾಹಿತ್ಯಕ ಹಾಗೂ ಸಾಂಸ್ಕೃತಿಕ ದೃಷ್ಟಿಯಿಂದ ಅಭ್ಯಾಸ ಮಾಡಿದ್ದಾರೆ. ಹೀಗೆ ಮಾಡುವಾಗ ತಾವು ಸಂಗ್ರಹಿಸಿದ ಪಾಠಗಳನ್ನು ಮತ್ತು ಇತರರು ಸಂಗ್ರಹಿಸಿದ ಪಾಠಗಳನ್ನು ತೌಲನಿಕವಾಗಿ ಅಭ್ಯಾಸ ಮಾಡಿದ್ದಾರೆ. ಈ ಮಹಾಕಾವ್ಯಗಳ ಐತಿಹಾಸಿಕತೆ, ಇವುಗಳ ಮೂಲ, ಪ್ರಸರಣ, ಪಾಠಗಳ ಭಿನ್ನತೆ, ಅವುಗಳ ಕಾರಣಗಳು, ಆಯಾ ಧಾರ್ಮಿಕ ಸಂಪ್ರದಾಯಗಳು ಮತ್ತು ಆಯಾ ಮಹಾಕಾವ್ಯಗಳಿಗಿರುವ ಪರಸ್ಪರ ಸಂಬಂಧ ಮೊದಲಾದ ವಿಷಯಗಳ ಬಗ್ಗೆ ಗಂಭೀರವಾದ ಅಧ್ಯಯನ ನಡೆಸಿದ್ದಾರೆ. ಈ ದೃಷ್ಟಿಯಿಂದ ಕನ್ನಡ ಜನಪದ ಮಹಾಕಾವ್ಯಗಳ ಕ್ಷೇತ್ರದಲ್ಲಿ ಸಂಶೋಧನೆ ಮಾಡುವ ಯಾವ ವಿದ್ವಾಂಸರಿಗೂ ಇದು ಪ್ರಮುಖ ಆಕರ ಗ್ರಂಥವಾಗಿದೆ. ಜೀಶಂಪ ಅವರೇ ಮಂಟೇಸ್ವಾಮಿ ಕಾವ್ಯವನ್ನು ಪ್ರತ್ಯೇಕ ಪುಸ್ತಕ ರೂಪದಲ್ಲಿ ಪ್ರಕಟಿಸಿ ಅದಕ್ಕೆ ವಿದ್ವತ್ಪೂರ್ಣವಾದ ಮುನ್ನುಡಿಯನ್ನು ಬರೆದಿದ್ದಾರೆ. ಪಿ.ಕೆ.ರಾಜಶೇಖರ ಅವರು ಸುದೀರ್ಘವಾದ *ಮಲೆ ಮಾದೇಶ್ವರ* ಕಾವ್ಯವನ್ನು ಹಾಗೂ ಜನಪದ ಮಹಾಭಾರತವನ್ನು ಸಂಗ್ರಹಿಸಿ ವಿದ್ವತ್ಪೂರ್ಣ ಪೀಠಿಕೆಯೊಡನೆ ಪ್ರಕಟಿಸಿದ್ದಾರೆ. ಇದೂ ಕೂಡ ಮಹತ್ವದ ಸಾಧನೆಯೆಂದೇ ಹೇಳಬೇಕು. ರಾಗೌ ಮತ್ತು ಪಿ.ಕೆ.ರಾಜಶೇಖರ ಇಬ್ಬರೂ ಒಟ್ಟಾಗಿ ಸೇರಿ ಪ್ರಕಟಿಸಿರುವ ಜನಪದ ರಾಮಾಯಣ ಜನಪದ ಮಹಾಕಾವ್ಯಗಳ ಪಠ್ಯಕ್ಕೆ ಸಂಬಂಧಿಸಿದ ಆರಂಭಿಕ ಪ್ರಯತ್ನಗಳಾಗಿವೆ. ಈ ಬಗ್ಗೆ ಇನ್ನೂ ಹೆಚ್ಚಿನ ಕೆಲಸ ನಡೆಯಬೇಕಾಗಿದೆ. ವಿವೇಕ ರೈ ಅವರು ಮಂಗಳೂರು ವಿಶ್ವವಿದ್ಯಾಲಯದಲ್ಲಿ ೧೯೯೦ರಲ್ಲಿ ನಡೆಸಿದ 'Indian Oral Epics'ಎಂಬ ವಿಚಾರ ಸಂಕಿರಣ ಭಾರತದ ಮಹಾಕಾವ್ಯಗಳ ಬಗ್ಗೆ ನಡೆದಿರುವ ಗಂಭೀರವಾದ ಹಾಗೂ ಮಹತ್ವದ ಸಂಕಿರಣವಾಗಿದೆ.

ಲೌರಿ ಹಾಂಕೊ, ಪೀಟರ್ ಕ್ಲಾಸ್, ಬ್ಲಾಕ್‌ಬರ್ನ್ ಅವರು ಈ ವಿಚಾರ ಸಂಕಿರಣದಲ್ಲಿ ಪ್ರಮುಖ ಪಾತ್ರ ವಹಿಸಿದ್ದರು. ತೀ.ನಂ.ಶಂಕರನಾರಾಯಣ ಅವರು ಪ್ರದರ್ಶನ ಸಿದ್ಧಾಂತ ಹಾಗೂ ಅನನ್ಯತೆಯ ತಾತ್ವಿಕ ದೃಷ್ಟಿಕೋನಗಳಿಂದ ಸೂಕ್ಷ್ಮವಾದ ಅಭ್ಯಾಸಗಳನ್ನು ನಡೆಸಿದ್ದು ಅವರ ಸಂಶೋಧನಾ ಯೋಜನೆಯ ವರದಿ *The Epic of Junjappa: Text and Performance* ಎಂಬ ಪುಸ್ತಕ ರೂಪದಲ್ಲಿ ಪ್ರಕಟವಾಗಿದೆ. ೧೯೯೧-೯೩ರ ಕಾಲಾವಧಿಯಲ್ಲಿ ಉಡುಪಿಯ ಪ್ರಾದೇಶಿಕ ರಂಗ ಕಲೆಗಳ ಅಧ್ಯಯನ ಕೇಂದ್ರದ ಆರ್ಥಿಕ ನೆರವಿನಿಂದ ಈ ಯೋಜನೆಯನ್ನು ಕೈಗೊಂಡು, ಕ್ಷೇತ್ರಕಾರ್ಯದ ಮೂಲಕ ೩೦ ಜನ ಪುರುಷ ಕಲಾವಿದರಿಂದ ಹಾಗೂ ೨೦ ಜನ ಸ್ತ್ರೀ ಕಲಾವಿದರಿಂದ ಜುಂಜಪ್ಪನ ಕಾವ್ಯದ ವಿವಿಧ ಪಾಠಗಳನ್ನು ೨೫೦ ಗಂಟೆಗಳ ಆಡಿಯೋ ಟೇಪ್‌ಗಳಲ್ಲಿ ಸಂಗ್ರಹಿಸಲಾಗಿದೆ. ಈ ಪುಸ್ತಕದಲ್ಲಿ ಪ್ರಾದೇಶಿಕ ವ್ಯತ್ಯಾಸಗಳನ್ನು, ಲಿಂಗಭೇದದ ವ್ಯತ್ಯಾಸಗಳನ್ನು ಗುರುತಿಸಲಾಗಿದೆ. ೧೯೯೫ರಲ್ಲಿ ಹೂವಿನಹಡಗಲಿಯಲ್ಲಿ ನಡೆದ ಜಾನಪದ ವಿಚಾರ ಸಂಕಿರಣದಲ್ಲಿ ಜನಪದ ಮಹಾಕಾವ್ಯಗಳ ಬಗ್ಗೆ ಪ್ರಬಂಧಗಳು ಮಂಡಿತವಾಗಿದ್ದು ಆ ಬಗ್ಗೆ ಸಾಕಷ್ಟು ಚರ್ಚೆ ನಡೆದಿದೆ. ಸಾಹಿತ್ಯ ಅಕಾಡೆಮಿಯ ವತಿಯಿಂದ ೧೯೯೫ರ ಸೆಪ್ಟೆಂಬರ್ ೯ ಹಾಗೂ ೧೦ರಂದು ಗುಲ್ಬರ್ಗಾದಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಶಿಷ್ಟ ಮತ್ತು ಜನಪದ ಮಹಾಕಾವ್ಯಗಳ ಪರಸ್ಪರ ಸಂಬಂಧ ಸ್ವರೂಪಗಳ ಬಗ್ಗೆ ಕೆಲವು ಪ್ರಬಂಧಗಳು ಮಂಡಿತವಾದವು. ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ವಿಭಾಗದಿಂದ ಕನ್ನಡ ಜನಪದ ಮಹಾಕಾವ್ಯಗಳ ಬಗ್ಗೆ ಒಂದು ಅಧ್ಯಯನ ಯೋಜನೆಯನ್ನು ಹಾಕಿಕೊಂಡು ಅದರಲ್ಲಿ ಮಲೆ ಮಹದೇಶ್ವರ, ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಕುಮಾರ ರಾಮ, ಕೃಷ್ಣಗೊಲ್ಲರ ಕಾವ್ಯ ಮೊದಲಾದ ಧಾರ್ಮಿಕ ಸಂಪ್ರದಾಯಗಳು ಮತ್ತು ಮಹಾಕಾವ್ಯಗಳ ಬಗ್ಗೆ ಅಧ್ಯಯನ ನಡೆಯುತ್ತಿರುವುದು ಹಾಗೂ ಈ ವಿಶ್ವವಿದ್ಯಾಲಯದ ಬುಡಕಟ್ಟು ಅಧ್ಯಯನ ವಿಭಾಗದಿಂದ ಈ ಮಹಾಕಾವ್ಯಗಳ ದಾಖಲಾತಿ ಮತ್ತು ಪುಸ್ತಕ ಪ್ರಕಟಣೆಗಳು ಪ್ರಮುಖ ಬೆಳವಣಿಗೆಯಾಗಿದೆ. ಎ.ವಿ. ನಾವಡ ಅವರು ಸಂಪಾದಸಿದ ರಾಮಕ್ಕ ಮುಗ್ಗೇರ್ತಿ ಹಾಡಿದ *ಸಿರಿ ಪಾಡ್ದನ* ವನ್ನು ಕನ್ನಡ ವಿಶ್ವವಿದ್ಯಾನಿಲಯ ಪ್ರಕಟಿಸಿದೆ. ಮಹಿಳೆ ಹಾಡಿದ ಈ ಪಠ್ಯಕ್ಕೆ ತೌಲನಿಕ ಅಧ್ಯಯನದ ದೃಷ್ಟಿಯಿಂದ ವಿಶೇಷ ಮಹತ್ವವಿದೆ. ಜನಪದ ಮಹಾಕಾವ್ಯಗಳ ಬಗ್ಗೆ ಕರ್ನಾಟಕದಲ್ಲಿ ಜಾನಪದ ವಿದ್ವಾಂಸರು ಮತ್ರವಲ್ಲದೆ ಸಾಹಿತ್ಯ ವಿಮರ್ಶಕರೂ ವಿಶೇಷವಾದ ಆಸಕ್ತಿ ತೋರಿಸಿ ಅಧ್ಯಯನ ಮಾಡುತ್ತಿರುವುದು ಆರೋಗ್ಯಕರ ಬೆಳವಣಿಗೆಯಾಗಿದೆ. ವೆಂಕಟೇಶ ಇಂದ್ವಾಡಿ ಅವರು ಸಂಪಾದಿಸಿರುವ *ಮಂಟೇಸ್ವಾಮಿ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ* ೨೦೦೪ ಮತ್ತು *ಮಲೆಯ ಮಾದಪ್ಪನ ಕಾವ್ಯ : ಸಾಂಸ್ಕೃತಿಕ ಮುಖಾಮುಖಿ* ೨೦೦೮ ಈ ಎರಡು ಕೃತಿಗಳನ್ನೂ ವಿಶೇಷವಾಗಿ ಉಲ್ಲೇಖಿಸಬೇಕು. ಈ ಕೃತಿಗಳಲ್ಲಿ ಕರ್ನಾಟಕ ಜಾನಪದ ವಿದ್ವಾಂಸರು ಮಾತ್ರವಲ್ಲದೆ ಸಾಹಿತಿಗಳು, ಸಾಹಿತ್ಯವಿಮರ್ಶಕರು, ಸಂಸ್ಕೃತಿ ಚಿಂತಕರು ವಿಭಿನ್ನ ನೆಲೆಗಳಲ್ಲಿ ಈ ಎರಡೂ ಕೃತಿಗಳ ಬಗ್ಗೆ ಪ್ರಬಂಧಗಳನ್ನು ಮಂಡಿಸಿ ಚರ್ಚೆಗಳಲ್ಲಿ ಭಾಗವಹಿಸಿದ್ದಾರೆ. *ಮಂಟೇಸ್ವಾಮಿ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ* ಕೃತಿಯಲ್ಲಿ ಸಿದ್ದಲಿಂಗಯ್ಯ, ಡಿ.ಆರ್.ನಾಗರಾಜ್,

ಕಿ.ರಂ.ನಾಗರಾಜ, ಟಿ.ಎಸ್. ಸತ್ಯನಾಥ್, ಸಿ.ಎನ್. ರಾಮಚಂದ್ರನ್, ಶಿವರಾಮ ಪಡಿಕ್ಕಲ್, ತರೀಕೆರೆ ರಹಮತ್, ಬಂಜಗೆರೆ ಜಯಪ್ರಕಾಶ, ಕೃಷ್ಣಮೂರ್ತಿ ಹನೂರು, ಓ. ಎಲ್. ನಾಗಭೂಷಣಸ್ವಾಮಿ, ಕೋಟಿಗಾನಹಳ್ಳಿ ರಾಮಣ್ಣ ಅವರ ಲೇಖನಗಳಿವೆ. *ಮಲೆಯ ಮಾದಪ್ಪನ ಮಹಾಕಾವ್ಯ: ಸಾಂಸ್ಕೃತಿಕ ಮುಖಾಮುಖಿ* ಕೃತಿಯಲ್ಲಿ ಸಿ. ಎನ್.ರಾಮಚಂದ್ರನ್, ರಹಮತ್ ತರೀಕೆರೆ, ಬಂಜಗೆರೆ ಜಯಪ್ರಕಾಶ, ವಸು, ವೆಂಕಟೇಶ ಇಂದ್ವಾಡಿ, ಎಸ್. ಎಸ್. ಹಿರೇಮಠ, ಎಸ್. ವಿದ್ಯಾಶಂಕರ, ಮಹದೇವ, ಶಂಕನಪುರ, ಬಿ.ಎಸ್. ತಲ್ವಾಡಿ, ಬಸವರಾಜ ಕುಕ್ಕರಹಳ್ಳಿ, ಹಿ.ಚಿ. ಬೋರಲಿಂಗಯ್ಯ, ಕೇಶವನ್ ಪ್ರಸಾದ್ ಮತ್ತು ಗಾದೆಪ್ಪ ಅವರ ಲೇಖನಗಳಿವೆ. ಅಂತರ ಶಿಸ್ತಿನ ಅಧ್ಯಯನದಿಂದ ಕೂಡಿದ ಈ ಎರಡೂ ಗ್ರಂಥಗಳು ಮೌಲಿಕ ಕೃತಿಗಳಾಗಿವೆ. ಎ.ವಿ. ನಾವಡ ಮತ್ತು ಶ್ರೀಮತಿ ಗಾಯತ್ರಿ ನಾವಡ ಅವರ *ಕಾವ್ಯನಾಟ: ಪಠ್ಯ ಮತ್ತು ಪ್ರದರ್ಶನ*, ಕೃತಿಯು ಪ್ರದರ್ಶನ ಸಿದ್ಧಾಂತದ ಹಿನ್ನೆಲೆಯಲ್ಲಿ ಮಹಾಕಾವ್ಯವೊಂದರ ಅಧ್ಯಯನವಾಗಿದೆ. ವಾಮನ ನಂದಾವರ ಅವರು ದಕ್ಷಿಣ ಕನ್ನಡ ಜಿಲ್ಲೆಯ ಕೋಟಿ ಚೆನ್ನಯ ಧಾರ್ಮಿಕ ಸಂಪ್ರದಾಯ ಮತ್ತು ಮಹಾಕಾವ್ಯದ ಬಗ್ಗೆ ಮಹಾಪ್ರಬಂಧ ರಚಿಸಿ ಪಿಎಚ್.ಡಿ ಪದವಿ ಪಡೆದಿದ್ದಾರೆ. ಎಂ.ಎನ್.ವೆಂಕಟೇಶ ಅವರು ಮೈಲಾರಲಿಂಗ ಸಂಪ್ರದಾಯ ಹಾಗೂ ಮೈಲಾರಲಿಂಗ ಮಹಾಕಾವ್ಯವನ್ನು ಮೈಲಾರದ ಜಾತ್ರೆಯ ಹಿನ್ನೆಲೆಯಲ್ಲಿ ಅಭ್ಯಾಸ ಮಾಡಿ ಮೈಲಾರದ ಜಾತ್ರೆಗಳು ಎಂಬ ಪಿಎಚ್.ಡಿ. ಮಹಾಪ್ರಬಂಧ ರಚಿಸಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಭಾರತಿಯಲ್ಲಿ ಮಾರ್ಚಿ ೧೬-೧೭,೧೯೯೬ರಲ್ಲಿ ನಡೆದ 'ಕರ್ನಾಟಕ ಜನಪದ ಮಹಾಕಾವ್ಯಗಳು' ಎಂಬ ವಿಚಾರ ಸಂಕಿರಣದ ಪ್ರಬಂಧಗಳನ್ನು ಕರ್ನಾಟಕ ಜಾನಪದ ಅಕಾಡೆಮಿ ಪುಸ್ತಕ ರೂಪದಲ್ಲಿ ಪ್ರಕಟಿಸಿದೆ. ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಅಧ್ಯಯನ ವಿವರಣಾತ್ಮಕ, ಐತಿಹಾಸಿಕ ನೆಲೆಗಳನ್ನು ಮೀರಿ ಮಹಾಕಾವ್ಯಗಳ ಪಠ್ಯ, ಸಂದರ್ಭ, ಪ್ರದರ್ಶನ, ಅನನ್ಯತೆ, ಆಧುನೀಕರಣ, ವ್ಯಾಪಾರೀಕರಣ ಮೊದಲಾದ ಅನೇಕ ದೃಷ್ಟಿಗಳ ಸೂಕ್ಷ್ಮ ಅಧ್ಯಯನದ ಕಡೆಗೆ ವಾಲುತ್ತಿರುವುದು ಸ್ಪಷ್ಟವಾಗಿ ಕಂಡುಬಂದಿದೆ. ಒಟ್ಟಾರೆ ಹೇಳುವುದಾದರೆ ಕನ್ನಡದಲ್ಲಿ ಜನಪದ ಮಹಾಕಾವ್ಯಗಳ ಅಧ್ಯಯನಗಳು ಹೆಚ್ಚು ಪ್ರಬುದ್ಧವಾದ ನೆಲೆಗಳಲ್ಲಿ ನಡೆಯುತ್ತಿವೆ ಎಂದು ಹೇಳಬಹುದು.

ತೀ. ನಂ. ಶಂಕರನಾರಾಯಣ ಅವರ *ಜನಪದ ಮಹಾಕಾವ್ಯ* ಎಂಬ ಕೃತಿ ಜನಪದ ಮಹಾಕಾವ್ಯದ ಸ್ವರೂಪ ಆಧ್ಯಯನದ ಇತಿಹಾಸ, ಶಿಷ್ಟ ಮತ್ತು ಜನಪದ ಮಹಾಕಾವ್ಯಗಳ ಸ್ವರೂಪ ಲಕ್ಷಣ, ಮಹಾಕಾವ್ಯದ ಅಧ್ಯಯನದ ನೆಲೆಗಳು ಈ ವಿಷಯಗಳನ್ನು ಮಾತ್ರವಲ್ಲದೆ ಜುಂಜಪ್ಪನ ಕಾವ್ಯದ ಉದಾಹರಣೆಯೊಂದಿಗೆ ಅಧ್ಯಯನದ ನೆಲೆಗಳನ್ನು ಪರಿಚಯ ಮಾಡಿಕೊಡುವ ಕೃತಿಯಾಗಿದೆ.ಅಂಬಳಿಕೆ ಹಿರಿಯಣ್ಣ ಅವರ *ಜನಪದ ಮಹಾಕಾವ್ಯಗಳು* ಎಂಬ ಕೃತಿಯಲ್ಲಿ ಜನಪದ ಮಹಾಕಾವ್ಯಗಳ ಸ್ವರೂಪ, ಲಕ್ಷಣಗಳು, ರಾಚನಿಕ ಸ್ವರೂಪ ಇವುಗಳ ಬಗ್ಗೆ ವಿಚಾರ ಮಾಡಲಾಗಿದೆ. ಜಾಗತಿಕ ನೆಲೆಯಲ್ಲಿ ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಜನಪದ ಮಹಾಕಾವ್ಯದ ಅಧ್ಯಯನದ ಇತಿಹಾಸವನ್ನು ಕೊಡಲಾಗಿದೆ. ಮೂರನೆಯ ಭಾಗದಲ್ಲಿ ಬಿಯೊ ವುಲ್ಫ್, ರೋಲೆಂಡ್

ಹಾಗೂ ಕಲೆವಲ ಮೊದಲಾದ ಪಾಶ್ಚಾತ್ಯ ಮಹಾಕಾವ್ಯಗಳ ಪರಿಚಯ ಮಾಡಿಕೊಡಲಾಗಿದೆ ನಾಲ್ಕನೆಯ ಭಾಗದಲ್ಲಿ ಮಂಟೇಸ್ವಾಮಿ ಕಾವ್ಯವನ್ನು ವಿಭಿನ್ನ ನೆಲೆಗಳಲ್ಲಿ ಅಧ್ಯಯನ ಮಾಡಲಾಗಿದೆ. ಮುಂದಿನ ಭಾಗಗಳಲ್ಲಿ ಕರ್ನಾಟಕದ ಜನಪದ ಮಹಾಕಾವ್ಯಗಳ ವೈಶಿಷ್ಟ್ಯ ಹಾಗೂ ಸಂಪಾದನಾ ಕ್ರಮವನ್ನು ಕುರಿತು ವಿಚಾರ ಮಾಡಲಾಗಿದೆ.

ತೀ. ನಂ. ಶಂಕರನಾರಾಯಣ ಅವರು ಸಂಪಾದಿಸಿರುವ *ಕರ್ನಾಟಕ ಜನಪದ ಮಹಾಕಾವ್ಯಗಳು* ಕುವೆಂಪು ವಿ.ವಿಯಲ್ಲಿ ನಡೆದ ಒಂದು ವಿಚಾರ ಸಂಕಿರಣದ ಪ್ರಬಂಧಗಳ ಸಂಕಲನ. ಇದು ಸಂಪಾದಕರ ಪ್ರಸ್ತಾವನೆ, ವಿವೇಕ ರೈ ಅವರ ಆಶಯ ಭಾಷಣ, ಎಚ್. ಜೆ. ಲಕ್ಕಪ್ಪ ಗೌಡರ ಆಧ್ಯಕ್ಷ ಭಾಷಣಗಳನ್ನು ಒಳಗೊಂಡಿದೆ. ಈ ಗ್ರಂಥದಲ್ಲಿ ಕನ್ನಡ ಜನಪದ ಮಹಾಕಾವ್ಯಗಳಿಗೆ ಸಂಬಂಧಿಸಿದ ಏಳು ಲೇಖನಗಳಿವೆ. ಸಿ.ಪಿ.ಕೆ. ಅವರು ಜನಪದ ಮಹಾಕಾವ್ಯಗಳ ಲಕ್ಷಣ ಮತ್ತು ಸ್ವರೂಪ ಹಾಗೂ ವಾಮನ ನಂದಾವರ ಅವರು ಜನಪದ ಮಹಾಕಾವ್ಯಗಳ ಆಧ್ಯಯನದ ಸಮೀಕ್ಷೆ ಮಾಡಿದ್ದಾರೆ. ಓ.ಎಲ್. ನಾಗಭೂಷಣಸ್ವಾಮಿ, ಚಂದ್ರು ಕಾಳೇನಹಳ್ಳಿ, ಮೀರಾಸಾಬಿಹಳ್ಳಿ ಶಿವಣ್ಣ, ಎಂ.ಬಿ. ನೇಗಿನಹಾಳ, ಪಿ.ಕೆ. ರಾಜಶೇಖರ ಅವರು ಕ್ರಮವಾಗಿ ಮಲೆಯ ಮಾದೇಶ್ವರ, *ಮಂಟೇಸ್ವಾಮಿ, ಜುಂಜಪ್ಪ, ಮೈಲಾರಲಿಂಗ, ಜನಪದ ರಾಮಾಯಣ*, ಮತ್ತು ಜನಪದ ಮಹಾಭಾರತ ಕೃತಿಗಳ ಬಗ್ಗೆ ವಿಚಾರ ಮಾಡಿದ್ದಾರೆ. ಕೊಡವ ಜನಪದ ಮಹಾಕಾವ್ಯಗಳ ಬಗ್ಗೆ ತಂಬಂಡ ವಿಜಯ ಪೂಣಚ್ಚ ಹಾಗೂ ತುಳು ಜನಪದ ಮಹಾಕಾವ್ಯಗಳ ಬಗ್ಗೆ ಕೆ. ಚಿನ್ನಪ್ಪಗೌಡ ವಿಚಾರ ಮಾಡಿದ್ದಾರೆ. ಈ ಮೂರೂ ಕೃತಿಗಳು ಜನಪದ ಮಹಾಕಾವ್ಯಗಳ ಅಧ್ಯಯನಕ್ಕೆ ಉಪಯುಕ್ತ ಪ್ರವೇಶಿಕೆಯನ್ನು ಒದಗಿಸುತ್ತವೆ.

ಕನ್ನಡ ಜನಪದ ಮಹಾಕಾವ್ಯಗಳನ್ನು ಮಾತ್ರವಲ್ಲದೆ ಭಾರತದ ಹಾಗೂ ಜಗತ್ತಿನ ಜನಪದ ಮಹಾಕಾವ್ಯಗಳ ಪರಿಚಯ ಹಾಗೂ ವಿಮರ್ಶಾತ್ಮಕ ಸಮೀಕ್ಷೆಯನ್ನು ಸಿ. ಎನ್. ರಾಮಚಂದ್ರನ್ ಅವರ *ಹೊಸಮಡಿಯ ಮೇಲೆ ಚದುರಂಗ* ಎಂಬ ಗ್ರಂಥದಲ್ಲಿ ಕಾಣಬಹುದು. ಇದರಲ್ಲಿ ೫ ವಿಭಾಗಗಳಿವೆ. ಪ್ರಸ್ತಾವನೆಯನ್ನು ಒಳಗೊಂಡಿರುವ ಮೊದಲನೆಯ ಅಧ್ಯಾಯದಲ್ಲಿ ಜನಪದ ಮಹಾಕಾವ್ಯಗಳು ಮತ್ತು ಶಿಷ್ಟ ಮಹಾಕಾವ್ಯಗಳು, ಗಾಯಕರು ಮತ್ತು ಪ್ರದರ್ಶನ, ನಿಯೋಗಗಳು, ಕಥನ ಸಾಮರ್ಥ್ಯ ಈ ವಿಷಯಗಳನ್ನು ಕುರಿತು ಪ್ರತಿಪಾದನೆ ಮಾಡಲಾಗಿದೆ. ಎರಡನೆಯ ಅಧ್ಯಾಯದಲ್ಲಿ ಮೌಖಿಕ ಕಾವ್ಯಗಳ ಕುರಿತು ವಿಚಾರ ಮಾಡಲಾಗಿದೆ. ಮೂರನೆಯ ಅಧ್ಯಾಯದಲ್ಲಿ ಮಲೆಯ ಮಾದೇಶ್ವರ, *ಮಂಟೇಸ್ವಾಮಿ, ಹಾಲುಮತ ಮಹಾಕಾವ್ಯ, ಜುಂಜಪ್ಪ*, ಕುಮಾರರಾಮ, ಕೃಷ್ಣಗೊಲ್ಲರ ಕಾವ್ಯ, *ಮೈಲಾರಲಿಂಗ* ಈ ಕನ್ನಡ ಜನಪದ ಮಹಾಕಾವ್ಯಗಳ ಬಗ್ಗೆ ಬರೆದಿದ್ದಾರೆ. ತುಳುವಿನ *ಸಿರಿಪಾಡ್ದನ*, ತೆಲುಗಿನ *ಪಾಲ್ನಾಟಿ ವೀರುಲ ಕಥಾ*, ತಮಿಳಿನ *ಅಣ್ಣನ್ಮಾರ್ ಕಥೈ*, ರಾಜಾಸ್ಥಾನದ *ಪಾಬೂಜಿ*, ಅವಧಿ ಭಾಷೆಯ *ಚನ್ಯೆನಿ* ಈ ಭಾರತೀಯ ಜನಪದ ಮಹಾಕಾವ್ಯಗಳನ್ನು ಕುರಿತು ವಿಚಾರ ಮಾಡಿದ್ದಾರೆ. ನಾಲ್ಕನೆಯ ಅಧ್ಯಾಯ ಮಧ್ಯ ಏಷ್ಯಾ, ಮಧ್ಯ ಪ್ರಾಚ್ಯ ಮತ್ತು ಯೂರೋಪಿನ ಮೌಖಿಕ ಮಹಾಕಾವ್ಯಗಳನ್ನು ಕುರಿತದ್ದಾಗಿದೆ. ಇದರಲ್ಲಿ ಟಿಬೆಟನ್ ಭಾಷೆಯ *ಗೆಸರ್ ರಾಜ*, ಅರಾಬಿಕ್ ಭಾಷೆಯ *ಅಂತರ್*, ಕಿರ್ಗಿಜ್

ಭಾಷೆಯ ಮನಸ್, ಫಿನ್ನಿಷ್ ಭಾಷೆಯ ಕಲೆವಲ, ಮಾಲಿ ಭಾಷೆಯ ಸುನ್ ಜಾತಾ, ಉತ್ತರ ಅಮೆರಿಕೆಯ ಮೊಹಾವೆ ಮಹಾಕಾವ್ಯ, ಜಪಾನಿ ಭಾಷೆಯ ಐನು; ಕೋಟನ್, ಉಟುನ್ಯೆ ಈ ಮಹಾಕಾವ್ಯಗಳನ್ನು ಕುರಿತು ವಿಚಾರ ಮಾಡಲಾಗಿದೆ. ಸಮಾರೋಪದಲ್ಲಿ ವಿಶ್ವಾತ್ಮಕ ನೆಲೆಯಲ್ಲಿ ಭಾರತೀಯ ಮಹಾಕಾವ್ಯಗಳ ವೈಶಿಷ್ಟ್ಯಗಳನ್ನು ಹಾಗೂ ಬದಲಾದ ನಿಯೋಗಗಳನ್ನು ಕುರಿತು ವಿಚಾರ ಮಾಡಲಾಗಿದೆ. ಸಿ.ಎನ್. ರಾಮಚಂದ್ರನ್ ಅವರ ಈ ಕೃತಿ ಜನಪದ ಮಹಾಕಾವ್ಯಗಳ ತೌಲನಿಕ ಅಧ್ಯಯನಕ್ಕೆ ಮಹತ್ವದ ಕೊಡುಗೆಯಾಗಿದೆ. ಇವರು ಮಲೆಯ ಮಾದೇಶ್ವರ ಮಹಾಕಾವ್ಯವನ್ನು ಇಂಗ್ಲಿಷಿಗೆ ಅನುವಾದ ಮಾಡುವುದರ ಮೂಲಕ ಕನ್ನಡ ಜನಪದ ಮಹಾಕಾವ್ಯ ಒಂದನ್ನು ಮೊದಲ ಬಾರಿಗೆ ಜಗತ್ತಿಗೆ ಪರಿಚಯಿಸಿದ್ದಾರೆ. ಹಾಗೆಯೇ ಈ ಕೃತಿಯ ಮೂಲಕ ಜಗತ್ತಿನ ಮಹಾಕಾವ್ಯಗಳನ್ನು ಕನ್ನಡಕ್ಕೆ ಪರಿಚಯಿಸಿದ್ದಾರೆ. ಇಂಗ್ಲಿಷ್ ಪ್ರಾಧ್ಯಾಪಕರು ಮತ್ತು ಕನ್ನಡದ ಸಾಹಿತ್ಯ ವಿಮರ್ಶಕರಾದ ಸಿ.ಎನ್. ರಾಮಚಂದ್ರನ್ ಅವರು ಕನ್ನಡಕ್ಕೆ ತುಂಬಾ ಮಹತ್ವಪೂರ್ಣವಾದ ಕೊಡುಗೆಯನ್ನು ನೀಡಿದ್ದಾರೆ.

ಕನ್ನಡ ವಿಶ್ವವಿದ್ಯಾನಿಲಯದಿಂದ ಜುಂಜಪ್ಪ ಮಹಾಕಾವ್ಯವನ್ನು ಪ್ರಕಟಿಸಲಾಗಿದೆ. ಚಲುವರಾಜು ಇದರ ಸಂಪಾದಕರು. ೭೦೦ ಪುಟಗಳ ಈ ಮಹಾಕಾವ್ಯದ ಪ್ರಕಟಣೆಯಿಂದಾಗಿ ಜುಂಜಪ್ಪ ಕಾವ್ಯ ಮೊದಲ ಬಾರಿಗೆ ಕನ್ನಡ ಜನತೆಗೆ ಲಭ್ಯವಾಗಿದೆ. ಇದರಲ್ಲಿ ಹಿ.ಚಿ. ಬೋರಲಿಂಗಯ್ಯ ಅವರು ಮಾಡಿರುವ ಹಾಡುಗಾರರ ಸಂದರ್ಶನ ಉಪಯುಕ್ತವಾಗಿದೆ. ಶ್ರೀ ದಾಸಪ್ಪ ಎಂಬ ಕಲಾವಿದರು ಹಾಡಿರುವ ಈ ಮಹಾಕಾವ್ಯ ಉಪಯುಕ್ತ ಕೊಡುಗೆಯಾಗಿದೆ. ಆದರೆ ಇದು ಇನ್ನೂ ವ್ಯವಸ್ಥಿತವಾಗಿ ಸಂಪಾದಿತವಾಗಬೇಕಾದ ಅಗತ್ಯವಿತ್ತು. ಇದರಲ್ಲಿ ಜುಂಜಪ್ಪನ ಕಥೆಗೆ ಸಂಬಂಧ ಪಡದ ಚಿತ್ರಲಿಂಗ ಮೊದಲಾದ ಕಥೆಗಳು ಸೇರ್ಪಡೆಯಾಗುವ ಅಗತ್ಯವಿರಲಿಲ್ಲ. ಇದಕ್ಕೆ ಸಂಬಂಧಿಸಿದಂತೆ ಮೀರಾಸಾಬಿಹಳ್ಳಿ ಶಿವಣ್ಣ ಅವರು ವಿವರವಾದ ಹಾಗೂ ಸಮರ್ಪಕವಾದ ವಿಮರ್ಶೆಮಾಡಿದ್ದಾರೆ.

ಚಿಕ್ಕಣ್ಣ ಎಣ್ಣೆಕಟ್ಟೆ ಅವರು ಕಾಡುಗೊಲ್ಲರ ಬಗ್ಗೆ ಮತ್ತು ಜುಂಜಪ್ಪನ ಕಾವ್ಯದ ಬಗ್ಗೆ ಕ್ಷೇತ್ರಕಾರ್ಯ ಮಾಡಿರುವ ವಿದ್ವಾಂಸರು. ಇವರು ಹತ್ತು ಜನ ಕಲಾವಿದರಿಂದ ಜುಂಜಪ್ಪನ ಕಾವ್ಯವನ್ನು ಸಂಗ್ರಹಿಸಿದ್ದಾರೆ. ಯಾವ ಕಲಾವಿದರೂ ಜುಂಜಪ್ಪನ ಕಾವ್ಯವನ್ನು ಪೂರ್ಣವಾಗಿ ಹಾಡದಿರುವುದರಿಂದ ಅಥವಾ ಕಥೆಯಾಗಿ ಹೇಳದೇ ಇರುವುದರಿಂದ ಇವರು ಒಬ್ಬೊಬ್ಬರಿಂದ ಕೆಲವು ಭಾಗಗಳನ್ನು ತೆಗೆದುಕೊಂಡು ಜುಂಜಪ್ಪನ ಕಥೆಯನ್ನು ಸರಳವಾಗಿ ಬರೆದಿದ್ದಾರೆ. ಜುಂಜಪ್ಪನ ಕಾವ್ಯವು ಗದ್ಯ, ಪದ್ಯ ಮತ್ತು ಗದ್ಯ ಪದ್ಯಗಳಿಂದ ಕೂಡಿದ ಚಂಪು ಈ ಮೂರೂ ವಿಧಗಳಲ್ಲಿಯೂ ದೊರೆಯುತ್ತವೆ. *ವೀರ ಜುಂಜಪ್ಪ: ಸಮಗ್ರ ಕಥಾವಳಿ* ಎಂಬ ಗ್ರಂಥವನ್ನು ಚಿಕ್ಕಣ್ಣ ಎಣ್ಣೆಕಟ್ಟೆ ಅವರು ಶಾಲಾ ಮಕ್ಕಳಿಗೆ ಹಾಗೂ ಆಸಕ್ತ ಓದುಗರಿಗೆ ಸರಳವಾಗಿ ಕಥೆಯ ರೂಪದಲ್ಲಿ ಬರೆದಿದ್ದಾರೆ. ಜುಂಜಪ್ಪನ ಕಾವ್ಯವನ್ನು ಜನಪ್ರಿಯಗೊಳಿಸುವಲ್ಲಿ ಇದೊಂದು ಉಪಯುಕ್ತವಾದ ಪ್ರಯತ್ನವಾಗಿದೆ.

ಮೀರಾಸಾಬಿಹಳ್ಳಿ ಶಿವಣ್ಣ ಅವರು ಕಾಡುಗೊಲ್ಲರು ವಾಸವಾಗಿರುವ ತುಮಕೂರು, ಚಿತ್ರದುರ್ಗ, ಮತ್ತು ಬಳ್ಳಾರಿ ಜಿಲ್ಲೆಗಳಲ್ಲಿ ವ್ಯಾಪಕವಾಗಿ ಹಲವಾರು ವರ್ಷಗಳ ಕಾಲ ಕ್ಷೇತ್ರಕಾರ್ಯ ಮಾಡಿ ಕಾಡುಗೊಲ್ಲರ ಬುಡಕಟ್ಟು ವೀರರು ಎಂಬ ಸಂಶೋಧನಾತ್ಮಕ ಕೃತಿಯನ್ನು ಪ್ರಕಟಿಸಿದ್ದಾರೆ. ಇದರಲ್ಲಿ ಕಾಡುಗೊಲ್ಲರ ಸಂಸ್ಕೃತಿಯ ಬಗ್ಗೆ, ಭಾರತದಲ್ಲಿ ಹಾಗೂ ಕರ್ನಾಟಕದಲ್ಲಿ ಸಾಂಸ್ಕೃತಿಕ ವೀರರ ಪರಂಪರೆಯ ಬಗ್ಗೆ, ಕಾಡುಗೊಲ್ಲರ ಪ್ರಧಾನ ಹಾಗೂ ಇತರ ವೀರರು ಮತ್ತು ವೀರ ಮಹಿಳೆಯರ ಬಗ್ಗೆ ವಿಚಾರ ಮಾಡಿದ್ದಾರೆ. ಈರಗಾರರು ಮತ್ತು ಈರಗಾತಿಯರ ಬಗ್ಗೆ ಲಭ್ಯವಿರುವ ಕಥನ ಗೀತೆಗಳನ್ನು ಸಂಗ್ರಹಿಸಿ, ಅವುಗಳ ಆಧಾರದ ಮೇಲೆ ಅವರ ವ್ಯಕ್ತಿ ಚಿತ್ರಗಳನ್ನು ಕಟ್ಟಿಕೊಟ್ಟಿದ್ದಾರೆ. ಕಾಡುಗೊಲ್ಲರ ಮೊದಲ ಸಾಂಸ್ಕೃತಿಕ ವೀರನಾದ ಎತ್ತಪ್ಪನ ಧಾರ್ಮಿಕ ಕೇಂದ್ರಗಳು ಹಾಗೂ ಸಂಪ್ರದಾಯಗಳು ಮತ್ತು ನಂಬಿಕೆಗಳ ಬಗ್ಗೆ ವಿಚಾರಮಾಡಿರುವುದು ಮಾತ್ರವಲ್ಲದೆ ಎತ್ತಪ್ಪನ ಬಗ್ಗೆ ಹಾಡುಗಾರರು ಹಾಡುವ ಖಂಡಕಾವ್ಯದ ಭಿನ್ನ ಪಾಠಗಳನ್ನು ಸಂಗ್ರಹಿಸಿ ಅದನ್ನು ವಿಮರ್ಶಾತ್ಮಕವಾಗಿ ಪರಿಚಯಿಸಿದ್ದಾರೆ. ಜುಂಜಪ್ಪನ ಸಂಪ್ರದಾಯದ ಬಗ್ಗೆ ವಿವರವಾಗಿ ಈ ಗ್ರಂಥದಲ್ಲಿ ವಿಚಾರಮಾಡಿದ್ದಾರೆ. ಜುಂಜಪ್ಪನ ಹೆಸರು, ಜುಂಜಪ್ಪನ ಐತಿಹಾಸಿಕತೆ, ಧಾರ್ಮಿಕ ಕೇಂದ್ರಗಳು, ಜುಂಜಪ್ಪನ ಕಾವ್ಯದಲ್ಲಿ ಮುಖ್ಯವಾಗುವ ಮಾರನವರ ಗೊಲ್ಲರು, ಅಳುವಿನವರ ಒಕ್ಕಲಿಗರು, ಕಂಬೇರಗೊಲ್ಲರ ಸಂಬಂಧಗಳ ಬಗ್ಗೆ ವಿಚಾರ ಮಾಡಿದ್ದಾರೆ. ಜುಂಜಪ್ಪನ ಕಾವ್ಯವನ್ನು ವಿವಿಧ ಹಾಡುಗಾರರಿಂದ ಸಂಗ್ರಹಿಸಿ, ಅವುಗಳೆಲ್ಲವುಗಳನ್ನು ಬಳಸಿಕೊಂಡು, ಮಿಶ್ರ ಸ್ವರೂಪದ ಪಠ್ಯದ ಸಂಗ್ರಹ ರೂಪವನ್ನು ಕೊಟ್ಟಿದ್ದಾರೆ. ಜುಂಜಪ್ಪನ ಕಾವ್ಯದ ಸಾಂಸ್ಕೃತಿಕ ಪದಗಳಿಗೆ ವಿವರಣೆ ನೀಡಿದ್ದಾರೆ. ಜುಂಜಪ್ಪನ ಮರಣೋತ್ತರ ಸಾಹಸದ ಪ್ರಸಂಗಗಳಾದ ಜುಂಜಪ್ಪನ ಗಂಗಾಸ್ನಾನದ ಪ್ರಸಂಗ, ಗಿಡ್ಡೀರೇಗೌಡನ ಪ್ರಸಂಗ, ಪೂಜಾರಿ ಚಿತ್ತಯ್ಯನನ್ನು ಕೆಂಡ ಕೊಂಡ ಮಾಡಿದ ಪ್ರಸಂಗಗಳನ್ನು ಪರಿಚಯ ಮಾಡಿಕೊಟ್ಟಿದ್ದಾರೆ. ಜುಂಜಪ್ಪನ ಕಾವ್ಯದಲ್ಲಿ ಬರುವ ಸ್ಥಳಗಳ ಬಗ್ಗೆ ಸಂಶೋಧನೆ ಮಾಡಿದ್ದಾರೆ. ಜುಂಜಪ್ಪನ ಕಾವ್ಯದ ಸಾಹಿತ್ಯಕ ಮೌಲ್ಯದ ಬಗ್ಗೆ ವಿಚಾರ ಮಾಡಿದ್ದಾರೆ. ಒಟ್ಟಾರೆ ಹೇಳುವುದಾದರೆ ಇದು ಎತ್ತಪ್ಪ ಮತ್ತು ಜುಂಜಪ್ಪ ಕಾವ್ಯಗಳ ಬಗ್ಗೆ ಹಾಗೂ ಇವುಗಳ ಧಾರ್ಮಿಕ, ಸಾಂಸ್ಕೃತಿಕ ಪರಂಪರೆಗಳ ಬಗ್ಗೆ ಪ್ರಕಟವಾಗಿರುವ ಮೌಲಿಕ ಸಂಶೋಧನಾತ್ಮಕ ಕೃತಿಯಾಗಿದೆ.

ಜುಂಜಪ್ಪ ಕಾವ್ಯ ಸೃಜನಶೀಲ ಲೇಖಕರ ಗಮನವನ್ನೂ ಸೆಳೆದಿದೆ. ಚಂದ್ರು ಕಾಳೇನಹಳ್ಳಿ ಹಾಗೂ ಸಿದ್ದಲಿಂಗಯ್ಯ ಕಂಬಾಳು ಅವರು ಜುಂಜಪ್ಪನನ್ನು ಕುರಿತು ಒಂದೊಂದು ನಾಟಕವನ್ನು ಬರೆದಿದ್ದಾರೆ.

೧.೫. ಕಾಡುಗೊಲ್ಲರು

ಕರ್ನಾಟಕದ ತುಮಕೂರು, ಚಿತ್ರದುರ್ಗ, ಬಳ್ಳಾರಿ ಈ ಜಿಲ್ಲೆಗಳಲ್ಲಿ ಹಾಗೂ ಆಂಧ್ರಪ್ರದೇಶದ ಮಡಕಸಿರಾ, ಕಲ್ಯಾಣದುರ್ಗ ಹಾಗೂ ರಾಯದುರ್ಗ ತಾಲ್ಲೂಕುಗಳಲ್ಲಿ ವಾಸವಾಗಿರುವ ಮೂರು ಲಕ್ಷಕ್ಕೂ ಹೆಚ್ಚಿನ ಸಂಖ್ಯೆಯಲ್ಲಿರುವ ಕಾಡುಗೊಲ್ಲರು ಎಂಬ

ಹಿಂದುಳಿದ ಬುಡಕಟ್ಟಿನ ಸಾಂಸ್ಕೃತಿಕ ವೀರ ಹಾಗೂ ಆರಾಧ್ಯದೈವ ಜುಂಜಪ್ಪ. ಈ ಜುಂಜಪ್ಪನ ಹಬ್ಬ, ಜಾತ್ರೆಗಳು ನಡೆಯುತ್ತವೆ. ಹಾಗೆಯೇ ಒಂದು ಸುದೀರ್ಘವಾದ ಪುರಾಣ ಸ್ವರೂಪದ ಜನಪದ ಮಹಾಕಾವ್ಯ ರೂಪುಗೊಂಡಿದೆ. ಅನೇಕ ಗಂಡಸರು ಮತ್ತು ಹೆಂಗಸರು ಹಾಡುಗಾರರು ಹಾಡುವ ಈ ಮಹಾಕಾವ್ಯ ಈಗಲೂ ಜೀವಂತವಾಗಿದೆ.

ಮೂಲತಃ ಗೋಪಾಲಕರಾಗಿದ್ದ ಗೊಲ್ಲರಲ್ಲಿ ಕಾಡುಗೊಲ್ಲರು ಮತ್ತು ಊರು ಗೊಲ್ಲರು ಎಂಬ ಎರಡು ಪ್ರಭೇದಗಳಿವೆ. ಕಾಡುಗೊಲ್ಲರ ಮಾತೃಭಾಷೆ ಕನ್ನಡ; ಊರುಗೊಲ್ಲರ ಮಾತೃಭಾಷೆ ತೆಲುಗು. ಕಾಡುಗೊಲ್ಲರು ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ. ಕಾಡುಗೊಲ್ಲರು ಊರುಗಳಿಂದ ದೂರದಲ್ಲಿ ಕಾಡಿನಲ್ಲಿ ಪ್ರತ್ಯೇಕವಾಗಿ ಹಟ್ಟಿಗಳನ್ನು ಕಟ್ಟಿಕೊಂಡು ವಾಸಮಾಡುತ್ತಾ ತಮ್ಮ ವಿಶಿಷ್ಟ ಸಂಸ್ಕೃತಿಯನ್ನು ಉಳಿಸಿಕೊಂಡಿದ್ದಾರೆ. ಊರುಗೊಲ್ಲರು ಊರುಗಳಲ್ಲಿ ವಾಸಮಾಡುವುದರಿಂದ ಇತರ ಜಾತಿಯ ಜನಗಳೊಡನೆ ಸೇರಿಹೋಗಿದ್ದಾರೆ. ಊರುಗೊಲ್ಲರು ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಮುಂದುವರಿದವರಾದರೆ ಕಾಡುಗೊಲ್ಲರು ಹಿಂದುಳಿದವರಾಗಿದ್ದು, ಹಿಂದುಳಿದ ಬುಡಕಟ್ಟುಗಳ ಪಟ್ಟಿಯಲ್ಲಿ ಸೇರುತ್ತಾರೆ.

ಕಾಡುಗೊಲ್ಲರಲ್ಲಿರುವ ಉಪವರ್ಗಗಳನ್ನು 'ಬೆಡಗು' ಎಂದು ಕರೆಯುತ್ತಾರೆ. ಅವರಲ್ಲಿ ಚಿತ್ತಮುತ್ತಿ ಕುಲದವರು, ಚಂದಮುತ್ತಿ ಕುಲದವರು, ರಾಮೇಗೌಡನ ಕುಲದವರು ಎಂಬ ಪ್ರಮುಖವಾದ ಮೂರು ವಿಭಾಗಗಳಿದ್ದು, ಈ ಒಂದೊಂದು ವಿಭಾಗದಲ್ಲಿಯೂ ಕೆಲವಾರು ಬೆಡಗುಗಳಿವೆ. ಚಿತ್ತಮುತ್ತಿ ಕುಲದವರಲ್ಲಿ ಕರಡಿಗೊಲ್ಲರು ಮತ್ತು ಮಾರನವರ ಗೊಲ್ಲರು ಎಂಬ ಎರಡು ಬೆಡಗುಗಳೂ ಚಂದಮುತ್ತಿ ಕುಲದವರಲ್ಲಿ ಅಜ್ಜಿಯವರು, ಸನ್ನರು, ಸೋಮನವರು, ಬೊಮ್ಮನವರು ಮೊದಲಾದ ಬೆಡಗುಗಳೂ ರಾಮೇಗೌಡನ ಕುಲದವರಲ್ಲಿ ಅರೇನವರು, ಮೆರೇನವರು, ಕಂಬಿಯವರು, ಕಹಳೆಯವರು ಮೊದಲಾದ ಬೆಡಗುಗಳೂ ಇವೆ. ಇವುಗಳಲ್ಲಿ ಕರಡಿಗೊಲ್ಲರು, ಮಾರನವರ ಗೊಲ್ಲರು ಜುಂಜಪ್ಪ, ಎತ್ತಪ್ಪ, ಚಿತ್ರದೇವರು ಎಂಬ ದೇವತೆಗಳನ್ನೂ ಇತರ ಬೆಡಗುಗಳ ಗೊಲ್ಲರು ಕೇತೇದೇವರು, ಪಾತೇದೇವರು, ಕಾಟಮದೇವರು, ಭೂತಪ್ಪ, ಗೌರಸಂದ್ರದ ಮಾರಕ್ಕ ಮೊದಲಾದ ದೇವತೆಗಳನ್ನೂ ಪೂಜೆಮಾಡುತ್ತಾರೆ. ಜುಂಜಪ್ಪ ದೇವರ ಕೇಂದ್ರಗಳು ಸಿರಾ ತಾಲ್ಲೂಕಿನ ಬೇವಿನ ಹಳ್ಳಿಯಲ್ಲಿಯೂ ಗುಬ್ಬಿ ತಾಲ್ಲೂಕಿನ ಹಾಗಲವಾಡಿಯಲ್ಲಿಯೂ ಇವೆ.

ಕಾಡುಗೊಲ್ಲರ ಕಸುಬು ಮೊದಲಿಗೆ ಪಶುಪಾಲನೆಯಾಗಿತ್ತು. ಹುಲ್ಲುಗಾವಲುಗಳು ಹೆಚ್ಚಾಗಿದ್ದ ಕಾಲದಲ್ಲಿ ಇವರು ನೂರಾರು ದನಗಳನ್ನು ಸಾಕಿ ಅವುಗಳ ಹಾಲು, ಮೊಸರು, ಬೆಣ್ಣೆ, ತುಪ್ಪಗಳನ್ನು ಮಾರಿ ಜೀವನ ಮಾಡುತ್ತಿದ್ದರು. ಇವರ ಪುರಾಣಗಳಲ್ಲಿ ಪಶುಪಾಲನೆಗೆ ಸಂಬಂಧಿಸಿದ ವಿವರಗಳೇ ಹೆಚ್ಚಾಗಿವೆ. ಇವರ ಸಾಂಸ್ಕೃತಿಕ ವೀರನಾದ ಜುಂಜಪ್ಪ ಹಾಗೂ ಅವನ ತಂದೆ, ತಾತ ಗೋಪಾಲಕರು. ಅನೇಕ ಹಸುಗಳನ್ನೂ ಎತ್ತುಗಳನ್ನೂ ಕಷ್ಟಪಟ್ಟು ಪ್ರೀತಿಯಿಂದ ಸಾಕಿದವರು; ವಿರೋಧಿಗಳು ಕೊಟ್ಟ

ತೊಂದರೆಗಳನ್ನು ಧೈರ್ಯವಾಗಿ ಎದುರಿಸಿ ಶೌರ್ಯದಿಂದ ದನಗಳನ್ನು ರಕ್ಷಣೆ ಮಾಡಿದವರು. ಹುಲ್ಲುಗಾವಲುಗಳು ಕಡಿಮೆಯಾದ ಮೇಲೆ ಕಾಡುಗೊಲ್ಲರು ಕುರಿಗಳನ್ನು ಸಾಕಿ ಅವುಗಳ ಉತ್ಪನ್ನಗಳಿಂದ ಜೀವನ ಮಾಡುತ್ತಿದ್ದಾರೆ. ಸರಳವಾದ ವೇಷಭೂಷಣಗಳನ್ನು ಧರಿಸುವ ಕಾಡುಗೊಲ್ಲರ ಜೀವನ ಕ್ರಮವೂ ಸರಳವಾದುದು. ಬಹುಕಾಲದವರೆಗೆ ನಾಗರಿಕತೆಯ ಸಂಪರ್ಕದಿಂದ ದೂರವಿದ್ದ ಕಾಡುಗೊಲ್ಲರು ಈಚೀಚೆಗೆ ನಾಗರಿಕತೆಯ ಪ್ರಭಾವಕ್ಕೆ ಒಳಗಾಗಿದ್ದಾರೆ; ಕೆಲವರು ವಿದ್ಯಾವಂತರಾಗಿದ್ದಾರೆ. ಸರ್ಕಾರಿ ಉದ್ಯೋಗಗಳಲ್ಲಿಯೂ ಇದ್ದಾರೆ. ಕಾಡುಗೊಲ್ಲರಲ್ಲಿ ಸಮೃದ್ಧವಾದ ಸಾಹಿತ್ಯವೂ ಲಭ್ಯವಾಗುತ್ತದೆ. ನ್ಯಾಯ ತೀರ್ಮಾನದ ವಿಶಿಷ್ಟವಾದ ವಿಧಾನವೂ ಕಾಡುಗೊಲ್ಲರಲ್ಲಿ ಬಳಕೆಯಲ್ಲಿದೆ. ಸಾಮಾಜಿಕ ಪರಿವರ್ತನೆಯ ಹಂತದಲ್ಲಿರುವ ಈ ಬುಡಕಟ್ಟಿನಲ್ಲಿ ಸಾಂಪ್ರದಾಯಿಕ ಜೀವನಕ್ರಮದ ಜೊತೆಯಲ್ಲಿಯೇ ನಾಗರಿಕತೆಯ ಪ್ರಭಾವಗಳನ್ನೂ ಕಾಣಬಹುದಾಗಿದೆ.

೧.೬ ಜುಂಜಪ್ಪನ ಕಥೆ

ಕಾಡುಗೊಲ್ಲರ ಜೀವನದಲ್ಲಿ ಹಾಸುಹೊಕ್ಕಾಗಿರುವ ಜುಂಜಪ್ಪ ದೇವತೆಯ ಮಹಾಕಾವ್ಯ ತುಂಬ ಕುತೂಹಲಕರವಾದುದು. ಮೂರು ತಲೆಮಾರುಗಳ ಕಥೆಯನ್ನು ಒಳಗೊಂಡಿರುವ ಸುದೀರ್ಘವಾದ ಈ ಮಹಾಕಾವ್ಯ ಕನ್ನಡದ ಅತ್ಯುತ್ತಮ ಜನಪದ ಮಹಾಕಾವ್ಯಗಳಲ್ಲೊಂದು. ಇದರ ಕಥಾ ವೃತ್ತಾಂತವನ್ನು ಈ ರೀತಿ ಸಂಗ್ರಹಿಸಬಹುದು: ಕೊಂಕಿ ಜರಮಲೆ ಸೀಮೆಯ ಚಿಕ್ಕದ್ಯಾವರ ಹಟ್ಟಿಯಲ್ಲಿ ಬಕ್ಕದಲೆ ದೊಡ್ಡಯ್ಯ, ದಳವಾಯಿ ದೊಡ್ಡಯ್ಯ, ಪೂಜಾರಿ ದೊಡ್ಡಯ್ಯ, ದೊಡ್ಡಸಿದ್ದೇಗೌಡ, ಚಿಕ್ಕಸಿದ್ದೇಗೌಡ, ಕಲ್ಲಯ್ಯ, ದೇವರ ದಯಮಾರ ಎಂಬ ಏಳು ಜನ ಅಣ್ಣತಮ್ಮಂದಿರಿಗೆ ಬಡಚಿತ್ತಮ್ಮ ಎಂಬುವಳು ಒಬ್ಬಳೇ ತಂಗಿ. ಇವರಲ್ಲಿ ಕೊನೆಯವನಾದ ದೇವರ ದಯಮಾರನನ್ನು ಬಿಟ್ಟು ಉಳಿದವರಿಗೆಲ್ಲಾ ಮದುವೆಯಾಗಿದ್ದರೂ ಯಾರಿಗೂ ಮಕ್ಕಳಾಗಿರಲಿಲ್ಲ. ಚಿಕ್ಕ ಹುಡುಗನಾಗಿದ್ದಾಗಲೇ ಏಳು ಕರುಗಳನ್ನು ಹೊಡೆದುಕೊಂಡು ಕರಿತೊರೆ ಹಳ್ಳಕ್ಕೆ ಮೇಯಿಸಲು ಹೋಗಿದ್ದ ದೇವರ ದಯಮಾರನನ್ನು ಅಣ್ಣಂದಿರು ಕರೆದುಕೊಂಡು ಬಂದು ಅವನಿಗೆ ಕಂಬಕ್ಕ ಎಂಬ ಹೆಣ್ಣುಮಗಳನ್ನು ತಂದು ಮದುವೆ ಮಾಡಿದರು. ದೇವರ ದಯಮಾರನಿಗೆ ಹೆಂಡತಿಗಿಂತ ದನಗಳ ಮೇಲಿನ ಗೀಳೂ ಹೆಚ್ಚಾಗಿ ಅವನು ಕಾಡಿನಲ್ಲಿ ದನಗಳ ಜೊತೆಗೇ ಉಳಿದುಬಿಟ್ಟನು. ಈ ನಡುವೆ ತನ್ನ ಓರಗಿತ್ತಿಯರ ಕಿರುಕುಳವನ್ನು ತಾಳಲಾರದೆ ಕಂಬಕ್ಕ ಬಹಳ ಕಷ್ಟದಿಂದ ದೇವರ ದಯಮಾರನನ್ನು ಸೇರಿಕೊಂಡಳು. ಹುಟ್ಟಿದ ಮಗುವನ್ನು ಬಿಟ್ಟು ತಂದೆತಾಯಿಗಳು ತೀರಿಹೋದಾಗ ಆ ಮಗುವನ್ನು ಶಿವಪಾರ್ವತಿಯರು ಕಾಪಾಡಿದರು; ಅನಂತರ ಆ ಮಗು ಬಡಚಿತ್ತಮ್ಮನ ರಕ್ಷಣೆಯಲ್ಲಿ ಬೆಳೆಯಿತು. ಮಗುವಿಗೆ ಕೆಂಗುರಿ ಮಲ್ಲಪ್ಪ ಎಂದು ಹೆಸರನ್ನಿಟ್ಟರು. ಕಾಲಕ್ರಮೇಣ ಕೆಂಗುರಿಮಲಪ್ಪನ ದೊಡ್ಡಮ್ಮಂದಿರಿಗೂ ಮಕ್ಕಳಾದವು. ಅವರು ಅಸೂಯೆಯಿಂದ ಕೆಂಗುರಿಮಲ್ಲಪ್ಪನಿಗೆ ತೊಂದರೆ ಕೊಡಲು ಆರಂಭಿಸಿದರು. ಅವನು ದೊಡ್ಡಮ್ಮಂದಿರ

ಕಾಟವನ್ನು ತಾಳಲಾರದೆ ಅಳುವಿನವರ ಒಕ್ಕಲಿಗರವನಾದ ಹೊನ್ನಹಟ್ಟಿ ಆಲೇಗೌಡನ ಬಳಿಗೆ ಬಂದು ಆತನ ನೆರವಿನಿಂದ ಜೀವನದಲ್ಲಿ ಅಭಿವೃದ್ಧಿ ಹೊಂದಿದ. ಅನೇಕ ದನಕರುಗಳ ಒಡೆಯನಾದ. ಹೊನ್ನಹಟ್ಟಿ ಆಲೇಗೌಡನ ಹೆಂಡತಿ ಜಾನಕಲ್ಲು ದೊಡ್ಡಕ್ಕ ಕೆಂಗುರಿಮಲ್ಲೇಗೌಡನಿಗೆ ತೊಂದರೆ ಕೊಡಲು ಪ್ರಯತ್ನಿಸಿ, ಅವನ ಪವಾಡ ಶಕ್ತಿಗೆ ಹೆದರಿ ಶರಣಾಗತಳಾದಳು. ಕೆಂಗುರಿ ಮಲ್ಲೇಗೌಡನಿಗೆ ಕಂಬಿಯರ ಗೊಲ್ಲರ ಬೆಡಗಿಗೆ ಸೇರಿದ ಚಿನ್ನಮ್ಮ ಎಂಬಾಕೆಯೊಡನೆ ಮದುವೆಯಾಯಿತು. ಹೊನ್ನಹಟ್ಟಿ ಆಲೇಗೌಡ ಚಿನ್ನಮ್ಮನ ಅಣ್ಣಂದಿರಾದ ದೊಡ್ಡ ಚಿನ್ನೇಗೌಡ, ಕರಿಚಿನ್ನ, ಮರಿಚಿನ್ನ, ಮಂಕರಗಾಲಿನ ಚಿನ್ನ, ಬಿಳಿಯಾಲ ಬೇವಿನ ಚಿನ್ನ, ಗಂಟುಕಾಲಿನ ಚಿನ್ನ, ಕಡೆಹುಟ್ಟಿನ ಕಟ್ಟಾಣಿ ಅವರೊಡನೆ ಮಾತುಕತೆ ನಡೆಸಿ ಕೆಂಗುರಿ ಮಲ್ಲಪ್ಪನ ಮದುವೆಯನ್ನು ಸ್ವತಃ ನಿಂತು ಮಾಡಿಸಿದ. ಮದುವೆ ಮಾಡಿಕೊಂಡ ಕೆಂಗುರಿ ಮಲ್ಲಪ್ಪ ತನ್ನ ತಂದೆ ದೇವರ ದಯಮಾರನಂತೆಯೇ ಹೆಂಡತಿಯನ್ನು ಮರೆತು, ದನಗಳನ್ನು ಕಾಯುತ್ತಾ ಕಾಡಿನಲ್ಲಿಯೇ ಹನ್ನೆರಡು ವರ್ಷಗಳನ್ನು ಕಳೆದ. ಈ ನಡುವೆ ಕಂಬಿಯರ ಚಿನ್ನಮ್ಮ ಚಿಕ್ಕದೇವರ ಹಟ್ಟಿಯಲ್ಲಿ ಗಂಡನ ಮನೆಯಲ್ಲಿದ್ದಳು. ಅವಳನ್ನು ಸುತ್ತಮುತ್ತಲ ಹೆಂಗಸರು ಬಂಜೆಯೆಂದು ಹೀಯಾಳಿಸಿದರು. ಅವಳು ತನ್ನ ವಂಶದ ಮನೆದೇವರಾದ ಗೌರಸಂದ್ರದ ಮಾರಮ್ಮನನ್ನು ಪ್ರಾರ್ಥಿಸಿದಳು; ಗೌರಸಂದ್ರದ ಮಾರಮ್ಮ ಈಶ್ವರನನ್ನು ಪ್ರಾರ್ಥಿಸಿದಳು. ಈಶ್ವರ ತನ್ನ ಮಗ ವೀರಭದ್ರ ಕೈಲಾಸದಲ್ಲಿ ವಿಪರೀತ ಪುಂಡನಾಗಿ ತೊಂದರೆ ಕೊಡುತ್ತಿದ್ದುದನ್ನು ಗಮನಿಸಿ, ಅವನಿಗೆ ಚಿನ್ನಮ್ಮನ ನಡುಬೆನ್ನಲ್ಲಿ ಹುಟ್ಟಿ ಜುಂಜಪ್ಪನೆಂಬ ಹೆಸರು ಪಡೆದು ಹದಿನಾರು ವರ್ಷಕಾಲ ಭೂಲೋಕದಲ್ಲಿ ಮಹಾಮಹಿಮನಾಗಿ ಬಾಳಿ, ದುಷ್ಟರನ್ನು ಶಿಕ್ಷಿಸಿ, ಶಿಷ್ಟರನ್ನು ರಕ್ಷಿಸಿ ಕಾಡುಗೊಲ್ಲರ ಆರಾಧ್ಯ ದೈವವಾಗುವಂತೆ ಹೇಳಿಕಳುಹಿಸಿದ. ಹೀಗಾಗಿ ಕಂಬಿಯರ ಚಿನ್ನಮ್ಮ, ಈಶ್ವರನ ವರದಂತೆ, ಕೆಂಗುರಿ ಮಲ್ಲಪ್ಪನ ಜೊತೆ ಕೂಡಿ ಗರ್ಭಿಣಿಯಾದಳು; ನವಮಾಸ ತುಂಬಿದಾಗ ಜುಂಜಪ್ಪ ಅವಳ ಬೆನ್ನಿನಿಂದ ಹುಟ್ಟಿದ. ಅವನ ಹುಟ್ಟು ಹೇಗೆ ವಿಶೇಷ ರೀತಿಯದಾಗಿತ್ತೋ, ಅನಂತರ ಅವನ ನಡವಳಿಕೆಯೂ ವಿಶೇಷ ರೀತಿಯದೇ ಆಗಿತ್ತು. ಕೆಂಗುರಿಮಲ್ಲಪ್ಪ ಮತ್ತು ಚಿನ್ನಮ್ಮನವರಿಂದ ಸಾಮಾನ್ಯ ರೀತಿಯಂತೆ ಮಾರಣ್ಣ, ಮೈಲಣ್ಣ ಮತ್ತು ಮಾರಕ್ಕ ಎಂಬ ಮಕ್ಕಳಾದರು. ಮೂರುಜನ ಗಂಡು ಮಕ್ಕಳಾದನಂತರ ಒಂದು ಹೆಣ್ಣು ಮಗುವಾದರೆ ಆ ಮಗು ಮನೆಗೆ ಮಾರಿ ಎಂಬುದು ಅಂದಿನ ನಂಬಿಕೆಯಾಗಿತ್ತು. ಮಾರಿಹಬ್ಬದ ಸಂದರ್ಭದಲ್ಲಿ ಇದ್ದ ಒಂದು ವಿಶಿಷ್ಟ ಸಂಪ್ರದಾಯದಂತೆ ಕೆಂಗುರಿ ಮಲ್ಲಪ್ಪ ತಾನೇ ಬಲಿಯಾಗಬೇಕಾದ ಪರಿಸ್ಥಿತಿಯುಂಟಾಯಿತು.

ಕೆಂಗುರಿಮಲ್ಲಪ್ಪ ಸತ್ತನಂತರ ಚಿನ್ನಮ್ಮನ ಐಶ್ವರ್ಯವೆಲ್ಲಾ ಹೋಯಿತು. ಏಳುಗೂಡಿನ ಎತ್ತುಗಳೂ, ಹಸುಗಳೂ ನಾಶವಾದವು. ಆಗ ಜುಂಜಪ್ಪ ದೊಡ್ಡವನಾಗಿದ್ದ. ತನ್ನ ತಾಯಿ ಎಲ್ಲಿಯೂ ಕೂಲಿಮಾಡಲು ಹೋಗಬಾರದೆಂದೂ ಅಣ್ಣಂದಿರ ಮನೆಗೆ ಹೋಗಬಾರದೆಂದೂ ಆಕೆಗೆ ಆಜ್ಞೆಮಾಡಿದ. ಆದರೆ ಜುಂಜಪ್ಪನ ಮಾತನ್ನು ಕೇಳದೆ ಇದ್ದುದರಿಂದ ಚಿನ್ನಮ್ಮ ಅನೇಕ ಕಷ್ಟನಷ್ಟಗಳನ್ನು ಎದುರಿಸಬೇಕಾಯಿತು. ಜುಂಜಪ್ಪ ಆಕೆಗೆ ಅನೇಕ ಪರೀಕ್ಷೆಗಳನ್ನು ಒಡ್ಡಿ ಆಕೆಯನ್ನು ಪರೀಕ್ಷಿಸಿದ. ಕೊನೆಗೆ ಅವಳು

ಪರಿಶುದ್ಧಳೆಂದು ಖಚಿತವಾದ ಮೇಲೆ ಅವಳನ್ನು ತನ್ನ ಮನೆಯಲ್ಲಿ ಇರಲು ಜುಂಜಪ್ಪ ಅವಕಾಶ ಕೊಟ್ಟ. ತನ್ನ ಸೋದರಮಾವಂದಿರು ಕೊಟ್ಟಿದ್ದ ಏಳು ಕರುಗಳನ್ನು ಚೆನ್ನಾಗಿ ಬೆಳೆಸಿದ ಜುಂಜಪ್ಪ ಅವುಗಳ ತಳಿಗಳಿಂದಾಗಿ ಏಳು ಗೂಡು ಎತ್ತುಗಳು ಹಾಗೂ ಏಳು ಗೂಡು ಹಸುಗಳ ಒಡೆಯನಾದ. ತನ್ನ ಸೋದರಮಾವಂದಿರಿಗೆ ದೊಡ್ಡ ಸವಾಲಾಗಿ ಪರಿಣಮಿಸಿದ. ತನ್ನ ತಂಗಿ ಮಾರಕ್ಕನನ್ನು ತನ್ನ ಸೋದರಮಾವ ಕಡೆಹುಟ್ಟಿನ ಕಟ್ಟಾಣಿಗೆ ಕೊಟ್ಟು ಮದುವೆ ಮಾಡಿದ ಮೇಲೆ, ಮನೆಯಲ್ಲಿದ್ದ ಮಾರಿ ತೊಲಗಿದಂತಾಗಿ, ಜುಂಜಪ್ಪನ ಐಶ್ವರ್ಯ ಹೆಚ್ಚಾಯಿತು; ರಾಮಲಕ್ಷ್ಮಣ ಎಂಬ ಅವನ ಮನೆಯ ಕಣಜಗಳು ತುಂಬಿದವು, ಚೆನ್ನಮ್ಮ ಸುಖವಾಗಿ ಜೀವನ ಮಾಡತೊಡಗಿದಳು.

ಆದರೆ ಅತ್ಯಂತ ಹೀನಾಯವಾದ ಸ್ಥಿತಿಯಲ್ಲಿದ್ದ ಜುಂಜಪ್ಪ ತಾವು ಕೊಟ್ಟ ಏಳು ಕರುಗಳಿಂದಲೇ ತನ್ನ ದನಗಳ, ಎತ್ತುಗಳ ಸಂಖ್ಯೆಯನ್ನು ಹೆಚ್ಚಿಸಿಕೊಂಡು, ಶ್ರೀಮಂತನಾಗಿ ಅಹಂಕಾರದಿಂದ ತಮಗೆ ಪ್ರಬಲ ಸ್ಪರ್ಧಿಯಾಗಿ ಪರಿಣಮಿಸಿದ್ದನ್ನು ಕಂಡು ಅವನ ಸೋದರಮಾವಂದಿರಿಗೆ ಹೊಟ್ಟೆಉರಿ ಆರಂಭವಾಯಿತು. ಹೀಗೆಯೇ ಬಿಟ್ಟರೆ ತಮ್ಮ ಅಸ್ತಿತ್ವಕ್ಕೆ ಧಕ್ಕೆ ಬರುವುದೆಂದು ಹೆದರಿದ ಸೋದರಮಾವಂದಿರು ಜುಂಜಪ್ಪನ ಪ್ರಾಬಲ್ಯವನ್ನು ಕಡಿಮೆ ಮಾಡಲು ವ್ಯವಸ್ಥಿತವಾದ ಪ್ರಯತ್ನಗಳನ್ನು ಆರಂಭ ಮಾಡಿದರು. ದೊಡ್ಡ ಹುಲಿಕುಂಟೆ ಕರೆಯಲ್ಲಿನ ನೀರಿಗೆ ಮಾಟ ಮಾಡಿಸಿದರು. ಜುಂಜಪ್ಪ ದನಗಳನ್ನು ಕಾಯಲು ತನ್ನ ತಮ್ಮಂದಿರಾದ ಮಾರಣ್ಣ, ಮೈಲಣ್ಣರನ್ನು ಕಳಿಸಿಕೊಟ್ಟ. ಅವರು ದನಗಳಿಗೆ ದೊಡ್ಡ ಹುಲಿಕುಂಟೆ ಕೆರೆಯಲ್ಲಿ ನೀರು ಕುಡಿಸುವಷ್ಟರಲ್ಲಿಯೇ ಜುಂಜಪ್ಪ ಗೌರಸಂದ್ರದ ಮಾರಕ್ಕನ ನೆರವಿನಿಂದ ಮುತ್ತಿನ ಕಡೆಗೋಲಿನಿಂದ ಕೆರೆ ನೀರನ್ನು ಕಡೆಸಿದ. ಕೆರೆಯ ನೀರು ಮಾಟದ ಪ್ರಭಾವವನ್ನು ಕಳೆದುಕೊಂಡು ತಿಳಿಯಾಯಿತು. ಅದೇ ಕೆರೆಯಲ್ಲಿ ಜೀವಂತವಾಗಿ ಹೂಳಿದ್ದ ಬಡಕಲು ಕರುವನ್ನು ಮಾರಣ್ಣ ಮೈಲಣ್ಣರೊಡನೆ ತನ್ನ ಸೋದರ ಮಾವಂದಿರಿಗೆ ಹಿಂತಿರುಗಿಸಿದ. ಆದರೆ ಅವರು ಆ ಕರುವನ್ನು ತಮ್ಮದೆಂದು ಒಪ್ಪದೆ ಮಾರಣ್ಣ, ಮೈಲಣ್ಣರನ್ನು ಹೊಡೆದು ಕಳಿಸಿದರು. ಜುಂಜಪ್ಪ ತಾನೇ ಆ ಕರುವನ್ನು ಅವರ ಬಳಿಗೆ ತೆಗೆದುಕೊಂಡು ಹೋದಾಗಲೂ ಅವರು ಕರು ತಮ್ಮದೆಂದು ಒಪ್ಪಲಿಲ್ಲ. ಆಗ ಜುಂಜಪ್ಪ ಆ ಕರುವನ್ನು ಚೆನ್ನಾಗಿ ಮೇಯಿಸಿದ; ಅದು ದೊಡ್ಡ ಹೋರಿಯಾಗಿ ಬೆಳೆಯಿತು. ಅದಕ್ಕೆ ಬಡಮೈಲ ಎಂಬ ಹೆಸರನ್ನಿಟ್ಟ. ಬಡಮೈಲ ಜುಂಜಪ್ಪನ ದನಗಳನ್ನೆಲ್ಲಾ ತಾನೇ ನೋಡಿಕೊಳ್ಳುವಷ್ಟು ಶಕ್ತವಾಗಿತ್ತು. ಸೋದರಮಾವಂದಿರ ಕೋಪ ಇನ್ನೂ ಹೆಚ್ಚಾಯಿತು. ಅವರ ಮೊದಲ ಪ್ರಯತ್ನ ವಿಫಲವಾದ ಮೇಲೆ ಎರಡನೆಯದಕ್ಕೆ ಕೈಹಾಕಿದರು. ಮರಡಿ ರಂಗಣ್ಣನಿಂದ ಮಾಟಮಾಡಿಸಿ ಕೆಂಧೂಳಿ ಬರ, ಡೊಕ್ಕೆಯ ಬರ ಬರುವಂತೆ ಮಾಡಿದರು. ವಿಷಯವನ್ನು ತಿಳಿದ ಜುಂಜಪ್ಪ ಮರಡಿ ರಂಗಣ್ಣನಿಗೆ ತತ್ತರಿಸಿ ಹೋಗುವಂತೆ ಹೆದರಿಸಿ, ಅವನಿಂದಲೇ ಮಾಟದ ಪ್ರಭಾವವನ್ನು ತೆಗೆಸಿದ. ಆದರೂ ಜುಂಜಪ್ಪನ ಪ್ರಭಾವ ಕಡಮೆಯಾಗದಿರಲು ಸೋದರಮಾವಂದಿರು ಚೇಳೂರು ರಂಗಣ್ಣನ ನೆರವನ್ನು ಪಡೆದರು. ಜುಂಜಪ್ಪ ಸೊಂಪಾಗಿ ಬೆಳೆದು ನಿಂತಿದ್ದ ಚೇಳೂರು ರಂಗಣ್ಣನ ಕಾವಲಿನಲ್ಲಿ ತನ್ನ ದನಗಳನ್ನು ಮೇಯಿಸಿದ. ಚೇಳೂರು ರಂಗಣ್ಣ ಜುಂಜಪ್ಪನ

ದನಗಳನ್ನು ಸದೆಬಡಿದು, ಬಡಮ್ಮೈಲನನ್ನು ಚೇಳೂರು ಕೋಟೆಯ ಕಲ್ಲಿಗೆ ಕಟ್ಟಿಸಿದ. ಆದರೆ ಬಡಮ್ಮೈಲ ಚೇಳೂರು ಕೋಟೆಯನ್ನು ಭೇದಿಸಿಕೊಂಡು ಬಂದು ದನಗಳನ್ನು ಕಾಪಾಡಿತು. ಚೇಳೂರು ರಂಗಣ್ಣನು ಮಾರಣ್ಣ, ಮೈಲಣ್ಣರಿಗೆ ತೊಂದರೆ ಕೊಟ್ಟ. ಮೂರು ತಿಂಗಳ ಕೇಡಿನ ನಿದ್ದೆಯಿಂದ ಎಚ್ಚೆತ್ತ ಜುಂಜಪ್ಪ ಚೇಳೂರು ರಂಗಣ್ಣನೊಡನೆ ಪಗಡೆಯಾಟವಾಡಿ ಗೆದ್ದು ಅವನ ಎಲ್ಲ ಸ್ವತ್ತನ್ನೂ ತಾನೇ ಸ್ವಾಧೀನ ಪಡಿಸಿಕೊಂಡ. ಜುಂಜಪ್ಪ ಚೇಳೂರು ರಂಗಣ್ಣನನ್ನು ಸೋಲಿಸಿದ. ಹೀಗೆಯೇ ಮುಂದೆ ಹುಲಿಕುಂಟೆ ತಮ್ಮಣ್ಣನ ಕಾವಲು, ತಾಳೆದುರ್ಗಿ ಕಾವಲುಗಳಲ್ಲಿ ದನಗಳನ್ನು ಮೇಯಿಸಿ ತನಗೆ ಎದುರಾದವರಿಗೆ ಬುದ್ಧಿ ಕಲಿಸಿದ. ಹೊನ್ನಹಟ್ಟಿ ಆಲೇಗೌಡನ ಹೆಂಡತಿ ಜಾನಕಲ್ಲು ದೊಡ್ಡಕ್ಕನಿಗೆ ಬುದ್ಧಿ ಕಲಿಸಿದ. ಇನ್ನೂ ಅನೇಕ ಹುಲ್ಲುಗಾವಲುಗಳಲ್ಲಿ ದನಗಳನ್ನು ಮೇಯಿಸಿ ಜುಂಜಪ್ಪ ತನ್ನ ಪರಾಕ್ರಮವನ್ನು ತೋರಿಸಿದ. ಹದಿನಾರು ವರ್ಷಗಳ ಕಾಲ ಹೀಗೆ ಏಕಮೇವ ಅದ್ವಿತೀಯನಾಗಿ ಮೆರೆದ ಜುಂಜಪ್ಪ ಅನೇಕ ಪವಾಡಗಳನ್ನು ಮಾಡಿದ. ಕೊನೆಗೆ ಅವನ ಸೋದರಮಾವಂದಿರು ಮಾರಕ್ಕನ ಮೂಲಕ ಜುಂಜಪ್ಪನಿಗೆ ವಿಷಹಾಕಿಸಿ ಮೋಸದಿಂದ ಸಾಯಿಸಿದರು. ಜುಂಜಪ್ಪ ಸಾಯುವ ಮೊದಲು ತನ್ನ ಸೋದರ ಮಾವಂದಿರು ವಾಸವಾಗಿದ್ದ ಕಂಬಿಯರ ಹಟ್ಟಿಯನ್ನು ತನ್ನ ಉರಿಗಣ್ಣಿನಿಂದ ಸುಟ್ಟು ಬೂದಿಮಾಡಿ ತಾನೂ ಸತ್ತುಹೋದ. ಸತ್ತ ನಂತರವೂ ಅವನು ಅನೇಕ ಪವಾಡಗಳನ್ನು ಮಾಡಿದ. ಹೀಗಾಗಿ ಕಾಡುಗೊಲ್ಲರು ಜುಂಜಪ್ಪನನ್ನು ತಮ್ಮ ಆರಾಧ್ಯ ದೈವವೆಂದು ಪೂಜೆ ಮಾಡಲು ಆರಂಭಿಸಿದರು.

೧.೭ ಜುಂಜಪ್ಪನ ಧಾರ್ಮಿಕ ಪರಂಪರೆ

ಜುಂಜಪ್ಪನ ಕಾವ್ಯದಲ್ಲಿ ನಡೆದಿರುವ ಘಟನೆಗಳು ವಾಸ್ತವವಾಗಿ ನಡೆದಿವೆ ಎಂದೇ ಭಕ್ತರು ನಂಬುತ್ತಾರೆ. ಈ ಘಟನೆಗಳು ನಡೆಯುವ ಬೇವಿನಹಳ್ಳಿ, ಕಳುವಾರಳ್ಳಿ (ಕಳುವೋರಳ್ಳಿ), ಪುರಸಕ್ಕನಕೆರೆ (ಪರುಷವ್ವನ ಕೆರೆ), ಸಣಬನಹಳ್ಳಿ ಮೊದಲಾದವು ಸಿರಾ ತಾಲ್ಲೂಕಿನಲ್ಲಿವೆ. ಹಾಗಲವಾಡಿ, ಚೇಳೂರು ಗುಬ್ಬಿ ತಾಲ್ಲೂಕಿನಲ್ಲಿವೆ. ಜುಂಜಪ್ಪನ ಜಾತ್ರೆಗಳು ಹಲವಾರು ಪ್ರದೇಶಗಳಲ್ಲಿ ನಡೆಯುತ್ತವೆ. ದೀಪಾವಳಿಯ ಸಂದರ್ಭದಲ್ಲಿ ಸೋಮವಾರದಂದು ಈ ಜಾತ್ರೆಗಳು ನಡೆಯುವುದರಿಂದ ಮತ್ತು ಜುಂಜಪ್ಪನ ದೇವಸ್ಥಾನಗಳಲ್ಲಿ ಪ್ರತಿ ಸೋಮವಾರವೂ ವಿಶೇಷ ಪೂಜೆ ನಡೆಯುವುದರಿಂದ ಜುಂಜಪ್ಪನನ್ನು ಸೋಮವಾರದಯ್ಯ (ಸ್ವಾಮಾರದಯ್ಯ) ಎಂದು ಕರೆಯುವುದೂ ಉಂಟು. ಜುಂಜಪ್ಪನ ಪೂರ್ವಿಕರು ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನ ಚಿಕ್ಕದೇವರಹಟ್ಟಿಯಿಂದ ಬಂದವರು ಎಂದು ತಿಳಿಯುತ್ತದೆ. ಈ ಪ್ರದೇಶದಲ್ಲಿ ಈಗಲೂ ಕಾಡುಗೊಲ್ಲರಿದ್ದಾರೆ. ಜುಂಜಪ್ಪನ ಪೂಜೆ ನಡೆಯುತ್ತದೆ. ಅನಂತರ ಜುಂಜಪ್ಪನ ಪೂರ್ವಿಕರು ದಕ್ಷಿಣ ಕರ್ನಾಟಕದ ಸಿರಾ ಕಡೆ ಬಂದಿರಬೇಕು. ಬೇವಿನಹಳ್ಳಿ ಮತ್ತು ಕಳುವಾರಹಳ್ಳಿಯನ್ನು ಹಿರಿಹಟ್ಟಿ ಎಂದೇ ಕರೆಯುತ್ತಾರೆ. ಆಂತರಿಕ ಮತ್ತು ಬಾಹ್ಯ ಆಧಾರಗಳ ಮೇಲೆ ಜುಂಜಪ್ಪನ ಕಾಲ ೧೬-೧೭ನೆಯ ಶತಮಾನಗಳಲ್ಲಿ ಇರುವ

ಸಾಧ್ಯತೆ ಇದೆ ಎಂದು ಹೇಳಬಹುದು. ಆದರೆ ಖಚಿತವಾಗಿ ಹೇಳುವುದು ಕಷ್ಟ. ಈ ಸಂಬಂಧವಾಗಿ ನಮಗೆ ಮಧ್ಯಕಾಲೀನ ಗ್ರಂಥಗಳಲ್ಲಾಗಲಿ, ಶಾಸನಗಳಲ್ಲಾಗಲಿ ಆಧಾರಗಳಿಲ್ಲ. ಕಾಡುಗೊಲ್ಲರು ಪಶುಪಾಲಕರಾಗಿದ್ದು ಬರವಣಿಗೆ ಬರದೇ ಇದ್ದುದರಿಂದ ಹೀಗಾಗಿರಬಹುದು. ಈರಗಾರರಿಗೆ ಮತ್ತು ಈರಗಾರ್ತಿಯರಿಗೆ ಅವರು ಹುಯ್ಯಿಸಿರುವ ಅಲಗುಗಳೇ ಅವರ ವೀರಗಲ್ಲುಗಳು ಮತ್ತು ಮಾಸ್ತಿಕಲ್ಲುಗಳು.

ಜುಂಜಪ್ಪನ ತಂದೆ, ತಾತ ಮಾರನವರ ಗೊಲ್ಲರು. ಬೇವಿನಹಳ್ಳಿಯ ಗೊಲ್ಲರು ಜುಂಜಪ್ಪನ ಪರಂಪರೆಗೆ ಸೇರಿದವರು. ಆದರೆ ಜುಂಜಪ್ಪನಿಗೆ ಆಶ್ರಯ ಕೊಟ್ಟು ಸಾಕಿ ದೊಡ್ಡವನನ್ನಾಗಿ ಮಾಡಿದ್ದು ಹೊನ್ನಹಟ್ಟಿಯ ಕುಂಚಿಟಿಗರ ಜಾತಿಗೆ ಸೇರಿ ಅನಂತರ ಗೊಲ್ಲರ ನಡಾವಳಿಗಳನ್ನು ರೂಢಿಸಿಕೊಂಡ ಹೊನ್ನಹಟ್ಟಿಯ ಆಲೇಗೌಡ. ಕಳುವಾರಹಳ್ಳಿಯಲ್ಲಿ ಇರುವ ಕುಂಚಿಟಿಗರು ತಾವು ಹೊನ್ನಹಟ್ಟಿಯ ಆಲೇಗೌಡನ ವಂಶಸ್ಥರು ಎಂದು ಭಾವಿಸಿದ್ದಾರೆ. ಜುಂಜಪ್ಪನ ಪೂಜಾರಿಕೆಯ ಹಕ್ಕಿನ ಬಗ್ಗೆ ಇಬ್ಬರಿಗೂ ತಕರಾರುಗಳು ಇದ್ದುವು. ಈ ಸಂಬಂಧವಾಗಿ ವಿಶೇಷವಾಗಿ ಅಧ್ಯಯನ ಮಾಡಿರುವ ಮೀರಾಸಾಬಿಹಳ್ಳಿ ಶಿವಣ್ಣ ಅವರ ಮಾತುಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ:

> ಜುಂಜಪ್ಪನ ಗುಡ್ಡೆ ಹತ್ತಿರ ಪ್ರತಿ ಸೋಮವಾರ ಪೂಜೆ. ಈ ಪೂಜೆಯ ಬಗ್ಗೆ ದೊಡ್ಡ ವ್ಯಾಜ್ಯವೇ ನಡೆದು ಕೋರ್ಟು, ಕಛೇರಿ ಹತ್ತಿದ್ದಾರೆ. ಒಮ್ಮೆ ಕಳುವೀರ ಹಳ್ಳಿಯಿಂದ ಕುಂಚಿಟಿಗರು ಜುಂಜಪ್ಪನಿಗೆ ಒಡವೆ ವಸ್ತ್ರದ ಸಮೇತ ಅಲಂಕಾರಮಾಡಿಕೊಂಡು ಸಮಾಧಿ ಹತ್ತಿರ ತಂದಾಗ ಬೇವಿನ ಹಳ್ಳಿಯ ಗೊಲ್ಲರು ಜುಂಜಪ್ಪನನ್ನು ಸಂಚುಮಾಡಿ ಹೊತ್ತುಕೊಂಡು ಹೋದರು. ಜುಂಜಪ್ಪ ಗೊಲ್ಲರವನಾದ್ದರಿಂದ 'ನಮ್ಮವನು' ಎಂಬುದು ಅವರ ವಾದವಾದರೆ, ಜುಂಜಪ್ಪನ ತಂದೆಗೆ ಆಶ್ರಯ ಕೊಟ್ಟವರು ನಾವು, ನಮ್ಮದೇ ಪೂಜೆಯ ಹಕ್ಕು ಎಂದು ಒಕ್ಕಲಿಗರು. ಕ್ರಿ.ಶ. ೧೮೮೩ಕ್ಕೂ ಹಿಂದೆ ಈ ಪೂಜೆಯ ಹಕ್ಕಿನ ವ್ಯಾಜ್ಯ ಪ್ರಾರಂಭವಾಯಿತು. ಕೊನೆಗೆ ಕ್ರಿ. ಶ. ೧೮೮೪ರಲ್ಲಿ ತೀರ್ಮಾನ ಹೊರಬಂದಿತು. ಮೊದಲ ಪೂಜೆ ಕಳುವಾರಹಳ್ಳಿಯ ಹೊನ್ನಟ್ಟಿ ಆಲೆಗೌಡನ ವಂಶಸ್ಥರದು; ನಂತರದ ಪೂಜೆ ಬೇವಿನ ಹಳ್ಳಿಯ ಗೊಲ್ಲರದು ಎಂದು. ಹಿಂದಿನ ವ್ಯಾಜ್ಯದ ವೈರ ಭಾವನೆಯನ್ನು ಮರೆತು ಕಳುವಾರಹಳ್ಳಿ ಒಕ್ಕಲಿಗರು, ಬೇವಿನಹಳ್ಳಿ ಗೊಲ್ಲರು ಇಂದು ಸರಸವಾಗಿಯೇ ಇದ್ದಾರೆ. ಆದರೂ ನಡೆದು ಹೋದ ಘಟನೆಯ ಬಗ್ಗೆ ಒಮ್ಮೊಮ್ಮೆ ಅಸಮಾಧಾನದ ಹೊಗೆ ಆಡುತ್ತದೆ.
>
> ಕ್ರಿ.ಶ. ೧೮೩೮ಕ್ಕೂ ಹಿಂದೆ ಜುಂಜಪ್ಪನಿಗೆ ರಥೋತ್ಸವ ಮಾಡುತ್ತಿದ್ದುದನ್ನು ಕೋರ್ಟ್ ದಾಖಲೆಗಳು ಹೇಳುತ್ತವೆ. ಜನಪದ ಗೀತೆಗಳು ತೇರು ಹರಿಯುತ್ತಿದ್ದ ಬಗ್ಗೆ ಹೇಳುತ್ತವೆ.
>
> ದೀಪಾವಳಿಯ ಕಾರ್ತಿಕ ಮಾಸದ ಅಮಾವಾಸ್ಯೆಯ ನಂತರ ಜುಂಜಪ್ಪನ ಗುಡ್ಡೆಯ ಬಳಿ ದೀಪ ಏರಿಸುತ್ತಾರೆ. ದೀಪ ಏರಿಸುವಾಗಲೂ ಮೊದಲು

ಕಳುವಾರಹಳ್ಳಿಯವರು ಒಂದು ದೀಪ ಏರಿಸಿಕೊಂಡು ಹೋಗುತ್ತಾರೆ. ನಂತರ ಬೇವಿನಹಳ್ಳಿಯವರು ಒಂದು ದೀಪ ಏರಿಸುತ್ತಾರೆ.

ಆದರೆ ಕ್ರಿ. ಶ. ೧೮೦೦ ಕ್ಕಿಂತ ಹಿಂದೆ ಅದೊಂದು ಬಯಲು ಹಕ್ಕೆಯಾಗಿದ್ದು ದನಕರುಗಳು ಜುಂಜಪ್ಪನ ಗುಡ್ಡೆಯನ್ನು ತುಳಿಯುತ್ತವೆ ಎಂದು ಗುಡ್ಡೆಯ ಸುತ್ತ ಪೌಳಿ ಗೋಡೆಯನ್ನು ಹೊನ್ನಟ್ಟಿ ಆಲೆಗೌಡನ ವಂಶದವರೊಬ್ಬರು ಕಟ್ಟಿಸಿದರೆಂಬ ದಾಖಲೆ ಹೊನ್ನಟ್ಟಿ ಆಲೆಗೌಡರ ವಂಶಸ್ಥರಲ್ಲಿ ದೊರೆಯುತ್ತದೆ (ಕಾಡುಗೊಲ್ಲ ಬುಡಕಟ್ಟು ವೀರರು, ಪುಟ ೪೮೧-೪೮೨)

ಈ ಎಲ್ಲಾ ವಿವರಗಳನ್ನು ಇಲ್ಲಿ ಉಲ್ಲೇಖಿಸಿರುವುದಕ್ಕೆ ಕಾರಣ ಜುಂಜಪ್ಪನ ಪರಂಪರೆ ಎರಡು ಸಮುದಾಯಗಳಿಗೆ ನೇರವಾಗಿ ಸಂಬಂಧಪಟ್ಟಿದುದು ಎಂಬುದನ್ನು ತಿಳಿಸುವ ಸಲುವಾಗಿ. ಆ ಸಂಬಂಧಗಳು ಇನ್ನೂ ಮುಂದುವರಿದುಕೊಂಡು ಬಂದಿವೆ ಎಂಬುದು ವಿಶೇಷವಾಗಿ ಗಮನಿಸಬೇಕಾದ ಸಂಗತಿಯಾಗಿದೆ.

೧.೮ ಜುಂಜಪ್ಪನ ಕಾವ್ಯದ ವಿವಿಧ ಪಠ್ಯಗಳು

ಈ ಮಹಾಕಾವ್ಯವನ್ನು ನಾನು ನನ್ನ ಪಿಎಚ್. ಡಿ ಮಹಾಪ್ರಬಂಧದ ಸಲುವಾಗಿ 'ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು' ಎಂಬ ವಿಷಯವಾಗಿ ನಲವತ್ತೈದು ವರ್ಷಗಳ ಹಿಂದೆ ಅಭ್ಯಾಸ ಮಾಡಿದಾಗ ನನ್ನ ಗಮನವಿದ್ದದ್ದು ನನ್ನ ವಿಷಯಕ್ಕೆ ಪೂರಕವಾಗಿ ಜುಂಜಪ್ಪನ ಕಾವ್ಯದ ಒಂದು ಪಾಠವನ್ನು ಸಂಗ್ರಹಿಸುವುದು. ಜೀ. ಶಂ.ಪ. ಅವರು ಆ ವೇಳೆಗಾಗಲೇ ನಾಗಮಂಗಲ ಪ್ರದೇಶದಲ್ಲಿ ಒಂದು ಪಾಠವನ್ನು ಸಂಗ್ರಹಿಸಿದ್ದರು. ಅದು ನಾನು ಜುಂಜಪ್ಪನ ಕಾವ್ಯದ ಬಗ್ಗೆ ನನ್ನ ಸಂಶೋಧನಾ ಪ್ರಬಂಧಕ್ಕೆ ಪೂರಕವಾಗಿ ಬರೆಯಬೇಕೆಂದಿದ್ದಾಗ ನನ್ನ ಕಣ್ಣ ಮುಂದಿದ್ದ ಪಾಠಗಳಲ್ಲಿ ಮೊದಲನೆಯದು. ಜುಂಜಪ್ಪನ ಸಂಪ್ರದಾಯ ತುಂಬಾ ದಟ್ಟವಾಗಿದ್ದ ಸಿರಾ ತಾಲ್ಲೂಕಿನ ಮೂಡಲಪ್ಪ ಎಂಬ ಹಾಡುಗಾರನಿಂದ ನಾನು ಸಂಗ್ರಹಿಸಿದ ಪಾಠ ಎರಡನೆಯದು. ಇವುಗಳಲ್ಲಿ ಮೊದಲನೆಯದನ್ನು 'ದಕ್ಷಿಣದ ಪಾಠ' ಎಂದೂ, ನಾನು ಸಂಗ್ರಹಿಸಿದ ಪಾಠವನ್ನು 'ಉತ್ತರದ ಪಾಠ' ಎಂದೂ ಡಾ. ಜೀ. ಶಂ. ಪ. ಅವರು ಪರಿಗಣಿಸಿ ಈ ಎರಡಕ್ಕೂ ಇರುವ ಪಠ್ಯದ ವ್ಯತ್ಯಾಸಗಳನ್ನು ಗುರುತಿಸಿದರು. ನಾನು ಸಂಗ್ರಹಿಸಿದ ಪಾಠದಲ್ಲಿ ಜುಂಜಪ್ಪನಿಗೆ ಸಂಬಂಧಿಸಿದ ಧಾರ್ಮಿಕ ಆಚರಣೆಯ ವಿವರಗಳು ದಟ್ಟವಾಗಿದ್ದು, ದಕ್ಷಿಣದ ಪಾಠದಲ್ಲಿ ಈ ಬಗೆಯ ಆಚರಣೆಯ ವಿವರಗಳ ಬದಲಿಗೆ ಕಾವ್ಯಾತ್ಮಕವಾದ ಅಂಶಗಳು ಹೆಚ್ಚಾಗಿದ್ದವು. ಉತ್ತರದ ಪಾಠ ಜುಂಜಪ್ಪನ ಸಂಪ್ರದಾಯದ ಧಾರ್ಮಿಕ ಕೇಂದ್ರದ ಪಾಠವಾಗಿದ್ದುದರಿಂದ ಅದರಲ್ಲಿ ಅವರ ಧರ್ಮ, ಸಂಸ್ಕೃತಿಗೆ ಸಂಬಂಧಿಸಿದ ವಿವರಗಳು ಹೆಚ್ಚಾಗಿದ್ದವು. ದಕ್ಷಿಣದ ಪಾಠವು ಜುಂಜಪ್ಪನ ಸಂಪ್ರದಾಯದ ಕೇಂದ್ರದಿಂದ ದೂರವಿದ್ದುದರಿಂದ ಅದರಲ್ಲಿ ಧಾರ್ಮಿಕ ಸಾಂಸ್ಕೃತಿಕ ವಿವರಗಳು ತೆಳುವಾಗಿದ್ದವು.

ಜೀ.ಶಂ.ಪ. ಅವರು ಈ ಎರಡೂ ಪಾಠಗಳನ್ನು ಪಠ್ಯದ ದೃಷ್ಟಿಯಿಂದ ತೌಲನಿಕವಾಗಿ ವಿಶ್ಲೇಷಣೆ ಮಾಡಿ ಕಥನಕಲೆ, ಪಾತ್ರಚಿತ್ರಣ, ಭಾಷೆ, ಶೈಲಿ ಮೊದಲಾದ ಸಾಹಿತ್ಯಾಂಶಗಳ ಅಧ್ಯಯನ ಮಾಡಿದರು. ಸಾಹಿತ್ಯ ಮತ್ತು ಸಂಸ್ಕೃತಿಯ ದೃಷ್ಟಿಯಿಂದ ಇದು ಆ ಕಾಲಕ್ಕೆ ಬಹಳ ಒಳ್ಳೆಯ ಅಧ್ಯಯನವೇ ಆಗಿತ್ತು. ನೇರವಾಗಿ ಹೇಳದಿದ್ದರೂ ಡಾ. ಜೀ. ಶಂ. ಪ. ಅವರು ಐತಿಹಾಸಿಕ ಭೌಗೋಳಿಕ ವಿಧಾನವನ್ನು ಗಮನದಲ್ಲಿಟ್ಟುಕೊಂಡು ಅಭ್ಯಾಸ ಮಾಡಿದಂತೆ ತೋರುತ್ತದೆ.

ಈ ಬಗೆಯ ಅಧ್ಯಯನದ ಉಪಯುಕ್ತತೆಯನ್ನು ಗಮನಿಸಿಯೂ ಈ ಮಹಾಕಾವ್ಯವನ್ನು ಇನ್ನೂ ಬೇರೆ ದೃಷ್ಟಿ ಕೋನದಿಂದ ಅಭ್ಯಾಸ ಮಾಡಬಹುದೆಂದು ಯೋಚಿಸಿ ೧೯೯೧–೯೩ ರ ಕಾಲಾವಧಿಯಲ್ಲಿ ಉಡುಪಿಯ ಪ್ರಾದೇಶಿಕ ರಂಗಕಲೆಗಳ ಅಧ್ಯಯನ ಕೇಂದ್ರದ ಆರ್ಥಿಕ ನೆರವಿನಿಂದ ನಾನು ಜುಂಜಪ್ಪನ ಕಾವ್ಯದ ಹಲವಾರು ಪಾಠಗಳನ್ನು ಸಂಗ್ರಹಿಸಿದೆ. ಈ ಸಂಪ್ರದಾಯ ಪ್ರಚಲಿತವಿರುವ ಬಳ್ಳಾರಿ, ತುಮಕೂರು, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಸಂಗ್ರಹ ಕಾರ್ಯ ನಡೆಸಿ ಒಟ್ಟು ೫೦ ಪಾಠಗಳನ್ನು ಸಂಗ್ರಹಿಸಿದೆ. ಇವುಗಳಲ್ಲಿ ೩೦ ಗಂಡಸರ ಪಾಠಗಳು, ಉಳಿದವು ಹೆಂಗಸರ ಪಾಠಗಳು ಆಗಿದ್ದವು. ಡಾ. ಎಂ.ಎನ್. ವೆಂಕಟೇಶ ಮತ್ತು ಶ್ರೀ ಸಣ್ಣ ಹನುಮಪ್ಪ ನನ್ನ ಸಹಾಯಕರಾಗಿ ಕೆಲಸ ಮಾಡಿದರು. ಈ ಪಾಠಗಳನ್ನು ಜಾತ್ರೆಯ ಸಹಜ ಸಂದರ್ಭದಲ್ಲಿ, ಹಟ್ಟಿಗಳಲ್ಲಿ ಸಹಜವಾಗಿ ಹಾಡುವ ಸಂದರ್ಭದಲ್ಲಿ, ಮತ್ತೆ ಕೆಲವೊಮ್ಮೆ ನನ್ನ ಉದ್ದೇಶಕ್ಕೆಂದೇ ಹಾಡಿಸಿ ಸಂಗ್ರಹಿಸಲಾಯಿತು. ಕೆಲವು ಪಾಠಗಳು ಅರ್ಧ ಘಂಟೆಯಿಂದ ಒಂದು ಎರಡು ಘಂಟೆಗಳ ಕಾಲ, ಮತ್ತೆ ಕೆಲವು ಐದು ಆರು ಘಂಟೆಗಳ ಕಾಲ, ಇನ್ನೂ ಕೆಲವು ಪಾಠಗಳು ಎಂಟು ಹತ್ತು ಘಂಟೆಗಳು, ಮತ್ತೆ ಕೆಲವು ಪಾಠಗಳು ಹನ್ನೆರಡರಿಂದ ಹದಿನಾಲ್ಕು ಘಂಟೆಗಳ ಕಾಲಾವಧಿಯಲ್ಲಿ ಹಾಡಿದ ಪಾಠಗಳಾಗಿದ್ದವು. ಹೀಗೆ ವಿಭಿನ್ನ ಕಾಲಾವಧಿಯ ಹಾಡುಗಾರಿಕೆಯ ಪಾಠಗಳನ್ನು ಉದ್ದೇಶಪೂರ್ವಕವಾಗಿ ಸಂಗ್ರಹ ಮಾಡಲಾಯಿತು. ತಾವು ಜನಪದ ಮಹಾಕಾವ್ಯವನ್ನು ಹಾಡುತ್ತಿದ್ದೇವೆ ಎಂಬ ಕಲ್ಪನೆ ಅವರಿಗಿಲ್ಲ. ಅದನ್ನು ಜುಂಜಪ್ಪನ ಪದ, ಜುಂಜಪ್ಪನ ಕಥೆ, ಜುಂಜಪ್ಪನ ಹಾಡು ಎಂದು ಅವರು ಕರೆಯುತ್ತಾರೆ. ಜನಪದ ಮಹಾಕಾವ್ಯ ಎಂಬುದು ವಿದ್ವಾಂಸರು ಅಭ್ಯಾಸದ ಅನುಕೂಲಕ್ಕಾಗಿ ಕೊಟ್ಟಿರುವ ಹೆಸರು ಅಷ್ಟೆ. ಯಾವುದೇ ಒಂದು ಜನಪದ ಮಹಾಕಾವ್ಯವನ್ನು ಎಲ್ಲಾ ಹಾಡುಗಾರರೂ ಸಮಗ್ರವಾಗಿ ಹಾಡುವುದಿಲ್ಲ. ಕೆಲವರು ಮಾತ್ರ ಸಮಗ್ರವಾಗಿ ಹಾಡಿದರೆ, ಕೆಲವು ಪ್ರಸಂಗಗಳನ್ನು ಮಾತ್ರ ಹಾಡುವವರೂ ಇದ್ದಾರೆ. ಹೆಂಗಸರು ಜುಂಜಪ್ಪನ ಸೌಂದರ್ಯವನ್ನು ಕುರಿತು ಭಾವಗೀತಾತ್ಮಕವಾಗಿ ಹಾಡಿದರೆ, ಗಂಡಸರು ಜುಂಜಪ್ಪನ ವೀರತನವನ್ನು ಹೊಗಳುವ ಕಗ್ಗದ ಪದಗಳನ್ನು ಹಾಡುತ್ತಾರೆ. ಜುಂಜಪ್ಪನ ಗಣೆಯನ್ನು ಹಿಡಿದು ಹಟ್ಟಿಯಿಂದ ಹಟ್ಟಿಗೆ ಕಾಣಿಕೆಯನ್ನು ಸಂಗ್ರಹಿಸಲು ಹೋಗುವ ಕಾಣಿಕೆಯವರು ಹಟ್ಟಿಗಳಲ್ಲಿ ಜುಂಜಪ್ಪನ ಕಾವ್ಯದ ಕೆಲವು ಭಾಗಗಳನ್ನು ಹಾಡುತ್ತಾರೆ. ಈ ಎಲ್ಲಾ ಪಾಠಗಳಲ್ಲಿ ಮೆಣಸಿನಹಳ್ಳಿ ಗೊಲ್ಲರಹಟ್ಟಿಯ ಪೂಜಾರಿ ಶಿವಣ್ಣ ಅವರ ಪಠ್ಯವನ್ನು ಇಲ್ಲಿ ಸಂಪಾದಿಸಿ ಪ್ರಕಟಿಸಲಾಗಿದೆ.

೧.೯ ಸಂಪಾದನೆ: ಗ್ರಾಂಥಿಕ ಮತ್ತು ಮೌಖಿಕ

ಜುಂಜಪ್ಪ ಕಾವ್ಯವನ್ನು ಕನ್ನಡದಲ್ಲಿ ಜೀ. ಶಂ. ಪರಮಶಿವಯ್ಯ, ಮೀರಾಸಾಬಿಹಳ್ಳಿ ಶಿವಣ್ಣ ಮತ್ತು ಚಿಕ್ಕಣ್ಣ ಎಣ್ಣೆಕಟ್ಟೆ ಅವರು ವಿವಿಧ ಹಾಡುಗಾರರಿಂದ ಸಂಗ್ರಹಿಸಿ ಅದನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಇದು ಫಿನ್ಲೆಂಡ್‌ನಲ್ಲಿ ಎಲಿಯಾಸ್ ಲೆನ್ರೂಟ್ ಕಲೆವಾಲ ಮಹಾಕಾವ್ಯವನ್ನು ಸಂಪಾದಿಸಿದ ಕ್ರಮವನ್ನು ಅನುಸರಿಸಿದೆ. ಇದು ಮೊದಲನೆಯ ಮಾದರಿ. ಚೆಲುವರಾಜು ಅವರು ಮಾಡ್ಲಾನಹಳ್ಳಿ ದಾಸಪ್ಪ ಎಂಬ ಒಬ್ಬರೇ ಕಲಾವಿದರಿಂದ ಸಂಗ್ರಹಿಸಿ ಸಂಪಾದಿಸಿರುವ ಪಠ್ಯ ಹಾಗೂ ಈಗ ನಾವು ಪೂಜಾರಿ ಶಿವಣ್ಣ ಅವರಿಂದ ಸಂಗ್ರಹಿಸಿ, ಸಂಪಾದಿಸಿರುವ ಪಠ್ಯ ಇವುಗಳು ಎರಡನೆಯ ಮಾದರಿಗೆ ಸೇರುತ್ತವೆ. ಇವುಗಳಲ್ಲಿ ಯಾವ ಸಂಪಾದನಾ ಕ್ರಮ ಸರಿಯಾದುದು ಮತ್ತು ಯಾವ ಪಾಠ ಅಧಿಕೃತವಾದುದು ಎಂಬುದರ ಬಗ್ಗೆ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯವಿದೆ. ಇವುಗಳಲ್ಲಿ ಮೊದಲನೆಯ ಸಂಪಾದನಾಕ್ರಮ ಹಳೆಗನ್ನಡ, ನಡುಗನ್ನಡ ಗ್ರಂಥಗಳನ್ನು ಸಂಪಾದಿಸುವ ಗ್ರಂಥಸಂಪಾದನಾ ಶಾಸ್ತ್ರದ ಕ್ರಮವಾಗಿದೆ. ಇದರಲ್ಲಿ ವಿವಿಧ ಶತಮಾನಗಳಲ್ಲಿ ದೊರಕಿದ ಹಸ್ತಪ್ರತಿಗಳ ಆಧಾರದ ಮೇಲೆ ಕವಿಯ ಮೂಲಪ್ರತಿಯನ್ನು ಕಂಡುಹಿಡಿಯುವ ಸಂಪಾದನಾ ಕ್ರಮವಿದೆ. ಆದರೆ ಜನಪದ ಸಾಹಿತ್ಯವನ್ನು ಸಂಗ್ರಹಿಸುವ ಮತ್ತು ಸಂಪಾದಿಸುವ ಕ್ರಮ ಗ್ರಂಥಸಂಪಾದನಾ ಕ್ರಮಕ್ಕಿಂತ ಭಿನ್ನವಾದುದು. ಹೀಗಾಗಿ ಗ್ರಾಂಥಿಕ ಪಠ್ಯಗಳನ್ನು ಸಂಪಾದಿಸುವ ಕ್ರಮಕ್ಕೂ ಮೌಖಿಕ ಪಠ್ಯಗಳನ್ನು ಸಂಪಾದಿಸುವ ಕ್ರಮಕ್ಕೂ ಇರುವ ಹಿನ್ನೆಲೆಗಳನ್ನು ಹಾಗೂ ವ್ಯತ್ಯಾಸಗಳನ್ನು ತಿಳಿಯುವುದು ಅವಶ್ಯಕವಾಗುತ್ತದೆ.

ಹಳೆಗನ್ನಡ ಮತ್ತು ನಡುಗನ್ನಡ ಕಾವ್ಯಗಳನ್ನು ಸಂಪಾದಿಸುವ ಕೆಲಸ ಹತ್ತೊಂಬತ್ತನೆಯ ಶತಮಾನದ ಕೊನೆಯ ಭಾಗದಲ್ಲಿ ರೈಸ್, ಕಿಟಲ್ ಮೊದಲಾದ ಪಾಶ್ಚಾತ್ಯ ವಿದ್ವಾಂಸರಿಂದ ಆರಂಭಗೊಂಡು ಆರ್. ನರಸಿಂಹಾಚಾರ್, ಕೆ. ಬಿ. ಪಾಠಕ್, ಬಿ.ಎಂ.ಶ್ರೀ., ಎ. ಆರ್. ಕೃಷ್ಣಶಾಸ್ತ್ರಿ, ಟಿ. ಎಸ್. ವೆಂಕಣ್ಣಯ್ಯ ಮೊದಲಾದವರು ಹಲವಾರು ಹಳಗನ್ನಡ, ನಡುಗನ್ನಡ ಗ್ರಂಥಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ತೀ. ನಂ. ಶ್ರೀಯವರು ಮೈಸೂರು ವಿಶ್ವವಿದ್ಯಾಲಯದ ಸ್ನಾತಕೋತ್ತರ ಕನ್ನಡ ವಿಭಾಗದ ಮುಖ್ಯಸ್ಥರಾಗಿದ್ದಾಗ ಕನ್ನಡ ಎಂ. ಎ. ತರಗತಿಯ ಪಠ್ಯ ಕ್ರಮದಲ್ಲಿ ಗ್ರಂಥ ಸಂಪಾದನೆಯನ್ನು ಒಂದು ಪತ್ರಿಕೆಯನ್ನಾಗಿ ಸೇರಿಸಿದರು. ಡಿ. ಎಲ್. ನರಸಿಂಹಾಚಾರ್ ಅವರು ಆ ವಿಷಯವನ್ನು ಪಾಠ ಹೇಳಿ ೧೯೬೪ರಲ್ಲಿ ಕನ್ನಡ *ಗ್ರಂಥ ಸಂಪಾದನೆ* ಎಂಬ ಒಂದು ಮಾರ್ಗದರ್ಶಕ ಗ್ರಂಥವನ್ನು ಪ್ರಕಟಿಸಿದರು. ಇದರಿಂದಾಗಿ ಗ್ರಂಥಸಂಪಾದನೆಗೆ ಒಂದು ಹೊಸ ಆಯಾಮ ದೊರೆತು ಹಲವು ವಿದ್ವಾಂಸರು ಹಳಗನ್ನಡ, ನಡುಗನ್ನಡ, ವಚನ ಸಾಹಿತ್ಯ, ದಾಸ ಸಾಹಿತ್ಯ ಪಠ್ಯಗಳನ್ನು ಶಾಸ್ತ್ರೀಯವಾಗಿ ಸಂಪಾದಿಸಿ ಪ್ರಕಟಿಸಿದ್ದಾರೆ. ಹಲವಾರು ವಿಶ್ವವಿದ್ಯಾನಿಲಯಗಳಲ್ಲಿ ಹಾಗೂ ಸಂಶೋಧನಾ ಸಂಸ್ಥೆಗಳಲ್ಲಿ ಇಂದು ಹಸ್ತಪ್ರತಿಶಾಸ್ತ್ರ ಮತ್ತು ಗ್ರಂಥ ಸಂಪಾದನಾ ಶಾಸ್ತ್ರ ಎರಡನ್ನೂ ಪ್ರತ್ಯೇಕವಾಗಿ ರೂಪಿಸಲಾಗಿದೆ. ಹಸ್ತಪ್ರತಿ ಶಾಸ್ತ್ರ ಹಸ್ತಪ್ರತಿಗಳಿಗಾಗಿ ಕ್ಷೇತ್ರಕಾರ್ಯ ಮಾಡುವುದು, ಸಂಗ್ರಹಿಸಿದ ಓಲೆಗರಿ ಗ್ರಂಥಗಳನ್ನು

ವ್ಯವಸ್ಥಿತವಾಗಿ ಜೋಡಿಸುವುದು, ಅವುಗಳನ್ನು ರಕ್ಷಿಸುವುದು, ಹಾಗೂ ಅವುಗಳ ಸೂಚಿಯನ್ನು ತಯಾರಿಸುವುದು, ಡಿಜಿಟಲ್ ರೂಪದಲ್ಲಿ ದಾಖಲಿಸುವುದು ಇವುಗಳನ್ನು ಒಳಗೊಂಡಿರುತ್ತದೆ. ಇದರ ಮುಂದಿನ ಹಂತವೇ ಗ್ರಂಥ ಸಂಪಾದನೆ. ಹಸ್ತಪ್ರತಿ ಶಾಸ್ತ್ರ ಮತ್ತು ಗ್ರಂಥ ಸಂಪಾದನ ಶಾಸ್ತ್ರದ ಸ್ವರೂಪ, ವಿಧಾನ ಹಾಗೂ ಅವುಗಳ ತಾತ್ವಿಕತೆಯನ್ನು ಕುರಿತು ಕೆಲವು ಗ್ರಂಥಗಳು ಹಾಗೂ ಲೇಖನಗಳು ಪ್ರಕಟವಾಗಿವೆ.

ಒಬ್ಬ ಕವಿ ಯಾವುದೋ ಕಾಲಾವಧಿಯಲ್ಲಿ ತನ್ನ ಒಂದು ಕೃತಿಯನ್ನು ಓಲೆಗರಿಯ ಮೇಲೆ ಬರೆಯುತ್ತಾನೆ. ಅದು ಅವನ ಸ್ವಹಸ್ತಾಕ್ಷರ ಪ್ರತಿ. ಆ ಕಾಲದಲ್ಲಿ ಮುದ್ರಣದ ವ್ಯವಸ್ಥೆ ಇಲ್ಲದೇ ಇದ್ದುದರಿಂದ ಅದನ್ನು ಮುಂದಿನ ತಲೆಮಾರುಗಳ ಹಲವು ಜನರು ಓಲೆಗರಿಗಳಲ್ಲಿ ಪ್ರತಿಗಳನ್ನು ಮಾಡಿಕೊಳ್ಳುತ್ತಾರೆ. ಈ ಪ್ರತಿ ಮಾಡಿಕೊಳ್ಳುವ ಪ್ರಕ್ರಿಯೆಯಲ್ಲಿ ಹಲವಾರು ತಪ್ಪುಗಳಾಗುತ್ತವೆ. ಈ ತಪ್ಪುಗಳನ್ನು ಸ್ಖಾಲಿತ್ಯಗಳೆಂದು ಕರೆಯಲಾಗಿದೆ ಹಾಗೂ ಸ್ಖಾಲಿತ್ಯದ ವಿವಿಧ ಬಗೆಗಳನ್ನು ಗುರುತಿಸಲಾಗಿದೆ. ಗ್ರಂಥ ಸಂಪಾದನೆ ಮಾಡುವವರು ಈ ಹಸ್ತಪ್ರತಿಗಳನ್ನು ಅಭ್ಯಾಸಮಾಡಿ ಅವುಗಳ ವಂಶವೃಕ್ಷವನ್ನು ತಯಾರಿಸಿಕೊಳ್ಳುತ್ತಾರೆ. ಒಂದೊಂದು ಪ್ರತಿಗೂ ಒಂದೊಂದು ಸಂಕೇತವನ್ನು ಕೊಟ್ಟು ಆ ಹಸ್ತಪ್ರತಿಗಳ ಪೀಳಿಗೆಗಳನ್ನು ನಿಷ್ಕರ್ಷಿಸುತ್ತಾರೆ. ಆಂತರಿಕ ಮತ್ತು ಬಾಹ್ಯ ಆಧಾರಗಳ ಮೇಲೆ ಯಾವ ಹಸ್ತಪ್ರತಿ ಅತ್ಯಂತ ಪ್ರಾಚೀನವಾದುದು ಎಂಬುದನ್ನು ನಿಷ್ಕರ್ಷೆಮಾಡುತ್ತಾರೆ. ಇದು ಕವಿಯ ಸ್ವಹಸ್ತಾಕ್ಷರ ಪ್ರತಿಯಾಗಿರುವುದಿಲ್ಲ. ಅದರ ಹತ್ತನೆಯ ಅಥವಾ ಇಪ್ಪತ್ತನೆಯ ಪೀಳಿಗೆಯ ಪ್ರತಿಯೂ ಆಗಿರಬಹುದು. ಅತ್ಯಂತ ಪ್ರಾಚೀನವಾದ ಪ್ರತಿಯನ್ನು ಮೂಲಪ್ರತಿಗೆ ಸಮೀಪವಾದದ್ದು ಮತ್ತು ಅಧಿಕೃತವಾದದ್ದು ಎಂದು ಪರಿಗಣಿಸಲಾಗುತ್ತದೆ. ಆದರೆ ಭಿನ್ನ ಪಾಠಗಳನ್ನೂ ಕೂಡ ಅಗತ್ಯವಾಗಿ ದಾಖಲು ಮಾಡಲಾಗುತ್ತದೆ. ಹಿಂದಿನ ಸಂಪಾದಕರು ತಪ್ಪು ಮಾಡಿದ್ದರೆ ಈ ಭಿನ್ನ ಪಾಠಗಳಿರುವುದರಿಂದ ಮುಂದಿನವರು ಸರಿಯಾದ ಪಾಠವನ್ನು ಕಂಡುಹಿಡಿಯಲು ಅನುಕೂಲವಾಗುತ್ತದೆ. ಕನ್ನಡ ಗ್ರಂಥ ಸಂಪಾದನಾ ಶಾಸ್ತ್ರದಲ್ಲಿ ಸಾಮಾನ್ಯವಾಗಿ ಈ ಕ್ರಮವನ್ನು ಅನುಸರಿಸಲಾಗುತ್ತದೆ.

ಕನ್ನಡ ಜನಪದ ಸಾಹಿತ್ಯ ಸಂಕಲನಗಳನ್ನು ಪ್ರಕಟಿಸುವಾಗ ಆರಂಭದಲ್ಲಿ ಗ್ರಂಥಸಂಪಾದನ ಶಾಸ್ತ್ರದ ನಿಯಮಗಳನ್ನು ಅನುಸರಿಸಿದಂತೆ ತೋರುತ್ತದೆ. ಆದರೆ ಈ ಕ್ರಮವನ್ನು ಜನಪದ ಸಾಹಿತ್ಯದ ಸಂಕಲನದ ಸಂದರ್ಭದಲ್ಲಿ ಬಳಸುವುದು ಅಷ್ಟು ಸೂಕ್ತ ಎನಿಸುವುದಿಲ್ಲ. ಏಕೆಂದರೆ, ಇಲ್ಲಿ ಮೂಲದ ಯಾವುದೋ ಒಂದು ಅಧಿಕೃತವಾದ ಪಾಠ ಇತ್ತು ಎಂದು ಹೇಳುವುದು ಕಷ್ಟ. ಇದರಲ್ಲಿ ಹಾಡುಗಾರರು ಒಂದು ಮೂಲ ಚೌಕಟ್ಟನ್ನು ಇರಿಸಿಕೊಂಡು ತಮ್ಮ ತಮ್ಮ ಪ್ರತಿಭೆಗೆ ಅನುಗುಣವಾಗಿ ಹಾಡುತ್ತಾ ಅಥವಾ ಕಥೆಯ ರೂಪದಲ್ಲಿ ಹೇಳುತ್ತಾ ಹೋಗುತ್ತಾರೆ. ಹೀಗಾಗಿ ಇಂತಹುದೇ ಅಧಿಕೃತವಾದ ಪಾಠ ಎಂದು ಹೇಳುವುದು ಕಷ್ಟ. ಜುಂಜಪ್ಪನ ಕಾವ್ಯವನ್ನೇ ಉದಾಹರಣೆಯಾಗಿ ತೆಗೆದುಕೊಂಡರೆ ಜೀ.ಶಂ.ಪ., ಮೀರಾಸಾಬಿಹಳ್ಳಿ ಶಿವಣ್ಣ, ಚಿಕ್ಕಣ್ಣ ಎಣ್ಣೆಕಟ್ಟೆ ಅವರುಗಳು ವಿವಿಧ ಹಾಡುಗಾರರು ಅಥವಾ ಕಥೆಗಾರರಿಂದ ಕಾವ್ಯದ ಕೆಲವು ಭಾಗಗಳನ್ನು ಸಂಗ್ರಹಿಸಿ ಅವುಗಳನ್ನು ತಮಗೆ ಸೂಕ್ತ ಎನಿಸಿದ ರೀತಿಯಲ್ಲಿ ಪ್ರಕಟಿಸಿದ್ದಾರೆ. ಇವುಗಳೂ ಕೂಡ

ಆ ಕಲಾವಿದರು ಹಾಡಿದ / ಹೇಳಿದ ಸಮಗ್ರ ಪಾಠಗಳಲ್ಲ. ಅವುಗಳ ಸಾರಾಂಶ ರೂಪದ ಪಠ್ಯಗಳು. ಇಲ್ಲಿ ಸಂಪಾದಕರು ಹೆಚ್ಚಿನ ಸ್ವಾತಂತ್ರ್ಯ ತೆಗೆದುಕೊಳ್ಳುತ್ತಾರೆ. ಒಬ್ಬನೇ ಕಲಾವಿದ ಹಾಡಿದ ದೀರ್ಘಪಾಠಗಳು ಲಭ್ಯವಿಲ್ಲದಿದ್ದಲ್ಲಿ ಈ ಕ್ರಮ ಖಂಡಿತವಾಗಿಯೂ ಉಪಯುಕ್ತ. ದೀರ್ಘಪಠ್ಯಗಳು ದೊರೆಯದಿದ್ದ ಸಂದರ್ಭದಲ್ಲಿ ಇಷ್ಟಾದರೂ ದೊರೆಯಿತಲ್ಲಾ ಎಂದು ಸಮಾಧಾನ ಪಡಬಹುದು. ಆದರೆ ಒಬ್ಬನೇ ಹಾಡುಗಾರ ದೀರ್ಘ ಪ್ರಮಾಣದ ಕಾವ್ಯವನ್ನು, ಪೂರ್ಣ ಪ್ರಮಾಣದ್ದು ಎನಿಸುವಷ್ಟು ಹಾಡುವ ಸಂದರ್ಭಗಳು ಇನ್ನೂ ಲಭ್ಯವಿರುವಾಗ ಒಬ್ಬೊಬ್ಬ ಹಾಡುಗಾರನ ದೀರ್ಘ ಪಠ್ಯಗಳನ್ನು ಅದರ ಮೂಲರೂಪದಲ್ಲಿ ಪ್ರಕಟಿಸುವುದೇ ಹೆಚ್ಚು ಉಪಯುಕ್ತವಾಗುತ್ತದೆ. ಇದರಿಂದ ಮೂಲ ಹಾಡುಗಾರನಿಗೆ ಸೂಕ್ತವಾದ ಪ್ರಾತಿನಿಧ್ಯ ಹಾಗೂ ಗೌರವ ದೊರಕುತ್ತದೆ.

ಜುಂಜಪ್ಪನ ಕಥೆಗೊಂದು ನಿರ್ದಿಷ್ಟ ಚೌಕಟ್ಟು ಇದೆ. ಎಲ್ಲಾ ಹಾಡುಗಾರರೂ ಆ ಚೌಕಟ್ಟನ್ನು ಅವಲಂಬಿಸಿಯೇ ಹಾಡುತ್ತಾರೆ. ಉದಾಹರಣೆಗೆ ಜುಂಜಪ್ಪನ ಕಾವ್ಯದಲ್ಲಿ ಮೂರು ತಲೆಮಾರುಗಳ ಕಥೆ ಬರುತ್ತದೆ ಎಂಬುದರಲ್ಲಿ ಯಾವ ಹಾಡುಗಾರರಲ್ಲಿಯೂ ಭಿನ್ನಾಭಿಪ್ರಾಯಗಳಿಲ್ಲ. ಮೊದಲನೆಯ ತಲೆಮಾರು ದೇವರ ದಯಮಾರನದು, ಎರಡನೆಯ ತಲೆಮಾರು ಕೆಂಗುರಿ ಮಲ್ಲೇಗೌಡನದು. ಕೆಲವು ಪಠ್ಯಗಳಲ್ಲಿ ಆತನನ್ನು ಕೆಂಪನ ಮಲ್ಲೇಗೌಡ ಎಂದು ಕರೆಯಲಾಗಿದೆ. ಮೂರನೆಯ ತಲೆಮಾರು ಜುಂಜಪ್ಪನದು. ಕೆಂಗುರಿ ಮಲ್ಲೇಗೌಡನನ್ನು ಸಾಕಿದವನು ಅಳುವಿನವರ ಒಕ್ಕಲಿಗರವನಾದ ಹೊನ್ನಟ್ಟಿ ಆಲೆಗೌಡ. ಜುಂಜಪ್ಪನ ಹುಟ್ಟು ಅಲೌಕಿಕ, ಆತನ ಸಾವು ಅವನ ಸೋದರ ಮಾವಂದಿರು ವಿಷಹಾಕುವುದರಿಂದ ಸಂಭವಿಸುತ್ತದೆ. ಜುಂಜಪ್ಪ ಮಾರನವರ ಗೊಲ್ಲರವನು. ಕೆಲವು ಕಡೆ ಕರಡಿಯವರ ಗೊಲ್ಲರವನು ಎನ್ನಲಾಗಿದೆ. ಅವನ ಸೋದರ ಮಾವಂದಿರು ಕಂಬೇರ ಗೊಲ್ಲರು, ಇವೆಲ್ಲವೂ ಬದಲಾಗದ ಕಥಾಂಶಗಳು. ಆದರೆ ಅವನು ಹಸುಗಳನ್ನು ಮೇಯಿಸಿದ ಕಾವಲುಗಳ ಹೆಸರುಗಳು ಭಿನ್ನವಾಗುತ್ತದೆ. ಸೋದರ ಮಾವಂದಿರ ಹೆಸರುಗಳು ಭಿನ್ನವಾಗುತ್ತವೆ. ಜುಂಜಪ್ಪನ ಮರಣೋತ್ತರ ಸಾಹಸಗಳನ್ನು ಹಾಡುವವರ ಸಂಖ್ಯೆ ತೀರಾ ಕಡಿಮೆ. ಪ್ರತಿಯೊಬ್ಬ ಹಾಡುಗಾರನೂ ತನ್ನ ಮನೋಭಾವಕ್ಕೆ ಅನುಗುಣವಾಗಿ ಕೆಲವು ಕಥಾ ಪ್ರಸಂಗಗಳನ್ನು ಮತ್ತಷ್ಟು ಆಕರ್ಷಕ ಹಾಗೂ ಪರಿಣಾಮಕಾರಿಯಾಗುವಂತೆ ಹಾಡುವ/ಕಥೆಹೇಳುವ ಸಾಮರ್ಥ್ಯ ಪಡೆದಿರುತ್ತಾನೆ. ಅದಕ್ಕೆ ಪ್ರಾದೇಶಿಕ ಹಾಗೂ ಸಾಂದರ್ಭಿಕ ಪ್ರಭಾವಗಳೂ ಕಾರಣ ಇರಬಹುದು.

ಉದಾಹರಣೆಗೆ, ಪುರಲಹಳ್ಳಿ ಅಜ್ಜಪ್ಪ ಎಂಬ ಹಾಡುಗಾರ ಜುಂಜಪ್ಪನ ಪದದಲ್ಲಿ ಬರುವ ಪುರಲಹಳ್ಳಿ ಭೂತಪ್ಪ ಮತ್ತು ತಾಳ್ಯದ ದುರ್ಗಿ ಕಾವಲಿನ ಕಥಾಭಾಗವನ್ನು ಎಷ್ಟು ಪರಿಣಾಮಕಾರಿಯಾಗಿ ಹಾಡುತ್ತಾರೆಂದರೆ ಅದೇ ಕಥಾ ಭಾಗವನ್ನು ಅಜ್ಜಪ್ಪ ಹಾಡುವುದನ್ನು ಕೇಳಿದ ನಂತರ ಮೂಡಲಪ್ಪ, ಪೂಜಾರಿ ಈರಣ್ಣ, ಶಿವಣ್ಣ ಇವರು ಹಾಡಿದ್ದನ್ನು ಕೇಳಿದರೆ ಅಷ್ಟು ಪರಿಣಾಮಕಾರಿ ಎನ್ನಿಸುವುದಿಲ್ಲ. ಅದೇ ಮೂಡಲಪ್ಪ ಹಾಡಿದ ಕಾಡುಗೊಲ್ಲರ ಸಂಪ್ರದಾಯದ ವಿವರಗಳು ಇತರರ ಹಾಡುವಿಕೆಯಲ್ಲಿ ಅಷ್ಟು

ವಿವರವಾಗಿ ದೊರಕುವುದಿಲ್ಲ. ಹೀಗಾಗಿ ಪ್ರತಿಯೊಬ್ಬ ಹಾಡುಗಾರನೂ ಒಬ್ಬ ಕಲಾವಿದ. ಪ್ರತಿ ಹಾಡುಗಾರನ ಶ್ರೇಷ್ಠ ಪಠ್ಯಗಳೆಂದು ಆಯಾ ಭಾಗಗಳನ್ನು ಮಾತ್ರ ಆರಿಸಿ ಸಂಕಲಿಸಿದರೆ ಒಟ್ಟು ಕಥೆಗಿಂತ ವಿವಿಧ ಭಾಗಗಳ ವರ್ಣನೆಯೇ ಅಧಿಕವಾಗಿಬಿಡುತ್ತದೆ. ಇಂತಹ ಸಂಕಲಿತ ಕೃತಿ ಹೇಗಿರುತ್ತದೆಂದರೆ ರನ್ನನ ಗದಾಯುದ್ಧದ ದುರ್ಯೋಧನ ವಿಲಾಪ ಪ್ರಸಂಗವನ್ನೂ, ಕುಮಾರವ್ಯಾಸಭಾರತದ ಉತ್ತರನ ಪ್ರಸಂಗವನ್ನೂ, ಪಂಪಭಾರತದ ಭೀಷ್ಮರ ಪಟ್ಟಕಟ್ಟುವ ಸಂದರ್ಭವನ್ನೂ ಒಟ್ಟು ಸೇರಿಸಿ ಒಂದು ಮಹಾಭಾರತ ಪಠ್ಯವನ್ನು ತಯಾರು ಮಾಡಿದಂತಾಗುತ್ತದೆ. ಇದು ಮೂಲಕಥೆಯೇ ಲಭ್ಯವಿಲ್ಲದಿದ್ದಾಗ ತುಣುಕುಗಳನ್ನು ಸೇರಿಸಿ ಪೂರ್ಣ ಪಠ್ಯ ಪಡೆಯುವಂತಹ ಕಲೆವಲ ದಂತಹ ಪ್ರಯತ್ನವಾಗಿ ಒಪ್ಪಿಕೊಳ್ಳಬಹುದು. ಆದರೆ ಜುಂಜಪ್ಪನ ಕಾವ್ಯದ ದೀರ್ಘ ಪಠ್ಯಗಳೇ ಇಂದಿಗೂ ಮೌಖಿಕವಾಗಿ ಲಭ್ಯವಿರುವಾಗ 'ತುಣುಕುಗಳನ್ನು ಸೇರಿಸಿ' ಒಂದು ಸಮ್ಮಿಶ್ರ ಪಾಠವನ್ನು ತಯಾರಿಸಬೇಕಾದ ಅಗತ್ಯವಿಲ್ಲ. ಆದರೂ ಆ ಎಲ್ಲಾ ಹಾಡುಗಾರರೂ ಹಾಡಿದ ಪಠ್ಯಗಳನ್ನು ಅವರವರಿಗೆ ಸೂಕ್ತ ಮನ್ನಣೆ ದೊರಕಿಸಿಕೊಟ್ಟು ಪ್ರಕಟಿಸುವುದು ತೀರಾ ಅಗತ್ಯ. ಏಕೆಂದರೆ, ಅವುಗಳ ತೌಲನಿಕ ಅಧ್ಯಯನದ ಅಗತ್ಯ ಇದೆ. ಅಲ್ಲದೆ ಪ್ರತಿ ಕಲಾವಿದನಲ್ಲಿಯೂ ಸೃಜನಶೀಲತೆ ಇರುತ್ತದೆ. ಆ ಕಾರಣದಿಂದಾಗಿ ಆತ ಸೃಷ್ಟಿಸಿದ ಕಾವ್ಯಕ್ಕೆ ವಿಶೇಷತೆ ಇರುತ್ತದೆ. ಅವುಗಳನ್ನು ಪ್ರತ್ಯೇಕವಾಗಿಯೇ ಗುರುತಿಸಿ 'ಆಸ್ವಾದಿಸುವುದು ಮತ್ತು ಅಧ್ಯಯನ ನಡೆಸುವುದು' ಅಗತ್ಯವಾಗಿ ನಡೆಯಬೇಕಾಗಿರುವ ಕೆಲಸ. ಈ ಹಿನ್ನೆಲೆಯಲ್ಲಿ ಮೀರಾಸಾಬಿಹಳ್ಳಿ ಶಿವಣ್ಣ ಅವರು ತಾವು ವಿವಿಧ ಕಲಾವಿದರಿಂದ ಸಂಗ್ರಹಿಸಿರುವ ಭಾಗಗಳನ್ನು ಅವರವರ ಹೆಸರುಗಳಲ್ಲಿ ಪ್ರಕಟಿಸಿ ಅವುಗಳ ಮಹತ್ವವನ್ನು ವಿಶ್ಲೇಷಿಸುವುದು ಅಗತ್ಯ. ಅವರು ವಿವಿಧ ಕಲಾವಿದರಿಂದ ಪಠ್ಯಗಳನ್ನು ಸಂಗ್ರಹಿಸಿರುವ ಕೆಲಸ ಉಪಯುಕ್ತವಾದುದು. ಆದರೆ ಅವುಗಳನ್ನು ಒಂದೇ ಪಠ್ಯವಾಗಿ ಸಮ್ಮಿಶ್ರಗೊಳಿಸಿರುವುದು ಅಧ್ಯಯನದ ಸಾಧ್ಯತೆಗಳನ್ನು ಕಡಿಮೆ ಮಾಡಿದೆ.

ಈ ವಿಷಯವನ್ನು ಕುರಿತು ವಿವರವಾಗಿ ಚರ್ಚೆಮಾಡಿರುವ ಜಾನಪದ ವಿದ್ವಾಂಸರಾದ ಎ.ವಿ. ನಾವಡ ಅವರು ಈ ರೀತಿ ಹೇಳುವುದು ಸಮರ್ಪಕವಾಗಿದೆ:

> ಶಿಷ್ಟ ಸಾಹಿತ್ಯದಲ್ಲಿ ಭಿನ್ನಪಾಠಗಳು, ಪಾಠಾಂತರಗಳು ನೇತ್ಯಾತ್ಮಕ ಅಂಶಗಳಾದರೆ, ಜಾನಪದದಲ್ಲಿ ಅವು ಇತ್ಯಾತ್ಮಕ ಅಂಶಗಳು. ಇಲ್ಲಿ ಒಂದು ಸರಿ ಇನ್ನೊಂದು ತಪ್ಪು, ಒಂದು ಶುದ್ಧ, ಇನ್ನೊಂದು ಅಶುದ್ಧ ಎಂದು ತಿಳಿಯಲಾಗದು. ಜನಪದ ಕವಿ, ಕಥೆಗಾರ, ಕಲಾವಿದರು ತಮ್ಮ ಪರಿಸರ, ಆಡುನುಡಿ ಹಾಗೂ ಸಂದರ್ಭಕ್ಕೆ ತಕ್ಕಂತೆ ಸೃಜನಶೀಲತೆಯನ್ನು ತೋರಿ ಬಹುತ್ವವನ್ನು ಹುಟ್ಟಿಹಾಕುವುದು ಸಹಜ ಹಾಗೂ ಅನಿವಾರ್ಯ. ಅದು ಅವರ ಅನನ್ಯತೆಯ ಪ್ರಶ್ನೆಯೂ ಹೌದು. ಇಂತಹ ರೂಪಾಂತರ, ಪಾಠಾಂತರಗಳ ಮೇಲೆ ಮಟ್ಟಸವಾಗಿ ಇಟ್ಟಿಗೆ ಎಳೆಯುವ ಕೆಲಸ ಸರಿಯಲ್ಲ. ಇಲ್ಲಿ ಶುದ್ಧಪಾಠವನ್ನು ಹುಡುಕುವ ಪ್ರಶ್ನೆಯೇ ಬರುವುದಿಲ್ಲ. (ಸಿರಿಗನ್ನಡ, ೨೦೧೩:೭೧೨)

೧.೧೦. ಪೂಜಾರಿ ಶಿವಣ್ಣ

ಇವರು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿ ಮೆಣಸಿನಹಟ್ಟಿಯವರು. ಇವರು ಈಗ ನಿಧನವಾಗಿದ್ದಾರೆ. ಜುಂಜಪ್ಪ ಕಾವ್ಯವನ್ನು ಹಾಡುವ ಹಾಗೂ ಕಥೆಯ ರೂಪದಲ್ಲಿ ಹೇಳುವ ಅಪೂರ್ವ ಕಲಾವಿದರು. ಅತ್ಯಂತ ಚಟುವಟಿಕೆಯ ಹಾಡುಗಾರರಾದ ಇವರು ಹತ್ತಾರು ಊರುಗಳಲ್ಲಿ ಬಿಡುವಿಲ್ಲದಂತೆ ಕಾರ್ಯಕ್ರಮಗಳನ್ನು ನೀಡಿದ್ದ ಅತ್ಯಂತ ಬೇಡಿಕೆಯ ಹಾಡುಗಾರರು. ಸಂಪ್ರದಾಯಕ್ಕೆ ಬದ್ಧರಾಗಿ ಅದಕ್ಕೆ ಕುಂದುಂಟಾಗದಂತೆ ಹಾಡುವ ಇವರನ್ನು ಜನರು 'ಜುಂಜಪ್ಪಸ್ವಾಮಿ' ಎಂದು ಕರೆಯುವಂತೆಯೇ 'ಪದಹೇಳೋ ಶಿವಣ್ಣ' ಎಂದೂ ಕರೆಯುತ್ತಾರೆ. ಇವರು ತನ್ನ ಎದುರಿಗಿನ ಶ್ರೋತೃಗಳನ್ನು ಸಂತೋಷಪಡಿಸಲು, ಕಾರ್ಯಕ್ರಮ ಹೆಚ್ಚು ರಸವತ್ತಾಗಿ, ಹಾಸ್ಯಮಯವಾಗಿ ಲವಲವಿಕೆಯಿಂದ ಕೂಡಿರುವಂತೆ ಮಾಡುವ ಕಲೆಗಾರರು. ಹೀಗಾಗಿ ಸಂಪ್ರದಾಯದ ಎಲ್ಲೆಕಟ್ಟಿಗಿಂತ ಭಿನ್ನವಾಗಿ ಕಥೆಯನ್ನು ಹೇಳುವ ಪ್ರದರ್ಶಕ. ಇವರಿಗೆ ತನ್ನ ವ್ಯಕ್ತಿತ್ವದ ಛಾಪನ್ನು ಮೂಡಿಸುವ ಹಂಬಲ ಬಹಳ. ಹೀಗಾಗಿ ಒಂದು ರೀತಿಯ ಪ್ರದರ್ಶನ ಪ್ರಿಯತೆ ಇವರಲ್ಲಿ ಕಂಡುಬರುತ್ತದೆ. ಇವರು ಜನಗಳ ಜೊತೆ ಸಲೀಸಾಗಿ ಬೆರೆಯುತ್ತಾರೆ. ಪರಿಣಾಮಕಾರಿಯಾಗಿ ಜುಂಜಪ್ಪನ ಕಥೆಯನ್ನು ಹೇಳುತ್ತಾರೆ. ಕೇಳುಗರ ಮೇಲೆ ವಿಶೇಷವಾದ ಪರಿಣಾಮವನ್ನು ಬೀರುತ್ತಾರೆ.

ಎಂ.ಎನ್. ವೆಂಕಟೇಶ್ ಅವರು ೧೯೯೩ರ ಏಪ್ರಿಲ್ ೧೪ರಿಂದ ೧೮ರವರೆಗೆ ಐದು ದಿನಗಳ ಕಾಲ ಶಿವಣ್ಣ ಹಾಡಿದ ಜುಂಜಪ್ಪನ ಕಾವ್ಯವನ್ನು ಟೇಪ್‌ರೆಕಾರ್ಡ್ ಮಾಡಿಕೊಂಡರು. ಶಿವಣ್ಣ ವಾಸವಾಗಿರುವ ಹಟ್ಟಿಯ ಸಮೀಪದಲ್ಲಿ ಶಿವಪ್ರಕಾಶ್ ಎಂಬ ಬ್ರಾಹ್ಮಣರ ಮನೆಯಿದೆ. ಶಿವಣ್ಣ ಅವರ ಪರಿಚಯ ಮಾಡಿಕೊಟ್ಟಿದ್ದು ಶಿವಪ್ರಕಾಶ್ ಅವರೇ. ಶಿವಪ್ರಕಾಶ್ ಅವರಿಗೆ ಈ ಪ್ರದೇಶದ ಗೊಲ್ಲರ ಹಟ್ಟಿಗಳಲ್ಲಿ ಗೌರವವಿದೆ. ಅವರನ್ನು ಮಾರನಹಳ್ಳಿ ಗುಂಡಣ್ಣನವರು ಎಂದೇ ಎಲ್ಲರೂ ಕರೆಯುತ್ತಾರೆ. ಶಿವಣ್ಣ ಅವರು ತಮ್ಮ ಹಾಡಿನಲ್ಲಿ / ಕಥೆಯಲ್ಲಿ ಎಲ್ಲೆಲ್ಲಿ 'ಗುಂಡಣ್ಣನವರು' ಎಂದು ಹೇಳಿದ್ದಾರೋ ಅದು ಈ ಶಿವಪ್ರಕಾಶ್‌ರವರನ್ನು ಕುರಿತದ್ದು. ಪೂಜಾರಿ ಶಿವಣ್ಣ ಹಾಡಿದ್ದು ಆತನ ಸ್ವಂತ ಊರಾದ ಮೆಣಸಿನಹಟ್ಟಿಯಲ್ಲಿ; ಪ್ರತಿದಿನ ಕತ್ತಲಾಗುತ್ತಿದ್ದಂತೆ ಈ ಹಾಡುವ ಕಾರ್ಯಕ್ರಮ ಆರಂಭವಾಗುತ್ತಿತ್ತು. ನಾವು ರೆಕಾರ್ಡಿಂಗ್ ಕಾರಣಕ್ಕಾಗಿ ಹಾಡಿಸುತ್ತಿದ್ದೇವೆಂದು ಗೊತ್ತಿದ್ದರೂ ಆ ಹಟ್ಟಿಯಲ್ಲಿದ್ದ ಓಬಳ ನರಸಿಂಹ (ಅಹೋಬಲ ನರಸಿಂಹ) ದೇವರಿಗೆ ಪೂಜೆ ಸಲ್ಲಿಸಿ ಹಾಡುವುದನ್ನು ಆರಂಭಿಸುತ್ತಿದ್ದರಲ್ಲದೆ, ಹಟ್ಟಿಯ ಜನರೆಲ್ಲಾ ಆ ದೇವಾಲಯದಲ್ಲಿ ಏನೋ ಪೂಜೆ ಇದೆಯೇನೋ ಎಂಬಂತೆ ಅದರಲ್ಲಿ ಭಾಗಿಗಳಾಗುತ್ತಿದ್ದರು. ಈ ಕಾರಣದಿಂದಾಗಿ ಇದು ಕೃತಕ ಸಂದರ್ಭ ಎನ್ನಿಸಿಕೊಳ್ಳದೆ ಸಹಜ ಸಂದರ್ಭವೆಂದೇ ಪರಿಗಣಿಸಲು ಯೋಗ್ಯವಾದ ಪಠ್ಯವಾಗಿದೆ. 'ಪದ ಹೇಳುವ ಶಿವಣ್ಣ' ಜುಂಜಪ್ಪನ ಪದ ಹೇಳುತ್ತಾರೆನ್ನುವ ಕಾರಣಕ್ಕಾಗಿಯೇ ಪೂಜಾರಿ ಶಿವಣ್ಣ ಎಂಬ ಹೆಸರನ್ನು ಪಡೆದಿದ್ದಾರೆ. ಅವರಿಗೆ ಹಟ್ಟಿಯಲ್ಲಿ ಹಟ್ಟಿದೇವರ ಪೂಜಾರಿಗೆ ಇರುವಷ್ಟೇ ಗೌರವವಿದೆ. ಅನೇಕ ಸಂಕೀರ್ಣ ಸಂದರ್ಭಗಳಲ್ಲಿ ಆಚರಣಾ ವಿಧಿಗಳ

ಕುರಿತು ಭಿನ್ನಾಭಿಪ್ರಾಯ ಬಂದಾಗ ಇವರ ಮಾತೇ ಅಂತಿಮವಾಗುತ್ತದೆ. ಎದುರಿನ ಶಿವಣ್ಣ ಅವರಿಗೆ ಪ್ರೇಕ್ಷಕರನ್ನು ತನ್ನ ಮಾತಿನ ಮೋಡಿಯಿಂದ ಹಿಡಿದಿಡುವ ಕಲೆ ವಿಶೇಷವಾಗಿ ತಿಳಿದಿದೆ. ಕಥೆಯೊಳಗಿನ ಘಟನೆ ಅಲ್ಲೆ ಆ ಹಟ್ಟಿಯಲ್ಲಿ ಆಗಷ್ಟೇ ಜರುಗುತ್ತಿದೆಯೇನೋ ಎಂಬಂತೆ ಹೇಳುತ್ತಾ ಹಲವು ಸಂದರ್ಭಗಳಲ್ಲಿ ಸಲೀಸಾಗಿ ಪ್ರೇಕ್ಷಕರೊಂದಿಗೆ ಸಂಭಾಷಣೆಯಲ್ಲಿ ತೊಡಗುತ್ತಾರೆ. ಮದುವೆಯ ಸಂದರ್ಭದಲ್ಲಿ ಸರಳ ಮದುವೆಗೆ ಗೊಲ್ಲರಹಟ್ಟಿಯಲ್ಲಿ ನಡೆದ ಮದುವೆಯಂತೆ ಎಂದೂ, ಗ್ರ್ಯಾಂಡ್ ಆಗಿ ನಡೆದ ಮದುವೆಗೆ ಗುಂಡಣ್ಣನವರ ಅಂದರೆ ಶಿವಪ್ರಕಾಶ್ ಅವರ ಮನೆ ಮುಂದೆ ನಡೆದ ಮದುವೆ ಎಂದೂ ಹೋಲಿಕೆ ನೀಡಿಬಿಡುತ್ತಾರೆ. ಜುಂಜಪ್ಪನಿಗೆ ಮದ್ದು ಹಾಕಿದ ಸಂದರ್ಭದಲ್ಲಿ ಜುಂಜಪ್ಪ ಸಭಾಸದರಿಗೆ ಹೇಳುವ ಭಾಷಣದ ಸಂದರ್ಭ ಬಂದಾಗ ಹಳ್ಳಿಯ ಶಾಲೆಯಲ್ಲಿ ಭಾಷಣವನ್ನು ಹೇಗೆ ಮಾಡುತ್ತಾರೋ ಆ ಶೈಲಿಯಲ್ಲಿ ಜುಂಜಪ್ಪನ ಭಾಷಣವನ್ನು ನಿರೂಪಿಸುತ್ತಾರೆ. ಹೀಗೆ ರಂಜನೀಯವಾಗಿ ಕಥೆ ಹೇಳುವ ಕಲೆ ಶಿವಣ್ಣ ಅವರಿಗಿದೆ. ಅವರಿಂದ ಜುಂಜಪ್ಪನ ಪದವನ್ನು ಟೇಪ್ ರಿಕಾರ್ಡರ್ ನಲ್ಲಿ ದಾಖಲಿಸಿಕೊಂಡ ಎಂ.ಎನ್. ವೆಂಕಟೇಶ ಅವರು ನಂತರ ಅದರ ಲಿಪೀಕರಣ (Transcription)ವನ್ನು ಪೂರ್ಣವಾಗಿ ಅವರೇ ಮಾಡಿದ್ದಾರೆ. ಅವರ ಉಚ್ಚಾರಣೆಯನ್ನು ಅರ್ಥ ಮಾಡಿಕೊಂಡು ಪ್ರತಿ ಪದವನ್ನೂ ಲಿಪಿಕರಿಸುವ ಕೆಲಸ ಅತ್ಯಂತ ಕಷ್ಟಕರವಾದುದು ಮತ್ತು ಹೆಚ್ಚು ಏಕಾಗ್ರತೆಯಿಂದ ಮಾಡಬೇಕಾದಂತಹ ಕೆಲಸ ಅದು. ನಾನು ಅದನ್ನು ಪರಿಶೀಲಿಸಿದ್ದೇನೆ. ನಂತರ ನಾವಿಬ್ಬರೂ ಜೊತೆಯಲ್ಲಿ ಕುಳಿತು ಅದರ ಎಡಿಟಿಂಗ್ ಕಾರ್ಯ ಮಾಡಿದ್ದೇವೆ. ಹಾಗೆ ಮಾಡುವಾಗ ಉದ್ದೇಶರಹಿತವಾಗಿ ಪುನರಾವರ್ತನೆಗೊಂಡ ಸಾಲುಗಳನ್ನು ತೆಗೆದು ಹಾಕಿದ್ದೇವೆ. ಉದ್ದೇಶಪೂರ್ವಕವಾಗಿ ಪುನರಾವರ್ತನೆಗೊಂಡ ಸಾಲುಗಳನ್ನು ಹಾಗೆಯೇ ಉಳಿಸಿಕೊಂಡಿದ್ದೇವೆ. ಕೆಲವು ಪದಗಳ ಅರ್ಥ ತಿಳಿಯದೆ ಹೋದಾಗ ಶಿವಣ್ಣ ಅವರನ್ನು ಹಾಗೂ ಕಾಡುಗೊಲ್ಲ ಸಮುದಾಯದವರನ್ನು ಸಂಪರ್ಕಿಸಿ ಅದರ ಅರ್ಥತಿಳಿದುಕೊಂಡಿದ್ದೇವೆ. ನಾವು ಇಲ್ಲಿ ನೀಡಿರುವ ಪೂರ್ಣಪಠ್ಯದ ಆಡಿಯೋ ದಾಖಲಾತಿ ಪ್ರತಿ ನಮ್ಮಲ್ಲಿದೆ.

ಪೂಜಾರಿ ಶಿವಣ್ಣ ಗಣೆಯ ನೆರವಿನಿಂದಲೂ ಹಾಡಬಲ್ಲರು, ಗಣೆಯ ನೆರವಿಲ್ಲದಿದ್ದರೂ ಗದ್ಯರೂಪದಲ್ಲಿ ನಡುನಡುವೆ ಪದ್ಯಗಳನ್ನು ಬಳಸಿಕೊಂಡು ಕಥೆ ಹೇಳಬಲ್ಲರು. ಜುಂಜಪ್ಪ ಹುಟ್ಟಿದ್ದು ಹಾಗೂ ಜೆನ್ನಿಗೆ ಹೊಯಿಸಿದ ಭಾಗವನ್ನು ಬಲು ದೀರ್ಘವಾಗಿ ಹಾಡಿದ್ದಾರೆ. ಇದರಲ್ಲಿ ಧಾರ್ಮಿಕ ಪ್ರಭಾವಕ್ಕಿಂತ ಲೌಕಿಕ ಪ್ರಭಾವವನ್ನು ಹೆಚ್ಚಾಗಿ ಕಾಣಬಹುದು. ಗಾದೆಯ ಮಾತುಗಳು, ಲೋಕದ ಡೊಂಕನ್ನು ಎತ್ತಿ ತೋರಿಸುವ ಮಾತುಗಳು, ಕಿವಿ ಮಾತುಗಳು, ನ್ಯಾಯ-ಅನ್ಯಾಯದ ವಿಮರ್ಶೆ... ಇವೆಲ್ಲವನ್ನೂ ಇವರು ಕಥೆ ಹೇಳುವುದರಲ್ಲಿ ಕಾಣಬಹುದು. ತಮ್ಮ ಉದ್ದೇಶಕ್ಕೆ ಅನುಗುಣವಾಗಿ ಕಥೆಯ ಹಂದರವನ್ನು ಮಾರ್ಪಡಿಸಿಕೊಳ್ಳುವುದನ್ನು ಕಾಣಬಹುದು.

ಪೂಜಾರಿ ಶಿವಣ್ಣ ಅವರಿಗೆ ತಮ್ಮ ಕಥೆ ಹೇಳುವ ಸಾಮರ್ಥ್ಯದ ಬಗ್ಗೆ ಅಪಾರ ಹೆಮ್ಮೆ. ಜೊತೆಯಲ್ಲಿ ಇಂತಹ ಪದವನ್ನು ಮುಂದಿನ ತಲೆಮಾರಿನವರು ಕಲಿಯಲು

ಸಾಕಷ್ಟು ಶ್ರಮ ವಹಿಸುವುದಿಲ್ಲ ಎಂಬ ಬೇಸರ ಕೂಡ ಇದೆ. ಉದಾಹರಣೆಗೆ, ಕಂಬೇರಗೊಲ್ಲರು ಏಳುಜನರ ಹೆಸರುಗಳನ್ನು ದೊಡ್ಡ ಅಣ್ಣನಿಂದ ಕೊನೆಯ ತಮ್ಮನವರೆಗೆ ಹಾಗೂ ಕೊನೆತಮ್ಮನಿಂದ ದೊಡ್ಡ ಅಣ್ಣನವರೆಗೆ ತಡವರಿಸದೆ ಶಿವಣ್ಣ ಹೇಳುತ್ತಾರೆ. ದೇವರದಯಮಾರ, ಕೆಂಗುರಿಮಲ್ಲೇಗೌಡ ಹಾಗೂ ಜುಂಜಪ್ಪ ದನಗಳನ್ನು ಮೇಯಿಸಲು ಹೋಗುತ್ತಿದ್ದ ಕಾವಲುಗಳು ಹದಿನೆಂಟು. ಆ ಬಗ್ಗೆ ಶಿವಣ್ಣ ಹೀಗೆ ಹೇಳುತ್ತಾರೆ: "ನಾನು ಮೊದಲಿನಿಂದ ಕೊನೆವರೆಗೆ, ಕೊನೆಯಿಂದ ಮೊದಲಿನವರೆಗೆ ಮಲೆನಾಡಿಗೆ ಹಸುಗಳನ್ನು ಕರೆದುಕೊಂಡು ಹೋಗುವಾಗ ಮತ್ತು ಬರುವಾಗ ಯಾವ ಕ್ರಮದಲ್ಲಿ ಈ ಕಾವಲುಗಳು ಬರುತ್ತವೆಯೋ ಅದೇ ಕ್ರಮದಲ್ಲಿ ಚಾಚೂ ತಪ್ಪದೆ ಹೇಳುತ್ತೇನೆ. ಬೇರೆ ಯಾರಾದರೂ ಹೇಳಿದರೆ ಅವರಿಗೆ ಬಹುಮಾನ ಕೊಡುತ್ತೇನೆ. ಈ ದಾರಿಯನ್ನು ಬೇರೆಯವರು ಕಲಿತು ಹಾಡಿದರೆ ೧೦೦೦ ರೂ. ಕೊಡುತ್ತೇನೆ. ಯಾರೂ ಕಲಿತಿಲ್ಲ. ನಾನು ಸತ್ತರೆ ಈ ವಿಷಯ ಇಲ್ಲೇ ನೆಲಸಮಾಧಿ ಆಗುತ್ತೆ. ಶಿವಣ್ಣ ಹೀಗೆ ಅನ್ನುತ್ತಿದ್ದ ಅವನು ಸತ್ತೋಗಿಬಿಟ್ಟ. ನೀನಾದ್ರೂ ಮೂರು ನುಡಿ ಹೇಳಪ್ಪ ಅಂತಾರೆ. ಆದ್ರೆ ಹಿಂಗೆ ಯಾರು ಹೇಳ್ತಾರೆ ಕಲೀದಿದ್ರೆ ಅಲ್ಲವಾ ಸ್ವಾಮೀ ಗುಂಡಣ್ಣೋರೆ. ಈಗ ಶಿವಮೊಗ್ಗದಿಂದ ಬಂದಿರೋ ಈ ವೆಂಕಟೇಶ ಸ್ವಾಮಿಯೋರು ಹತ್ತು ಸಾವಿರ ರೂಪಾಯಿ ನನಗೆ ಕೊಟ್ಟರೂ ನನಗೆ ಇರೋಲ್ಲ. ಆದರೆ ಈ ಮೂರು ರಾತ್ರಿಯಿಂದ ಕಣ್ಣಿಗೆ ಎಣ್ಣೆ ಹೊಯ್ಕಿಸಿಕೊಂಡು ಈ ಶರೀರನೆಲ್ಲಾ ಬೇಕಾದಷ್ಟು ಒಣಗಿಸಿಕೊಂಡು ನಾವು ಮಾಡ್ತಿರೋ ಕಥೆ ಈ ಲೋಕದ ಮೇಲೆ ಮಕ್ಕಳು ಮೊಮ್ಮಕ್ಕಳು ಇರೋವರೆಗೂ ನಡೀತಾ ಇರ್‍ತೈತೆ. ನಾನೊಬ್ಬ ಸತ್ತರೆ ನನ್ನ ಸೊಲ್ಲು ಹೇಳೋರು ಕೇಳೋರು ಯಾರೂ ಇರಲ್ಲ" ಹೀಗೆನ್ನುವುದರಲ್ಲಿ ಹಾಡುಗಾರ ಶಿವಣ್ಣ ಅವರ ಹೆಗ್ಗಳಿಕೆ ಮಾತ್ರವಲ್ಲ ಈ ಕುರಿತ ಕಾಳಜಿ ಹಾಗೂ ಯಾರೂ ಕಲಿಯಲು ಮುಂದೆ ಬರುತ್ತಿಲ್ಲ ಎಂಬ ಸಂಕಟ ತುಂಬಿರುವುದು ಕಂಡು ಬರುತ್ತದೆ ಎಂದ ಶಿವಣ್ಣನವರ ಮಾತುಗಳು ಅವರು ಕಥೆಹೇಳುವ ವೃತ್ತಿಗೆ ಎಷ್ಟು ಗೌರವ ಮತ್ತು ಮಹತ್ವ ನೀಡಿದ್ದಾರೆ ಎಂಬುದನ್ನು ಅರ್ಥಮಾಡಿಸುತ್ತದೆ. ಈ ಕಾರಣಕ್ಕಾಗಿಯೇ ಶಿವಣ್ಣನವರ ಬಗ್ಗೆ ಇರುವ ಗೌರವ ಮತ್ತಷ್ಟು ಹೆಚ್ಚುತ್ತದೆ. ಪೂಜಾರಿ ಶಿವಣ್ಣ ಅವರನ್ನು ಮೊದಲ ಬಾರಿಗೆ ನಾವು ಭೇಟಿ ಮಾಡಿದ್ದು ೧೯೯೩ರಲ್ಲಿ ಶಿವಪ್ರಕಾಶ್ ಅವರ ಮನೆಯಲ್ಲಿ. ಅವರು ಜುಂಜಪ್ಪನ ಮಹಾಕಾವ್ಯವನ್ನು ಕಥಾ ರೂಪದಲ್ಲಿ ಹೇಳುವುದನ್ನು ಕೇಳಿದ ನಂತರ ಹೆಚ್ಚಿನ ಕ್ಷೇತ್ರಕಾರ್ಯ ನಡೆಸಿ ಎಂ.ಎನ್. ವೆಂಕಟೇಶ್ ಅವರು ಮೊದಲ ಬಾರಿಗೆ ಪೂರ್ಣ ಪಠ್ಯವನ್ನು ಸಂಗ್ರಹಿಸಿದ್ದು ೧೯೯೩ ಏಪ್ರಿಲ್ ೧೪ ರಿಂದ ೧೮ ರವರೆಗೆ. ಆನಂತರ ಇಪ್ಪತ್ತು ವರ್ಷಗಳ ಕಾಲ ಕಾರಣಾಂತರಗಳಿಂದ ಅವರ ಭೇಟಿ ಮಾಡಲಾಗಲಿಲ್ಲ. ಆ ಸಂದರ್ಭದಲ್ಲಿ ಅವರು ಹಾಡುತ್ತಿದ್ದ ಸಂದರ್ಭದ ಫೋಟೋಗಳನ್ನು ತೆಗೆದುಕೊಳ್ಳಲಾಗಿತ್ತು. ಆದರೆ ಅವು ಈಗ ಲಭ್ಯವಿಲ್ಲದೇ ಇದ್ದುದರಿಂದ ಪುನಃ ಅವರ ಫೋಟೋ ತೆಗೆಯಲು ಮತ್ತು ಈಗ ಒಮ್ಮೆ ಅವರ ಸಂದರ್ಶನ ನಡೆಸಲು ದಿನಾಂಕ ೮ ಏಪ್ರಿಲ್ ೨೦೧೪ರಂದು ಶಿವಣ್ಣ ಎಂ.ಎನ್. ವೆಂಕಟೇಶ ಅವರು ಆ ಹಟ್ಟಿಗೆ ಭೇಟಿ ನೀಡಿದಾಗ ಶಿವಣ್ಣ ಅವರು ಧ್ವನಿಯುನ್ನು ಕ್ಯಾಸೆಟ್‌ನಲ್ಲಿ ಕೇಳಿ ಹಾಗೂ ಅವರು ಹಾಡಿದ ಭಾಗಗಳು

ಪ್ರಕಟವಾಗುತ್ತಿರುವುದನ್ನು ಕೇಳಿ ಅವರ ಸಂಬಂಧಿಕರು ಸಂತಸಪಟ್ಟರು. ಆದರೆ ಶಿವಣ್ಣನವರನ್ನು ಕಳೆದುಕೊಂಡ ನೋವು ಅವರ ದುಃಖ ಹೆಚ್ಚಿಸಿತ್ತು.

ಶಿವಣ್ಣವನವರಿಗೆ ಇಬ್ಬರು ಪತ್ನಿಯರಿದ್ದು ಅವರಲ್ಲಿ ಒಬ್ಬಾಕೆ ತೀರಿಕೊಂಡಿದ್ದು ಇನ್ನೊಬ್ಬರು ಆಂಧ್ರದ ಗಡಿ ಹಳ್ಳಿಯೊಂದರಲ್ಲಿ ವಾಸವಾಗಿದ್ದಾರೆಂದು ತಿಳಿದುಬಂತು. ಅವರು ವಾಸಿಸುತ್ತಿದ್ದ ಮನೆ ಮಳೆಯಲ್ಲಿ ಬಿದ್ದು ನೆಲಸಮಗೊಂಡಿದ್ದು ಅದರಲ್ಲಿ ಮಡಕೆಯೊಂದರಲ್ಲಿ ಮುಚ್ಚಿಟ್ಟಿದ್ದ ಹಳೆಯ ಫೋಟೋಗಳು ಹಾಗೂ ಅವರ ಪ್ರಶಸ್ತಿಪತ್ರಗಳು ನೆಲಸಮವಾದುವೆಂಬುದು ತೀರಾ ವಿಷಾದನೀಯ ವಿಷಯ. ಅವರ ಒಂದು ಫೋಟೋವನ್ನು ಕೂಡ ನೀಡಲಾಗದ ಅಸಹಾಯಕ ಸ್ಥಿತಿಯಲ್ಲಿ ನಾವಿದ್ದೇವೆ ಎಂಬುದನ್ನು ತಿಳಿಸಲು ವಿಷಾದಿಸುತ್ತೇವೆ.

ಪೂಜಾರಿ ಶಿವಣ್ಣನವರು ತಮ್ಮ ಜೀವನದ ಕೊನೆಯ ದಿನಗಳನ್ನು ಮೇಣಸಿನ ಹಳ್ಳಿಯಿಂದ ಬಹುದೂರವಿರುವ ಆಂಧ್ರದ ಗಡಿಹಳ್ಳಿಯಾದ ಕಡಲಪಾಳ್ಯ ಗೊಲ್ಲರಹಟ್ಟಿ ಬಳಿಯ ಹೊಟ್ಟೆ ಬೆಟ್ಟ ಎಂಬ ಸ್ಥಳದಲ್ಲಿ ಕಳೆದರು. ಅಲ್ಲಿ ಅವರ ಸಂಬಂಧಿಗಳಾದ ಪಂಡಿತ ಈರಣ್ಣ, ಚಿತ್ತಮ್ಮ ಎಂಬುವವರು ಹಾಗೂ ಸೋದರ ಸಂಬಂಧಿ ಈರಮ್ಮ ಅವರು ಶಿವಣ್ಣನ ಕೊನೆಯ ದಿನಗಳಲ್ಲಿ ಅವರನ್ನು ನೋಡಿಕೊಂಡಿದ್ದಾರೆ. ಮೇಣಸಿನ ಹಳ್ಳಿಯಲ್ಲಿ ಅವರ ಅಣ್ಣ ಹಾಗೂ ತಮ್ಮಂದಿರು ವಾಸವಿದ್ದಾರೆ. ಪೂಜಾರಿ ಚಿತ್ತಪ್ಪ ಅವರ ಹಿರಿಯ ಸಹೋದರ. ಪೂಜಾರಿ ಶಿವಣ್ಣ ಅವರಿಗೆ ಮಕ್ಕಳಿರಲಿಲ್ಲ. ಅವರ ತಮ್ಮ ಪೂಜಾರಿ ಚಿಕ್ಕಣ್ಣ ಹಾಗೂ ಅವರ ಮನೆಯವರೇ ಶಿವಣ್ಣನ ಮುಂದಿನ ವಾರಸುದಾರರು. ಆದರೆ ಅವರಾರೂ ಜುಂಜಪ್ಪನ ಕಥೆ ಹೇಳುವುದನ್ನು ಕಲಿತಿಲ್ಲ.

ಶಿವಣ್ಣ ಅವರು ಬದುಕಿದ್ದಾಗ ಅವರು ಜುಂಜಪ್ಪನ ಕಾವ್ಯವನ್ನು ಹಾಡುವಾಗ ಗಣೆ ನುಡಿಸುತ್ತಿದ್ದ ಹಾಗೂ ಕಥೆ ಹೇಳುತ್ತಿದ್ದಾಗ ಹೂಂಗುಟ್ಟುತ್ತಿದ್ದ ಚಂದ್ರಣ್ಣ ಎಂಬುವವರು ಈಗಲೂ ಮೇಣಸಿನಹಳ್ಳಿಯಲ್ಲಿ ಇದ್ದಾರೆ.

೧.೧೧. ಸಂಪಾದನಾ ಕಾರ್ಯ

ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪನ ಕಥೆಯನ್ನು ಅವರ ಭಾಷೆಯಲ್ಲಿಯೇ, ಅವರ ಶೈಲಿಯಲ್ಲಿಯೇ ದಾಖಲು ಮಾಡಲಾಗಿದೆ. ಅವರು ಕಥೆ ಹೇಳುವ ಕ್ರಮದಲ್ಲಿ ಮುಖ್ಯವಾದ ಮೂರು ಅಂಶಗಳಿವೆ: ಆರಂಭದಲ್ಲಿ ಬರುವ ಸ್ತುತಿಗೀತೆಗಳು ಪದ್ಯರೂಪದಲ್ಲಿವೆ. ಸಂಭಾಷಣೆಗಳು ಈ ಕಥನದ ಪ್ರಮುಖವಾದ ಅಂಶ. ಉಳಿದಂತೆ ಕಥಾ ನಿರೂಪಣೆಯನ್ನು ಮಾಡಲಾಗಿದೆ. ಸಂಪಾದನಾ ಕಾರ್ಯ ಮಾಡಿ ಪ್ರಕಟಮಾಡುವಾಗ ಈ ಮೂರನ್ನೂ ವಿಭಿನ್ನವಾಗಿ ತೋರಿಸಲಾಗಿದೆ. ಶಿವಣ್ಣ ಅವರು ಇದನ್ನು ಹಾಡಿನ ರೂಪದಲ್ಲಿಯೂ ಹೇಳಬಲ್ಲರು, ಗದ್ಯರೂಪದಲ್ಲಿಯೂ ಹೇಳಬಲ್ಲರು. ಹಾಡುವಾಗ ಗಣೆ ವಾದಕರೊಬ್ಬರ ಜೊತೆ ಹಾಡುತ್ತಾರೆ. ಕಥೆ ಹೇಳುವಾಗ ಒಬ್ಬರೇ ಹೇಳುತ್ತಾರೆ.

ಅವರು ಕಥೆ ಹೇಳುವ ಸಂದರ್ಭದಲ್ಲಿ ಘಟನೆಗಳು ಕೆಲವೊಮ್ಮೆ ಹಿಂದುಮುಂದಾಗಿ ಇದ್ದಂತಹ ಸಂದರ್ಭದಲ್ಲಿ ಅವುಗಳನ್ನು ಸರಿಪಡಿಸಲಾಗಿದೆ. ಜುಂಜಪ್ಪನ ತಾತಂದಿರು ಮತ್ತು ಸೋದರ ಮಾವಂದಿರು ಏಳುಜನ ಎಂದು ಹೇಳಿ, ಕೆಲವು ಸಲ ಪಟ್ಟಿಯನ್ನು ದೀರ್ಘವಾಗಿ ಮಾಡಿರುವುದೂ ಉಂಟು. ಅಂತಹ ಸಂದರ್ಭದಲ್ಲಿ ಅದನ್ನು ಏಳಕ್ಕೆ ಮಿತಿಗೊಳಿಸಲಾಗಿದೆ. ಕೆಲವು ಸಲ ಆವಿನ ದನ, ಅಶ್ವತ್ಥ-ಅರಳಿಮರ, ನರಲೋಕ-ಭೂಲೋಕ ಎಂದು ಬಳಸಿರುವ ದ್ವಿರುಕ್ತಿಯನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಅವರು ಇಂಗ್ಲೀಷ್ ಪದಗಳನ್ನು ಬಳಸಿದ್ದಾರೆ. 'ಅಗ್ರಿಮೆಂಟು ಬರೀಬೇಕು', 'ನೀಟಾಗಿ ಬೆಳೆದೈತೆ', 'ಮಿಸ್ಟೀಕ್ ಹೋರಿ', 'ಮಿಸ್ಟೀಕ್ ಐದಾವೆ', 'ರೆಡಿ ಮಾಡಿವ್ನಿ', ಟೈಮಿಟ್ಕೊಂಡು', 'ಟೈಮ್ ಬಂದು ಹೋಯ್ತು', 'ನಮ್ಮ ಮಾವಗೀರ್ಗೂ ನಮಗೂ ಎಗೆನೆಸ್ಟ್ ಪಾರ್ಟಿ', 'ಇಲ್ಲಿ ಕುಂತಿರೋರಿಗೆಲ್ಲಾ ಕಾಫಿ ಕಾಯಿಸಿಕೊಡಲಿ ಅಂತ' – ಈ ಬಗೆಯ ಪ್ರಯೋಗಗಳನ್ನು ಹಾಗೆಯೇ ಉಳಿಸಿಕೊಳ್ಳಲಾಗಿದೆ. ಇಲ್ಲೆಲ್ಲಾ ಪರಂಪರೆಯ ಮೇಲೆ ಆಧುನಿಕತೆಯ ಪ್ರಭಾವಗಳನ್ನು ಕಾಣಬಹುದು.

ಜುಂಜಪ್ಪನ ಕಥೆಯಲ್ಲಿ ಮುಖ್ಯವಾಗಿ ಮೂರು ಭಾಗಗಳಿವೆ: ಮೊದಲನೆಯದು ಜುಂಜಪ್ಪನ ತಾತ ದೇವರ ದಯಮಾರನದು, ಎರಡನೆಯದು ಜುಂಜಪ್ಪನ ತಂದೆ ಕೆಂಗುರಿ ಮಲ್ಲೇಗೌಡನದು ಮತ್ತು ಮೂರನೆಯದು ಜುಂಜಪ್ಪನದು. ಈ ಮಟ್ಟಿಗೆ ನಾವು ಪೂಜಾರಿ ಶಿವಣ್ಣ ಅವರ ವರ್ಗೀಕರಣವನ್ನೇ ಅನುಸರಿಸಿದ್ದೇವೆ. ದೇವರ ದಯಮಾರನ ಕಥೆಯ ಭಾಗದಲ್ಲಿ ಉಪವಿಭಾಗಗಳಿಲ್ಲ. ಕೆಂಗುರಿ ಮಲ್ಲೇಗೌಡನ ಭಾಗದಲ್ಲಿ, ಓದುಗರಿಗೆ ಸ್ಪಷ್ಟವಾಗುವ ದೃಷ್ಟಿಯಿಂದ, ಕೆಂಗುರಿ ಮಲ್ಲೇಗೌಡನ ಹುಟ್ಟು, ಹೊನ್ನಟ್ಟಿ ಆಲೇಗೌಡ ಮತ್ತು ಜಾನಕಲ್ಲು ದೊಡ್ಡಕ್ಕ, ಕೆಂಗುರಿ ಮಲ್ಲೇಗೌಡನ ಮದುವೆ, ಚೆನ್ನಮ್ಮನ ಸಂಕಟ ಎಂಬ ನಾಲ್ಕು ಉಪವಿಭಾಗಗಳನ್ನು ಮಾಡಿಕೊಂಡಿದ್ದೇವೆ. ಜುಂಜಪ್ಪನ ವಿಭಾಗದಲ್ಲಿ ಜುಂಜಪ್ಪನ ಹುಟ್ಟು, ಸಾಣೀಕೆರೆ ಪುಟ್ಟಣ್ಣನ ಕಾವಲು, ಹುಲಿಕುಂಟೆ ತಮ್ಮಣ್ಣನ ಕಾವಲು, ಚೇಳೂರು ಕಾವಲಿನಲ್ಲಿ ಬಡಮ್ಮೈಲನ ಸಾಹಸ, ತಾಳೇದುರ್ಗಿ ಕಾವಲು, ಜುಂಜಪ್ಪನಿಗೆ ಮದ್ದು ಇಕ್ಕಿದ್ದು ಎಂಬ ಆರು ಉಪ ವಿಭಾಗಗಳನ್ನು ಮಾಡಿಕೊಳ್ಳಲಾಗಿದೆ. ಇಷ್ಟನ್ನು ಬಿಟ್ಟರೆ ಉಳಿದಂತೆ ಶಿವಣ್ಣ ಹೇಳಿದಂತೆಯೇ ನಿರೂಪಣೆ ಮಾಡಲಾಗಿದೆ.

ನಾವು ಮೂಡಲಪ್ಪ, ಪೂಜಾರಿ ಈರಣ್ಣ ಈ ಕಲಾವಿದರಿಂದಲೂ ಜುಂಜಪ್ಪನ ಕಾವ್ಯವನ್ನು ಸಂಗ್ರಹಿಸಿದ್ದೇವೆ. ಜೀಶಂಪ, ಮೀರಾಸಾಬೀಹಳ್ಳಿ ಶಿವಣ್ಣ, ಚಿಕ್ಕಣ್ಣ ಎಣ್ಣೆಕಟ್ಟೆ ಅವರು ಬೇರೆ ಹಾಡುಗಾರರಿಂದ ಜುಂಜಪ್ಪನ ಕಾವ್ಯವನ್ನು ಸಂಗ್ರಹಿಸಿದ್ದಾರೆ. ಈ ಎಲ್ಲಾ ಪಾಠಗಳಲ್ಲಿಯೂ ಜುಂಜಪ್ಪನ ತಾತಂದಿರು ಮತ್ತು ಸೋದರ ಮಾವಂದಿರ ಸಂಖ್ಯೆ ಏಳು. ಒಬ್ಬೊಬ್ಬ ಕಲಾವಿದರ ಪಾಠದಲ್ಲಿಯೂ ಈ ಹೆಸರುಗಳು ಬದಲಾಗುತ್ತವೆ. ಹಾಗೆಯೇ ಜುಂಜಪ್ಪ ದನಗಳನ್ನು ಮೇಯಿಸಿದ ಕಾವಲುಗಳ ಹೆಸರುಗಳೂ, ಸಂಖ್ಯೆಗಳೂ ಪಾಠದಿಂದ ಪಾಠಕ್ಕೆ ಬದಲಾಗುತ್ತವೆ. ಇವುಗಳಲ್ಲಿ ಇಂಥದ್ದೇ ಸರಿ ಎಂದು ಹೇಳುವುದು ಕಷ್ಟ. ಎಲ್ಲವೂ ಅಧಿಕೃತವೇ. ಕಲಾವಿದರು ಜುಂಜಪ್ಪನ ಕಥೆಯ ಮೂಲ ಚೌಕಟ್ಟನ್ನು, ಪ್ರಮುಖ ಪಾತ್ರಗಳನ್ನೂ, ಪ್ರಮುಖ ಘಟನೆಗಳನ್ನೂ ಬದಲಾಯಿಸುವುದಿಲ್ಲ. ಪೂಜಾರಿ

ಶಿವಣ್ಣ ಜುಂಜಪ್ಪನ ಮರಣೋತ್ತರ ಪ್ರಸಂಗಗಳ ಕಥೆಯನ್ನು ಹೇಳಿಲ್ಲ. ಆದರೆ ಮೂಡಲಪ್ಪ ಹಾಗೂ ಮೀರಾಸಾಬಿಹಳ್ಳಿ ಶಿವಣ್ಣ ಅವರು ಸಂಗ್ರಹಿಸಿರುವ ಪಾಠಗಳಲ್ಲಿ ಈ ಪ್ರಸಂಗಗಳಿವೆ. ಆದರೆ ವಿವರಗಳು ಬದಲಾಗುತ್ತವೆ. ಇದು ಅವರ ವೈಯಕ್ತಿಕ ಪ್ರತಿಭೆ, ಸೃಜನಶೀಲತೆ ಎಂದು ನಾವು ಪರಿಗಣಿಸುವುದು ಸೂಕ್ತ. ಈ ಪಾಠದಲ್ಲಿ ನಾವು ಪೂಜಾರಿ ಶಿವಣ್ಣ ಹೇಳಿದ ಹೆಸರುಗಳನ್ನು ಉಳಿಸಿಕೊಂಡಿದ್ದೇವೆ ಅಷ್ಟೆ.

ಇಂತಹ ಮೂಲ ಪಠ್ಯವನ್ನು ಹಾಡಿದ ಹಾಗೆಯೇ ಲಿಪೀಕರಿಸಿ ಹೆಚ್ಚು ಬದಲಾವಣೆಗಳೇನನ್ನೂ ಮಾಡದೇ ಹಾಗೆಯೇ ಲಿಪಿರೂಪಕ್ಕಿಳಿಸಿ ಯಥಾವತ್ತಾಗಿ ಅದನ್ನು ಮುದ್ರಿಸಲು ಬಯಸಿದಾಗ ನಾವು ತೆಗೆದುಕೊಂಡ ಕೆಲವು ನಿರ್ಧಾರಗಳೆಂದರೆ ಓದುಗರ ಅನುಕೂಲಕ್ಕಾಗಿ ಇಡಿಯ ಕಥಾ ಹಂದರವನ್ನು ಮೂರು ಭಾಗಗಳಾಗಿ ವಿಂಗಡಿಸಿ ಅಧ್ಯಾಯಗಳಂತೆ ನೀಡುವುದು. ಎರಡನೆಯದು ಪ್ರತಿ ದಿನ ಆತ ಕಥೆ ನಿಲ್ಲಿಸುವಾಗ ಮಂಗಳದ ಪದವನ್ನೂ ಕಥೆ ಆರಂಭಿಸುವಾಗ ಸೊಲ್ಲಿನ ಪದವನ್ನು ಹಾಡುವುದು ಅವರ ಸಂಪ್ರದಾಯ. ಕಥೆಯ ಓಟಕ್ಕೆ ಭಂಗ ಬಾರದಂತೆ ಈ ಕಥೆಯನ್ನು ಮೂರು ಹಂತಗಳಲ್ಲಿ ಹಾಡಿರುವಂತೆ ಪರಿಭಾವಿಸಿ ಪ್ರತಿ ಭಾಗದ ಆರಂಭದಲ್ಲಿ ಸೊಲ್ಲಿನ ಪದವನ್ನು, ಅಂತ್ಯದಲ್ಲಿ ಮಂಗಳದ ಪದವನ್ನೂ ನೀಡಲಾಗಿದೆ. ಜುಂಜಪ್ಪನ ಹುಟ್ಟು, ಭೂತಪ್ಪನ ವಿಜಯ, ಜುಂಜಪ್ಪನು ಪಾಳೆಗಾರರ ಮೇಲೆ ವಿಜಯ ಸಾಧಿಸಿದ ಸಂದರ್ಭಗಳಲ್ಲಿ ಜುಂಜಪ್ಪನಿಗೆ ತೆಂಗಿನ ಕಾಯಿ ಒಡೆದು ವಿಶೇಷ ಪೂಜೆ ಸಲ್ಲಿಸುತ್ತಾರೆ. ಕೆಲವು ಸಂದರ್ಭಗಳಲ್ಲಿ ಕೇಳುಗರೆಲ್ಲರಿಗೂ ಮಂಡಕ್ಕಿ ಪುರಿ ಹಂಚುತ್ತಾರೆ. ಇದರ ಖರ್ಚನ್ನು ಭರಿಸುವುದು ಹಾಡಿಸುತ್ತಿದ್ದ ನಮಗೆ ಅನಿವಾರ್ಯವಾಗುತ್ತಿತ್ತು. ಈ ಸಂಪ್ರದಾಯಗಳಿಂದಾಗಿ ಹಾಡುವಿಕೆಗೊಂದು ಸಹಜತೆ ಬರುತ್ತಿತ್ತು. ಜುಂಜಪ್ಪನ ಸಾವಿನ ಸಂದರ್ಭವಂತೂ ಒಂದು ವಿಷಾದನೀಯ ಘಟನೆಯಾಗಿ ಅಲ್ಲೆಲ್ಲಾ ಸೂತಕದ ಕಳೆ ಇರುವಂತೆ ಭಾಸವಾಗುವಷ್ಟು ಹಟ್ಟಿಯ ಜನರನ್ನು ಈ ಕಥೆ ಆವರಿಸಿಬಿಟ್ಟಿತ್ತು.

೧.೧೨. ಸಾಹಿತ್ಯಕ ಮೌಲ್ಯ

ಕನ್ನಡದಲ್ಲಿ ಸಾಹಿತ್ಯ ವಿಮರ್ಶಕರು ಹಳಗನ್ನಡ, ನಡುಗನ್ನಡದ ಕಾವ್ಯಗಳನ್ನು ಆಧುನಿಕ ಸಾಹಿತ್ಯಕ್ಕಿಂತ ಭಿನ್ನವಾದ ಮಾನದಂಡಗಳಿಂದ ಮೌಲ್ಯಮಾಪನ ಮಾಡುತ್ತಾರೆ. ಇದಕ್ಕೆ ಕಾರಣ ಆಧುನಿಕ ಜೀವನ ಕ್ರಮಕ್ಕೂ ಆಧುನಿಕ ಪೂರ್ವ ಜೀವನ ಕ್ರಮಕ್ಕೂ ಇರುವ ವ್ಯತ್ಯಾಸಗಳು. ಜನಪದ ಕಾವ್ಯಗಳು ಆಧುನಿಕ ಪೂರ್ವ ಕಾಲಾವಧಿಗೆ ಸೇರುತ್ತವೆ ಹಾಗೂ ಮನೋಧರ್ಮದ ದೃಷ್ಟಿಯಿಂದ ಹಳೆಗನ್ನಡ, ನಡುಗನ್ನಡ ಕಾವ್ಯಗಳಿಗೆ ಹತ್ತಿರವಾಗುತ್ತವೆ; ಇದರಲ್ಲಿ ಮಾರ್ಗ ಸಾಹಿತ್ಯಕ್ಕಿಂತ ದೇಸೀ ಸಾಹಿತ್ಯಕ್ಕೆ ಹತ್ತಿರವಾಗುತ್ತವೆ. ಒಂದು ಮುಖ್ಯ ವ್ಯತ್ಯಾಸವೆಂದರೆ ಹಳಗನ್ನಡ, ನಡುಗನ್ನಡ ಶಿಷ್ಟ ಕಾವ್ಯಗಳನ್ನು ನಿರ್ದಿಷ್ಟ ಕವಿಗಳು ಬರೆದಿದ್ದು ಹಸ್ತಪ್ರತಿಗಳ ಅಧ್ಯಯನದ ಮೂಲಕ ಅವುಗಳನ್ನು ಗ್ರಂಥ ಸಂಪಾದನೆಯ ವಿಧಾನದಿಂದ ಪ್ರಕಟಿಸಿದ್ದಾರೆ. ಆದರೆ ಜನಪದ ಕಾವ್ಯಗಳು ಮೌಖಿಕ ನೆಲೆಯಿಂದ ಬಂದಿದ್ದು ಅವುಗಳ ಸಂಗ್ರಹ ಮತ್ತು ಪಠ್ಯೀಕರಣದ ಕ್ರಮದಿಂದ

ಸಂಪಾದಿತವಾಗಿವೆ. ಪ್ರಸ್ತುತ ಜುಂಜಪ್ಪನ ಕಾವ್ಯವನ್ನು ತೌಲನಿಕವಾಗಿ ನೋಡುವ ಸಂದರ್ಭದಲ್ಲಿ ದೀರ್ಘಕಾವ್ಯಗಳನ್ನು ಒಳಗೊಂಡ ಹಳಗನ್ನಡ, ನಡುಗನ್ನಡ ಸಾಹಿತ್ಯವನ್ನು ಮುಂದಿರಿಸಿಕೊಂಡು ಅದರ ಹಿನ್ನೆಲೆಯಲ್ಲಿ ಈ ಮಹಾಕಾವ್ಯವನ್ನು ವಿಮರ್ಶಿಸಬೇಕಾಗುತ್ತದೆ.

ಜುಂಜಪ್ಪನ ಕಾವ್ಯ ಒಂದು ಧಾರ್ಮಿಕ ಕಾವ್ಯ. ಹಳಗನ್ನಡ, ನಡುಗನ್ನಡ ಕಾವ್ಯಗಳಲ್ಲಿ ಜೈನ, ವೀರಶೈವ ಮತ್ತು ಬ್ರಾಹ್ಮಣ ಧರ್ಮದ ಕಾವ್ಯಗಳೇ ಹೆಚ್ಚಿನ ಸಂಖ್ಯೆಯಲ್ಲಿವೆ. ಆದರೆ ಜುಂಜಪ್ಪನ ಕಾವ್ಯ ಜನಪದ ಕಾವ್ಯವಾಗಿದ್ದು ಈ ಮೂರಕ್ಕೂ ಭಿನ್ನವಾದ ಧಾರ್ಮಿಕ ಹಿನ್ನೆಲೆಯಿಂದ ಹಾಗೂ ಭಿನ್ನ ಸಮುದಾಯದಿಂದ ಬಂದದ್ದಾಗಿದೆ. ಹಳಗನ್ನಡ ನಡುಗನ್ನಡದಲ್ಲಿ ಮಾತ್ರವಲ್ಲ ಹೊಸಗನ್ನಡದಲ್ಲಿಯೂ ಪಶುಪಾಲನೆಯನ್ನೇ ಪ್ರಧಾನವಾಗಿಟ್ಟುಕೊಂಡ ಕಾವ್ಯಗಳು ದೊರಕುವುದಿಲ್ಲ. ಈ ದೃಷ್ಟಿಯಿಂದ ಪಶುಪಾಲನೆಯ ಜೀವನವನ್ನೇ ಪ್ರಧಾನವಾಗಿಟ್ಟುಕೊಂಡ ಜುಂಜಪ್ಪ, ಎತ್ತಪ್ಪ, ಗಾದ್ರಿ ಪಾಲನಾಯಕ, ಹಾಲುಮತಕಾವ್ಯ, ಮೈಲಾರಲಿಂಗನ ಕಾವ್ಯ ಮೊದಲಾದುವು ಕನ್ನಡ ಸಾಹಿತ್ಯಕ್ಕೆ ಒಂದು ಹೊಸ ಆಯಾಮವನ್ನು ನೀಡಿವೆ ಎಂದು ಹೇಳಬಹುದು.

ಹೆಣ್ಣಿನ ದುಃಖ, ಸಂಕಟ ಕನ್ನಡ ಸಾಹಿತ್ಯದಲ್ಲಿ ಹಲವಾರು ಕಾವ್ಯಗಳಲ್ಲಿ ಅಭಿವ್ಯಕ್ತಗೊಂಡಿದೆ. ಕರುಣರಸದ ಪ್ರತಿಪಾದನೆಗೆ ಇವನ್ನು ಉತ್ತಮ ಉದಾಹರಣೆಗಳೆಂದು ಉಲ್ಲೇಖಿಸಬಹುದು. ಉದಾಹರಣೆಗೆ *ರಾಜಶೇಖರ ವಿಳಾಸ*ದಲ್ಲಿ ತನ್ನ ಮಗನನ್ನು ಕಳೆದುಕೊಂಡು ರೋದಿಸುವ ತಿರುಕೊಳವಿನಾಚಿಯ ಪ್ರಸಂಗ ಹಾಗೂ *ಹರಿಶ್ಚಂದ್ರ ಕಾವ್ಯ*ದಲ್ಲಿ ಮಗನನ್ನು ಕಳೆದುಕೊಂಡ ಚಂದ್ರಮತಿಯ ಪ್ರಲಾಪ ಹಾಗೂ *ನಳ ಚರಿತ್ರೆ*ಯ ನಳ ಮತ್ತು ದಮಯಂತಿ ಕಾಡಿನಲ್ಲಿ ಎದುರಿಸುವ ಕಷ್ಟಗಳು, ನಳನುದಮಯಂತಿ ಒಬ್ಬಳನ್ನೇ ಕಾಡಿನಲ್ಲಿ ಬಿಟ್ಟು ಹೋದಾಗ ದಮಯಂತಿಯ ರೋದನ ಮೊದಲಾದುವನ್ನು ಉಲ್ಲೇಖಿಸಬಹುದು. ಇದೇ ಮಾದರಿಯಲ್ಲಿ ಜುಂಜಪ್ಪನ ಕಾವ್ಯದಲ್ಲಿ ಬರುವ ಕಂಬಕ್ಕ, ಚಿನ್ನಮ್ಮ ಮತ್ತು ಮಾರಕ್ಕ ಇವರುಗಳ ಕರುಣಾಜನಕವಾದ ಪ್ರಸಂಗಗಳನ್ನು ಉಲ್ಲೇಖಿಸಬೇಕಾಗುತ್ತದೆ. ದೇವರ ದಯಮಾರ ಮತ್ತು ಕಂಬಕ್ಕ ಕಾಡಿನಲ್ಲಿ ತಮ್ಮ ಮಗುವಿದ್ದ ಆಲದ ಮರವನ್ನು ಕಂಡುಕೊಳ್ಳಲು ಸಾಧ್ಯವಾಗದೆ ಹಸಿವು ನೀರಡಿಕೆಯಿಂದ ಸಾಯುವ ಸಂದರ್ಭವೂ ಗಮನಾರ್ಹವಾದ ಪ್ರಸಂಗವಾಗಿದೆ. ನಳ ಮತ್ತು ದಮಯಂತಿ ಕಾಡಿನಲ್ಲಿ ಎದುರಿಸುವ ಕಷ್ಟಗಳನ್ನು ಇದು ಹೋಲುತ್ತದೆ.

*ಕುಮಾರವ್ಯಾಸ ಭಾರತ*ದಲ್ಲಿ ಭಗದತ್ತನ ಸುಪ್ರತೀಕ ಗಜದ ಪ್ರಸಂಗ ಬರುತ್ತದೆ. ಒಂದು ಆನೆ ಮನುಷ್ಯರಂತೆಯೇ ಯುದ್ಧದಲ್ಲಿ ಪ್ರಧಾನವಾದ ಪಾತ್ರವನ್ನು ವಹಿಸಿ ವೀರಗತಿಯಲ್ಲಿ ಹೋರಾಡುವುದನ್ನು ಸಾಹಿತ್ಯವಿಮರ್ಶಕರು ಪ್ರಶಂಸೆ ಮಾಡಿದ್ದಾರೆ. ಜುಂಜಪ್ಪನ ಕಾವ್ಯದಲ್ಲಿ ಬರುವ ಬಡಮ್ಯೆಲ ಎಂಬ ಹೋರಿ ಚೇಳೂರು ರಂಗಣ್ಣನ ಕಾವಲಿನಲ್ಲಿ ಜುಂಜಪ್ಪ ಇಲ್ಲದಿರುವ ಸಂದರ್ಭದಲ್ಲಿ ಏಕಾಂಗಿಯಾಗಿ ಹೋರಾಡಿ, ಸರಪಳಿಯಲ್ಲಿ ಕಟ್ಟಿಹಾಕಿದ್ದ ಚೇಳೂರು ಕಲ್ಲಿನ ಕಂಬವನ್ನು ಮುರಿದು ಹಾರಿಬರುವ ಸಂದರ್ಭ ಇಷ್ಟೇ ಮಹತ್ವಪೂರ್ಣವಾದುದು. ಇದನ್ನು ಕನ್ನಡ ಸಾಹಿತ್ಯ ವಿಮರ್ಶಕರು ಗುರುತಿಸಬೇಕಾದ ಅಗತ್ಯವಿದೆ.

ಆಧುನಿಕ ಕನ್ನಡ ಸಾಹಿತ್ಯದಲ್ಲಿ ಮನುಷ್ಯ, ಪ್ರಕೃತಿ ಮತ್ತು ಪ್ರಾಣಿ ಸಂಬಂಧಗಳನ್ನು ಗುರುತಿಸುವ ಪ್ರಯತ್ನ ನಡೆದಿದೆ. ಕುವೆಂಪು ಅವರ ಮಲೆಗಳಲ್ಲಿ ಮದುಮಗಳು ಕಾದಂಬರಿಯಲ್ಲಿ ಗುತ್ತಿ ಮತ್ತು ಅವನ ನಾಯಿ ಹುಲಿಯ ಇವರ ಗಾಢವಾದ ಆತ್ಮೀಯ ಸಂಬಂಧಗಳನ್ನು ವಿಮರ್ಶಕರು ಗುರುತಿಸಿ ಪ್ರಶಂಸೆ ಮಾಡಿದ್ದಾರೆ. ಹಾಗೆಯೇ ತೇಜಸ್ವಿಯವರ ಸಾಹಿತ್ಯದಲ್ಲಿ ಕಾಡು ಮತ್ತು ಬೇಟೆಗೆ ವಿಶೇಷ ಮಹತ್ವವಿದೆ. ಇಲ್ಲಿ ಮನುಷ್ಯ ಮತ್ತು ನಾಯಿಯ ಸಂಬಂಧ ಆಪ್ತವಾಗಿ ಚಿತ್ರಿತವಾಗಿದೆ. ಇದನ್ನೇ ಮುಂದುವರಿಸಿ ಹೇಳಬಹುದಾದರೆ ಜುಂಜಪ್ಪ ಮತ್ತು ಅವನ ಸಹಾಯಕನಾಗಿ ಬರುವ ಬಡಮ್ಮೈಲ, ಕೆಂಗುರಿ ಮಲ್ಲೇಗೌಡ ಮತ್ತು ಜುಂಜಪ್ಪ ಇವರೊಡನೆ ಗಾಢವಾದ ಸಂಬಂಧ ಪಡೆದಿದ್ದ ಗೊಡ್ಡುಗಾಳಿ ಎಂಬ ಹಸು ಈ ಸಂಬಂಧಗಳು ಕೂಡ ಅಷ್ಟೇ ಆತ್ಮೀಯವಾಗಿ ಚಿತ್ರಿತವಾಗಿದೆ. ಇದನ್ನೂ ನಮ್ಮ ಸಾಹಿತ್ಯ ವಿಮರ್ಶಕರು ಗಮನಿಸಬೇಕಾದ ಅಗತ್ಯವಿದೆ.

ಕನ್ನಡದಲ್ಲಿ ಪಶುಪಾಲಕ ವೃತ್ತಿಯ ಹಿನ್ನೆಲೆಯಲ್ಲಿ ರಚಿತವಾಗಿದ್ದು ಜನಪ್ರಿಯವಾಗಿರುವ ಏಕೈಕ ಕೃತಿ ಎಂದರೆ *ಗೋವಿನಹಾಡು*. ಇದು ಅಜ್ಞಾತಕರ್ತೃಕ ಕವಿಯೊಬ್ಬನಿಂದ ರಚಿತವಾಗಿದ್ದು ಅದನ್ನು ಡಿ. ಎಲ್. ನರಸಿಂಹಾಚಾರ್ ಅವರು ಸಂಗ್ರಹಿಸಿ ಸಂಪಾದಿಸಿದ್ದಾರೆ. ಇದರಲ್ಲಿ ಕಾಳಿಂಗನೆಂಬ ಗೊಲ್ಲ 'ಧರಣಿಮಂಡಲ ಮಧ್ಯದೊಳಗೆ ಮೆರೆಯುತಿಹ ಕರ್ನಾಟ ದೇಶದಿ' ತನ್ನ ಹಸುಗಳೊಂದಿಗೆ ಬದುಕುವ ರೀತಿ ಹಾಗೂ ಪುಣ್ಯಕೋಟಿ ಎಂಬ ಹಸುವು ತಾನು ಮಾತು ಕೊಟ್ಟಂತೆ ಹುಲಿಗೆ ತನ್ನನ್ನು ಆಹಾರವಾಗಿ ಅರ್ಪಿಸಿಕೊಳ್ಳಲು ಹೋಗುವುದು, ಉಳಿದ ಹಸುಗಳಿಗೆ ತನ್ನ ತಬ್ಬಲಿಯಾಗುವ ತನ್ನ ಕರುವನ್ನು ಚೆನ್ನಾಗಿ ನೋಡಿಕೊಳ್ಳಲು ಹೇಳುವುದು, ಪುಣ್ಯಕೋಟಿಯ ಸತ್ಯನಿಷ್ಠೆಗೆ ಹುಲಿಯೇ ಪರಿವರ್ತನೆಗೊಂಡು ಪ್ರಾಣಬಿಡುವುದು ಅಪೂರ್ವವಾದ ಪ್ರಸಂಗವಾಗಿದೆ. ಇದನ್ನು ಬಿಟ್ಟರೆ ಮನುಷ್ಯ ಮತ್ತು ಪಶುಗಳ ಸಂಬಂಧ ಇಷ್ಟು ಗಾಢವಾಗಿ ಚಿತ್ರಿತವಾಗಿರುವುದ ಜುಂಜಪ್ಪನ ಕಾವ್ಯದಲ್ಲಿ ಹಾಗೂ ಎತ್ತಪ್ಪ, ಗಾದ್ರಿ ಪಾಲನಾಯಕ ಮುಂತಾದ ಕಾವ್ಯಗಳಲ್ಲಿ ಮಾತ್ರ.

ಪ್ರಸ್ತುತ ನಾವು ಸಂಪಾದಿಸಿರುವ ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪನ ಕಥೆಯನ್ನು ಕಾಡುಗೊಲ್ಲರ ಒಂದು ಧಾರ್ಮಿಕ ಪುರಾಣ ಎಂಬುದಕ್ಕಿಂತ ಹೆಚ್ಚಾಗಿ ಒಂದು ಸಾಹಿತ್ಯ ಕೃತಿ ಎಂದು ಪರಿಗಣಿಸಿ ವಿಮರ್ಶೆ ಮಾಡಬೇಕಾಗಿದೆ. ಕಥನಕಲೆಯ ದೃಷ್ಟಿಯಿಂದ ಈ ಕೃತಿಯನ್ನು ವಡ್ಡಾರಾಧನೆ ಕೃತಿಯೊಂದಿಗೆ ತೌಲನಿಕವಾಗಿ ಅಭ್ಯಾಸಮಾಡಬಹುದು. ವಡ್ಡಾರಾಧನೆ ಯಲ್ಲಿ ಹಲವಾರು ಕಡೆ ಸಂಚರಿಸಿ ಎಂಬುದಕ್ಕೆ 'ಗ್ರಾಮ ನಗರ ಖೇಡ ಖರ್ವಡ ಮಡಂಬ ಪತ್ತನ ದ್ರೋಣಾಚಲಂಗಳಿಂ ವಿಹಾರಿಸಿ' ಎಂಬ ಪದಪುಂಜ ಹಲವಾರು ಕಡೆಗಳಲ್ಲಿ ಪುನರಾವರ್ತಿತವಾಗಿದೆ. ಅದೇರೀತಿ ಜುಂಜಪ್ಪನ ಕಥೆಯಲ್ಲಿ ಕೂಡ ಜುಂಜಪ್ಪ ದನಗಳನ್ನು ಮೇಯಿಸುವ ಕಾವಲುಗಳ ವಿವರ ಹೀಗೆಯೇ ಹಲವು ಕಡೆಗಳಲ್ಲಿ ಪುನರಾವರ್ತನೆಯಾಗುತ್ತದೆ. ಸಂಭಾಷಣಾ ಚಾತುರ್ಯದ ದೃಷ್ಟಿಯಿಂದಲೂ ಜುಂಜಪ್ಪನ ಕಥೆಯಲ್ಲಿ ಹಲವಾರು ಸ್ವಾರಸ್ಯಕರ ಸಂದರ್ಭಗಳಿವೆ.

ಇಲ್ಲಿ ಖಳನಾಯಕ ಸ್ಥಾನದಲ್ಲಿರುವ ಜುಂಜಪ್ಪನ ಸೋದರ ಮಾವಂದಿರು ಮತ್ತು ಅವರಿಗೆ ಸಹಕಾರಿಯಾಗಿ ನಿಲ್ಲುವ ಮತ್ತು ಜುಂಜಪ್ಪನಿಗೆ ವಿರೋಧವಾಗಿ ನಿಲ್ಲುವ ಹುಲಿಕುಂಟೆ ತಮ್ಮಣ್ಣ, ಸಾಣಿಕೆರೆ ಪುಟ್ಟಣ್ಣನಂತಹ ಮಂತ್ರವಾದಿಗಳು, ಸಿರಾದ ರಂಗಣ್ಣ ಮತ್ತು ಚೇಳೂರು ರಂಗಣ್ಣನಂತಹ ಪಾಳೆಗಾರರ ಪಾತ್ರಗಳು ಎದ್ದು ಕಾಣುವಂತಿವೆ. ಈಶ್ವರ ಮತ್ತು ಜುಂಜಪ್ಪನಿಗೆ ಸಂಪರ್ಕ ಕಲ್ಪಿಸುವ ಪಾತ್ರವಾಗಿ ಗೌರಸಂದ್ರದ ಮಾರಕ್ಕನ ಹಾಗೂ ಶಿವಚಿತ್ರಲಿಂಗನ ಪಾತ್ರಗಳು ಮಾನವೀಯ ಗುಣಗಳಿಂದ ಕೂಡಿವೆ. ಪುರ್ಲಹಳ್ಳಿ ಭೂತಪ್ಪನ ಪಾತ್ರ ನಳಚರಿತ್ರೆಯಲ್ಲಿ ನಳನು ಕಾರ್ಕೋಟಕ ವಿಷದಿಂದ ವಿಕಾರವಾದ ರೂಪವನ್ನು ತಳೆಯುವುದನ್ನು ನೆನಪಿಸುತ್ತದೆ. ಪುರಲಹಳ್ಳಿ ಭೂತಪ್ಪ ಮತ್ತು ತಾಳೆದುರ್ಗಿ ನಡುವೆ ನಡೆಯುವ ಹೋರಾಟ ಬೀಭತ್ಸ ರಸಕ್ಕೆ ಒಳ್ಳೆಯ ಉದಾಹರಣೆ ಹಾಗೂ ಕನ್ನಡ ಸಾಹಿತ್ಯದಲ್ಲಿಯೇ ಒಂದು ವಿಶಿಷ್ಟ ಪ್ರಸಂಗವಾಗಿ ನಿಲ್ಲುತ್ತದೆ.

ಕಂಬಕ್ಕ ಮತ್ತು ದೇವರ ದಯಮಾರನ ಮದುವೆಯ ಪ್ರಸಂಗ, ಗೌರಸಂದ್ರದ ಮಾರಕ್ಕ ಕೆಂಗುರಿ ಮಲ್ಲೇಗೌಡ ಮತ್ತು ಚಿನ್ನಮ್ಮನಿಗೆ ಮಕ್ಕಳ ವರವನ್ನು ಈಶ್ವರನಿಂದ ತಂದು ಕೊಡುವ ಪ್ರಸಂಗ, ಕಂಬೇರಗೊಲ್ಲರು ಜುಂಜಪ್ಪನಿಗೆ ಮದ್ದು ಹಾಕುವ ಪ್ರಸಂಗ ಮೊದಲಾದುವುಗಳು ಒಳ್ಳೆಯ ನಾಟಕೀಯ ಸನ್ನಿವೇಶಗಳು. ಪೂಜಾರಿ ಶಿವಣ್ಣ ಅವರ ನಾಟಕೀಯ ಪ್ರತಿಭೆಯಿಂದ ಕೂಡಿದ ಮಹತ್ವದ ಕೃತಿಯಾಗಿದೆ.

ಪ್ರಕೃತಿ ಮತ್ತು ಮನುಷ್ಯನ ಗಾಢವಾದ ಸಂಬಂಧವನ್ನು ಚಿತ್ರಿಸುವ ಸಂದರ್ಭಗಳು ಈ ಕಥೆಯಲ್ಲಿವೆ. ಅನಾಥನಾದ ಕೆಂಗುರಿಮಲ್ಲಪ್ಪ ಶಿಶುವನ್ನು ಪ್ರಕೃತಿಯ ಶಕ್ತಿಗಳೇ ನೋಡಿಕೊಂಡು ರಕ್ಷಿಸುವ ಚಿತ್ರ ಜೈಮಿನಿ ಭಾರತದ ಚಂದ್ರಹಾಸ ಪ್ರಸಂಗವನ್ನು ನೆನಪಿಗೆ ತರುತ್ತದೆ. ಹಾಗೆಯೇ ಕೆಂಗುರಿಮಲ್ಲೇಗೌಡನೊಡನೆ ಗೊಡ್ಡುಗಾಳಿ ಎಂಬ ಮುದಿಹಸು ತಾನು ಮೊಮ್ಮಕ್ಕಳನ್ನು, ಮುಮ್ಮಕ್ಕಳನ್ನು ನೋಡಿ ತನ್ನ ಜೀವನ ಸಾರ್ಥಕವಾಯಿತು ಎಂದು ಹೇಳುವುದು ಇಂತಹ ಒಂದು ಸಂದರ್ಭ. ಇದೇ ಗೊಡ್ಡುಗಾಳಿ ದೇವರದಯಮಾರನಿಗೆ ಅವನು ತನ್ನನ್ನು ಬಿಟ್ಟುಹೋಗುವಾಗ "ಏಳು ವರ್ಷಕಾಲ ಹುಲ್ಲುಮೇಯಿಸಿ ಈಗ ಮಾರನಹಳ್ಳಿಗೆ ಹೋಗಿ ಬ್ಯಾರೆ ಇರಾನ ಅಂತ ಹೆಣ್ತಿ ಮಾತು ಕೇಳಿ ಬ್ಯಾರೆ ಹೊರಟಿದೀಯಾ" ಎಂದು ಹೇಳುವುದು ಇದೇ ರೀತಿಯ ಉದಾಹರಣೆಯಾಗುತ್ತದೆ.

ತೇಜಸ್ವಿಯವರ ಸಾಹಿತ್ಯದಲ್ಲಿ ಕಾಡು ಮತ್ತು ಬೇಟೆಗೆ ಅತ್ಯಂತ ಮಹತ್ವವಿದೆ. ಇಲ್ಲಿ ಮನುಷ್ಯ ಮತ್ತು ನಾಯಿಯ ಸಂಬಂಧ ಆಪ್ತವಾಗಿ ಚಿತ್ರಿತವಾಗಿದೆ. ಕೃಷ್ಣೇಗೌಡನ ಆನೆಯ ಚಿತ್ರಣವೂ ಇದೇ ಬಗೆಯದು. ಜುಂಜಪ್ಪ ಹಾಗೂ ಅವನ ಸಹಾಯಕನಾಗಿ ಬರುವ ಬಡಮ್ಯೆಲ ಎಂಬ ಹೋರಿಯ ಸಂಬಂಧ ಕೂಡ ಇಷ್ಟೇ ಆತ್ಮೀಯವಾದ ಚಿತ್ರಣವಾಗಿದೆ.

ಪ್ರಸ್ತುತ ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪನ ಕಥೆಯನ್ನು ಒಂದು ಧಾರ್ಮಿಕ ಪುರಾಣ ಎಂಬುದಕ್ಕಿಂತ ಹೆಚ್ಚಾಗಿ ಒಂದು ಸಾಹಿತ್ಯ ಕೃತಿ ಎಂದು ಪರಿಗಣಿಸಿ

ವಿಮರ್ಶೆಮಾಡಬೇಕಾಗಿದೆ. ಇದನ್ನು ಜನಪದ ಕಥಾನಕ ಎಂಬ ಸಹಾನುಭೂತಿಯಿಂದ ನೋಡುವ ಬದಲಾಗಿ ನಮ್ಮ ಹಳಗನ್ನಡ, ನಡುಗನ್ನಡದ ಕಾವ್ಯಗಳಂತೆಯೇ ಕನ್ನಡದ ಕಾವ್ಯ ಎಂಬ ಪ್ರಜ್ಞೆಯಿಂದ ನೋಡಬೇಕಾಗುತ್ತದೆ. ಹಾಗೆ ಪರಿಗಣಿಸಿ ವಿಮರ್ಶೆಮಾಡಿದಾಗ ಮಹತ್ವದ ಹಲವಾರು ಅಂಶಗಳು ಗಮನಕ್ಕೆ ಬರುತ್ತವೆ.

ಆದ್ದರಿಂದ, ಪ್ರಸ್ತುತ ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ ಕನ್ನಡದ ಒಂದು ಪ್ರಮುಖವಾದ ಸಾಹಿತ್ಯ ಕೃತಿ ಎಂಬುದನ್ನು ಒತ್ತಿ ಹೇಳಲು ಬಯಸುತ್ತೇನೆ. ಈ ಬಗ್ಗೆ ಇನ್ನೂ ಹೆಚ್ಚಿನ ಅಧ್ಯಯನ ನಡೆಯಬೇಕಾದ ಅಗತ್ಯವಿದೆ.

೧.೧೩. ಸಾಂಸ್ಕೃತಿಕ ಮೌಲ್ಯ

ಬೇಟೆಗಾರಿಕೆ ಮತ್ತು ಪಶುಪಾಲನೆ ಭಿನ್ನವಾದ ಜೀವನ ಕ್ರಮಗಳು. ಇವೆರಡರ ಮೌಲ್ಯಗಳೇ ಭಿನ್ನವಾದುವು. ಜನಪದ ಸಾಹಿತ್ಯದಲ್ಲಿ ಈ ಎರಡರ ಜೀವನ ಕ್ರಮದ ಮಾತ್ರವಲ್ಲದೇ ವ್ಯವಸಾಯದ ಬಗ್ಗೆ ವಿಶೇಷವಾಗಿ ಚಿತ್ರಣ ಮಾಡಲಾಗಿದೆ. ಹಳಗನ್ನಡ ನಡುಗನ್ನಡ ಸಾಹಿತ್ಯದಲ್ಲಿ ಬೇಟೆಗಾರಿಕೆಗೆ ಸಂಬಂಧಿಸಿದ ಚಿತ್ರಗಳಿವೆ. ಇದಕ್ಕೆ ಕಾರಣ ಚಕ್ರವರ್ತಿಗಳು ಮತ್ತು ರಾಜರುಗಳು ಬೇಟೆಯಾಡುವುದನ್ನು ಪ್ರತಿಷ್ಠೆಯ ವಿಷಯ ಎಂದು ಪರಿಗಣಿಸಿದ್ದರು. ಬೇಟೆಯಾಡಲು ಬೇಟೆಗಾರರು ಮತ್ತು ಅವರ ನಾಯಿಗಳ ನೆರವನ್ನು ಪಡೆಯುತ್ತಿದ್ದರು. ಆಸ್ಥಾನ ವಿದ್ವಾಂಸರ ಪರಂಪರೆಯಲ್ಲಿ ಕವಿಗಳು ಮೃಗಯಾ ವಿಹಾರ ಎಂಬ ಶೀರ್ಷಿಕೆಯಲ್ಲಿ ಈ ಬಗೆಯ ವರ್ಣನೆಗಳನ್ನು ಮಾಡಿದ್ದಾರೆ.

ಪಶುಸಂರಕ್ಷಣೆಗೆ ಸಂಬಂಧಿಸಿದಂತೆ ಕನ್ನಡ ಶಾಸನಗಳಲ್ಲಿ ಉಲ್ಲೇಖಗಳಿವೆ. ಎಂ. ಚಿದಾನಂದಮೂರ್ತಿಯವರ *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ಆರ್. ಶೇಷಶಾಸ್ತ್ರಿ ಅವರ *ಕರ್ನಾಟಕದ ವೀರಗಲ್ಲುಗಳು* ಮೊದಲಾದ ಕೃತಿಗಳಲ್ಲಿ ತುರುಗೋಳ್‌ಗೆ ಸಂಬಂಧಿಸಿದ ವಿವರಗಳಿವೆ. ಆ ಕಾಲಕ್ಕೆ ತುರುಗೋಳ್‌ನಲ್ಲಿ ಸಾಯುವುದು ವೀರರ ಲಕ್ಷಣವಾಗಿತ್ತು. ದನಗಳನ್ನು ರಕ್ಷಿಸಿಕೊಳ್ಳಲಾಗದವರನ್ನು ಹೇಡಿಗಳೆಂದು ಪರಿಗಣಿಸಲಾಗುತ್ತಿತ್ತು. ಪಂಪ, ರನ್ನ ಮೊದಲಾದ ಕವಿಗಳ ಕಾವ್ಯಗಳಲ್ಲಿ ದೊರಕುವ ಉಲ್ಲೇಖಗಳು ಗೋರಕ್ಷಣೆಗೆ ಸಂಬಂಧಪಟ್ಟವೇ ಹೊರತು ಗೋಪಾಲನೆಗೆ ಸಂಬಂಧ ಪಟ್ಟವಲ್ಲ. ಕುಮಾರವ್ಯಾಸ ಭಾರತದಲ್ಲಿ ಉತ್ತರನ ಪ್ರಸಂಗದಲ್ಲಿ ಗೋಗ್ರಹಣ ನಡೆದಾಗ ಪಶುಪಾಲಕನನ್ನು ಅವಮಾನಗೊಳಿಸುವ ಪ್ರಸ್ತಾಪವನ್ನು ಹೊರತುಪಡಿಸಿದರೆ ಗೋಪಾಲಕರ ಬದುಕನ್ನು ಬಗ್ಗೆ ಧನಾತ್ಮಕವಾಗಿ ಚಿತ್ರಿಸಿರುವ ಸಂದರ್ಭಗಳು ಹಳಗನ್ನಡ, ನಡುಗನ್ನಡ ಕಾವ್ಯಗಳಲ್ಲಿ ದೊರಕುವುದಿಲ್ಲ. ಹರಿಹರನ ರಗಳೆಯಲ್ಲಿ ಮಾತ್ರ ಅಲ್ಲೊಮ್ಮೆ ಇಲ್ಲೊಮ್ಮೆ ಪ್ರಸ್ತಾಪವಾಗಿರುತ್ತದೆ.

ಪ್ರಸ್ತುತ ಶಿವಣ್ಣನವರು ಹೇಳಿರುವ ಜುಂಜಪ್ಪನ ಕಥೆಯಲ್ಲಿ ಪಶುಪಾಲನೆ ಒಂದು ಪವಿತ್ರವಾದ ವೃತ್ತಿ ಎಂದು ಸಾರವತ್ತಾಗಿ ಪ್ರತಿಪಾದಿಸಲಾಗಿದೆ. ಅದಕ್ಕಾಗಿ ದೇವರ ದಯಮಾರ, ಕೆಂಗುರಿಮಲ್ಲೇಗೌಡ ಹಾಗೂ ಜುಂಜಪ್ಪ ಈ ಮೂರು ತಲೆಮಾರಿನಲ್ಲಿಯೂ

ಇದ್ದ ತಜ್ಞತೆ, ವೃತ್ತಿಪರತೆ, ಮತ್ತು ವೃತ್ತಿನಿಷ್ಠೆ ಇವುಗಳನ್ನು ತುಂಬಾ ಅರ್ಥಪೂರ್ಣವಾಗಿ ಚಿತ್ರಿಸಲಾಗಿದೆ. ದೇವರದಯಮಾರ ಹಾಗೂ ಕೆಂಗುರಿಮಲ್ಲೇಗೌಡ ತಮ್ಮ ಮದುವೆ ಹಾಗೂ ಹೆಂಡತಿಗಿಂತ ಹೆಚ್ಚಿನ ಪ್ರಾಶಸ್ತ್ಯವನ್ನು ದನಕಾಯಲು ಹಾಗೂ ಅವುಗಳಿಗೆ ಹುಲ್ಲು ನೀರು ಒದಗಿಸಲು ನೀಡಿರುವುದನ್ನು ಗಮನಿಸಬಹುದು.ಕಾಡುಗೊಲ್ಲ ಸಂಸ್ಕೃತಿಯ ಆಚಾರವಿಚಾರಗಳ ಕುರಿತಾದ ಅತೀವ ನಿಷ್ಠೆ ಇದರಲ್ಲಿ ಸ್ಪಷ್ಟವಾಗಿ ವ್ಯಕ್ತವಾಗಿದೆ. ಕಾಡುಗೊಲ್ಲರ ನಡಾವಳಿಯಲ್ಲಿ ಇರಬೇಕಾದ ವಿಧಿನಿಷೇಧಗಳನ್ನು ಕುರಿತು, ಮಡಿ ಮೈಲಿಗೆ ಸೂತಕ ವೃದ್ಧಿಗಳನ್ನು, ಕುರಿತು ಹುಟ್ಟು ಮದುವೆ ಹಾಗೂ ಸಾವಿನ ಸಂದರ್ಭದ ಆಚರಣೆಗಳು ಇವುಗಳ ಕುರಿತ ವಿವರಗಳನ್ನು ಬಹಳ ವಿಶಿಷ್ಟವಾಗಿ ವಿವರಿಸಲಾಗಿದೆ. ಜುಂಜಪ್ಪನ ಪಾತ್ರದಲ್ಲಿ ಸೂಕ್ಷ್ಮವಾಗಿ ಬ್ರಹ್ಮಚರ್ಯದ ದೃಢತೆಯನ್ನು ವಿವರಿಸಲಾಗಿದೆ. ಪಾತಿವ್ರತ್ಯವನ್ನು ಪರೀಕ್ಷಿಸಲು ಕಠೋರ ಪರೀಕ್ಷೆಗಳನ್ನು ಒಡ್ಡುವುದು ಹಾಗೂ ಹುಟ್ಟಿದ ಮಗುವಿಗೆ ಜೆನ್ನಿಗೆ ಹೊಯ್ಯುವ ಆಚರಣೆ ಕುರಿತಂತೆ ಅತೀವ ಕಾಳಜಿ ತೋರುವುದು, ಆ ಮೂಲಕ ಪುರುಷಪ್ರಧಾನ ಚೌಕಟ್ಟಿನಲ್ಲಿ ಮಹಿಳೆಯನ್ನು ಪರೀಕ್ಷಿಸುವ ವಿಧಾನಗಳು ಸಮುದಾಯದೊಳಗಿನ ಪ್ರತಿಗಾಮಿ ನಿಲುವನ್ನು ವಿವರಿಸುತ್ತದೆ.

ಬೇಟೆಗಾರ ವೃತ್ತಿಯ ಮ್ಯಾಸಬೇಡರ, ಪಶುಪಾಲಕರಾದ ಗೊಲ್ಲರ ನಡುವಿನ ಸಾಂಸ್ಕೃತಿಕ ಸಂಘರ್ಷ ಈ ಕಾವ್ಯದಲ್ಲಿ ವಿಶೇಷವಾಗಿ ಚಿತ್ರಿತವಾಗಿದೆ. ಹಾಗೆಯೇ ವ್ಯವಸಾಯ ಪ್ರಧಾನ ಸಂಸ್ಕೃತಿಯ ಅಳುವಿನವರ ಒಕ್ಕಲಿಗರು, ಅದರ ಪ್ರತಿನಿಧಿಯಾಗಿ ಹೊನ್ನಟ್ಟಿ ಆಲೆಗೌಡ, ಕಾಡುಗೊಲ್ಲರ ಕೆಂಗುರಿ ಮಲ್ಲೇಗೌಡನನ್ನು ಸಾಕುವುದು ಹಾಗೂ ಜಾತಿವ್ಯವಸ್ಥೆಯಲ್ಲಿ ಪ್ರಬಲ ಜಾತಿಗೆ ಸೇರುವ ಅಳುವಿನವರ ಒಕ್ಕಲಿಗರು ಕಾಡುಗೊಲ್ಲರ ಜುಂಜಪ್ಪನ ಒಕ್ಕಲಾಗಿ ಪರಿವರ್ತಿತರಾಗುವುದು ಸಾಮಾಜಿಕ ಸಂಘರ್ಷದ ನಂತರದ ಸಮನ್ವಯತೆಯನ್ನು ಸೂಚಿಸುತ್ತದೆ. ಈ ಸಂಬಂಧ ಎಷ್ಟು ಗಾಢವಾಗಿದೆ ಎಂದರೆ ಇಂದಿಗೂ ಕೂಡ ಜುಂಜಪ್ಪನ ಪೂಜೆಯಲ್ಲಿ ಮೊದಲ ಪೂಜೆಯ ಹಕ್ಕನ್ನು ಅಳುವಿನವರ ಒಕ್ಕಲಿಗರು ಪಡೆದುಕೊಂಡಿದ್ದಾರೆ. ಕೆಂಗುರಿ ಮಲ್ಲೇಗೌಡ ತನ್ನ ಹಸುಗಳನ್ನು ಹೋರಿಗಳನ್ನು ಮಾರಿ ಸಂಪಾದಿಸಿದ ಹಣವನ್ನು ದನಗಳ ಕೊಂಬನ್ನು ಕೊರೆದು ಅವುಗಳಲ್ಲಿ ಚಿನ್ನದ ನಾಣ್ಯಗಳನ್ನು ತುಂಬಿ ರಕ್ಷಿಸುವ ಕ್ರಮ ಕುತೂಹಲಕಾರಿಯಾಗಿದೆ. ಅವುಗಳನ್ನು ಎತ್ತಿನ ಕಣದಲ್ಲಿ ಸುರಿದು ಎಣಿಸುವ ಕ್ರಮವು ವಿಶೇಷವಾಗಿದೆ. ಕಣಗಳ ವಿಧಗಳನ್ನು ಸೂಚಿಸುವಾಗ ಆರು ಎತ್ತಿನ ಕಣ, ಹನ್ನೆರಡು ಎತ್ತಿನ ಕಣ ಎಂಬುದು ಕಣದ ವಿಸ್ತಾರವನ್ನು ವಿವರಿಸುತ್ತದೆ. ಹೀಗೆ ಒಂದು ಸಮುದಾಯದ ಸಾಂಸ್ಕೃತಿಕ ವಿವರಗಳ ಅಧಿಕಾರಯುತ ಸಂಗ್ರಹವಾಗಿ ಮಹಾಕಾವ್ಯವನ್ನು ಪರಿಗಣಿಸಲಾಗುವುದು ಎಂಬುದಕ್ಕೆ ಈ ಕಾವ್ಯ ಉತ್ತಮ ಉದಾಹರಣೆಯಾಗಿದೆ.

ಪೂಜಾರಿ ಶಿವಣ್ಣ ಹೇಳಿದ ಈ ಜುಂಜಪ್ಪನ ಕಥೆಯನ್ನು ಹಲವಾರು ದೃಷ್ಟಿಗಳಿಂದ ಅಧ್ಯಯನ ಮಾಡಲು, ವಿಮರ್ಶೆಮಾಡಲು ಅವಕಾಶಗಳಿವೆ. ಪಶುಪಾಲಕ ಸಮುದಾಯಗಳ ಕಾವ್ಯಗಳೊಡನೆ ಹೋಲಿಸಿ ತೌಲನಿಕವಾಗಿ ವಿಚಾರಮಾಡಬೇಕಾಗಿದೆ. ಈ ಎಲ್ಲಾ ಬಗೆಯ ಅಧ್ಯಯನಗಳಿಗೆ ಜುಂಜಪ್ಪ ಮಹಾಕಾವ್ಯ ಒಂದು ಉತ್ತಮ ಆರಂಭವಾಗಲೆಂದು ಆಶಿಸುತ್ತೇನೆ.

– ತೀ. ನಂ. ಶಂಕರನಾರಾಯಣ

೨. ಜುಂಜಪ್ಪ ಮಹಾಕಾವ್ಯ

೨.೧. : ದೇವರ ದಯಮಾರನ ಕಥೆ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಸಿದ್ಧರು ಬಂದರು ಎಂದು ಎದ್ದು ನೋಡಲು ಬಂದೆ
ಸಿದ್ಧರು ನಮ್ಮಕೈಗೆ ಸಿಗಲಿಲ್ಲಾ ಈ ಹೊತ್ತು
ರುದ್ರಾಕ್ಷಿ ತೋಪೇ ಮರೆಯಾದೋ

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ
ಎದ್ದೊಂದರಘಳಿಗೆ ನೆನೆದೇವೋ

ಸ್ವಾಮೀನ ನೆನೆದೇವೋ ಸ್ವಾಮಾರದಯ್ಯಾನ
ಬೆಣ್ಣೆ ಮಜ್ಜನದ ಒಡೆಯ ಸ್ವಾಮಿ ಜುಂಜಪ್ಪನ ನೆನೆದೇವೋ

ನಿಡುಗಲ್ಲ ದಡದಾಗೆ ನೀಟಾಗಿ ಬೆಳೆದಮ್ಮ
ಬೆನವಣ್ಣನ ಬೆಟ್ಟದಾಗೆ ಹಸನಾಗೆ ಬೆಳೆದಮ್ಮ
ಸ್ವಾಗೆ ಗಿರಿ ಬಡ್ಯಾಗೆ ಸೊಗಸಾಗಿ ಬೆಳೆದಮ್ಮ
ಏಣುಕಲ್ಲುಗಿರಿ ಬೆಟ್ಟದಾಗೆ ಗೇಣಾಗೆ ಬೆಳೆದಮ್ಮ

ಚುಂಚನ ಗಿರಿ ಬೆಟ್ಟದಾಗೆ ಮಿಂಚುದಲೆ ಬಿದಿರಾದೆ
ದೊಡ್ಡೋನು ಜುಂಜಪ್ಪಗೆ ಒಡ್ಡಿದರು ಬಿಲ್ಲಾದೆ
ಮೂಡಲಗಿರಿ ತಿಮ್ಮಪ್ಪಗೆ ಮಾಯದಲೆ ಸಜ್ಜಾದೆ
ನಾಡರು ಮರುವಾದಮ್ಮ ಜೋಗಿಗೆ ಕುಲವಾದೆ
ಕುಂಟನಿಗೆ ಕೋಲಾದೆ ಭಂಟನಿಗೆ ದೊಣ್ಣೆಯಾದೆ

ಮೇಕೆಕಾಯುವಣ್ಣನಿಗೆ ಬಲಿತ ಕಣ್ಣಿನ ಕೋಲಾದೆ
ಕುರಿಯ ಕಾಯುವಣ್ಣನಿಗೆ ಎಳೆಗಣ್ಣಿನ ಕೋಲಾದೆ
ಎತ್ತು ಕಾಯೋ ಅಣ್ಣನಿಗೆ ಮುದ್ದಿನ ಕೋಲಾದೆ
ಒಕ್ಕಲಿಗರ ಮುದ್ದಣ್ಣಗೊಂದಗ್ಗಲಿಗೆ ಕೋಲಾದೆ
ಸಾಲು ಹೊಡೆಯಣ್ಣನಿಗೆ ಕೂರಿಗೆ ನೀನಾದೆ
ಏಳೋನಿಗೆ ಬಲವಾದೆ, ಊದೋನಿಗೆ ಗಣೆಯಾದೆ

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ‍್ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ
ಒಂದು ಬಿದಿರು ಕಡ್ಡಿ ಮಹಾತ್ಮೆ ಇಷ್ಟು ಸ್ವಾಮಿ . .

ಬಕ್ಕದಲೆ ದೊಡ್ಡಯ್ಯ, ದಳವಾಯಿ ದೊಡ್ಡಯ್ಯ, ದೊಡ್ಡಸಿದ್ದೇಗೌಡ, ಪೂಜಾರಿ ದೊಡ್ಡಯ್ಯ, ಚಿಕ್ಕ ಸಿದ್ದೇಗೌಡ, ಕಲ್ಲೇಗೌಡ, ದೇವರ ದಯಮಾರ ಏಳು ಜಿನ ಚಿತ್ತಮುತ್ತಿ ಗೊಲ್ಲರು, ಅಂದರೆ ಮಾರನವರ ಗೊಲ್ಲರು. ಇವರು ಏಳು ಜನ ಚಿತ್ತಮುತ್ತಿ ಮಕ್ಕಳು. ಈಗ ನಾವು ಕುರಿ ಆಳಿದ್ದಾಗೆ ಏಳು ಗೂಡಿನ ಆವುಗಳು, ಅಂದರೆ ದನ ಆಳ್ತಿದ್ದಾಗ ಮೂರು ವರ್ಷದ ಕ್ಷಾಮ ಬಂದ್ಬಿಟ್ತು. ಮೂರು ವರುಷದ ಬರ ಬಂದಾಗ ಆರು ಜನ ಅಣ್ಣಂದಿರು ಲಗ್ನವಾಗಿ ಮನೆಕಡೆ ಸಂಸಾರ, ವ್ಯವಹಾರ ನೋಡಿಕೊಂತ ನಿಂತರು. ಕಡೆಗೆ ಹುಟ್ಟಿನೋನು ಇದ್ನಲ್ಲಾ ದೇವರ ದಯಮಾರ ಅವನನ್ನು ಏಳು ಗೂಡಿನ ದನ ಕಾಯೋಕೆ ಕಳಿಸಿದರು. ದೇವರ ದಯಮಾರ ಮೂರು ಹಗಲು, ಮೂರು ರಾತ್ರಿ ನ್ಯಾಯ ಮಾಡಿದನಂತೆ:

'ಅಡವೀಲಿ ಹುಲ್ಲಿಲ್ಲ, ನೀರಿಲ್ಲ, ಎಲ್ಲಾರೂ ಈ ಬರ ನೀಗಿ ನೀರು ಹುಲ್ಲು ಬರೋಮಟಾ ಎಲ್ಲಾದರೂ ನೀರಿರೋ ತಾವ ಹೋಗಿ ಈ ಆವುಗೋಳ್ನ ಕಾಪಾಡಿಕೊಂಡು ಬರೋಣ ಕಣ್ರಣ್ಣಾ. ನಮ್ಮ ತಾತಗಳು, ಮನೆತನದೋರು ಸಂಪಾದಿಸಿ ಕೊಟ್ಟ ಆವಿನ ದನಗಳ ಕಳೆಯೋದ್ಬೇಡಾ' ಅಂತ ಹೇಳಿ ಇವರು ಆರು ಜನ ಅಣ್ಣಗೋಳನ್ನು ಕೇಳ್ದ. ಯಾರು? ದೇವರ ದಯಮಾರ.
"ನಾವು ಮಾತ್ರ ಹೆಂಡ್ರು ಮಕ್ಳು, ಹೊಲಮನೆ, ಬಂಧು ಬಳಗ ಇರೋವ್ರು. ಈ ದೇವ್ರು ದಿಂಡ್ರು ಬಿಟ್ಟು ಬರೋಕಾಗಲ್ಲಪ್ಪ. ಹೆಂಡ್ರಿಲ್ಲ, ಮಕ್ಳಿಲ್ಲ, ಗುಂಡುಗೋವಿ ಇದ್ದಂಗೆ ನೀನು. ಈ ಏಳು ಗೂಡಿನ ಆವುಗಳನ್ನು ನೀನೇ ನೋಡ್ಕೋ, ನಾವು ಬರಕ್ಕಾಗಲ್ಲ" ಅಂದ್ರು..
ಎಷ್ಟು ನ್ಯಾಯ ಮಾಡಿ ಕೇಳ್ದಾಗಲೂ "ನಾವು ಬರೋದೇ ಇಲ್ಲ" ಅಂದರು. ಅವನಿಗೆ ಕೋಪ ಬಂತು.

"ಇವತ್ತಿಗೆ ನಮ್ಮ ನೆಂಟಸ್ತನ ಹರಿದು ಹೋಗಿ ಬಿಡ್ತು. ನೀವು ನಿಮ್ಮ ದೇವ್ರು ದಿಂಡ್ರು, ಹೆಂಡ್ರು ಮಕ್ಕಳು, ಬಂಧು ಬಳಗ ಎಲ್ಲಾ ಆನಂದವಾಗಿ ಇದ್ದು ಬಿಡ್ರಿ. ನನಗೆ ದೇವ್ರು ದಿಂಡ್ರು, ಹೆಂಡ್ರು ಮಕ್ಕಳು, ಬಂಧು ಬಳಗ ಎಲ್ಲಾ ನನ್ನ ಈ ಆವಿನ ದನಗಳೇ. ಇಷ್ಟೇ ನನ್ನ ಸೌಭಾಗ್ಯ. ನಾ ಹೊರಟೋಗಿ ಬಿಡ್ತೀನಿ" ಅಂತ ಹೇಳಿದ.

ಆಮೇಲೆ ದೇವರ ದಯಮಾರ ನಾರಾಯಣ ಎಂಬೋ ನಾಮಗೊಡಲಿ, ಶಿವನೆಂಬೋ ಚಿಪ್ಪುಗೊಡಲಿ, ರನ್ನದ ಪಿಳ್ಳಂಗೋವಿ, ಚಿನ್ನದ ಪಿಳ್ಳಂಗೋವಿ, ಪಟ್ಟೇ ದಟ್ಟಿ, ಕೋರೆ ರುಮಾಲು, ಏಳು ಕಣ್ಣಿನ ಬಿದಿರುಕೋಲು, ಎಡಗಡೆ ಕಂಕುಳದಾಗೆ ಉಗ್ಗುಳದ ಗಡಿಗೆ, ಸುರನಾರಿ ಬಿಲ್ಲು ಬೆನ್ನಿಗೆ ಕಟ್ಟಿದ, ನೆಟ್ಟನೆ ಬಾಣ ನೆತ್ತಿಗೆ ಕಟ್ಟಿದ, ಉಕ್ಕಿನ ಬಾಣ ಪಕ್ಕೆಗೆ ಕಟ್ಟಿಕೊಂಡ, ಲೆಕ್ಕವಿಲ್ಲದ ಬಾಣ ಅವನು ಎದೀಗೆ ಕಟ್ಟಿಕೊಂಡ. ಲೆಕ್ಕವಿಲ್ಲದ ಬಾಣ ಅವನು ಎದೀಗೆ ಕಟ್ಟಿಕೊಂಡು ಅವನು ಈಗ ಈ ದನಾನೆಲ್ಲ ಕರೆದ:

"ಅಕ್ಕೋ ಅಲ್ಲಿ ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ದ್ಯಾವಕ್ಕ ದಯಮಾರಿ, ಕಡೆ ಹುಟ್ಟಿನ ಕಲ್ಯಾಣಿ,
ಬುದ್ಧಿಯಲ್ಲಿ ಬುದ್ಧಿವಂತೆ, ಕೊಂಬಿನಲ್ಲಿ ಗಂಭೀರವಂತೆ,
ಬಲದಲ್ಲಿ ಬಲವಂತೆ, ಮುಖದಲ್ಲಿ ಸಿಡುಕು ಮಾರಿಗಿಂತ ಚೆಲುವೆ .
ಎದ್ದೇಳಮ್ಮ ಹುಲ್ಲು ನೀರಿಗೆ ಹೋಗಿ ಬಿಡೋನ"

ಅಂತ ದನಾನೆಲ್ಲ ಎಬ್ಬಿಸಿಬಿಟ್ಟ. ಅಷ್ಟು ಹೇಳಿದ್ದಕ್ಕೆ ಭೂಮಿ ಮ್ಯಾಗೆ ಗದ್ದ ಊರಿ ಮ್ಯಾಕೆ ಎದ್ದುವಂತೆ ದನಗಳು. ಅಷ್ಟು ಬಡತನ ಬಂದು ಹೋಗಿತ್ತು. ಹುಲ್ಲು ನೀರು ಇಲ್ಲ. ಆ ಗೂಡಿನ ದನ ಕರಕೊಂಡು ಚಿತ್ರದೇವರ ದೇವಸ್ಥಾನಕ್ಕೆ ಹೋದ. ಅದು ಅವರ ಮನೆದೇವರು. ಆ ದೇವಸ್ಥಾನದ ತಾವಕ್ಕೆ ಬಂದು ಮಹಾಮಂಗಳಾರತಿ ಮಾಡಿಸಿ ಏಳುಗೂಡಿನ ದನನ್ನ ತಾವೆಲ್ಲಾ ಹಾಲು ಕರಕೊಂಬಂದು ಈ ಚಿತ್ರದೇವರಿಗೆ ಹಾಲುಹೊಯ್ದು ಅಭಿಷೇಕ ಮಾಡಿಕೊಂಡು ಹೋಗೋನ ಅಂತ ಹೇಳಿ, ಏಳುಗೂಡಿನ ದನದಾಗ ಹುಡುಕಿದರೆ ಒಂದು ಮಿಳ್ಳೆ ಹಾಲು ಸಿಕ್ಕಿತಂತೆ. 'ದಟ್ಟಿನರಸು ದೇವರಿಗೆ ಮುತ್ತಿನಷ್ಟೆ ಪ್ರಸಾದ' ಅಂತ "ಶಿವಚಿತ್ರಲಿಂಗ ಇಷ್ಟೆ ನನ್ನ ಭಕ್ತಿ ಒಪ್ಪಿಕೋ" ಅಂತ ಹೇಳಿ ಚಿತ್ರದೇವರಿಗೆ ಮಹಾಮಂಗಳಾರತಿ ಮಾಡಿಸಿ, ಆ ಹುಲ್ಲು ನೀರು ಇರೋ ಜಾಗಕ್ಕೆ ತೊಗೊಂಡು ಹೋಗಿ ಈ ದನಗಳನ್ನ ಬಿಟ್ಟು ಬರಬೇಕು. ಹುಲ್ಲು ನೀರು ಆಗೋವರೆಗೂನು, ಅಂದ್ರೆ ಮುಂದಿನ ಮಳೆಗಾಲದವರೆಗೂನೂ ಕಾಯಬೇಕು ಅಂದುಕೊಂಡು, ಆರು ಜನ ಅಣ್ಣಂದಿರನ್ನು ಕರೆಯೋ ಹೊತ್ತಿಗೆ 'ಬರೋಲ್ಲ' ಅಂದ್ರು. "ನಾನೇ ತೊಗೊಂಡು ಹೊಂಟ್ಹೋಗಿ ಬಿಡಬೇಕು ಸ್ವಾಮಿ" ಅಂತ ಮನೆದೇವ್ರ ಅಪ್ಪಣೆ ಕೇಳಿದ.

'ಒಂದು ಗದ್ದ ಕುಟ್ಟಿದರೆ ಹಾಲು, ಒಂದು ಗದ್ದ ಕುಟ್ಟಿದರೆ ನೀರು' ಇಂತಾ ಮಗ ನೀನು. ಈ ರತ್ನಗಿರಿ, ನಿಡುಗಲ್ಲು, ಸಾರಗಿರಿ, ಬೋಸಮರಿಗಿ,

ರಾಯದುರ್ಗ, ಕಲ್ಯಾಣದುರ್ಗ, ಚಿತ್ರದುರ್ಗ ಇಂತಿಂಥ ಕೋಟೆ ಪ್ಯಾಟೆಗಳನ್ನೆಲ್ಲಾ ಕಟ್ಟಿಸಿಕೊಂಡು ಈ ಪಾಳೆಗಾರರೆಲ್ಲಾ ರಾಜ್ಯ ಆಳ್ತಾ ಇದ್ದಾರೆ. ಅಂಥಾ ಪಾಳೇಗಾರರ ಕಾವಲಿಗೆ ಹೋಗಿ ಯಾವ ಕಾವಲಿಗೆ ಬಿಡ್ತೀಯಾ ನಿನ್ನ ಆವಿನ ದನಾನ? ಅಂಥಾ ಪಾಳೇಗಾರರಿಗೆ ನಿನ್ನ ಆವಿನ ದನದ ಪ್ರಾಣ ಕೊಡ್ತೀಯಾ, ಎಲ್ಲಿಗೂ ಹೋಗೋದು ಬ್ಯಾಡಾ ಮಗನೆ, ಇನ್ನು ಆರು ಮೂರು ಒಂಬತ್ತು ದಿನ ತುಂಬೋ ಹೊತ್ತಿಗೆ ಲೋಕಕ್ಕೆಲ್ಲಾ ಮಳೆ ತಂದ್ಕೊಡ್ತೀನಿ, ಸಾಯೋವು ಸಾಯಲಿ, ಇರೋವು ಇರಲಿ, ನೀನು ಇಲ್ಲೇ ಇರಬೇಕು ಕಣಪ್ಪಾ ದೇವರ ದಯಮಾರ" ಅಂತ ಚಿತ್ರ ದೇವರು ಹೇಳಿದ. "ಸ್ವಾಮಿ, ಹನ್ನೆರಡು ಒಂಭತ್ತು ದಿನ ತುಂಬೋದ್ರೊಳಗಾಗಿ ನಾನು ಇಲ್ಲೇ ಹುಲ್ಲು ನೀರು ತರುಸ್ತೀನಿ ಮಳೆ ಸುರಿಸಿ ಅಂದ್ರೆ ಆವಿನ ಗೂಡಿನಾಗೆ ಅಷ್ಟರಲ್ಲಿ ಒಂದೇ ಒಂದು ಹಸೂನೂ ಉಳಿಯಲ್ಲ. ಈ ಭೂಮಿ ಮೇಲೆ ಹುಲ್ಲಿಲ್ಲ, ನೀರಿಲ್ಲ. ಇವತ್ತಿನ ದಿನದಾಗೆ ನಾನು ಬಲಗಾಲು ಮುಂದಿಕ್ಕಿ ಬಂದಿದೀನಿ. ಹಿಂದಕ್ಕಿಕ್ಕೋರ ಮಗನಲ್ಲ. ನೀನು ಹೊರಟೇ ತೀರಬೇಕು. ನಿನ್ನ ಆಶೀರ್ವಾದ ನನ್ನ ತಲೆ ಮ್ಯಾಗಿರಬೇಕು. ನೀನು ನಡಿ ಸ್ವಾಮಿ ಹೋಗಾನ. ಅಡವೀಲಿ ಹುಲ್ಲಿಲ್ಲ, ಮಡುವೀಲಿ ನೀರಿಲ್ಲ. ಈ ಆವಿನ ದನಾನ್ನ ನಾನು ತಡೆಯೋಕ್ಕಾಗಲ್ಲ. ಏಳುಗೂಡಿನ ದನ, ಒಂದು ಗೂಡಿನ ಇಪ್ಪತ್ತೈದು ದನೀಗೆ ಒಂದು ರೊಪ್ಪ, ನಡೀ ಹೋಗಿ ಬಿಡಾನ" ಅಂತ ಹೇಳಿದ. ಆಗ "ನಿನ್ನ ಸತ್ಯಕ್ಕೆ ಮೆಚ್ಚಿದೆ. ಆದ್ರೆ ಇವತ್ತಿನ ದಿನದಾಗೆ ಈ ಗೂಡಿನ ದನಾನ ಕರಕೊಂಡು ನಾನು ಮುಂದ್ಹೋಗ್ತೀನಿ. ನೀನು ಹಿಂದುಗಡೆ ಬಾರೋ ದೇವರ ದಯಮಾರ" ಅಂತ ಹೇಳಿ ಶಿವಚಿತ್ರಲಿಂಗ ಹೊರಟುಬಿಟ್ಟ.

ಶಿವಚಿತ್ರಲಿಂಗ ಮುಂದೆ, ದೇವರ ದಯಮಾರ ಹಿಂದೆ. ಅವನ ಹಿಂದೆ ನೆಲಕ್ಕೆ ಗದ್ದ ಊರಿ ಎದ್ದ ಆವಿನ ದನಗಳು, ಏಳುಗೂಡಿನ ದನಗಳನ್ನು ಕರಕೊಂಡು ಮೂರು ತಿಂಗಳಿಗೆ ಸಾಗೋ ಪಯಣ, ಆರು ಮೂರು ಒಂಭತ್ತು ದಿನಕ್ಕೆ ಮುಗಿಸಿ, ಕೊಂಕಿ ಜರಿಮಲೆ ಸೀಮೆಗೆ ಹೊಂಟೋಗಿಬಿಟ್ಟರು. ಅದು ಮಲೆನಾಡು. ಮಲೆನಾಡಿಗೆ ಹೋಗಿ ಅಲ್ಲಿ ನಿಂತ್ಕಂಡು ನೋಡಿದ್ರೆ ಅಲ್ಲಿ ಕತ್ತಲು ಕರಿಮಲೆ. ಕತ್ತಲು ಕರಿಮಲೆ ಅಂದ್ರೆ ನಾಲ್ಕು ದಿಕ್ಕಿಗೆ ನಾನೂರು ಗಾವುದ ಕಾಣೋದಂತೆ ಆ ಕತ್ತಲು. "ಶಿವಚಿತ್ರಲಿಂಗ ಇಂತಾ ಕತ್ತಲು ಕರಿಮಲೆಯಾಗೆ ತಂದು ನನಗೆ ಬುಟ್ಟು ಬುಟ್ಟೆ ಈ ಗೂಡಿಗೆ ತಂದು. ನಾನು ಎಲ್ಲಾಸಿ ಕರಕೊಂಡು ಆಚೆಗೆ ಹೋಗಾನ. ಆವಿನ ಮಜ್ಜೆ ಮಾಂಸ ಎಲ್ಲಾ ಕಿತ್ತಾಕಿ ಬಿಡ್ತದೆ ಇಲ್ಲಿನ ಮುಳ್ಳು. ಈ ದನಗಳು ಈ ನೋವನ್ನ ಹೆಂಗೆ ಸಹಿಸ್ಕಂತಾವೆ. ಇದು ಹೆಂಗೆ ತಪ್ಪಿಸ್ಕೊಂಡು ಹೋಗಾನ ಈಗ?" ಅಂತ ದೇವರದಯಮಾರ ಕೇಳ್ತಾನೆ.

"ಹೆದರಬ್ಯಾಡ, ಬೆದರಬ್ಯಾಡ, ಅಂಜ ಬ್ಯಾಡ, ಅಳುಕಬ್ಯಾಡ,
ಬಗ್ಗ ಬ್ಯಾಡ, ತಗ್ಗ ಬ್ಯಾಡ, ದೇವರ ದಯಮಾರ
ನಾರಾಯಣನೆಂಬೋ ನಾಮಗೊಡಲಿ ಶಿವನೆಂಬೋ ಚಿಪ್ಪುಗೊಡಲಿ

ಎರಡೂ ಕೊಡಲಿ ಕೊಟ್ಟು ಬಿಡು ಇಲ್ಲಿ, ನೋಡು ನನ್ನ ಸಾಹಸ ಈಗ"
ಅಂದ ಚಿತ್ರದೇವರು.

ಹಂಗಂದ ಚಿತ್ರದೇವರು ಎರಡು ಕೊಡಲೀನೂ ತೊಗೊಂಡು ಆ ಕೈಲಿ ಒಂದು ಈ ಕೈಲಿ ಒಂದು ಹಿಡಕೊಂಡು ಒಂದು ಗಾಡಿ ಹೋಗೋಷ್ಟು ಹೊಳವು ಮಾಡಿಕೊಂಡು ಮೂಡಲು ಉದಿಯಾಗೆ ಹೊಂಟೋನು ಪಡುವಲ ಕಡೆ ಉದಿಗೆ ಮುನ್ನುಗ್ಗಿ ಹೋಗಿ ಮೂರು ತಿಂಗಳಿಗೆ ತಲುಪೋನು ಒಂಭತ್ತು ದಿನಕ್ಕೆ ತಲುಪಿಬಿಟ್ಟನಂತೆ. ಅಲ್ಲಿಗೆ ಕರಿಮಲೆ ಕಪ್ಪು ದಾಟಿಬಿಟ್ಟಿತು. ಒಂದು ಗಾಡಿ ಹೋಗೋಷ್ಟು ಹೊಳವು ಮಾಡಿಕೊಂಡು ಹೋಗಿಬಿಟ್ಟ. ಅದರಾಗೆ ಈ ಆವಿನ ಗೂಡಿನ ದನ ಹೋಗಬೇಕು. ಮತ್ತೆಲ್ಲಿ ಹೋಗಾಕೂ ಈ ಆವಿನ ಗೂಡಿನ ದನಕ್ಕೆ ಸ್ಥಳವಿಲ್ಲ, ಜಾಗವಿಲ್ಲ. ಆ ಹೊಳವಿನಾಗೆ ಅತ್ತ ಹೋಗಿ ನಿಂತುಕೊಂಡು ದೇವರ ದಯಮಾರ ನೋಡೋ ಹೊತ್ತಿಗೆ ಅಲ್ಲೊಂದು ದೊಡ್ಡ ಆಲದ ಮರ. ಆ ಆಲದ ಮರ ಹತ್ತಿಕೊಂಡು ಹಿಂತಿರುಗಿ ನೋಡಿದ. ಕತ್ತಲು ಕರಿಮಲೆಯ ಆ ಮೆಳೆ ಇಲ್ಲಿಗೆ ಮುಗಿದೈತೆ.

"ಆವಿನ ಹಿಂಡನ್ನು ನೋಡ್ಕೊಂಡು ನಿಂತುಕೋ, ನಾನು ಈ ಆಲದ ಮರ ಹತ್ತಿ ನಾಲ್ಕೂ ದಿಕ್ಕಿನಾಗೆ ನೀರು ಹುಲ್ಲು ಇರೋತಾವ ನೋಡ್ತೀನಿ ದೇವರ ದಯಮಾರ" ಅಂತ ಹೇಳಿ ಶಿವ ಚಿತ್ರಲಿಂಗ ಆಲದ ಮರ ಹತ್ತಿ ಮೇಲೆ ನೋಡಿದ. ಆ ಮಲೆನಾಡಿನಾಗೆ ಅಷ್ಟು ದೂರದಾಗೆ ಕಾಣೋದಂತೆ ಈ ಚಿತ್ರದೇವರ ಕಣ್ಣಿಗೆ ಹುಲ್ಲುನೀರು. ಆಗ ಹೇಳ್ತಾನೆ ನೋಡು:

ಮೂಡಲು ಗಾಳಿ ಬೀಸಿದರೆ ಪಡುವಲು ಮನುಗದಲ್ಲೋ
ಪಡುವಲು ಗಾಳಿ ಬೀಸಿದರೆ ಮೂಡಲು ಮನುಗದಲ್ಲೋ
ತೆಂಕಣ ಗಾಳಿ ಬೀಸಿದರೆ ಬಡಗಣ ಮನುಗದಲ್ಲೋ
ಬಡಗಣ ಗಾಳಿ ಬೀಸಿದರೆ ತೆಂಕಣ ಮನುಗದಲ್ಲೋ
ಮೊಳಾ ಬೆಳೆಯೋ ಹುಲ್ಲು ಮಾರುದ್ದ ಬೆಳೆದೈತೆ
ಯಮಗಾತ್ರದ ಹುಲ್ಲು ಎಂಗೋ ಮಲಗೈತೆ
ಮಾರವಣಿಗೆ ಹುಲ್ಲು ಮಾರುದ್ದ ಬೆಳೆದೈತೆ
ಗೆಜ್ಜೆವ್ವನ ಹುಲ್ಲು ಗೇಣಾಗೆ ಬೆಳೆದೈತೆ
ಗೆಲ್ಲಾಸೆ ಹುಲ್ಲು ಗೆಲ್ಲು ಗೆಲ್ಲಾಗೆ ಬೆಳೆದೈತೆ.
ದೇವರ ದಯಮಾರ ಯಾವ ಹುಲ್ಲು ತಿನ್ನಿಸಿ
ಯಾವ ನೀರು ಕುಡಿಸ್ತೀಯಲೋ ದೇವರ ದಯಮಾರ,
ನೋಡಲೇ ಹುಲ್ಲು ನೀರಿನ ಆನಂದಾನ
ಯಾವ ನೀರು ಕುಡಿಸ್ತೀಯೋ ಅಂದ ಚಿತ್ರದೇವರು.

"ಸ್ವಾಮಿ, ಆ ಮೂಡಲು ಸೀಮೆ ವಳಗಿಂದ ತಂದು ಈ ಪಡುವಲ ಸೀಮೆಗೆ ಬಿಟ್ಟಿದೀಯಾ ನೀನು. ಈ ಹುಲ್ಲು ನೀರಿನ ಆನಂದ ಕಣ್ತುಂಬಿ

ಸಂತೋಷವಾಗಿಬಿಡ್ತು. ಹೇಳು ಈಗ ಇಲ್ಲಿ ಯಾವ್ಯಾವ ಗೂಡು ಹಾಕಬೇಕು" ಅಂದ.

"ಮುಂಡಿಗೆ ಕಳ್ಳಿ ಕಡಿದು ಏಳು ಕರುವಿನ ಗೂಡು ಹಾಕಬೇಕು
ಕಾರೇ ಕಳ್ಳಿ ಕಡಿದು ಏಳು ದನವಿನ ಗೂಡು ಹಾಕಬೇಕು.
ಸುಗುಲೇ ಕಳ್ಳಿ ಕಡಿದು ಬಗ್ಗಿಗೆ ಗೂಡು ಹಾಕಬೇಕು.
ಏಳು ಏಳು ಹದಿನಾಲ್ಕು ಒಂದು ಹದಿನ್ಯೆದು ರೊಪ್ಪ ಹಾಕಬೇಕು.
ಈ ಗೂಡಾಕ್ಕೊಂಡು ನೀನು ಇಲ್ಲೇ ಇದ್ದು ಬಿಡು
ನಾನು ಹೊಂಟೋಯ್ತೀನೋ ದೇವರ ದಯಮಾರ" ಅಂತ ಚಿತ್ರಲಿಂಗ ಹೇಳಿದ,

"ಅಲ್ಲಾ ಚಿತ್ತಯ್ಯ ಮೂಡಲ ಸೀಮೆಯಿಂದ ತಂದು ಈ ಪಡುವಲ ಸೀಮೆನಾಗೆ, ಈ ಮಲೆನಾಡಿನಾಗೆ ಬಿಟ್ಟು ಹೊಂಟಿದೀಯಾ, ಹೇಳು ನನ್ನ ಹೊಟ್ಟೆಗೆ, ಅನ್ನ ಆಸರಿಕೆಗೆ ಏನು ಅಪ್ಪಣೆ ಮಾಡಿ ಹೋಗ್ತಿದೀಯಾ?" ಅಂದ.

"ಬಂಧು ಬಾಂಧವ್ಯ ಅಂತ ಅಣ್ಣ ತಮ್ಮದೀರು, ಅಕ್ಕ ತಂಗದೀರು ಎಲ್ಲಾರ್ನೂ ಬಿಟ್ಟು ಬಂದಿದೀಯಾ, ಈಗ ಗೇಣುದ್ದ ಇರೋ ನಿನ್ನ ಹೊಟ್ಟೆಗೆ ಆಧಾರ ಏನೂ ಅಂದ್ರೆ ಇಲ್ಲಿ ರೊಟ್ಟಿ ಬುತ್ತಿ ತರೋರಿಲ್ಲ; ಅನ್ನ ಆಸರಿಕೆ ಕೊಡೋರಿಲ್ಲ; ನಿನ್ನ ಸೌಕರ್ಯ ನೋಡೋರಿಲ್ಲ. ಕಾರೇ ಹಣ್ಣು ತಿನ್ನಬೇಕು, ಕವಳಿ ಹಣ್ಣು ತಿನ್ನಬೇಕು, ಕಕ್ಕೆ ಹಣ್ಣು ತಿನ್ನಬೇಕು, ಬಿಕ್ಕೆ ಹಣ್ಣು ತಿನ್ನಬೇಕು, ಅಡವಿ ಹಣ್ಣು ತಿನ್ನಬೇಕು, ಮಡುವಿನ ನೀರು ಕುಡೀಬೇಕು, ಇನ್ನು ಏಳು ಗೂಡಿನ ಆವಿನ ದನದಾಗೆ ಹಾಲು ಕುಡಿದುಕೊಂಡು ನೀನು ದೊರೆಮಗ ಆಗಿ ಬಿಡಲೇ ದೇವರ ದಯಮಾರ" ಅಂದ ಚಿತ್ರದೇವರು.

"ಸ್ವಾಮಿ ಹೊಟ್ಟೆಗೇನೋ ಇಷ್ಟು ಆಶೀರ್ವಾದ ಕೊಟ್ಟೆ. ಈ ಕಾಡು ಮೃಗಗಳು ಕತ್ತಲು ಕರಿಮಲೆಯಾಗೆ ಎಷ್ಟೈತೆ ಅಂತ ಗೊತ್ತಿಲ್ಲ. ಆವಿನ ದನ ಕಡೀಬೇಕು, ತಿನ್ನಬೇಕು ಅಂತ ಬರೋ ಕಿರಾತಕರ್‍ರ್ಯಾರು, ಗೆಳೆಯರ್‍ರ್ಯಾರು, ಬೆನ್ನ ಹಿಂದೆ ಹಾಕಿ ಮಾತನಾಡೋರ್‍ರ್ಯಾರು, ಇದಕ್ಕೆ ಅಪ್ಪಣೆ ಕೊಡಬೇಕು" ಅಂದ.

"ಶಿವಚಿತ್ರಲಿಂಗ, ಪುರಲಹಳ್ಳಿ ಭೂತ, ಗೌರಸಂದ್ರದ ಮಾರಿ ಇವು ಮೂರೂ ನಿನ್ನ ಆತ್ಮದಾಗೆ ಇರ್‍ಲಿ, ಇರುಳೂ ಹಗಲೂವ. ಇವು ಮೂರೂ ಶಿವನುಡಿ ನಿನ್ನ ಆತ್ಮದಾಗೆ ಇದ್ದರೆ ಏನಾದ್ರೂ ಕಾಡುಮೃಗ ಬಂದರೆ ಶಿವಚಿತ್ರಲಿಂಗ, ಪುರಲಹಳ್ಳಿ ಭೂತ, ಗೌರಸಂದ್ರದ ಮಾರಿ ಇವು ಮೂರನ್ನೂ ನೀನು

ಸ್ತೋತ್ರ ಮಾಡಿಬಿಡು. ಆ ಕಾಡುಮೃಗದ ಬಾಯಿಗೆ ಬೀಗ ಹಾಕಿ ಬಿಡ್ತೀನಿ. ನಿನ್ನ ಆವಿನ ದನದ ತಂಟೆಗೆ ಬರದ ಹಾಗೆ ಮಾಡ್ತೀನಿ ಅಂದ. ಸರಿ, ಈ ಮೂರು ಶಿವನುಡಿ ಮರೆತೆ ಅಂದ್ರ್ಯೋ ಮರಣ ನಿನಗೆ" ಅಂತ ಹೇಳಿ ಶಿವಚಿತ್ರಲಿಂಗ ದೇವರು ಹೊರಟು ಬಿಟ್ಟ. 'ಗುರುವಾಕ್ಯ ಆಣೆ ಸತ್ಯ' ಅಂತ ಹೇಳಿ ಶಿವಚಿತ್ರಲಿಂಗ ಬಂದು ಚಿತ್ರಗಿರಿ ಪಟ್ಟಣ ಸೇರಿ ಬಿಟ್ಟ.

ದೇವರ ದಯಮಾರ ಏಳು ವರ್ಷ ಆ ಕತ್ತಲು ಕರಿಮಲೆಯಾಗೆ ನಿಂತ. ಆ ಏಳು ವರ್ಷಕ್ಕೆ ಏಳು ಗೂಡಿನ ಆವಿನ ದನ ಅಲ್ಲಿ ಬೆಳೆದುಬಿಟ್ಟವು. ಅವು ಹದಿನಾಲ್ಕು ಗೂಡಿನ ದನ ಆದವು. ನಮ್ಮ ತಮ್ಮ ದನ ಹೊಡಕೊಂಡು ಹೋದ. ಏನಾದ್ವೋ ಅವು, ಅವನು ಏನಾದ ಅಂತ ಅಣ್ಣದೀರು ಹುಡಿಕ್ಕೊಂಡು ಹೋಗಲಿಲ್ಲ, ಬುತ್ತಿ ತೊಗೊಂಡು ಹೋಗಲಿಲ್ಲ. ನಾನು ಇಂಥ ಸ್ಥಳದಾಗೆ ಇದೀನಿ ಅಂತ ಅವನೊಂದು ಕಾಗದ ಬರೀಲಿಲ್ಲ, ಪತ್ರ ಬರೀಲಿಲ್ಲ. ಅವನು ಅಲ್ಲೇ ನಿಂತ, ಇವರು ಇಲ್ಲೇ ನಿಂತರು. ಏಳು ವರುಷ ತುಂಬ್ತು ಅನ್ನೋ ಹೊತ್ತಿಗೆ ಈ ಕಂಬೇರು ಗೊಲ್ಲರು ಮಾವಂದಿರು ಏಳು ಜನ. ದೊಡ್ಡ ಚಿನ್ನೇಗೌಡ, ಕರಿಚಿನ್ನ, ಮರಿಚಿನ್ನ, ಮಂಕರಗಾಲಿನ ಚಿನ್ನ, ಬಿಳಿಯಾಲ ಬೇವಿನ ಚಿನ್ನ, ಗಂಟು ಕಾಲಿನ ಚಿನ್ನ, ದೇವರ ಕಡ್‌ಕುಟ್ಟಿನ ಕಟ್ಟಾಣಿ ಇವರು ಏಳು ಜನ ಕಂಬೇರ ಗೊಲ್ಲರು, ಒಂದೇ ತಾಯಿ ಮಕ್ಕಳು. ಕೌರವರಲ್ಲಿ ದುರ್ಯೋಧನ, ದುಶ್ಯಾಸನ, ದುರ್ಜಯ ಇವರೆಲ್ಲಾ ಇದ್ದಂಗೆ ಇದ್ದರು ಈ ಕಂಬೇರಗೊಲ್ಲರು. ಇವರು ಏಳು ಜನದಾಗೆ ಹಿರಿಯವನೇ ದೊಡ್ಡ ಚಿನ್ನೇಗೌಡ. ಅವರತಂಗಿ ಕಂಬೇರ ಚಿನ್ನಮ್ಮ ಅನ್ನೋ ಹೆಣ್ಣುಮಗಳು ಹೆಣ್ಣಾಗಿ ಆಗಲೇ ಮೂರು ವರುಷ ಕಳೆದಿತ್ತು. ಆಕೆ ಮನ್ಯಾಗೆ ನಿಂತು ಬುಟ್ಲು. 'ಏಳು ಜನ ಅಳಿಯದೀರು ಅವ್ರೆ. ಹಟ್ಯಾಗೆ ಹೋಗಿ ನಾನು ವಿಚಾರ ಮಾಡ್ಕೊಂಬರ್ತೀನಿ. ಏಳು ಜನದಾಗೆ ಯಾರಾದ್ರೂ ಒಬ್ಬ ಅಳಿಯ ಈ ಹೆಣ್ಣನ್ನು ಮದುವೆ ಮಾಡಿಕೊಂಡ್ರೆ ಮಾಡಿಕೊಳ್ಳಲಿ, ಭಾಷೆ ಕೊಟ್ಟು ಮದುವೆ ಮಾಡಿಬಿಡಾನ' ಅಂತ ಹೇಳಿ ದೊಡ್ಡ ಚಿನ್ನೇಗೌಡ ಹೋಗಿ ಈ ದೇವರ ದಯಮಾರನ ಅಣ್ಣದೀರು ಆರು ಜನರನ್ನು ಕೇಳಿದ.

"ನೀವು ಏಳು ಜನದಾಗೆ ಯಾರ್‍ರಯ್ಯ ನನ್ನ ತಂಗೀನ ಮದುವೆ ಮಾಡ್ಕೋತೀರಿ? ಸೋದರಳಿಯಂದಿರು ನೀವು. ತಾಯಿ ಹುಟ್ಟಿದ ತವರ್‍ಮನೆ ಕೇಳಬಾರದು ಅಂತ ಏನೂ ಇಲ್ಲಿಲ್ಲ. ಕೇಳಾನ ಅಂತ ಬಂದಿದೀನಿ. ಯಾರು ಕಂಬಕ್ಕನ್ನ ಮದುವೆ ಮಾಡ್ಕೋಮರು?"

"ಮಾವಾ ನಾವು ಆರು ಜನ ಲಗ್ನವಾಗಿ ಬಿಟ್ಟಿದೀವಿ. ನಮ್ಮೆಲ್ಲರಿಗೂ ಮಕ್ಳು ಮರಿ ಆಗಿ ಹೋಗಿಬಿಟ್ಟಿದಾರೆ. ಏಳು ಜನದಾಗೆ ಕಡೆ ಹುಟ್ಟಿನೋನು ದೇವರ ದಯಮಾರ ಅನ್ನೋನು ಒಬ್ಬ ಉಳಿದಿದಾನೆ. ಆ ಸಣ್ಣೋಳು ಕಂಬಕ್ಕನ್ನ ತಂದು ಸಣ್ಣೋನು ದೇವರದಯಮಾರಗೆ ಮದುವೆ ಮಾಡ್ಕಂತೀವಿ ಮಾವ. ನಾವು ಆಗಲ್ಲ" ಅಂದರು.

"ದೇವರ ದಯಮಾರ ಎಲ್ಲಿಗೋಗವ್ನೆ?" ಅಂದರು ಮಾವಂದಿರು.

"ಗುಡ್ಡದ ರಂಗಪ್ಪನ ಗುಡ್ಡಕ್ಕೆ ದನಮೇಯಿಸ್ಕೊಂಬರಕ್ಕೆ ಅಂತ ದನ ಹೊಡ್ಕಂಡು ಹೋಗವ್ನೆ. ಸಾಯಂಕಾಲ ಐದು ಘಂಟೆಗೆ ಗುಡ್ಡದ ಬುಡಕ್ಕೆ ದನ ಹೊಡ್ಕಂಡು ಬತ್ತಾನೆ ಮಾವ. ನಾವೂ ಬುತ್ತಿ ತಕ್ಕೊಂಡು ಅಲ್ಲಿ ಹೋಗಿ ಅವ್ನೂ ನಾವೂ ಕಲೆತು ಮಾತ್ನಾಡಿ ಸೋಮ ವಾರದ ದಿನಹೊತ್ತು ಮುಳುಗೋ ಹೊತ್ತಿಗೆ ನಿನ್ನ ಮನಿತಾಕ ಬತ್ತೀವಿ. ಅಲ್ಲಿ ಕಲೆತು ಮಾತಾಡಿಕೊಳ್ಳೋನ. ಋಣಬಾಧೆ ಇದ್ದರೆ ನಾವು ಮದುವೆ ಮಾಡ್ತೀವಿ. ಇಲ್ಲಾಂದ್ರೆ ನಾವು ಆರು ಜನ ಆಗಂಗಿಲ್ಲ. ನೀನು ಹೆಣ್ಣನ್ನ ಆಚೆ ಕೊಟ್ಕೋ" ಅಂತ ಮಾವಗೆ ಊಟಕ್ಕೆ ಹಾಕಿಬಿಟ್ಟರು.

ಎಲೆ ಅಡಿಕೆ ಕೊಟ್ಟುಬಿಟ್ಟರು. ಸಾಗಹಾಕಿಬಿಟ್ಟರು. ಸಾಗಹಾಕಿ ಹಿಂದಕ್ಕೆ ಬಂದೋರು ಈಗ ಆ ದೇವರದಯಮಾರನ್ನ ಹುಡುಕಬೇಕೋ ಬ್ಯಾಡೋ? ಹುಡುಕಾಕೆ ಒಬ್ರೂ ಹೋಗ್ಲಿಲ್ಲ. ಇವ್ನು ಮ್ಯಾಕೆ ತಕ್ಕೆ ಹೋದ, ಅವ್ನು ದನೀನ ತಾವಕ್ಕೆ ಹೋದ, ಇನ್ನೊಬ್ಬ ಕುರಿತಕ್ಕೆ ಹೋದ. ಹೀಂಗೆ ಅವರವರು ಅವರ ಬದುಕು ಬವಣೆ ತಕ್ಕೆ ಹೊಂಟೋಗಿ ಬಿಟ್ಟರು. ಇನ್ನು ಈ ವಾರ ಸೋಮಾರ ಬರೋವರೆಗೂನು ಅವನ ಗ್ಯಾನಾನೇ ಇಲ್ಲ. ಭಾನುವಾರ ಕಳೆದು ಸೋಮವಾರ ಬೆಳಕು ಹರಿಯೋ ಹೊತ್ತಿಗೆ ದೊಡ್ಡೋನು ಬುದ್ಧಿವಂತ ಎಲ್ಲಾರ್ನೂ ಕರೆದು

"ಸೋದರಮಾವಗೆ ಮಾತು ಕೊಟ್ಟವಲ್ಲ. ಸೋಮಾರದ ದಿನ ದೇವರ ದಯಮಾರನ ಕರಕೊಂಡು ಮಾತುಕತೆಗೆ ಬರ್ತೀವಂತ ಮಾತು ಕೊಟ್ಟಿದೀವಿ. ಗುರುಹಿರಿಯರ ಮಾತಿಗೆ ಈಗ ತಪ್ಪೋದು ಬ್ಯಾಡ. ಬೆಳಕು ಹರಿದರೆ ಸೋಮವಾರ. ಈಗ ಹೆಂಗೆ ಮಾಡಾನ? ಬರ್ತೀವಿ ಅಂದಿದ್ವಲ್ಲ. ಅವ್ನನ್ನ ಹುಡುಕಲಿಲ್ಲ. ದೇವರ ದಯಮಾರನೂ ಹೋಗಿ ಇಲ್ಲೀಗೆ ಏಳು ವರುಷ ಆಗಿ ಬಿಡ್ತು. ಅವನ ನೆಲೆಕುಲ ನಮಗೆ ಸಿಗ್ಲಿಲ್ಲ. ನಾಳೆ ಹೊತ್ತು ಮುಳುಗೋಕೆ ಮುನ್ನ ಅವನನ್ನ ಹುಡುಕೋಕೆ ಆಗಲ್ಲ. ನಮ್ಮ ಮನೆ ಮೂಲ್ಯಾಗೆ ಒಂದು ಕಬ್ಬಿಣದ ಬಾಕು ಐತೆ. ಆ ಬಾಕಿಗೆ ಒಂದು ಕೆಂಪು ವಸ್ತ್ರ ಸುತ್ತಿ ಬಿಡೋಣ. ಒಂದು ನಿಂಬೆ ಹಣ್ಣನ್ನು ಆ ಬಾಕೀನ ತುದಿಗೆ ಸಿಕ್ಕಿಸಿ ಬಿಡೋಣ. ಮದುವೆ ಮನ್ಯಾಗೆ ಮದಲಿಂಗಗೆ ಎಷ್ಟು ನಿರ್ಣಯ ಮಾಡ್ತೀವೋ ಅಷ್ಟು ನಿರ್ಣಯ ಮಾಡಿಕೊಂಡು ಈ ಪಟ್ಟೇ ದಟ್ಟೀಗೆ ಒಪ್ಪದಿಂದ ಉಡಿಸಿಬಿಟ್ಟು ಕೆಂಪು ರುಮಾಲು ನೇರಕ್ಕೆ ಸುತ್ತಿ, ಕರೆ ಕಂಬಳಿ ತಿರುವಿ ಕೊರಳಿಗೆ ಹಾಕ್ಕೊಂಡು ಒಂದು ಗಂಡಿಗೆ ಎಷ್ಟು ಮಾಡ್ತೀವೋ ನಿರ್ಣಯ ಅಷ್ಟು ಈ ಬಾಕಿಗೆ ಮಾಡಿಕೊಂಡು ಅವನ ಬದಲಿಗೆ ಈ ಬಾಕಿಗೆ ಮದುವೆ ಮಾಡಿಕೊಂಡು ಬಂದು ಬಿಡಾನ. ಕೊಟ್ಟರೆ ಕಂಬೇರು ಗೊಲ್ಲರು ಈ ಬಾಕಿಗೆ ಹೆಣ್ಣು ಕೊಡಲಿ. ಇಲ್ಲಾಂದ್ರೆ ಅವರ ಮಾತ್ನ ಅವರಿಗೆ ತಿರುಗಿಸಿ ನಮ್ಮ ಬಾಕು ತೊಗೊಂಡು ಹಿಂತಿರುಗಿ ಬರಾನ" ಅಂತ ಹೇಳಿದ.

ಸೋಮವಾರ ಸಾಯಂಕಾಲ ಈ ಬಾಕನೇ ಮದಲಿಂಗನ ಮಾಡಿಕೊಂಡು ಹೊರಟುಬಿಟ್ಟರು. ಆ ಬಾಕ ತೊಗೊಂಡು ಕಂಬೇರ ಗೊಲ್ಲರ ಹಟ್ಟಿ ಮುಂದೆ ಹೋಗಿ ನಿಂತರು. "ಭಾವಂದಿರು ಬಂದರು, ಚೆಂಬಲ್ಲಿ ನೀರು ತೊಗೊಂಡು ಹೋಗಿ ಕೊಡು" ಅಂದ ದೊಡ್ಡ ಚಿನ್ನೇಗೌಡ. ಆ ಯಮ್ಮ ಬಂದು ಎಲ್ಲಾರಿಗೂ ಚೆಂಬಲ್ಲಿ ನೀರು ತಂದು ಕೊಟ್ಟಳು. ಕೈಕಾಲು ಮುಖ ತೊಳ್ಕೊಂಡರು. ಎದುರು ಗೋಡೆಗೆ ಹೋಗಿ ನಿಂತುಕೊಂಡರು. ಆರು ಜನ ಈ ಕಡೆ ನಿಂತರು. ಬಲಗಡೆ ಮಗ್ಗುಲಿಗೆ ಈ ಬಾಕು ನಿಲ್ಲಿಸಿಕೊಂಡರು. ಈ ಬಾಕು ಎಲ್ಲಿ ಇವರ ಉದ್ದ ನಿಲ್ಲುತ್ತೈತೆ. ಆಗ ಏನು ಮಾಡಿಬಿಟ್ಟ ಈ ಪೂಜಾರಿ ದೊಡ್ಡಯ್ಯ ಬಲಗಡೆ ಕಾಲು ಗೋಡೆಗಿಕ್ಕಿ ಮೊಣಕಾಲಿನ ಹಿಂಭಾಗದ ಮೇಲೆ ಈ ಬಾಕು ಇಕ್ಕಂಬಿಟ್ಟ. ಆ ಬಾಕು ಇವರ ಉದ್ದಕ್ಕೆ ನಿಂತ್ಕಂಬಿಡ್ತು.

"ಬಂದಿದ್ದೀರೇನ್ರೋ ಎಲ್ಲಾ ಅಳಿಯಂದಿರು."

"ಬಂದಿದ್ದೀವಿ ಮಾವ".

"ಈಗ್ಯಾರು ಸಣ್ಣೋಳು ಕಂಬಕ್ಕನ್ನ ಮದುವೆ ಮಾಡ್ಕೊಳ್ಳೋದು, ಒಂದು ಮಾತು ಹೇಳ್ರೀ."

"ನಾವು ಏಳು ಜನಾನು ಒಂದು ತಾಯಿಗೆ ಹುಟ್ಟಿ ಹಾಲು ಕುಡಿದು ಒಟ್ಟಿಗೆ ಬೆಳೆದು ಈಗ ನಾನಾಗ್ತೀನಿ ಅಂದ್ರೆ ಅವನಿಗೆ ಸಿಟ್ಟು ಬಂದು, ಅವನಾಗ್ತೀನಿ ಅಂದ್ರೆ ಇವನಿಗೆ ಸಿಟ್ಟು ಬಂದು ನಾವು ಅಣ್ಣತಮ್ಮದೀರು ಕದನ ಕಟ್ಕೋಳ್ಳೋದು ಬ್ಯಾಡ, ಹೊಯ್ದಾಡೋದು ಬ್ಯಾಡ, ಕಡಿದಾಡೋದು ಬ್ಯಾಡ. ನಾವು ಏಳು ಜನಾನು ಒಂದೇ ತಂದೆ ತಾಯಿ ಮಕ್ಕಳು. ನಾವು ಏಳು ಜನಾನೂ ಹಿಂಗೇ ಸಾಲಾಗಿ ನಿಂತು ಬಿಡ್ತೀವಿ. ನೀವು ಗಂಡ ಹೆಂಡತಿ ಬಂದು ಯಾರನ್ನು ಅಪ್ಪಿ ಹಿಡ್ಕಂತೀರೋ ಅವನೇ ನಿನ್ನ ಮಗಳ ಗಂಡ" ಅಂದರು.

ಇವರು ಆರು ಜನ ಮಾತಾಡ್ತವ್ರೆ. ಬಾಕು ಏನು ಮಾತಾಡ್ತೈತೆ ಅಲ್ಲಿ. ಅವರು ಅಲ್ಲಿ ಈ ನ್ಯಾಯ ಹುಡುಕಿ ಬಿಟ್ರು. 'ನೀ ಹೋಗಿ ಒಪ್ಪಿ ಹಿಡಕೊಳ್ಳೇ' ಅಂದ ದೊಡ್ಡ ಚಿನ್ನೇಗೌಡ. ಆಯಮ್ಮ ಬಂದ್ಬುಟ್ಳು. ಈ ಆರು ಜನನ್ನ ಇತ್ಲಾಗೆ ಬಿಟ್ ಬುಟ್ಲು. ಹೋಗಿ ಹೋಗಿ ಆ ಕಬ್ಬಿಣದ ಬಾಕು ಹಿಡ್ಕಂಬಿಟ್ಲು. ಪಟ್ಟೇದಟ್ಟಿ, ರುಮಾಲು ಎಲ್ಲಾನೂ ತೆಗೆದು ನೆಲದ ಮೇಲೆ ಹಾಕಿದ್ರು. ಬಾಕೂನೂ ನಿಂಬೆಹಣ್ಣನ್ನು ತೆಗೆದು ತೋರಿಸಿಬಿಟ್ಟರು.

"ಅತ್ತೆ ಮಾವದೀರಾ. ದೇವರ ದಯಮಾರನು ಹೋಗಿ ಇಲ್ಲಿಗೆ ಏಳು ವರುಷಾತು. ಮೂರು ವರುಷ ದೊಡ್ಡೆಕ್ಕೆ ಬರ, ಆವಿನ ಬರ ಬಂದಾಗ ದನ ಹೊಡ್ಕೊಂಡೋದೋನು ಅವನ ನೆಲೆ ಕುಲ ನಮಗೆ ಸಿಕ್ಕಲಿಲ್ಲ. ರೊಪ್ಪ ಹೊರಗಾಗಿ ರೊಟ್ಟಿ ಬುತ್ತಿ ಕಟ್ಟಿಕೊಂಡು ಹುಡುಕಿದುವು. ಅವ್ನ ನೆಲೆ ಸಿಕ್ಕಿಲ್ಲ. ಮಾತಿಗೆ ತಪ್ಪಬಾರ್ದು ಅಂತ ದೇವರು ದಯಮಾರನ ಬಿರುದಿಗೆ ನಾವು ಈ ಬಾಕು ತಂದಿರಾದು. ಕೊಟ್ರೆ ಕಂಬೇರು ಕಂಬಕ್ಕನ್ನ ಈ ಬಾಕಿಗೆ

ಮದುವೆ ಮಾಡ್ಕೊಂಡು ಹೋಗ್ತೀವಿ. ಕೊಡದಿದ್ದ ಮೇಲೆ ನಿಮ್ಮ ಮಾತು ನಿಮಗೆ ಹಿಂದಿರುಗಿಸಿದ್ದೀವೆ. ನಮ್ಮ ಬಾಕು ತೊಗೊಂಡು ನಮ್ಮ ಹಟ್ಟೀಗೆ ಹೋಯ್ತೀವಿ. ಇಷ್ಟೇ ನಮ್ಮ ನ್ಯಾಯ" ಅಂದರು.

"ನೀ ಹೋಗಿ ಆ ಬಾಕು ಯಾಕೆ ಹಿಡಕೊಂಡೆ" ಅಂತ ಹೆಂಡ್ತೀನ ಕೇಳಿದ.

"ನಮ್ಮ ಹಣ್ಯಾಗೆ ಆ ವಿಧಿ ಬ್ರಹ್ಮ ಏನ್ ಬರದವನೋ ಆ ಬರವಣಿಗೆಯಂತೆ ಆಗ ಬಿಡಲಿ ಮಾವಾ, ಕೊಟ್ಟಿದ್ದೇ ಸೈ ಹೆಣ್ಣನ್ನಾ. ಮದುವೆ ಮಾಡೋದೇ ಸೈ" ಅಂತ ಹೇಳಿದ್ಲು.

ಇನ್ನು ಬಂಧು ಬಳಗಕ್ಕೆಲ್ಲಾ ವಾರಿಗೇಯವರಿಗೆಲ್ಲಾ ಟೈಮಿಟ್ಕೊಂಡು ವಾರ ವಾರ ಎಂಟು ದಿನಕ್ಕೆ ದೇವರ ದಯಮಾರನ ಬಿರುದಿಕ್ಕಿಕೊಂಡ ಆ ಬಾಕಿಗೆ ಕಂಬಕ್ಕನ್ನ ಕೊಟ್ಟು ಮದುವೆ ಮಾಡಿದರು. ಲಗ್ನಾ ಮಾಡಿ ತಿಂಗಳು ತುಂಬೋವರೆಗೆ ಹೆಣ್ಣಿನೋರು ಮನ್ಯಾಗೆ ಹೆಣ್ಣಿದ್ದು, ಗಂಡಿನೋರ ಮನ್ಯಾಗೆ ಗಂಡಿದ್ದು, ಬಾಕುನ ತಗೊಂಡೋಗಿ ಮನ್ಯಾಗೆ ಇಕ್ಕಿದ್ರು, ತಿಂಗಳು ತುಂಬಿದ ದಿನ ಬುಧವಾರದ ದಿನ ಬಾಕನೇ ಮದಲಿಂಗನ ಮಾಡಿಕೊಂಡು ತಿರುಗಂಚಿ, ಮುರುಗಂಚಿ ಅಂತ ಉಂಟಲ್ಲ, ಆಗ ಬಂದು ನಾವು ಕರಕ್ಕಂಡ್ಹೋಗ್ತೀವಿ. ಸಣ್ಣೋಳು ಕಂಬಕ್ಕನ್ನ ಕಳುಹಿಸಿಕೊಡ್ರಿ ಅಂತ ಕೇಳ್ದಂಗಾತು. ಸೀರೆ ಉಟ್ಕೊಂಡು, ಮಡಿಲಕ್ಕಿ ಕಟ್ಟಿಕೊಂಡು, ಅರಿಷಿಣ ಕುಂಕುಮವ ಕೊಟ್ಟು "ನಿನಗೆ ಏನೇನು ಬೇಕು ತಗೊಂಡು, ಹೆಣ್ಣುಮಗಳು ನೀನು ಸುಸೂತ್ರವಾಗಿ ಹೊಂಟು ಬಿಡಮ್ಮ ನಿನ್ನ ಗಂಡನ ಮನೇಗೆ' ಅಂತ ಇವ್ರು ಕಳಿಸ್ಕೊಟ್ರು ಗಂಡನ ಮನೀಗೆ. ಅವ್ರು ಗುರುವಾರದ ದಿನ ಈಕೀನ ಮನೆ ತುಂಬ್ಸಿದ ಕೂಡಲೇ ಇವರ ಮನೇಲಿದ್ದ ದರಿದ್ರ ಲಕ್ಷ್ಮಿ ಹೋಗಿ ಕಾಡು ಸೇರಿದ್ಲಂತೆ. ಭಾಗ್ಯಲಕ್ಷ್ಮಿ ಇವಳ ಹಿಂದೆ ಮನೆ ಸೇರಿದ್ಲಂತೆ ಆ ಮನೆಗೆ. ಅಲ್ಲಿಂದ ಈಚೆಗೆ ಇವರು ಆರುಜನ ಅಕ್ಕಂದಿರು, ಭಾವದೀರು ಎಲ್ಲರಿಗೂ ಐಶ್ವರ್ಯ ಸಿರಿಸಂಪತ್ತು, ಸಕಲ ಸಂಪತ್ತು ಎಲ್ಲಾ ಬಂದೋಗಿ ಬಿಡ್ತು ಇವಳು ಹೋಗಿ ಸೇರಿದ ದೆಸೆಯಿಂದ. ಎಲ್ಲಾ ಸಕಲ ಸಂಪತ್ತು ಬಂತು.

ಅವರೆಲ್ಲಾ ಹೀಗೆ ಸಂತೋಷದಿಂದ ಸುಖವಾಗಿ ಇರುವೋ ಹೊತ್ತಿಗೆ ಇವಳೊಬ್ಬಳೇ ಕಂಬಕ್ಕ ಸಾರಿಸಬೇಕು, ಒಬ್ಬಳೇ ಗುಡಿಸಬೇಕು, ಒಬ್ಬಳೇ ಕುಟ್ಟಬೇಕು, ಒಬ್ಬಳೇ ಬೀಸಬೇಕು, ಒಬ್ಬಳೇ ನೀರು ತರಬೇಕು, ಒಬ್ಬಳೇ ಸೌದೆ ತರಬೇಕು, ಒಬ್ಬಳೇ ಆರಾರು ಹನ್ನೆರಡು ಜನಕ್ಕೆ ಕಾಸಿ ನೀರು ಹುಯ್ಯಬೇಕು. ಮಾಡಿ ಉಣ್ಣಬೇಕು. ಮೂರು ವರುಷ ತುಂಬೋದ್ರೊಳಗೆ ಇವಳೊಬ್ಬಳಿಗೆ ಎಲ್ಲಾ ಸೇರಿ ಇಷ್ಟು ನೋವು ಕೊಟ್ಟುಬಿಟ್ಟರು. ತಿಂಗಳು ತುಂಬಿದ್ದು ದಿನ ಬಲಗಾಲು ಮುಂದಿಕ್ಕಿ ಅವರ ಮನಿಗೆ ಹೋಗಿದ್ದೇ ಹೋಗಿದ್ದು ತವರು ಮನೆಗೆ ಕಳಿಸ್ಲಿಲ್ಲ. ಗಂಡಗೆ ಹೆಂಡ್ತಿ ಮಾಡ್ಲಿಲ್ಲ. ಹೆಂಡ್ತಿಗೆ ಗಂಡನ್ನ ಮಾಡಲಿಲ್ಲ. ಎಲ್ಲಾ ಈ ಯಮ್ಮಗೆ ನೋವುಗಳನ್ನು ಮಾಡಿಬಿಟ್ಟರು. ಅವಳು "ಪರಮೇಶ್ವರ, ಪಾರ್ವತಿ, ನನ್ನ ಗಂಡ ನಾಲ್ವರಂತೆ ಮದುವೆಯಾಗಿ ಇಲ್ಲಿದ್ದಿದ್ರೆ ನನಗೂ ಮಕ್ಕಳಾಗೋವು, ಮರಿಯಾಗೋವು. ನನ್ನ ಗಂಡ ಆಸರಿಕೆ ಬೇಸರಿಕೆಗೆ ನನಗೊಂದು ಆಧಾರ ಆಗೋನು. ಈ ದುರ್ಮಾರ್ಗಕರು ನನ್ನ ಬಾಕಿಗೆ ಮದುವೆ ಮಾಡಿಕೊಂಡು ಬಂದು ಬಿಟ್ರಲ್ಲಾ.

ಎಂಥಾ ಕಷ್ಟ ಕೊಟ್ಟು ಬಿಟ್ರಲ್ಲಾ ಪರಮಾತ್ಮ. ಈಶ್ವರ ನಾನಿನ್ನು ಇರಾದು ಬ್ಯಾಡ ಈ ಧರಣಿಮ್ಯಾಲೆ" ಅಂತ ಹೇಳಿ ಒಬ್ರಿಗೂ ಕಾಣದಂಗೆ ಹಗಲು ಹನ್ನೆರಡು ಘಂಟೆ ಹೊತ್ತಿನಾಗೆ ಅಲ್ಲ, ಇರುಳು ಹನ್ನೆರೆಡು ಘಂಟೆನಾಗೆ, ಕಲ್ಲು ನೀರು ಕರಗೋ ಹೊತ್ತಿಗೆ, ಕರೆ ಕಂಬಳಿ ಹೊದ್ದುಕೊಂಡು, ಕೊಪ್ಪೆ ಇಟ್ಟುಗೊಂಡು ಅದೇ ಇದರಲ್ಲಿ ಹೋಗಿಬಿಟ್ಟು ಸರೋವರದಲ್ಲಿ ಒಂದು ಮುಳುಗು ಮುಳುಗಿ ತಣ್ಣೀರು ಬಟ್ಟೆಯಾಗೆ ಹೋಗಿ ಅದೇ ಚಿತ್ರಲಿಂಗನಿಗೆ ನಮಸ್ಕಾರ ಮಾಡಿದಳು.

"ಚಿತ್ರಲಿಂಗ ನಮ್ಮ ತಂದೆ ತಾಯಿಗಳು ಸತ್ಯಕ್ಕೆ ತಪ್ಪಬಾರದು ಅಂತ ಈ ಬಾಕಿಗೆ ಕೊಟ್ಟು ಮದುವೆ ಮಾಡಿ ಇವರ ಮನೀಗೆ ಕಳಿಸಿ ನನ್ನಿಂದ ಇವರೆಲ್ಲಾ ಐಶ್ವರ್ಯ ಪಡೆದು ಬಂದರು. ಆದ್ರೆ ಮೂರುವರ್ಷದಿಂದ ಇವರು ನನಗೆ ಕೊಡ್ತಾ ಇರೋ ನೋವು ಅಂದ್ರೆ ನಾನು ಇದರೊಳಗೆ ಬಾಳೋ ಅಷ್ಟೂ ಭಾಗ್ಯ ಇಲ್ಲ. ಮುಂದೆ ನಿನ್ನ ಮಗನ್ನ ತೊಗೊಂಡ್ಹೋಗಿ ಆ ಬೆಟ್ಟಕಾಡು ಮಧ್ಯೆ ಇರೋ ಜಾಗದಲ್ಲಿ ಎಲ್ಲಿ ಬಿಟ್ಟು ಬಂದಿದ್ಯೋ ಅಲ್ಲೇ ನನ್ನೂ ತೊಗೊಂಡೋಗಿ ಗಂಡಗೆ ಹೆಂಡ್ತಿ ಮಾಡಿ, ಹೆಂಡತಿಗೆ ಗಂಡನ್ನ ಮಾಡಿ ನನ್ನ ಬಿಟ್ಟು ಬರಬೇಕು" ಅಂತ ಚಿತ್ರದೇವರಿಗೆ ಹೇಳಿದಳು.

"ಇನ್ನು ಆರು ಮೂರು ಒಂಭತ್ತು ದಿನದೊಳಗಾಗಿ ನಿನ್ನ ಗಂಡ ಈ ಮೂರು ಲೋಕದಾಗೆ ಎಲ್ಲಿದ್ರೂ ನಾ ಬರಮಾಡಿಕೊಂತೀನಮ್ಮಾ. ನಿನ್ನಂಥಾ 'ಹೆಣ್ಣು ಮಗಳನ್ನು ಕರಕೊಂಡು ಕಲ್ಲು ಮುಳ್ಳನ್ನ ಕಾಡಿನಾಗೆ ಕರಕೊಂಡು ಹೋಯ್ತೈತೆ ಈ ದೇವ್ರು' ಅಂತಾ ಹೆಣ್ಣು ಮಕ್ಕಳು ಅಯ್ಯೋ ಅಂದ್ರೆ ನಮಗೆ ಒಳ್ಳೇದಾಗಲ್ಲ. ಇನ್ನು ಒಂಬತ್ತು ದಿನ ತುಂಬೋದ್ರೊಳಗೆ 'ಹೊನ್ನು ಕೆಟ್ಟರೆ ಅಕ್ಕಸಾಲಿಗರ ಮನೆ, ಹೆಣ್ಣು ಕೆಟ್ಟರೆ ತವರು ಮನೆ' ಅಂತಾರಲ್ಲ ಹಾಗೆ ನೀನು ತವರು ಮನೆಗೆ ಹೋಗಿರಮ್ಮ ನಡೆ ಇನ್ನು. ಒಂಬತ್ತು ದಿನ ತುಂಬೋವರೆಗಾದ್ರೂನೂ" ಅಂದ ಚಿತ್ತಯ್ಯ,

"ಗಂಡನ ಮನೆಯಾಗಿದ್ದು ನೂರಾರು ತಪ್ಪು ಅಪರಾಧ ಮಾಡ್ಕೊಂಡು, ಗಂಡನ ಮನೆಯಾಗೆ ಒಕ್ಕಲುತನ ಮಾಡ್ಕೊಂಡು, ಗಂಡನ ಮನೆಯಾಗಿದ್ರೆ ಬಡವರು ಹೆತ್ತ ಮಗಳು ತಂದೆ ತಾಯಿಗೆ ಹುಟ್ಟೋಳು, ಈ ಮನಿ ಒಕ್ಕಲುತನ ಮಾಡ್ಕೊಂಡು ಬಾಳಿದಳು ಕಣಯ್ಯಾ ಅಂತಾರೆ ಗ್ರಾಮದಾಗೆ. ಸತ್ಯವಾದ ಆಚರಣೆಯಾಗಿದ್ದೂ ತವರುಮನೆಯಾಗೆ ಇದ್ರೂನೂ ಗಂಡನ ಮನೆಯಾಗೆ ಬಾಳಲಾರದೆ ಬಿಟ್ಟು ಬಂದು ತವರ್ಮನೆ ಸೇರಿದ್ಲು ಅನ್ನೋ ವಾಡಿಕೆ ಮಾತು ಬರುತ್ತೆ ಸ್ವಾಮಿ, ನನಗೆ ಈ ತವರ್ಮನೇನು ಬ್ಯಾಡ, ಗಂಡನ ಮನೇನೂ ಬ್ಯಾಡ, ನನ್ನನ್ನು ಕಟ್ಟಿಕೊಂಡೋನು ಒಬ್ನೇ ಸಾಕು. ಆ ನಿನ್ನ ಮಗ ಎಲ್ಲವ್ನೋ ಅಲ್ಲೀಗೆ ನನ್ನನ್ನು ಕರ್ಕೊಂಡೋಗಿ ಇಬ್ರುನ್ನೂ ಒಂದ್ ಮಾಡಿ ಬರಬೇಕು ಚಿತ್ತಯ್ಯ"ಅಂದಳು.

ಚಿತ್ರದೇವರು ಈ ಯಮ್ಮನ್ನ ಕರಕೊಂಡು ಮೂರು ತಿಂಗಳು ಹೋಗೋ ಪಯಣ ಒಂಭತ್ತು ದಿನಕ್ಕೆ ಹೋಗೇ ಬಿಟ್ಟ ಕೊಂಕಿ ಜರಿಮಲೆ ಸೀಮೆಗೆ, ಅಂದರೆ ಮಲೆನಾಡಿಗೆ. ಅಲ್ಲೋಗಿ ಆವಿನ ಗೂಡಿಗೆ ಮೂರು ಬಾಣ ಬಿಟ್ಟು ಒಂದು ತ್ಯಾಗದ ಮರದ ಮರೆಯಾಗಿ ನಿಂತು,

"ಅಮ್ಮಾ" ಅಂದ.

"ಯಾಕ್ ಸ್ವಾಮಿ ಹೋಗಿ ಬಿಟ್ರೆ" ಅಂತ ಕೇಳಿದಳು.

"ಒಂದ್ ಗಾಳಿ ಅಂತ, ದಯ್ಯ ಪಿಶಾಚಿ, ಅಂತ ಆ ದೇವರ ದಯಮಾರ ಒಂದು ಬಾಣ ಬಿಟ್ರೆ ಸತ್ತು ಹೋಗಿ ಬಿಡ್ತೀವಿ. ನಾನು ಇಲ್ಲಿ ನಿಂತ್ಗತೀನಿ. ನೀನು ಈ ತ್ಯಾಗದ ಮರದ ಮರೆಯಾಗಿ ನಿಂತ್ಕಂಬಿಡು. ನಾನು ಅವನ್ನ ಮಾತಾಡಿಸ್ಕಂತೀನಿ. ಆಮೇಲೆ ನೋಡಾವ"

ಅಂತ ಆಕೇನ ಅಲ್ಲಿ ನಿಲ್ಲಿಸಿ ತಾನೊಂದು ತೇಗದ ಮರದ ಹಿಂದಕ್ಕೆ ಅಡ್ಡ ಆಗಿ ನಿಂತ. ಇನ್ನೇನು ಮಾತಾಡಬೇಕು, ಏಳು ಗೂಡಿನ ಆವಿನ ದನ ಧಡಕ್ಕಂತ ಬೆದರೋದಿಕ್ಕೂ ಅವನು ಮಾತು ಸುರು ಮಾಡೋದಿಕ್ಕೂ ಒಂದೇ ಆಗಿಬಿಡ್ತು. ಆವಿನ ದನ ಏಳು ವರುಷದಾಗೆ ಅದುವರೆಗೂ ಒಂದು ಸಲಾನೂ ಹೆದ್ರಿರಲಿಲ್ಲ. ಅವತ್ತು ಹೆದ್ರಿ ಬಿಡ್ತು. ಇದೇನೋ ಬಂದ್ಬಿಡ್ತು ಅಂತ ಬಲಗಡೆ ಮುಖ ಹಾಕಿ ಮಲಗಿದ್ದೋನು ಧಡಕ್ಕನೆದ್ದು ಕೂತುಕೊಂಡು ನೋಡಬೇಕಾದ್ರೆ ಈ ಯಮ್ಮ ಮೂಡಲು ಉದಿಯಾಗೆ ಒಂದು ನುಗ್ಗೆ ಮರದ ಉದ್ದ ನಿಂತಿದ್ಲಂತೆ. "ಇಲ್ಲೀಗೆ ಏಳುವರ್ಷ ಆಗ್ಯೆತೆ ಬಂದಿಲ್ಲಿ. ಇಲ್ಲಿ ಆವಿನಗೂಡು ಹಾಕ್ಕಂಡು ನಾನು ಏನೂ ನೋಡಿರ್ಲಿಲ್ಲ. ಇವತ್ತು ಈ ಅರ್ಧ ರಾತ್ರಿ ಹೊತ್ತಿನಾಗೆ ಬಂದು ನನ್ನ ಆವಿನ ದನಾನ ಹೆದರಿಸಬೇಕಾದ್ರೆ ನೀನು ಮಾರಿಯಾದ್ರೂ ಹೇಳು, ದೆವ್ವನಾದ್ರೂ ಹೇಳು, ನರಮನುಷ್ಯನಾದ್ರೂ ಹೇಳು, ದೇವಾನುದೇವತರು ಆದ್ರೂ ಹೇಳು" ಅಂತ ಹೇಳ್ದ ಅವನು. ಮೂರು ಘಂಟೆ ಹೊತ್ತು ಕೇಳಿದರೂ ಈ ಯಮ್ಮ ಮಾತಾಡ್ಲಿಲ್ಲ. ಅವ್ನು ಕೇಳಿದ ಪ್ರಶ್ನೆ ಯಾವುದಕ್ಕೂ ಉತ್ತರ ಹೇಳ್ಲಿಲ್ಲ. ಮೂರು ಘಂಟೆ ಹೊತ್ತಿಗೆ "ಪಾಪ ಪುಣ್ಯ ಎಲ್ಲಾ ನಿನ್ನ ತಲೆ ಮೇಲೇ ಇದ್ದು ಬಿಡಲಿ, ಮಹಾಕಾಳಿ ನೀನು ಮಾತಾಡ್ಲಿಲ್ಲ" ಅಂತ ಹೇಳಿ ಆ ಪುಣ್ಯ ಕಟ್ಟಿರೋ ಸುರನಾರಿ ಬಿಲ್ಲು ಬಿಚ್ಚೆ ಬಿಟ್ಟ. ಮಂದರಗಿರಿ ಬುಡದಾಗೆ ಇಟ್ಟು ಪೂಜೆ ಮಾಡಿ ಸೆಳೆದು ಬಿಟ್ಟುಬಿಟ್ಟ. ಒಂದೇ ಒಂದು ಬಾಣದಾಗೆ ಸುಟ್ಟು ಹೋಗಬೇಕು ಆ ಮಗ. ಇನ್ನು ನಾನಾಗಿ ನಾನು ಕೊಲೆ ಮಾಡ್ದಂಗಾಗುತ್ತಲ್ಲ ಮೂಡಲ ಸೀಮೆಯಾಗಿಂದ ಕರಕೊಂಬಂದು ಅಂತ ಮೂರೇ ಮೂರು ಗೇಣು ಆ ಬಾಣಕ್ಕೂನೂ ಆ ಯಮ್ಮಗೂನೂ, ಈ ಚಿತ್ರದೇವರು ಮರದ ಮರೆಯಾಗಿ ನಿಂತಿದ್ನಲ್ಲ, ಅವನು ಧಡಕ್ಕನೆದ್ದು ನೆಗೆದು ಆ ಯಮ್ಮನ ಬೆನ್ನ ಹಿಂದಕೆ ಎಳಕಂಡು ಬರುತ್ತಿದ್ದ ಬಾಣ ಬಲಗಡೆ ತಿರುಗೋ ಹಾಂಗೆ ಮಾಡಿಬಿಟ್ಟ. ಯಾರೂ? ಚಿತ್ರ ದೇವರು. ಆ ಬಲಗಡೆ ಭಾಗದಾಗೆ ಬಾಣ ಹೋಗಿರೋ ಜಾಗದಾಗೆ ನೂರಾ ಒಂದು ಗಾವುದ ದೂರ ನಡುವಿನಾಗೆ ಇರೋ ಮರ ಮಟ್ಟು, ಮಣ್ಣು ಕಲ್ಲು, ಏನೂ ಇಲ್ಲ. ಎಲ್ಲಾ ಸುಟ್ಟು ಹೋದ್ವು.

"ಇವತ್ತಿನ ದಿನ ನಾನು ಇರೋ ಹೊತ್ತಿಗೆ ನಿನ್ನ ಉಳಿಸ್ಕಂಡಿದೀನಿ. ಇಲ್ಲಾಂದ್ರೆ ನೀನು ಸುಟ್ಟು ಹೋಗಿ ಬಿಡ್ತಿದ್ದಿ. ಈಗ ಉರಿಗಣ್ಣು ಬಿಡ್ತಾನೆ. ಈಗ್ಲಾದ್ರೂ ನಾನು ನಿನ್ನ ಹೆಂಡ್ತಿ ಅಂದು ಬಿಡಮ್ಮಾ, ಅಲ್ಲಿಗಾದ್ರೂ ನಿನ್ನ ಹೊಟ್ಟೆಯಾಗೆ ಹಾಕ್ಕಂತಾನೋ ಏನೋ" ಅಂದ್ರು ಚಿತ್ರ ದೇವರು. "ಸ್ವಾಮೀ, ನಾನು ನಿನ್ನ ಹೆಣ್ತಿ ಅಂತ ಹೇಳು ಅಂದರೆ ಅಂಗೈಗೆ ಹಾಲು ಹುಯಿದಿಲ್ಲ, ಮುಂಗೈಯಾಗೆ ತಾಳಿ ಕಟ್ಟಿಲ್ಲ. ಕೊರಳಿಗೆ ಮಾಂಗಲ್ಯ ಧರಿಸಿಲ್ಲ. ಹಾಲು ಹಸಿ ಹಾಕಿಲ್ಲ. ಅಕ್ಕಿಕಾಳು ಹಾಕಿಲ್ಲ. ಮೂರು ಕಟ್ಟೆ ಮನೆಯೋರು ಕಲೆತಿಲ್ಲ. ಇವತ್ತಿನ ದಿನದಾಗೆ ಗುರು, ಪೂಜಾರಿ, ಹಟ್ಟಿಗೌಡ ಯಾರೂ ಕಲೆತಿಲ್ಲ. ನನ್ನ ಬಾಕಿಗೆ ಧಾರೆ ಹುಯ್ದಿದ್ರು. ಅವತ್ತಿಗೆ ಏಳುವರ್ಷ, ಬಾಕಿಗೆ ಮದುವೆ ಮಾಡಿ ಮೂರು ವರುಷ. ಏಳು ಮೂರು ಹತ್ತು ವರ್ಷಕ್ಕೆ ಕರಕೊಂಬಂದು ನಾನು ನಿನ್ನ ಹೆಣ್ತಿ ಅಂತ ಹೇಳು ಅಂದ್ರೆ ಈ ಬಂಗಾರದ ಬಾಯಾಗೆ ಒಂದು ನುಡೀನೂ ಬರಲ್ಲ ಸ್ವಾಮಿ. ನೀನುಂಟು ನಿನ್ನ ಮಗ ಉಂಟು. ನಿಮ್ಮ ತಲೇ ಮ್ಯಾಲೆ ಆ ನ್ಯಾಯ ಉಂಟು ಸ್ವಾಮಿ, ನನಗೇನಿಲ್ಲ" ಅಂತ ಹೇಳಿಬಿಟ್ಳು. ಮೂರು ಗಂಟೆ ಆತು. ನನ್ನ ಹೆಂಡ್ತಿ ಮತ್ತು ಮನೆ ದೇವರು ಬಂದವ್ರೆ ಅಂತ ಅವ್ನಿಗೆ ಗೊತ್ತಿಲ್ಲ. "ಇದ್ಯಾವ್ದೋ ದೆವ್ವ ಪಿಶಾಚಿ ಮೊದಲಿನ ಬಾಣ ಬಿಟ್ಟಾಗ್ಲೇ ಸುಟ್ಹೋಗಬೇಕಾಗಿತ್ತು. ಈಗ ಉರಿಗಣ್ಣಿನ ಬಾಣ ಬಿಡ್ತೀನಿ. ಈಗ್ಲಾದ್ರೂ ಮೂರು ಮಾತಾಡು" ಅಂದ.

ಅವಳು ಮೂರು ಮಾತಾಡ್ಲೇ ಇಲ್ಲ. ಅಷ್ಟರಾಗೆ ಅವನು ಉಟ್ಟಿದ್ದ ಬಾಣ ಮಂದರ ಗಿಡದ ಬುಡದಾಗೆ ಬಿಟ್ಟು ಆ ಘಳಿಗೆನಾಗೇ ನೂರಾ ಒಂದು ಪೂಜೆ ಮಾಡಿ ಆ ಬಾಣ ಎತ್ತಬೇಕು ಅನ್ನೋದರಾಗೆ ಶಿವ ಚಿತ್ರಲಿಂಗ ಆ ಬಾಣ ಎತ್ತಿ ಮೂರು ತುಂಡು ಮಾಡಿ ಎತ್ತಿ ನೀರಿಗೆ ಎಸೆದು ಬಿಟ್ಟ. ನಮ್ಮ ಗೊಲ್ಲ ಮನೆತನಕ್ಕೆ ಕಾಟಮದೇವರು, ಚಿತ್ರದೇವರು ಇವೇ ದೇವರು. ಅದರಿಂದ ಈಚೆಗೆ ಎತ್ತಪ್ಪ, ಜುಂಜಪ್ಪ, ಪಟ್ಟೇ ದಟ್ಯೋನು, ಮೈಲಾರಲಿಂಗ ಅವೆಲ್ಲಾ ಈಚೆಗೆ ಆಗಿರೋದು. ಚಿತ್ತಯ್ಯ, ಕಾಟಯ್ಯ, ಓಬಳ ನರಸಿಂಹ ಇವರು ಮೂವರು ಶಿವನ ಮಕ್ಕಳೇ. ಆಗ ಆ ಬಾಣ ಮಣಿದುಬಿಟ್ಟ.

"ಯಾರೂ ಅಂತ ಬಾಣ ಬಿಟ್ಟೆ, ಮಾರಿಯಲ್ಲ, ಮಸಣಿಯಲ್ಲ, ದೆವ್ವ ಅಲ್ಲ, ಪೀಡೆ ಅಲ್ಲ. ಪಿಶಾಚಿ ಅಲ್ಲ, ಹಿಂದೆ ನಿಮ್ಮ ಆರು ಜನ ಅಣ್ಣಗಳಿಗೆ ನಿಮ್ಮ ಸ್ವಾದರ ಮಾವ ದೊಡ್ಡ ಚಿನ್ನೇಗೌಡ ಬಂದು 'ಮದುವೆ ಮಾಡ್ಕಳ್ರಿ ಕಂಬಕ್ಕನ್ನ' ಅಂತ ಕೇಳಿದಾಗ 'ನಾವು ಆರು ಜನ ಲಗ್ನವಾಗಿದೀವಿ ಮಾವಾ, ನಮ್ಮ ತಮ್ಮಗೆ ತಂದು ಕಂಬಕ್ಕನ್ನ ಮದುವೆ ಮಾಡ್ತೀವಿ' ಅಂತ ನಿಮ್ಮ ಅಣ್ಣದೀರು ಒಪ್ಪಿಗೆ ಮಾತು ಕೊಟ್ಟಿದ್ದರು. ಮೂರು ವರುಷದ ಮೇಲೆ ಮೂರುತಿಂಗಳು ತುಂಬೋ ತನಕ ನಿಮ್ಮ ಅಣ್ಣದೀರು ರೊಟ್ಟಿ ಬುತ್ತಿ ಕಟ್ಟಿಕೊಂಡು ತಿರುಗಿದರೂ ನಿನ್ನ ಎಲ್ಲೆ ಕುಲ ಸಿಕ್ಕಲಿಲ್ಲ. ನಿನ್ನ ಬಿರುದಿಗೆ ಬಾಕು ತೊಗೊಂಡು

ಹೋಗಿ ಬಾಕಿಗೆ ಮದುವೆ ಮಾಡಿಕೊಂಡು ಬಂದು ಬಲಗಾಲು ಮುಂದಿಟ್ಟು ನಿಮ್ಮ ಮನೇಗೆ ಬಂದ ದೆಸೆಯಿಂದ ಐಶ್ವರ್ಯವಂತರಾಗಿ ಅವರು ಈ ಯಮ್ಮಗೆ, ಈಕೆಗೆ ನೋವು ಕೊಡೋ ಹೊತ್ತಿಗೆ, ಇವತ್ತಿಗೆ ಒಂಬತ್ತು ದಿನಕೆ ಬಂದು ನನಗೆ ಅಡ್ಡ ಬಿದ್ದಿದ್ಲು. ಅದಕೆ ಗಂಡಗೆ ಹೆಂಡ್ತಿ ಮಾಡಿ, ಹೆಂಡ್ತಿಗೆ ಗಂಡನ ಮಾಡಿ ಹೋಗಾನಂತ ಬಂದಿದೀನಿ. ಇದು ನಿನ್ನ ಸೊತ್ತು ಹೊರತು ಮತ್ತೊಬ್ಬರದಲ್ಲ" ಅಂತ ದೇವರ ದಯಮಾರನ ವಶಕ್ಕೆ ಕೊಟ್ಟ ಚಿತ್ತಯ್ಯ. "ನಿನ್ಹೆಂಡ್ತಿ ಹೊಟ್ಟೆಗಿಕ್ಕೋ ಅಂತ ನೀನು ಹೇಳೋ ಹೊತ್ತಿನಾಗೆ ಇಲ್ಲಿಗೆ ಏಳು ವರುಷ ನಾನು ಇಲ್ಲೀಗೆ ಬಂದು ಇಲ್ಲಿ ಸೇರಿ. ನಾನು ಹುಲ್ಲೋ ನೀರೋ ಹುಡಿಕ್ಕೊಂಡು ಆವಿಗೆ ಗೂಡುಕಟ್ಟಿ ಏಳು ವರುಷ ತುಂಬೈತೆ. ನಮ್ಮ ಅಣ್ಣದೀರು ನನಗೆ ಲಗ್ನ ಮಾಡಬೇಕಾಗಿದ್ರೆ ನನ್ನನ್ನು ಇಲ್ಲಿಂದ ಅಲ್ಲಿಗೆ ಕರ್ಕೊಂಡು ಹೋಗಿ ನಾಲ್ವರ ಮದುವೆ ಮಾಡಿದಂಗೆ ಮಾಡಿ ಅಕ್ಕಿಕಾಳು ಹಾಕಿ ಧಾರೆ ಎರೆಸಿ, ತಾಳಿ ಕಟ್ಟಿಸಿ, ಮಾಂಗಲ್ಯ ಕಟ್ಟಿಸಿ, ಮದುವೆ ಮಾಡಿಸಿ ನನ್ನ ಹಿಂದೆ ಕಳಿಸಿದ್ದರೆ ನನ್ನ ಹೆಂಡ್ತಿ ಅಂತ ನಾನು ಇಲ್ಲಿ ಇಕ್ಕೋಳ್ಳೋನು. ನಾನು ಯಾವ ಕರ್ಮಾನೂ ಕಂಡಿಲ್ಲ. ಏಳು ವರ್ಷ ಕಳೆಯೋ ಹೊತ್ತಿಗೆ 'ನಿನ್ನ ಹೆಂಡ್ತಿ ಕಣಪ್ಪಾ ನೀನು ಇಟ್ಟುಕೋ' ಅಂತ ನೀನು ಹೇಳಬೇಕಾಗಿದ್ರೆ ಅಲ್ಲಿ ಮಾಡಿರೋ ಮದುವೆ ನನಗೆ ಒಪ್ಪಿಗೆ ಇಲ್ಲ ಕಣಪ್ಪಾ. ನಿನಗೆ ನನ್ನ ಮದುವೆ ಮಾಡಬೇಕು ಅಂತಿದ್ರೆ ಆ ಯಮ್ಮನ ಕೊರಳಿಗೆ ಇರೋ ಮಾಂಗಲ್ಯ ಬಿಚ್ಚಿ ಹುತ್ತದ ಬಾಯಿ ಒಳಕ್ಕೆ ಹಾಕಿ ಬಿಡಬೇಕು. ಅಲ್ಲಿ ನೂರಾ ಒಂದು ಸಲ ಪೂಜೆ ಮಾಡಬೇಕು. ನೂರಾ ಒಂದು ಮಂಗಳಾರತಿ ಮಾಡಬೇಕು. ನೂರಾ ಒಂದು ಮಂಡಲ ಬರೀಬೇಕು. ಏಳು ಕರಿ ಕಂಬಳಿ ತೆರ ಕೊಡಬೇಕು. ಮೂಡುಗಡೆಯಾಗೆ ನಾನು, ಪಡುಕಡೆಯಾಗೆ ಆ ಮಗಾ, ಮಧ್ಯದಾಗೆ ನೀನು ಇರಬೇಕು. ನಾಲ್ವರ ಮದುವೆ ಮಾಡಿದ್ದಾಂಗೆ ಮಾಡಿದ್ರೆ ನಾನು ನನ್ಹೆಂಡ್ತಿ ಅಂತ ಒಪ್ಪಿಕೋತೀನಿ. ನನ್ನ ತಾವ ಇಕ್ಕೋತೀನಿ. ಇಲ್ಲಾಂದ್ರೆ ನಾನು ಇಟ್ಕೋಣೋಲ್ಲ. ನನಗೆ ಒಪ್ಪಿಗೆ ಇಲ್ಲ. ಅದಿಲ್ಲಾಂದ್ರೆ ನೀನು ಕರಕೊಂಡು ಹೊಂಟೋಗಿ ಬಿಡು" ಅಂದ ದೇವರ ದಯಮಾರ.

"ಮೂರು ಘಂಟೆ ಹೊತ್ತು ಟೇಮ್ ಕೊಡು" ಅಂದ ಚಿತ್ರದೇವರು.

ಶಿವನ ಮಗ. ಅವನಿಗೆ ಯಾವುದೇನು ಅಗಾಧವಾಗಿತ್ತು. ಆ ಯಮ್ಮನ ಕೊರಳಲ್ಲಿರೋ ಮಾಂಗಲ್ಯ ಬಿಚ್ಚಿ ಉತ್ತರ ದಿಕ್ಕಿನಾಗಿರೋ ಹುತ್ತಿನಾಗೆ ಹಾಕಿಸಿ ನೂರಾ ಒಂದು ಪೂಜೆ ಮಾಡಿಸಿ, ಕುತ್ತಿಗೆಗೆ ಕೈಯಿಕ್ಕಿ ಕೊರಳಾಗಿರೋ ಆ ಮಾಂಗಲ್ಯದ ಸರ ತೆಗೆಯಬೇಕು, ಅನ್ನೋ ಹೊತ್ತಿನಾಗೆ ಸಣ್ಣೋಳು ಕಂಬಕ್ಕನ ಸಾಹಸ, ಸತ್ಯ ಅಲ್ಲಿ ಗೊತ್ತಾತು ದೇವರ ದಯಮಾರಂಗೆ. ಮೂರು ವರುಷ ಬಾಕಿಗೆ ಮದುವೆ ಮಾಡಿಸಿ ಮನ್ಯಾಗೆ ಇಟ್ಟುಕೊಂಡಿದ್ರಲ್ಲ. ಬಾಕಿಗೆ ಮದುವೆ ಮಾಡಿಸಿ, ಮತ್ತೊಬ್ಬರ ಮುಖನೋಡಿ ಮತ್ತೊಬ್ಬರ

ವಿಚಾರವಾಗಿ ಮನಸು ಕೆಡಿಸಿಕೊಂಡಿದ್ರೆ ಈಕೆ ಸತ್ಯ ಕೆಡಿಸಿಕೊಂಡಿದ್ರೆ, ಆ ಮಾಂಗಲ್ಯದ ಸರ ಹೋಗಿ ಏಳು ಹೆಡೆ ಸರುಪ ಮಲಗೈತೆ, ಆ ಸರುಪದ ಬಾಯಿಗೆ ಬಿದ್ದು ಹೋಗ್ತೈತೆ ಆ ಮಾಂಗಲ್ಯದ ಸರ. ಅಲ್ಲಿ ಆ ಯಮ್ಮನ ಸತ್ಯ ಗೊತ್ತಾಗಬೇಕು. ನಾಗೇಂದ್ರ ಅವಳು ಸತ್ಯದಿಂದ ಇದ್ದರೆ ಅವಳು ಸರ ಎಳದೇಟಿಗೆ ನೀನು ಈಚೆಗೆ ಬರಬೇಕು. ಇಲ್ಲಾಂದ್ರೆ ಅವಳು ಸತ್ಯಕ್ಕೆ ತಪ್ಪಿದ್ರೆ ಅವಳ ಹಸ್ತ ಅಲ್ಲೀಗೆ ತೆಗೀಬೇಕು ಅಂತ ಪ್ರತಿಜ್ಞೆ ಪೂರೈಸಕ್ಕೆ ಅವನು ಸತ್ಯ ಪರಿಪಾಲನೆ ಮಾಡಿಸ್ಲಿಕ್ಕೆ ಆ ದೇವರ ದಯಮಾರ ಆಕೆ ಕೈನ ಆ ಹುತ್ತದಾಗೆ ಇಕ್ಕಿಸಿದ್ದು. ಆ ಯಮ್ಮ 'ಶಿವಚಿತ್ರಲಿಂಗ, ಕಾಟಮಲಿಂಗ, ಪಾರ್ವತಿ, ಬಸವೇಶ್ವರ, ದೇವೇಂದ್ರ ಇದು ನಿಂದು, ನಂದಲ್ಲ' ಅಂತ ತೊಗೊಂಡು ನೂರಾ ಒಂದು ಪೂಜೆ ಮಾಡಿ ಆ ಹುತ್ತದಾಗೆ ಕೈಯಿಕ್ಕಿ ಆ ಹೆಡೇನೇ ಹಿಡಿದು ಎಳೆದುಬಿಟ್ಟಳು ಕಣ್ಣುಮುಚ್ಚಿ. ಆ ಹುತ್ತದಿಂದ ಈಚೇನೇ ಬಂದುಬಿಡ್ತು ಒಂದು ಮಾರು. ಈ ಕಡೆ ನೋಡ್ತಾಳೆ ಏಳು ಹೆಡೆ ಸರ್ಪ. ಅವಳೊಬ್ಬಳೇ ಅಂತೆ, ಆ ಕೃಷ್ಣ ಮತ್ತು ಆ ಯಮ್ಮ ಕಂಬಕ್ಕ, ಇಬ್ಬರೇ ಅಂತೆ ಏಳೆಡೆ ಸರ್ಪನ್ನ ನೋಡಿರಾದು. ನಾವ್ಯಾರೂ ನರಮನುಷ್ಯರು ನೋಡಿಲ್ಲ. ಸುಮ್ನೆ ಒಂದು ನಾಗರಹಾವು ಕಂಡರೆ ಹನ್ನೆರಡು ಹೆಜ್ಜೆ ಹಿಂದೋಗಿರುತ್ತೀವಿ. ಇನ್ನು ಏಳು ಹೆಡೆ ಸರ್ಪನ್ನ ಅವರಿಬ್ರೆ ಅಂತೆ ನೋಡಿರಾದು. ಅವರ ಸಾಹಸ ಇತ್ತು. ಅವರು ನೋಡಿದರು. ತೆಗೆದು ಹುತ್ತದ ಮ್ಯಾಗೆ ಎಸೆದು ಹತ್ತಿರ ಹೋಗಿ ನೋಡ್ತಾಳೆ. ಅದರ ಬಾಯಾಗೆ ಐತೆ ಮಾಂಗಲ್ಯದ ಸರ ಆಕೇದು ಕಿತ್ತು ಎಸೆದಿದ್ದು:

"ಭೂಲೋಕದ ಗಂಡ, ಬೂದಿ ಮುಚ್ಚಿದ ಕೆಂಡ,
ಹರಿಯೋ ಹಾವಿನ ಗಂಡ, ಉರಿಯೋ ಹಾವಿನ ಮಿಂಡ
ನಾಗಲೋಕದ ಗಂಡ, ನಾಲಾರಿಗೂ ಮಿಂಡ,
ಹಗಲು ಜಾವದೋರ ಗಂಡ, ಇರುಳು ಜಾವದೋರ ಮಿಂಡ,
ಓಲೆಕಾರರ ಗಂಡ, ಮಾಟಕೆ ಮಾಡೋರ ಮಿಂಡ,

ನಾಗೇಂದ್ರ, ಪರಮಾತ್ಮ, ಕೃಷ್ಣದೇವ ಇವತ್ತು ನನ್ನ ಗಂಡ, ನನ್ನ ಸತ್ಯ ಪರಿಪಾಲನೆ ಮಾಡಬೇಕಾಗಿ ಹುತ್ತದೊಳಕ್ಕೆ ಮಾಂಗಲ್ಯ ಹಾಕಿಸಿದ್ದ. ನಿನ್ನ ಬಾಯೊಳಗೆ ನನ್ನ ಮಾಂಗಲ್ಯ ಐತೆ. ನನ್ನ ಮಾಂಗಲ್ಯ ಕೊಡು. ನನ್ನ ಮುತ್ತೈದೆತನ ನೀಡು ಸ್ವಾಮಿ" ಅಂತ ಕೇಳಿ ಕೊಂಡಳು ನಾಗೇಂದ್ರನ್ನ. ತೆಗೆದು ಈ ಯಮ್ಮನ ಮುಂದಕ್ಕೆ ಬೀಳೋ ಹಾಂಗೆ ಎಸೆದು ಬಿಟ್ಟ, ಇವನು ಹೋಗಿ ಹುತ್ತ ಸೇರಿಬಿಟ್ಟ. ಆಗ ಆ ಮಾಂಗಲ್ಯ ತಂದು ಚಿತ್ರದೇವರ ಕೈಗೆ ಕೊಟ್ಟಾಗ ಚಿತ್ರದೇವರು ಏಳು ಕರೆ ಕಂಬಳಿ ತೆರೆಕಟ್ಟಿ, ನೂರಾ ಒಂದು ಮಂಡಲ ಬರೆದು ಪಡುವು ಕಡೆಗೆ ಅವನ ನಿಲ್ಲಿಸಿ, ಮೂಡುಗಡೆಗೆ ಈ ಮಗಾನ್ನ ನಿಲ್ಲಿದ. ಈಗ ಪಂಚಾಂಗದಯ್ಯನೋರು ಬೇಕಲ್ಲ, ಯಾರವ್ರೆ ಅಲ್ಲಿ? ಸುತ್ತಲೂ ಕರಿಮಲೆಗೆ ಹಗಲು ಕತ್ತಲೆ, ಇರುಳೂ ಕತ್ತಲೆ. ಅಂತಾ ಕತ್ತಲು ಕರಿಮಲೆಯಾಗೆ ಯಾರವ್ರೆ ಈಗ? ಯಾರಿಲ್ಲ. "ದೇವರ ದಯಮಾರ ನೂರಾ ಒಂದು ಮಂಡಲ ಬರೆದು ಪಡವು ಕಡೆಗೆ ನಿನ್ನ ನಿಲ್ಲಿಸಿ, ಮೂಡುಗಡೆಗೆ ಆ ಮಗಾ ನಿಲ್ಲಿಸಿದೀನಿ.

ಮಧ್ಯದಾಗೆ ನಾನೇ ಸಾಕ್ಷಿ. ನಾನೇ ಪಂಚಾಂಗದಯ್ಯ. ನಾನೇ ನಿನಗೆ ಇನ್ನು ಯಾರೂ ಇಲ್ಲ ನಿನಗೆ. ನಿನಗೆ ನಿನ್ನ ಶಾಸ್ತ್ರ ಸಂಬಂಧ ಪೂಜೆ ಪುನಸ್ಕಾರ ಎಲ್ಲಾ ನಾನೇ ಮಾಡಿಸ್ತೀನಿ" ಅಂದ. ಈಗ ಐನೋರು ಕೇಳ್ತಾರಲ್ಲ, ಒಂಬತ್ತು ದಿಕ್ಕಿಗೆ ಒಂಬತ್ತು ಕಾಯಿ ಆಗಬೇಕು, ಇಷ್ಟು ಬೆಲ್ಲ ಬೇಕು, ಇಷ್ಟು ಅಕ್ಕಿ ಆಗಬೇಕು ಅಂತ ಕೇಳ್ತಾರಲ್ಲ ಹಂಗೆ. ಈಗ ಇವನೇ ಪಂಚಾಂಗದಯ್ಯ ಆಗಬೇಕು. ಅವರದು ಧಾರೇ ಮುಹೂರ್ತ ಆಗಬೇಕಾದ್ರೆ ಅಕ್ಕಿ ಕಾಳು ಹಾಕಿ, ಫಲ ವಸ್ತ್ರ ಹಾಕಿ, ಅವರು ಮಾಂಗಲ್ಯ ಎಲ್ಲಾ ರೆಡಿಮಾಡಿಕೊಂಡು ಆ ಮಾಂಗಲ್ಯ ಹಿಡಕೊಂಡು ಆ ಘಳಿಗೆಯಾಗೇನೇ

"ಹಸ್ತ ಚಿತ್ತ ರೋಹಿಣಿ, ಭರಣಿ, ಸ್ವಾತಿ ಮಳೆ ಹುಯ್ದು
ಸಮುದ್ರ ಕೆರೆ ತುಂಬಿ, ಸಮುದ್ರ ಕೆರೆಯಾಚೆ ಏನೇನು ಬೆಳೆಯೋವ್ರೋ ದೇವ,
ಸಣ್ಣಕ್ಕಿ ನೆಲ್ಲು ಸಣ್ಣವಾಗಿ ಬೆಳೆದು, ದೊಡ್ಡಕ್ಕಿ ನೆಲ್ಲು ದೊಡ್ಡವಾಗಿ ಬೆಳೆದು,
ತುಂಬೇ ತೂಗಿ ಬೆಳೆದು, ನಿಂಬೆ ನೀಡಿ ಬೆಳೆದು,
ಬಾಳೆ ಬಾಗಿ ಬೆಳೆದು, ಕಿತ್ತಳೆ ಕಿರುನೆಲ್ಲಿ ನೆಟ್ಟಲ್ಲೆ ಬೆಳೆದು
ಆಕಾಶದ ಆಚೆ ಅಗಿ ಹೊಯ್ದು, ಭೂಮಿತಾಯಿಗೆ ಚಪ್ಪರ ನೆಟ್ಟು,
ಕುಂಬಾರಗುಂಡ ಎಳ ಬಟ್ಟು ಎಳೆದು,
ಮಾದೇವರ ಪಾದಕ್ಕೆ ಶರಣುಮಾಡಿ
ಸೋಬಕ್ಕೆ ಸೋಬಾನ, ಸೋಬಕ್ಕೆ ಸೋಬಾನ

ಬಲಕೇನ ಕಂಡೆ, ಬ್ರಹ್ಮ ದೇವರ ಕಂಡೆ
ಎಡಕೇನ ಕಂಡೆ ಎಳೆಯ ನಾಗರ ಕಂಡೆ,
ಮುಂದಕ್ಕೇನ ಕಂಡೆ ಮುಕ್ಕಣ್ಣೇಶ್ವರನ ಕಂಡೆ
ನಡುಹಟ್ಟಿ ಬಸವಣ್ಣ ನಾಟ್ಯವನಾಡೋದು ಕಂಡೆ
ಸೋಬಕ್ಕೆ ಸೋಬಾನ, ಸೋಬಕ್ಕಿ ಸೋಬಾನ

ಆಕೈಲೂ ಗಂಟು, ಈಕೈಲೂ ಗಂಟು, ರನ್ನ ಮುತ್ತಿನ ಗಂಟು
ಅಂಗೈ ಹಸ್ತ ಮೂರು ಮುತ್ತು ಹಾಕಿದ ಗಂಟು, ಋಣಾನುಬಂಧ ಇತ್ತು
ಹಿಡಿ ಕೈಯ ನಡಿ ಧಾರೆಗೆ ದೇವರ ದಯಮಾರ ಸೋಬಕ್ಕೆ ಸೋಬಾನ
ಸೋಬಕ್ಕೆ ಸೋಬಾನ; ಸೋಬಕ್ಕೆ ಸೋಬಾನ. ಸೋಬಕ್ಕೆ ಸೋಬಾನ

ಅಂದ ಚಿತ್ರದೇವರು.

ಅವನೇ ಪಂಚಾಂಗದಯ್ಯ ಆಗಿ ಹೋಗಿಬಿಟ್ಟ. ಯಾರು? ಗುರು ಚಿತ್ತಯ್ಯ ಅವನೇ ಮನೆ ದೇವರು. ಇಷ್ಟೆಲ್ಲಾ ಆಗ ಹೇಳಿ ಜಯವಾಗಲಿ ನಿಮಗೆ ಅಂತ ಆ ಘಳಿಗೆಯಾಗೇನೇ ಹೇಳಿ ಹಾಲು ಪಂಚಾಮೃತದ ಅಭಿಷೇಕ ಮಾಡಿಸಿ, ಚಿತ್ರದೇವರಿಗೆ ಆನಂದವಾಗಿ ಆವಿನಗೂಡಿನಾಗೆ ಊಟಕ್ಕೆ ಹಾಕಿಸಿ "ಸ್ವಾಮಿ ಇಲ್ಲಿಂದ ಈಕೀನ ನನ್ನ ಹೆಂಡ್ತಿ ಅಂತ ಹೊಟ್ಟೆಗೆ ಇಕ್ಕಂತೀನಿ. ಅಲ್ಲಿ ಮಾಡಿರೋದು ಮದುವೆ ಮಾರನಹಳ್ಳಿ ಗುಂಡಪ್ಪನೋರ ಮನೆ ತಾಕ ಮಾಡಿರಾದು ನನಗೆ ಗೊತ್ತಿರಲಿಲ್ಲ. ಈಗ ನೀನು ಗುರುವೇ ಬಂದು ನಮ್ಮ ಮನೆದೇವರ ಸಾಕ್ಷಿಯಾಗಿ ಮದುವೆ ಮಾಡಿದ್ದೀಯಾ.

ನನ್ನ ಹೆಂಡ್ತಿ ಅಂತ ನನ್ನ ಹೊಟ್ಟೆಗೆ ಇಟ್ಕಂತೀನಿ. ಇದರ ಕಷ್ಟ ನಿಷ್ಠೂರ ಏನ್ನೈತೆ ನಾನು ನೋಡ್ಕಂತೀನಿ. ನಿನಗೆ ಒಳ್ಳೆಯದಾಗಲಿ, ಹೋಗಿ ಬಾ ಚಿತ್ತಯ್ಯ" ಅಂದ.

ಕಂಬಕ್ಕಗೆ ಎಷ್ಟು ಮದುವೆ ಆದುವು? ಎರಡು ಆದುವು. ಗುಂಡಪ್ನೋರ ಮನೆತಾವ ಬಾಕಿಗೆ ಮದುವೆ ಮಾಡಿ ಮೂರು ವರ್ಷ, ಇಲ್ಲಿ ಮಾರನ ಹಳ್ಳಿಯಾಗೆ ಇಕ್ಕೊಂಡಿದ್ದದ್ದು ಒಂದು ಮದುವೆ. ಅದೇ ಶಿಲೇ ಶಾಶ್ವತವಾದ ಮದುವೆ. ಅದು ಗೊತ್ತಿಲ್ಲ ಅಂತ ಹೇಳಿ ಅವನ ಕಣ್ಣೆದುರಿಗೆ ಒಂದು ಮಾಡಿದ್ರಲ್ಲ. ಅಲ್ಲಿಗೆ ಎರಡು ಮದುವೆ ಆಗಿದಾವೆ. "ಏ ಮಗಾ, ನೋಡಪ್ಪಾ ತಂದು ನಿನ್ನ ಸೆರಗಿಗೆ ಹಾಕಿವ್ನಿ. ಬಂಧು, ಬಳಗ, ಗಂಡ, ತಂದೆ, ತಾಯಿ, ಅಣ್ಣತಮ್ಮದೀರು ಎಲ್ಲಾ ಸಕಲ ಸಂಪತ್ತು ನೀನೇ ಕಣೋ ದೇವರ ದಯಮಾರ. ನಾನು ಹೊರಟೋಗಿ ಬಿಡ್ತೀನಿ ಚಿತ್ರಗಿರಿ ಪಟ್ಟಣಕ್ಕೆ. ಮಕ್ಕಳು ಮರಿಯೋರು, ಕಾಯಿಲೆ ಕಸಾಲೆಯೋರು, ಬೇಕಾದಷ್ಟು ಜನ ನನ್ನ ದೇವಾಲಯಕ್ಕೆ ಬರುತ್ತಾರೆ. ನಾನು ಅಲ್ಲಿಲ್ಲದ ಮೇಲೆ ಅವರ ಕಷ್ಟಗಳ ಹೊಡೆಯೋರು ಅಲ್ಲಿ ಯಾರೂ ಇಲ್ಲ. ಹೊರಟೋಗಿ ಬಿಡ್ತೀನಿ" ಅಂತ ಚಿತ್ರದೇವರು ಹೊರಟೋಗಿ ಬಿಟ್ಟರು ಚಿತ್ರಗಿರಿ ಪಟ್ಟಣಕ್ಕೆ. ಚಿತ್ತಯ್ಯ ಬಂದು ಚಿತ್ರಗಿರಿ ಪಟ್ಟಣ ಸೇರಿದ. ದೇವರ ದಯಮಾರ ಸಣ್ಣೋಳು ಕಂಬಕ್ಕ ಏಳು ಮೂರು ಹತ್ತು ವರ್ಷ ಆ ಹೊತ್ತಿಗೆ ತುಂಬ್ತು. ಸೋಮವಾರ ದಿನ ಧಾರೆ ಮುಹೂರ್ತ ಆ ದಿನ ಸಾಯಂಕಾಲ ಐದು ಘಂಟೆಗೆ ಹೋಗಿ ಆವಿನ ಗೂಡಿನ ಬಾಕಿಲನಾಗೆ ಕರೆ ಕಂಬಳಿ ಹಾಸಿ ಇಬ್ಬರೂ ಒಂದು ಹಾಸಿಗೆ ಮೇಲೆ ಮಲಗಿದರು. ಬಲಗಡೆ ತೋಳಿನ ತಾಕ್ಕೆ ಸೂರ್ಯ ಮುಳುಗೋ ಹೊತ್ತಿಗೆ ಸೂರ್ಯನ ಪೂಜೆ ಮಾಡಿ ತೋಳಿನ ಮ್ಯಾಗೆ ತಲೆಹಾಕ್ಕೊಂಡು ಮನಗಿದೋಳು, ಬೆಳಿಗ್ಗೆ ಸೂರ್ಯ ಹುಟ್ಟಿ ಮೂರು ಮಾರು ಮೇಲೆ ಬರೋವರೆಗೂ ಹೇಳಿಬಿಟ್ಟಳಂತೆ ಕಂಬಕ್ಕ.

> "ಮೂರು ವರುಷ ಗುಂಡಪ್ಪನೋರ ಮನೆತಾಕ ಬಾಕಿಗೆ ಮದುವೆ ಮಾಡಿಕೊಂಡು ಬಲಗಾಲು ಮುಂದಿಕ್ಕಿ ನಾನೀ ಮನೆಗೆ ಬಂದಾಗಿನಿಂದ ನಿಮ್ಮ ಅಣ್ಣದೀರು, ನಿಮ್ಮ ಅತ್ತಿಗೆಯರು ಇಂತಾ ನೋವನ್ನು ನನಗೆ ಕೊಟ್ಟರು, ಮೂರುವರುಷ ಎಲ್ಲಾ ನೋವನ್ನೂ ನನಗೇ ಕೊಟ್ಟುಬಿಟ್ಟರು. ಆ ಬಾಧೆ ಬವಣೇನ ನಾನು ತಡಕೊಳ್ಳಲಾರದೆ ನಾವಿವತ್ತಿನ ದಿನದಾಗೆ ಬಂದು ಚಿತ್ರ ದೇವರಿಗೆ ಅಡ್ಡ ಬಿದ್ದೆ. ಚಿತ್ರ ದೇವರು ತಂದು ನಿನಗೆ ಲಗ್ನಮಾಡಿದ" ಅಂತ ಹಿಂದಾಗಿರುವ ಕಷ್ಟಾ ನಷ್ಟಾ ಎಲ್ಲಾ ದೇವರ ದಯಮಾರನ ಕೈಲಿ ಹೇಳಿಬಿಟ್ಟಳು ಕಂಬಕ್ಕ. ದೇವರು ದಯಮಾರ ಎಲ್ಲೋ ಇದ್ದಾನೆ. ಅವನಿಗೆ ಆಕಾಶ ಮುಗಿಲು ಏನೂ ಕಾಣಲ್ಲ. ಸಣ್ಣ ಕಂಬಕ್ಕ ಒಬ್ಬಳೇ ಕಾಣ್ಬೇಕು.
>
> "ನಮ್ಮ ಅತ್ತೆ ಮಾವದೀರು ಸತ್ಯ ವಾಕ್ಯಕೆ ತಪ್ಪಬಾರದು ಅಂತ ಕಬ್ಬಿಣದ ಬಾಕಿಗೆ ಮದುವೆ ಮಾಡಿ ತಿಂಗಳು ತುಂಬಿದ ದಿನಕೆ ಬಲಗಾಲು ಮುಂದಿಟ್ಟು ಮನೇಗೆ ಬಂದು ಕಾಲಿಟ್ಟ ಘಳಿಗೇಲಿ ಶ್ರೀಮಂತಿಕೆ ಬಂದು ನಮ್ಮ ಅಣ್ಣದೀರು ಅತ್ತಿಗೇರು ನಿನಗೆ ಈ ರೀತಿ ನೋವು ಕೊಡಬೇಕಾದರೆ, ಅವಾಗ ಆರು

ಜನ ಅಣ್ಣ ತಮ್ಮಗೋಳನ ನಡೀರಿ ಹುಲ್ಲು ನೀರು ಇರೋ ತಾವಕ್ಕೆ ಹೋಗೋಣ ಅಂತ ಕರ್ದೆ. ಬಂಧು ಬಳಗ, ಹೆಂಡ್ತಿ ಮಕ್ಕಳು ಬಿಟ್ಟು ಬರಲ್ಲ ಅಂತ ಹೇಳಿದ್ರು. ನನಗೆ ಈ ಏಳು ಗೂಡಿನ ದನವೇ ಬಂಧು ಬಳಗ, ತಂದೆ ತಾಯಿ, ಎಲ್ಲಾ ಸಕಲ ಸಂಪತ್ತು ಐಶ್ವರ್ಯ ಎಲ್ಲಾ ಅಂತ ನಾನು ಬಂದಿದ್ದು ನಿಜ. ಏಳು ವರ್ಷ ಇಲ್ಲಿ ಆವಿನ ಗೂಡು ಹಾಕ್ಕೊಂಡಿದ್ದೆ. ಏಳು ವರ್ಷಕ್ಕೆ ಏಳು ಗೂಡಿನ ದನ ಇಲ್ಲಿ ಬೆಳೆದಾವೆ. ಇವತ್ತಿನ ದಿನ ಅವರು ನಿನಗೆ ಇಷ್ಟು ಕಷ್ಟ ಕೊಡಬೇಕಾಗಿದ್ದರೆ ನಮ್ಮ ನಮ್ಮ ಭಾಗ ನಾವು ತೊಗೊಂಡು, ನಮ್ಮ ಭಾಗದಾಗೆ ನಾವು ಸಂಸಾರ ಮಾಡಿಕೊಂಡು ಇದ್ದು ಬಿಡಾನ ನಡಿ ಸಣ್ಣ ಕಂಬಿ" ಅಂತ ಹೊಂಟ.

"ಈ ಆವಿನ ದನ ಎಲ್ಲಾ ತೊಗೊಂಡು ಹೋಗಿ ಮಾರನಹಳ್ಳಿ ಊರ ಮುಂದಕೆ ಬಿಟ್ಟರೆ ನನ್ನ ಅಣ್ಣ ತಮ್ಮದೀರೆಲ್ಲ ಭಾಗ ಕೊಡು ಅಂತ ಬರ್ತಾರೆ. ಈ ಏಳು ವರುಷದಿಂದ ನನಗೆ ರೊಟ್ಟಿ ಬುತ್ತಿ ಕೊಟ್ಟಿಲ್ಲ. ನನ್ನ ಕಷ್ಟ ಸುಖಕ್ಕೆ ಆ ಬೋಳೀಮಕ್ಕಳು ಹೊಣೆಯಾಗಿಲ್ಲ. ಅವರಿಗೆ ಬೇಕಿಲ್ಲದ್ದು ನನಗ್ಯಾಕೆ ಬೇಕು. ಎಲ್ಲಾ ಬಂದಿದ್ದು ಈ ಆವಿನ ಗೂಡಿಂದಲೇ, ಈ ದನಗಳಿಂದಲೇ. ನಾನೂ ಎಲ್ಲಾರಂತೇನೇ ಮದುವೆಯಾಗಿ ಈ ಮಾರನಹಳ್ಳೀಲಿ ಇದ್ದಿದ್ರೆ ನನಗೂ ಏನೂ ಕಷ್ಟ ಸುಖ ಅರಿವಾಗದೇ ಇರ್ತಿದ್ದೆ. ಆ ಆವಿನಗೂಡಿನ ಸಾವಾಸಾನೇ ಬ್ಯಾಡ"

ಅಂತ ನಾರಾಯಣನೆಂಬ ನಾಮಗೊಡಲಿ, ಶಿವನೆಂಬೋ ಚಿಪ್ಪುಗೊಡಲಿ ತೊಗೊಂಡು ಕಾರೆ ಮುಳ್ಳು, ಕವಳಿ ಮುಳ್ಳು, ಹೊನ್ನೇ ಮುಳ್ಳು, ಜಾಲಿ ಮುಳ್ಳು ಎಲ್ಲಾ ಕಡಿದು ಕಡಿದು ರೊಪ್ಪದ ಸುತ್ತ ಒಟ್ಟಿ ಬಂದ್ ಬಿಟ್ಟ. ಹದಿನಾಲ್ಕು ರೊಪ್ಪದ ದನ ಒಂದೇ ರೊಪ್ಪಕ್ಕೆ ಕೂಡಿಬಿಟ್ಟ. ನಾವು ಕುರಿ ಕೂಡಿದ್ಧಂಗೆ. ಹದಿನಾಲ್ಕು ಆಳುದ್ದ ಕಳ್ಳಿ ಅಡ್ಡ ಮಗ್ಗಲಿಗೆ ಬಡಕೊಂಬಂದ. ಇಪ್ಪತ್ತೈದು ಆಳುದ್ದ ಕಳ್ಳಿ ಬಾಗಿಲಿಗೆ ಬಡಿದ. ಇಪ್ಪತ್ತೈದು ಆಳುದ್ದ ಕಳ್ಳಿ ಬಾಗಿಲಿಗೆ ಬಡದು ಹದಿನಾಲ್ಕು ಗೂಡಿನ ದನ ಒಂದೇ ರೊಪ್ಪಕ್ಕೆ ಹೊಡೆದು 'ನಡೆಯಲೇ ಸಣ್ಣ ಕಂಬಿ" ಅಂತ ಹೇಳಿ ಸಣ್ಣೋಳು ಕಂಬಕ್ಕನ್ನ ಕರಕೊಂಡು ಬಿಲ್ಲು ಬಾಣಗಳನ್ನೆಲ್ಲಾ ಧರಿಸಿಕೊಂಡು ಮುಂದಕ್ಕೆ ಮೂರು ಫರ್ಲಾಂಗು ಬಂದನಂತೆ. ದುಃಖ ಉಮ್ಮಳಿಸಿ ಬಂದು ಬಿಡ್ತು ದೇವರ ದಯಮಾರಗೆ.

"ಸಣ್ಣಕಂಬಿ" ಅಂದ

"ಏನು ಸ್ವಾಮಿ" ಅಂದಳು.

"ಇಲ್ಲೀಗೆ ಏಳು ವರ್ಷದ ಹಿಂದೆ ಬಂದು ಬಾಳಿದ್ದೆ ಬದುಕಿದ್ದೆ. ಇಲ್ಲಿನ ಮಡುವಿನಾಗೆ ನೀರು ಕುಡಿದು, ಏಳುಗೂಡಿನ ಆವಿನ ಹಾಲು ಕುಡಿಕೊಂಡು ನಾನು ದೊರೆಮಗನಾಗಿ ಬಾಳಿದ್ದೆ. ಇವತ್ತು ನನ್ನ ದನೀಗೆ ನಾನೇ ಕಳ್ಳೆ ಬಡಿದು ಹೊಂಟಂಗೆ ಆಗಿ ಬಿಡ್ತಲ್ಲ. ಹಾಲು ಕುಡಿದದ್ದು ಹುಲ್ಲು ಋಣ ಆದರೂ ಹರಿದು ಹೋಗಲಿ ಮೂರು ಮಾತಾದ್ರೂ ಹೇಳ್ತೀನಿ. ನಿಲ್ಲಲೇ ಸಣ್ಣ ಕಂಬಿ" ಅಂದ.

ತೆಲುಗಿನಾಗೆ ಆವು ಅಂತಾರೆ, ಕನ್ನಡದಾಗೆ ಗೋವು ಅಂತಾರೆ. ಆ ಘಳಿಗೇಲೇನೇ ಹಾಲು ಕುಡಿದದ್ದು ಋಣ ಹರೀಲಿ ಅಂತ ಹೇಳಿ ಗೋವುನ್ನ ಕರೀತೀನಿ ಅಂತ ಹೆಣ್ತಿಗೆ ಹೇಳುತಾನೆ

"ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ
ದ್ಯಾವಕ್ಕ ದಯಮಾರಿ, ಕಡೆ ಹುಟ್ಟಿನ ಕಟ್ಟಾಣಿ,
ಬುದ್ಧಿಯಲ್ಲಿ ಬುದ್ಧವಂತೆ, ಕೊಂಬಿನಲ್ಲಿ ಗಂಭೀರವಂತೆ,
ಬಾಲದಲ್ಲಿ ಬಲವಂತೆ, ಮುಖದಾಗೆ ಬಟ್ಟಿನ ಚೆಲುವೆ
ದೊಡ್ಡಳ್ಳಿಯಾಗೆ ವಡ್ಡ ಗಾಳ್ಯೋರೆ,
ಇವತ್ತಿಗೆ ನನ್ನ ಕೈಯಿನ ನೀರಿನ ಋಣ ಹರೀತಲ್ರೋ"

ಅಂದ ದೇವರ ದಯಮಾರ. ಅನ್ನ ನೀರಿನ ಋಣ ಹರಿದ್ಹೋಗಿಬಿಡ್ತು ಇವತ್ತು ನಮಗೂ ನಿಮಗೂ ಅಂತಿದ್ದಂಗೆ ಅಂಗೇನೇ ಹಾರಿಬಿಡ್ತಂತೆ ಗೊಡ್ಡುಗಾಳಿ ಅನ್ನೋ ಹಸು. ಅದೇ ಒಂದು ಆವಿನ ಗೂಡಿನಾಗೆ ಒಂದು ಗೊಡ್ಡುದನ, ಒಂದು ಗೊಡ್ಡು ಮ್ಯಾಕೆ ಇರ್ಲಿ ಅನ್ನೋಲ್ವ ಹಾಂಗೆ, ಒಂದು ಗೊಡ್ಡು ಗಾಳಿ ಇತ್ತಂತೆ ಅವನ ರೊಪ್ಪದಾಗೆ. ಇಪ್ಪತ್ತೈದು ಆಳುದ್ದ ಕಳ್ಳೆ ಮೇಲೆ ಹಾಸಿ ನೆಗೆದು ಬಿಡ್ತಂತೆ. ಈಚೆ ಬಂದು ಬಿತ್ತಂತೆ, ಇನ್ಯಾವ್ದಕ್ಕೂ ಬರಕ್ಕೆ ಆಗ್ಲಿಲ್ಲ. ಅದೊಂದು ಬಂದು ಬಿತ್ತಂತೆ. ಗಂಡ ಹೆಂಡತಿ ಇಬ್ರನ್ನೂ ಅಡ್ಡ ಹಾಕ್ಕೊಂಡು ಆ ದೇವರ ದಯಮಾರನ ಎದುರು ನಿಂತು ಮಾತಾಡ್ತಾ ಐತೆ. ಆ ಗೋವು ಅವನ ಹತ್ರ ಮಾತಾಡ್ತಾ ಐತೆ

"ಏನು ದೇವರ ದಯಮಾರ, ಏಳುವರ್ಷ ಕಾಲ ನೀನು ಹುಲ್ಲು ಮೇಯಿಸಿ, ನೀರು ಕುಡಿಸಿ, ನಮ್ಮಲ್ಲಿ ಒಬ್ಬನಾಗಿ ಬಾಳಿ ಒಂದು ದಿನ ಈ ಕರೇ ಕಂಬಳಿ ಮೇಲೆ ಈ ಹೆಣ್ಣು ಒಂದಿನ ಉಳೀತು ಅಂತ, ಈಗ ನಾವು ನಿಮ್ಮೊಟ್ಟಿಗೆ ಬರಬಾರದು ಅಂತ ಹದಿನಾಲ್ಕು ಆಳುದ್ದ ಕಳ್ಳೆ ಬಡಿದಿದ್ದೀಯಾ. ಈಗ ಮಾರನಹಳ್ಳಿಗೆ ಹೋಗಿ ಬ್ಯಾರೆ ಇರಾನಂತ ಹೆಂಡ್ತಿ ಮಾತು ಕೇಳಿ ಬ್ಯಾರೆ ಹೊರಟಿದ್ದೀಯಾ ದೇವರ ದಯಮಾರ. ನನ್ನೊಬ್ಬಳನ್ನು ಕರಕೊಂಡೋಗಿ ಮಾರನಹಳ್ಳಿ ಕೆರೆ ಏರಿ ಹತ್ರ ಗುಂಡಪ್ಪನೋರ ಮನೆ ತಾವ ಒಂದು ಆವಿನ ಗೂಡು ಹಾಕು. ಏಳು ಗೂಡಿನ ದನಾನ ನನ್ನ ಒಬ್ಳಿಂದ ಬೆಳಗುತೀನಿ. ನನ್ನ ಒಬ್ಬಳನ್ನ ಬಿಟ್ಟು ಹೋದಿ ಅಂದ್ರೆ ನೀನು ಊರು ಸೇರಲ್ಲ. ಬೆಳಗಿನ ಹೊತ್ತು ಭಾಗ್ಯವು ಕಾಣಲ್ಲ. ಕತ್ತಲು ಕರಿಮಲೆಯಾಗೆ ಈ ಕಾಡಿನಾಗೇ ಇರಬೇಕಾಗುತ್ತೆ" ಅಂತು.

ಮೂರುತಿಂಗಳು ಕಳೆಯೋ ಅಷ್ಟರಲ್ಲಿ ಕಾಡಿನಲ್ಲಿ ದಾರಿ ತಪ್ಪಿ ಕಣ್ಣು ಕಟ್ಟಿ ಕತ್ತಲಲ್ಲಿ ಬಿಟ್ಟಂಗಾಯಿತು. ಉಟ್ಟ ಬಟ್ಟೆಯೆಲ್ಲಾ ಹರಿದು ಹೋಗಿಬಿಡ್ತು. ತ್ಯಾಗದೆಲೆ ಇಟ್ಟುಕೊಂಡು ಮುಂದಕೊಂದು ಹಿಂದಕೊಂದು ಹೆಜ್ಜೆ ಇಟ್ಟುಕೊಂಡು ಹೆಜ್ಜೆ ಹಾಕೋ ಹೊತ್ತಿಗೆ ಕಷ್ಟ

ಆಗೋತು. ಅಡವಿ ಹಣ್ಣು ತಿನಕೊಂಡು, ಮಡುವಿನ ನೀರು ಕುಡಕೊಂಡು ಬರೋ ಹೊತ್ತಿಗೆ ಸಣ್ಣೋಳು ಕಂಬಕ್ಕ, ದೇವರ ದಯಮಾರ ಇಬ್ಬರೂ ಮೂರು ತಿಂಗಳು ವನವಾಸ ಮಾಡಿದ್ರು. ಊರಿಗೆ ಬರಾನ ಅಂದ್ರೆ ದಾರಿ ಸಿಕ್ಕಲಿಲ್ಲಾ.

"ಸಣ್ಣ ಕಂಬಕ್ಕ, ಈ ಹಸುವಿನ ಮಣಕ ನಮ್ಮನ್ನ ಬಿಟ್ಟು ಹೋಗಲ್ಲಾ. ಆ ಕೆರೆ ಏರಿ ತಾವ ಹೋದ್ರೆ ಆ ಮಣಕ ನೀರು ಕುಡಿಯಾಕೆ ಹೋಗ್ತೈತೆ. ನಾವು ಓಡಿಹೋಗಿ ಆ ಮೆಳೇನಲ್ಲಿ ಅಡಗಿ ಬಿಡಾನ' ಅಂತ ಅಲ್ಲಿಗ್ಹೋಗೋ ಹೊತ್ಗೆ ಆ ಮಾರನಹಳ್ಳಿ ನೋಡಿರುವ ಆ ಹಸು ಬಾಯಾರಿ ಬಿಟ್ಟಿತ್ತು. ನೀರು ನೋಡಿದ್ದೇ ಅಲ್ಲಿಗೆ ಹೋಯಿತು ನೀರು ಕುಡಿಯುವ ಅಂತ. ಅವರು ಮರೆಯಾಗಿ ಬಿಟ್ಟರು ಮುಳ್ಳಿನ ಮೆದೇಲಿ. ಇದು ನೀರು ಕುಡಿದು ಬಂದು ಇವರ್ನ ಹುಡುಕುತ್ತಾ 'ಅಂಬಾ' ಅಂತು. ಹಿಂದೆ ಹದಿನಾಲ್ಕು ಗೂಡಿನ ಹಸು ಇದ್ದುವಂತೆ. ರಾಮಣ್ಣ ಲಕ್ಷ್ಮಣ ಅಂಬೋ ಬೆಟ್ಟದಾಗೆ ಪಾಳೆಗಾರರೋವು. ನಾಯಕರೋನೋವು. ಅವನಿಗೆ ಕೇಳಿಸಿಬುಡ್ತಂತೆ. ಈ ಹಸು ಅಂಬಾ ಅಂತ ಕೂಗಿದ್ದು ಮಾರನಹಳ್ಳಿ ಹಳ್ಳದ ಬಡ್ಡೆಯಾಗೆ. ಅಂಬಾ ಅಂತ ಕರೆದು ಬುಟ್ಟನಂತೆ. ಬಾಲ ಎಗುರಿಸಿಕೊಂಡು ಹೋಗಿ ಪಾಳೇಗಾರನ ದನಗಳ ಗುಂಪು ಸೇರಿಬಿಡ್ತು ಈ ಹಸುವಿನ ಮಣಕ. ದೇವರ ದಯಮಾರ ಕಂಬಕ್ಕ ಅಲ್ಲಿಗೆ ಹೋಗವ್ರೆ, ಅಲ್ಲಿ ಕರೀತವ್ರೆ ನನ್ನನ್ನ ಅಂತ ಅದು ತಿಳಕೊಂತು. ಗೊತ್ತಾಗ್ಲಿಲ್ಲ ಅದಕ್ಕೆ ಇಲ್ಲಿ ಅಡಕ್ಕಂಡವ್ರೆ ಅಂತ. ಪಾಳೇಗಾರ್ರನ್ನ ದನ ಸೇರಿಬಿಡ್ತು. ಆ ಘಳಿಗೆಯಾಗೆ ದೇವರ ದಯಮಾರ ಕಂಬಕ್ಕ ಇಬ್ರೂನೂ 'ಆವಿನ ದನ ಪಾಳೇಗಾರನ ವಶ ಸೇರ್ತು. ಈ ಘಳಿಗೆಯಾಗೆ ತಪ್ಪಿಸಿಕೊಳ್ಳೋಕೆ ಹಾದಿ ಸಿಕ್ತು. ನಡಿ ಮಾರನಹಳ್ಳಿ ದಾರಿ ಹಿಡಿಯಾನ' ಅಂತ ಎದ್ದು ಅತ್ತ ನಾಲ್ಕು ಗಾವುದ, ಇತ್ತ ನಾಲ್ಕು ಗಾವುದ ಎತ್ತ ಹೋದರೂನೂ ದಾರಿಲ್ಲ. ದಾರೀನೇ ಸಿಕ್ಕಲಿಲ್ಲ. ಮೂರು ತಿಂಗಳ ಟೇಮು ಅಲ್ಲೆ ಆಗಿಬಿಡ್ತು. ಅಡವಿ ಹಣ್ಣು ತಿನಕಂಡು, ಮಡುವಿನ ನೀರು ಕುಡಕೊಂಡು, ತ್ಯಾಗದೆಲೆ ಉಟ್ಟುಕೊಂಡು ಆ ಕತ್ತಲು ಕರಿಮಲೆಯಾಗೆ ವನವಾಸ ಮಾಡ್ತಾ ಇದಾರೆ ದೇವರ ದಯಮಾರ, ಸಣ್ಣೋಳು ಕಂಬಕ್ಕ. ಮೂರು ತಿಂಗಳು ವನವಾಸದಾಗೆ ಅಲ್ಲೇ ತಿರುಗ್ತಾ ಇರುವಾಗ ಕಂಬೇರ ಕಂಬಕ್ಕಂಗೆ ಅಲ್ಲೇ ಒಂಬತ್ತು ತಿಂಗಳು ನೀರು ನಿಲ್ತು. ಆರು ಮೂರು ಒಂಬತ್ತು ತಿಂಗಳು ತುಂಬೋವರೆಗೂ ಅಡವಿ ಹಣ್ಣು, ಮಡುವಿನ ನೀರು ತಿನ್ನಕೊಂಡು ಅಲ್ಲೇ ವನವಾಸ ಮಾಡಿಬಿಟ್ಟಳು. ಒಂಬತ್ತು ತಿಂಗಳು ಒಂಬತ್ತು ದಿನ ತುಂಬೋ ಹೊತ್ತಿಗೆ ಅವರು ಉತ್ತರದ ಮುಖವಾಗಿ ಹೋಗ್ತಾ ಇದ್ದರು ಅವರು. ಅಲ್ಲೇ ಒಂದು ಆಲದ ಮರ. ಒಂಬತ್ತು ತಿಂಗಳು ತುಂಬೋ ಹೊತ್ತಿಗೆ ಆ ಆಲದ ಮರದ ಕೆಳಗೆ ಕುಂತುಕೊಂಡು "ದೇವರ ದಯಮಾರ" ಅಂದಳು. "ಏನು?" ಅಂದ ಅವ. ಜೋಳಿಗೆಯಾಗಿದ್ದ ಹಣ್ಣೆಲ್ಲಾ ತೆಗೆದು ಇಟ್ಟಳು. ಮೂರು ಮುಷ್ಟಿ ತೆಗೆದುಕೊಟ್ಟ, ತಿಂದಳು. "ಮೂರು ಮಿಟ್ಟಿಕೆ ತಿಂದಿದೀನಿ. ಈಗ ನೀರು ಕುಡೀಬೇಕು" ಅಂದಳು. ಮುಂಗೈ ಬೊಗಸೆಯಾಗೆ ನೀರು ತಂದು ಕೊಟ್ಟ. "ಹಣ್ಣು ತಿಂದಿದೀನಿ. ನೀರು ಕುಡಿದಿದೀನಿ ದೇವರು ದಯಮಾರ ಒಂಬತ್ತು ತಿಂಗಳು ತುಂಬಿ ಒಂಬತ್ತು ದಿನವೂ ತುಂಬಿ ಬಂತು. "ಇದೇ ಆಲದ ಮರದ ಅಡಿಯಾಗೆ ನನಗೆ

ಹೆರಿಗೆ ಆಗಿ ಬುಡತ್ತೆ. ಸೂತಕ ಬರ್ತಾವೆ, ಶಾಸ್ತ್ರ ಕೆಟ್ಟಾವು. ನೇಮ ಕೆಟ್ಟಾವು. ನೀನು ದೂರ ಹೋಗಿಬಿಡು. ಸತ್ಯಾ ಕೆಟ್ಟಾವು. ನೀನು ದೂರ ಹೋಗಿಬಿಡು" ಅಂದಳು. ಹಂಗಂತಿದ್ದ ಹಾಗೆ ಅಡ್ಡ ಹಾರಿ ಹೋಗಿಬಿಟ್ಟ ದೇವರ ದಯಮಾರ. ಅಲ್ಲೊಂದು ತ್ಯಾಗದ ಮರದ ಮ್ಯಾಲೆ ಕುಂತ್ಕಂಡು ಹಿಂದಕ್ಕೆ ತಿರುಗಿ ನೋಡೋವೊತ್ಗೆ ಹುಟ್ಟಿದ ಕಂದ ಮುಂದಕ್ಕೆ ಬಿದ್ದು ಬಿಡ್ತು. ಕಂಬೇರ ಕಂಬಕ್ಕ ಹಿಂದಕ್ಕೆ ಬಿದ್ದುಬಿಟ್ಲು. ಅದೇ ಆಲದ ಮರದ ಕೆಳಗೆ ಹೆರಿಗೆ ಆಗಿಬಿಟ್ಟಿತು. ಮೂರು ಘಂಟೆ ಹೊತ್ತಾದ್ರೂನೂ ಅಗಸರೋನೂ ಇಲ್ಲ, ಮಡಿವಾಳರೋನೂ ಇಲ್ಲ; ನೋಡೋರಿಲ್ಲ, ಮಾಡೋರಿಲ್ಲ. ಮೂರುಘಂಟೆ ಹೊತ್ತಾದ್ರೂನೂ ಕಂಬಕ್ಕ ಹಿಂದಕ್ಕೆ ಬಿದ್ದವಳೆ, ಕಂದ ಮುಂದಕೆ ಬಿದ್ದೈತೆ. ಆತ ತ್ಯಾಗದ ಮರದ ಮ್ಯಾಲೆ ಕುಂತು ನೋಡೋ ವೊತ್ತಿಗೆ ಸತ್ತೋಗವ್ಳೋ ಬದುಕವ್ಳೋ ಗೊತ್ತಿಲ್ಲ. ಹೆರಿಗೆ ಆಗ್ಬೇಕಾದ್ರೆ ಹೆಣ್ಣು ಮಕ್ಕಳಿಗೆ ಎಷ್ಟು ನೋವಿರುತ್ತೆ. ಇದು ಏನೂ ಅನ್ನೋದೂ ಕಾಣಲ್ವಲ್ಲ. ಈಗ ಉಟ್ಟು ಕಣಾಕೆ ಸೀರೆ ಇಲ್ಲ. ಹೆರಿಗೆ ಆಗೈತಲ್ಲಾ. ಕುಲ ಹನ್ನೆರಡು ಜಾತಿಯಾಗೂ ಹೆಣ್ಣು ಅನ್ನೋದು ಕರ್ಮಗೇಡಿ ಜಾತಿ ಇದು. ಉಟ್ಟಕಣಾಕೆ ಬಟ್ಟೆ ಬರೆ ಇಲ್ಲದೆ ಈ ಕಶ್ಮಲ ಗಂಡುಸ್ರಿಗೆ ತೋರಿಸಬಾರ್ದು ಅಂತ ಮಲಗಿದಾಳೆ ಕಂಬಕ್ಕ. ಅದೇ ತೇಗದ ಮರದಾಗೆ ನಾಕು ವಸ್ತ್ರ ಕಟ್ಟಿ ಬುಟ್ಟು ಒಂದು ಬೆಣಚುಕಲ್ಲು ಹೊಡೆ ಹೊಯ್ದು ಹಾಸಲ ದಾರಿಗೆ ಹೋಗಿ ಹಾಸಲು ನಾರು ತಂದು ಅದನ್ನು ಹಗ್ಗದ ನುರಿ ನುರಿದು ಅದನ್ನು ಕಟ್ಟಿ ಒಂದು ಎತ್ತರದಾಗೆ ನಿಂತು ಬೀಸಿ ಎಸೆದುಬಿಟ್ಟ, ಆಯಮ್ಮನ ತಲೆದಿಂಬಿನಾಗೆ ಬೀಳೋ ಹಾಂಗೆ.

"ಕಂಬಕ್ಕ" ಅಂದ.

"ಯಾಕ್ ಸ್ವಾಮಿ" ಅಂದಳು ಮೆತ್ತಗೆ.

"ನಿನಗೆ ಇಲ್ಲಿ ಯಾರೂ ಸಾರ್ನೋರಿಲ್ಲ. ದಿಕ್ಕಿಲ್ಲ. ಮುಂದಕ್ಕೊಂದು ವಸ್ತ್ರ ಉಟ್ಟುಕೊಂಡುಬಿಡು. ಹಿಂದಕ್ಕೊಂದು ಇಟ್ಕಂಬಿಡು. ತಲೆಗೊಂದು ಕಟ್ಟಿಕೊಂಡುಬಿಡು. ಒಂದು ವಸ್ತ್ರದಾಗೆ ನಡುಕಟ್ಟಿಕೊಂಡು ಬಿಡು. ಅಷ್ಟು ಕೆಲಸಮಾಡು. ಸೂರಿಲ್ಲ ಸುಖ ಇಲ್ಲ ಒಂದು ಮಗೂ ಕರುಳುಬಳ್ಳಿ ಕತ್ತರಿಸೋಕೂ ಏನೂ ಇಲ್ಲ. ಅ ಬೆಣಚುಕಲ್ಲು ಇಕ್ಕಿದೀನಿ. ಅ ಪೊಟ್ಟಣದಾಗೆ ಅದರಾಗೆ ಹೊಕ್ಕಳು ಬಳ್ಳಿ ಕೊಯ್ದು ಬಿಡು. ಬರೋದೆಲ್ಲಾ ಬರಲಿ. ಆ ಮಗೂನ ತೊಡೇಲಿ ಹಾಕ್ಕೊಂಡು ಹಾಲು ಕುಡಿಸು. ಬರೋದೆಲ್ಲಾ ಬರಲಿ. ಆಮೇಲೆ ನೋಡೋಣ ಅಂದ. ಬರೋದೆಲ್ಲಾ ಬರಲಿ ಆ ಮುದ್ದು ಮೂಡಲಗಿರಿ ದಯವೊಂದಿರಲಿ" ಅಂದ.

ಅವರಿಗೆ ಕೊನೆಗಾಲ ಅಲ್ಲಿ. ಅಂಥ ಕಾಲ. ಆ ಘಳಿಗೆಗೇನೇ ಅವನು ಹೇಳ್ದಂಗೇನೆ ಈ ಯಮ್ಮ ಎಲ್ಲಾ ಮಾಡಿ ಆ ಮಗೂನ ಹೊಕ್ಕಳ ಕೊಯ್ದು ಮಗೂನ್ನ ತೊಡೆಮೇಲೆ ಹಾಕ್ಕೊಂಡು ಹಾಲು ಕೊಡಬೇಕು ಅನ್ನೋ ಹೊತ್ತಿನಾಗೆ ಮೂರು ದಿನ ಆಗೇ ಹೋಯಿತು. "ಈಗ ಈ ಮೂರುದಿನದ ಸೂತಕ ಯಾರು ಕಳೀತವ್ರೆ? ಅಗಸರು ಎಲ್ಲವ್ರೆ? ಮಡಿವಾಳರು ಎಲ್ಲವ್ರೆ? ನೀರು ಹಾಕೋವ್ರು ಯಾರಿಲ್ಲ. ಅದಕ್ಕೆ ಮೂರು

ಕಡೆ ಮೂರು ಚಿಲುಮೆ ತೆಗೆದು ಬಿಡ್ತೀನಿ. ಮೂರು ಮುಳುಗು ಹಾಕಿಬಿಡು. ಮೂರು ಬದುವಿನ ನೀರು ಕುಡಿದುಬಿಡು. ಮೂರು ದಿನದ ಸೂತಕ ಕಳೀತು. ಐದನೇ ದಿನ ಐದು ಚಿಲುಮೆ ತೆಗೆದು ಐದು ಸಾರಿ ನೀರು ಕುಡಿದು ಐದು ಸಾರಿ ಎದ್ದು ಐದು ದಿವಸದ ಸೂತಕ ಇವತ್ತಿಗೆ ಹೋದವು" ಅಂದ. ಒಂಬತ್ತು ದಿನ ತುಂಬಿದ್ದರಿಂದ ಒಂಬತ್ತು ಚಿಲುಮೆ ತೆಗೆದು ಒಂಬತ್ತು ಸಾರಿ ನೀರು ಕುಡಿದು ಒಂಬತ್ತು ಸಾರಿ ಮುಳುಗಿ ಒಂಬತ್ತು ಸಾರಿ ಎದ್ದಳು. ಒಂಬತ್ತು ದಿನದ ಸೂತಕ ಇವತ್ತಿಗೆ ಹೋದವು ಅಂದ. ತಿಂಗಳು ತುಂಬಿದ್ದ ದಿನ ಒಂದು ಚಿಲುಮೆ ತೆಗೆದು, ಒಂದು ಸಾರಿ ನೀರು ಕುಡಿದು, ಒಂದು ಸಾರಿ ಮುಳುಗಿ ಒಂದ್ಸಾರಿ ಎದ್ದು "ತಿಂಗಳ ಸೂತಕ ಎಲ್ಲಾರಿಗೂ ಹೋಯಿತು" ಅಂದಳು. ತಿಂಗಳಿಗೆ ಹೋಗುತ್ತೆ ಗೊಲ್ಲರ ಸೂತಕ. ಮುಂದಕೆ ಒಂದು ಗುಡ್ಲು ಹಾಕಬೇಕು. ಅ ಗುಡ್ಲಿಗೆ ಬಂದು ತೊಡೆಮೇಲೆ ಮನಿಗಿಸಿಕೊಂಡು ಆ ಮಗೀಗೆ ಹಾಲು ಕೊಡಬೇಕು ಅನ್ನೋಹೊತ್ತಿಗೆ

> "ಸಣ್ಣ ಕಂಬಕ್ಕ" ಅಂದ. "ಯಾಕೆ ಸ್ವಾಮಿ?" ಅಂದಳು. "ಇವತ್ತಿಗೆ ನೀನು ಮುಟ್ಟಿಕೊಂಡಿರೋ ನೀರು ಬಿಸಿನೀರು ತಣ್ಣೀರು ಎಲ್ಲಾ ಮುಂದೆ ಹುಟ್ಟೋ ನಮ್ಮ ಗೊಲ್ಲ ಮಕ್ಕಳಿಗೆಲ್ಲ ಹರಿಯೋ ನದಿಯಾಗಲಿ ಹುಯ್ಯೋ ಮಳೆಯಾಗಲಿ ಅಂದ. ನೀನು ಮೂರುದಿನ ಸೂತಕ ಕಳಕೊಂಡಿದೀಯಾ. ತಣ್ಣೀರಾಗೆ ಐದುದಿನದ ಸೂತಕ ಕಳಕಂಡಿದೀಯಾ. ತಿಂಗಳು ಸೂತಕಾನೂ ನೀನು ಕಳಕಂಡಿದೀಯಾ. ನೀನು ಮುಟ್ಕಂಡಿರೋ ತಣ್ಣೀರು ಬಿಸಿನೀರಿನಾಗೆ ಈ ನಾಡಿನಾಗೆ ಇನ್ನು ಮುಂದೆ ಹುಟ್ಟೋ ಈ ನಾಡು ನರಲೋಕ, ಭೂಮಿ ಭೂಲೋಕದ ಗೊಲ್ಲ ಹೆಣ್ಣುಮಕ್ಕಳಿಗೆಲ್ಲಾ ಇದೇ ಶಾಪ ನಿಂತೋಗಿ ಬಿಡಬೇಕಲ್ಲ. ಸೂತಕವಾದರೆ ನಾಲ್ಕು ದಿನ. ಎದ್ದರೆ ನಾಲ್ಕು ತಿಂಗಳು. ಸತ್ತರೆ ಮೂರು ದಿನ. ಹೆಣ್ಣುಮಕ್ಕಳು ತಿಂಗಳಿಗೆ ಒಂದು ಸಾರಿ ಹೊರಗಡೆ ಆದರೆ ನಾಲ್ಕು ದಿನ ಆಚೆ ಇರಬೇಕು".

ಈ ನಾಡಿನಾಗೆ ಹುಟ್ಟೋ ಗೊಲ್ಲ ಹೆಣ್ಣುಮಕ್ಕಳಿಗೆ ಇದೇ ಶಾಪ ನಿಂತುಹೋತು. ಇದು ಸ್ವಾಮಿ ಮಾಡಿರೋ ಶಾಪ ಈ ಕಾಡುಗೊಲ್ಲರಿಗೆ ಸ್ವಾಮಿ. ಆ ಘಳಿಗೇಲಿ ಸಣ್ಣೋಳು ಕಂಬಕ್ಕಗೆ ಎಲ್ಲಾ ತೀರ್ಮಾನ ಕೊಟ್ಟು ತಿಂಗಳು ತುಂಬಿದ್ದ ದಿನ ತೊಡೆ ಮೇಲೆ ಮಗಾ ಹಾಕ್ಕೊಂಡು ಮಗಾಗೆ ಹಾಲು ಕೊಡೋ ಹೊತ್ತಿನಾಗೆ

> "ಮಾವಾ, ತಿಂಗಳು ತುಂಬೋವರೆಗೂ ಕಾಡಿನ ಹಣ್ಣು, ಕವಳೆಹಣ್ಣು ಎಲ್ಲಾ ತಂದು ನನ್ನ ಆರೈಕೆ ಮಾಡಿದ್ದೀಯಾ ಈ ಕಾಡಿನಾಗೆ. ಹೆತ್ತ ಹೊಟ್ಟೆ; ನನಗೆ ಹೊಟ್ಟೆಯಾಗೆ ಬೆಂಕಿ ಬಿದ್ದ ಹಾಗೆ ಆಗ್ತೈತೆ. ಈ ಒಡಲುರಿ ನನಗೆ ತಡೆಯೋಕೆ ಆಗಲ್ಲ. ಹೆತ್ತ ಮನೆಗೆ ಎತ್ತು ಕಟ್ಟು ಅಂತ ಹಿರೇರು ಹೇಳ್ತಾರೆ. ಆದರೆ ನನಗೆ ತಡೆಯೋಕೆ ಆಗಲ್ಲ. ನಾಲ್ಕು ಜೋಳಿಗೆ ಹಣ್ಣು ತುಂಬಿಕೊಂಡು ಬಂದು ಬಂಡೆಮ್ಯಾಗೆ ಕುಂತು ಈ ಬಂಡೆ ಮ್ಯಾಗೆ ವಟ್ಟಿ ಒಬ್ಬಳೇ ತಿಂದು

ನನ್ನ ಹೊಟ್ಟೆ ಉರಿ ಕಮ್ಮಿ ಮಾಡ್ಕೊಂಬೇಕು. ಜೋಳಿಗೆ ಕಟ್ಟಿ ಬಿಟ್ಟು ಈ ಆಲದ ಮರಕೆ ಮಗಾ ಹಾಕಿ ಇಬ್ಬರೂ ಎರಡೆರಡು ಜೋಳಿಗೆ ತಗಂಡು ಹೋಗಿ ಕಾಡಿನಾಗಿಂದ ಹಣ್ಣು ತೊಗೊಂಡು ಬರಾನ ನಡಿ" ಅಂದಳು.

"ನಾಲ್ಕು ಜೋಳಿಗೆ ಹಣ್ಣನ್ನೂ ನಾನೊಬ್ನೇ ತರ್ತೀನಿ. ಈ ಮಗಾ ಬಿಟ್ಟು ಬರಾದು ಬ್ಯಾಡಾ ನೀನು"

ಅಂದ್ರೂ ಇವನ ಮಾತ ಮೀರಿ ಜೋಳಿಗೆ ಕಟ್ಟಿ ಈ ಮಗನ್ನ ಜೋಳಿಗೇಗೆ ಹಾಕಿ ಎರಡು ಜೋಳಿಗೆ ತೊಗೊಂಡು ಅವಳು ಎರಡು ದಿಣ್ಣೆ ಮೇಲೆ ಹೊಂಟಳು. ಇವನೆರಡು ಜೋಳಿಗೆ ತೊಗೊಂಡು ಹೊಂಟ. ಆ ಹಣ್ಣಿಗಿಂತ ಈ ಹಣ್ಣು ಚೆಂದಾಗ್ಯೆತೆ. ಈ ಹಣ್ಣಿಗಿಂತ ಆ ಹಣ್ಣು ಚೆಂದಾಗ್ಯೆತೆ ಅಂತ ಅತ್ತಗಡೆ ಗಿಡದಾಕಿಂತ ಇತ್ತಕಡೆ ಗಿಡದಾಗೆ ವೈನಾಗ್ಯೆತೆ ಅಂತ ಈ ಗಿಡದಾಗೆ ಗೊಂಚಲುಗೊಂಚಲೇ ಹಿಡಿದಾವೆ ಅಂತ ಹೇಳಿ ಆ ದಿಣ್ಣೆ ಈ ದಿಣ್ಣೆ ಸುತ್ತಿ ಹೊತ್ತು ಮುಳುಗೋವರೆಗೂ ನೂರಾ ಒಂದು ಗಾವುದ ಹೋಗೆ ಬಿಟ್ಟಾರೆ. ಮಗೀನ ಮ್ಯಾಗಳ ಗ್ಯಾನಾನೇ ಬಿಟ್ಟುಬಿಟ್ಟರು. ಹೊಟ್ಟೆ ನಿನ್ನಿಂದ ಕೆಟ್ಟೆ. ಮಗೀಗೆ ನೋಡು ಏನು ವನವಾಸ. ನೂರಾ ಒಂದು ಗಾವುದ ಹೋಗವ್ರೆ. ಅಷ್ಟೊತ್ತಿಗೆ ಹೊತ್ತು ಮುಳುಗೋ ಹೊತ್ತು.

"ದ್ಯಾವರ ದಯಮಾರ" ಅಂದ್ಲು.

"ಯಾಕೇ?" ಅಂದ.

"ಎಲ್ಲಿ ಬಿಟ್ಟು ಬಂದುವೋ ಮಗೀನ? ನಾಲ್ಕು ಜೋಳಿಗೆ ತುಂಬಿದವಲ್ಲಪ್ಪಾ ಹಣ್ಣು". ಆಗ ಹಿಂದಕ್ಕೆ ತಿರುಗಿ ನೋಡ್ತಾನೆ.

"ನೂರಾ ಒಂದು ಗಾವುದ ಬಂದಿದೀವಿ ಸಣ್ಣಕಂಬಿ ಈ ಹಣ್ಣಿಗಾಗಿ". ಅಲ್ಲಿಂದ ಹಿಂದಕ್ಕೆ ತಿರುಕ್ಕೊಂಡು ಹಗಲೂ ಇರಳೂ ಒಂಬತ್ತು ದಿನ ತಿರುಗಾಡಿಕೊಂಡು ಹುಡುಕಿ ಬಿಟ್ಟರು ಆ ಕತ್ತಲು ಕರಿಮಲೆಯಾಗೆ ಅ ಅಲದ ಮರವೇ ಸಿಕ್ಕಲಿಲ್ಲ. ದಾರಿ ತಪ್ಪಿ ಬಿಡ್ತು. ಆರು ಮೂರು ಒಂಬತ್ತು ದಿನ ತುಂಬೋ ತನಕ ಹುಡುಕಿದರೂ ಸಿಕ್ಕಲಿಲ್ಲ. ಕತ್ತಲು ಕರಿಮಲೆಯಾಗೆ ಆ ಆಲದ ಮರ ಸಿಕ್ಕಲಿಲ್ಲ. ಒಂಬತ್ತು ದಿನತುಂಬಿದರೂ ಮಗುವೇ ಸಿಕ್ಕಲಿಲ್ಲ.

"ಸಣ್ಣ ಕಂಬಿ" ಅಂದ. "ಯಾಕೇ?" ಅಂದ್ಲು. "ಯಾಕೆ ಕಣ್ಣೀರು ಹಾಕ್ತೀಯಾ? ನೀನು ಅಳೋದು ಕಣ್ಣೀರು ಹಾಕೋದು, ದುಃಖ ಮಾಡೋದು ಯಾನೂ ಬ್ಯಾಡ. ಹಿಂದೆ ನಾನು ಮಾಡಬಾರದಂತಾದ್ದೊಂದು ಕೆಟ್ಟ ಕೃತ್ಯ ಮಾಡಿದ್ದೆ. ಆ ಸದ್ಗುರು ಆ ಶಿವ ಈಗ ನನಗೆ ಅರಿವು ಕೊಟ್ಟುಬಿಟ್ಟ. ಯೇಳ್ತೀನಿ ಕೇಳು ನಾ ಮಾಡಿರೋ ತಪ್ಪು. ಆವಿನ ಗೂಡಿನ ದನನೆಲ್ಲ ಒಂದೇ ರೊಪ್ಪಕ್ಕೆ ಕೂಡಿ ಏಳು ಏಳು ಹದಿನಾಲ್ಕು ಬಿದಿರು ಗಳದ ದಬ್ಬೆ ಅಡ್ಡಡ್ಡಕ್ಕೆ ಬಡಿದು ಇಪ್ಪತ್ತೈದು ಆಳುದ್ದ ಕಳ್ಳೆ ಬಾಗಿಲಿಗೆ ನಿಲ್ಲಿಸಿ ನಿನ್ನ ಕರಕೊಂಡು ಮಾರನೇ ದಿವಸ ಮಾರನಹಳ್ಳಿಗೆ ಹೋಗಿ ಪಾಲು ತೊಗೊಂಡು ಬ್ಯಾರೆ ಬಾಳಾನಂತ ನಾನು ಬರುವಾಗ್ಗೆ, ಆಕಳು ಗೂಡಿನ ದನ

ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ದ್ಯಾವಕ್ಕ ದಯಮಾರಿ, ಕಡೆ ಹುಟ್ಟಿನ ಕಲ್ಯಾಣಿ,
ಬುದ್ಧಿಯಲ್ಲಿ ಬುದ್ಧಿಮಂತೆ, ಕೊಂಬಿನಲ್ಲಿ ಗಂಭೀರವಂತೆ,
ಬಾಲದಲ್ಲಿ ಬಲವಂತೆ, ಮುಖದಲ್ಲಿ ಸುಂದರ ಸುಕ್ಕೆ ಬೊಟ್ಟಿನ ಚೆಲುವೆ,
ವಡ್ಡುಗಾಳೇರ ಇವತ್ತಿಗೆ ಹರೀತ್ರಪಾ
ನನ್ನ ಕೈಯಾಗಿನ ಅನ್ನಾ ನೀರಿನ ಋಣ

ಅಂದಾಗ 'ಅಂಬಾ' ಅಂತೇಳಿ ಆ ಇಪ್ಪತ್ತೈದು ಆಳೆತ್ತರದ ಬಿದಿರು ಗಳ ಎಗರಿ ಬಂದಿತ್ತು ಆ ಗೊಡ್ಡು ಗಾಳಿ ಅಂಬೋ ಹಸುವಿನ ಮಣಕ. ಅದೊಂದನ್ನ ಕರಕೊಂಡು ನಾವು ಮಾರನಹಳ್ಳಿಗೆ ಹೋಗಿದ್ದರೆ ನಮಗೆ ದಾರಿ ಮಾರ್ಗ ಎಲ್ಲಾ ಸಿಕ್ಕೋದು. ಅದು ಹಳ್ಳದಾಗೆ ನೀರು ಕುಡಿಯಾಕೇಂತ ಗುಂಡಣ್ಣ ಅವರ ಮನೆತಾಕ ಕೆರೆಯಾಗೆ ಹೋದಾಗ ಪಕ್ಕದ ಮೆಳೆಯಾಗೆ ನಾವು ಅಡಕ್ಕಂಡವು. ಅದು ನೀರು ಕುಡಿದು ಮ್ಯಾಲೆ ಬರುವಾಗ ರಾಮಣ್ಣ ಲಕ್ಷ್ಮಣ ಎಂಬೋ ನಾಯಕರೋನು ಹಸು ಬಿಟ್ಕಂಡಿದ್ದು, ಅವನು ಕರೆದಿದ್ದು ಕೇಳಿಸ್ಕಂಡು ಆ ಹಸಿಮಣಕ ಹೋಗಿ ಆ ಆವಿನ ದನದ ಗುಂಪು ಸೇರಿತು. ಅದು ಏಟು ಅಯ್ಯೋ ಅಪ್ಪಾ ಅಂತ ಹೋಗಿತ್ತೋ. ಅಲ್ಲಿ ಹುಲ್ಲು ನೀರು ಇಲ್ಲದೇನೆ ಎಷ್ಟು ಗೋಳಾಡ್ತಾ ಐತೋ ಏನೋ. ಅ ದನಗಳಿಗೆ ಅನ್ಯಾಯ ಮಾಡಿ ಹಸಿ ಮಣಕ ಹತ್ತಿ ಎದ್ದು ಬೆನ್ನಲ್ಲಿ ಬಂದರೂ ಬಿಟ್ಟು ಬಂದಿದ್ದಕ್ಕೆ ಅದರ ಗೋಳು ನಮಗೆ ಸಿಕ್ತು. ದೇವರು ನಮ್ಮ ಪುತ್ರ ಸಂತಾನಾನೂ ಹಂಗೆ ತಪ್ಪಿಸಿಹಾಕಿಬಿಟ್ಟಿತು. ಬಿಡು ಇನ್ನು ಮಗೀನ್ನ ಮೇಗಳ ಆಸೆಯ. ಮಗನ ಮೇಲಿನ ಆಸೇನಾ ಬಿಟ್ಟುಬಿಡು. ಈಗ ಆಲದ ಮರದ ಮೇಗೇನೇ ನಾನು ಅಡಗಿದ್ದೆನಲ್ಲ. ಅಲ್ಲಿ ಯಾತ್ಯಾತರದ್ದು ಮರ ಇತ್ತು ಹೇಳು ಕಂಬೇರ ಕಂಬಕ್ಕ?" ಅಂದ.

"ಮಾವಾ ಯಾವ್ದೂ ಗುರ್ತು ಇಲ್ಲ. ಆಲದ ಮರವೊಂದೇನೇ ಅಲ್ಲವಾ ಅಲ್ಲಿ ಇದ್ದದ್ದು? ಬಾಕಿ ಯಾವ ಮರಾನೂ ನನಗೆ ಗೊತ್ತಿಲ್ಲ. ಆಲದ ಮರ ಒಂದಿತ್ತು, ಅದಲ್ಲದೆ ಬೇವಿನ ಮರ, ಜಿವ್ವೆ ಮರ, ಇವೆಲ್ಲಾನೂ ಅಲ್ಲಿತ್ತು. ಆಲದ ಮರ ಮುಂದೆ ಅದರ ಹಿಂದೆ ಜಿವ್ವೆ ಮರ, ಬೇವಿನ ಮರ, ಅತ್ತಿ ಮರ ಎಲ್ಲ ಇದ್ದವು. ನಾವು ಈ ಕಡೆ ನೋಡೋ ಹೊತ್ತಿಗೆ ಆ ಕಡೆ ಬೇಲಿ ಯಾರೋ ಕಿತ್ಹಾಕಿಬಿಟ್ಟಿದಾರೆ. ಆ ಮರದ ಹತ್ರ ಮೂರಾಳು ಉದ್ದದ ಮೂಗುತ್ತ ಇತ್ತು." "ಏನೋಪ್ಪ ಅದು ನನೀಗೆ ಗೊತ್ತಿಲ್ಲ. ಈಗ ನಾವು ಅವನನ್ನ ಕರೆಯೋದು ಬ್ಯಾಡ. ಹುಡುಕೋದು ಬ್ಯಾಡ. ಅವನಿಗೆ ನಾವು ತಂದೆ ತಾಯಿ ಅಲ್ಲ. ಅವನು ನಮಗೆ ಮಗಾ ಅಲ್ಲ. ಕರಿಮಲೆಯಾಗೆ ಅವನು ಕರ್ಮಕೆ ಹುಟ್ಟಿದ ಮಗ, ಧರ್ಮಕೆ ಹುಟ್ಟಿದ ಮಗ ಅಲ್ಲ. ಬಿಡು ಮಗೀನ ಮ್ಯಾಗಳ ಆಸೆ. ನಾವು ಅವನಿಗೆ ತಂದೆ ತಾಯಿ ಅಲ್ಲ. ನಮಗೆ ಅವನು ಮಗನಲ್ಲ. ಬುಟ್ಟು ಬುಡು ಮಗೀನ ಮ್ಯಾಗಳ ಆಸೆ". "ಹೆತ್ತ ಹೊಟ್ಟೆ ಒಂಬತ್ತು ತಿಂಗಳು ಈ ಭಾರ ಹೊತ್ತು ಕೊಂಡು ಈ ಭೂಮಿ

ಮ್ಯಾಲೆ ಹಾಕಿ ಹ್ಯಾಂಗೆ ನಾನು ಈಗ ಆ ಮಗೀನ ಮರೀಬೇಕು" "ನೀನು ನಿಮ್ಮಪ್ಪ ನಿಮ್ಮ ತಾತ ಎಲ್ಲಾ ಮರೆತುಬಿಡಬೇಕು. ಅವನನ್ನು ಸಾಕೋ ಅಂತ ದೇವರು ಧೀರರು ಬ್ಯಾರೆ ಇದ್ದಾರೆ. ಹಾಲು ಮರದಮ್ಮ ಹಾಲು ಕುಡಿಸಬೇಕು. ಜಿವ್ವೆ ಮರದಮ್ಮ ಉಯ್ಯಾಲೆ ಆಡಿಸಬೇಕು. ಮೂಗುತ್ತದಾಗೆ ಇರೋ ನಾಗೇಂದ್ರ ಜಂಬು ಎಳೀಬೇಕು. ಜಂಬಿಗೆ ಬಾಣಕ್ಕೆ ಸಿಗಿದು ಅದನ್ನು ನನ್ನ ಮಗನ ತೊಟ್ಟಿಲಾಗೆ ಕಟ್ಟಬೇಕು. ತೊಟ್ಟಿಲಿನ ಮ್ಯಾಲೆ ಚಿಕ್ಕ ಜೇನಿನ ಕೊಡ ಇಡಬೇಕು. ನನ್ನ ಮಗ ಕಾರ್ ಕಾರ್ ಅಂದಾಗಲೆಲ್ಲ ನಾಗೇಂದ್ರ ಹೋಗಿ ನಿನ್ನ ಹೆಡೆಯಿಂದ ಆ ಜೇನು ಕೊಡಕ್ಕೆ ಬಡೀಬೇಕು. ಆ ತುಪ್ಪ ಮಗೀನ ಬಾಯಿಗೆ ಬೀಳಬೇಕು. ಆತ ನಿಮ್ಮ ಮಗನೇ ಹೊರತು ನನ್ನ ಮಗ ಅಲ್ಲ".

ಅಷ್ಟು ಅಂದು ಮುಂದಕ್ಕೆ ಮೂರು ಹೆಜ್ಜೆ ಇಡಬೇಕು ಅನ್ನೋ ಹೊತ್ತಿಗೆ ಬಂದು ಬಿಟ್ಟಳು ಮನೆ ದೇವರು ಗೌರಸಂದ್ರದ ಮಾರಕ್ಕ. ಬತ್ತಿದ್ದಂಗೆ

"ಮಹಾತಾಯಿ" ಅಂದ.

"ಯಾಕಪ್ಪಾ, ನನ್ನ ಹತ್ರಕೆ ಬರಬೇಡಾ ತಾಯಿ ನೀನು. ಕರಿ ಕತ್ತಲೆ ಕರಿಮಲೆಯಲ್ಲಿ ನಾನು ಕರ್ಮಕ್ಕೆ ಗುರಿಯಾಗಿ ಬಿಟ್ಟಿದೀನಿ. ನನ್ನ ಸತ್ಯ ಸಾಹಸ ಎಲ್ಲ ಇಲ್ಲಿ ಇಳಿದೋಗಿ ಬಿಟ್ಟೈತೆ. ನೀನು ನನ್ನ ನೆರಳು ಹಾಯಿಸ್ಕೋಬೇಡಾ ಮಹತಾಯಿ ಮಾರಕ್ಕ ನೀನು. ಚಿಕ್ಕದಲೆ ದೊಡ್ಡಯ್ಯ, ದಳನಾಯಿ ದೊಡ್ಡಯ್ಯ, ದೊಡ್ಡಸಿದ್ದೇಗೌಡ, ಪೂಜಾರಿ ದೊಡ್ಡಯ್ಯ, ಚಿಕ್ಕಸಿದ್ದೇಗೌಡ, ಕಲ್ಲೇಗೌಡ, ದೇವರ ದಯಮಾರ ನಾವು ಏಳುಜನ ಚಿತ್ತ ಮುತ್ತಿ ಮಕ್ಕಳು. ಸೂರ್ಯನ ವಂಶದಲ್ಲಿ ಹುಟ್ಟಿದೋರು. ನಮ್ಮ ಏಳು ಜನದ ಹಿಂದೆ ಬಡಚಿತ್ತಮ್ಮ ಅನ್ನೋಳು ಒಬ್ಬಳು ಹೆಣ್ಣು ಮಗಳು ಹುಟ್ಟವಳೆ. ಮಾರನ ಹಳ್ಳಿಯಾಗೆ ಅವ್ಳೆ ಅವಳು. ನೀನು ಹೋಗಿ ಅವಳ ಕೈಲಿ ಹೇಳಿಬಿಟ್ಟರೆ ಈ ಮಗಾನ ಆಕೆ ಒಬ್ಬಳೇ ತೊಗೊಂಡೋಗಬೇಕು.. ಈ ವಂಶದಾಕೆ ಆಕೇನ ಬಿಟ್ಟು ಮತ್ತೆ ಯಾರು ಬಂದರೂ ಆ ಮಗ ಕಣ್ಣಿಗೆ ಕಾಣೋದಿಲ್ಲ. ಅವಳು ಸಾಹಸವಂತೆ ಬಡ ಚಿತ್ತಮ್ಮ. ಏಳು ಜನ ಅಣ್ಣದೀರ ಹಿಂದೆ ಹುಟ್ಟಿದೋಳು ಅವಳು. ಅವಳು ಮಾರನೋರ ಗೊಲ್ಲರೋಳು ಹೆಣ್ಣುಮಗಳು. ಅವಳೊಬ್ಬಳು ಬಂದ್ರೆ ಈ ಮಗು ಅವಳ ಕಣ್ಣಿಗೆ ಕಾಣುತ್ತೈತೆ. ಈ ಮಗ ಅವಳ ಮಡಿಲು ಸೇರುತ್ತೈತೆ. ಮತ್ತೆ ಯಾರು ಬಂದ್ರೂ ಸಿಕ್ಕಲ್ಲ. ಅಂತ ನೀ ಹೋಗಿ ಹೇಳಿಬಿಡಬೇಕು"

ಅಂತ ಆ ಘಳಿಗೆಯಾಗೆ ಮಾರಮ್ಮನ್ನ, ಮನೆದೇವ್ರುನ್ನ ಸಾಗಾಕಿ ಬಿಟ್ರು. ಶಿವ ಚಿತ್ರ ಲಿಂಗ ಅವನೂ ಬಂದು ಅಲ್ಲಿ ತುಗ್ಗುಲಿ ಮರದ ಮೇಲೆ ಕುಂತಿದ್ನಂತೆ.

ಚಿತ್ತ ಇಲ್ಲವೆಂದು ಚಿಂತಿ ಮಾಡಲು ಬ್ಯಾಡೋ ಚಿತ್ತ ತುಗ್ಗಲಿ ವನದಾಗೆ,
ಚಿತ್ತ ದುಗ್ಗಾಲಿ ವನದಾಗೆ ನಿಂತ ಗಂಡು ಚಿತ್ತಾರದ ಬಾಣ ಬಿಡುತೀನೋ

ಶಿವ ಚಿತ್ರಲಿಂಗ ನನ್ನ ನೆರಳು ಹಾಯಿಸಿಕೋಬ್ಯಾಡ.
ನಾರಾಯಣನೆಂಬೋ ನಾಮಗೊಡಲಿ, ಶಿವನೆಂಬೋ ಚಿಪ್ಪುಗೊಡಲಿ,
ರನ್ನದ ಪಿಳ್ಳಂಗೋವಿ, ಚಿನ್ನದ ಪಿಳ್ಳಂಗೋವಿ,
ಪಟ್ಟೆ ದಟ್ಟಿಯೋನು, ಕೋರೆ ರುಮಾಲು,
ಏಳು ಕಣ್ಣಿನ ಬಿದಿರು ಕೋಲು, ಎಡಗಡೆ ಕಂಕುಳದಾಗೆ ಉಗ್ಗುಳದ ಗಡಿಗೆ,
ಸುರನಾರಿ ಬಿಲ್ಲು ಬೆನ್ನಿಗೆ ಕಟ್ಟಿದ್ದೋ ನೆತ್ತರು ಬಾಣ ನೆತ್ತಿಯಾಗಿ ಕಟ್ಟಿದ್ದೆ,
ಉಕ್ಕಿನ ಬಾಣ ಪಕ್ಕೆಯಾಗಿ ಕಟ್ಟಿದ್ದೆ, ಲೆಕ್ಕವಿಲ್ಲದ ಬಾಣ ನನ್ನ ಎದೆಯಾಗೆ ಕಟ್ಟಿದ್ದೆ.

ಈ ಆಯುಧ ಮುಸ್ತಾಫೆಲ್ಲ ತೊಗೊಂಡೋಗಿ ನಿನ್ನ ದೇವಸ್ಥಾನದಲ್ಲಿ ಇಟ್ಟುಕೋ ಹೋಗು. ಆ ಮಹಾತಾಯಿ ಬಡಚಿತ್ತಮ್ಮ ಬಂದು ಈ ಮಗನ್ನ ತೊಗೊಂಡೋಗಿ ಸಾಕಿ ದೊಡ್ಡದು ಮಾಡಿ, ಕರ್ಣ, ಆ ಪಾಂಡವರಾಗೆ ಕರ್ಣ ಹಿರಿಯೋನು, ಇವರು ಐದು ಜನ ಚಿಕ್ಕೋರು, ಕರ್ಣ ಮಡಿದು ಹೋದಾಗ ಕರ್ಣನ ಪಟ್ಟ ಋಷಿ ಯಾರೋ ಕಟ್ಟಿದರು. ಪಾಂಡವರಾರು ಕಟ್ಟಲಿಲ್ಲ. ಆ ನನ್ನ ಪಟ್ಟನೂ ನನ್ನ ಮಗಗೆ ಕಟ್ಟಬೇಕು ಮುಂದಾದ್ರೂ ಒಂದುದಿನ ಚಿತ್ತಯ್ಯ" ಅಂದು ಚಿತ್ರದೇವರ ಕೈಲಿ ಬಿಲ್ಲು ಬಾಣ ಕೊಟ್ಟು ಕಳಿಸಿಬಿಟ್ಟ ದೇವರ ದಯಮಾರ. ಆಗ ಹೇಳಿದ "ಶಿವ ಪಾರ್ವತಿ ಕೇಳಿರಿ, ಶಿಶುಹತ್ಯ, ಗೋಹತ್ಯ, ಸ್ತ್ರೀ ಹತ್ಯ, ಬ್ರಹ್ಮ ಹತ್ಯ, ಆತ್ಮ ಹತ್ಯ, ಪಾಪ ಹತ್ಯ ಮಾಡಬಾರದು ಇನ್ನು ಯಾರಾನು. ನಾವು ಮಾಡಿಬಿಟ್ಟಿದೀವಿ. ನಮಗೆ ಈ ಸ್ಥಿತಿ ಬಂದೋಯ್ತು. ಈ ಕತ್ತಲು ಕರಿಮಲೆಯಾಗೆ ಸಿಕ್ಕಿ ಬಿದ್ದಿದೀವಿ. ಮುಂದೆ ಹುಟ್ಟೋ ಹೆಣ್ಣು ಗಂಡು ಯಾರೂ ಈ ಪಾಪ ಹತ್ಯೆಗಳನ್ನು ಮಾಡಬೇಡ್ರಿ" ಅಂತ ಶಿವ ಪಾರ್ವತಿಗೆ ಆಶೀರ್ವಾದ ಬೇಡಿ ಸೋಮವಾರ ಹೊತ್ತು ಹುಟ್ಟಿ ಸೂರ್ಯ ಹುಟ್ಟಿ ಮ್ಯಾಕೆ ಬರೋ ಹೊತ್ತಿಗೆ ದೇವರ ದಯಮಾರ, ಸಣ್ಣ ಕಂಬಕ್ಕ ಒಂದು ಸರೋವರದಾಗೆ ಒಂದು ಮುಳುಗು ಮುಳುಗಿ ಆ ಘಳಿಗೆಯಾಗ್ಯೇನೆ ಒಂದು ಮಂದರಗಿರಿ ಬುಡದಾಗೆ ನೂರಾ ಒಂದು ಪೂಜೆ ಮಾಡಿಬಿಟ್ಟರು. ಸೋಮವಾರ ಹೊತ್ತು ಹುಟ್ಟಿ ಬರುವ ಆ ಘಳಿಗೆಯಾಗೆ ದೇವರದಯಮಾರ ಕಂಬೇರು ಕಂಬಕ್ಕ ಮಂದರ ಗಿರಿ ಕೆಳಗಿ ಮಲಗಿ ಕಾಯಬಿಟ್ಟುಬಿಟ್ಟರು. ಇಲ್ಲಿಗೆ ಒಂದು ತಲೆ ಕಳೀತು.

ಕೆಂಗುರಿ ಮಲ್ಲೇಗೌಡನ ಅಪ್ಪ ದೇವರದಯಮಾರ ಇಲ್ಲೀಗೆ ತೀರಿಹೋದ. ಸಣ್ಣೋಳು ಕಂಬಕ್ಕ ಇಲ್ಲಿಗೆ ಕಾಯ ಬಿಟ್ಟಳು. ಅವ್ರಿಗೆ ಹುಟ್ಟಿರೋ ಕಂದನೇ ಜುಂಜಪ್ಪನೋರ ಅಪ್ಪ ಕೆಂಗುರಿಮಲ್ಲೇಗೌಡ. ಈ ಆಲದ ಮರದ ರೆಂಬೆಗೆ ಜೋಳಿಗೆ ಕಟ್ಟಿ ಮಲಗಿಸಿರೋನು.

ಜಯಮಂಗಳ ನಿತ್ಯ ಶುಭಮಂಗಳ
ಜಯಮಂಗಳ ನಿತ್ಯ ಶುಭಮಂಗಳ

೨.೨. ಕೆಂಗುರಿ ಮಲ್ಲೇಗೌಡನ ಕಥೆ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಸಿದ್ಧರು ಬಂದರು ಎಂದು ಎದ್ದು ನೋಡಲು ಬಂದೆ
ಸಿದ್ಧರು ನಮ್ಮಕೈಗೆ ಸಿಗಲಿಲ್ಲಾ ಈ ಹೊತ್ತು
ರುದ್ರಾಕ್ಷಿ ತೋಪೇ ಮರೆಯಾದೋ

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ
ಎದ್ದೊಂದರಘಳಿಗೆ ನೆನೆದೇವೋ
ಸ್ವಾಮೀನ ನೆನೆದೇವೋ ಸ್ವಾಮಾರದಯ್ಯಾನ
ಬೆಣ್ಣೆ ಮಜ್ಜನದ ಒಡೆಯ ಸ್ವಾಮಿ ಜುಂಜಪ್ಪನ ನೆನೆದೇವೋ

ನಿಡುಗಲ್ಲ ದಡದಾಗೆ ನೀಟಾಗಿ ಬೆಳೆದಮ್ಮ
ಬೆನವಣ್ಣನ ಬೆಟ್ಟದಾಗೆ ಹಸನಾಗೆ ಬೆಳೆದಮ್ಮ
ಸ್ವಾಗೆ ಗಿರಿ ಬಡ್ಯಾಗೆ ಸೊಗಸಾಗಿ ಬೆಳೆದಮ್ಮ
ಏಣುಕಲ್ಲುಗಿರಿ ಬೆಟ್ಟದಾಗೆ ಗೇಣಾಗೆ ಬೆಳೆದಮ್ಮ

ಚುಂಚನ ಗಿರಿ ಬೆಟ್ಟದಾಗೆ ಮಿಂಚುದಲೆ ಬಿದಿರಾದೆ
ದೊಡ್ಡೋನು ಜುಂಜಪ್ಪಗೆ ಒಡ್ಡಿದರು ಬಿಲ್ಲಾದೆ
ಮೂಡಲಗಿರಿ ತಿಮ್ಮಪ್ಪಗೆ ಮಾಯದಲೆ ಸಜ್ಜಾದೆ

ಕುಂಟನಿಗೆ ಕೋಲಾದೆ ಭಂಟನಿಗೆ ದೊಣ್ಣೆಯಾದೆ
ಮೇಕೆಕಾಯುವಣ್ಣನಿಗೆ ಬಲಿತ ಕಣ್ಣಿನ ಕೋಲಾದೆ
ಕುರಿಯ ಕಾಯುವಣ್ಣನಿಗೆ ಎಳೆಗಣ್ಣಿನ ಕೋಲಾದೆ
ಎತ್ತು ಕಾಯೋ ಅಣ್ಣನಿಗೆ ಮುದ್ದಿನ ಕೋಲಾದೆ
ಒಕ್ಕಲಿಗರ ಮುದ್ದಣ್ಣಗೊಂದಗ್ಗಲಿಗೆ ಕೋಲಾದೆ

ಸಾಲು ಹೊಡೆಯಣ್ಣನಿಗೆ ಕೂರಿಗೆ ನೀನಾದೆ
ಏಳೋನಿಗೆ ಬಲವಾದೆ, ಊದೋನಿಗೆ ಗಣೆಯಾದೆ

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

೨.೨.೧. ಕೆಂಗುರಿ ಮಲ್ಲೇಗೌಡನ ಹುಟ್ಟು

ಇಲ್ಲೀಗೆ ಒಂದು ತಲೆ ಕಳೀತು. ಅದು ದೇವರ ದಯಮಾರಂದು ಕಥೆ. ಮುಂದಕ್ಕೆ ಕೆಂಗುರಿ ಮಲ್ಲೇಗೌಡಂದು. ಜುಂಜಪ್ಪನೋರ ಅಪ್ಪ ಇವನು ಕೆಂಗುರಿ ಮಲ್ಲೇಗೌಡ. ಈಗ ಒಂದು ತಲೆ ಕಳೀತು. ಆಗ ಗೌರಸಂದ್ರದ ಮಾರಕ್ಕ ಬಂದು ಬಡಚಿತ್ತಮ್ಮಗೆ ಹೇಳಿದಳು: 'ದೇವರ ದಯಮಾರ, ಸಣ್ಣೋಳು ಕಂಬಕ್ಕ ಇಬ್ಬರೂ ಕಾಯವಾಗಿ ಹೋದರು. ಕತ್ತಲು ಕರಿಮಲೆಯಾಗೆ ಮಂದರ ಗಿಡದ ಬುಡದಾಗೆ ಒಂದು ಆಲದ ಮರದ ತಾವ ಅಲ್ಲೇ ಕಾಯ ಬಿಟ್ಟರು. ಬಡ ಚಿತ್ತಮ್ಮ ನಿಮ್ಮ ವಂಶದಲ್ಲಿ ನೀನು ಒಬ್ಬಳೇ ಈಗ ಆ ಮಗನ್ನ ತರಬೇಕಂತೆ' ಅಂತ ಗೌರಸಂದ್ರದ ಮಾರಕ್ಕ ಮಾರನಹಳ್ಳಿಗೆ ಬಂದು ಇಲ್ಲಿಂದ ಬಡ ಚಿತ್ತಮ್ಮನ್ನ ಕಳಿಸಿಕೊಟ್ಟಳು. ಆರು ಜನ ಅಣ್ಣದೀರು, ಈ ಯಮ್ಮ ಏಳುಜನ ಹೋಗಿ ಕತ್ತಲು ಕರಿಮಲೆಯಾಗೆ ಒಂಬತ್ತು ದಿನದ ತನಕ ಹುಡುಕಿದರೂ ಮಗುವೇ ಸಿಗಲಿಲ್ಲ ಅವರಿಗೆ. ಒಂಬತ್ತು ದಿನದವರೆಗೂ ಹುಡುಕಿದರೂ ಸಿಗಲಿಲ್ಲ. 'ಸುಳ್ಳು ಹೇಳಿ ಕರಕಂಬಂದಿ' ಅಂತ ಎಲ್ಲಾ ಅಣ್ಣದೀರೂ ಈ ಬಡ ಚಿತ್ತಮ್ಮನ ಮೇಲೆ ಬಂಡೆ ಗುಂಡೆತ್ತಿ ನಿಂತು ಬಿಟ್ಟರು. ಆಗ ಗೌರಸಂದ್ರದ ಮಾರಕ್ಕನ ಸ್ತೋತ್ರನೇ ಮಾಡಿದಳು ಚಿತ್ತಮ್ಮ.

ಆಕೆ ಅಲ್ಲಿಂದಲೇ "ಏನು" ಅಂದ್ಲು.

"ಏನಿಲ್ಲಾ, ನಾನೂ ನನ್ನ ಅಣ್ಣದೀರು ಒಟ್ಟು ಏಳು ಜನ ಸೇರಿಕೊಂಡು ಇಲ್ಲಿ ಒಂಬತ್ತು ದಿನ ಕತ್ತಲು ಕರಿಮಲೆಯಾಗೆಲ್ಲಾ ಹುಡುಕಿದೆವು. ಆಲದ ಮರ ಸಿಗಲಿಲ್ಲ. ನೀ ಸುಳ್ಳು ಹೇಳಿ ಕರಕಂಬಂದಿ ಅಂತ ಎಲ್ಲಾ ಅಣ್ಣದೀರೂ ಈ ಬಡ ಚಿತ್ತಮ್ಮನ ಮೇಲೆ ಬಂಡೆ ಗುಂಡಿತ್ತಿ ನಿಂತು ಬಿಟ್ಟವರೆ. ಅದಕ್ಕೆ ನಿನ್ನ ಸ್ತೋತ್ರಾನೇ ಮಾಡ್ತಾ ಇದೀನಿ'.

ಗೌರಸಂದ್ರದ ಮಾರಕ್ಕ "ಚಿತ್ತಮ್ಮಾ" ಅಂದಳು.

"ಯಾಕಮ್ಮಾ"

"ಈ ಆಲದ ಮರದಾಗೆ ಮಗು ಐತೋ ಇಲ್ಲೋ ನೋಡಮ್ಮಾ" ಅಂದಳು.

ಬಡ ಚಿತ್ತಮ್ಮ 'ಐತೆ' ಅಂದಳು.

ಈ ಆರು ಜನರ ಕಣ್ಣಿಗೆ ಕಂಡಿಲ್ಲ. ಆಕೆ ಕಣ್ಣಿಗೆ ಕಂಡಿತ್ತು. ಆಲದ ಮರದಮ್ಮ, ಗೋಣೀ ಮರದಮ್ಮ, ಜೀನೇ ಮರದಮ್ಮ, ಬೇವಿನ ಮರದಮ್ಮ, ನಾಗೇಂದ್ರ, ಶಿವ ಪಾರ್ವತಿ ಎಲ್ಲಾ ಇಲ್ಲಿದ್ದಾರೆ. ನಿಜಾ ಕಣಮ್ಮ, ಇಲ್ಲಿ ಆರು ಜನ ನಿಂತಿದ್ರಲ್ಲಾ, ಅವರು ಚಿತ್ತಮ್ಮನ ಅಣ್ಣಗೋಳು. ಅಂದ್ರೆ ಮಾರನೋರ ಗೊಲ್ಲರೋರು. ಈ ಕೊರವಂಜಿ ಗೌರಸಂದ್ರದ ಮಾರಕ್ಕ ಆರು ನಿಂಬೆಹಣ್ಣು ಮಂತ್ರಿಸಿ ಕೊಯ್ದು ಹಾಕುತ್ತಿದ್ದರೆ ಅವರು ನಿಂತಲ್ಲೇ ನಿಂತುಬಿಟ್ರು. ಅವರ ಕೈಲಿತ್ತಲ್ಲ ಬಂಡೆ ಅವು ಅವರವರ ತಲೇ ಮೇಲೆ ಬಿದ್ದು ಬಿಡ್ತು. ಅವರು ದೇವರ ದಯಮಾರನ ಅಣ್ಣದೀರು. ಈ ಮಗೀಗೆ ದೊಡ್ಡಪ್ಪಂದಿರು. ಈ ಯಮ್ಮ ಸೋದರತ್ತೆ. ದೇವರ ದಯಮಾರನ ತಂಗಿ ಚಿಕ್ಕೋಳು ಬಡಚಿತ್ತಮ್ಮ. ಆಯಮ್ಮನೇ ಈಗ ಸಾಕು ತಾಯಿ ಮಗೀಗೆ. ಆಯಮ್ಮ ಕಂಬೇರ ಚಿನ್ನಮ್ಮ ಹೊಂಟೋಗಿ ಬಿಟ್ಟಳಲ್ಲ,. ಅಪ್ಪ ಅಮ್ಮ ಇಬ್ರೂನೂ ಹೋಗಿ ಬಿಟ್ರಲ್ಲ.

ಆ ಹೊತ್ತಿನಾಗೇನೇ ನೂರಾ ಒಂದು ಮಂಡಲ ಬರೆದು, ನೂರಾ ಒಂದು ಪೂಜೆ ಮಾಡಿ, ಗೌರಸಂದ್ರದ ಮಾರಕ್ಕ ನೂರಾ ಒಂದು ಕಂಬಳಿ ಹಾಸಿ ಕರೆ ಕಟ್ಟಿ, ನಾಗೇಂದ್ರನ್ನ ಕರೆದು "ನಾಗೇಂದ್ರ, ಆ ಮಗ ಈಗ ಊರು ಮುಟ್ಟಬೇಕು. ಮಾರನಹಳ್ಳಿ ಸೇರಬೇಕು. ಅವರ ಅಡವು ಆಸ್ತಿ ಎಲ್ಲಾ ಅಲ್ಲಿದ್ಯಲ್ಲ" ಅಂತ ಏಳು ಕರೆ ಕಂಬಳಿ ತೆರೆ ಮ್ಯಾಲಿರೋದು ಹಾಸಿದಳು. ನಾಗೇಂದ್ರ ಶಿಶು ಮ್ಯಾಕೆತ್ತಿ ಬಿಟ್ಟನಂತೆ. ಅದು ಸೀದಾ ಹಾರಿ ಹೋಗಿ ಬಡಚಿತ್ತಮ್ಮನ ಮಡಿಲಿಗೆ ಬಿತ್ತಂತೆ. ಆ ಯಮ್ಮ ಇನ್ನೂ ಹೆಣ್ಣಾಗಿರಲಿಲ್ಲ. ಮೈನೆರೆದಿರಲಿಲ್ಲ. ಮದುವೆ ಆಗಿರಲಿಲ್ಲ. ಏಳು ವರುಷದ ಕೋರಿ ಮಗಳಿಗೆ ಅಲ್ಲೇ ಎದೆ ಹಾಲು ಕೋಡಿ ಹರಿದುಬಿಡ್ತು. ಎದೆ ಹಾಲು ಬಿದ್ದು ಬಿಟ್ಟವು. ಅ ಮಗು ಈಯಮ್ಮನ ಮಡಿಲಿಗೆ ಬಿದ್ದಕೂಡಲೇ ಎದೆ ಹಾಲು ಹೊಳೆಯಾಗಿ ಹರಿದುಬಿಡ್ತು. ಆ ಮಗು ಬಂದು ಮಡಿಲಿಗೆ ಬಿದ್ದು ಎದೆ ಕಚ್ಚಿ ಹಾಲು ಕುಡಿಯಬೇಕಾಗಿದ್ದರೆ, ಆ ಮಗು ಅವಳಿಗೆ ಸೋದರಳಿಯ, ಅಣ್ಣನ ಮಗ, ಅಳಿಯ ಆಗ್ಬೇಕಾಗಿತ್ತು. ಈಗ ಮಗ ಆಗ್ಬಿಟ್ಟ ಈ ಯಮ್ಮಗೆ. ಸೋದರತ್ತೆ ಹಾಲು ಬಿದ್ದು ಈ ಯಮ್ಮನ ಎದೆ ಕಚ್ಚಿ ಹಾಲುಕುಡಿದ್ಹೋಟಿಗೆ ಸೋದರತ್ತೆ ಮಲತಾಯಿ ಆದಳು. ಇವರು ಆರು ಜನ ದೊಡ್ಡಪ್ಪಂದಿರಾದರು. ಆ ಮಗನ್ನ ತೊಗೊಂಡು ಅಲ್ಲಿಂದ ಗೌರಸಂದ್ರದ ಮಾರಕ್ಕ, ಬಡ ಚಿತ್ತಮ್ಮ, ಅಣ್ಣದೀರು ಆರುಜನ, ಆ ಮಗ ಒಂದು, ಒಟ್ಟು ಒಂಬತ್ತು ಜನ ಅಲ್ಲಿಂದ ಹೊರಟು ಒಂಬತ್ತು ದಿನಕ್ಕೆ ಬಂದ್ರಂತೆ ಕಳುವೇರಹಳ್ಳಿ. ಬೇವಿನ ಹಳ್ಳಿಗೆ, ಆ ಕಳುವೇರಹಳ್ಳಿ ದಿಣ್ಣೆ ಹತ್ತುತ್ತಿದ್ದ ಹಾಗೇನೇ ನಡೀರಮ್ಮ ನೀವು ಅಂತ ಗೌರಸಂದ್ರದ ಮಾರಕ್ಕ ಬಂದು ಆ ಘಳಿಗೆಯಾಗ್ಯೇನೇನೇ ಆರು ಜನ ಅಣ್ಣಂದಿರು ಓಡಿ ಬಂದು ಬಾಳೆ ಪಟ್ಟೇದು, ಸ್ವಾಗೆ ಹುಲ್ಲಿಂದು, ಬಾದೆ ಹುಲ್ಲಿಂದು, ಹಂಚಿ ಹುಲ್ಲಿಂದು, ಒಂದು ಗುಡ್ಲು ಕಟ್ಟಿ ಹಟ್ಟಿಯಿಂದೀಚೆಗೆ ಮಡಗಿ, ಮೂರು ತಿಂಗಳು ಅದರಾಗೆ ಬಾಣಂತನ ಮಾಡಿಕೊಂಡು, ಮೂರು ತಿಂಗಳು ತುಂಬಿದ ದಿನ ದೇವಸ್ಥಾನದ ಬಾಗಿಲಿಗೆ ಬಂದು ನಾಮಕರಣ ಮಾಡಿಕೊಂಡು

'ನನ್ನ ಮನೆ ಬಾಗಿಲಿಗೆ ಬರಬೇಕಣ್ಣ' ಎಂದಳು ಬಡಚಿತ್ತಮ್ಮ. ಅಲ್ಲಿಂದ ಆರು ಜನ ಅಣ್ಣಂದಿರು ಬಂದು "ಆ ದೇವಸ್ಥಾನದ ಮುಂದೆ ಮೂರು ತಿಂಗಳು ತುಂಬುವ ತನಕ ನೀನು ಇರಬೇಕು ಕಣಮ್ಮಾ" ಅಂತ ಗುಡ್ಲು ಕಟ್ಟಿ ಆಕೇನ ಹಟ್ಟಿಯಿಂದ ಆಚೆಗೆ ಮಡಗಿ, ಮೂರು ತಿಂಗಳು ತುಂಬಿದ ಕೂಡಲೇ ಆ ದೇವಸ್ಥಾನದ ಮುಂದಕೆ ಬಂದರು. "ಈಗಲ್ಲಿ ಅವನಿಗೆ ಹೆಸರು ಇಕ್ಕಬೇಕು. ನಾಮಕರಣ ಮಾಡಬೇಕು. ಕಂಬೇರ ಕಂಬಕ್ಕ ಅವ್ವ, ದೇವರ ದಯಮಾರ ಅಪ್ಪ. ಇವರಿಗೆ ಹುಟ್ಟಿದೋನು ಈ ಹುಡುಗನಿಗೆ ಏನು ಹೆಸರು ಇಕ್ಕಬೇಕು? ಏನು ನಾಮಕರಣ ಮಾಡಬೇಕು? ಹೆತ್ತಿದ್ದೋಳು ಕಂಬೇರ ಕಂಬಕ್ಕ, ಹುಟ್ಟಿಸ್ದೋನು ದೇವರ ದಯಮಾರ, ನಿನ್ನ ಎದೆ ಹಾಲು ಕುಡಿದು ಬೆಳೆದಿದ್ದಕ್ಕೆ ನೀನು ಮಲತಾಯಿ. ಈ ಹುಡುಗನಿಗೆ ಏನು ನಾಮಕರಣ ಮಾಡಬೇಕು?" ಅಂದರು.

"ಚಿತ್ತಯ್ಯ, ಚಿತ್ರದೇವರೇ" ಅಂದಳು ಚಿತ್ತಮ್ಮ. ಅವನೇ ನಾಮಕರಣ ಮಾಡೋವ್ನು ಅವನೇ ಗುರುವು.

ಇವತ್ತಿನ ದಿನ ಚಿತ್ರ ದೇವರು ನಾಮಕರಣ ಮಾಡಬೇಕಾದರೆ ಇವತ್ತಿನ ದಿನದಾಗೆ

"ಕೆಂಗುರಿ ಕಣ್ಣಿನೋನು, ಕೆಂಗುರಿ ಮಲ್ಲೇಗೌಡ,
ಬೆಳ್ಳಿ ಮೀಸೆಯೋನು, ಬಗರಿ ಗಡ್ಡದೋನು,
ಮಾರುದ್ದ ಮಂಡೆಯೋನು, ಮಾರನವರ ಗೊಲ್ಲನ ಮಗ,
ಕೆಂಗುರಿಗಣ್ಣಿನೋನು ಕೆಂಗುರಿ ಮಲ್ಲೇಗೌಡ"

ಅಂತ ಚಿತ್ರದೇವರು ನಾಮಕರಣ ಮಾಡಿದರು. ಕೆಂಗುರಿ ಮಲ್ಲೇಗೌಡ, ಇವನೇ ಜುಂಜಪ್ಪನವರ ಅಪ್ಪ. ಇವನು ಹುಟ್ಟಿದ್ದು ಕೊಂಕಿ ಜರಿಮಲೆಯಾಗೆ, ಬೆಳೆಯೋದು ಕಳುವೇರಹಳ್ಳಿ ಬೇವಿನ ಹಳ್ಳಿಯಾಗೆ, ಹೊನ್ನಟ್ಟಿ ಆಲೆಗೌಡನ ಮನೇಗೆ ಹೋಗಾದು ಈಗಲೇ. ಅಳುವಿನೋರ ಒಕ್ಕಲು ಮಗ ಮಾರನೋರ ಈಗ ಕರಡಿಗೊಲ್ಲರು ಸತ್ತರೆ ಅವರು ಹೊತ್ತಾಕಬೇಕು. ಅವರು ಸತ್ತರೆ ಮಾರನೋರ ಗೊಲ್ಲರು ಹೊತ್ತು ಹಾಕಬೇಕು. ಅವರಿಬ್ಬರಿಗೂ ಹೊಂದಾಣಿಕೆ ಐತೆ.

ಆ ಘಳಿಗ್ಯಾಗೇನೇ ಬಡಚಿತ್ತಮ್ಮ ಆ ಮಗೀನ ತೊಗೊಂಡ್ಹೋಗಿ ಸೀದಾ ದೇವಸ್ಥಾನದ ಮುಂದೆ ಕೆಂಗುರಿಮಲ್ಲೇಗೌಡ ಅಂತ ನಾಮಕರಣಮಾಡಿಕೊಂಡು ಬಲಗಾಲು ಮುಂದಿಕ್ಕಿ ಇವರ ಮನೆಗೆ ಬಂದೇಟಿಗೆ ಐಶ್ವರ್ಯವಂತರಾಗಿ ಹೋದರು. ಅವರ ಮನೆಯವ್ರು ಎಲ್ಲಾ ಶ್ರೀಮಂತರಾಗಿ ಹೋಗಿಬಿಟ್ಟರು. ಆ ಹುಡುಗನ ಅಮ್ಮನ್ನ ಈ ಆರು ಜನ ದೊಡ್ಡಮ್ಮಂದಿರು ಏನಂದಿದ್ದರು? ದೊಡ್ಡಮ್ಮಂದಿರು 'ಗೊಡ್ಡುಮುಂಡೆ, ಭಂಡಮುಂಡೆ' ಅಂದಿದ್ರಲ್ಲಾ, ಅವರು ಆರುಜನ ಮಕ್ಕಳು ಇಲ್ಲದೋರು ಅಕ್ಕಸಾಲಿ ಮನೆಗೆ ಹೋಗಿ ಒಡವೆ ಮಾಡಿಸಿ ತಂದು ಆ ಹುಡುಗನ ಮ್ಯಾಲೆ ಹಾಕಿದ್ರು. 'ಎಲ್ಲಾ ನಮ್ಮ ವಂಶಕ್ಕೆ ಇವನೊಬ್ಬನೇ ಮಗ' ಅಂತ. ಇಪ್ಪತ್ತಾರು ವರುಷ ಅವರೊಬ್ಬರಿಗೂ ಮಕ್ಕಳಾಗಿರಲಿಲ್ಲ. ಏಳು ಜನಕ್ಕೂ ಇವನೊಬ್ಬನೇ ಮಗ ಅಂತ ಹೇಳಿ, ಆರು ವಡವೆ

ಮಾಡಿಸಿ ತಂದು ಆ ಹುಡುಗನ ಮೇಲೆ ಹಾಕಿ ಕಚ್ಚಿ ಮುದ್ದಾಡಿಬಿಟ್ರು. ಆರುಜನ ದೊಡ್ಡಮ್ಮಂದಿರಿಗೂ ಒಂಭತ್ತು ತಿಂಗಳ ನೀರು ಒಂದೇ ದಿನಾ ನಿಂತುಹೋಗಿ ಬಿಡ್ತು. ಒಂಬತ್ತು ತಿಂಗಳು ತುಂಬಿ ಒಂಭತ್ತು ದಿನಾ ತುಂಬಿ ಒಂಭತ್ತು ನವಮಾಸ ತುಂಬಿ ಬಂದ ದಿನ ಆರುಜನ ದೊಡ್ಡಮ್ಮಂದಿರ ಹೊಟ್ಯಾಗಿಂದ ಆರುಜನ ಗಂಡುಮಕ್ಕಳು ಹುಟ್ಟೇ ಬಿಟ್ಟರು. ಮೂರು ತಿಂಗಳು ತುಂಬೋವರೆಗೂನು ಈ ಎಲ್ಲಾ ಬಾಣಂತನಾನು ಒಬ್ಬಳೇ ಮಾಡಿದಳು ಬಡಚಿತ್ತಮ್ಮ. ಮೂರುತಿಂಗಳು ತುಂಬಿದ ದಿನ ದೇವಸ್ಥಾನದ ಬಾಗಿಲಿಗೆ ತಂದು ಅವರವರ ತಂದೆಯರಿಗೆ ಯಾವ ಹೆಸರು ಇಕ್ಕಿದ್ರೋ ಅವೇ ಹೆಸರುಗಳನ್ನು ಆರು ಜನ ಮಕ್ಕಳಿಗೆ ಇಟ್ಟುಕೊಂಡರು. ಆರು ಜನ ಮಕ್ಕಳನ್ನು ಕರಕೊಂಡು ಅವರು ಆರೂ ಜನ ಆ ಮೂಲೆಗೊಬ್ಬರು ಈ ಮೂಲೆಗೊಬ್ಬರು ಎಲ್ಲಾ ಒಂದೊಂದು ಮೂಲೆಗೂನೂ ತೊಟ್ಟಿಲು ಕಟ್ಟಿಕೊಂಡುಬಿಟ್ಟರು. ಆ ಘಳಿಗ್ಯಾಗೇನೇಯೇ ಆರು ಜನಾ ದೊಡ್ಡಮ್ಮಂದಿರು ತೊಡೆಮೇಲೆ ಮಕ್ಕಳನ್ನು ಹಾಕ್ಕೊಂಡು, ಹಾಲುಕೊಟ್ಟುಕೊಂಡು ಚೆಲ್ಲಾಡಿಸಿಕೊಂಡು ಪ್ರೇಮದಿಂದ ಮಕ್ಕಳನ್ನಾಡಿಸಿಕೊಂಡು ಇರೊ ಹೊತ್ತಿಗೆ ಒಬ್ಬಳೇನಂದಳು?

"ಅಕ್ಕಯ್ಯ" ಅಂದಳು.

"ಯಾಕಮ್ಮ?"

"ಅವತ್ತು ನಮ್ಮ ಹೊಟ್ಟೆಯಾಗೆ ಮಕ್ಕಳು ಇರಲಿಲ್ಲ. ಕಳುವಾರಹಳ್ಳಿ ಬೇವಿನಹಳ್ಳಿ ನೋಡೋಣ ಅಂತ ಹೋಗುವಾಗ 'ಗೊಡ್ಡು ಮುಂಡೇರ, ಬಂಜೆ ಮುಂಡೇರ, ದೂರ ನಿಂತ್ಕಳಿ. ನನ್ನ ಮಗಗೆ ನೆರಳು ಹಾಯಿಸಬೇಡಿ' ಅಂತಿದ್ದಳಲ್ಲ ಬಡಚಿತ್ತಮ್ಮ. ಅವತ್ತು ಆರುಜನ ಹೋಗಿ ಅಕ್ಕಸಾಲಿ ಮನೆಗೆ, ಒಡವೆಮಾಡಿಸಿ ತಂದು ಆ ಮಗುವಿನ ಮೈಮ್ಯಾಗೆ ಹಾಕಿದ್ವಿ, ನಮ್ಮ ನಮ್ಮ ಒಡವೆ ನಾವು ತಗೊಂಡು ಬಂದುಬಿಡೋಣ. ಕಂಡೋರ ಮಗನಿಗೆ ಯಾಕೆ ಬಿಡಬೇಕು?" ಅಂತ ಅಂದಳು. ದೊಡ್ಡಮ್ಮಂದಿರು ಅವರವರು ಮಾಡಿಸಿದ ವಡವೆ ತಕ್ಕೊಂಡು, ಅವರವರ ಮಕ್ಕಳಿಗೆ ಹಾಕ್ಕೊಂಡರು. ಆಮೇಲೆ ಕೆಂಗುರಿ ಮಲ್ಲೇಗೌಡನಿಗೆ ಹೇಳಿದ್ರು "ಕೆಂಗುರಿ ಮಲ್ಲೇಗೌಡ, ಏಳು ಈದ ಹಸುಗಳಿವೆ, ಕರೆಕಂಬಳಿ ತಗೊಂಡು ಏಣುಕಲ್‌ಗಿರಿ ಗುಡ್ಡಕ್ಕೆ ಹೋಗಿ ದನವನ್ನ ಮೇಯಿಸಿಕೊಂಡು ಬಾ, ಹೋಗು ಬೋಳಿಮಗನೇ" ಅಂದರು."ಬಡಚಿತ್ತಮ್ಮ ನೀನು ಮನೆ ಆಳಾಗಿರಬೇಕು" ಅಂತ ಎಲ್ಲಾರೂ ಅಲ್ಲಿ ಸೇರಿಕೊಂಡು ಅಂದರು.

"ಯಮ್ಮಾ" ಅಂದ.

"ಯಾಕಪ್ಪಾ?"

"ದುರ್ಜನರಿಗೆ ಬಂದ ಸಂಪತ್ತು, ಸಜ್ಜನರಿಗೆ ಬಂದ ವಿಪತ್ತು ಕಣಮ್ಮಾ ಇವೆಲ್ಲ ಎರಡೆರಡು ದಿನಾ. ನೀನು ಕಣ್ಣೀರು ಹಾಕಬೇಡ ಬಡಚಿತ್ತಮ್ಮ.

ಮೂರುವರುಷ ಕಳೀಲಿ ಅವರಿಗೆ ಆಮೇಲೆ ಅಳಿಗಾಲ ಕೇಡುಗಾಲ. ಮೂರು ವರುಷ ಕಳೀಲಿ ಆಮೇಲೆ ನೋಡ್ಕೋಣ. ಮೂರು ವರುಷದ ತನಕ ಅವರು ಹೇಳಿದ ಚಾಕರಿ ಮಾಡ್ಕೊಂಡು ನೀನಿರು. ಮೂರು ವರುಷಕೆ ಅವರ ವಂಶಕ್ಕೆ ನಾನು ಗಂಡನಾಗ್ತೀನಿ. ಅವರದ್ದು ಅಮೃತ ಘಳಿಗೆ. ನಮ್ದು ವಿಷಘಳಿಗೆ ಬಂದೈತೆ ಅಮ್ಮ" ಅಂದ.

ಏಳುಕಡೆ ಏಳುಜನ ಮಾಡ್ಕೊಂಡು, ಏಳುಹಸು ಕರಕೊಂಡು ಮೂರು ವರುಷ ಅಡವಿ ಹುಲ್ಲು, ಮಡುವಿನ ನೀರು ಮಾಡ್ಕೊಂಡು ಹಸಾನೆಲ್ಲ ಮೇಯಿಸಿಕೊಂಡು ಕೆಂಗುರಿ ಮಲ್ಲೇಗೌಡ ಬರುವಾಗ

"ಯಾಕೆ ದನವೇ ಮೇದಿಲ್ಲ. ಹಾಲನ್ನೇ ಕರೆಯಲ್ಲ" ಅಂತ ದೊಡ್ಡಮ್ಮಂದಿರು ಕೇಳುತ್ತಿದ್ದರು. "ಯಮ್ಮಾ, ಮಾರನಹಳ್ಳಿ ಕೆರೆ ಒಳಗಾಸಿ ಬರೋ ಹೊತ್ತಿಗೆ ನಾಯಕರ ದನ ಹೋಗಿಬಿಟ್ಟವು. ಹದಿನಾರು ಆವಿನ ದನ ಹೋದ ಜಾಡಿನಾಗೆ ನನ್ನ ದನ ಬಂದುಬಿಟ್ಟವು. ಅವನು ಎಂತಾ ಗಿಡಮೂಲಿಕೆ ಹಾಕಿದ್ನೋ ಆದಕ್ಕೇ ನಮ್ಮ ಹಸು ಹಾಲು ಕರೀತಿಲ್ಲ" ಅಂದ.

"ಹಾಲು ಕರಿಬೇಕಾದ್ರೆ ಏನೇನು ಕೆಲಸಾ ಮಾಡ್ಬೇಕು ಕೆಂಗುರಿ ಮಲ್ಲನಗೌಡ?" ಅಂತ ದೊಡ್ಡಮ್ಮಂದಿರು ಕೇಳಿದ್ರು.

"ಅಂಕೋಲೆ ಮುಳ್ಳು, ವಡೇರ ಮುಳ್ಳು, ಎಳ್ಳೆ ಮುಳ್ಳು, ಕಗ್ಗಲ ಮುಳ್ಳು, ನಿಂಬೆ ಮುಳ್ಳು, ಬಿದಿರು ಮುಳ್ಳು, ಇದಿರು ಮುಳ್ಳು, ನೂರು ಸುತ್ತಿನ ಕಾರೆ ಮುಳ್ಳು, ನೂರಾ ಒಂದು ನಿಂಬೆಕಾಯಿ, ನೂರಾ ಒಂದು ತೆಂಗಿನಕಾಯಿ, ನೂರಾ ಒಂದು ಮೆಣಸಿನ ಪತ್ರೆ, ನೂರಾ ಒಂದು ಹೂ ತರಬೇಕು. ಮೂರುದಾರಿ ಸೇರೋವಲ್ಲಿ ಮೂರು ಆಳುದ್ದದ ಹುತ್ತದ ಮಣ್ಣು ತೆಗೀಬೇಕು. ಅಲ್ಲಿ ಮೀಸಲು ಹಾಕಬೇಕು. ಅದೆಲ್ಲ ಕಳೆದರೆ ಆನಂತರ ನನ್ನ ಹಸುಗಳು ಹಾಲು ಕರೀತಾವೆ. ಇಲ್ಲಾಂದ್ರೆ ಕರಿಯಲ್ಲಾ".

"ಇವೆಲ್ಲಾ ಹೊಂದಿಸಬೇಕಾದ್ರೆ ಮೂರುದಿನ ಆದ್ರೂ ಆಗಲ್ಲಾ ಸ್ವಾಮಿ. ಸಾಯಂಕಾಲ ಐದು ಘಂಟೆ ಹೊತ್ತಿಗೆ ಒಂದಿಷ್ಟು ಬಾಗಿಲು ಜಾಡು ಕಳಕೊಳ್ಳೋಣ. ದನಾ ಬಿಟ್ಟುಕೊಂಡು ಮಧ್ಯಾನ ಮೂರು ಘಂಟೆಗೆ ನೀನು ಒಂದಿಷ್ಟು ರೆಡಿಯಾಗಬೇಕು ಕಣಪ್ಪಾ" ಅಂದರು.

ಊಟಾ ಮಾಡ್ಕೊಂಡು ಬಿಟ್ಟ, ಉಡ್ಕೊಂಡು ಬಂದೋನು ದನಾ ಬಿಡ್ಲಿಲ್ಲಾ. ಊರುಮನೆ ಮುಂದೆ ಯಾರೋ ಗೋಲಿಗಜ್ಜುಗ ಆಡ್ತಿದ್ರು. ಅಲ್ಲಿಗ್ಹೋಗಿ ನಿಂತಿದ್ದ ಕೆಂಗುರಿ ಮಲ್ಲೇಗೌಡ. "ದನ ಕಾಯಿಸ್ಕೊಂಡು ಬಾರೋ ಅಂದ್ರೆ ನಿನ್ನ ಮಗ ಗೋಲಿಗಜ್ಜುಗ ಆಡ್ತಾ ಅವ್ನೆ" ಅಂತ ಯಾರೋ ಹೇಳಿದ್ರು ಚಿತ್ತಮ್ಮಂಗೆ.

"ಬಾರೋ, ಕೆಂಗುರಿ ಮಲ್ಲೇಗೌಡ, ಬಾ, ಈಗ ದನ ಹೊಡ್ಕೊಂಡೊಗು" ಅಂದಳು ಚಿತ್ತಮ್ಮ.
"ಹ್ಞಾ ನಾ ಬರೊಲ್ಲಾ ಹೋಗು" ಅಂದ.
ದೊಡ್ಡಮ್ಮಂದಿರಿಗೆ ಈ ಮಾತು ಕೇಳಿಸಿಬಿಡ್ತು. ಮೂರು ವರುಷ ಕಳೆದು ಆ ಟೈಮ್ ಬಂದ್ಬಿಡ್ತು.
"ಬರಲ್ಲ ಅಂತಾನೇ. ಬರ್‍ರಲೇ ಎಳ್ಕೊಂಬರಾನಾ ಜಡಿದು ಬಿಡಾನ, ಝಾಡ್ಸಿ ಒದ್ಬಿಡಾನಾ, ಆ ಬೋಳೀ ಮಗನ್ನ" ಅಂತ ಹೊರಟ್ ಬಿಟ್ರು.

ಆ ಆರುಜನ ದೊಡ್ಡಮ್ಮಂದಿರು ಮಕ್ಕಳನ್ನ ಉರುಡ್ಹಾಕಿ ಹೋಗುವಾಗ್ಗೆ "ಪುರಲಹಳ್ಳಿ ಭೂತ, ಗೌರಸಂದ್ರದ ಮಾರಿ ಕೊಡಬೇಕು ನೀವು ಲಕುಲಿಬಳ್ಳಿಗೆ ಇವತ್ತು ಬಲ" ಅಂದ ಕೆಂಗುರಿ ಮಲ್ಲೇಗೌಡ. ಗೌರಸಂದ್ರದ ಮಾರಕ್ಕ ನೂರಾ ಒಂದು ವರುಷದಿಂದ ದೇವತೆಯಾಗಿ ಎತ್ತಯ್ಯನ ಆವಿನ ಗೂಡನ ತಾವ ಹುಟ್ಟಿದ ಆದಿಶಕ್ತಿ ಅವಳು. 'ಪುರಲಹಳ್ಳಿ ಭೂತ ಕೊಡಬೇಕು ಇವತ್ತು ಈ ಲಕುಲಿದೊಣ್ಣೆಗೆ ಬಲ' ಅಂದ. ಮೂರು ನಿಂಬೆಕಾಯಿ ಕೊಯ್ದು ಹಾಕಿ, ಮೂರು ಮಂತ್ರ ಮಂತ್ರಿಸಿ ಹಾಕೋವಾಗ ಅರ್ಧ ಆಗಿಬಿಡ್ತಂತೆ, ಆ ಲಕುಲಿದೊಣ್ಣೆಗೆ ಒಂದು ತೊಲೆಯಷ್ಟು ದೊಡ್ಡ ಶಕ್ತಿ ಬಂದು ಬಿಡ್ತಂತೆ. ಅಡ್ಡಂಬಡ್ಡ ಅಡ್ಡಂಬಡ್ಡ ಅರು ಜನಕ್ಕೆ ಹೊಡ್ದು ಹಾಕಿ ಬಿಡ್ತಂತೆ ಅದು. 'ನಾನು ಹೇಳಿದ್ದು ತಪ್ಪಾತು ದೊಣ್ಣೆಪ್ಪ ಈ ಕರೆಕಂಬಳಿ ಝಾಡಿ ಮೇಲೆ ನೀನು ಸುಮ್ಮನೆ ಮಲಗು. ಅವರು ಆರುಜನಕ್ಕೂ ಬಡದಾತು. ಲಕುಲಿ ದೊಣ್ಣೆಯಿಂದ ಕಂಬಳಿಗೆ ಬಡಿದ. ಅದನ್ನ ಹಿಡಕೊಂಡು ಆ ಗಳೀಗ್ಯಾಗೇನೇ ಮುಂದೆ ಬಂದೋಳನ್ನ ಹಿಡಕೊಂಡು ಹಿಂದೆ ಬಂದೋಳೀಗೆ ಬಡಿದ. ಅವಳನ್ನ ಹಿಡಕೊಂಡು ಅವಳ ಹಿಂದೆ ಬಂದೋಳಿಗೆ ಬಡಿದ. ಹಿಂಗೆ ಆರುಜನಕ್ಕೂ ಬಡಿದಾಕಿ ಬಿಟ್ಟ. ಸಾಲಿಗೆ ಒಬ್ಬರ ಮ್ಯಾಲೆ ಒಬ್ರಿಗೆ ಮಲಗಿಸಿಬಿಟ್ಟ ಕೆಂಗುರಿ ಮಲ್ಲೇಗೌಡ.

"ಆರುಜನ ದೊಡ್ಡಮ್ಮಂದಿರಿಗೂ ಬಡಿದು ಮಲಗಿಸಿವ್ನಿ ಹೋಗಿ ನೋಡು ಬಡಚಿತ್ತಮ್ಮ" ಅಂದ. "ಆರು ಜನ ಮಕ್ಕಳು ನಿನ್ನಿಂದ ಹುಟ್ಟಿದಾರೆ".

ಏಳುಮನೆ ಬೀಗರು ಅಂತ ಕಂಬೇರಗೊಲ್ಲರಿಗೆ ಅವತ್ತು ಬಂದೈತೆ ಸ್ವಾಮಿ ಹೆಸರು. ಯಾಕೇಂದ್ರೆ ಈ ಆರು ಜನ ಮತ್ತು ಕೆಂಗುರಿಮಲ್ಲೇಗೌಡ ಒಟ್ಟು ಏಳು ಜನಕ್ಕೆ ಕಂಬೇರರ ಮನೆಯಿಂದಾನೇ ಹೆಣ್ಣು ತರಾದು. ಅದಕ್ಕೆ ಕಂಬೇರರು ಮನೆ ಏಳು ಜನ ಹೆಣ್ಣುಗಳು ಮಾರಸೋರ ಮನೆ ಏಳು ಜನ ಗಂಡುಗಳನ್ನು ಮದುವೆ ಆಗೋದ್ರಿಂದ ಏಳು ಮನೆ ಬೀಗರು ಆಗ್ತಾರೆ.

ಚಿತ್ತಮ್ಮ ಹೇಳಿದಳು "ಕೆಂಗುರಿ ಮಲ್ಲೇಗೌಡ. ಇವತ್ತಿನ ದಿನ ನಿನ್ನ ದಯದಿಂದ ಆರುಜನ ಮಕ್ಕಳು ಹುಟ್ಟಿದಾರೆ. ಏಳುಮನೆ ಬೀಗರು ಅಂತ ಮಾರನೋರು ಗೊಲ್ಲರಿಗೆ ಆ ಹೊತ್ತಲ್ಲೆ ಹೆಸರು ಬರೋದು. ಆ ಏಳು ಮನೆಯಾಗೂ

ನಮ್ಮ ಅಣ್ಣದೀರ ಮನೆ ಅಂದ್ರೆ ಕಂಬೇರು ಗೊಲ್ಲರ ಮನೆ ಹೆಣ್ಣು ಸೊಸೆಯಾಗಿ ಹೋಗಬೇಕು. ಮಾರನೋರು ಗೊಲ್ಲರು ಆಗ 'ಏಳುಮನೆ ಅಳೀಮಯ್ಯ' ಅಂತ ಆಶೀರ್ವಾದ ಕೊಡಬೇಕು. ಇಂತಹ ದೇವರ ದಯಮಾರನ ಮಗ ನೀನು ಕೆಂಗುರಿ ಮಲ್ಲನಗೌಡ" ಅಂದಳು ಚಿತ್ತಮ್ಮ.

"ದೇವರ ದಯಮಾರ ಸಣ್ಣೋಳು ಕಂಬಕ್ಕ ಕೊಂಕಿ ಜರಿಮಲೆ ಸೀಮ್ಯಾಗಿಂದ ಬಂದು ಈ ಸರಹದ್ದಿನ ಮೇಲೆ ಮಾರನಹಳ್ಳಿಯಾಗೆ ಭಾಗ ಬಾಗಿನ ತೊಗೊಂಡು ಬ್ಯಾರೇ ಬಾಳುವೆ ಇರಲಿಲ್ಲ, ಬ್ಯಾರೆ ಬಾಳುವೆ ಮಾಡಲಿಲ್ಲ. ನಮ್ಮ ಅಪ್ಪಗಿಲ್ಲದ ಭಾಗ ನನಗಿನ್ನು ಎಲ್ಲೈತೆ. ಅಪ್ಪಗೆ ಹಕ್ಕಿಲ್ಲದ ಭಾಗದ ಹಕ್ಕಿನ ಮೇಲೆ ನನಗೂ ಭಾಗ ಬೇಕಿಲ್ಲ. ನಾವು ಒಂದು ಊರು ದನ ಕಾಯ್ಕೊಂಡು ಊಟಾಮಾಡಿಬಿಡಾನ ನಡಿ. ಈ ದೊಡ್ಡಪ್ಪಂದಿರು ಬ್ಯಾಡಾ. ಈ ದೊಡ್ಡಮ್ಮಂದಿರೂ ಬ್ಯಾಡಾ ನನಗೆ, ನಡಿ" ಅಂದವನೆ ಕೆಂಗುರಿಮಲ್ಲೇಗೌಡ

"ಶಿವಚಿತ್ರಲಿಂಗ, ಈಗ ಯಾರ ಮನೆಗೆ ಕಳಿಸ್ತಿಯಾ ನನ್ನ" ಅಂತ ಅಪ್ಪಣೆ ಕೇಳಿದ.

"ಕಳುವೇರಹಳ್ಳಿ ಹೊನ್ನಟ್ಟಿ ಆಲೆಗೌಡ, ಅಳುವಿನೋರ ಒಕ್ಕಲಿಗರ ಮಗ ಜಾನಕಲ್ಲೋರ ಮನೆಗೆ ಹೋಗಿ ಜಾನಕಲ್ ದೊಡ್ಡಕ್ಕನ್ನ ತಂದು ಮದುವೆ ಮಾಡಿಕೊಂಡು ಇಲ್ಲೀಗೆ ಹನ್ನೆರಡು ವರುಷವಾಗಿದೆ. ಅವರಿಗೆ ಮಕ್ಕಳಾಗಿಲ್ಲ. ಮನೆ ಬೆಳದಿಲ್ಲ. ಹೊನ್ನಟ್ಟಿ ಆಲೆಗೌಡನ ಮನೆಗೆ ಬಿಟ್ಟು ಬಿಡ್ತೀನಿ ನಿನ್ನ. ಸಂತೋಷವಾಗಿ ನಡಿ ಅತ್ಲಾಗೆ" ಅಂದ ಶಿವಚಿತ್ರಲಿಂಗ.

೨.೨.೨. ಹೊನ್ನಟ್ಟಿ ಆಲೆಗೌಡ ಮತ್ತು ಜಾನಕಲ್ ದೊಡ್ಡಕ್ಕ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ
ಎದ್ದೊಂದರಫಳಿಗೆ ನೆನೆದೇವೋ

ಶಿವಚಿತ್ರಲಿಂಗ ಹೊನ್ನಟ್ಟಿ ಆಲೆಗೌಡನ ಕರೆಸಿ "ಕೆಂಗುರಿ ಮಲ್ಲೇಗೌಡ ಅನ್ನೋ ಈ ಸಾಹಸವಂತರ ಮಗ, ಸತ್ಯವಂತರ ಮಗ, ಇವತ್ತಿನ ದಿನದಾಗೆ ಬಲಗಾಲ ಮುಂದಿಕ್ಕೆ ನಿನ್ನ ಮನೆಗೆ ಬಂದರೆ ಬಡತನ ಹೋಗಿ ಬಯಲು ಸೇರತೈತೆ. ಸಿರಿತನ ಬಂದು ನಿನ್ನ ಮನೆ ಸೇರತೈತೆ. ಕರಕೋ ಇವನ್ನ ಒಳೀಕ್ಕೆ" ಅಂದ ಶಿವಚಿತ್ರಲಿಂಗ. ಕೆಂಗುರಿ ಮಲ್ಲೇಗೌಡ ಬರತಿದ್ದಂಗೆ ಆಲೇಗೌಡ

"ಸ್ವಾಮಿ ಕುಲದ ವಂಶ ಇದು, ಕ್ಷತ್ರಿಯ ವಂಶ, ಗೋಕುಲ ವಂಶ. ಈ ಅಂಟು ಮಂಟು ಸೂತಕ ಸಂಬಂಧವಾಗಿ ಈ ಗೊಲ್ಲನ ಮಗನ್ನ ತಗೊಂಡ್ಹೋಗಿ ಹ್ಯಾಂಗೆ ಸ್ವಾಮಿ ನನ್ನ ಊರಾಗೆ ಇಟ್ಕಾಮದು. ಕುಲದಾಗೆ ಜಾತಿಯಾಗೆ ಹೊರಗಾದೇನು?" ಅಂದ.

ಶಿವ ಚಿತ್ರಲಿಂಗ ಹೇಳಿದ

"ಅವೆಲ್ಲಾ ಆಗಲ್ಲ. ಕುಲ ಹನ್ನೆರಡು ಜಾತಿಯಾಗೂ ಸೂತಕ ಮೂರು ತಿಂಗಳು. ಸತ್ತರೆ ಮೂರುದಿನ, ಋತುಮತಿಯಾದರೆ ಇಪ್ಪತ್ತೊಂದಿನದ ಸೂತಕವಾದರೆ, ತಿಂಗಳಲ್ಲಿ ಒಂದು ಸಾರಿ ನಾಲ್ಕು ದಿನ ಆಚೆಗೆ ಇರಬೇಕು. ಪೂರಾ ಗೊಲ್ಲರ ಆಚಾರದಾಗೆ ನಡಿಬೇಕು. ಈ ಗೊಲ್ಲರಿಗೆ ಆದಂಗೆ ಆಗಬೇಕು. ಆ ಗೊಲ್ಲಕಡಗನೂ ಕೂಡ ನೀನು ಹಾಕಿಸಬೇಕು."

"ಆತು ಸ್ವಾಮಿ" ಅಂದ ಹೊನ್ನಟ್ಟಿ ಆಲೇಗೌಡ.

ಆ ಗಳಿಗ್ಯಾಗೇನೇ ಬಡಚಿತ್ತಮ್ಮನ್ನ ಕೆಂಗುರಿಮಲ್ಲೇಗೌಡನ್ನ ಕರಕೊಂಡು ಹೋಗಿ ಬಲಗಾಲು ಮುಂದಿಕ್ಕಿ ಚಿತ್ರದೇವರ ದೇವಸ್ಥಾನದಿಂದ ಹೊನ್ನಟ್ಟಿ ಆಲೇಗೌಡ ಕಳುವೇರಹಳ್ಳಿಗೆ ಹೋದ.

"ಜಾನಕಲ್ಲು ದೊಡ್ಡಕ್ಕ" ಅಂದ.

"ಯಾಕ ಮಾವ?"

"ಈ ಮಗೀಗೂ ಈ ಅಮ್ಮನಿಗೂ ಒಂದಿಷ್ಟು ಅಂಬಲಿ ಹಾಕು, ಅನ್ನ ಇಕ್ಕು. ಎಷ್ಟುದಿನ ಆತೋ ಅನ್ನತಿಂದು" ಅಂದ.

"ಬೆಳಿಗ್ಗೆ ಎದ್ದಾಗ ಗುಂಡೇಗೌಡರ ಮನೇಗೆ ಹೋಗಿ ಒಂದು ಸೇರು ಹೊಸದು ಜೋಳ ತಂದು ಕೊಟ್ಟಿದ್ದೆ. ಅದನ್ನು ಒಡೆದು ಹಾಕಿ ಅಂಬಲಿ ಕಾಸಿ ಬಂದೋರಿಗೆ ಇಕ್ಕಿ, ಹೋಗೋರಿಗೆ ಇಕ್ಕಿ, ನಾನು ನೀನು ಉಂಡವಿ. ಸೋರ್‍ಯಾಗೆ ಅಂಬಲಿ ಇಲ್ಲ. ಸೋರೆ ತೊಳೆದು ಡಬ್ಬದಾಗೆ ಇಕ್ಕಿ ಕವಚಿ ಇಟ್ಟೇನಿ. ಸೋರ್‍ಯಾಗೆ ಅಂಬಲಿ ಇಲ್ಲ' ಅಂದಳು."

ಹಂಗ ಅಂದು ಆಕೆ ಊಟಾ ಮಾಡಿಕೊಂಡು ಉಳಿದಿದ್ದು ಚಲ್ಲೋಕೆ ಹೋಗಿದ್ದಾಗ ಆಲೇಗೌಡ ಒಳಗೆ ಹಣಕಿ ನೋಡ್ತಾನೆ. ಒಂದ್ ಬಾಣಲೆ ತುಂಬಾ ಅನ್ನ ಇತ್ತು. ಪಕ್ಕದಾಗೆ ಅಂಬಲಿ ಇತ್ತು.

"ಆ ಯಮ್ಮನಿಗೂ ಅಷ್ಟು ಇಕ್ಕು, ಅವನಿಗೂ ಇಕ್ಕು, ನೀವು ಹೋಗಿ ಊಟಾಮಾಡ್ರಿ" ಅಂದಾಗ ಜಾನಕಲ್ ದೊಡ್ಡಕ್ಕ ಅಂದಳು

"ಗುಂಡಣ್ಣೋರು ಹೋಗ್ಯಾರೆ. ಜ್ವಾಳ ತತ್ತಾರೋ ತರಲ್ವೋ. ಅದ್ಕೆ ರಾತ್ರಿ ಅದ್ನೇ ಉಂಡು ಊಟಾಮಾಡಿ ಮನಿಕ್ಕೊಳ್ಳೋವ ಅಂತ ಮಡಗಿದ್ದೆ. ಆಲೆಗೌಡ ಅದ್ನ ನೀನೀವಾಗ ಅವರಿಗೆ ಊಟಕ್ಕೆ ಇಟ್ಟ ಬಿಟ್ಟೆಯಲ್ಲಾ" ಅಂದಾಳ.

"ಸುಮ್ಮನಿರೆ, ದೊರೆಮನೆ ಇರಲಿ ನಾವು ಧರ್ಮದ ದಾರಿಯಲ್ಲೇ ಹೋಗಬೇಕು. ಕರ್ಮ ಕೆಲವೇ ಕಾಲದ್ದು. ಧರ್ಮಾನೆ ಶಾಶ್ವತವಾದದ್ದು" ಅಂತ ಅಂಬಲಿ ತಗೊಂಡು ಆ ಹುಡುಗನ ಬಾಯಿಗೆ ಬಿಟ್ಟನಂತೆ ಆಲೆಗೌಡ. ಅವನ ಹಲ್ಲೆಲ್ಲ ಗಟಕಿಕೊಂಡಿತ್ತಂತೆ ಆ ಕೆಂಗುರಿ ಮಲ್ಲೇಗೌಡ ಅನ್ನೋ ಹುಡುಗಂದು.

ಈ ಯಮ್ಮಾ ಬಡಚಿತ್ತಮ್ಮಗೆ "ನೀನೂ ಊಟಾ ಮಾಡು" ಅಂತ ಆಕೇಗೂ ಅಂಬಲಿ ಇಕ್ಕಿದ್ನಂತೆ. ಆ ಹುಡುಗಂಗೂ ಅಂಬಲಿ ಬಾಯಿಗೆ ಬಿಟ್ಟನಂತೆ. ಹಂಗೆ ಹಿಂದಕ್ಕೆ ಬಿದ್ದು ಬಿಟ್ಟನಂತೆ ಆ ಹುಡುಗ. ಜೊಂಪು ಹತ್ತಿ ಮೂರು ಗಂಟೆ ಹೊತ್ತಾತು ಕೆಂಗುರಿ ಮಲ್ಲೇಗೌಡ ಎದ್ದು ನೆಟ್ಟಗಾಗೋ ಹೊತ್ತಿಗೆ, ಜಾನಕಲ್ ದೊಡ್ಡಕ್ಕ

"ಕುಲ ಯಾವದೋ, ಗೋತ್ರ ಯಾವದೋ, ಬಾಂಧವ್ಯ ಯಾವದೋ, ನಮ್ಮ ಮನ್ಯಾಗೆ ಅಂಬಲಿ ಇರಲ್ಲ ಆಲೆಗೌಡ. ಆ ಹುಡುಗ್ಗೆ ಊಟಕ್ಕಾಕಿ

ಪ್ರಾಣ ತೆಗೆದ್ಯಲ್ವೋ. ಅದು ಸತ್ತು ಹೋಯ್ತಲ್ಲೋ ನಮ್ಮ ಮನೆಯಾಗೆ. ಆ ಹುಡುಗನ ಕುಲ ಯಾವುದೋ ಭಾಂಧವ್ಯ ಯಾವುದೋ, ಗಾಳಿ ಹೊಕ್ಕೈತೋ, ದೆವ್ವ ಹೊಕ್ಕೈತೋ, ಪೀಡೆ ಹೊಕ್ಕೈತೋ, ತೊಗೊಂಡೋಗಿ ಆ ಹೊಂಡದ ಆಳಕ್ಕೆ ಮಾರನಹಳ್ಳಿ ಹೊಂಡಕ್ಕೆ ಎಸದುಬಿಡು ಅಂದಳು."

"ಸತ್ಯವಂತರ ಮನೆ ಹುಡುಗ ಸತ್ತಿಲ್ಲ ಸುಮ್ನಿರು" ಅಂದ.

ಮೂರುಘಂಟೆ ಹೊತ್ತು ಬಿಟ್ಟು "ಯಾಕಪ್ಪಾ" ಅಂದ.

"ಏನ್ರಪ್ಪಾ ನಿನ್ನ ಹೆಣ್ತಿ ಅಂದ ಮಾತು ಮುಂದಕೆ ಎಣಿಸಲಾರದಂಗೆ ನನಗೆ ಗೊತ್ತಾಗೈತಿ. ಕಳ್ಳಾಗೆ ಒಂದು ಬಚ್ಚಿಟ್ಕೊಂಡು ಬಾಯಾಗೊಂದು ಹೇಳಬೇಡಾ ಆಲೆಗೌಡ. ನಿನ್ನ ಹೆಂಡ್ತಿ ಅಂದ ಮಾತು ಏನದು ಹೇಳು ಆಲೆಗೌಡ?" ಅಂದ ಕೆಂಗುರಿ ಮಲ್ಲೇಗೌಡ.

"ಜಾನಕಲ್ ದೊಡ್ಡಕ್ಕ ಅಂದಿದ್ದು ಸ್ವಾಮಿ. 'ಹೆಂಗಸು ವಡವೆ ಅಲ್ಲ. ಹೇಲು ಮದ್ದಲ್ಲ, 'ಹೆಂಗಸಿನ ಮಾತು ಎರಡು ತಲೆ ಮುತ್ತು'. ನಿನ್ನಿಂದ ನನ್ನ ವಂಶ ಉದ್ಧಾರ ಆಗಬೇಕು. ಬಡತನ ಹೋಗಬೇಕು. ಸಿರಿತನ ಬರಬೇಕು. ಕೆಂಗುರಿ ಮಲ್ಲೇಗೌಡ. ಆ ಹೆಂಗಸು ಮುಂಡೆ ಮಾತು ಕೇಳಿ ಕೆಂಗುರಿಗಣ್ಣು ಉರಿಗಣ್ಣು ಬಿಡಬೇಡಾ" ಅಂದ ಆಲೇಗೌಡ.

"ಆದ್ರೂ ಆಲೇಗೌಡ ಹುಟ್ಟಿಸಿದೋನು ದೇವರ ದಯಮಾರ, ಅವನ ದಯದಿಂದ ಒಂಭತ್ತು ತಿಂಗಳು ಹೊಟ್ಯಾಗೆ ಇಟ್ಕೊಂಡೋಳು ಸಣ್ಣೋಳು ಕಂಬೇರ ಕಂಬಕ್ಕ. ಎದೆ ಹಾಲುಬಿಟ್ಟು ಅಲ್ಲಿಂದ ದೊಡ್ಡೋನ್ನ ಮಾಡಿದೋಳು ಈ ಬಡಚಿತ್ತಮ್ಮ. ಇವತ್ತು ನಾನು ಬಲಗಾಲು ಮುಂದಿಕ್ಕಿ ನಿನ್ನ ಮನೆಗೆ ಬಂದ ದೆಸೆಯಿಂದ, ನೀನು ಅಂಬಲಿ ನನ್ನ ಬಾಯಿಗೆ ಬಿಟ್ಟು ನನ್ನ ಪ್ರಾಣ ಉಳಿಸಿದ ದೆಸೆಯಿಂದ, ಗೆಪ್ತಿಯಾಗಿ ನನ್ನ ನಾಲಿಗೆ ಇರೋವರೆಗೂನೂ, ನನ್ನ ಪ್ರಾಣ ಇರೋವರೆಗೂನೂ ತುತ್ತು ಕೊಟ್ಟೋರನ್ನ ಮುಪ್ಪಿನ ತನಕಾನೂ ನೆನೀಬೇಕಂತೆ ಆಲೆಗೌಡ. ನಾನು ಮಾತ್ರ ನಿನಗೆ ನೋವು ಕೊಡೋಲ್ಲ. ಆದ್ರೆ ನಿನ್ನ ಹೆಣ್ತಿ ಒಂದು ಮಾತು ಅನ್ನಬಾರದಾಗಿತ್ತು ಅಂದವ್ಳೆ. 'ಹರಕೆ ಹನ್ನೆರಡುವರುಷ, ನ್ಯಾಯ ಮೂವತ್ತು ವರುಷ,' 'ಬರದಾಗೆ ಆಡಿದಮಾತು, ಕೆರದಾಗೆ ಹೊಡೆದ ಏಟು, ಇನ್ನು ನೂರು ವರುಷವಾಗಲಿ, ಮೂರುವರುಷವಾಗಲಿ, ಮೂರುತಿಂಗಳು ಆಗಲಿ, ಮೂರು ದಿನವೇ ಆಗಲಿ, ಇರುತ್ತೆ.' ಬಿಸಿಬಿಸಿ ಬೇಳೆಕಾಳು ಬೇಯಿಸಿ, ಅನ್ನಮಾಡಿಕೊಂಡು ಊಟಾ ಮಾಡಬೇಕು ಅಂತ ನಿನ್ನ ಹೆಣ್ತಿ ಪದಾರ್ಥ ತಗೊಂಡು ಕಳುವಾರಹಳ್ಳೀಲಿ ಇರೋ ಅಣ್ಣೋರ ಹೊಲಕ್ಕೆ ಬಂದು ಹಣ್ಣುಹಣ್ಣು ಆಗಿರೊ ಅವರೆಕಾಯಿ ತರೆಯೋ ಹೊತ್ತಿಗೆ, ಆ ಕಾರೆಗಿಡದಾಗಿರೋ ಕಟ್ಟಾಣಿ ನಾಗನ್ನ, ಮೂರಾಳು ಉದ್ದದ ಮೂಗುತ್ತದಾಗಿರೋ ಮಿಡಿನಾಗನ್ನ

ಕರೆದು, ಅವಳು ಹೋಗೊ ಬರೋ ಸಾಲಿನಾಗೆ ಬಿಚ್ಚಿಟ್ಟ ಹದಿನಾರು ಮೊಳದ ಸೀರೆವಳಗಾಸಿ ಒಬ್ರೂ ಮಟ್ಟಬಾರದ ಜಾಗಕ್ಕೆ, ಔಷಧಿ ಹಚ್ಚಬಾರದ ಜಾಗಕ್ಕೆ, ಎಡಗಡೆ ಒಳಸುರಿಗೆ ಹಾಕಿ ಕಡಿಸಿದ ಮೇಲೆ ಕೆಂಗುರಿ ಕಣ್ಣಿನೋನು ಕೆಂಗುರಿ ಮಲ್ಲೇಗೌಡ ಅಂತ ಕರಿಬೇಡ ಜಾನಕಲ್ ದೊಡ್ಡಕ್ಕ. ಮುಡುಪಿನ ದುಡ್ಡು ನಿನ್ನ ಸೆರಿಗಿನಾಗೆ ಕಟ್ಟಿಕೋ. ಇನ್ನು ಹದಿನಾರು ವರುಷ ಬೇಕು ಹಾವು ಕಡಿಸಬೇಕಾದ್ರೆ, ನಿನ್ನ ಪಕ್ಕೆಯಾಗೆ ದೊಡ್ಡಮ್ಮ" ಅಂತ ಹೇಳಿದ.

"ಆಲೆಗೌಡ" ಅಂದ ಕೆಂಗುರಿ ಮಲ್ಲೇಗೌಡ.

"ಯಾಕ್ ಸ್ವಾಮಿ",

"ನಿನ್ನ ಹೆಂಡ್ತಿಗೆ ಮಾಡಬಾರದ್ದು ಮಾಡಿದ್ದಕ್ಕೆ ಒಂದು ಅಕ್ರಮತನದ ಮಾತಿಗೆ ಒಂದು ಕಟ್ಟಿನ ಸಾಲು ಕೊಟ್ಟಿದೀನಿ. ಇನ್ನು ಹದಿನಾರು ವರ್ಷಕ್ಕೆ ಜಾನಕಲ್ ದೊಡ್ಡಕ್ಕನ್ನ ಮಿಡಿನಾಗರ ಬಿಟ್ಟು ಹಾವು ಕಡಿಸೋದು ನಿಜ ಆಲೆಗೌಡ. ನಾನು ಬಲಗಾಲು ಮುಂದಿಕ್ಕಿ ನಿನ್ನ ಮನೆಗೆ ಬಂದ ದೆಸೆಯಿಂದ ನಿನ್ನ ಮನೆಯಾಗೆ ಏನೇನು ಕಾಣಿಸತ್ತೈತಿ ನೋಡೋ ಆಲೆಗೌಡ ಇವಾಗ" ಅಂದ.

"ಭಾಗ್ಯಲಕ್ಷ್ಮಿ ನಾಲ್ಕು ಮುಖ್ಯ ನಾಟ್ಯವನು ಆಡ್ತಾಳೆ ನೋಡೋ ಕೆಂಗುರಿ ಮಲೇಗೌಡ" ಅಂದ.

"ಅಪ್ಪಾ" ಅಂದ.

"ಯಾಕಪ್ಪಾ?" ಅಂದ.

"ಕಂಬೇರು ಗೊಲ್ಲರು ಏಳುಗೂಡಿನ ಆವಿನ ದನ ಆಳಿದ್ರೇನಂತೆ. ಈ ಊರಾಗೆ ಉಂಡ್ಕಂಡು ಸುಮ್ನೆ ಇರೋನಲ್ಲ ನಾನು. ಊರಾಗಿರೋರ ಮಗನಲ್ಲ ನಾನು. ಕಾಡುಗೊಲ್ಲರ ಕುಲದಾಗೆ ಹುಟ್ಟಿ ಕಾಡು ಸೇರಬೇಕು. ಕಂಬಳಿ ಕೋರಿ ಹಾಕಿ ಹುರುಳಿಕಾಳು ತಿನ್ನಬೇಕು. ಈ ಊರಾಗೆ ಇರೋರ ಮಗನಲ್ಲ ನಾನು ಆಲೆಗೌಡ" ಅಂದ.

"ಕಂಬೇರ ಗೊಲ್ಲರು ಏಳುಗೂಡಿನ ದನ ಆಳಿದವ್ರಂತೆ. ನಾನು ಏಳು ಗೂಡಿನಿಂದ ಏಳು ಕರ ತರಬೇಕು. ನಾನು ಏಳು ಗೂಡಿನ ದನ ಆಳಬೇಕು. ನಮ್ಮ ತಾತಂದಿರು, ನಮ್ಮ ಅಪ್ಪಂದಿರು ಏಳು ಗೂಡಿನ ದನ ಆಳಿದ್ರಂತೆ. ನಾನೂ ಆಳಬೇಕು" ಅಂತ ಅವ ಏಳು ಕರುವಿಗೆ ಆಗೋ ಅಷ್ಟ ಹೊನ್ನು ತೊಗೊಂಡು ಚಿತ್ರದೇವರ ದೇವಸ್ಥಾನಕ್ಕೆ ಬಂದು ಮಹಾಮಂಗಳಾರತಿ ಮಾಡಿಕೊಂಡು "ಶಿವಚಿತ್ರಲಿಂಗ, ಕಾಟಮಲಿಂಗ, ಚಿಕ್ಕೋನು ನರಸಿಂಹ, ಹಿರಿಯೋನು ಹಿರಿ ಓಬಳದಯ್ಯ, ಕಲ್ಲೇಲಿಂಗ, ಮಲ್ಲೇಲಿಂಗ, ಮೈಲಾರಲಿಂಗ, ಅಂಗ್ಯೆಲಿ ಆರುಕೋಟಿ ಲಿಂಗ, ಮುಂಗ್ಯೆಲಿ ಮೂರುಕೋಟಿ ಲಿಂಗ,

ಸತ್ಯವಾಗಿ ಸಾವಿರಕೋಟಿ ಲಿಂಗ, ಪಾದದಾಣೆ ನಾನು ಹೇಳೋ ಮಾತು ಕೇಳಿ, ಏಳು ಕರುಗಳನ್ನು ತರೋಕೆ ಹೊಂಟಿದೀನಿ ಹೊನ್ನು ತಗೊಂಡು, ನನಗೆ ಆಶೀರ್ವಾದ ಮಾಡಬೇಡು ಶಿವಚಿತ್ರಲಿಂಗ ನನಗೆ ಆಶೀರ್ವಾದ ಕೊಡಬೇಕು ಮನೆದೇವರೆ" ಅಂದ. "ಆಶೀರ್ವಾದ ಕೊಟ್ಟಿದೀನಿ. ಹೋಗಿ ಬಾ ಕೆಂಗುರಿ ಮಲ್ಲೇಗೌಡ" ಅಂದ.

ಕಂಬೇರ ಗೊಲ್ಲರ ಹಟ್ಟಿಗೋಗಿ ಏಳುಗೂಡಿನ ದನದ ಹಟ್ಟಿ ತಾವ ನಿಂತು ಕೆಂಗುರಿ ಮಲ್ಲೇಗೌಡ, ಹೊನ್ನಟ್ಟಿ ಆಲೆಗೌಡ,

"ಏಳುಗೂಡಿನ ಆವಿನಾಗೆ ಏಳು ಕರು ತಗೊಂಡು ಹೋಗ್ತೀವಿ. ಅದಕ್ಕೆ ಏಳು ಕರಗ, ಅಂದ್ರೆ ಏಳುತಂಬಿಗೆ ಹೊನ್ನು ತಂದಿದೀವಿ. ಕರುಗಳನ್ನು ಹೊಡಕೊಡ್ರಿ" ಅಂದರು.

ಆ ಹೊತ್ತಿನಾಗೆ ಅವರು ಆ ಘಳಿಗೆನಾಗೆ, ಆ ನನ್ನ ಮಕ್ಕಳು ಸುಳಿ ಸುದ್ದ ಇಲ್ಲದೋವು, ಐಬುತ್ಯೆಬು ಇರೋವು, ಅಂಡೆಗಾಲಿನೋವು, ದುಂಡು ಮುಖದೋವು, ಕೋಡು ಉದ್ದನೋವು, ಸಿಡಿಗಲಿನೋವು, ಮೋಟು ಬಾಲದೋವು, ಬಾರಿಗೆ ಸುಳಿಯೋವು, ಚಿಕ್ಕ ಸುಳಿಯೋವು, ಹಣೆ ಉದ್ದನೋವು, ಮೋಟು ಬಗರಿಯೋವು, ಬೆಡಗು ಸುಳಿಯೋವು, ಮುಕ್ಕಣ ಸುಳಿಯೋವು ಅಂತ ನೋಡಿ ಏಳು ಕರುಗಳನ್ನ ಎಣಿಸಿ ಹೊಡಕೊಂಡು ಬಂದು ನಿಲ್ಲಿಸಿದರು. ಬಣ್ಣಕೆ ಲಕ್ಷ ಬೆಳ್ಳಿ ನಾಣ್ಯ, ಕೊಂಬು ಕೋಡು ನಕ್ಷತ್ರ, ಕಾಲು ನೋಡ್ರಿ ಕತ್ತಲ ಕಂಬ, ಒಂದೊಂದು ಭುಜ ಮೂರುಮೂರು ಮೊಳ ಉದ್ದ ಇದ್ದಾವೆ. ತಿದ್ದಿದ ಗೊಂಬೆ ಪಟ್ಟದ ಆನೆ ಹಾಂಗೆ ನಿಂತಾವೆ. ಅವು ಇರೋ ಚೆಂದಕ್ಕೆ ಈಚೆ ಹೊಡಕೊಂಡು ಬಂದ ಹೊನ್ನಟ್ಟಿ ಆಲೆಗೌಡ.

"ಯಪ್ಪಾ" ಅಂದ.

"ಯಾಕಪ್ಪಾ?

"ಈ ಏಳು ಮಣಕಗಳು ನಿನಗೆ ಒಪ್ಪಿಗೆಯೇನೋ ಕೆಂಗುರಿ ಮಲ್ಲೇಗೌಡ"?

"ಯಪ್ಪಾ, ನೆಲ ಊಳಿ ಖಂಡುಗ ಬೆಳೆದು ಇರುವೊ ಎಂಭತ್ತು ಕೋಟಿ ಜೀವರಾಶಿಗೂ ಅನ್ನ ಕೊಡೋನು ನೀನು ಒಕ್ಕಲದ ಮಗ, ನೀನು ಅಷ್ಟಕ್ಕೆ ಸರಿ ಹೊರತು ಸಾಲು ಸೊಪ್ಪಿನ ಕೊನೆ ಈ ಹಸುವಿನ ಮಣಕದ ಬುಡ ಬುನಾದಿ ನಿನಗೆ ಗೊತ್ತಿಲ್ಲ. 'ಬಲ್ಲವರಿಗೆಲ್ಲ ಮಲ್ಲನೆನಿಸಿದ ಗೊಲ್ಲ ಮಾಡಿದನೆಲ್ಲ' ಅಂತ ಹೇಳಿ ಈ ಗೊಲ್ಲ ಮಾಡಿರೋನು ಈ ಪ್ರಪಂಚದ ವ್ಯವಹಾರನೆಲ್ಲ. ಮಾಡಿ ಹಿಂದಕೆ ನಿಂತಕೊಂಡ ಮುಂದಕೆ ಬರಲಿಲ್ಲ. ಆದ್ರೆ ಆ ಇದರ ಅರ್ಥ ನಿನಗೆ ಗೊತ್ತಿಲ್ಲ. ಈ ಏಳು ಮಣಕಗಳಲ್ಲೂ ಏಳು ಸುಳಿ ಐದಾವೆ. ಏಳು ಮಿಸ್ಟೀಕ ಐದಾವೆ. ಬೆರಸು ಹಸುವಿನ ಮಣಕುಗಳನ್ನು ಹಿಂದಕೆ ಕೊಟ್ಟು ಬಾ ಮತ್ತೆ" ಅಂದವನೇ

"ಏ ಕಂಬೇರ ಗೊಲ್ಲರಾ, ನಾನ್ಯಾರು ಅಂಬೋದು ನಿಮಗೆ ಗೊತ್ತೈತ್ರ, ಹಿಂದೆ ಕಂಬೇರ ಕಂಬಕ್ಕನ್ನ ಯಾರಿಗೆ ಕೊಟ್ಟು ಮದುವೆ ಮಾಡಿದ್ರಿ? ನಿಮ್ಮ ಹೆಣ್ಣು ಮಗಳನ್ನು. ಸಣ್ಣ ಸಾಲಿ ದಟ್ಟಿಯೋನು ಅನ್ನೋ ದೇವರದಯಮಾರಂಗೆ ಕೊಟ್ಟು ಮದುವೆ ಮಾಡಿದ್ರಿ. ಹುಟ್ಟಿಸಿದೋನು ದೇವರ ದಯಮಾರ. ಒಂಭತ್ತು ತಿಂಗಳು ಹೊಟ್ಟೆಯಾಗಿಟ್ಟುಕೊಂಡು ಜನುಮ ನೀಡಿದೋಳು ಸಣ್ಣೋಳು ಕಂಬಕ್ಕ. ಅವಳ ಹೊಟ್ಟೆಯಾಗೆ ಹುಟ್ಟಿರೋನು ನಾನೇ ಕೆಂಗುರಿ ಮಲ್ಲೇಗೌಡ. ಕೆಂಗುರಿಗಣ್ಣಿನೊನು, ಬೆಳ್ಳಿ ಮೀಸೆಯೋನು, ಬಗರಿ ಗಡ್ಡದೋನು, ಮಾರನವರ ಗೊಲ್ಲರಮಗ, ಕೆಂಗುರಿಗಣ್ಣಿನೋನು ಕೆಂಗುರಿ ಮಲ್ಲೇಗೌಡ. ನಿಮ್ಮ ಸಣ್ಣೋಳು ಕಂಬಕ್ಕನ ಹೊಟ್ಟೆಯಾಗೆ ಹುಟ್ಟಿದೋನು, ನಿಮ್ಮ ವಂಶಕ್ಕೆ ಮೊಮ್ಮಗನು ನಾನೇ, ಗಂಡನು ನಾನೇ. ಈವಾಗ ಸರಿಯಾದ ಹಸುವಿನ ಮಣಕಗಳನ್ನು ಕೊಡ್ತೀರಾ ಇಲ್ಲಾ ಕೆಂಗುರಿಗಣ್ಣು, ಉಕ್ಕಿನಬಾಣ ಬಿಟ್ಟು ನಿಮ್ಮ ವಂಶ ನಾಶ ಮಾಡಲೋ" ಅಂದ.

"ನಮ್ಮ ಹೆಣ್ಣು ಮಗಳ ಹೊಟ್ಟೆಯಾಗೆ ಹುಟ್ಟಿದಮೇಲೆ ಏನು ಹೇಳೋದು" ಅಂತ ಅವರು ಏಳು ಕರುಗಳನ್ನು ಹೊಡೆದುಕೊಟ್ಟರು.

"ನಾವು ಹೊಡಕೊಡಲ್ಲ. ಏಳುಕರುಗಳು, ಏಳುಗೂಡಿನ ದನವಿನಾಗೆ ಏಳುಕರುಗಳನ್ನು ನೀನು ನಿನಗೆ ಒಪ್ಪಿದೋವನ್ನು ಹೊಡಕೊಂಡು ಹೋಗಿಬಿಡು" ಅಂತ ಮಾವುಗಳು ಸುಮ್ಮನಾಗಿ ಬಿಟ್ಟರು.

ಅವರು ಸುಳಿ ಶುದ್ಧ ಇರೋವು ಕರುವಿನ ಮಣಕಗಳನ್ನು ಹೊಡೆದು ಕೊಟ್ಟುಬಿಟ್ಟರು. ಏಳುಕರುಗಳನ್ನು ಅವನು ಅಟ್ಟಿಯಾಡಿ ಬಡಕರುಗಳನ್ನು ಹೊಡಕೊಂಡು ಬಂದ. ಕಳುವಾರಹಳ್ಳಿ ಬೇವಿನಹಳ್ಳಿ ಬೇಲಿಹತ್ತಿರ ಒಂದು ರೊಪ್ಪ ಹಾಕಿ ವಾರ ಹೋಗಿ ತಿಂಗಳು ಕಳೆಯೋ ಹೊತ್ತಿಗೆ ಆ ವಾರ ಹೋಗಿ, ಹದಿನೈದು ದಿನ ಮೇಯಿಸೋ ಹೊತ್ತಿಗೆ ಬಣ್ಣಕೆ ಲಕ್ಷ ಬೆಳ್ಳಿ ನಾಣ್ಯ, ಕೊಂಬುಕೋಡು ನಕ್ಷತ್ರ, ಕಾಲು ನೋಡ್ರಿ ಕೊಡಲಿ ಕಂಬ, ಒಂದೊಂದು ಭುಜ ಮೂರುಮೊಳಕ್ಕೆ ಎದ್ದು, ಏಳು ಹಸುವಿನ ಮಣಕಗಳು ಬಾರೀಗೆ ಬಂದಾವೆ. "ಹೊನ್ನಟ್ಟಿ ಆಲೆಗೌಡ, ಈ ಹಸುವಿನ ಮಣಕಗಳು ಬಾರಿಗೆ ಬಂದವೆ. ಈ ಏಳು ಹಳ್ಳಿ ಒಳಗೆ ಎಲ್ಲಾದ್ರೂ ಒಂದು ಹೋರಿ ಪತ್ತೆ ಮಾಡಪ್ಪಾ, ಈ ಕರುಗಳನ್ನು ಬಾರಿಗೆ ಬಿಡಬೇಕು" ಅಂತ ಕೆಂಗುರಿ ಮಲ್ಲೇಗೌಡ ಹೇಳಿದ. ಹೊನ್ನಟ್ಟಿ ಆಲೆಗೌಡ ಮೂರು ದಿನದವರೆಗೂ ತಿರುಗಿದನಂತೆ. ಅವನಿಗೆ ಆಗೋ ಅಂತ ಒಂದೇ ಒಂದು ಹೋರಿ ಕರು ಸಿಕ್ಕಲಿಲ್ಲವಂತೆ. ರೋಸಿ ಬಂದು ಮನೆಗೆ "ಕೆಂಗುರಿ ಮಲ್ಲೇಗೌಡ ಈ ಹಸುವಿನ ಮಣಕಗಳಿಗೆ ಆಗೋವಂತವು ಹೋರಿ ನನಗೆ ಸಿಗಲಿಲ್ಲ". ಅಂದ. ಕೆಂಗುರಿ ಮಲ್ಲೇಗೌಡ ಅದಕ್ಕೆ "ನಾನು ಹೋರಿ ತರಬೇಕಾದರೆ ಆಲೆಗೌಡ ಮೂರು ಬೊಕ್ಕಸದಾಗೆ ಬೆಳ್ಳಿ ರೂಪಾಯಿ ತುಂಬಕೋಬೇಕು; ಮೂರು ಬೊಕ್ಕಸ ಬೆಳ್ಳಿರೂಪಾಯಿ ತುಂಬಿಕೊಂಡು ಹೊರಟರೆ ನಿನ್ನ ಹೆಂಡತಿ ಕಯ್ಯ ಕಯ್ಯ ಅಂತಾಳೆ, ಇದ್ಯಾಕೆ ಇಷ್ಟೊಂದು

ದುಡ್ಡು ಅಂತಾಳೆ ಜಾನಕಲ್ ದೊಡ್ಡಕ್ಕ. ನಾವು ಹೋಗೋ ದಾರಿಯಾಗೆ ಅಪಶಕುನ ಆಗಿಬುಡ್ತದೆ. ಹೆಂಗಸರು ಜೇಡಹತ್ತಿದ ಹಾಂಗೆ. ನೀನು ಆಚೆಕಡೆಗೆ ಸಾಗಹಾಕಿಬಿಡು ಆ ಯಮ್ಮನ್ನ. ಅವಳಿಗೆ ಹೇಳು 'ಒಂದು ಸೇರು ಭತ್ತ ತಗಂಡು ಹೋಗಿ ಗುಂಡಣ್ಣೋರ ಮನೆ ತಾವ ಭತ್ತ ಕುಟ್ಟಿಕೊಂಡು ಬಾ ಹೋಗು, ನಿನ್ನ ಮಗ ಅನ್ನ ಉಣ್ಣಬೇಕಂತೆ, ತುಪ್ಪ ಕಾಸಬೇಕಂತೆ, ಇಸಕಂಬ್ರ ಮಾಡಬೇಕಂತೆ. ಇಸಕಂಬ್ರ ಮಾಡಿ ತುಪ್ಪ ಕಾಸಿಕೊಂಡ ಅನ್ನ ಮಾಡಿದ್ರೆ ನಿನ್ನ ಮಗ ಅನ್ನ ಉಣ್ಣತಾನಂತೆ, ಇಲ್ಲದಮ್ಯಾಲೆ ಮುದ್ದೆ ಊಟಾ ಮಾಡಲ್ವಂತೆ' ಅಂತ ಹೇಳಿ ಇವತ್ತು ಆಯಮ್ಮನ್ನ ಗುಂಡಣ್ಣೋರ ಮನೀಗೆ ಕಳಿಸಪ್ಪ ಅಂದ. ಆಯಮ್ಮನ್ನ ಅತ್ಲಾಗೆ ಸಾಗು ಹಾಕಿಬಿಟ್ಟು ಅಪ್ಪ ಮಗ ಇಬ್ರೂನೂ ಆ ಮನೇಗೆ ಹೋದರು.

ಹೋಗಿ 'ಯಪ್ಪಾ' ಅಂದ.

'ಏನಪ್ಪಾ?'

'ಈ ಮೂರು ಗೆರಸಿನಾಗೆ ಏನೇನೈತಿ ನೋಡಪಾ' ಅಂದ.

"ಈ ಮೂರು ಗೆರಸಿನಾಗೂ ಬೆಳ್ಳಿ ರೂಪಾಯಿ ತುಂಬಿ ತುಳುಕತೈತಿ. ನೀನು ಬಂದ ಘಳಿಗೆಯಾಗಿಂದ ನನ್ನ ಮನೀನೆ ಬಂಗಾರ ಆಗಿ ಹೋಗಿಬಿಡ್ತು ಮಗನೆ".

"ಈ ಮೂರು ಗೆರಿಸಿನಾಗೆ ಬಂಗಾರ ತುಂಬಬೇಕಾಗಿದ್ರೆ ಮೂರುಬೆಳ್ಳಿ ರೂಪಾಯಿ ತೊಗೋಬೇಕಾಗಿದ್ರೆ ಆಳಿಗೊಂದು ಘಾತ್ನ ತೊಗೋ ಮ್ಯಾಲೆ ಒಂದು ಘಾತ್ನ ತೊಗೊ."

ಅಂತ ಹೇಳಿದ. ಹದಿನಾರು ಸೇರು ನಿಬ್ಬಳದಾಗೆ ನಾವು ಅಳೆಯೋದು. ಅದನ್ನು ಅಘ್ನಾ ಅಂತಾರೆ. ಹಾಗೆ ಇಬ್ರೂ ಚಿತ್ರದೇವರ ಅಪ್ಪಣೆ ತೊಗೊಂಡು ಬರಬೇಕಾದ್ರೆ ಚಿತ್ರದೇವರು ಹೇಳತಾನೆ "ಏಳುಗೂಡಿನ ಆವಿನ ದನದ ರೊಪ್ಪಕ್ಕೆ ಕಳ್ಳೆ ಬಡಿದು ಸಣ್ಣೋಳು ಕಂಬಕ್ಕನ್ನ ಕರಕೊಂಡು ದೇವರ ದಯಮಾರ ಮಾರನಹಳ್ಳಿ ಗುಂಡಣ್ಣೋರ ಮನೆ ಹತ್ತಿರ ಕೆರೆಯಾಗೆ ನೀರು ಕುಡಿಸೋಕೆ ಅಂತ ಬಂದ. ಆ ಜಾಗ ಬಿಟ್ಟು ಮೂರು ಫರ್ಲಾಂಗು ಮುಂದಕೆ ಬಂದಾಗ ದೇವರ ದಯವಾರಂಗೆ ದುಃಖ ಉಕ್ಕಿ ಒತ್ತರಿಸಿಕೊಂಡು ಬಂದ್ ಬಿಡ್ತೈತೆ.

'ಕಂಬಕ್ಕ' ಅಂದ.

'ಯಾಕ್ ಸ್ವಾಮಿ' ಅಂದಳು,

'ಈ ಆವಿನ ದನದಾಗೆ ಹಾಲು ಕುಡಿದು ಏಳು ವರ್ಷ ದೊಡ್ಡೋನಾಗಿ ಬಾಳಿದ್ದೆ. ಇವತ್ತಿನ ದಿನದಾಗೆ ನನ್ನ ಆವಿನ ದನಕ್ಕೆ ನಾನೇ ಕಳ್ಳೆ ಬಡಿದು, ನಾನು ಮುಂದಕ್ಕೆ ಹೋಗೊಹಂಗೆ ಆತಲ್ಲ. ನಿಂತಕೋ ಹೇಳ್ತೀನಿ:

ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ಕಡೆಹುಟ್ಟಿನ ಕಟ್ಟಾಣಿ ಬುದ್ದಿಯಲ್ಲಿ ಬುದ್ಧಿವಂತೆ,
ಕೊಂಬಿನಲ್ಲಿ ಕುಲವಂತೆ, ಬಾಲದಲ್ಲಿ ಬಲವಂತೆ,
ಮುಖದಲ್ಲಿ ನೋಡಿದ್ರೆ ಸುಂದರ ಸುಕ್ಕೆ ಬೊಟ್ಟಿನ ಚೆಲುವೆ,
ದೊಡ್ಡೆಳ್ಳೂರು ಗೊಡ್ಡುಗಾಳಿ ಇಂದಿಗೆ ಹರೀತಮ್ಮಾ
ನನ್ನ ನಿಮ್ಮ ಅನ್ನ ನೀರಿನ ಋಣ'

ಅಂದ. ಅಷ್ಟು ಅಂದಿದ್ದೇ ಇಪ್ಪತ್ತೈದು ಅಡಿ ಎತ್ತರದ ಕಳ್ಳೆ ಬೇಲಿ ನೆಗೆದು ಗೊಡ್ಡು ಗಾಳಿ ಅನ್ನೋ ಹಸಿ ಮಣಕ ನಿಮ್ಮ ಅಪ್ಪ ಅಮ್ಮನ ಬೆನ್ನುಹತ್ತಿತ್ತು. ಆ ಹಸಿ ಮಣಕ ಮಾರನಹಳ್ಳಿ ಊರಮುಂದಕೆ ನೀರು ಕುಡಿಯಾಕೆ ಅಂತ ಕೆರೆಗೆ ಹೋದಾಗ ಇವರು ಮುಳ್ಳಿನ ಬಿದಿರು ಮೆಳೆಯಾಗೆ ಅಡಕ್ಕೊಂಡಿದ್ರು. ಮಣಕ ಬಂದು ನೀರು ಕುಡಿದು ಮ್ಯಾಲೆ ಬಂದು ನೋಡೋ ಹೊತ್ತಿಗೆ 'ಅಂಬಾ' ಅಂದಾಗ ರಾಮಲಕ್ಷ್ಮಣ ಅಂಬೋ ಹದಿನಾರು ಗೂಡಿನ ದನಾ ಬಿಟ್ಟುಕೊಂಡಿದ್ದ ಪಾಳೆಗಾರ ಇದನ್ನ ಕೇಳಿ ಬೆಟ್ಟದ ಮ್ಯಾಲೆ ನಿಂತಕೊಂಡು 'ಅಂಬಾ' ಅಂತ ಹಸುವನ್ನು ಕರೆದ. ಆ ಹಸುವಿನ ಮಣಕ ಹೋಗಿ ಆ ಪಾಳೇಗಾರನ್ನ ಮಂದೆ ಸೇರಿ ಏಳು ಏಳು ಹದಿನಾಲ್ಕು ವರುಷಕ್ಕೆ ಏಳು ಕರು ಕೆಂದು ಹಾಕೈತೆ. ಈ ಏಳು ವರುಷಕ್ಕೆ. ಏಳು ಸಲಾ ಹೆಣ್ಣು ಕರ ಈದೈತೆ. ಏಳು ಹೆಣ್ಣು ಕರ, ಈಗೊಂದು ಗಂಡು ಹೋರಿ ನಿನ್ನ ಅಪ್ಪನ ಹಸು ಗೊಡ್ಡುಗಾಳಿ ಅನ್ನೋ ಹಸುವಿನ ಹೊಟ್ಟೆದಾಗೆ ಬಂದೈತೆ. ಈಗ ನರಲೋಕ, ಸುರಲೋಕ ದೇವಲೋಕದಾಗೆ ಹುಡುಕಿದರೂ ನಿನಗೆ ಗಂಡು ಹೋರಿ ಸಿಕ್ಕೋದಿಲ್ಲೋ ಕೆಂಗುರಿ ಮಲ್ಲೇಗೌಡ. ಗೊಡ್ಡುಗಾಳಿ ಅನ್ನೋ ಹಸುವಿನ ಹೊಟ್ಟೆಯಾಗೆ ಹುಟ್ಟಿರೋ ಹೋರೀನೇ ತರಬೇಕು ಕೆಂಗುರಿ ಮಲ್ಲೇಗೌಡ" ಅಂದ.

'ನಿಮ್ಮ ಅಪ್ಪನ ಗೊಡ್ಡುಗಾಳಿ ಹಸುವಿನ ಹೊಟ್ಯಾಗೆ ಹುಟ್ಟಿರೋ ಹೋರಿ ಕರುವನ್ನೇ ತರಬೇಕು' ಅಂತ ಮನೆದೇವರು ಚಿತ್ರದೇವರು ಹೇಳೈತೆ. ಹೊನ್ನಟ್ಟಿ ಆಲೇಗೌಡನ ಕರಕೊಂಡು ಆರುನೂರು ಅಘ್ನಾ ಬೆಳ್ಳಿ ರೂಪಾಯಿ ತಗೊಂಡು ಒಂಭತ್ತು ದಿನ ರಾಮ ಲಕ್ಷ್ಮಣ ಅನ್ನೋ ಬೆಟ್ಟದ ಮುಂದೆ ನಿಂತುಗೊಂಡು

"ಎಲ್ಲೈತೋ ಪಾಳೆಗಾರ ನಿನ್ನ ಮನೆ?" ಅಂತ ಪಾಳೆಗಾರನ್ನ ಕೇಳವ್ನೆ.

"ನೀವು ಯಾರು?" ಅಂದ.

'ಕೊಂಕಿ ಜರಿಮಲೆಯವರು ಕಣಯ್ಯ' ಅಂದ.

'ನೀವು ಯಾವೂರೋರಯ್ಯ ಗೊಲ್ಲಗೌಡ' ಅಂದ.

"ನಾವು ಪಟ್ಟೆಹಳ್ಳಿ ಪಾಳೇಗಾರರು ಕಣಯ್ಯ, ಮಾರನಹಳ್ಳಿಯವರು".
"ಎಲ್ಲಿಗೆ ಹೋಗಿದ್ರಿ?"

"ಬರಗೂರು ರಾಮೇಗೌಡಂದು ಹೋರಿ ಐತೆ ಅಂದ್ರು. ನೋಡಾನ ಅಂತ ಹೋದ್ವಿ. ನಮ್ಮ ಏಳು ಹಸುವಿನ ಮಣಕಗಳ ಸೊಂಟಕ್ಕಾಗೋ ಹಾಂಗೆ ಇರ್ಲಿಲ್ಲ ಹೋರಿ. ಮಾರನಹಳ್ಳಿ ಊರಮುಂದೆ ಹಾಸಿ ಬರ್ತಾ ಇದ್ದೆವು. ಆ ಗುಂಡಣ್ಣೋರ ಮನೆ ತಾಕ ಏನು ಹೇಳಿದರಪ್ಪಾ ಅಂದ್ರೆ 'ನಿಮಗೆ ಸಾಟಿ ಆಗೋ ಅಂತ ಹೋರಿ ರಾಮಲಕ್ಷ್ಮಣ ಅಂಬೋ ಬೆಟ್ಟದ ಮುಂದೆ ಹದಿನಾಲ್ಕು ಗೂಡಿನ ದನ ಆಳವ್ನೆ ಪಾಳೇಗಾರ. ಅವನ ತಾವ ಐತೆ. ಆ ಹದಿನಾಲ್ಕು ಆವಿನ ಗೂಡಿನಾಗೆ ಹದಿನಾರು ಜಾತಿ ಹೋರಿ ಅದಾವೆ. ಒಂದಲ್ಲ ಒಂದು ಹೋರಿ ನಿಮಗೆ ಆಗ್ತದೆ' ಅಂತ ಆ ಗುಂಡಣ್ಣೋರ ಮನೆತಾವ ಹೇಳಿದ್ರು. ಅದಕ್ಕಾಗಿ ನಾವು ಬಂದೀವಯ್ಯ. ಹದಿನಾಲ್ಕು ಗೂಡಿನ ದನದಾಗೆ ಎಷ್ಟು ಹೋರಿ ಅದಾವೆ? ಒಂದು ಹೋರಿ ಹೊಡೆದು ಕೊಡೋಲೇ ಪಾಳೇಗಾರ. ನಮ್ಮ ಹಸುಗಳಿಗೆಲ್ಲಾ ಹೋರಿ ಬಿಟಗಂಡು ನಮ್ಮ ಹಸುಗಳು ಈದು ಆದಮೇಲೆ ನಿಮ್ಮ ಹೋರಿ ತಂದು ಇಲ್ಲಿ ಬಿಡ್ತೀವಿ" ಅಂತೇಳಿ ಕೆಂಗುರಿ ಮಲ್ಲೇಗೌಡ ಕೇಳಿದ.

"ಅಯ್ಯಾ ಗೊಲ್ಲಗೌಡ, ನನ್ನ ಅವಿನ ದನದಾಗೆ ಹೋರಿ ಇದ್ದಾಂಗೆ ನಿನ್ನ ಹಟ್ಟಿನಾಗೆ ಹೋರಿ ಇದ್ದಿದ್ರೆ ನೀನ್ಯಾಕೆ ನನ್ನ ಹಟ್ಟಿತಾವಕ್ಕೆ ಇವತ್ತು ಬತ್ತಿದ್ದೆ. ಹದಿನಾಲ್ಕು ಗೂಡಿನ ದನ ಮಾರನೋರ ಮನೆ ತಾವ ಬರ್ತಾ ಇದಾವೆ. ಅಲ್ಲಿ ಹದಿನಾರು ಜಾತಿ ಹೋರಿಯಾಗೆ ಯಾವುದು ನಿನಗೆ ಸಾಟಿ ಆಗ್ತದೋ ಆ ಹೋರಿ ಹೊಡಕೊಂಡು ಹೋಗು ಗೊಲ್ಲಗೌಡ" ಅಂದ.

ಹೊನ್ನಟ್ಟಿ ಆಲೆಗೌಡಗೆ "ಯಪ್ಪೋ" ಅಂದ ಕೆಂಗುರಿ ಮಲ್ಲೇಗೌಡ.

"ಏನಪ್ಪಾ?"

"ಯಾವ ಹೋರಿ ಹೊಡಕೋತ್ಯೋ ಹೊಡಕೋ ಅಪ್ಪ ಈಚೆಗೆ" ಅಂದ ಹಿಂದಕೆ ಹೋಗಿ. ಹಿಂದ್ಲಿಂದ ಮುಂದಕೆ ಬಂದು ಕೆಂಗುರಿ ಮಲ್ಲೇಗೌಡ ನೋಡಿದ. ಒಂದಕ್ಕಿಂತ ಒಂದು ಇದು ಅನ್ನೋ ಹಂಗಿಲ್ಲ, ಅದು ಅನ್ನೋ ಹಂಗಿಲ್ಲ. ಯಾವುದನ್ನು ಒಪ್ಕೊಳ್ಳೋದು? ಹದಿನಾರು ಜಾತಿ ಹೋರೀನೂ ಹೊಡೀಬೇಕಾತಲ್ಲ. ಇನ್ನು ಪಾಳೇಗಾರನ ಮನೆ ಕತೆ ಏನು.

"ಹದಿನಾರು ಜಾತಿ ಹೋರೀನೂ ಒಪ್ಪಿಗೆ" ಅಂದುಬಿಟ್ಟ ಹೊನ್ನಟ್ಟಿ ಆಲೆಗೌಡ.

"ಹದಿನಾರು ಜಾತಿ ಹೋರಿಯಾಗೆ ಒಂದನ್ನು ಒಪ್ಪು. ಹದಿನಾರನ್ನು ಒಪ್ಪೋದು, ಹೊಡಿಯೋದು ಬೇಡಾ' ಅಂದ ಕೆಂಗುರಿ ಮಲ್ಲೇಗೌಡ."

"ಹಂಗಾರೆ ನೀನೇ ಒಪ್ಪಪ್ಪಾ, ನಾನು ನೋಡೋದು ಬ್ಯಾಡಾ" ಅಂದ ಆಲೆಗೌಡ.

"ಲೇ ಪಾಳೇಗಾರ, ನಮ್ಮಪ್ಪ ಅರಿವಿನ ಮನ್ಯಾಗೆ ಇಲ್ಲ. ಮರವಿನ ಮನ್ಯಾಗೆ ಅವ್ನೆ. ಅರವತ್ತು ಎಪ್ಪತ್ತೈದು ವರುಷ ಹೊನ್ನಟ್ಟಿ ಆಲೆಗೌಡಗೆ. ಬಿಟ್ಟಬಿಡು ಅವ್ನ. ಈಗ ನಮ್ಮ ಅಪ್ಪನ ಸುದ್ದಿ ಬಿಟ್ಟು ಈಗ ನಾನು ಕೇಳ್ತೀನಿ. ಈ ಹದಿನಾರು ಜಾತಿ ಹೋರ್ಯಾಗೂ ಹದಿನಾರು ಮಿಸ್ಟೀಕ್ ಐದಾವೆ. ಆ ಮಿಸ್ಟೀಕ್ ಹೋರಿ ತಗೊಂಡುಹೋಗಿ ನನ್ನ ಹಸುಗಳಿಗೆ ಬಿಟ್ಟು ಬಿಟ್ಟರೆ ನಮ್ಮ ಕರುಗಳಿಗೂ ಆ ಮಿಸ್ಟೀಕ್ ಇಳಿದು ಬಿಡ್ತೈತಿ. ಈ ಹದಿನಾರು ಜೊತೆ ಹೋರಿನಾ ನೀನು ಮಡೀಕ್ಕಂಬಿಡು. ಹದಿನಾಲ್ಕು ಗೂಡಿನ ದನೀನಾ ಆ ಗುಂಡಣ್ಣೋರ ಮನೆ ಹತ್ರ ಕೆರೆಯಾಗೆ ನೀರು ಕುಡಿಸಿ ಮ್ಯಾಕೆ ಹತ್ತಿ ಬರುವಾಗ ಬಂದು ಸೇರ್ತಲ್ಲಾ. ಅದರ ಕರ ಹೋರಿ ಅದಕ್ಕೆ ಎಷ್ಟಾಗುತ್ತೆ ಹೇಳಲೇ ಪಾಳೆಗಾರ" ಅಂದ. ಅದೇ ಇವನ ಅಪ್ಪನ ಹಸು ಗೊಡ್ಡುಗಾಳಿ ಅನ್ನೋ ಹಸುವಿನ ಕರ ಅದು.

"ಅದಿಕಿನ್ನು ಏಟಾಗುತ್ತೆ? ಅದಕ್ಕೊಂದು ಅಳೆದು ಒಂದು ಅತ್ನ ಕೊಡು, ಅಳೀದೇನೇ ಒಂದು ಅತ್ನ ಕೊಡು. ಹಂಗೇ ಒಂದು ಅತ್ನ ಕೊಡು, ಒಟ್ಟಿನೊಳಗೆ ಕೊಡು" ಅಂದ.

"ಅಪ್ಪಾ, ನಾವು ಮನ್ಯಾಗೆ ಅಳತೆ ಮಾಡಿ ಇಟ್ಟಕೊಂಡು ಹೊರಟಿದ್ದನ್ನು ಇವನು ನೋಡಿದ್ನೋ ಏನು? ಅಷ್ಟೇ ಕೇಳಿಬಿಟ್ಟ. ಕೊಟ್ಟುಬಿಟ್ಟು ಹೋರಿ ತಗೊಂಡು ಹೋಗಾನ" ಅಂತ ಬೆಳ್ಳಿ ರೂಪಾಯಿನ ಕಂಬಳಿಗೆ ಸುರಿದು

"ಹೋರಿ ನಮ್ಮದಾತು, ರೂಪಾಯಿ ನಿಮ್ಮದಾತು, ಪಾಳೇಗಾರ" ಅಂತ ಹೇಳಿ ಹೊರಟರು. 'ಹೋಗಿ ಬಾರಯ್ಯಾ ಒಳ್ಳೇದಾಗಲಿ' ಅಂದ ಪಾಳೇಗಾರ.

ಹೊನ್ನಟ್ಟಿ ಆಲೆಗೌಡಗೆ ಏನಾತು ಅಂದ್ರೆ ಮೂರು ಅತನದಷ್ಟು ಬೆಳ್ಳಿ ರೂಪಾಯಿ ತಗೊಂಡು ಹೋಗಿ ಪಾಳೇಗಾರನ ಎದುರು ಸುರಿದು ನಾನು ಹದಿನಾರು ಜಾತಿ ಹೋರಿ ಹುಡುಕಿದ್ದೆ. ಇದು ಯಾವುದೋ ಬಡಕಲ ಹೋರಿಗೆ ಯಾರು ಅತನ ಬೆಳ್ಳಿ ರೂಪಾಯಿ ಕೊಟ್ಟು ಕೊಳ್ಳೋರಿಲ್ಲ, ಕಾಡುಗೊಲ್ಲ ಮೋಸ ಹೋದ ಅಂತ ಚಿಂತೆ ಹತ್ತಿಬಿಡ್ತು. ಈ ಚಿಂತೆಗೆ ಆಲೆಗೌಡಗೆ ಮುಂದಕ್ಕೆ ವಾಂತಿ, ಹಿಂದಕ್ಕೆ ಭೇದಿ ಹತ್ತಿಕೊಂಡು ಬಿಡ್ತು. ಕೆರೆಗೆ ಹೋಗೋದು ತೊಳ್ಕೊಳೋದು, ಮತ್ತೆ ಬರೋದು, ಆಲೆಗೌಡನಿಗೆ ಇದೇ ಆಗಿಹೋಯ್ತು.

"ಪಾಳೇಗಾರ" ಅಂದ

"ಏನಪ್ಪಾ" ನಮ್ಮಪ್ಪ ಉಚ್ಚಿಕೊಳ್ಳಲಿ, ಕಕ್ಕಿಕೊಳ್ಳಲಿ ಏನಾರಾ ಮಾಡಿಕೊಳ್ಳಲಿ, ಅವರ ವಿಷಯ ನಿನಗೂ ಬೇಡಾ, ನನಗೂ ಬೇಡಾ. ಬೆಳ್ಳಿರೂಪಾಯಿ ನಿನ್ನದಾಗೈತೆ, ಹೋರಿ ನನ್ನದಾಗೈತೆ. ನಾನು ಹೋಗಿ ಬರ್ತೀನಿ ಇವಾಗ. ನಾನು ಹೋಗಿ ಬಿಡ್ತೀನಿ ಮೂಡಲ ಸೀಮೆಗೆ ಇವಾಗ" ಅಂದ.

"ಒಳ್ಳೇದಾಗಲಿ ಹೋಗಿ ಬಾರಯ್ಯ ಗೊಲ್ಲಗೌಡ" ಅಂದ.

"ಹೋಗೋದು ಸರಿ ಬರೋದು ಸರಿ, ಅದ್ಯಾವಾಗ್ಲೋ ಮೂಡಲ ಸೀಮೆಯ ಒಬ್ಬ ಗೊಲ್ಲಗೌಡ ಹಿಂದೆ ಇಲ್ಲೇ ಬಂದು ಆವಿನ ಗೂಡ ಹಾಕ್ಕೊಂಡು ಬಾಳಿದ್ದನಂತಲ್ಲ. ಅವನ ಹೆಸರೇನು? ಒಡೆದು ಹೇಳು ಪಾಳೆಗಾರ" ಅಂದ. ಈಗ ಅವನ ಅಪ್ಪಂದೆಲ್ಲ ತೆಗೀಬೇಕು ಬುಡಾನ.

"ದೇವರ ದಯಮಾರ ಅನ್ನೋನು ಸಣ್ಣ ಸಾಲಿದಟ್ಟಿಯೋನು ಇಲ್ಲಿ ಬಂದು ಆವಿನ ಗೂಡು ಹಾಕ್ಕೊಂಡು ಇದ್ದ. ಅವನ ಮನೆದೇವರು ಸಣ್ಣೋಳು ಕಂಬಕ್ಕ ಅನ್ನೋಳ್ನ ತಂದು ಸಣ್ಣ ಸಾಲಿದಟ್ಟಿಯೋನು ದೇವರದಯಮಾರನಿಗೆ ಮದುವೆ ಮಾಡಿ ಬಿಟ್ಟು ಹೋತು. ಅದಾಗೆ ಮದುವೆಯಾಗಿ ಇವತ್ತಿಗೆ ಹದಿನಾಲ್ಕು ವರುಷ. ಅವತ್ತು ಅವರ ಮುಖನೋಡಿದ್ದೇ ಕಣಯ್ಯ. ತಿರುಗಾ ನಾನು ಅವರ ಮುಖ ನೋಡ್ಲಿಲ್ಲ" ಅಂದ ಪಾಳೇಗಾರ.

"ಹದಿನಾಲ್ಕು ವರುಷದಾಗೆ ಹಗಲು ಹನ್ನೆರಡು ಘಂಟೆ – ಒಂದು ಘಂಟೆ ಹೊತ್ತಿನಾಗೆ, ಒಂದು ಹಸುವಿನ ಮಣಕ ಹಳ್ಳದಾಗಿಂದ ಕೆರೆಯಾಗಿಂದ ಬಂದು ನಿನ್ನ ಆವಿನಗೂಡು ಸೇರಿತಂತೆ, ನಿಜವೇನಲೇ ಪಾಳೇಗಾರ",

"ನಿಜಾ ಕಣಯ್ಯಾ ಗೊಲ್ಲಗೌಡ",

"ಆ ಹಸುವಿನ ಮಣಕ ಏಸು ಕರ ಈಯ್ತಲೇ ಪಾಳೇಗಾರ ನಿನ್ನ ಅವಿನಗೂಡಿಗೆ ಬಂದಮೇಲೆ?"

"ನನ್ನ ಆವಿನಗೂಡಿನ ಜಾಡಿಗೆ ಸಿಕ್ಕು ಏಳು ಸಲ ಕಂದು ಹಾಕಯ್ತೆ ಗೊಲ್ಲಗೌಡ' ಏಳು ಸಲ ಹೆಣ್ಣು ಕರ ಈದೈತೆ. ಏಳು ಏಳು ಹದಿನಾಲ್ಕು ಹೆಣ್ಣು ಕರ ಮತ್ತು ಈ ಹೊಟ್ಟೆ ಕರ ಅದಕ್ಕೆ ಸೇರಿಸಿ ನಿನಗೆ ಮೂರು ಅತನ ಬೆಳ್ಳಿ ರೂಪಾಯಿ ಕೊಟ್ಟಿರೋದು. ಹಂಗೆ ಆ ಕಳ್ಳೆ ಒಟ್ಟಿದ್ದು ಆವಿನ ಗೂಡು ನನ್ನ ಅಪ್ಪಂದೆ ಕಾಣಲೇ ಪಾಳೇಗಾರ" ಅಂದ.

"ಹೋರಿಕರು ಬೇಕು ಅಂತ ವ್ಯಾಪಾರ ಮಾಡಿ ಎಲ್ಲಾದಕೂ ನಮ್ಮ ಅಪ್ಪಂದು ಅಂತ ಬಂದಿದೀಯ. ದೂರ ನಿಂತುಕೊಂಡು ಮಾತಾಡಲೇ ಗೊಲ್ಲಗೌಡ" ಅಂದ.

"ಪಾಳೆಗಾರ, ಇವತ್ತಿನ ದಿನದಾಗೆ ಗೊಲ್ಲ ಅಂದರೆ ನನಗೇನು ಕಮ್ಮಿ ಇಲ್ಲ. ನಾನು ಹುಟ್ಟಿದ್ದಿಂದ್ಲೇ ಗೊಲ್ಲ. ಇವತ್ತಿನ ದಿನದಾಗೆ ಗೊಲ್ಲ ಅಂದರೆ ನನಗೇನು ಕಮ್ಮಿ ಆಗಲಿಲ್ಲ ಸಾಹಸ. ಆದರೆ ಇವತ್ತಿನ ದಿನದಾಗೆ ನಮ್ಮ ಅಪ್ಪ ಅಮ್ಮ ಅನ್ನೋದು ಇದ್ದು, ನಾನು ನಮ್ಮ ಅಪ್ಪಗೆ ಹುಟ್ಟಿದ ಮಗನೇ ಅಗಿದ್ರೆ ಈಗ ಇಟ್ಟ ಹೆಜ್ಜೆಂಯಾಗೇ ಕರೀತೀನಿ, ಬಂದರೆ ಹೊಡಕೊಡತಿಯೇನೋ ನಿನ್ನ ಆವಿನ ಗೂಡಿನಾಗಿಂದ ನನ್ನ ದನಗಳನ್ನು, ನಮ್ಮ ಅಪ್ಪನ ಕಡೆಯೋವನ್ನ".

"ಬಂದರೆ ನಿನ್ನೋವು, ಬರದಿದ್ರೆ ನನ್ನೋವು, ಕರಿಯಲೇ ಗೊಲ್ಲಗೌಡ" ಅಂದ.

"ಹೊನ್ನಟ್ಟಿ ಆಲೇಗೌಡ, ಈ ಮಾತಿಗೆ ನೀನೇ ಸಾಕ್ಷಿ ನಿಲ್ಲಬೇಕು ಇಬ್ಬರ ಕಡೇ ಕೂಡಾ."

'ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ಕಡೆಹುಟ್ಟಿನ ಕಟ್ಟಾಣಿ, ಬುದ್ದಿಯಲ್ಲಿ ಬುದ್ದಿವಂತೆ,
ಕೊಂಬಿನಲ್ಲಿ ಗಂಬೀರವಂತೆ, ಬಾಲದಲ್ಲಿ ಬಲವಂತೆ,
ಮುಖದಲ್ಲಿ ನೋಡಿದ್ರೆ ಸುಂದರ ಸುಕ್ಕೆ ಬೊಟ್ಟಿನ ಚೆಲುವಿ,
ದೊಡ್ಡೋಳು ಗೊಡ್ಡುಗಾಳಿ' ಅಂತ ಕೂಗಿದ ಕೂಡಲೇ

'ಅಂಬಾ' ಅಂತಂತೆ ಅವನ ಆವಿನ ಗೂಡಿನ ಮಧ್ಯೆ ಆ ಗೊಡ್ಡುಗಾಳಿ ಅನ್ನೋ ಹಸು. ಹಣ್ಣುಹಣ್ಣು ಮುದಿಯಾಗಿತ್ತಂತೆ. ಬಾಯಾಗೆ ಒಂದೊಂದು ಹಲ್ಲಿಲ್ಲ. ಹಣ್ಣು ಹಣ್ಣು ಮುದಿಯಾಗಿದ್ದು 'ಅಂಬಾ' ಅಂತಿದ್ದ ಹಾಂಗೆ, 'ಬಾರಮ್ಮ ಮುಂದಕ್ಕೆ ಮೂರು ಹೆಜ್ಜೆ ಇಕ್ಕಿ' ಅಂದನಂತೆ. ಯಾರು? ಕೆಂಗುರಿ ಮಲ್ಲೇಗೌಡ. ಆ ಹಸು ತಟ್ಟಾಡಿಕೊಂಡು ಮುಂದಕೆ ಬಂದುಬಿಡ್ತಂತೆ. ಅದರ್ಥಿಂದೆ ಈ ಏಳು ಹಸುವಿನ ಮಣಕಗಳು ನೆಕ್ಕು ನೆಕ್ಕೊಂಡು ಬಂದು ಬಿಟ್ಟವು. ಇವು ಏಳು ಹಸುವಿನ ಹಿಂದೆ ಧೀರ ಆ ಹೋರಿಕರು, ಇವನು ಬೆಳ್ಳಿರೂಪಾಯಿಗೆ ಕೊಂಡಿದ್ದನಲ್ಲ ಅದು ಬಂದು ಕೆಂಗುರಿ ಮಲ್ಲೇಗೌಡನ್ನ ನೆಕ್ಕುತ್ತಾ ನಿಂತು ಕೊಂಡಿತಂತೆ.

"ಕೆಂಗುರಿ ಮಲ್ಲೇಗೌಡ, ನೀನು ನಿಮ್ಮಪ್ಪನ ಮಗನೇಯಾ. ನೀನು ನಿನ್ನ ಹಸುವಿನ ಮಣಕ ಹೋರಿ ಎಲ್ಲಾ ಹೊಡಕೊಂಡು ನಡೀಲೇ" ಅಂದ ಪಾಳೇಗಾರ.

ಆಲೆಗೌಡನ್ನ ಹಿಂದೆ ಕರಕೊಂಡು ಏಳು ಹಸುವಿನ ಮಣಕ ಎಲ್ಲಾ ಹೊಡಕೊಂಡು, ಗೊಡ್ಡುಗಾಳಿ ಅನ್ನೋ ಹಸು ಎಂಟು, ಆ ಹೋರಿಕರ ಒಂದು ಸೇರಿ ಒಂಭತ್ತನ್ನು ಹೊಡಕೊಂಡು, ಅಲ್ಲಿಂದ ಹೊರಟು ಒಂಭತ್ತು ದಿನಕ್ಕೆ ಸರಿಯಾಗಿ ಬಂದರಂತೆ ಹುಣಸೆಕಟ್ಟೆ, ಗಂಗದಾಳು, ಶಾಮದೂರು, ಗಿಡ್ಡನಹಳ್ಳಿ ಕಡೆ ಹಾಸಿ, ಅಡ್ಡಹೊಂಗೆ ಜಾಡು ಹಾಸಿ, ದೊಡ್ಡೋಳು ಗುಡುಗಿನ ಮಾರಿ ಗುಡಿಯೊಳಗಿಂದ ಹಾಸಿ, ಪೂಜಾರಿಗುಡ್ಡ ನೆತ್ತಿಯಾಗೆ ಹಾಸಿ, ಚಿಕ್ಕಸಂದ್ರ ಕೆರೆಏರಿ ಮೇಲೆ ಹಾಸಿ, ಊರುದೊರೆ, ಕಂಬದಳ್ಳಿ, ಮಂಗದಳ್ಳಿ, ನಿಂಬೆಮರದಹಳ್ಳಿ ಎಡಕೂ ಬಲಕೂ ಬಿಟ್ಟುಗೊಂಡು ಮರಡಿ ಗುಡ್ಡದ ರಂಗಪ್ಪನ ಅವರೆ ಹೊಲದಾಗೆ ಹಾಯಿಸಿ, ಆರು ಮೂರು ಒಂಭತ್ತು ದಿವಸದಾಗೆ ಕೆರೆಗೆ ಬಂದರಲ್ಲೋ, ಕಳುವಾರಹಳ್ಳಿ ಪುರಸಕ್ಕನ ಕೆರೆಗೆ. ಕಳುವಾರಹಳ್ಳಿ ಕೆರೆಮ್ಯಾಗೆ ಹಸುವಿನ ಮೇಯಿಸಿಕೊಂಡು ಆ ಜಡ್ಡುತನ ಎಲ್ಲ ಕಳಕೊಂಡು ಕಳುವಾರಹಳ್ಳಿ ಕೆರೆ ಏರಿಮ್ಯಾಗೆ, ಈರಮ್ಮನ ದೇವಸ್ಥಾನದ ಮುಂದಕೆ ಬರೋ ಹೊತ್ತಿಗೆ ಹೊನ್ನಟ್ಟಿ ಆಲೆಗೌಡ,

ಆ ಹೋರಿಕರನ್ನ ಎತ್ತಿ 'ದಬಾರ್ ಬಂಡಾಕ್' ಅಂತ ಆ ಕೆರೆಯಾಗೆ ಎತ್ತಿ ಹಾಕಿ ಬಿಟ್ಟನಂತೆ. ಮೂರುಘಂಟೆ ಹೊತ್ತಾಗ್ಲಿ ಎದ್ದೇಳಲಿಲ್ಲ.

"ಸತ್ತೋಯ್ತಲ್ಲೋ ಕೆಂಗುರಿ ಮಲ್ಲೇಗೌಡ, ಆ ನಾಡಿಂದ ಈ ನಾಡಿಗೆ ತಂದು ತಗಂಡ್ಹೋಗಿ ಪುರಸಕ್ಕನ ಕೆರೆಗೆ ಎತ್ತಿ ಹಾಕಿದಿಯಲ್ಲೋ ಬೆಳ್ಳಿರೂಪಾಯಿನೆಲ್ಲ" ಅಂದ ಹೊನ್ನಟ್ಟಿ ಆಲೆಗೌಡ.

"ಯಪ್ಪಾ, ಸತ್ಯದಂಟು ಸಮುದ್ರಕ್ಕೆ ಹಾಕಿದೀನಿ. ಸತ್ಯದ್ದಾದರೆ ಬರಲಿ. ಅನ್ಯಾಯದ್ದಾದರೆ ಅತ್ಲಾಗೆ ಹೋಗಲಿ".

"ನಿಮ್ಮ ಅಪ್ಪ ಸಂಪಾದಿಸಿರೋದು ಯಾವುದು ಐತಲೇ ಇವಾಗ?" ಅಂದ ಆಲೇಗೌಡ. ಅಷ್ಟೊತ್ತಿಗೆ ಮೂರು ಘಂಟೆ ಹೊತ್ತಿಗೆ ಎದ್ದನಂತೆ ಹೊಟ್ಟೆಕರ ತಳದಾಗಿನಿಂದ. ಮರಡಿ ರಂಗಪ್ಪನ ಗುಡ್ಡದ ತಾವಿಂದ ಉರುಡುಬಿಟ್ಟೈತೆ ಅಲ್ಲಿ ಹೊಟ್ಟೆಕರ. ಆಗ ಆ ಹೋರಿಕರುವನ್ನು ಕರಕೊಂಡು ದನ ಕರಕಂಡು ಕೆರೆಯೊಳಗಿಂದ ಈಜಿ ಕೆಂಗುರಿ ಮಲ್ಲೇಗೌಡ ಜಾಡು ಕಳೆದು ಮುಸುರೆ ಮಾಡಿ ಹೊಗೆಹಿಟ್ಟು ಹಾಕಿದ. ಆಗ ಹೊನ್ನಟ್ಟಿ ಆಲೆಗೌಡಗೆ ಅಲ್ಲಿ ನಿಂತುಬಿಡ್ತಂತೆ ವಾಂತಿ ಬೇಧಿ. ಆಗ್ತಲೇ ಇತ್ತು ಅದುವರೆಗೆ.

ಈ ಹೋರಿ ಒಂದು ಪರ್ವತದ ಹಾಗೆ ಆಗಿಬಿಡ್ತಂತೆ, ಪುರಸಕ್ಕನ ಕೆರೆಯಾಗೆ

"ಯಪ್ಪಾ" ಅಂದ ಕೆಂಗುರಿ ಮಲ್ಲೇಗೌಡ

"ಯಾಕಪ್ಪಾ?" ಅಂದ ಹೊನ್ನಟ್ಟಿ ಆಲೆಗೌಡ.

"ನೀನು ಓಡಿಹೋಗಿ ಈವಾಗ ಜಾನಕಲ್ ದೊಡ್ಡಕ್ಕ, ಬಡಚಿತ್ತಮ್ಮ ಅವರಿಂದ ರತ್ನದಾರತಿ, ಮುತ್ತಿನಾರತಿ ಮಾಡಿಸಿಕೊಂಡು, ದಟ್ಟು ಭಂಡಾರ ತಗೊಂಡು, ಕುಂಕುಮ ತಗೊಂಡು, ವಿಭೂತಿಭಸ್ಮ ತಗೊಂಡು, ಗೆಜ್ಜಲಾರತಿ, ತುಪ್ಪದ ಆರತಿ ಮಾಡಿಸಿಕೊಂಡು, ಕಳುವಾರಹಳ್ಳಿ ಅಮ್ಮನ ದೇವಸ್ಥಾನದ ತಾವಕ್ಕೆ ಬರಬೇಕು ಹೊನ್ನಟ್ಟಿ ಆಲೆಗೌಡ. ಅಲ್ಲಿ ಹೋರಿಗೆ ಜಾಡು ಕಳೀಬೇಕು. ಎಲ್ಲಾ ನಾವು ಮುಸುರೆ ಮತ್ತೊಂದು ಮಗದೊಂದು ಎಲ್ಲಾಮಾಡಿ ತರಬೇಕು".

"ಓಡ್ರಪ್ಪಾ" ಅಂದ ಆಲೆಗೌಡ ತನ್ನ ಕಡೆಯೋರಿಗೆ. ಅದನ್ನೆಲ್ಲಾ ತಕ್ಕೊಂಡು ಅವರಿಬ್ರುನ್ನ ಕರಕೊಂಡು ಬಡಚಿತ್ತಮ್ಮ, ಜಾನಕಲ್ ದೊಡ್ಡಕ್ಕ ಅವರ ಕೈಲಿ ಅದನ್ನೆಲ್ಲ ಹೊರಿಸ್ಕೊಂಡು ಕಳುವೇರಮ್ಮನ ಗುಡಿ ದೇವಸ್ಥಾನದ ತಾವಕ್ಕೆ ಬಂದು ಎಲ್ಲಾ ಜಾಡು ಜಡ್ಡುತನ ಎಲ್ಲಾ ತೆಗೆದು ಹೋರಿನೆಲ್ಲಾ ಶುದ್ಧಿ ಮಾಡಿಕೊಂಡು ಬಂದರು. ಆಗ ಬಂದು ಕಳುವಾರಹಳ್ಳಿ ದಿಣ್ಣೆ ಏರಿ ಬಂದು, ಕಳ್ಳೆ ಕಡಿದು ಅಲ್ಲಿ ಆವಾಗ ಅವನೊಂದು ಆವಿನ ಗೂಡು ಹಾಕಿದ. ಆವಿನ ಗೂಡು ಹಾಕಿ, ಕಳುವಾರಹಳ್ಳಿಯಿಂದ ತಗೊಂಬಂದಿದ್ದನಲ್ಲಾ ಏಳು ಹಸುವಿನ ಮಣಕಗಳು ಅವಕ್ಕೆ ಇದೇ ಹೋರೀನೇ

ಬಿಟ್ಟುಬಿಟ್ಟ, ಬೀಜದಹೋರೀನಾ. ಇವು ಏಳು ಮಣಕಕ್ಕೆ ಆ ಹೋರಿ ಬಿಟ್ಟು ಆ ಹಸುವಿನ ಮಣಕಗಳು ಗೊಡ್ಡುಗಾಳಿ ಹಿಂದೆ ಆ ಪಾಳೆಗಾರನ ಆವಿನ ಗೂಡಿನಿಂದ ಬಂದಿದುವಲ್ಲಾ ಅವು ಏಳು ಹಸುವಿನ ಮಣಕಗಳು ಬಾರಿಗೆ ಬಂದುಬಿಟ್ಟವು. ಅವು ಏಳು, ಆಲೆಗೌಡನ ತಾವ ಇದ್ದ ಏಳು ಹಸುವಿನ ಮಣಕಗಳು, ಒಟ್ಟು ಏಳು ಏಳು ಹದಿನಾಲ್ಕು ಹಸುವಿನ ಮಣಕಗಳು ಒಂದೇ ಸಲಕ್ಕೆ ಬಾರಿಗೆ ಬಂದು ಬಿಟ್ಟವು. ಒಂದೇ ದಿನ ಗರ್ಭ ನಿಂತು ಹದಿನಾಲ್ಕು ಹಸುವಿನ ಮಣಕಗಳು ಹದಿನಾಲ್ಕು ಕರು ಈದವು. ಹದಿನಾಲ್ಕು ಹಸುವಿನ ಮಣಕ ಹದಿನಾಲ್ಕು ಹೆಣ್ಣುಕರ ಹಾಕಿದುವು ಒಟ್ಟು ಇಪ್ಪತ್ತೆಂಟು ಆದವು. ಆವಾಗ "ಅಪ್ಪಾ" ಅಂತ ಗೊಡ್ಡುಗಾಳಿ ಅನ್ನೋ ಹಸು ಆವಾಗ ಮಾತಾಡ್ತಂತೆ

"ಕೆಂಗುರಿ ಮಲ್ಲೇಗೌಡ",

"ಯಾಕಮ್ಮಾ" ಅಂದ.

"ಮೊಮ್ಮಕ್ಕಳನ್ನು ನೋಡಿದ್ದೆ, ಮುಮ್ಮಕ್ಕಳನ್ನು ನೋಡಿದ್ದೆ, ಮರಿಮಕ್ಕಳನ್ನು ನೋಡಿರಲಿಲ್ಲ ನನ್ನ ಮಗನೆ. ಈ ಏಳು ಏಳು ಹದಿನಾಲ್ಕು ಹಸುವಿನ ಮಣಕಗಳು ಹಾಕಿದ ಹದಿನಾಲ್ಕು ಕರುಗಳು, ಈಗ ಮರಿಮಕ್ಕಳು ನನಗೆ ಈವಾಗ. ಮೊಮ್ಮಕ್ಕಳು, ಮುಮ್ಮಕ್ಕಳು, ಮರಿಮಕ್ಕಳು ನೋಡಿದ್ದೀನಿ ಕೆಂಗುರಿ ಮಲ್ಲೇಗೌಡ. ಇಲ್ಲೀಗೆ ನನ್ನ ಆಯಸ್ಸುನ್ನೂ ಸೈ. ಸೋಮವಾರ ಹೊತ್ತುಹುಟ್ಟಿ ಬರೋಹೊತ್ತಿಗೆ ನಾನು ಕಾಯು ಬುಟ್ ಬಿಡ್ತೀನಿ. ಸುರವು (ಚರ್ಮ)ದೋರಿಗೆ ಕೊಡಬೇಡ, ಹದ್ದು ಕಾಗೆಗೆ ಹಾಕಬೇಡ, ನಾಯಿ ನರಿಗೆ ಬಿಡಬೇಡ. ತಗೊಂಡೋಗಿ ಹೊಸಹಳ್ಳಿ ಕೆರೆ ಹಿಂದೆ ಆವಿನ ಚಿಕ್ಕಣ್ಣೋರ ಗದ್ದೆ ಹತ್ರ ತುಗ್ಗಲಿ ಮರದ ಕೆಳಗೆ ನನ್ನ ಸಮಾಧಿ ಮಾಡಬೇಕು. ಕಾಣಕ್ಕೆ ಬರೋರಿಗೆ ಹೆಸರು ಕಾಳು ಪನಿವಾರ ಮಾಡಿಸಬೇಕು. ಮಂಗಳವಾರ, ಶುಕ್ರವಾರ ದೊಡ್ಡೋಳು ಗೊಡ್ಡು ಗಾಳಮ್ಮನ ಗುಡ್ಡೆ ಅಂತ ಹೇಳಿ ನನ್ನ ಪೂಜೆ ಮಾಡ್ಕೋ ಬೇಕು. ಮಕ್ಕಳಿಲ್ಲದೋರು ಬಂದು ಮೂರು ವಾರ ಮಂದೆ ಕಾಯಿದ್ರೆ, ಪೂಜೆ ಮಾಡಿದ್ರೆ ಅವರಿಗೆ ಮಕ್ಕಳ ಫಲ ಕೊಡ್ತೀನಿ. ಗೊಡ್ಡೆಮ್ಮೆಗಳು ಗೊಡ್ಡು ಹಸುಗಳನ್ನು ಹೊಡಕೊಂಡು ಬಂದು ಮೂರು ವಾರ ನನ್ನ ಗುಡ್ಡೆಗೆ ಸುತ್ತುವರಿಸಿಕೊಂಡು ಹೋದರೆ ಅವೆಲ್ಲಾ ಈಯೋವಂತೆ ಮಾಡ್ತೀನಿ. ಇಷ್ಟು ಕೆಲಸ ಮಾಡಪ್ಪಾ' ಅಂತ ಹೇಳಿ ಆಯಮ್ಮ ಹಸು ಕಾಯ ಬಿಟ್ಟುಬಿಡ್ತು.

ಅದರದ್ದು ತಿಥಿ ದಿವಸ ಪಾನಕ ಪರಿವಾರ ಎಲ್ಲಾ ಮಾಡಿಸಿಬಿಟ್ಟು ಅದರ ಸಮಾಧಿ ಮಾಡಿಸಿ ಶುಕ್ರವಾರ ಮಂಗಳವಾರ ಪೂಜೆ ಮಾಡಿಸಿ 'ಬಾ ಅಪ್ಪಾ' ಅಂದ. ಯಾಕಂದ್ರೆ ಹೊನ್ನಟ್ಟಿ ಆಲೆಗೌಡ ಅವತ್ತಿಗೆ ಮದುವೆಯಾಗಿ ಮೂವತ್ತಾರು ವರುಷ. ಇನ್ನೂ ಮಕ್ಕಳಿಲ್ಲ, ಮರಿ ಇಲ್ಲ. ಮನೆ ಬೆಳಗಿರಲಿಲ್ಲ. "ನಾನು ಬಲಗಾಲು ಮುಂದಿಕ್ಕಿ ಮನೆಗೆ ಬಂದು ಆಗಲೇ ನಿನಗೆ ಸುಸೂತ್ರವಾಗಿದೆ. ಈಗ ನಾನು ಇಲ್ಲಿ ಉಳಕೊಂಡು

ಉಂಡುಕೊಂಡು ಇರೋರ ಮಗನಲ್ಲ. ನಾನು ಗೂಡಿನ ದನ ಹೊಡಕೊಂಡು ಹೋಗುವವನು. ನಮ್ಮ ಅಪ್ಪ ತಾತಂದಿರು ಎಲ್ಲಾ ಹುಲ್ಲು ಹಸನುಮಾಡಿದ್ರಂತೆ. ಅದರಂತೆ ನಾನೂ ಹೋಗಿ ಬಿಡಬೇಕು. ಒಂದು ದೀಪ ತಂದು ಇಲ್ಲಿ ಬಾಗಿಲಿಗೆ ಹಚ್ಚೆ ಬಿಡ್ರಿ, ಆಗ ನಾನು ಹೊರಟು ಹೋಗಿ ಬಿಡ್ತೀನಿ. ಹೊನ್ನಟ್ಟಿ ಆಲೆಗೌಡ, ಜಾನಕಲ್ಲ ದೊಡ್ಡಕ್ಕ, ಬಡ ಚಿತ್ತಮ್ಮ, ನೀವೆಲ್ಲಾ ಆನಂದವಾಗಿರ್ಬೇಕು. ಜಾನಕಲ್ ದೊಡ್ಡಕ್ಕ ಇವತ್ತು ನೀನು ನಿನ್ನ ಗಂಡ ಹೋಗಿ ತುಪ್ಪ ಅನ್ನ ಉಂಡು ಸುಪ್ಪತ್ತಿಗೆ ಮೇಲೆ ಮಲಗಿದರೆ ಒಂಭತ್ತು ತಿಂಗಳು ನೀರು ನಿಲ್ತಾವಮ್ಮ. ಒಂಭತ್ತು ತಿಂಗಳು ನೀರು ನಿಂತು ಒಂಭತ್ತು ತಿಂಗಳು ತುಂಬಿ ಒಂಭತ್ತು ನವಮಾಸ ತುಂಬಿ ಒಂಭತ್ತು ದಿನ ತುಂಬೋದ್ರಾಗೆ ಅವಳಿ ಜವಳಿ ಎರಡು ಗಂಡು ಮಕ್ಕಳು ಹುಟ್ತಾವೆ ನಿನ್ನ ಹೊಟ್ಟೆಯಾಗೆ. ಮೂರುತಿಂಗಳು ಗೊಲ್ಲರ ಹೆಂಗುಸ್ರು ಇರೋಹಾಗೆ ನೀನು ಆಚೆ ಇದ್ದು ಹಟ್ಟಿಯಿಂದ ಮೂರುತಿಂಗಳು ತುಂಬಿದ ಕೂಡಲೇ, ಚಿತ್ರದೇವರ ದೇವಸ್ಥಾನದ ಹತ್ತಿರ ತೀರ್ಥ ಹಾಕಿಸಿಕೊಂಡು, ಚರುಗೆ ಹಾಕಿಸಿಕೊಂಡು ನಾಮಕರಣ ಮಾಡಬೇಕಾಗಿದೆ. ಚಿಕ್ಕ ಆಲಪ್ಪ, ದೊಡ್ಡ ಆಲಪ್ಪ ಅಂತ ಆ ಹುಡುಗರಿಗೆ ನಾಮಕರಣ ಮಾಡಬೇಕು. ಹನ್ನೊಂದು ಹದಿನಾರು ಇಪ್ಪತ್ತಾರು ವರ್ಷಕ್ಕೆ ಆ ಹುಡುಗರು ನನ್ನ ಹುಡಿಕ್ಕೊಂಡು ಬಂದರೆ ನಾನು ಅವರ ಕಣ್ಣಿಗೆ ಕಾಣಿಸ್ತೀನಿ. ನಿಮ್ಮ ವಂಶದಾಗೆ ಇನ್ನು ಯಾರು ಬಂದರೂ ನಾನು ಸಿಗಲ್ಲ ಕಣ್ರಮ್ಮಾ" ಅಂತ ಹೇಳಿ ಈ ಏಳುಗೂಡಿನ ದನ ಹೊಡಕೊಂಡು ಹೊರಟು ಹೋಗಿಬಿಟ್ಟ. ಹೋಗಬೇಕಾದ್ರೆ ಚಿತ್ರದೇವರಿಗೆ ಮಹಾಮಂಗಳಾರತಿ ಮಾಡಿಸಿ 'ಶಿವಚಿತ್ರಲಿಂಗ, ನಮ್ಮಪ್ಪ ಕೊಂಕಿಜರಿಮಲೆ ಸೀಮೆಯಾಗೆ ಕತ್ತಲ ಕರಿಮಲೆಯಾಗೆ ದೇವರ ದಯಮಾರ ಮಂದಾರ ಗಿಡದ ಬುಡದಾಗೆ ತಲೆಹಾಕಿ, ಪ್ರಾಣ ಬಿಡುವೋ ಹೊತ್ತಿಗೆ ನಾರಾಯಣನೆಂಬೋ ನಾಮಗೊಡಲಿ, ಶಿವನೆಂಬೋ ಚಿಪ್ಪುಗೊಡಲಿ, ರನ್ನದ ಪಿಳ್ಳಗೋವಿ, ಪಟ್ಟೆದಟ್ಟಿ, ಕೋರೆ ರುಮಾಲು, ಏಳುಕಣ್ಣಿನ ಬಿದಿರುಗೋಲು, ಎಡಗಡೆ ಕಂಕುಳುದಾಗೆ ಉಗ್ಗುಳದ ಗಡುಗೆ ಇವೆಲ್ಲಾ ನಿನ್ನ ತಾವ ಕೊಟ್ಟು ಅವನು ಕಾಯ ಬಿಟ್ಟಿದ್ದನಂತಲ್ಲ. ಶಿವ ಚಿತ್ರಲಿಂಗ ಈಗ ನಾನೂ ಒಂದು ಅದೇ ಕೆಲಸಕ್ಕೆ ಹೊಂಟಿದೀನಿ. ನನ್ನ ಅಪ್ಪನ ಬಿಲ್ಲುಬಾಣ ಎಲ್ಲಾ ಈಗ ನಾನು ಧರಿಸಬೇಕು ಕಣಯ್ಯಾ,' ಅಂದ. ಅವೆಲ್ಲಾ ಆಯುಧ ಎಲ್ಲಾ ಧರಿಸಿಕೊಂಡು ಆವಾಗೇನೆ ಆವಿನ ಹಿಂಡನೆಲ್ಲಾ ಕರೀತಾನೆ:

ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ದೇವಕ್ಕ ದಯಮಾರಿ, ಬುದ್ದಿಯಲ್ಲಿ ಬುದ್ಧಿವಂತೆ
ಕೊಂಬಿನಲ್ಲಿ ಗಂಭೀರವಂತೆ, ಬಾಲದಲ್ಲಿ ಬಲವಂತೆ,
ಮುಖದಲ್ಲಿ ನೋಡಿದ್ರೆ ಸುಂದರ ಸುಕ್ಕೊಬೊಟ್ಟನ ಚೆಲುವೆ
ದೊಡ್ಡೋಳು ಗೊಡ್ಡು ಗಾಳಿಯೋರ ಎದ್ದೇಳಿರಮ್ಮ
ಹುಲ್ಲು ನೀರಿಗೆ ಹೊರಡೋನೂ

ಆ ಗೂಡಿನ ದನಾನೆಲ್ಲ ಕರಕೊಂಡು ಹೊರಟನಂತೆ ಈ ಸ್ವಾಮಿ. ಬಿಲ್ಲು ಬಾಣಾನೆಲ್ಲ ಕಟ್ಟಿಕೊಂಡು ಮೂರುತಿಂಗಳಿಗೆ ಹೋದನಂತೆ ಬಾಬಾಬುಡನ್‌ಗಿರಿ ಕಾವಲಿಗೆ, ಅಲ್ಲಿ

ಏಳು ಏಳು ಹದಿನಾಲ್ಕು ಗೂಡು ಹಾಕ್ಕೊಂಡು ಮೂವತ್ತಾರು ವರುಷ ತುಂಬೋವರೆಗೂನೂ ಕೆಂಗುರಿ ಮಲ್ಲೇಗೌಡ ಅಲ್ಲೇ ನಿಂತುಬಿಟ್ಟ. ಅಡವಿ ಹಣ್ಣು ತಿಂದು, ಮಡುವಿನ ನೀರು ಕುಡಿದು ಆವಿನ ದನ ಹೊಡಕೊಂಡು ಹಿಂದೆ ದೇವರ ದಯಮಾರ ಯಾವ ವನವಾಸ ಮಾಡಿದ್ನೋ ಇವನಿಗೂ ಅದೇ ಬಂದು ಹೋಗಿ ಬಿಡ್ತು. 'ತಾಯಂತೆ ಮಗಳು, ನೂಲಂತೆ ಸೀರೆ' ಅನ್ನಲ್ವೇ, ಆ ವಾಕ್ಯದಲ್ಲಿ ತಪ್ಪೇ ಇಲ್ಲ. ಮೂವತ್ತಾರು ವರುಷ ಬಾಬಾಬುಡನ್‌ಗಿರಿ ಕಾವಲಿನಾಗೆ ಕೆಂಗುರಿ ಮಲ್ಲೇಗೌಡ ಹದಿನಾಲ್ಕು ಗೂಡಿನ ಆವಿನ ದನಾನು ಕಾಯ್ತಾ ಇದ್ದ. ಆ ಘಳಿಗೆಯಾಗೇನೆ ಮೂವತ್ತಾರು ವರುಷ ಅವನು ಅಲ್ಲಿ ನಿಂತವ್ನೆ. ಈಚೆ ಜಾನಕಲ್ಲು ದೊಡ್ಡಕ್ಕನಿಗೆ ಮೂರು ತಿಂಗಳು ತುಂಬೋವರೆಗೂ ಆಚೆ ಇದ್ದು ದೊಡ್ಡ ಆಲಪ್ಪ, ಚಿಕ್ಕ ಆಲಪ್ಪ ಅಂತ ಆ ಮಕ್ಕಳಿಗೆ ಹೆಸರಿಟ್ಟು ನಾಮಕರಣ ಮಾಡಿಕೊಂಡು ಆ ಮಕ್ಕಳು ಆಗ ಬೆಳಿ ಅಂದರೆ ಈಗ್ಲೇ ಬೆಳಿಯೋವಂತೆ, ಈಗ ಬೆಳಿ ಅಂದರೆ ಆಗಲೇ ಬೆಳಿಯೋವಂತೆ. ಹದಿನಾರು ವರ್ಷದ ಮಕ್ಕಳಾಗಿ ಹೋಗಿಬಿಟ್ಟವು ಆಲೆಗೌಡನ ಮಕ್ಕಳು. ಹದಿನಾರು ವರ್ಷದ ಮಕ್ಕಳು ಆದಾಗ ಇವರು ಗಂಡಹೆಂಡತಿಗೆ ಆಗಲೇ ಬಡತನ ಬಂದು ಹೋಗಿಬಿಡ್ತು. ಏನು ಒಲೆಮೇಲೆ ಇಕ್ಕುತವ್ರೆ? ಕೆಂಗುರಿ ಮಲ್ಲೇಗೌಡನ ಹಿಂದೇ ಹೋಗಿಬಿತ್ತು ಇವನ ಮನೆ ಒಳಗಿದ್ದ ಧನಲಕ್ಷ್ಮಿ. ಎಲ್ಲಾ ಬಂದು ಹೋಗಿ ಬಿಡ್ತು. ಈಗ ಅದೇ ಸೋರೆ ಒಲೆಮೇಲೆ ಇಕ್ಕೋ ಗತಿ'.

"ಆಲೆಗೌಡ" ಅಂದಳು ದೊಡ್ಡಕ್ಕ.

"ಹಿರೇ ಮಗ ಇರೋ ತನಕ ಐಶ್ವರ್ಯವಂತರಾಗಿ ಬಾಳಿದೆವು. ಈ ಮಕ್ಕಳಿಗೆ ನೀರು ನಿಂತ ದೆಸೆಯಿಂದ ಮಕ್ಕಳು ಹುಟ್ಟಿದ ದೆಸೆಯಿಂದ, ಬಡತನ ಬಂದು ಹೋಗಿಬಿಡ್ತು" ಅಂದಳು. 'ಯಾರಿಂದ ಬಂದೈತೆ' ಅಂತ ಈ ಯಮ್ಮ ಅರ್ಥಮಾಡಲಿಲ್ಲ. ಈ ಮಕ್ಕಳು ಹುಟ್ಟಿದ ಘಳಿಗೆಯಾಗೆ ಬಂತು ಬಡತನ,

"ಅಮ್ಮ ನಮ್ಮ ಹೆರಿಗೆ ಮುಂದೆ ಯಾವ ಊರಾಗೆ ಇದ್ದ ಹೇಳು? ಅವನು ಯಾವ ದೇಶದಾಗೆ ಇದ್ರೂ ನಾವು ಕರಕೊಂಡು ಬತ್ತೀವಿ ಕಣಮ್ಮ. ಇನ್ನು ಮೇಲೆ ನೀನು ನಮ್ಮನ್ನ ನಿಂದಿಸುವುದು ಬ್ಯಾಡ" ಅಂತ ಹೇಳಿದರು. ಕೆಂಗುರಿ ಮಲ್ಲೇಗೌಡ ಹೆಂಗವ್ನೆ ಅಂತ ಬಡಚಿತ್ತಮ್ಮನ್ನ ಕೇಳಿದ್ರು, ಬಡಚಿತ್ತಮ್ಮ ಹೇಳ್ತಾಳೆ:

ಕೆಂಗುರಿ ಕಣ್ಣಿನೋನು, ಕೆದರಿದ ಮಂಡೆಯೋನು,
ಬೆಳ್ಳಿಮೀಸೆಯೋನು, ಮಾರುದ್ದ ಮಂಡೆಯೋನು,
ಮಾರನವರ ದಯಮಾರನ ಮಗ
ಕೆಂಗುರಿ ಮಲ್ಲೇಗೌಡ ಕಣ್ರಪ್ಪ.
ಅವನು ನಾರಾಯಣ ಎಂಬೋ ನಾಮಗೊಡಲಿ,
ಶಿವನೆಂಬೋ ಚಿಪ್ಪುಗೊಡಲಿ, ರನ್ನದ ಪಿಳ್ಳಗೋವಿ,

ಚಿನ್ನದ ಪಿಳ್ಳಗೋವಿ, ಪಟ್ಟೆದಟ್ಟಿ, ಕೋರೆ ರುಮಾಲು,
ಏಳುಕಣ್ಣಿನ ಬಿದಿರುಕೋಲು, ಎಡಗಡೆ ಕಂಕುಳದಾಗೆ ಉಗ್ಗುಳದ ಗಡಿಗೆ,
ಸುರನಾರಿ ಬಿಲ್ಲು ಬೆನ್ನಿಗೆ ಕಟ್ಟಿಕೊಂಡು, ನೆತ್ತರು ಬಾಣ ನೆತ್ತಿ
ಮೇಲೆ ಕಟ್ಟಿದ್ದ,
ಉಕ್ಕಿನ ಬಾಣ ಪಕ್ಕೆಗೆ ಕಟ್ಟಿದ್ದ,
ಲೆಕ್ಕವಿಲ್ಲದ ಬಾಣ ಅವನ ಎದೆಯಾಗೆ ಮಡಗಿದ್ದ,

ಇಷ್ಟು ಆಯುಧ ಮುಸ್ತಾಫ ಯಾವನ ಮೈ ಮೇಲೆ ಐತೋ ಅವನೇ ಕಣ್ರಪ್ಪಾ ಕೆಂಗುರಿ ಮಲ್ಲೇಗೌಡ, ಹೋಗಿಬರ್ರಲೇ" ಅಂತೇಳಿ ಆ ಮಕ್ಳನ್ನ ಶಿವಚಿತ್ರಲಿಂಗನ ಮಡಲಿಗೆ ಹಾಕಿಬಿಟ್ಟಳು ಬಡಚಿತ್ತಮ್ಮ.

"ಯಮ್ಮಾ, ಗುರ್ತಿಗೆ ಈ ಮಾಂಗಲ್ಯ ಕೊಡು ನಿನ್ನ ಕೊರಳಿನಾಗೆ ಇರಾದು. ನಾಗಪ್ಪನ ತಾಳಿ ಒಂದು ಗುರ್ತಾಗಬೇಕಲ್ಲ. ಇವರು ಯಾರ ಮಕ್ಕಳು, ಇವರು ಏನು, ಎತ್ತ? ನಾನೇ ದತ್ತು ಮಗ ಆಲೆಗೌಡಗೆ. ನಾನು ಕಾಣದಂಗೆ ಮಕ್ಕಳು ಎಲ್ಲಿದ್ರು. ಇವರು ಯಾರೋ ಪಾಳೇಗಾರರು ಬಂದಿರಬಹುದು. ಮೋಸಮಾಡಿ ನನ್ನ ತಲೆ ಒಡೆದು ಈ ಹದಿನಾಲ್ಕು ಆವಿನಗೂಡಿನ ದನ ತಗೊಂಡು ಹೋಗಿ ಆಳಬಹುದು ಅನ್ನೋದರ ನಿಂದನೆ ಬರುತ್ತಮ್ಮ. ಅವನಿಗೆ ಈ ಗುರುತು ತೋರಿಸಬೇಕಾಗುತ್ತೆ ಕಣಮ್ಮ. ಅದರಿಂದ ಒಂದು ಗುರ್ತು ಕೊಡಮ್ಮಾ. ಈ ಮಾಂಗಲ್ಯನಾರೂ ತೋರಿಸಿ ನಿನ್ನ ಹಿರೇಮಗನ್ನ ತೊಗೊಂಡು ಬರ್ತೀವಿ" ಅಂತ ಕೇಳಿದರು. ಬಡಚಿತ್ತಮ್ಮನ್ನ ಕೊರಳಿನಾಗಿರೋದು ನಾಗರತಾಳಿ. ವರ್ಷಕ್ಕೊಂದು ಹೊಸ ತಾಳಿ ಮಾಡಬೇಕು. ಆ ಘಳಿಗೆಯಾಗೆ ಆ ಮಾಂಗಲ್ಯ ತಗೊಂಡು ಹೋಗಿ "ಶಿವಚಿತ್ರಲಿಂಗ, ಮಗನ್ನ ತಗೊಂಡುಹೋಗಿ ಎಲ್ಲಿ ಬಿಟ್ಯೋ? ನನ್ನ ಮಗ ಯಾವ ಗುಡ್ಡ ಬೆಟ್ಟದಾಗೆ ಇದಾನೋ? ಅಲ್ಲಿಗೆ ತಗೊಂಡು ಹೋಗಿ ಇಬ್ರು ಮಕ್ಕಳನ್ನು ಬಿಟ್ಟು ಬರಬೇಕಯ್ಯ" ಅಂತ ಚಿತ್ರದೇವರ ಮಡಲಿಗೆ ಹಾಕಿಬಿಟ್ಟಳು. ಹೊರಟೋಗಿಬಿಟ್ಟ ಚಿತ್ರದೇವರು ಅವರನ್ನು ಕರಕೊಂಡು. ಒಂಭತ್ತೇ ದಿನಕ್ಕೆ ಬಾಬಾಬುಡನ್‌ಗಿರಿ ಬೆಟ್ಟದ ಮುಂದೆ ಇಳಿಸಿ "ನಡೀರಲೇ ಕೊಳಲು ಊದಿಕೊಂಡು ಕುಂತವ್ನೆ ಆ ಗಿಡದ ಕೆಳಗೆ, ಇವನೇ ಕಣ್ರಲೇ ನಿಮ್ಮಣ್ಣ. ನಮ್ಮ ಮನೆದೇವ್ರು ತಂದು ಇಲ್ಲಿ ಬಿಟ್ಟು ಹೋತು ಅಂತ ಹೇಳಬೇಡ್ರಿ, ನೀವು ಯಾವೂರ ಗೊಲ್ಲಗೌಡ ಅಂತ ಕೇಳಿ. 'ಯಾಕ್ರಪ್ಪಾ', ಅಂತ ಕೇಳ್ತಾನೆ. 'ನಾವು ರತ್ನಗಿರಿ ರಾಮೇಗೌಡನ ಮಕ್ಕಳು. ರಾಮಣ್ಣ ಲಕ್ಷ್ಮಣ ಅಂತ. ಬಾಯಾರಿದೀವಿ. ಮ್ಯಾಕೆ ಹೊಡಕೊಂಡು ಈ ಗುಡ್ಡಕ್ಕೆ ಬಂದಿದೀವಿ. ಜೀವ ಹೋಗುತ್ತೋ ಗೊಲ್ಲಗೌಡ. ನಮಗೆ ಒಂದಿಷ್ಟು ನೀರು ಕುಡಿಸಬೇಕು' ಅಂತ ನೀವು ಕೇಳಿ ಅವನ ಸಾಲು ಮೂಲೇನೆಲ್ಲಾ ತಿಳಕೊಂಡು, ಆಮೇಲೆ ಕಳುವಾರಹಳ್ಳಿ ಹೊನ್ನಟ್ಟಿ ಆಲೆಗೌಡನ ಮಕ್ಕಳು ಅಂತ ಹೇಳಿಬಿಡ್ರಿ ನೀವು.

'ಹೊಲವೆಲ್ಲ ಮುಳ್ಳು, ಮನೆಯೆಲ್ಲಾ ಸುಳ್ಳು'. ಅಲ್ಲಿ ಒಂದು ಸುಳ್ಳು ಹೇಳಬೇಕಾದ ಲೆಕ್ಕ ಬಂದೇ ಬಿಡ್ತು.

"ಹಳ್ಳದಾಗೆ ತ್ಯಾಗದ ಮರದಡಿಯಾಗೆ ಚಿಲುಮೆ ತೆಗೆದು ನೀರು ಕುಡಿದು ಉಗ್ಗಿ ಬಂದಿದೀನಿ ಪುಣ್ಯಾತ್ಮರು ಕುಡೀಲಿ ಅಂತ. ಹಳ್ಳದಾಗೆ ಹೋಗ್ರಯ್ಯಾ ಕುಡಿದು ಬನ್ನಿ" ಅಂದ.

"ನೀರಿನ ಹಳ್ಳದಾಗೆ ಕಾಡುಮೃಗಗಳು ಎಷ್ಟೈದಾವೋ ಅಷ್ಟೂನು ಬಂದು ನಮ್ಮನ್ನ ತಿನ್ನೋವಾಗೆ 'ಎಲಾ' ಅನ್ನೋರ್‍ಯಾರು? ನಮ್ಮ ಬೆನ್ನ ಹಿಂದಕೆ ನೀನು ಬರಬೇಕು ಸ್ವಾಮಿ" ಅಂದರು.

ಅವ್ನೂ ಅವರ ಜೊತೇಗೆ ಅಲ್ಲೀಗೆ ಬಂದು ಬಗ್ಗಿನೋಡಿದ್ರೆ ಒಂದು ಮಣಕಾಲು ನೀರಿದೆ. ಕೆಳಕ್ಕೆ ಬಗ್ಗಿದರೂ ನೀರು ಸಿಕ್ಕಲ್ಲ. ಬಿಲ್ಲು ಬಾಣವೆಲ್ಲ ಕೆಂಗುರಿ ಮಲ್ಲೇಗೌಡ ಅಲ್ಲಿ ತೆಗೆದು ಇಟ್ಟು, ಇವರನ್ನು ಇಬ್ರುನ್ನೂ ಅಲ್ಲಿ ಕುಂದ್ರಿಸಿ, ಮೂರು ಫಲ್ಲಾಂಗು ದೂರ ಹೋದ್ನಂತೆ ಮುತ್ತುಗದ ಎಲೆ ತಂದು ದೊನ್ನೆ ಕಟ್ಟಿ ನೀರು ಕುಡಿಸನ ಅಂತ. 'ಅಮ್ಮ ಹೇಳಿದ್ದೆಲ್ಲ ಇವನ ಮೈಮೇಲೆ ಐತೆ. ಗ್ಯಾರಂಟಿ ನಮ್ಮಾ ಅಣ್ಣ ಕಣ್ರಲೇ ಇವನು. ಆ ನಾರಾಯಣನೆಂಬೋ ನಾಮಗೊಡಲಿ, ಶಿವನೆಂಬೋ ಚಿಪ್ಪಗೊಡಲಿ ಅವು ಎರಡು ಇದ್ದುವಲ್ಲ ಆ ಕೊಡಲಿ ನೋಡಿಬಿಟ್ಟು ಇವನು ನಮ್ಮ ಅಣ್ಣನೇ ಹೊರತು ಇನ್ನೊಬ್ಬನಲ್ಲ' ಅಂದುಕೊಂಡ್ರು. ಆಗ ಬಂದು ನೀರು ಕುಡಿಸಿ ಇಬ್ರನ್ನೂ ತೊಡೆಮೇಲೆ ಕೂಡ್ರಿಸಿಕೊಂಡು ಹಳ್ಳದ ದಿಣ್ಣೆದ ಮೇಲೆ ಬಂದು ಬಿಲ್ಲು ಬಾಣಗಳನ್ನೆಲ್ಲಾ ಧರಿಸಿಕೊಂಡು ನಿಂತ.

"ಅಯ್ಯಾ ಗೊಲ್ಲಗೌಡ" ಅಂದರು

"ಯಾಕಪ್ಪಾ?" ಅಂದ ಕೆಂಗುರಿ ಮಲ್ಲೇಗೌಡ,

"ಮೂರು ಫರ್ಲಾಂಗು ಹೋಗಿ ಮುತ್ತುಗದ ಎಲೆ ಕಿತ್ತುಕೊಂಡು ಬಂದು ದೊನ್ನೆಕಟ್ಟಿ ನಮ್ಮುನ್ನ ತೊಡೆಮೇಲೆ ಕುಂಡ್ರಿಸಿಕೊಂಡು ನೀರು ಕುಡಿಸಿದ್ದೀಯಲ್ಲಾ ನೀನು, ಈ ಋಣಾನ ನಾವು ಎಂದಯ್ಯ ತೀರಿಸೋದು, ಗೊಲ್ಲಗೌಡ, ನೀನ್ಯಾರ ಮಗನೋ? ನಾವು ಯಾರ ಮಕ್ಕಳೋ? ನೀನು ಹುಟ್ಟಿರೋ ಊರು ಹೇಳಯ್ಯ. ಒಂದುದಿನ ತುಪ್ಪ ಅನ್ನ ಉಂಡು ಋಣ ಕಳಕೋಬಹುದು. ನೀನು ಹುಟ್ಟಿರೋ ಸ್ಥಳಮನೆ ಹೇಳಯ್ಯಾ ಗೊಲ್ಲಗೌಡ' ಅಂದರು.

'ಅಯ್ಯಾ ಗೊಲ್ಲಗೆ ಒಂದು ಊರಲ್ಲ. ಕೊಕ್ಕರೆಗೆ ಒಂದು ಕೆರೆಯಲ್ಲ. ವಾಲಿಕಾರಂಗೆ ಒಂದು ಚಾವಡಿಯಲ್ಲ. ಹುಲ್ಲು ನೀರು ಎಲ್ಲೈತೋ ಅಲ್ಲೇ ಗೊಲ್ಲನ ಅರಮನೆ. ಈಗ ಕಾಡಿನಾಗೆ ಹುಟ್ಟಿರೋ ಕಾಡುಗೊಲ್ಲರದು ಯಾವ ಊರು ಅಂತ ಹೇಳಯ್ಯ'

"ಗೊಲ್ಲಗೊಂದು ಊರಲ್ಲ, ಕೊಕ್ಕರೆಗೊಂದು ಕೆರೆಯಲ್ಲ,
ವಾಲೀಕಾರನಿಗೆ ಒಂದು ಚಾವಡಿಯಲ್ಲ,

ಹುಲ್ಲು ನೀರಲ್ಲೈತೋ ಅಲ್ಲೇ ಗೊಲ್ಲನರಮನ್ಯೋ",
"ಸ್ವಾಮಿ, ನೀನು ಹುಟ್ಟಿರೋ ಸ್ಥಳ ಮನೆ ಹೇಳು, ಇವೆಲ್ಲಾ ನಮಗೆ ಅರ್ಥವಾಗಲ್ಲ" ಅಂದರು.

"ನಾವು ಹುಟ್ಟಿರೋ ಸ್ಥಳ ಮನೆ ಹೇಳಬೇಕಾಗಿದ್ರೆ ನೀವು ಮೊದಲಿಗೆ ಒಂದು ತಪ್ಪು ಮಾತು ಹೇಳಿದೀರಾ. ಮೊದಲಿಗೇನಂದ್ರಿ ನೀವು ರತ್ನಗಿರಿ ರಾಮೇಗೌಡನ ಮಕ್ಕಳು ರಾಮಣ್ಣ ಲಕ್ಷ್ಮಣ. ಬಾಯಾರ್ೈತೆ, ಮೇಕೆ ಹೊಡಕೊಂಡು ಬಂದಿದ್ವು, ಜೀವ ಹೋಗೋ ಹಂಗೆ ಐತೆ ನೀರು ತೋರಿಸಯ್ಯಾ, ಗೊಲ್ಲಗೌಡ ಅಂದಿರಿ. ಈಗಾಗಲೇ ನಾವು ಹೊನ್ನಟ್ಟಿ ಆಲೆಗೌಡನ ಮಕ್ಕಳು, ಕಳುವಾರಹಳ್ಳಿ, ಬೇವಿನ ಹಳ್ಳಿ ನಮ್ಮ ಸ್ಥಳಮನೆ ಅಂತ ಹೇಗೆ ಹೇಳ್ತೀರಾ? ನಿಮ್ಮನ್ನು ಈಗ ಸಾಕು ಬೇಕು ಅನ್ನೋವಷ್ಟು ಹಿಂಸೆ ಕೊಟ್ಟುಬಿಡ್ತೀನಿ. ನೀವ್ಯಾರೋ ವ್ಯಾಸಬೇಡರು, ಹಿಂದೆ ದೇವಾನುದೇವತೆಗಳನ್ನೆಲ್ಲಾ ತಲೆ ಕಡಿದಿರೋರು ನೀವು. ನನ್ನ ಸರಿ ಮಾಡ್ಲಾಕೆ ನನ್ನ ಹದಿನಾಲ್ಕು ಗೂಡಿನ ದನ ಹೊಡಕೊಂಡು ಹೋಗಬೇಕು ಅಂತ ಬಂದಿದೀರಾ' ಅಂತ ಆಗ ಆ ಬಾಣ ತಗೊಂಡು ಹೊಡೀಬೇಕು ಅನ್ನೋವಾಗ,

"ಅಣ್ಣಾ ನಿನ್ನ ತಾಯಿಕೊಳ್ಳಾಗಿಂದು ಈ ಮಾಂಗಲ್ಯ ತಂದಿದೀವಿ ನೋಡು. ನಾವ್ಯಾರು ಅಂತ ನೋಡು. ಸತ್ಯದ ಅಂಶ ನಿಜಾಂಶ ಇದು ತೋರಿಸ್ತದೆ" ಅಂದರು.

ಕೆಂಗುರಿ ಮಲ್ಲೇಗೌಡ ಆ ತಾಳಿ ನೋಡಿ 'ಈ ಮಾಂಗಲ್ಯ ನಮ್ಮ ತಾಯಿ ಕೊಳ್ಳಾಗಳದು. ಚಿತ್ತಮ್ಮನ ಕೊಳ್ಳಾಗಳದು. ಇದೇ ನಾಗರತಾಳಿ ವರುಷಕ್ಕೊಂದು ದಿನ ಶಿವರಾತ್ರಿ ಹಬ್ಬದಾಗೆ ಕೊಡೋ ಅಂತ ನಾಗರಸುಳಿ ನಮ್ಮದೇ ಕಣಪ್ಪಾ ಅಂತ ನಮ್ಮ ತಾಯಿಕೊಳ್ಳಾಗಿಂದು' ಹೇಳಿದ.
"ನಾವು ಹುಟ್ಟಿ ನಮಗೆ ಮೂರು ತಿಂಗಳು ಆಗೋವರೆಗೂ, ನಮ್ಮ ತಾಯಿ ಹಟ್ಟಿಯಿಂದ ಆಚೆಗಿದ್ದು ಗೊಲ್ಲರ ಹೆಣ್ಣುಮಕ್ಕಳು ಇದ್ದಂಗೆ ಇದ್ದು ಚಿಕ್ಕಾಲಪ್ಪ, ದೊಡ್ಡಾಲಪ್ಪ ಅಂತ ನಾಮಕರಣ ಮಾಡಿ ನಮ್ಮನ್ನ ಬೆಳೆಸಿದ್ರು. ನೀನು ಈಚೆ ಬರ್ತಿದ್ದಂಗೆ ನಮ್ಮ ವಂಶಕ್ಕೆ ದರಿದ್ರ ಬಂದೋಗೈತೆ ಕೆಂಗುರಿ ಮಲ್ಲೇಗೌಡ. ನೀನು ಹೊರಟುಬಿಡಬೇಕು ಕಣಲಾ ನಮ್ಮಣ್ಣ" ಅಂದರು.

ಹದಿನಾಲ್ಕು ವರುಷ ಆಯ್ತು ಇಲ್ಲಿಗೆ ಬಂದು ಕೆಂಗುರಿ ಮಲ್ಲೆಗೌಡ. ಹುಟ್ಟಿದ ಹೋರಿ ಕರುಗಳನ್ನೆಲ್ಲಾ ಜಾತಿಯ ಎರಡು ಹೋರಿ ಕರುಗಳನ್ನು ಬಿಟ್ಟು ಹದಿನಾಲ್ಕು ಆವಿನ ಗೂಡಿನ ದನ, ಹಣ ತುಂಬಕ್ಕೆ ಜಾಗ ಇಲ್ಲದಿರೋಷ್ಟು ಹೊನ್ನು, ಇಕ್ಕೇರಿ ವರಹ ಹೊನ್ನು, ಬೆಳ್ಳಿ ರೂಪಾಯಿ, (ಆಗ ಈ ಕಾಗದದ ರೂಪಾಯಿ ಇರಲಿಲ್ಲವಂತೆ, ಈ ಗಾಳಿಗೆ ಹೋಗೋ ಅಂತ ಕಾಗದಗಳು ಒಂದೂ ಇರಲಿಲ್ಲಂತೆ). ಬಂಡೆಮ್ಯಾಗೆ

ನಿಂತು ತೂರೋರಂತೆ ಬೆಳ್ಳಿ ನಾಣ್ಯಗಳನ್ನು, ವರಹಾನೂ ಹಾಗೆ ತೂರೋವ್ರಂತೆ ಇಕ್ಕೇರಿ ವರಹವನ್ನು. ಗಟ್ಟಿಯಾವುದೈತೆ ಜೊಳ್ಳುಯಾವುದೈತೆ ಅಂತ. ಜೊಳ್ಳು ಹರಿದುಹೋಗುತ್ತೈತೆ ಅಂತ ಅವತ್ತು ಅವನ್ನು ತೂರಿರೋನೂ ಗೊಲ್ಲನೇಯಾ. ಇವತ್ತಿನ ದಿನದಾಗೆ ನಾವು ಅಣ್ಣಾ ನಿಮ್ಮನ್ನ ಕರಕೊಂಡು ಹೋಗೋಕೆ ಬಂದಿದೀವಿ" ಅಂದಕೂಡಲೇ, ಹದಿನಾಲ್ಕು ಆವಿನಗೂಡಿನ ದನಾ ಎಲ್ಲಾ ಮಾರಿದ್ರೆ ದುಡ್ಡು ತುಂಬಕ್ಕೆ ಜಾಗ ಇಲ್ಲ, ಕಣಜ ಇಲ್ಲ, ವಾಡೆ ಇಲ್ಲ. ಹದಿನಾಲ್ಕು ಗೂಡಿನ ದನದ ಕೊಂಬನ್ನೆಲ್ಲಾ ಕೊರೆದು ಅದರೊಳಗೆ ಇಕ್ಕೇರಿ ವರಹ ಇಕ್ಕಿದ್ನಂತೆ. ಅವತ್ತೇ ಅಂತೆ ದನದ ಕೊಂಬಿಗೆಲ್ಲ ಕೊಳವೆ ಬಿದ್ದಿದ್ದು. ಇವತ್ತು ಸಿಟ್ಟಿನಾಗೆ ಕಲ್ಲು ಎಸೆದು ಬಿಟ್ಟರೆ ಕೊಳವೆ ಹೋಗಿಬಿಡ್ತದೆ ಬಿದ್ದು. ಪುನಃ ಒಳಗಿನ ಕೊಂಬು ಕೊಳವೆಯಾಗಿ ಬೆಳೆದು ಬರುತ್ತದೆ ಪುನಃ ದನೀಗೆ ಆಗಲಿ ಎಮ್ಮೇಗೆ ಆಗಲಿ ಮೇಕೆಗೆ ಆಗಲಿ. ಒಟ್ಟಾರೆ ನೀನು ನಡೆಯಣ್ಣ' ಅಂದರು. ಕೂಡಲೆ ಹದಿನಾಲ್ಕು ಗೂಡಿನ ದನೀನ ಕೊಂಬಿನ ತುಂಬ ವರಹ ತುಂಬಿಕೊಂಡು ಹದಿನಾರು ವರ್ಷಕ್ಕೆ ಇವಾಗ ಬಿಡ್ತಾರೆ ನೋಡಣ್ಣಾ ಬಾಬಾಬುಡನ್‌ಗಿರಿ. ಈಗ ಕೆಂಗುರಿ ಮಲ್ಲೇಗೌಡ, ಹೊನ್ನಟ್ಟಿ ಆಲೆಗೌಡನ ಮಕ್ಕಳು ಚಿಕ್ಕಾಲಪ್ಪ ದೊಡ್ಡಾಲಪ್ಪ ಮೂವತ್ತಾರು ವರುಷಕ್ಕೆ ಈಗ ಬಾಬಾ ಬುಡನ್‌ಗಿರಿ ಕಾವಲು ಬಿಡ್ತಿದ್ದಂಗೆ

ಚೆಂಡರುಗೊಂಡಿಕಾವಲು, ಬಾಳೆ ಮಲೆ, ಬಚ್ಚೆಮಲೆ,
ಉರಿಮಲೆ, ಜರಿಮಲೆ, ಹೊರಮಲೆ, ಉದ್ದವರಿ ಕಾವಲು,
ಮಾರಿ ಕಣಿವೆ ಕಾವಲು, ಕುದುರೆ ಕಣಿವೆ ಕಾವಲು,
ಮತ್ತೋಡು ರಂಗಪ್ಪನ ಕಾವಲು, ಬೂದಾಳು ಭದ್ರನ ಕಾವಲು,
ಏಣಕಲ್ಲುಗುಡ್ಡದ ಕಾವಲು, ಎಡೆಹಳ್ಳಿಯಾಗಿರೋದು ದೊಡ್ಡಕಾವಲು,
ಗುಡ್ಡದ ರಂಗೇಗೌಡನ ಕಾವಲು, ಬರಗೂರು ರಾಮೇಗೌಡನ ಕಾವಲು,
ಹುಲಿಕುಂಟೆ ತಮ್ಮಣ್ಣನ ಕಾವಲು, ಸಿರಾದ ರಂಗಣ್ಣನ ಕಾವಲು,
ಈ ಮಧ್ಯೆ ಏರಿ ಹಾಸಿ, ಜಾವಳ್ಳಿ ಕೆರೆ ಏರಿಮ್ಯಾಲೆ ಹಾಸಿ,
ನಗರಹಳ್ಳಿ ಭೂತಪ್ಪನ ಗುಡಿ ಮುಂದೇನೇ ಹಾಸಿ,
ನಗರ ಹಳ್ಳಿ ಕೆರೆಮುಂದೆ ಹಾಸಿ, ಚಿಕ್ಕಸಂದ್ರದ ಕೆರೆ ಏರಿಮ್ಯಾಗೆ ಹಾಸಿ,
ಪೂಜಾರಿ ಗುಡ್ಡದ ನೆತ್ತಿಯಾಗೆ ಹಾಸಿ,
ದೊಡ್ಡೋಳು ಗುಡಿಗಿ ಮಾರಕ್ಕನ ಗುಡಿಯಾಗೆ ಹಾಯಿಸಿ,
ಜಾಲದಳ್ಳಿ ಗಿಡ್ಡನೋಳು ಗಿರಿಯಕ್ಕನ ಮೂಡಲು ಉದಿಯಾಗೆ ಹಾಸಿ,
ದೇವರಕೆರೆ ಎಡಕ್ಕೆ ಹಾಯಿಸಿ ಮದ್ದಕ್ಕನ ಹಳ್ಳಿ ಬಂಡೆಯಾಗೆ ಹಾಯಿಸಿ,
ಹೊಸಹಳ್ಳಿ, ಕುಂಬಾರನಹಳ್ಳಿ, ಕಳುವಾರ ಹಳ್ಳಿ, ಕುಮಾರನಹಳ್ಳಿ, ರಂಗದ ಹಳ್ಳಿ,
ಮೇಲಾಸಿ ಕೊಟ್ಟ ಗುದ್ದಿನಗುಡ್ಡೆ ಕರಿಯಾಲು, ಕಳುವನ ಹಳ್ಳಿ, ತಾವರಕೆರೆ,
ಆಂಡೇನಹಳ್ಳಿ, ದ್ವಾರಾಳು ಇವುನ್ನೆಲ್ಲಾ ಎಡಕ್ಕೂ ಬಲಕ್ಕೂ ಬಿಟ್ಟಕೊಂಡು
ಕುಂಬಾರನಹಳ್ಳಿ, ಹೊಸಹಳ್ಳಿ ಮಡುವಿಗೆ ಎಡಕ್ಕೂ ಬಲಕ್ಕೂ ಬಿಟ್ಟಕೊಂಡು

ಅಲ್ಲಿಂದ ಒಂಭತ್ತು ವರುಷ ತುಂಬಿ ಒಂಭತ್ತು ತಿಂಗಳು ತುಂಬಿ, ಒಂಭತ್ತು ದಿನಕ್ಕೆ ಕಳುವಾರಹಳ್ಳಿ ಬೇವಿನಹಳ್ಳಿ ದಾಟಿ ಹೊನ್ನಟ್ಟಿ ಆಲೆಗೌಡನ ಮನೆ ತಾವ ಬಂದು ಬಿಟ್ಟ ಕೆಂಗುರಿ ಮಲ್ಲೇಗೌಡ.

ಸ್ವಾಮೀಯ ನೆನೆದೇವು ಸೋಮವಾರದಯ್ಯನ ಎಣ್ಣೇನೇ ಮಜ್ಜಣದ,
ಒಡೆಯ ಜುಂಜಪ್ಪನ ಉದಯಕಾಲದ ಹೊತ್ತಿಗೆ ನೆನದೇವಲ್ಲೋ,,,,,,

ಆಗ ಹದಿನಾರು ಎತ್ತಿನ ಕಣ ಒಂದು, ಹನ್ನೆರಡು ಎತ್ತಿನ ಕಣ ಹನ್ನೆರಡು, ಎರಡು ಎತ್ತಿನ ಕಣ ಎರಡು ಕೆತ್ತಿಸಬೇಕಂತೆ ತಮ್ಮಂದಿರ. ಹೊನ್ನಟ್ಟಿ ಆಲೆಗೌಡಗೆ ಹೇಳಿಬರ್‍ರಿ ಹೋಗಿ ಅಂತ ಅವರನ್ನು ಸಾಗಾಕಿ ಹನ್ನೆರಡು ಎಕರೆ ನೋಡಿಬಿಟ್ಟ. ಹದಿನಾಲ್ಕು ಗೂಡಿನ ದನ ತಗೊಂಡು ಹೋಗಿ ಹೊಲಕ್ಕೆ ಕೂಡಿಬಿಟ್ಟ. ಬದೀಗೆ ಮೂರೇ ಎಕರೆ ಬಿಟ್ಟಕೊಂಡಿದ್ದ ಬೀಜಕ್ಕೆ ಬೇಕಲ್ಲ. ಹದಿನಾಲ್ಕು ಗೂಡಿನದನ ಮೇಯ್ತಾ ಇದಾವಂತೆ, ಬದೀಗೆ ಮಗ್ಗುಲಾಗೆ ಮೂರೇಮೂರು ಬದುಸಾಲು ಬಿಟ್ಟಕೊಂಡು ನಿಂತವ್ನೆ ಕೆಂಗುರಿ ಮಲ್ಲೇಗೌಡ. ಜಾನಕಲ್ಲು ದೊಡ್ಡಕ್ಕ ಈಚೆ ಬಂದು ನೋಡಿದ್ಲಂತೆ. ಎಸರು ಚೆಲ್ಲಕ್ಕೆ ಅಂತ ಬಂದೋಳು ಅಕೆಗೆ ಇನ್ನೂ ಕೆದರಿತ್ತು. "ಯಾವಸೀಮೆಯೋವೋ, ಯಾವಗೊಲ್ಲನೋವೋ ಯಾವ ಪಾಳೆಗಾರನೋವು ಆವಿನ ದನಾ ಬಂದು, ನಮ್ಮ ಹೊಲ ಎಲ್ಲಾ ಹಾಳುಮಾಡಿದುವು. ಓಡಿ ಹೋಗ್ರೋ, ಹೊನ್ನಟ್ಟಿ ಆಲೇಗೌಡಗೆ ಹೇಳ್ರೋ ಹೊಡೆದು ಬರಲಿ" ಅಂತ ಆಯಮ್ಮ ಬಾಯಿಮಾಡೋಹೊತ್ತಿಗೆ "ಎಲೆಲೆ ಈ ಜಾನಕಲ್ಲು ದೊಡ್ಡಕ್ಕ ಇಂತಾಮಾತು ಅಂತಾಳಲ್ಲ ನಮ್ಮ ಅಣ್ಣನ್ನ. ಒಂಭತ್ತು ವರುಷ ಒಂಭತ್ತು ತಿಂಗಳು ದಿನಕ್ಕೆ ಬಂದು ನಮ್ಮದನ ಬಂದು ನಮ್ಮ ಹೊಲದಾಗೆ ಮೇದರೆ ನಮ್ಮವ್ವ ಹೆಂಗ ಅಂತಾ ಅವಳಲ್ಲ. ಅವಳಪ್ಪನ ಮನೆಯಾಗಿಂದ ಹೇರಿಕೊಂಡು ಬಂದಿದ್ದಾಳೆಯೇ ದೊಡ್ಡಮ್ಮ, ಈ ತರವಾಗಿ ಮಾತಾಡ್ತಾಳಲ್ಲ. ನಮ್ಮಣ್ಣನ್ನ ಹೀಂಗೆ ಅಂದುಬಿಟ್ಟಳು" ಅಂತ ಓಡಿಹೋಗಿ

"ದೊಡ್ಡಕ್ಕ" ಅಂದರು
"ಯಾಕ್ರಪ್ಪ?"

"ಒಂಭತ್ತು ವರುಷ ಒಂಭತ್ತು ತಿಂಗಳು ಒಂಭತ್ತು ದಿನಕ್ಕೆ ನಮ್ಮ ಹೊಲಕ್ಕೆ ಬಂದು ನಮ್ಮ ದನ ತಿಂದರೆ ಹಿರಿಯಣ್ಣನ್ನ ಅನ್ನಬಾರದ ಮಾತು ಅಂದ್ಯಲ್ಲೇ ದೊಡ್ಡಕ್ಕ, ಈಗ ಮೂವತ್ತಾರು ವರುಷ ಇಲ್ಲಿಗೆ ತುಂಬೈತೆ, ಆಡಿದ ಮಾತು ನಿನ್ನ ತಲೆಗೆ. ಇವತ್ತು ತಪ್ಪು ನಿನ್ನ ತಲೆಗೆ ಕಟ್ಟಿಕೊಂಡು, ಹಿಂದೆ ನಮ್ಮ ಅಣ್ಣ ಹಿರಿಯೋನು ಏನು ವಾಕ್ಯಕೊಟ್ಟಿದ್ದ? ಏನು ಮಾತುನುಡಿದಿದ್ದ? ಇನ್ನು ಮೂರೇ ಘಂಟೆ ಹೊತ್ತು ನಿನಗೆ ಪುರಸೊತ್ತು ಇರೋದು. ಅರಿಸಿನದ ಅರಿವೇ ಮಾಡಿಕೊಂಡು ಮೀಸಲು ದುಡ್ಡನ್ನ ಕಟ್ಟಿಕೋ. ಇನ್ನು ಮೂರು ಘಂಟೆಹೊತ್ತಿಗೆ ಬಿಡ್ತಾನೆ ನಮ್ಮ ಅಣ್ಣ ಮಿಡಿನಾಗರವ. ಇವತ್ತು ಹರಕೆ ಹನ್ನೆರಡು ವರುಷ, ನ್ಯಾಯ ಮೂವತ್ತು ವರುಷ, 'ಬರದಾಗ ಆಡಿದ

ಮಾತು, ಕೆರದಾಗೆ ಹೊಡೆದ ಏಟು ನೂರುವರುಷ ಆಗಲಿ, ಮೂರುವರುಷ ಆಗಲಿ, ಮೂರುದಿನವೇ ಆಗಲಿ ಮರೆಯಂಗಿಲ್ಲ.' ಮಿಡಿನಾಗರ ಬಿಟ್ಟು ಕಡಿಸ್ತೀನಿ. ದೊಡ್ಡಮ್ಮ, ಒಬ್ರೂ ಔಷದ ಹಚ್ಚಬಾರದ ಜಾಗಕ್ಕೆ, ಒಬ್ರು ಮುಟ್ಟಬಾರದ ಜಾಗಕ್ಕೆ, ಎಡಗಡೆ ಒಳತೊಡೆಗೆ' ಅಂತ ಹೇಳಿದ್ದ ಹಿಂದೆ ಕೆಂಗುರಿ ಮಲ್ಲೇಗೌಡ" ಅಂದರು.

ಆಗ "ಯಪ್ಪಾ" ಅಂತ ಅಂದ.

"ಊ ಏನಪ್ಪ, ಈಗ ಹನ್ನೆರಡು ಹನ್ನೆರಡು ಇಪ್ಪತ್ನಾಲ್ಕು ಎತ್ತಿನ ಕಣ ಒಂದು ಕೆತ್ತಿಸಬೇಕಂತೆ. ಹದಿನಾರು ಎತ್ತಿನ ಕಣ ಕೆತ್ತಿಸಬೇಕಂತೆ, ಎರಡು ಕಣಾನೂ ಎರಡೂ ಒಕ್ಕಲ ತಲೇಗೆ ಇಕ್ಕೇರಿ ವರಹ, ಬೆಳ್ಳಿ ರೂಪಾಯಿ ಕೊಡತಾನೆ. ಗಕ್ಕನೆ ಹೇಳಿ ಕಣಕೆತ್ತಿಸವಾ" ಅಂದ್ರಂತೆ ಹೊನ್ನಟ್ಟಿ ಆಲೆಗೌಡಗೆ.

"ಆಗಲೇಳಿ" ಅಂದ.

"ಅಣ್ಣ" ಅಂದರು ಕೆಂಗುರಿ ಮಲ್ಲೇಗೌಡನ ತಾವ ಬಂದು.

"ಅಪ್ಪಗೇಳಿದ್ವಿ, ಕಣಾ ಸರಿ ಮಾಡಿಸ್ತಾ ಇದಾನೆ. ಜಾನಕಲ್ ದೊಡ್ಡಕ್ಕ ಆಡಬಾರದ ಮಾತು ಅಂದವ್ಳೆ. ಮುಟ್ಟಬಾರದ ಜಾಗಕ್ಕೆ, ಒಬ್ರು ಔಷದ ಹಚ್ಚಬಾರದ ಜಾಗಕ್ಕೆ ಕಡಿಸಿ ಬಿಡಬೇಕೋ ಕೆಂಗುರಿ ಮಲ್ಲೇಗೌಡ" ಅಂದರು.

"ಇವತ್ತು ಈಗ ಹೋಗಿ ನಿಮ್ಮ ತಾಯಿ ಕರಕಂಡು ಹೊಸಬುತ್ತಿ ತಕ್ಕೊಂಡು ಮೂರು ಸಾಲಾಗಿನದು ಬೀಜದ್ದು ತಗೊಂಡ್ಹೋಗಿ ಒಣಗಿಸ್ಕಳ್ಳಿ. ಬಿಡ್ತೀನಿ ಇವತ್ತು ಅವಳಿಗೆ ಮಿಡಿನಾಗರವ ಅಂತ ಹಿಂದೆ ವಾಕ್ಯಕೊಟ್ಟಿದ್ದು ಮೂವತ್ತಾರು ವರುಷ ತುಂಬೈತೆ ಇಲ್ಲಿಗೆ ಇವತ್ತು" ಅಂದ.

"ಯಮ್ಮಾ" ಅಂದರು.

"ಯಾಕಪ್ಪಾ?"

"ಮೂರು ಸಾಲ್ಗಳದು, ಉಳಿದಾವೆ. ನಮ್ಮಣ್ಣ ಬುತ್ತಿ ತಕ್ಕೊಂಡು ಬರೋಹೊತ್ಲೆ ಬುಟ್ಟಿ ತಕ್ಕೊಂಡು ಬಾ. ಅವರೆ ಹರಕೊಂಬರಾವ."

ಆಕೆ ಬುಟ್ಟಿ ತಕ್ಕೊಂಡು "ಎಲ್ಲೈತೆ?" ಅಂದಳು.

"ಅಮ್ಮಾ, ಈ ಮೂರು ಸಾಲಿನಾಗೆ ಈ ಎರಡು ಸಾಲಿನದು ನಾವು ಹರ್ಕೊಬರ್ತೀವಿ. ಇತ್ಲಾಗೆ ಕೊಡು ಆ ಮೂರನೇ ಸಾಲಿಂದು ಮಡಲಿನಾಗೆ ಹರಕೊಂಬಿಡು" ಅಂದರು.

"ಅವಳ ಎದೆ ಕುಯ್ದು ನ್ಯಾಯ ಮಾಡಬೇಕು, ಹುಟ್ಟಿಸಿದ ತಂದೆ ಆಗಲಿ ಅವನ ನಾಲಿಗೆ ಕುಯ್ದು ನ್ಯಾಯಾ ಮಾಡಬೇಕು, ನ್ಯಾಯಾನೇ ತಂದೆ

ತಾಯಿ, ಇನ್ನು ಹುಟ್ಟಿಸಿದೋರಲ್ಲ ತಂದೆ ತಾಯಿ" ಅಂತ ಹೇಳವ್ರೆ ಜ್ಞಾನಿಗಳು. 'ಕಾರೆಗಿಡದಾಗೆ ಇರೋ ಕಟ್ಟಾಣಿ ನಾಗ ಏಳು ನಿನ್ನ ಸುಖನಿದ್ರೆ ಸಾಕು. ಬರಬಾರದ' ಅಂದವ್ನೆ ಕೆಂಗುರಿ ಮಲ್ಲೇಗೌಡ. ಅಂದರೆ ನಾಗೇಂದ್ರ ಹೇಳ್ತಾನೆ "ಈಗ ವರುಷಕ್ಕೆ ಒಂದು ಸಲ. ಇಂದೂ ಉಪವಾಸದಾಗೆ ನೆಲೆ ಒಲೆ ಬಳಿಕೊಂಡು ನೀರು ನಿಡಿ ಹಾಕಿಕೊಂಡು, ಅಡಿಕೆ ಮಾವು ತಕ್ಕೊಂಡು, ಒಂಭತ್ತು ಎಲೆ ತಕ್ಕೊಂಡು ಒಂಭತ್ತು ಯಾಲಕ್ಕಿ ಅವಳ ಬಾಯಿಗೆ ಹಾಕಿಕೊಂಡು ಒಂದ್ಹೊತ್ತು ಉಪವಾಸದಾಗೆ ಸೋಮವಾರ ಹೊತ್ತು ಮುಳುಗೋ ಹೊತ್ತಿಗೆ, ಹುತ್ತ ಹಸನುಮಾಡಿ, ಹುತ್ತಕ್ಕೆ ಹಾಲು ಬಿಟ್ಟು ಹುತ್ತದ ಪೂಜೆ ಮಾಡಿ ಕೆಂಗುರಿ ಮಲ್ಲೇಗೌಡ ವರುಷಕ್ಕೆ ಒಂದು ದಿನ ಹಸಿ ಅಕ್ಕಿ ಕಾಯಿಸಿ ಬಾಳೆ ಎಲೆಮೇಲೆ ಹಾಕಿ, ಎಡೆ ಇಕ್ಕಿ ಒಂದ್ಹೊತ್ತು ಬಿಡದಹಾಗೆ ಹುತ್ತದ ಮೇಲೆ ಇಕ್ಕೋಳೆ ಅಂತಾ ಜಾನಕಲ್ ದೊಡ್ಡಕ್ಕನ್ನ ನಾಗರ ಮುಟ್ಟಲ್ಲೋ ಕೆಂಗುರಿ ಮಲ್ಲೇಗೌಡ. ಅವಳು ಮಾಡಿರೋ ಅಂತ ನಾಗರ ಹಬ್ಬ ಈ ನರಲೋಕದಲ್ಲಿ ಇನ್ನಾರೂ ಮಾಡಿರಲಿಲ್ಲ, ಹಿಂದೆ ಮಾಡಿಯೂ ಇಲ್ಲ. ಮುಂದೆ ಮಾಡೋದೂ ಇಲ್ಲ. ಅಂತಾ ನಿಯಮದಾಗೆ ನಾಗರಹಬ್ಬ ಮಾಡೋಳು" ಅಂತ ಹೇಳಿದನಂತೆ. 'ನಾನು ಹುಟ್ಟಿದ ಮೇಲೆ ನಿನಗೆ ಉಳಿವಿಲ್ಲ' ಅಂತ ಹೇಳಿ ಕೆಂಗುರಿ ಮಲ್ಲೇಗೌಡ ಹೋಗಿ ಇದಿರುಮುಳ್ಳು ಬಿದಿರು ಮುಳ್ಳಾಗೆ ಹಾಸಿ ಬಲಗೈಯಾಗೆ ಅದರ ಹೆಡೆ ಹಿಡಿದುಕೊಂಡು, ಎಡಗೈಯಾಗೆ ಅದನ್ನು ಹಿಡಿದು, ಕಡಿದು ಬಿಟ್ಟನಂತೆ ಕೆಂಗುರಿ ಮಲ್ಲೇಗೌಡ.

"ಮೈಯೆಲ್ಲ ರಾಮಾರಕ್ತ ಆಯ್ತಲ್ಲೋ ಕೆಂಗುರಿ ಮಲ್ಲೇಗೌಡ. ಬಿಡೋ ಬರ್ತೀನಿ" ಅಂತ ಹೇಳಿದ ನಾಗೇಂದ್ರ. "ಹೋಗು ನಾನು ಹೇಳಿದ ಜಾಗಕ್ಕೆ ಮುಟ್ಟಿ ಬರಬೇಕು ಆ ಜಾನಕಲ್ಲ ದೊಡ್ಡಕ್ಕಂಗೆ ಹದಿನಾರು ಮೊಳದ ಸೀರೆ ಒಳಕ್ಕೆ ನೆಗೆದು ಒಬ್ಬರು ಮುಟ್ಟಬಾರದ ಜಾಗಕ್ಕೆ ಎಡಗಡೆ ಒಳತೊಡೆಗೆ ಮುಟ್ಟಿರಬೇಕು ಕಾಣಲೇ ಮಿಡಿನಾಗ" ಅಂದ ಕೆಂಗುರಿ ಮಲ್ಲೇಗೌಡ.

ಬುಡದಾಗೆ ಒರಗವನೇ ಹೆಡೆಯ ಮ್ಯಾಲೆತ್ತವನೆ
ಜಾನಕಲ್ ದೊಡ್ಡಮ್ಮನ ಕಡಿಯಾಕೆ
ನಾಗೇಂದ್ರ ಹೊರಟವನೇ.

ಜಾನಕಲ್ ದೊಡ್ಡಕ್ಕನ ಸೀರೆ ನೆರಿಗೆ ಒಳಗೇನೇ ಕೆಂಗುರಿ ಮಲ್ಲೇಗೌಡ ಹೇಳಿದಂಗೆ ಹದಿನಾರು ಮೊಳದ ಸೀರೆ ಒಳಗೆ ನೆಗೆದವನೇ ಒಬ್ಬರು ಮುಟ್ಟಬಾರದ ಜಾಗಕ್ಕೆ ಒಬ್ರು ಔಷಧಿ ಹಚ್ಚಬಾರದ ಜಾಗಕ್ಕೆ ಎಡಗಡೆ ಒಳತೊಡೆಗೆ ಕೆಂಗುರಿ ಮಲ್ಲೇಗೌಡ ಹೇಳಿದ ಹಾಗೆ ಕಡಿದ ಮಿಡಿನಾಗ.

'ಅಪ್ಪಾ' ಅಂತ ಬಿದ್ದುಬಿಟ್ಟಳು ಜಾನಕಲ್ ದೊಡ್ಡಕ್ಕ.

"ನಮ್ಮ ತಾಯಿ ಆಡಿದ ಮಾತಿಗೆ ಬುದ್ದಿ ಕಲಿಸು, ಅಂದರೆ ಪ್ರಾಣಕ್ಕೇನೇ ಅಪಾಯ ಮಾಡಿದ್ಯಲ್ಲೋ, ನಾಯಿಯಂಥವಳು ಆದರೂ ತಾಯಿ, ಒಂದ್ ಚಂಬು ನೀರು ಕೈಗೆ ಹೊಯ್ದು ಬೆಳೆಸಿದೋಳಲ್ಲವೇನೋ, ಬದುಕಿಸಿಕೊಡಬೇಕು ನಮ್ಮ ತಾಯೀನ" ಅಂದರು.

'ಕಾವಲಿಗೆ ಇಕ್ಕೋ ಮದ್ದು ನೀವೇ ಆಗ್ತೀರೇನೋ' ಅಂದ ಕೆಂಗುರಿ ಮಲ್ಲೇಗೌಡ.

"ತಂದೆ ಸತ್ತರೆ ಮಕ್ಕಳು ತಬ್ಬಲಿ ಆಗೋಲ್ಲಾ. ಆದರೆ ತಾಯಿ ಸತ್ತರೆ ಮಕ್ಕಳು ತಬ್ಬಲಿ ಆಗಿಹೋಗ್ತಾವೆ. ತಾಯಿ ಸತ್ತ ಮೇಲೆ ನಾವು ಇದ್ದರೇನು ಬಿಟ್ಟರೇನು, ತಾಯೀನ ಉಳಿಸಿಕೊಡು" ಅಂತ ಮತ್ತೆ ಮತ್ತೆ ಕೇಳಿಕೊಂಡರು.

ಕೆಂಗುರಿ ಮಲ್ಲೇಗೌಡ ಮಿಡಿನಾಗನ್ನ ಕರೆದು

"ಮಿಡಿನಾಗ, ಮಕ್ಕಳು ಬಂದು ಶರಣಾಗ್ಯಾರೇ, ನೀನು ಎಲ್ಲಿಗೆ ಮುಟ್ಟಿ ವಿಷ ಬಿಟ್ಟಿದ್ಯೋ ಅಲ್ಲೇ ಮುಟ್ಟಿ ಆಗ ಬಿಟ್ಟಿರೋ ವಿಷವನ್ನು ತಿರುಗಾ ಹೀರಿಕೊಂಡು ಬಾ ಹೋಗು ನಾಗೇಂದ್ರ" ಅಂತ ಕೆಂಗುರಿ ಮಲ್ಲೇಗೌಡ ಹೇಳಿದ.

"ಸರುಪಣಿ ಹಾಗೆ ಹೋಳಿಯೋ ಹಲ್ಲಿನಾಗೆ ಮತ್ತಿನಧಾರೆ ಹರಿದೈತಂತೆ ನಾಗರಹಾವಿಗೆ ವಿಷ ಕೆಂಗುರಿ ಮಲ್ಲೇಗೌಡ. ಚೇಳಿಗೂನೂ ಮಂಡರಗಪ್ಪೆಗೂನೂ ತಿಕದ ಹಿಂದಿನ ಕೊಂಡಿಯಾಗೆ ಒಂದು ಮುಳ್ಳೈತೆ, ಅದರಾಗೈತೆ ವಿಷ, ಗೊದ್ದಗೆ ತಲೆಯಾಗಿರತ್ತೈತೆ. ಕಟ್ಟಿರುವೆಗೂ ತಳದಾಗೆ ಇರತ್ತೈತೆ ವಿಷ. ಕೆಂಗುರಿ ಮಲ್ಲೇಗೌಡ. ಈ ನರಮನುಷ್ಯನ ನರನರ ಸಂದುಸಂದು ರೋಮವೆಲ್ಲಾ ವಿಷವಾಗಿರುತ್ತೈತೆ ಕೆಂಗುರಿ ಮಲ್ಲೇಗೌಡ ಈ ನರಜಲ್ಮದಾಗೆ ಇರೋ ವಿಷ ಇನ್ನು ಯಾವ ಜಾತಿಯಾಗೂ ಇಲ್ಲ ಕೆಂಗುರಿ ಮಲ್ಲೇಗೌಡ. ಅದರೆ ಜಾನಕಲ್ ದೊಡ್ಡಕ್ಕಗೆ ಬಿಟ್ಟಿರೊ ವಿಷ ಸರಿತ್ತೈತೆ, ಅವಳಿಗೆ ಜಯ, ನನಗೆ ಮರಣವಾಗುತ್ತೈತೆ" ಅಂತ ಹೇಳಿಬಿಡ್ತಂತೆ ಮಿಡಿನಾಗರ ಸರ್ಪ.

"ಜಯವಾಗಲಿ ಮರಣವಾಗಲಿ ನೀನು ಹೋಗೇ ತೀರಬೇಕು. ನೀನು ಎಲ್ಲಿ ಮುಟ್ಟಿಬಂದಿದ್ದೀಯೋ ಅಲ್ಲಿಗೇ ಮುಟ್ಟಿ ಬಿಟ್ಟು ಝಾಡಿಸಿ ಎಳೀಬೇಕು ಆ ದೊಡ್ಡಕ್ಕನ ವಿಷವನ್ನು". ಆ ಸರ್ಪ ವಿಷನೆಲ್ಲಾ ಸೆಳೆದು ಈಚೆ ಬಂತು, 'ಶಿವಾ ಶಿವಾ ಏನಪ್ಪಾ ಇದು ನನ್ನಗತಿ' ಅಂತ ಅವಳು ಎದ್ದು ನಿಂತುಕೊಂಡು ಬಿಟ್ಟಳು. ಆ ಇಬ್ಬರು ವಿಷಾನೂ ಅದಕ್ಕೆ ಸೇರಿಹೋಯ್ತು. ಅಲ್ಲಿಂದ ಬರುವಾಗ್ಗೆ 'ಶಿವಪಾರ್ವತಿ' 'ಶಿವಪಾರ್ವತಿ' ಅಂತ ಬಂದಿದ್ದೆ ಕೆಂಗುರಿ ಮಲ್ಲೇಗೌಡನ ತೊಡೆಮೇಲೆ ತಲೆ ಇಟ್ಟು ಮಲಗಿ ಪ್ರಾಣ ಬಿಟ್ಟು ಬಿಡ್ತು ಮಿಡಿನಾಗ.

ನಾಗರಹಾವಿನ ವಿಷಕ್ಕಿಂತ ಒಂದ್ ಭಾಗ ಜಾಸ್ತಿ ಐತೆ ನರಮನುಷ್ಯನ ವಿಷ. ಇದರಲ್ಲಿ ತುಂಬಿರೋ ಅಂತ ವಿಷ ಯಾವ ಕಾಡುಮೃಗಗಳಿಗೂ ಇಲ್ಲ. ಮನುಷ್ಯರು ಕಡಿದ್ರೆ ಹಾವು ಯಾವ ಯಾವ ಜಾಗಕ್ಕೆ ಹೋದರೂ ಸತ್ತು ಹೋಗಿಬಿಡುತ್ತಂತೆ. ಬಂದು ಆ ಸರ್ಪ ಪ್ರಾಣಬಿಡುವಾಗ್ಗೇನೇ ಕೆಂಗುರಿ ಮಲ್ಲೇಗೌಡ

'ತಮ್ಮಂದೀರಾ' ಅಂದ.

'ಯಾಕಣ್ಣಾ?'

"ಜಾನಕಲ್ ದೊಡ್ಡಕ್ಕಗೆ ಜಯ, ಮಿಡಿ ನಾಗರಗೆ ಮರಣ. 'ಇವತ್ತು ಮೂವರು ಮಕ್ಕಳಿಗೆ ಮುಂಜಿ ಆಗಿಲ್ಲ ಮದುವೆ ಆಗಿಲ್ಲ' 'ಸರ್ಪದೋಷಕ್ಕೆ ಇದು ಹಿಂಗೆ'. 'ನಾವು ಯಾವತ್ತು ಹೋಗಿ ಯಾವ ದೇವರನ್ನು ಕೇಳಿದರೂ, ನೀವು ಮದುವೆಗೆ ಮುನ್ನ ಸರುಪನ್ನ ಹೊಡಿದಿದ್ದೀರಾ, ಈ ದ್ರೋಹ ಅನ್ನ ತಕ್ಕದ್ದು ದೋಷ ನಿಮ್ಮನ್ನು ಕಾಡುತ್ತಾ ಐತೆ, ಈ ದೋಷ ನೀವು ಪರಿಹಾರ ಮಾಡ್ಕೋ ಬೇಕು' ಅಂತಲೆ ದೇವರು ಹೇಳುವುದು."

ಹಾಗಂತ ಹೇಳಿದ ಕೆಂಗುರಿಮಲ್ಲೇಗೌಡ, ತಮ್ಮದೀರಿಗೆ ಮತ್ತೆ ಹೇಳ್ತಾನೆ "ನಡೀರ್‍ರಲಾ ಸೋಮವಾರ ಇವತ್ತು, ನಾವು ಮೂವರು ನಾಗರ ಹಬ್ಬ ಮಾಡಬೇಕು, ಒಂದ್ಹೊತ್ತು ಉಪವಾಸದಾಗೆ ನಾಗರಕ್ಕೆ ತನಿ ಎರೆದು, ಹುತ್ತ ಕೆತ್ತಿ, ಸುತ್ತ ಹಸನುಮಾಡಿ, ನಾಗರಹಬ್ಬ ಮಾಡಿಕೊಂಡು, ಒಂಭತ್ತು ಯಾಲಕ್ಕಿ ಕಾಳು ಬಾಯಿಗೆ ಹಾಕ್ಕೊಂಡು ಸೋಮವಾರ ಐದು ಘಂಟೆಗೆ ನಾಗರ ಹಬ್ಬಮಾಡಿ, ನಾಗರಿಗೆ ತನಿ ಎರೆದು 'ಅವತ್ತಿನ ದಿನದಾಗೆ ಸಾಹಸವಂತರ ಮಕ್ಕಳು, ಇವತ್ತಿನ ದಿನದಾಗೆ ನಾವು ಹಾವು ಕೊಂದೋರು, ಇದರ ಪಾಪ ಪರಿಹಾರ ಆಗಲಿ, ಅಂತ ಯಾರು ನಾಗರ ಕಲ್ಲು ನೆಡಿಸಿ, ನಾಗರಿಗೆ ತನಿ ಎರೆದು, ನಾವು ಮಾಡಿರೋ ನಾಗರಹಬ್ಬ ಈ ನಾಡಿನೊಳಗೆ ಭೂಲೋಕದೊಳಗೆ ಕುಲ ಹನ್ನೆರಡು ಜಾತಿ ಒಳಗೂನು ವರುಷಕ್ಕೊಂದಿನ ನಾಗರ ಚೌತಿ, ನಾಗರ ಪಂಚಮಿ ಅಂತ ಮಾಡಲಿ. ನಾಗರ ಚೌತಿ, ನಾಗರ ಪಂಚಮಿ ಅಂತ ನಮ್ಮ ವಂಶ ಪಾರಂಪರ್ಯ ಇರೋವರೆಗೆ ಬೆಳೀಲಿ. ನಾಗರ ಹಾವು ಕೊಂದ ದೋಷಕ್ಕೆ ಪರಿಹಾರ ಆಗಿ ನಮ್ಮ ವಂಶ ಬೇಳೀಲಿ ಅಂತ ಮಾಡಿರೋ ನಾಗರಹಬ್ಬ. ಆ ಅದೇ ನಾಗರಕಲ್ಲು ಇಟ್ಟುಕೊಂಡು ಇನ್ನು ಮುಂದೆ ಹುಟ್ಟೋರೆಲ್ಲ ಪೂಜೆ ಮಾಡ್ಕಳ್ಳಿ' ಅಂತ ವಾಕ್ಯಕೊಟ್ಟು ಮೂರು ಕಲ್ಲನ್ನು ಹಾಕಿಟ್ಟರಂತೆ.

ಆಗ ಆ ಯಮ್ಮನ್ನ ಹೊರಿಸಿಕೊಂಡು, ಹದಿನಾಲ್ಕು ಗೂಡಿನ ದನ ಹೊಡಕೊಂಡು, ಚಿಕ್ಕಾಲಪ್ಪ ದೊಡ್ಡಾಲಪ್ಪ ಅವರನ್ನೂ ಕರಕೊಂಡು ಬಂದು ಕೆಂಗುರಿ ಮಲ್ಲೇಗೌಡ ಚಿಕ್ಕಾಲಪ್ಪ ದೊಡ್ಡಲಪ್ಪ ಅವರನ್ನು ಸೇರಿಸಿಕೊಂಡು ಒಟ್ಟಾಗಿ ಹದಿನಾಲ್ಕು ಇಪ್ಪತ್ತೆಂಟು ಎತ್ತಿನ ಕಣ್ಣ ಮಾಡಿ ದನ ನಿಲ್ಲಿಸಿಬಿಟ್ಟ ಕೆಂಗುರಿ ಮಲ್ಲೇಗೌಡ. ಆಮೇಲೆ ಆ ದನಗಳ ಕೊಂಬೆಲ್ಲಾ ಹರಿದು ತೆಗೆದುಬಿಟ್ಟರು. ಕಣವೆಲ್ಲಾ ವರಹದಿಂದ ತುಂಬ್ಹೋಗಿ ಬಿಡ್ತಂತೆ,

'ತಮ್ಮಂದೀರಾ' ಅಂದ.

'ಯಾಕಣ್ಣಾ?'

"ಈ ಮೂವತ್ಮೂರು ಹಳ್ಳೀಲೂ ಮಕ್ಕಳಾಗಲಿ, ಮರಿಯಾಗಲಿ ಮದುವೆಯಾಗಲಿ ಮುಂಜಿಯಾಗಲಿ ತನ್ನೋರಿಗೆ ಅನ್ನ ಇಲ್ಲ, ಕುಡಿಯಕ್ಕೆ ನೀರಿಲ್ಲ. ಬಾಳು ಅನ್ನೋ ಬಡತನ ಬಂದ್ಯೆತೆ ತಮ್ಮಂದೀರಾ, ಈ ಹದಿನಾರು ಎತ್ತಿನ ಕಣದಾಗೆ ಒಂದು ಮೊರಾ ಎತ್ತಿ ತುಂಬಿ ಅವರಿಗೆ ವರಹ ಕೊಟ್ಟು ಬಿಡ್ರಪ್ಪಾ. ಅವರು ತಿರುಗಾ ಕೊಟ್ಟರೆ ಕೊಡಲಿ, ಬಿಟ್ಟಾರೆ ಬಿಡಲಿ" ಅಂದ.

ಮೂವತ್ಮೂರು ಊರೋರ್ನೆಲ್ಲಾ ಕರೆಸಿ ನೂರಾರು ಮೊರದಾಗೆ ತುಂಬಿಸಿ ಒಂದೊಂದು ವರಹ ಕೊಟ್ಟುಬಿಟ್ಟರು.

"ಉಳಿದದ್ದು ವರಹ ದುಡ್ಡು ಎಲ್ಲಾ ತಗೊಂಡು ಹೋಗಿ. ನಿಮ್ಮ ಅಪ್ಪನ ಮನೆಯಾಗೆ ತುಂಬಿರೋ ನಿಮ್ಮ ಅಪ್ಪನ ಬಡತನ ಬಯಲಾಗಲಿ" ಅಂದನಂತೆ ಕೆಂಗುರಿ ಮಲ್ಲೇಗೌಡ ತಮ್ಮಂದೀರನ.

ಆ ಗಳಗೆಯಾಗೇನೇ ಆರು ಎತ್ತಿನ ವರಹಾನ ತೊಗೊಂಡು ಹೋಗಿ ಹೊನ್ನಟ್ಟಿ ಆಲೇಗೌಡನ ಮನೆಯಾಗೆ ತುಂಬಿದ್ರಂತೆ. ಬಾಗಿಲಾಗೆ ಹಾಸಿ ಭಾಗ್ಯಲಕ್ಷ್ಮಿ ಆಲೇಗೌಡನ ಮನೆ ಒಳಗಡೆ ನುಗ್ಗಿ ಬಂದು ಬಿಟ್ಟಳಂತೆ. ಆರೆತ್ತಿನ ದುಡ್ಡಿಗೆ, ಇನ್ನೂ ಇದ್ದದ್ದು ಹನ್ನೆರಡು ಎತ್ತಿಂದು ಅಲ್ಲೇ ಬಿದ್ದೈತೆ.

'ಇದ್ನೇನು ಮಾಡಾನ ಅಣ್ಣ' ಅಂದರು.

'ರಾಮಣ್ಣ ಲಕ್ಷ್ಮಣ ಅನ್ನೋ ಎರಡು ಕಣಜ ಕಟ್ಟಿಸಿಬಿಡಿರಿ. ಕಣಜ ಕಟ್ಟಿ ಆ ಕಣಜದಾಗೆ ತುಂಬಿರಲಿ' ಅಂದ.

"ಅಲ್ಲಿಗೆ ಹನ್ನೆರಡು ಎತ್ತಿನ ವರಹ ಹಿಡಿದ್ಯೆತೆ. ಇನ್ನು ಹನ್ನೆರಡು ಎತ್ತಿನದು ಏನು ಮಾಡಬೇಕು, ಇದನೆಲ್ಲಿಗೆ ಹಾಕೋಣ" ಅಂತ ಕೇಳಿದ್ರು.

ಅಗ ಚಿಕ್ಕಾಲಪ್ಪ ಹೇಳಿದ. "ಅಣ್ಣಾ ಇನ್ನೂ ಇದುನ್ನ ಎಲ್ಲಿ ಹಾಕೋಕ್ಕೂ ಜಾಗಾ ಇಲ್ಲ. ಏಳುಜನ ಕಂಬೇರಗೊಲ್ಲರ ಹೆಣ್ಣು ಮಕ್ಕಳು ಮೈನೆರೆದು ಹೆಣ್ಣಾಗಿ ಇಲ್ಲಿಗೆ ಮೂರುವರುಷ ಅಗೈತಂತೆ. ಏಳು ಜನ ಕಂಬೇರ ಮಕ್ಕಳು ಇರೋ ಹಟ್ಟಿಗೆ ನೀನು ಮೋಗಿ ಒಪ್ಪಿದ್ದ ಒಂದು ಹೆಣ್ಣು ಮಾಡಿಕೊಂಡು ಬಾರೋ, ರಾಜಕುಮಾರ ಇದ್ದ ಹಾಗೆ ಇದ್ದೀಯ, ಹದಿನಾರು ವರ್ಷ ಆಗೋಯ್ತು, ನಿನ್ನ ಮದುವೆ ಮಾಡಬೇಕು ಕೆಂಗುರಿ ಮಲ್ಲೇಗೌಡ' ಅಂದರು.

೨.೨.೩. ಕೆಂಗುರಿ ಮಲ್ಲೇಗೌಡನ ಮದುವೆ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಸಿದ್ಧರು ಬಂದರು ಎಂದು ಎದ್ದು ನೋಡಲು ಬಂದೆ
ಸಿದ್ಧರು ನಮ್ಮಕೈಗೆ ಸಿಗಲಿಲ್ಲಾ ಈ ಹೊತ್ತು
ರುದ್ರಾಕ್ಷಿ ತೋಪೇ ಮರೆಯಾದೋ

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ
ಎದ್ದೊಂದರಘಳಿಗೆ ನೆನೆದೇವೋ
ಸ್ವಾಮೀನ ನೆನೆದೇವೋ ಸ್ವಾಮಾರದಯ್ಯಾನ
ಬೆಣ್ಣೆ ಮಜ್ಜನದ ಒಡೆಯ ಸ್ವಾಮಿ ಜುಂಜಪ್ಪನ ನೆನೆದೇವೋ

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

ಕೆಂಗುರಿ ಮಲ್ಲೇಗೌಡಗೆ ಮದುವೆ ಮಾಡ್ಕೋ ಅಂತ ಚಿಕ್ಕಾಲಪ್ಪ, ದೊಡ್ಡಾಲಪ್ಪ ಹೇಳಿದ್ದು ಆಲೆಗೌಡಗೂ ಸರಿ ಅನ್ನಿಸ್ತು. ಅವನಿಗೆ ಮದುವೆ ಮಾಡೋರು ಮಾರನೋರ ಗೊಲ್ಲರೇ ತಾನೇ? ಅವರ ಮುಂದೆ ಒಂದು ಮಾತು ಹೇಳಿಬಿಡಾನ ಅಂದುಕೊಂಡು ಚಿಕ್ಕಾಲಪ್ಪ ದೊಡ್ಡಾಲಪ್ಪಗೆ ಕರೆದು 'ಆವಿನ ಹಿಂಡು ನೋಡ್ಕಳ್ರೋ ನಾವು ಕಳುವಾರಳ್ಳಿಗೆ ಹೋಗಿ ಬರ್ತೀವಿ' ಅಂದ ಆಲೇಗೌಡ. ಏಳು ಏಳು ಹದಿನಾಲ್ಕು ಗೂಡಿನ ದನ ಹೊಡಕೊಂಡು ಚಿಕ್ಕಾಲಪ್ಪ ದೊಡ್ಡಾಲಪ್ಪ ಒಟ್ಟಾಗಿ ಏಣಕಲ್ ಗುಡ್ಡಕ್ಕೆ ದನಹೊಡಕೊಂಡು ಮೇಯಿಸಕ್ಕೆ ಹೋಗವ್ರೆ.. ಹೊನ್ನಟ್ಟಿ ಆಲೇಗೌಡ ಊಟಾಮಾಡಿ, ಆಕಳಿಸಿ ಎದ್ದು ಹಿರಿಯಟ್ಟಿ ಕೆಂಗುರಿ ಮಲ್ಲೇಗೌಡನ ದೊಡ್ಡಪ್ಪಂದಿರು ಇದ್ದರಲ್ಲಾ ಆ ಹಟ್ಟಿಮನೆಗೆ ಬಂದರು.

"ಈವಾಗ ಈ ಹೊನ್ನಟ್ಟಿ ಆಲೇಗೌಡ ನಾನು ಹಿರೇಮಗಗೆ ಹೆಣ್ಣು ನೋಡೋಕೆ ಹೋಗಬೇಕು. ಕಂಬೇರ ಗೊಲ್ಲರಹಟ್ಟಿಗೆ ಬರ್‍ತಪ್ಪೋ" ಅಂದ.

'ನಾವು ಐದು ಜನ ಹೋಗಬೇಕು ಇಲ್ಲಾಂದ್ರೆ, ಒಂಭತ್ತು ಜನ ಹೋಗಬೇಕು' ಅಂತಾರಲ್ಲ ಇವತ್ತಿಗೂ ಸ್ವಾಮೇರು ಗುಂಡಣ್ಣೋರೇ. ಆಗ ಬರ್‍ತಯ್ಯ ನನ್ನ ಹೀರೇಮಗಗೆ ಹೆಣ್ಣು ನೋಡೋಕೆ' ಅಂದು ಮಾರನೋರ ಗೊಲ್ಲರನ್ನ ಕರೀತಾನೆ.

'ಈಗ ಬಂದಿದೀಯ, ಕೆಂಗುರಿ ಮಲ್ಲೇಗೌಡನ್ನ ಬಲಗಾಲು ಮುಂದಿಕ್ಕಿ ನಿನ್ನ ಮನೇಗೆ ತೊಗೊಂಡುಹೋಗಿ ಕೋಟ್ಯಾಧೀಶ್ವರನಾಗಿದೀಯಾ, ಹೊನ್ನಟ್ಟಿ ಆಲೆಗೌಡ ಅನ್ನೊ ಹೆಸರು ಹೋಗಿ ನಿನಗೆ ಹೊನ್ನುಒಟ್ಟೋ ಆಲೆಗೌಡ ಅನ್ನೋ ಹೆಸರು ಬಂದಿದೆ".

ಈ ಒಕ್ಕಲಿಗರ ಮನ್ಯಾಗೆ ಇರೋ ಇವನಿಗೆ ಗೊಲ್ಲರ ಹೆಣ್ಣು ಕೊಡ್ರಿ ಅಂತ ಸಾವಿರ ಮನೆ ಹಟ್ಟಿ ಕಂಬೇರಗೊಲ್ಲರಲ್ಲಿ ಕೇಳೋಣ ಅಂದರೆ ಅಕ್ಕಸಾಲಿ ಮುತ್ತುಗದ ಸವರು, ಮುತ್ತು ರತ್ನ ವಜ್ರ ವೈಡೂರ್ಯ ಹಾಕಿ ತಲೆದಿಂಬು ಮಾಡಿಕೊಂಡು ಮಂಚಕ್ಕೆ ಮುಖ ಅಡಿಯಾಗೆ ಮಲಕ್ಕೊಂಡಿದ್ರು.

'ಈ ಕಂಬೇರ ಗೊಲ್ಲರ ಮನೇಗೆ ಬಂದು ಒಕ್ಕಲಿಗರ ಮನೇಲಿ ಬೆಳೆದಿರೋ ಇವನಿಗೆ ಹೆಣ್ಣು ಕೇಳೋಕೆ ನಾವು ಬರೋದಾ,,, ಇಲ್ಲ. ಹೋಗೋ ನಾವು ಬರಲ್ಲ' ಅಂದ್ರು ಕೆಂಗುರಿ ಮಲ್ಲೇಗೌಡನ ದೊಡ್ಡಪ್ಪಂದಿರು.

'ಯಪ್ಪಾ' ಅಂದ ಆಲೇಗೌಡನ್ನ.

'ಯಾಕಪ್ಪಾ?' ಅಂದ.

'ಗೊಲ್ಲಗೆ ಗೊಲ್ಲನೆ ಮೂಲ, ಕುಂಟೆತ್ತು ಹೊಲಕ್ಕೆಮೂಲ,
ಗೊಲ್ಲನ್ನ ಗೆದ್ದೋರಿಲ್ಲ, ಭೂಮಿ ಕದ್ದೋರಿಲ್ಲ.
ಗೊಲ್ಲಗಿರೋ ಮಾಯ, ನಗ್ಗಲ ಮುಳ್ಳುಗಿರೋ ಆಯ ಯಾರಿಗೂ ಇಲ್ಲ.'

ಅಂತ ನಾನು ಅಲ್ಲೇ ಹೇಳಿರಲಿಲ್ಲವೇನೋ ಆಲೇಗೌಡ, ಇವರು ನನಗೆ ಚಿಕ್ಕಪ್ಪ ದೊಡ್ಡಪ್ಪದೀರು, ಇವರು ಮಿತ್ರದ್ರೋಹಿಗಳು, ಇವರು ಯಾರೂ ನೋಡೋದು ಬ್ಯಾಡಾ, ನಮ್ಮ ತಂದೆತಾಯಿಗಳು ಮಾಡಿರೋ ದಾನ ಧರ್ಮ ಇದ್ದರೆ ನಾನೇ ಪಡೀತೀನಿ ನಡೆಯಪ್ಪ ಹೋಗೋಣ' ಅಂದ.

ಆಗ ಬಂದು 'ದೊಡ್ಡಕ್ಕಾ' ಅಂದ.

'ಯಾಕಪ್ಪಾ?'

"ಕಂಚಿನ ಕಡಗ ಹಾಕಬೇಕು ಒಕ್ಕಲಿಗರೋಳು ಬಲಗೈಯಾಗೆ ಬಂಡೆ ಇಕ್ಕಬೇಕು. ಎಡಗೈಯಾಗೆ ತೋಳಸರಿಗೆ ಹಾಕಬೇಕು. ಬಿಳಿಸೀರೆ ಹದಿನಾರು

ಮೊಳದ ಸೀರೆ ಉಡಬೇಕು. ಕಾಲಂದಿಗೆ ಕಡಗದುಂಗರ ಹಾಕಬೇಕು. ಕುಳಿಸವರಿ ಎಣ್ಣೆಗಂಟು ಹಾಕಬೇಕು. ನೀನು ಮೂರು ಕಾಸಿನಬಿಲ್ಲೆ ಅಗಲಕ್ಕೂ ಕುಂಕುಮದ ಬಟ್ಟು ಇಡಬೇಕು. ಒಂದು ಕೋರಿಚೀಲ, ಒಂದು ಕಟ್ಟು ಎಲೆ ಅಡಕೆ ತುಂಬಕೋಬೇಕು. ಒಟ್ಟಿಗೆ ಇವತ್ತು ನೀನು ಗೊಲ್ಲತಿ ಆಗಬೇಕು. ದೊಡ್ಡಕ್ಕಾ ಇವಾಗ ಒಕ್ಕಲಿಗರೋಳು ಗೊಲ್ಲತಿ ಆಗಿಬಿಡಬೇಕು. ಬಡಚಿತ್ತಮ್ಮ ನೀನೂ ಗೊಲ್ಲರ ಹೆಂಗಸೇ ಆಗಿಬಿಡಬೇಕು. "ಆಲೇಗೌಡ ನೀನು ಗೊಲ್ಲರ ಹಿರೇ ಮನುಷ್ಯಾ ಆಗಿಬಿಡಬೇಕು ಪಟ್ಟೆದಟ್ಟಿ ಕೋರೆರುಮಾಲು ನೇರಕ್ಕೆ ಸುತ್ತಬೇಕು. ಕರೆಕಂಬಳಿ ತಿರುವಿ ಹೆಗಲು ಮೇಲೆ ಹಾಕಬೇಕು. ಸರಳುಗಣ್ಣಿನ ಬಿದಿರು ಕೋಲು ಕೈಯಾಗೆ ಹಿಡಕೋಬೇಕು. ತದ್ರೂಪು ನೀನು ಗೊಲ್ಲ ದೇವನೆ ಆಗಿಬಿಡಬೇಕು. ನಾಲ್ವರು ಅಲ್ಲಪ್ಪಾ ಐದು ಜನ ಹೋಗಬೇಕು. ಐದು ಜನಕ್ಕೆ ಏಳುಗಣ್ಣಿನ ಬಿದಿರುಕೋಲು ಕೊಟ್ಟು ನಿಮ್ಮ ಜೊತೆಗೆ ಕೋಲೂ ಇರಲಿ, ಇದು ಐದನೇ ಜನ ಆದಂಗೆ" ಅಂದ ಕೆಂಗುರಿ ಮಲ್ಲೇಗೌಡ.

'ಆಗಲಿ' ಆಂತ ಅದನ್ನೂ ತೊಗೊಂಡು ಹೋದ ಆಲೇಗೌಡ. ಇವತ್ತಿಗೂ ಬಿಟ್ಟಿಲ್ಲ ನಾವು ಇದನ್ನ, ನಾಲ್ವರು ಹೊರಟರೆ ಒಂದು ಬಿದಿರು ಕೋಲು ಹಿಡಕೊಂಡು ಐದು ಜನ ಅಂದುಕೋತೀವಿ. ಎಂಟು ಜನ ಹೊರಟರೆ ಒಂಭತ್ತು ಜನಕ್ಕೆ ಒಂದು ಬಿದಿರು ಕೋಲು ತೊಗೋತೀವಿ. ಇವತ್ತಿಗೆ ನಾವು ದೇವಾನುದೇವತರು ಎಲ್ಲಾ ಇರೋದು ಆ ಬಿದಿರು ಕಡ್ಡಿಯಾಗೇನೇ. ಆಗ ಐದು ಜನಾನೂವೇ ಬಿದಿರು ಕೋಲನ್ನು ಹಾಕ್ಕೊಂಡು ಇವರು ಹೊರಟೋದ್ರು ಸ್ವಾಮಿ, ಸೋಮವಾರದ ದಿನ ಹೋಗಿ ಏಳುಜನ ಹೆಣ್ಣು ಮಕ್ಕಳು, ಕಂಬೇರಗೊಲ್ಲರ ಹೆಣ್ಣು ಮಕ್ಕಳು ಸಿಹಿನೀರ ಬಾವಿತಾವ ಕೊಡಪಾನದಾಗೆ ಸಿಹಿನೀರು ತುಂಬಿಕೊಂಡು ಬರುವೋ ಹೊತ್ತಿಗೆ 'ತಾಯಂದೀರ' ಅಂದ. 'ಯಾಕಪ್ಪಾ?' ಅಂದರು. ನೀವು ಇಲ್ಲಿ ಇರ್ರಮ್ಮಾ, ಆಲೆಗೌಡ ನೀ ಮುಂದೆ ನಡಿ. ದೊಡ್ಡ ಚೆನ್ನೇಗೌಡರ ಮನ್ಯಾಗೆ ಒಂದ್ ಐದಾರು ಜನ ಬಂದವ್ರೆ, ಮನೋಜಯ ಮಾಡಾಕೆ ಅಡುಗೆ ಮಾಡಬೇಕು ಅಂತ ಆಲೆಗೌಡನ್ನ ಮುಂದೆ ಕಳಿಸಿ, ಇವನು ಒಂದು ಬಂಡೆ ಮೇಲೆ ಕೂತುಕೊಂಡ ಮೂಡಲು ಉದಿ ಹತ್ತಿ. ಇವರು ಏಳುಜನರು ಕಂಬೇರು ಗೊಲ್ಲರ ಹೆಣ್ಣುಮಕ್ಕಳು ಸಿಹಿನೀರು ಬಾವಿಯಿಂದ ನೀರು ತರ್ತಾ ಇದ್ದರು.

'ಯಮ್ಮಾ' ಅಂದ. 'ಇವರಿಬ್ಬರು ಮಲತಾಯಿ ದಿಡರೇ ಇಲ್ಲವೋ ಇವನಿಗೆ ಏಳು ಜನ ಹೆಣ್ಣು ಮಕ್ಕಳಲ್ಲಿ ಯಾವ ಹೆಣ್ಣು ಮಕ್ಕಳನ್ನು ಮದುವೆ ಮಾಡ್ತೀಯಾ ದೊಡ್ಡಮ್ಮಾ ಅಂತ ಕೇಳಕ್ಕೆ'.

"ಏಳುಜನ ಹೆಣ್ಣು ಮಕ್ಕಳಾಗೆ ನೀನು ಒಪ್ಪಿಕೊಂಡ ಹೆಣ್ಣು ಮಗಳನ್ನು ನಿನ್ನ ಕಾಲುತೊಳೆದು ಕನ್ಯಾದಾನ ಮಾಡಿಕೊಡ್ತೀವಿ. ಧರ್ಮದ ಧಾರೆ ಎರೆದು ನಿನಗೆ ಮದುವೆ ಮಾಡ್ತೀವೋ ಕೆಂಗುರಿ ಮಲ್ಲೇಗೌಡ. ನಾವು ಮಾತ್ರ ಒಪ್ಪಿಕೊಂಡು ನಿನ್ನ ಮದುವೆ ಮಾಡಲ್ಲ" ಅಂದರು.

"ಯಾಕ್ರಮ್ಮಾ" ಅಂದ.

"ಹಿಂದೆ ಕಳುವಾರಹಳ್ಳಿ ದಿಣ್ಣೆಯಾಗೆ ಅಣ್ಣಾವ್ರ ಹೊಲದಾಗೆ ಮಿಡಿನಾಗರ ಬಿಟ್ಟು ನನ್ನ ಕಡಿಸಿದ್ದಿಯಲ್ಲಪ್ಪಾ ನೀನು, ನಾನ್ಯಾಕೆ ನಿನಗೆ ಹೆಣ್ಣು ಹುಡುಕಲಿ? ಈಗ ನೀನು ಒಪ್ಪಿಕೊಂಡಾಕೀನ ನಾವು ಒಪ್ಪಿಕೊಂಡು ಮದುವೆ ಮಾಡ್ತೀವಿ".

ಏಳು ಜನಾನು ನೀರು ಹೊತ್ತುಕೊಂಡು ಮನೇಗೆ ಹೋಗ್ತಿದ್ದಂಗೆ ಕನ್ನೆಗಳಾಗಿ ಆರು ಜನಾನು ಮುಂದೆ ಬಿಟ್ಟರು. ಯಾಕಂದ್ರೆ ಇವರಾರು ಜನ ಹೆಣ್ಣಾಗಿ ಎರಡೆರಡು ಮೂರುಮೂರು ವರುಷ ಆಗಿದೆ. ಯಾರೂ ಗಂಡು ಬರ್ತಾ ಇಲ್ಲವಲ್ಲ. ಕಡೆಯಾಗಿ ಚಿನ್ನಮ್ಮ ಇನ್ನೂ ಹೆಣ್ಣಾಗಿ ಮೂರು ತಿಂಗಳೂ ಆಗಿಲ್ಲ. ಯಾರಾದ್ರೂ ಗಂಡು ಬಂದೇಬರ್ತಾರೆ ಅಂತ ಚಿನ್ನಮ್ಮನ ಕರೆಕಂಬಳಿ ಗೂಡ್ಹಾಕಿ ಮುಚ್ಚಿಟ್ಟು, ಇವರು ಆರು ಜನರನ್ನು ಕರಕೊಂಡು ಈಚೆ ಬಂದರು ಕಂಬೇರ ಗೊಲ್ಲರು.

'ಯಾವಹೆಣ್ಣು ಮಾಡಿಕೊಂತೀಯಾ ಇವರು ಆರು ಜನದಾಗೆ' ಅಂತ ಕೇಳಿದರು

'ಮಾವಾ, ಇವರು ಆರೇ ಜನರಾ ನಿಮ್ಮ ವಂಶದಾಗೆ ಹುಟ್ಟಿದೋರೂ? ಇಲ್ಲಾ ಬ್ಯಾರೆ ಯಾರಾದ್ರೂ ಹುಟ್ಟವ್ರೋ ನಿಮ್ಮ ವಂಶದಾಗೆ' ಅಂದ.

'ಇವರು ಆರೇ ಜನ ಕಣಪ್ಪಾ'.

ಏಳನೇವಳು ಕಡೆ ಹುಟ್ಟಿನ ಕಟ್ಟಾಣಿ ಚೆಲುವೆ, ಏಳು ಮಲ್ಲಿಗೆ ಮೊಗ್ಗು ಒಂದು ತಕ್ಕಡಿ ಪಕ್ಕಕ್ಕೆ, ಚಿನ್ನಮ್ಮ ಒಂದು ತಕ್ಕಡಿ ಮ್ಯಾಗೆ ಹೀಗೆ ಚಿನ್ನಮ್ಮನ್ನ ಸಾಕಿದ್ರಂತೆ ಕಂಬೇರಗೊಲ್ಲರು. ಆ ಘಳಿಗೆಯಾಗ್ಯೇನೇ

ಚಿನ್ನಮ್ಮನ್ನ ಕರೆ ಕಂಬಳಿಯಾಗೆ ಬಚ್ಚಿಕ್ಕಿ ಇವರು ಆರು ಜನರ ಕರಕೊಂಡು ಬಂದಿದೀರಾ, ಇವರು ಆರೂ ಜನಕ್ಕೆ ಸಾಲಾವಳಿ ಗುಣಗಳು ನಾನು ಹೇಳಿಲ್ಲ. ಏಳು ಜನಾನೂ ಸಾಲಾಗಿ ನಿಲ್ಲಿಸಿದಾಗ ನಾನು ಹೇಳ್ತೀನಿ ಕಣ್ರಪ್ಪಾ ನಾನು. ಮಾವನಾಗಿ ಕರಕಂಬರ್ರಿ ಆ ಹೆಣ್ಣನ್ನೂವೆ" ಅಂದ.

ಅವ್ರು 'ಇದಕ್ಕೂ ತಂದ ವರವಾ' ಅಂತ ಹೇಳಿ ಆಗ ಚಿನ್ನಮ್ಮನ್ನ ಕರಕೊಂಡುಬಂದು ಏಳು ಜನಾನ್ನೂ ಸಾಲಿಗೆ ನಿಲ್ಲಿಸಿದಾಗ, ಆಗ ಹೇಳಿದ

"ಬಾಯಿಬಿಟ್ಟು ಹೇಳಬ್ಯಾಡ, ಒಂದು ಎತ್ತಿಗಾಗಲಿ, ಒಂದು ಹೆಣ್ಣಿಗಾಗಲೀ ಏನೂ ಹೇಳಬಾರದು, ಜನಾ ಬರ್ತಾರೆ, ಜನಾ ಹೋಗ್ತಾರೆ, ಈ ಎತ್ತಿನಾಗೆ ಏನೋ ಸುಳಿ ಐತೆ, ಗುಂಡಣ್ಣನ ಮನೆ ಎತ್ತಿನಾಗೆ ಅಂದು ಬಿಡ್ತಾರೆ. ಅದೂ ತಪ್ಪು. ಗುಂಡಣ್ಣನ ಮನೆಯಾಗೆ ಒಂದು ಹೆಣ್ಣೈತೆ ಅಂದ್ರೆ ನೂರಾರು ಸಾವಿರಾರು ಜನಾ ಗುಂಡಣ್ಣೋರ ಮನೆಗೆ ಬರ್ತಾರೆ. ಹೆಣ್ಣಾಗೇನೋ ಒಂದು ಮಿಸ್ಟೇಕ್ ಐತೆ ಕಾಣಯ್ಯ. ಬಂದೋರು ನೋಡಿ ನೋಡಿ ಹಾಗೆ ಹೋಗಾರೆ, ಒಬ್ರೂ ಮದುವೆ ಮಾಡ್ಕೊಳ್ಳಿಲ್ಲ, ಅನ್ನೋದೊಂದು ಮಾತು

ಉಳೀತದೆ. ಹೆಣ್ಣುಮಕ್ಕಳಿಗೆ ನಾನು ಹೆಸರು ಇಡೋದು ಬ್ಯಾಡಾ. ಒಟ್ಟಿನಾಗೆ ಏಳುಜನದಾಗೆ 'ಚಿನ್ನಮ್ಮಾ, ಕೊಡಲಿ ಬಿಡಲಿ ಕಂಬೇರಗೊಲ್ಲರು, ನೀನೇ ಹೆಂಡತಿ ಆಗಬೇಕು ನಾನೇ ನಿನಗೆ ಗಂಡನಾಗ್ಬೇಕು. ಈವತ್ತಿನ ದಿನದಾಗೆ ನಮಗೆ ಪಂಚಾಂಗಾನೂ ಬೇಡ. ಪೂಜಾರೀನೂ ಬೇಡ. ಇವತ್ತಿಗೆ ಎಂಟುದಿನ ಕಳೆದು ಒಂಬತ್ತನೇ ದಿನದಾಗೆ ಸಂಬಂಧದಾಗೆ ಧಾರೆ ಮುಹೂರ್ತದಾಗೆ ನೀನೇ ನನಗೆ ಹೆಂಡತಿ ಆಗ್ಬೇಕು, ನಾನೇ ನಿನಗೆ ಗಂಡನಾಗಬೇಕು. ಶಿವಚಿತ್ರಲಿಂಗ, ಕಾಟಮಲಿಂಗ ನನಗೆ ಹೇಳಿಕಳಿಸವ್ರೆ".

"ಇಲ್ಲಾ ಇವ್ರು ಆರು ಜನದಾಗೆ ಒಬ್ರನ್ನ ಕೊಡ್ತೀವಿ. ಚಿನ್ನಮ್ಮನ್ನ ಕೊಡಲ್ಲ" ಅಂದ್ರು.

"ಕೆಂಗುರಿ ಕಣ್ಣು ಉಕ್ಕಿನ ಬಾಣ ಬಿಟ್ಟು ಹೋಗ್ತೀನಿ" ಅಂದ.

"ಸ್ವಾಮಿ, ನೀನು ಒಪ್ಪಿದ ಹೆಣ್ಣಿನೊಂದಿಗೆ ನಾವು ಒಪ್ಪಿ ವಿವಾಹ ಮಾಡ್ತೀವಿ" ಅಂದರು.

ಶನಿವಾರ ದಿನ ಶಾಸ್ತ್ರ ಮಾಡ್ಕೊಂಡು ಆದಿತ್ಯವಾರದ ದಿನ ಹೆಣ್ಣು ಹೋಗಬೇಕು. ಸೋಮವಾರದ ದಿನ ಧಾರೆಮುಹೂರ್ತ ಮಾಡಬೇಕು. ಮಂಗಳ ವಾರದ ದಿನ ನಾಗೋಲೆ ಓದಿಸಬೇಕು. ಬುಧವಾರದ ದಿನ ಹೆಣ್ಣುಗಂಡು ಹಿಂತಿರುಗಿ ಬರಬೇಕು. ಹಿಂದಿನ ಕಾಲದಾಗೆ ಒಂಬತ್ತು ದಿನ ಮದುವೆ ಮಾಡೋರಂತೆ ಸ್ವಾಮಿ. ಈಗ ಬೆಳಕು ಹರಿಯೋ ಹೊತ್ತಿಗೆ ಆಗೋಗ್ತೈತಿ. ಒಂದು ಘಂಟೆ ಹೊತ್ತಿಗಾರೂ ಆಗೋಗ್ತೈತೆ. ಶನಿವಾರದ ದಿವಸ ಶಾಸ್ತ್ರ ಮಾಡ್ಕೊಂಡೇ ಭಾನುವಾರದ ದಿನ ಹೆಣ್ಣು ಕರಕೊಂಡು ಬಂದವ್ರೆ. ಸೋಮವಾರದ ದಿನ ಧಾರೆ ಮಾಡ್ಕೊಂಡು ಎಲ್ಲಾ ವಜ್ರ ವೈಢೂರ್ಯ ಐಶ್ವರ್ಯ ಆನಂದ ಮಾಡಿಕೊಂಡು ಮಂಗಳವಾರ ನಾಗೋಲಿ ಕಳೆದು ಬುಧವಾರದ ದಿನ ಹೆಣ್ಣು ಗಂಡು ಹಿಂದಕ್ಕೆ ತಿರುಗಿ ಹೋಗಬೇಕು.

ಸೋಮವಾರ ಒಂಬತ್ತು ಘಂಟೆಗೆ ಧಾರೆ ಮುಹೂರ್ತ. ಧಾರೆ ಹೊತ್ತಿಗೆ ಸೋಬಾನದ ಪದ ಹಾಡ್ತಾರೆ

ಹಸ್ತ, ಚಿತ್ತ, ರೋಹಿಣಿ, ಆರಿದ್ರೆ ಮಳೆಗೆ ಕೆರೆ ತುಂಬಿತ್ತು.
ಕೆರೆ ಏನೇನು ಬೆಳಿಸ್ತೀಯ ಅಂದ್ರೆ
ಸಣ್ಣಕ್ಕಿ ನೆಲ್ಲು ಸಣ್ಣದಾಗಿ ಬೆಳೆದು
ದೊಡ್ಡಕ್ಕಿ ನೆಲ್ಲು ದೊಡ್ಡವಾಗಿ ಬೆಳೆದು
ತುಂಬೆ ತೂಗಿ ಬೆಳೆದು, ನಿಂಬೆ ನೀಡಿ ಬೆಳೆದು
ಬಾಳೆ ಬಾಗಿ ಬೆಳೆದು, ಉದ್ದಕ್ಕೆ ಕಿರುನೆಲ್ಲಿ ಅಡ್ಡಕೂ ಬೆಳೆದು
ಆಕಾಶದ ಅಗಲ ಹೋಯಿತು ಭೂಮಿತಾಯಿಗೆ ಚಪ್ಪರ ನೆಟ್ಟು
ಕುಂಬಾರ ಗುಂಡ ಎಳಬತ್ತಿ ಬಳಿದು

ಮಾದರ ಹಟ್ಟಿ ಈರಣ್ಣನ ಪಾದಕ್ಕೆ ಶರಣ ಮಾಡಿ,
ಸೋಬಾನಕ್ಕೆ ಸೋಬಾನ ಸೋಬಾನಕ್ಕೆ ಸೋಬಾನ
ಬಲಕೇನ ಕಂಡೆ ಬ್ರಹ್ಮ ದೇವರ ಕಂಡೆ
ಎಡಕ್ಕೇನ ಕಂಡೆ ಎಳೆಯನಾಗರ ಕಂಡೆ
ಮುಂದಕ್ಕೇನ ಕಂಡೆ ಮುಕ್ಕಣ್ಣೇಶ್ವರನ ಕಂಡೆ
ನಡುಹಟ್ಟಿಯಾಗೆ ಬಸವಣ್ಣ ನಾಟ್ಯವನಾಡೋದು ಕಂಡೆ
ಸೋಬಾನಕ್ಕೆ ಸೋಬಾನ ಸೋಬಾನಕ್ಕೆ ಸೋಬಾನ
ಆ ಕೈಲೂ ಗಂಟು ರನ್ನ ಮುತ್ತಿನ ಗಂಟು
ಅಂಗೈ ಹತ್ರ ಮೂರು ಮುತ್ತು ಹಾಕಿದ ಗಂಟು
ಋಣಾನು ಬಂಧ ಇದು
ಹಿಡಿ ಕೈಯ ನಡಿಧಾರೆಗೆ ಕೆಂಗುರಿ ಮಲ್ಲೇಗೌಡ
ಸೋಬಾನಕ್ಕೆ ಸೋಬಾನ, ಸೋಬಕ್ಕೆ ಸೋಬಾನ

ಐದು ದಿನ ಅವರ ಮದುವೆ ಮಾಡಿಬಿಟ್ಟರು. ಐದು ದಿನದವರೆಗೂ ಹನ್ನೆರಡೆತ್ತಿನ ದುಡ್ಡು ಕಣದಾಗಿದ್ದವು. ಚಿಕ್ಕಾಲಪ್ಪ, ದೊಡ್ಡಾಲಪ್ಪ ಎಳೆದೆಲೆ ಸೋರೋಕೆ ಬಿಟ್ಟಂಗೆ ಸೂರೆಬುಟ್ಟವ್ರೆ. ನಮ್ಮಣ್ಣ ಸಂಪಾದಿಸಿದ ದುಡ್ಡು ನಮ್ಮ ಅಣ್ಣನ ಮದುವೆಗೆ ಹೋಗಿ ಬಿಡಲಿ ಅಂತ. ಆದರೂ ಆರೆತ್ತಿಂದು ಮುಗೀತಂತೆ, ಇನ್ನೂ ಆರು ಎತ್ತಿಂದು ಉಳೀತಂತೆ.

'ಅಣ್ಣಾ' ಅಂದರು.
'ಏನಪ್ಪ ನಿನ್ನ ಮದುವೆಗೂ ಇದು ಮುಗೀಲಿಲ್ಲ. ಅಣ್ಣ ಇನ್ನೂ ಆರು ಎತ್ತಿಂದು ಐತಲ್ಲಾ'
'ತಮ್ಮದೀರಾ, ಸ್ವಯಾರ್ಜಿತವಾಗಿರೋ ಈ ಹದಿನಾರು ವರ್ಷ ನನ್ನ ಜನ್ಮದಲ್ಲಿ ಸಂತೋಷದಿಂದ ನಾನು ನನ್ನ ಆವಿನ ರೊಪ್ಪದಲ್ಲಿ ಹುಟ್ಟಿದ ಹೋರಿಗಳನ್ನೆಲ್ಲ ಮಾರಿ ತುಂಬಿಕೊಂಡು ಬಂದ ಹಣ ಮುಗೀಲಿಲ್ಲ ನನ್ನ ಮದುವೆಯಲ್ಲಿ. ಚಿಂತಿಸಬೇಡಿ ಮುಗಿಸ್ತೀನಿ ನಿಮ್ಮ ಮದುವೆಯಾಗಾದ್ರೂನು ತಮ್ಮದೀರ'.

ಇವನ ಮದುವೆಯಾಗಿ ಹತ್ತು ಹನ್ನರೆಡು ದಿನದಾಗೆ ಹೋಗಿ ಅದೇ ಕಳುವಾರಹಳ್ಳಿಯಾಗೆ ಎಮ್ಮೆನೋರ ಮನೆಯಾಗೆ ಎಮ್ಮೆನೋರ ಹೆಣ್ಣುಮಗಳು ಎರಡು ಹೆಣ್ಣು ಮಾಡಿ ಚಿಕ್ಕಾಲಪ್ಪಗೂ, ದೊಡ್ಡಾಲಪ್ಪಾಗೂ ಮದುವೇನೂ ಹದಿನೈದು ದಿನದೊಳಗೆ ತಮ್ಮದೀರ ಮದುವೆ ಮಾಡಿದ. ಐದು ದಿನಗಳ ವರೆಗೆ ನಡೆಸವ್ನೆ ಮದುವೇಯಾ.

"ಮೂವರ ಮದುವೇನೂ ಆಗಿ ಇನ್ನೊಂದು ವರಹದ ರಾಶಿ ಉಳೀತಲ್ಲಾ. ನೀವು ಚಿಕ್ಕಾಲಪ್ಪ, ದೊಡ್ಡಾಲಪ್ಪ, ಸೇರಿ ಮೂವರು ಮದಲಿಂಗರು ಧಾರೆ ಮುಹೂರ್ತ ಆಗುವಾಗ್ಗೆ ಅವರಿಗೇಂತ ಮಾದಿಗರ ಹರಳಯ್ಯ ಆರು

ಜತೆ ಮೆಟ್ಟು ಹೊಲಿಕೊಂಬಂದಿದ್ದ. ಪಾದರಕ್ಷೆಗೆ ಅವನಿಗೆ ಒಂದು ವರಹಾ ಕೊಟ್ಟಿಲ್ಲ. ಒಂದು ಮೊರ ಹೊನ್ನು ಕೊಟ್ಟಿಲ್ಲ. ಕಾಳು ಕೊಟ್ಟಿಲ್ಲ. ಆ ಮೆಟ್ಟು ಹೊಲಿದ ಋಣದಾಗೆ ನಾವು ಯಾಕೆ ಹೋಗಾನ. ನಾವು ಮಾದಿಗರ ಹರಳಯ್ಯನ್ನ ಕರೆಸಿ, ಮೂಡಲು ಉದಿಯಾಗೆ ಕೂಡಿಸಿ, ಒಂದು ತೆಂಗಿನ ಕಾಯಿ, ಒಂದು ಹಣ, ಒಂದೊಂದು ಮೊರ ಬೆಳ್ಳಿ ರೂಪಾಯಿನೂ ತಗೊಂಡು ಹೋಗಿ ಅವನ ಕರೆ ಕಂಬಳಿ ಕೊಟ್ಟೆಗೆ ಹೊಯ್ದು ಬಿಡ್ರಿ, ಅವನ ಚಪ್ಪಲಿ ಹೊಲಿದ ಋಣ ಇದರಾಗೆ ತೀರಿ ಹೋಗಲಿ ತಮ್ಮದೀರಾ' ಅಂದ.

ಧಣಿರಾಯಾ ಹರಳಯ್ಯನ ಕರೆಸಿನ್ನು. ಹರಳಯ್ಯನ ಕರೆಸವ್ರೆ ಅಣ್ಣಗಳು.

ಹರಳಯ್ಯ ಅಂದ್ರು 'ಸ್ವಾಮೀ ನೀವು ಒಂದು ಮೊರ ವರಹಾ ಕೊಟ್ಟಿದೀರಿ. ನೀವು, ನಿಮ್ಮ ಮಕ್ಕಳು, ನಿಮ್ಮ ಮೊಮ್ಮಕ್ಕಳು ಕಾಲದಾಗೆ ಒಂದು ಮೊರ ವರಹಾ ಕೊಡಲಿಕ್ಕೆ ಸಾಧ್ಯ ಇಲ್ಲದಿದ್ದರೂನೂ, ರಾಗಿ ರಾಶಿ ಮಾಡಿ ರಾಶಿ ಕೂಳಕ್ಕಿ ಹಾಕೋ ದಿನ ಮಾದಿಗರು ಕಣದ ದಂಡೆಗೆ ಬಂದರೆ ದೊಡ್ಡ ರಾಶಿ ಕಾಳಿನಾಗೆ ಒಂದು ಭಾಗ ಜಾಸ್ತಿ ಕೊಡಬೇಕ್ರಪ್ಪಾ, ಗುಡ್ಡದ ರಾಶಿಯಾಗಿ ಕೊಡಬೇಕು."

"ಹರಳಯ್ಯಾ, ವರುಷದಾಗೆ ಒಂದು ದಿನ ಕಾಣದಾಗೆ ಒಂದು ಭಾಗದ ಕಾಳು ಹೆಚ್ಚಾಗಿ ಬಿಡಲಿ. ಅದನ್ನು ಶಿವಾ ಕೊಟ್ಟಂತ ಕಾಲದಾಗೆ ರಾಶಿಯಾಗೆ ಕಾಳು ಹೆಚ್ಚಾಗ್ತೈತೆ. ಉದಾರಿಯಾಗಿ ಅಳೆಯೋ ತಮ್ಮಾ. ಹರಳಯ್ಯಾ, ಒಂದು ಮಾತು ಹೇಳುತೀನಿ ದಾನ ಧರ್ಮದ ಕೈಯ ಮರೆಯಬಾರದು. ನರಕಕ್ಕೆ ಹೋಗಬಾರದು. ಚಿಕ್ಕಾಲಪ್ಪ ಮೂರು ಹಿಡಿಕಾಳನ್ನು ಆಚೆಗೆ ಇಕ್ಕಿ ಅಳೆಯಪ್ಪ, ಅಳೆಯೋದಾದ್ರೆ ಅಂದ."

"ಅಣ್ಣ, ಮಾಡಿದರೇ ಮಾಡಲಿ, ಮಾಡದೇ ಇದ್ರೆ ಹೋಗಲಿ, ಒಂದು ಮೊರ ಭತ್ತನಾರೂ ಕೊಡಲೇ ಅಣ್ಣಯ್ಯ ನೀನು ಹರಳಯ್ಯನಿಗೆ" ಅಂದ ಚಿಕ್ಕಾಲಪ್ಪ.

ಅಷ್ಟು ಹೇಳಿಬಿಟ್ಟು ಹರಳಯ್ಯನ ಸಾಗಹಾಕಿಬಿಟ್ಟರು. ಅಷ್ಟು ಹೇಳಿದ್ದೇ ತಮ್ಮದೀರನ್ನ ಕರೆದ.

"ತಮ್ಮದೀರಾ, ಇಷ್ಟು ದಿನ ಮೂರೂ ಜನ ಒಂದಾಗಿದ್ದು ಇವತ್ತು ಮೂರು ಜನ ಮೂರು ಕರೆ ತಲೆವ್ರುನ್ನ ಕರಕೊಂಡು ಬಂದು ಕಟ್ಟಿಕೊಂಡು ಬಿಟ್ಟೆವು. ಯಾರ್‍ಯಾರಿಂದ ಮನೆತನ ಒಡೀತೈತೋ?, ಯಾರ್‍ಯಾರಿಂದ ಇವತ್ತು ಅಗಲಿ ಹೋಗಬೇಕೋ? ಹೊಡ್ದಾಡಬೇಕೋ? ಈ ಒಂದೂ ಬ್ಯಾಡಾ. ಇವತ್ತು ಚೆಂದಾಕಿದ್ದಂಗೆ ಮೂರೂ ಮೂರು ಭಾಗ ಮಾಡಿಬಿಡಾನ. ಅವನ

ಮನೆಯಾಗೆ ಇದ್ರೆ ನಾನೂ ನೀನೂ ಹೋಗಿ ಉಣ್ಣಾನ. ನನ್ನ ಮನೆಯಾಗಿದ್ರೆ ನೀನು ಉಣ್ಣು. ನಿನ್ನ ಮನೆಯಾಗಿದ್ರೆ ಎಲ್ಲಾರೂ ಉಂಡು ಬಿಡಾನ. ಚೆಂದಾಕಿದ್ದಂಗೆ ಮೂರು ಮೂರು ಭಾಗ ಮಾಡಿ ಬಿಡಬೇಕು. ಮೂವರೂ ಮೂರು ಒಲೆ ಹೂಡಿ ಬಿಡಬೇಕು."

"ಅಣ್ಣಾ, ಈ ಮನೆತನ ತುಂಬಿ ಬಂದ್ಯೆತೆ. ತುಂಬಿದ ಮನೆ ಒಡೆಯೋದು ಬ್ಯಾಡಾ. ಇನ್ನು ಹನ್ನೆರಡು ಹದಿನಾರು ದಿನ ಜೊತ್ಯಾಗೆ ಬಾಳಿಕೊಂಡು ಹೋಗೋಣ ಕೆಂಗುರಿ ಮಲ್ಲೇಗೌಡ."

"ತಮ್ಮದೀರಾ, ಚೆಂದಾಕಿದ್ದಂಗೆ ಮುರಿದು ಮೂರುಭಾಗ ಆಗ್ಬೇಕು. ಹೊನ್ನಟ್ಟಿ ಆಲೆಗೌಡಗೆ ಜೀವನಕ್ಕೆ ಜೀವನಾಂಶ ತೆಗೀರಲೇ. ಚಿಕ್ಕಾಲಪ್ಪಗೆ ಒಂದು ಭಾಗ, ದೊಡ್ಡಾಲಪ್ಪಗೆ ಒಂದು ಭಾಗ, ನಿಮ್ಮಪ್ಪಗೆ ನಾನು ಹುಟ್ಟಿರಲಿಲ್ಲ. ನಿಮ್ಮಮ್ಮನ ತಾವ ಹಾಲು ಕುಡಿದಿರಲಿಲ್ಲ. ದೇವರ ದಯಮಾರ ನನಿಗೆ ಹುಟ್ಟಿಸಿದ್ದೋನು. ಸಣ್ಣೋಳು ಕಂಬಕ್ಕನ ಹೊಟ್ಟೆಯಾಗೆ ಹುಟ್ಟಿದೋನು ನಾನು. ಅವತ್ತಿಗೆ ನನ್ನ ಪ್ರಾಣ ಹೋಗೋ ಹೊತ್ತಿಗೆ ನಿಮ್ಮ ಅಪ್ಪ ಹೊನ್ನಟ್ಟಿ ಆಲೆಗೌಡ ಒಂದು ತೊಟ್ಟು ನೀರು ಬಿಟ್ಟು, ಅಂಬಲಿ ಕೊಟ್ಟು ಪ್ರಾಣ ಉಳಿಸಿದ ದೆಸೆಯಿಂದ ತುತ್ತು ಕೊಟ್ಟೋವ್ನ ಮುಪ್ಪಿನ ತನಕ ನೆನೀಬೇಕು. ನಿಮ್ಮಪ್ಪನ್ನ ಕೋಟ್ಯಾಧೀಶ್ವರನ್ನ ಮಾಡಿದ್ದೇನೆ ತಮ್ಮದೀರಾ. ಕುಲದಾಗೆ ನಾನು ಗೊಲ್ಲರವನು. ನಿಮ್ಮಪ್ಪ ಒಕ್ಕಲಿಗರವನು ಆಗಿರಬಹುದು. ಕುಲ ಬ್ಯಾರೆ ಆಗಿರಬಹುದು. ರಕುತ ಬ್ಯಾರೆ ಆಗಿಲ್ಲ. ಇವತ್ತಿನ ದಿನದಾಗೆ ನಿಮ್ಮ ಅಪ್ಪನ್ನ ಬದುಕಿಸಿರೋನು ನಾನು. ನಿಮ್ಮಪ್ಪಗೆ ನಾನು ಹುಟ್ಟಿರಲಿಲ್ಲ. ನಮ್ಮಪ್ಪನ ತಕ ನಾನು ಭಾಗ ತೊಗೊಂಡಿರಲಿಲ್ಲ. ನಿಮ್ಮಪ್ಪನ ತಾವೂ ನಾನು ಭಾಗ ತೊಗೊಳ್ಳೋದಿಲ್ಲ. ಮೂರೂ ಮೂರು ಭಾಗ ನಿಮ್ಮದೇಯಾ. ಹದಿನಾಲ್ಕು ಗೂಡಿನ ದನದಾಗೆ ಒಂದು ಬೇವಿನ ಗೂಡಿನ ಮೇಲೆ ನಿಂತುಕೊಂಡು ಏಳು ಹಸುವಿನ ಮಣಕಗಳನ್ನು ಹೆಸರಿಡಿದು ಕರೀತೀನಿ. ಬಂದರೆ ನನ್ನೋವು, ಬರದಿದ್ರೆ ನಿಮ್ಮೋವು. ಹದಿನಾಲ್ಕು ಗೂಡಿನ ದನಾನು ನಿಮ್ಮದೇಯ. ವಜ್ರ ವೈಢೂರ್ಯ, ಇಕ್ಕೇರಿ ವರಹ, ಬೆಳ್ಳಿನಾಣ್ಯ, ನಿಮ್ಮ ಮನೆತುಂಬ ತುಂಬಿರೋದೆಲ್ಲ ನಿಮ್ಮದೇಯಾ. ಇದೇ ಬೇವಿನ ಮರದಡಿ ನಿಂತು ಕರೀತೀನಿ. ಬಂದರೆ ನಮ್ಮದು, ಬರದೇ ಇದ್ರೆ ನಿಮ್ಮದು" ಅಂದ ಕೆಂಗುರಿ ಮಲ್ಲೇಗೌಡ. ಸೋಮವಾರ ಒಂಬತ್ತು ಘಂಟೆಗೆಲ್ಲಾ ಜಾವ ಪೂಜೆ ಎಲ್ಲಾ ಪೂರೈಸಿಕೊಂಡು ಅವನು ಏಳು ಹಸುವಿನ ಮಣಕಗಳನ್ನು ಕರೀತಾನೆ:

ಅಕ್ಕೋಳು ಅಕ್ಕಮಾರಿ, ಚಿಕ್ಕೋಳು ಚಿಕ್ಕಮಾರಿ,
ದ್ಯಾವಕ್ಕ ದಯಮಾರಿ, ಕಡೆ ಹುಟ್ಟಿನ ಕಲ್ಯಾಣಿ,
ಬುದ್ಧಿಯಲ್ಲಿ ಬುದ್ಧಿವಂತ, ಕೊಂಬಿನಲ್ಲಿ ಗಂಭೀರವಂತೆ

ಬಾಲದಲ್ಲಿ ಬಲವಂತೆ, ಮುಖದಲ್ಲಿ ಸುಕ್ಕೆ ಬೊಟ್ಟಿನ ಚೆಲುವೆ
ದೊಡ್ಡಳ್ಳಿಯಾಗೆ ಗೊಡ್ಡು ಗಾಳಿಯೋರ ಬರ್‍ರಮ್ಮಾ

ಏಳು ಹಸುವಿನ ಮಣಕಗಳು ಯಾವ್ಯಾವವು ಅಂದ್ರೆ ಗೊಡ್ಡು ಗಾಳಿ ಅನ್ನೋ ಹಸು ಪಾಳೇಗಾರರ ದನ ಸೇರಿತ್ತಲ್ಲಾ ಹಿಂದೆ, ಅವು ಆ ಗೊಡ್ಡು ಗಾಳಿ ಹಸುವಿಗೆ ಹೊಟ್ಯಾಗೆ ಹುಟ್ಟಿರೋ ಹಸುವಿನ ಮಣಕಗಳು. ಅವನ್ನು ಮಾತ್ರ ಕರಕೊಂಡ. ಏಳು ಕರಗ ಹೊನ್ನ ತೊಗೊಂಡು ಹೋಗಿ ಕಂಬೇರುಗೊಲ್ಲರಿಗೆ ಕೊಟ್ಟು ತಂದೋವು ಹೋರಿ ಇವರ ಸುಪರ್ದಿಗೆ ಬಂದಿದೆ ಕೆಂಗುರಿಮಲ್ಲೇಗೌಡನ ತಾವ. ಅಲ್ಲೀಗೆ ಎಂಟು ರಾಸು ಆದವು.

"ತಮ್ಮದೀರಾ" ಅಂದ

"ಏನಣ್ಣಾ,"

"ಈ ಏಳು ಹಸುವಿನ ಮಣಕ, ಈ ಒಂದು ಹೊಟ್ಟೆ ಕರ ನನ್ನದು ಅಂದ. ನಮ್ಮಪ್ಪನ ಪಿತ್ರಾರ್ಜಿತ. ಇದು ಗೊಡ್ಡುಗಾಳಿ ಅನ್ನೋ ಹಸುವಿಗೆ ಹುಟ್ಟಿದ್ದು. ನಾನು ಹೊರಟೋಗಿ ಬಿಡ್ತೀನಿ. ಇನ್ನು ನೇರವಾಗಿ ಬಾಳಿಕೊಂಡು, ಬದುಕಿಕೊಂಡು ಹೋಗಿಬಿಡಿ ನೀವು. ನಿಮ್ಮ ಹೆಂಡ್ರು ಮಕ್ಕಳು ಎಲ್ಲಾ ಅಕ್ಷಯವಾಗಲಿ" ಅಂತ ತಮ್ಮದೀರಿಗೆ ಆಶೀರ್ವಾದ ಮಾಡಿದ.

"ಬಡಚಿತ್ತಮ್ಮ, ಜಾನಕಲ್ಲ ದೊಡ್ಡಕ್ಕ, ಹೊನ್ನಟ್ಟಿ ಆಲೆಗೌಡ, ತಂದೆ ತಾಯಿಗಳ ಪೂಜೆ ನಾನು ಮಾಡಿದೀನಿ. ನಾನು ಹೊರಟೋಗ್ತೀನಿ. ಹಿಂದೆ ನಮ್ಮ ಅಪ್ಪದೀರು ತಾತಂದಿರು ಹುಲ್ಲು ಆಸರೆ ಮಾಡಿದ್ದರು. ನಾನು ಅವರಂತೆ ಹೊರಟು ಹೋಗಿ ಬಿಡಬೇಕು ಇವಾಗ" ಅಂತ ಹೇಳಿದ.

ಮದುವೆಯಾಗಿ ಹದಿನೈದು ದಿನದಾಗೆ ಕೆಂಗುರಿಮಲ್ಲೇಗೌಡ ಅರಿಸಿನದ ಮೈನ ತೊಳೀಲಿಲ್ಲ. ಕಾಲಿನಾಗಿನ ಕುರಿದಾರ ತೊರೀಲಿಲ್ಲ. ತಿಂಗಳ ಸಂಚಿ ತುಂಬಲಿಲ್ಲ. ತಿರುಗಂಚಿ ಬರಿಗಂಚಿ ಬರಲಿಲ್ಲ. ಮದುವೆಯಾಗಿ ಹದಿನೈದು ದಿನದಾಗೆ ಹೋಗಿ ಹಿಂದೆ ದೇವರ ದಯಮಾರ ಆವಿನಗೂಡು ಹಾಕ್ಕೊಂಡು ಇದ್ನಲ್ಲಾ ಕೆಂಗುರಿಮಲ್ಲೇಗೌಡ ಅಲ್ಲೇ ನಿಂತು ಬಿಟ್ಟ. ಆಲೆಗೌಡನ ಮಕ್ಕಳು ಐಶ್ವರ್ಯದಿಂದ ಇಲ್ಲಿ ಇವರು ಬಾಳ್ತಾ ಇದಾರೆ. ಮದುವೆಯಾಗಿ ಹನ್ನೆರಡು ವರುಷ, ಮೈನೆರೆದು ಹನ್ನೆರಡು ವರುಷ ಹೀಗೆ ಇಪ್ಪತ್ತನಾಲ್ಕು ವರುಷ ಹುಟ್ಟಿದ ಮನೆಯಾಗೆ ನಿಂತುಬಿಟ್ಟಳು ಚೆನ್ನಮ್ಮ.

೨.೨.೪ ಚಿನ್ನಮ್ಮನ ಸಂಕಟ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ‍್ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

ತವರು ಮನೆಯಾಗೆ, ಹುಟ್ಟಿದ ಮನೆಯಾಗೆ ಇಪ್ಪತ್ತನಾಲ್ಕು ವರುಷ ನಿಂತವ್ಳೆ ಚಿನ್ನಮ್ಮ. ಬೆಳಗಾಗ ಎದ್ದು ಕೈಕಾಲು ಮುಖ ತೊಳಕೊಂಡು ಚಂದ್ರ ಸೂರ್ಯರ ಪೂಜೆ ಮಾಡಿ, ಅಕ್ಕ ಪಕ್ಕದ ಮನೆಗೆ ಬೆಂಕಿ ಬಿಸಿನೀರಿಗೆ ಚಿನ್ನಮ್ಮ ಹೋದರೆ ಅತ್ತಿಗೆ ನಾದಿನಿಯರು, ವಾರಗಿತ್ತಿಯರು, 'ಗೊಡ್ಡು ಮುಂಡೇದೆ, ಬಂಜೆ ಮುಂಡೆ ಬರ‍್ತಾ ಅವಳೆ. ಕೆಂಗುರಿ ಮಲ್ಲೇಗೌಡನ ಹೆಂಡತಿ, ಮಗೀಗೆ ನೆರಳು ಹಾಯಿಸಬೇಡ' ಅಂತ ಮೂದಲಿಸಿ ಮಾತಾಡೋರಂತೆ ಚಿನ್ನಮ್ಮನ್ನ. 'ಅರವತ್ತನಾಲ್ಕು ದೇವತೆಗಳು, ಈಶ್ವರ, ಪಾರ್ವತಿ, ಬಸವೇಸ್ವರ, ಇವತ್ತಿನ ದಿವಸದಾಗೆ ನಾಲ್ವರಂತೆ ನನ್ನ ಗಂಡ ಮದುವೆಯಾಗಿ ಇಲ್ಲಿ ಇದ್ದಿದ್ರೆ, ನನಗೂ ಮಕ್ಕಳಾಗೋವು, ಮನೆ ಬೆಳಗೋವು. ಗೊಡ್ಡು ಮುಂಡೆ, ಬಂಜೆ ಮುಂಡೆ ಅನ್ನೋ ವಾಕ್ಯವು ಹೋಗೋದು. ನಾನು ಇಪ್ಪತ್ತನಾಲ್ಕು ವರುಷ ಹುಟ್ಟಿದ ಮನ್ಯಾಗೆ ಇದ್ದು ಮತ್ತೊಬ್ಬರ ಮುಖನೋಡ್ಲಿಲ್ಲ. ಮತ್ತೊಬ್ಬರಿಗೆ ಸೆರಗು ಹಾಸ್ಲಿಲ್ಲ. ಹಾದರತನ ಮಾಡ್ಲಿಲ್ಲ. ಇಪ್ಪತ್ತಾಲ್ಕು ವರುಷ ನೀತಿಯಾಗಿ ಬಾಳಿದ್ರೂ ನನಗೆ ಗೊಡ್ಡು ಮುಂಡೆ ಅಂದ್ರಲ್ಲಾ, ಪರಮಾತ್ಮ ಈಶ್ವರ, ನಾನಿನ್ನು ನರಲೋಕದಾಗೆ ಈ ಭೂಮಿ ಮ್ಯಾಗೆ ಇರಬಾರದು. ಮಂಗಳ ವಾರದ ದಿನ ಕಳುವೇರಹಳ್ಳಿ ದಿಣ್ಣೆಯಾಗೆ ಇರೋ ಬಾವಿಗೆ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳೋವಾ. ಮೀನು ಮತ್ಸ್ಯ ತಿಂದು ಪ್ರಾಣ ಉಳಿಸ್ಕಳ್ಲಿ, ಬದಿಕ್ಕಳ್ಳಿ, ಇನ್ನು ಮುಂದೆ ಗೊಡ್ಡು ಮುಂಡೆ ಅನ್ನಿಸ್ಕಂಡು ಬಾಳೋದು ಬ್ಯಾಡ. ಇನ್ನು ನಾನೇ ಹೊರಟೋಗಿ ಬಿಡಬೇಕು. ಈ ನರಕದಾಗೆ ನರಲೋಕದಾಗೆ ಇರೋದು ಬ್ಯಾಡ" ಅಂತ ಒಂದು ಮಾರಗಲ ಹರಕು ಸೀರೆ ಉಟ್ಕೊಂಡು, ಊರಗಲ ತಲೆ ಕೆದರಿಕೊಂಡು ಮಧ್ಯಾಹ್ನ ಹನ್ನೆರಡು ಘಂಟೆ ಹೊತ್ತಿಗೆ ಕಳುವಾರಳ್ಳಿ ಬಾವಿಗೆ ಬಿದ್ದು ಆತ್ಮ ಹತ್ಯೆ ಮಾಡಕೋಬೇಕು. ಮೀನು ಮೊಸಳೆ ತಿಂದು ದಾನ ಧರ್ಮ ಮಾಡಿದ ಪುಣ್ಯ ಬರಲಿ ಅಂತ ಹೊರಟು ಹೋಗಿಬಿಟ್ಟಳು.

ಚಿನ್ನಮ್ಮ ಬಾವಿಗೆ ಬೀಳೋಕೆ ಹೋಗಿದಾಳೆ ಅನ್ನೋದು ಅಲ್ಲಿ ಯಾರಿಗೂ ಗೊತ್ತಿಲ್ಲ. ಇವಳಾಗಿ ಹೋಗಿ ಬಾವಿಗೆ ಬೀಳಬೇಕು ಅನ್ನೋವಾಗ ಮನೆದೇವತೆ ಗೌರಸಂದ್ರದ ಮಾರಕ್ಕ ಚೆಂದಕ್ಕಿಲ್ಲದ ಒಂದು ಹುಡುಗನ್ನ ಕರಕೊಂಡು ಹೋಗಿ ಅದೇ ಬಾವಿ ಮುಂದೆ ಮೂರಾಳುದ್ದ ಮೂಗುತ್ತದ ಹಿಂದೆ ಒಂದು ವಡೇದ ಗಿಡ, ಆ ವಡೇದ ಗಿಡದ ಮುಂದೆ ಈ ಹುಡುಗನ್ನ ಪೂಜೆಗೆ ಹಾಕ್ಕೊಂಡು ಈ ಯಮ್ಮ ಅಲ್ಲಿ ಕುಂತಿದ್ಲಂತೆ. ಚಿನ್ನಮ್ಮ ಆ ಬಾವಿ ಹತ್ರ ಬೀಳಕ್ಕೆ ಹೋದಾಗ ಗಂಗಮ್ಮ ಏನಂದ್ಲೂ 'ಜಲ್ದಿ ಜಲ್ದೀ ಬಾರಮ್ಮ. 'ಈ ಚಿನ್ನಮ್ಮನ್ನ ಆಹುತಿ ತೊಗೊಳ್ಳೋಕೆ ಇವತ್ತು ಒಬ್ಬರು ಹೆಣ್ಣು ಮಕ್ಕಳು ಗಂಡು ಮಕ್ಕಳು, ಬಾವಿ ಬೀಳಕ್ಕೆ ಹೋದರೆ ಗಂಗಮ್ಮ ಮೂರು ಮಾತು ಆಲಿಸ್ತಾಳಂತೆ. ಪ್ರತಿಯೊಬ್ಬರನ್ನು ಗಂಗೆಯಂಥೋಳು ಮೂರು ಸಾರಿ ಮುಳುಗಿಸಿದಳು ಮೂರು ಸಾರಿ ತೇಲಿಸಿದಳು ಅಂತ. ಆಗ ಈ ಯಮ್ಮ ಮಾರಕ್ಕ 'ಯಾರು ಈ ಗಂಗಮ್ಮ ಹಿಂಗ ಕರೀತಾಳಲ್ಲ' ಅಂತ 'ಯಾರೋ ಬಾವಿ ಬೀಳಕ್ಕೆ ಬರಬೋದು ಗಂಡಸ್ರೋ ಹೆಂಗುಸ್ರೋ' ಅಂತ ಯೋಚನೆ ಮಾಡಿ, ಹುಡುಗನ್ನ ಅಲ್ಲೇ ಬಿಟ್ಟು ಬಿಟ್ಟು ಬಡ ಬಡ ಅಂತ ಬಾವಿ ಹತ್ರ ಬಂದ್ಬಿಟ್ಲು. ಬರೋ ಹೊತ್ತಿಗೆ ಊರಗಲ ತಲೆ ಹರಡ್ಕೊಂಡು, ಮಾರಗಲ ಸೀರೆ ಸುತ್ಕೊಂಡು ರೂಪಾನೇ ಬದಲಾಯಿಸಿಬಿಡೋ ಹಾಗೆ ಬರ್ತಾ ಇದ್ದಳು ಚಿನ್ನಮ್ಮ.

'ಯಾರಮ್ಮಾ ನೀನು ಅಂದ್ಲು ಮಾರಕ್ಕ?'
'ನಾನು ಕಂಬೇರ ಗೊಲ್ಲರ ಹೆಣ್ಣು ಮಗಳು.'
'ಯಾಕಮ್ಮಾ ಈ ದಿಕ್ಕಿನಲ್ಲಿ ಹೀಗೆ ನೀನು ಬಂದೆ?'

'ಮೈನೆರೆದು ಹನ್ನೆರಡು ವರುಷ, ಮದುವೆಯಾಗಿ ಹನ್ನೆರಡು ವರುಷ, ಒಟ್ಟು ಇಪ್ಪತ್ತನಾಲ್ಕು ವರುಷ ನನ್ನ ಹುಟ್ಟಿದ ಮನ್ಯಾಗೆ ಇದ್ದೋಳು. ನನ್ನ ಗಂಡ ಕೆಂಗುರಿ ಮಲ್ಲೇಗೌಡ ಅನ್ನೋನು ಮದುವೆಯಾಗಿ ಹದಿನೈದು ದಿನದಾಗೆ ಅರಿಸಿನದ ಮೈ ತೊಳೀಲಿಲ್ಲ. ಕಾಲಾಗಳ ಕುರಿದಾರ ಬಿಚ್ಚಲಿಲ್ಲ. ಉಟ್ಟ ಬಟ್ಟೆ ತೆಗೀಲಿಲ್ಲ. ಅದರಂತೆ ಹೋಗಿ ಇವತ್ತಿಗೆ ಹನ್ನೆರಡು ವರುಷ ಆಯಿತು, ಇಪ್ಪತ್ತನಾಲ್ಕು ವರುಷ ನಾನು ಹುಟ್ಟಿ ಬೆಳೆದ ಮನ್ಯಾಗೆ ಅಕ್ಕಪಕ್ಕದ ಮನೆಗೆ ಹೋದರೆ 'ಗೊಡ್ಡು ಮುಂಡೆ ಬರ್ತಾಳೆ, ಬಂಜೆ ಮುಂಡೆ ಬರ್ತಾಳೆ ಸೆರಗು ಹಾಸಿ ಮುಚ್ಚಿ ಕೊಳ್ರಮ್ಮಾ ಮಗೂನ' ಅಂತಾರೆ. ಈ ಗೊಡ್ಡು ಮುಂಡೆ, ಬಂಜೆ ಮುಂಡೆ ಅನ್ನಿಸ್ಕೊಂಡು ಬಾಳೋದು ಬ್ಯಾಡ. ಈ ಕಳುವಾರಳ್ಳಿ ಬಾವಿಗೆ ಬಿದ್ದು ಪ್ರಾಣ ಬಿಡಾನ. ಮೀನು ಮೊಸಳೆ ತಿಂದು ಪುಣ್ಯಾ ಬರಲಿ' ಅಂದಳು ಚಿನ್ನಮ್ಮಾ.

"ಚಿನ್ನಮ್ಮ ನೀನು ಪತಿವ್ರತೆ. ಇವತ್ತು ನಿನ್ನ ಪತಿವ್ರತಾ ಭಾವ ಉಳಿಸೋದು ನನಗಿರಲಿ. ಬಾಳಲಾರದೋಳು ಬಾವಿಗೆ ಬಿದ್ರೆ ಆಳಿಗೊಂದು ಕಲ್ಲು ಅಂತಾರೆ ಲೋಕದಾಗೆ. ಈ ಬಾಳ್ವೆ ನಿನಗೆ ತರವಲ್ಲ. ಮಕ್ಕಳ ಫಲ ಕೊಡೋದು ನನಗಿರಲಿ. ನಿನ್ನ ಮನೆ ಬೆಳಗಿಸೋದು ನನಗಿರಲಿ. ಈ ಮೂರೂ ಲೋಕಕ್ಕೆ

ಹೆಸರುವಾಸಿಯಾಗುವಂತಹ ಪುತ್ರ ಸಂತಾನ ಕೊಡೋದು ನಾನು ಬಲ್ಲೆ. ಇವತ್ತು ಮಾತ್ರ ಉಳುಕೋಳಮ್ಮ. ಬಾವಿಗೆ ಬೀಳೋದು ಬ್ಯಾಡ ನೀನು. ಪ್ರಾಣ ಹತ್ಯಾ ಮಾಡಿಕೊಳ್ಳೋದು ಬ್ಯಾಡ ನಡಿ" ಅಂತ ಹೇಳಿ ಗೌರಸಂದ್ರದ ಮಾರಕ್ಕ ಚಿನ್ನಮ್ಮನ್ನ ಕಂಬೇರ ಹಟ್ಟೀಲಿ ಬಿಟ್ಟಳು.

ದೊಡ್ಡ ಚಿನ್ನೇಗೌಡ, ಕರಿಚಿನ್ನ, ಮರಿಚಿನ್ನ, ಮಂಕರಗಾಲಿನಚಿನ್ನ, ಬಿಳಿಯಾಲ ಬೇವಿನಚಿನ್ನ, ಗಂಟು ಕಾಲಿನಚಿನ್ನ, ಕಡೆಹುಟ್ಟಿನ ಕಟ್ಟಾಣಿ ನೀವು ಏಳು ಜನ ಅಣ್ಣತಮ್ಮದೀರಿಗೆ ಹೇಳಿರೋ ಮಾತು. ಇನ್ನು ಒಂಬತ್ತು ದಿನ ವಾಯಿದೆ ಮಾಡಿದೀನಿ. ಚಿನ್ನಮ್ಮನ ಗಂಡ ಈ ಲೋಕದಾಗೆ ಎಲ್ಲಿದ್ದರೂ ಕರಕೊಂಡು ಬರ್‍ತೀನಿ. ಕೆಂಗುರಿ ಮಲ್ಲೇಗೌಡನ್ನ ಚಿನ್ನಮ್ಮನ್ನ ಒಬ್ರೂ ಒಂದು ಮಾತೂ ಅನ್ನಕೂಡದು. ಸುಪ್ಪತ್ತಿಗೆ ಮ್ಯಾಗೆ ತುಪ್ಪ ಅನ್ನ ಇಕ್ಕಬೇಕು" ಅಂತ ತವರು ಮನೇವ್ರಿಗೆಲ್ಲಾ ಹೇಳಿಬಿಟ್ಟಳು ಗೌರಸಂದ್ರದ ಮಾರಕ್ಕ.

ಅವಳನ್ನು ತವರು ಮನೆಗೆ ಬಿಟ್ಟವಳು ಸೀದಾ ಬಂದು ಆ ಹುಡುಗನಿಗೆ ಪೂಜೆ ಹಾಕಿ, ಕಷ್ಟ ಸುಖ ನೋಡಿ ಹುಡುಗನ್ನ ಊರಿಗೆ ಬಿಟ್ಟಳು. ಒಂಬತ್ತು ನಿಂಬೆ ಕಾಯಿ, ಒಂಬತ್ತು ಮಂತ್ರ ಮುಗಿಯುವಾಗ್ಗೆ ಅಡ್ಡ ಆರು ಗಾವುದು ಉದ್ದ ಮೂರು ಗಾವುದಕ್ಕೆ ಒಂಬತ್ತು ಗಾವುದಕ್ಕೆ ಹೋಗಿ ಬಿಟ್ಟಳಂತೆ. ಯಾರೂ? ಗೌರಸಂದ್ರದ ಮಾರಕ್ಕ. ಅಲ್ಲಿಂದ ಕೊಂಕಿ ಜರಿಮಲೆ ಸೀಮೆಗೆ ಬಂದು ಅಲ್ಲಿ ಕೆಂಗುರಿ ಮಲ್ಲೇಗೌಡಗೆ ಹೇಳಿದಳು "ಇದು ಯಾವ ಹುಲ್ಲು ನೀರು ಅಂತ ಇಲ್ಲಿದ್ದೀಯಾ?"

"ಮೂಡಲಗಾಳಿ ಬೀಸಿದರೆ ಪಡುವು ಮನುಗುತ್ತೈತೆ
ಪಡುವಣ ಗಾಳಿ ಬೀಸಿದರೆ ಮೂಡು ಮನುಗುತ್ತೈತೆ
ತೆಂಕಣಗಾಳಿ ಬೀಸಿದರೆ ಬಡಗು ಮನುಗುತ್ತೈತೆ
ಬಡಗಲ ಗಾಳಿ ಬೀಸಿದರೆ ತೆಂಕಣ ಮನುಗುತ್ತೈತೆ
ಮಾರುಗಳ್ಳಿ ಹುಲ್ಲು ಮಾರುದ್ದ ಬೆಳೆದೈತೆ.
ಅಮ್ಮದಾ ಹುಲ್ಲು ಎಳೆದು ಮನುಗುತ್ತೈತೆ
ಪುಟ್ಟ ಪುರಲೆ ಹುಲ್ಲು ಪಕಪಕ ನಗತ್ತೈತೆ"

ಅಂದ ಕೆಂಗುರಿ ಮಲ್ಲೇಗೌಡ. "ಹೊನ್ನೇನಹಳ್ಳಿ ಕಾವಲಾಗೆ ಕಳುವಾರಹಳ್ಳಿ, ಚಿಕ್ಕ ಸಂದ್ರದ ಕೆರೆ ಕಾವಲಾಗೆ ಪುರಸಕ್ಕನ ಕೆರೆ ಕಾವಲಾಗೆ ಮರಡಿ, ಗುಡ್ಡದ ರಂಗಪ್ಪನ ಅಡವಿಯಲ್ಲಿ, ಹೊದಿಗ್ಯಾರೆ ಹೊನ್ನೇಗೌಡನ ಕಾವಲಾಗೆ ಇದಕ್ಕಿಂತ ಮೆದುವಾದ ಒಳ್ಳೇ ಹುಲ್ಲು ಬೆಳೆದೈತೆ. ಕರಿಯಲೇ ಆವಿನ ಗೂಡಿನ ದನಾನ ಕೆಂಗುರಿ ಮಲ್ಲೇಗೌಡ, ಹೋಗಲಿ ಮೂಡಲ ಸೀಮೆಗೆ." ಅಂದಳು.

ಆಗ ಕೆಂಗುರಿ ಮಲ್ಲೇಗೌಡ ಬಿಲ್ಲು ಬಾಣನೆಲ್ಲಾ ಧರಿಸಿಕೊಂಡು ಹೋಗಿ ಏಳುಕರುಗಳನ್ನು ಹೊಡಕೊಂಡು ಹೋಗಿದ್ದನಲ್ಲ, ಅಲ್ಲಿ ಏಳು ಗೂಡಿನ ದನಾ ಅಲ್ಲಿ ಬೆಳೆದಿದ್ದುವಂತೆ ಹನ್ನೆರಡು ವರುಷಕ್ಕೆ. ಇಪ್ಪತ್ತೈದು ದನಕ್ಕೆ ಒಂದು ಗೂಡು, ಇಪ್ಪತ್ತೈದು ಗೂಡಿಗೆ ಒಂದು ರೊಪ್ಪ. ಆವಿನ ದನ ಕರಕೊಂಡು ಹೊರಡಬೇಕಾಗಿದ್ದರೆ:

ಅಕ್ಕೋಳು ಅಕ್ಕಮಾರಿ ಚಿಕ್ಕೋಳು ಚಿಕ್ಕಮಾರಿ
ದ್ಯಾವಕ್ಕ ದಯಮಾರಿ, ಕಡೆ ಹುಟ್ಟಿನ ಕಲ್ಯಾಣಿ
ಬುದ್ದಿಯಲ್ಲಿ ಬುದ್ದಿವಂತೆ, ಕೊಂಬಿನಲ್ಲಿ ಗಂಭೀರವಂತೆ
ಬಾಲದಲ್ಲಿ ಬಲವಂತೆ ಮುಖದಲ್ಲಿ ನೋಡಿದರೆ ಸುಕ್ಕೆ ಬೊಟ್ಟಿನ ಚೆಲುವೆ
ದೊಡ್ಡೋಳು ಗೊಡ್ಡಗಾಳಿಯೋರ ಎದ್ದೇಳಿರಮ್ಮ
ನಡೀರಮ್ಮ ಮನೆಗೆ ಹೊರಡೋಣ

ಅಂದನಲ್ಲ ಕೆಂಗುರಿ ಮಲ್ಲೇಗೌಡ. ಆವಿನ ದನ ಕರಕೊಂಡು ಮೂರು ತಿಂಗಳಿಗೆ ಬಂದನಂತೆ. ಶಿವಚಿತ್ರಲಿಂಗ, ಗೌರಸಂದ್ರದ ಮಾರಕ್ಕ, ಕೆಂಗುರಿ ಮಲ್ಲೇಗೌಡ, ಮೂರು ತಿಂಗಳಿಗೆ ಬಂದು ಕಳುವಾರಹಳ್ಳಿ ಬೇವಿನಹಳ್ಳಿ ದಿಂಡಿನಾಗೆ ಆವಿನ ಗೂಡು ಹಾಕಿದನಂತೆ.

"ಶನಿವಾರದ ದಿನ ನೀನು ಆವಿನ ಗೂಡು ಹಾಕಿಸು
ಊರುಗಳ್ಳಿ ಕಡಿದು ಏಳು ಕರುವಿನ ಗೂಡು ಹಾಕು
ಕಾರೆ ಕಳ್ಳಿ ಕಡಿದು ಏಳು ದನವಿನ ಗೂಡು ಹಾಕು
ತುಗ್ಗಿಲಿ ಕಳ್ಳಿ ಕಡಿದು ಬಗ್ಗಿಗೆ ಒಂದು ಗೂಡು ಹಾಕು
ಮನಿಕೊಳ್ಳಾಕೆ ಒಂದು ಒಟ್ಟು ಹದಿನೈದು ರೊಪ್ಪಾ ಹಾಕು ಕೆಂಗುರಿಮಲ್ಲೇಗೌಡ"

ಅಂತ ಹೇಳಿ ಹಟ್ಟಿತಾಕೆ ಬಂದು

'ಚಿನ್ನಮ್ಮ ನಿನ್ನ ಗಂಡನ್ನ ಕರಕೊಂಬಂದು ಕಳುವಾರಹಳ್ಳಿ ಬೇವಿನಹಳ್ಳಿ ತಾವ ಹಿಂದಕ್ಕೆ ಬೇವಿನ ಹಳ್ಳಿ, ಮುಂದಕ್ಕೆ ಕಳುವರ ಹಳ್ಳಿ ನಡುವಂತರಕ್ಕೆ ಕಾಣಾಕ್ಷಿ ಅಲ್ಲಿ ಬಿಟ್ಟಿದೀನಿ' ಅಂದಳು.

ಆ ಕಾಣಾಕ್ಷಿಯಾಗೆ ಜುಂಜಪ್ಪ ಹುಟ್ಟಿದ್ದಂತೆ. ಕಳುವರಹಳ್ಳಿ ಕಾಣಾಕ್ಷಿ ಅಂತ ಅಲ್ಲಿಗೆ ಚಿನ್ನಮ್ಮನ ಕರಕೊಂಬಂದು, ಎಲ್ಲರನ್ನೂ ಕರಕೊಂಬಂದು, ಆವಿನ ಗೂಡಿನ ತಾವ ಕರಕೊಂಬಂದು

"ಇವತ್ತು ಸೋಮವಾರ, ನಿಮ್ಮ ಮನೆದೇವರ ಪೂಜೆನೆಲ್ಲಾ ಮುಗಿಸಿಕೊಂಡು ಕೆಂಗುರಿ ಮಲ್ಲೇಗೌಡ ಚಿನ್ನಮ್ಮ, ನಿಮ್ಮ ಆವಿನ ಗೂಡಿನ ಮುಂದು ಸಾಯಂಕಾಲ ಇಬ್ರೂನೂ ಒಂದು ಹಾಸಿಗೆ ಮೇಲೆ ಮಲಗಿದ್ದು ಮಂಗಳವಾರದ ದಿನ ಹೊತ್ತು ಹುಟ್ಟುವ ಹೊತ್ತಿಗೆ ತಣ್ಣೀರಿನಲ್ಲಿ ಸ್ನಾನ ಮಾಡಿ ತಣಿ ಬಟ್ಟೆಯಾಗೆ ಗಂಡನ್ನ ಕರಕೊಂಡು, ಉಪವಾಸದಾಗೆ ಗೌರಸಂದ್ರದ ಮಾರಕ್ಕನ ಗುಡಿಗೆ ಬಾ. ಗೌರಸಂದ್ರ ಅನ್ನೋ ಊರು ಎಲ್ಲಿದೆ ಅಂದ್ರೆ ಕಲ್ಯಾಣದುರ್ಗದ ಈಚೆ, ವೈ ಎನ್ ಹೊಸಕೋಟೆ ಈಚೆ, ಮ್ಯಾಗಳ ಪಾಳ್ಯ ಕೆಳಗರ ಪಾಳ್ಯ ಈ ಕೆಳಗಲ ಪಾಳ್ಯ ಮ್ಯಾಗಳ ಪಾಳ್ಯ ಅನ್ನುವ ಅತ್ಲಾಗೆ ಒಂದು ಬೆಟ್ಟ, ಆ ಬೆಟ್ಟದ ಮ್ಯಾಗೆ ಎತ್ತಪ್ಪನ ಗೂಡು, ಬೆಟ್ಟದ ಮ್ಯಾಲೆ ಬೆಟ್ಟದ ಎತ್ತಯ್ಯಗೌಡ ಆವಿನ ಗೂಡು ಹಾಕಿದ್ದ. ಆವಿನ ಗೂಡಿನ ಎಡೆಯಾಗ, ನೂರಾ ಒಂದು ಎಡೆಯಾಗೆ ಇರೋ ಹುತ್ತದ ಎಡೆಯಾಗೆ

ಹುಟ್ಟಿದೋಳು ಗೌರಸಂದ್ರದ ಮಾರಕ್ಕ. ದಂಡಿನ ಮಾರಮ್ಮ ಎಡಗಡೆಗೆ ಐತೆ, ಬಲದಾಗೆ ಗೌರಸಂದ್ರದ ಮಾರಕ್ಕ ಐತೆ

ಆ ಬೆಟ್ಟದ ಮ್ಯಾಗೆ ನಾನು ಹುಟ್ಟಿರುವ ಸ್ಥಳ ತೆಲುಗಿನಾಗೆ ಮಾರಮ್ಮನ ಕೊಂಡ ಅಂತಾರೆ, ಕನ್ನಡದಾಗೆ ಮಾರಮ್ಮನ ಬೆಟ್ಟ ಅಂತಾರೆ ಅಲ್ಲಿ ನಾನು ಬಂದು ನೆಲೆಗೊಂಡಿದ್ದೇನೆ. ಅಲ್ಲಿಗೆ ನಿನ್ನ ಗಂಡನ ಕರಕೊಂಡು ಏಳು ಗಂಟೆಗೆ ಮುಂದಲ ಪೂಜೆಗೆ ಬಂದರೆ ಮಕ್ಕಳ ಫಲ ಕೊಡೋದು ನನಗಿರ್ಲಮ್ಮ" ಅಂತ ಸೋಮವಾರದ ದಿನ ಗಂಡ ಹೆಂಡತಿ ಭೇಟಿ ಮಾಡಿಸಿ ಇವಳು ಹೊರಟೋಗಿ ಬಿಟ್ಟಳು ಮಾರಮ್ಮ.

ಆವಿನ ಗೂಡಿನ ತಾಕೆ ಬಂದು ಕಲ್ಲೇಲಿಂಗ, ಮಲ್ಲೇಲಿಂಗ, ಮೈಲಾರಲಿಂಗ, ಮುಂಗೈ ಮೇಲೆ ಮೂರುಕೋಟಿ ಲಿಂಗ, ಅಂಗೈಲಿ ಆರುಕೋಟಿಲಿಂಗ, ಶಿವಚಿತ್ರಲಿಂಗ, ಕಾಟಮಲಿಂಗ, ಓಬಳನರಸಿಂಹ, ಹಿರಿಯೋನು ಹಿರಿ ಓಬಳದಯ್ಯ, ನೂರಾ ಒಂದು ಶಿವಲಿಂಗದ ಪೂಜೆ ಮಾಡಿ ಸೋಮವಾರ ಒಂಬತ್ತು ಗಂಟೆಗೆ ಆವಿನ ಗೂಡಿನ ಎದುರು ಕರೆಕಂಬಳಿ ಗದ್ದುಗೆ ಹಾಕಿ ಚಿನ್ನಮ್ಮನ್ನ ಕರೆದ. ಅವಳು

"ಇವತ್ತಿಗೆ ಹನ್ನೆರಡು ವರುಷ ಆತು, ನಾವಿಬ್ಬರೂ ಒಂದು ಹಾಸಿಗೆಯಾಗೆ ಮಲಗಿರಲಿಲ್ಲ. ಮದುವೆಯಾಗಿ ಹನ್ನೆರಡು ವರುಷ, ಮೈನೆರೆದು ಹನ್ನೆರಡು ವರುಷ ಗಂಡನ ಸಾವಾಸ ಮಾಡಿರಲಿಲ್ಲ, ಮತ್ತೊಬ್ಬರ ಸಹವಾಸ ಮಾಡಿರಲಿಲ್ಲ. ಇಲ್ಲಿಗೆ ಮದುವೆಯಾಗಿ ಹದಿನೈದು ದಿವಸಕ್ಕೆ ಹೋದೋನು ತಿರುಗಿ ಬಂದಿರಲಿಲ್ಲ. ಈ ಮನ್ಯಾಗೆ ಹನ್ನೆರಡು ವರ್ಷ ಮನಸಿನ ದುಃಖ ನುಂಗಿ ಗಂಡುಮಗನಾಗಿ ಬಾಳಿದೀನಿ, ನಮ್ಮ ಮನೆ ದೇವರ ಪೂಜೆ ಎಲ್ಲಾ ಆಗಿ ಹೋಗಿದೆ. ನಾಳೆ ಹೊತ್ತು ಹುಟ್ಟುವ ಹೊತ್ತಿಗೆ ಹೋಗಿ ಗೌರಸಂದ್ರದ ಮಾರಕ್ಕನ ಗುಡಿ ತಾವ ಮಕ್ಕಳ ಫಲಕ್ಕೆ ಹೋಗಬೇಕು. ಮೈಲಿಗೆ ಅಂಟು ಪಂಟು ಮಾಡಿಕೊಂಡು ಹೋಗೋರ ಮಗಳಲ್ಲ ನಾನು ಇವತ್ತೂನೂ ನೀನು ಸುಪ್ಪತ್ತಿಗೆ ಮ್ಯಾಲೆ ಬಾ ಅನ್ನಬೇಡ ಕೆಂಗುರಿ ಮಲ್ಲೇಗೌಡ" ಅಂದಳು.

ಆವಿನ ಗೂಡಿನ ಹಿಂದೆ ಚಿನ್ನಮ್ಮ ಮನಗವಳೆ. ಆವಿನ ಗೂಡಿನ ಮುಂದೆ ಕೆಂಗುರಿ ಮಲ್ಲೇಗೌಡ ಮನಗವ್ನೆ. ಆವರೆಗೂ ಅವರು ಗಂಡ ಹೆಂಡತಿ ಒಂದಾಗಲೇ ಇಲ್ಲ, ಒಂದಾಗಿ ಬಾಳಲೇ ಇಲ್ಲ. ಮಂಗಳವಾರದ ದಿನ ತಣ್ಣೀರು ಸ್ನಾನ ಮಾಡಿ ತಣ್ಣನೆ ಬಟ್ಟೆಯಾಗೆ ಹಣ್ಣುಕಾಯಿ ಕಟ್ಟಿಕೊಂಡು ಗಂಡನ ಕರಕೊಂಡು ಚಿನ್ನಮ್ಮ ಗೌರಸಂದ್ರದ ಮಾರಕ್ಕನ ಗುಡಿ ಕಡೆ ಹೊರಟಳು.

೨.೩. ಜುಂಜಪ್ಪನ ಕಥೆ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಸಿದ್ಧರು ಬಂದರು ಎಂದು ಎದ್ದು ನೋಡಲು ಬಂದೆ
ಸಿದ್ಧರು ನಮ್ಮಕೈಗೆ ಸಿಗಲಿಲ್ಲಾ ಈ ಹೊತ್ತು
ರುದ್ರಾಕ್ಷಿ ತೋಪೇ ಮರೆಯಾದೋ

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ
ಎದ್ದೊಂದರಘಳಿಗೆ ನೆನೆದೇವೋ

ಸ್ವಾಮೀನ ನೆನೆದೇವೋ ಸ್ವಾಮಾರದಯ್ಯಾನ
ಬೆಣ್ಣೆ ಮಜ್ಜನದ ಒಡೆಯ ಸ್ವಾಮಿ ಜುಂಜಪ್ಪನ ನೆನೆದೇವೋ
ನಿಡುಗಲ್ಲ ದಡದಾಗೆ ನೀಟಾಗಿ ಬೆಳೆದಮ್ಮ
ಬೆನವಣ್ಣನ ಬೆಟ್ಟದಾಗೆ ಹಸನಾಗೆ ಬೆಳೆದಮ್ಮ
ಸ್ವಾಗೆ ಗಿರಿ ಬಡ್ಯಾಗೆ ಸೊಗಸಾಗಿ ಬೆಳೆದಮ್ಮ
ಏಣುಕಲ್ಲುಗಿರಿ ಬೆಟ್ಟದಾಗೆ ಗೇಣಾಗೆ ಬೆಳೆದಮ್ಮ

ಚುಂಚನ ಗಿರಿ ಬೆಟ್ಟದಾಗೆ ಮಿಂಚುದಲೆ ಬಿದಿರಾದೆ
ದೊಡ್ಡೋನು ಜುಂಜಪ್ಪಗೆ ಒಡ್ಡಿದರು ಬಿಲ್ಲಾದೆ
ಮೂಡಲಗಿರಿ ತಿಮ್ಮಪ್ಪಗೆ ಮಾಯದಲೆ ಸಜ್ಜಾದೆ

ಕುಂಟನಿಗೆ ಕೋಲಾದೆ ಭಂಟನಿಗೆ ದೊಣ್ಣೆಯಾದೆ
ಮೇಕೆಕಾಯುವಣ್ಣನಿಗೆ ಬಲಿತ ಕಣ್ಣಿನ ಕೋಲಾದೆ
ಕುರಿಯ ಕಾಯುವಣ್ಣನಿಗೆ ಎಳೆಗಣ್ಣಿನ ಕೋಲಾದೆ
ಎತ್ತು ಕಾಯೋ ಅಣ್ಣನಿಗೆ ಮುದ್ದಿನ ಕೋಲಾದೆ

ಒಕ್ಕಲಿಗರ ಮುದ್ದಣ್ಣಗೊಂದಗ್ಗಲಿಗೆ ಕೋಲಾದೆ
ಸಾಲು ಹೊಡೆಯಣ್ಣನಿಗೆ ಕೂರಿಗೆ ನೀನಾದೆ
ಏಳೋನಿಗೆ ಬಲವಾದೆ, ಊದೋನಿಗೆ ಗಣೆಯಾದೆ

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

೨.೩.೧. ಜುಂಜಪ್ಪನ ಹುಟ್ಟು

ಮಕ್ಕಳ ಫಲ ಕೇಳೋಕೇಂತ ಗೌರಸಂದ್ರದ ಮಾರಮ್ಮನ ಗುಡಿಕಡೆ ಗಂಡನ್ನ ಕರಕೊಂಡು ಚಿನ್ನಮ್ಮ ಹೊರಟರೆ ಈ ಊರಿನಾಗಿನ ನಾಯಿಯೆಲ್ಲಾ ಬೊಗಳೊವಂತೆ. 'ಬಾಳುವಾಗಿಲ್ಲ ಬದುಕುವಾಗಿಲ್ಲ ಈ ಅರ್ಧ ತೀರಿದ ವಯಸ್ಸಿನಾಗೆ ಮಕ್ಕಳ ಫಲ ಕೇಳಿಕೊಂಡು ಚಿನ್ನಮ್ಮ ಈ ಮುಪ್ಪಿನಾಗೆ ಗಂಡನನ್ನ ಕರಕೊಂಡು ಮಕ್ಕಳ ಫಲ ಪಡೆಯೋಕೆ ಹೋಗ್ತಿದಾಳೆ ಅಂದರು. 'ಆಡಿಕೊಳ್ಳೋರೆಲ್ಲಾ ಆಡಿಕೊಳ್ಳಲಿ, ನಡಿ ನೀನು ಕೆಂಗುರಿ ಮಲ್ಲೇಗೌಡ' ಅಂತ ಮುಂದಕ್ಕೆ ಹೊರಟಳು. ಗಂಡನ್ನ ಕರಕೊಂಡು ಚಿನ್ನಮ್ಮ ಅಡ್ಡ ಆರುಗಾವುದ, ಉದ್ದ ಮೂರುಗಾವುದ ಹೋಗಿಬಿಟ್ಟಳಂತೆ. ದಾರೀನೆ ತಡೀಲಿಲ್ವಂತೆ. ಹನ್ನೆರಡು ಗಂಟೆಗೆ ಮೊದಲು ಮಾರಕ್ಕನ ಪೂಜೆಗೆ ಸಮಯಕ್ಕೆ ಸರಿಯಾಗಿ ಅಲ್ಲಿಗೆ ಬಂದೇ ಬಿಟ್ಟಳಂತೆ. ನೋಡ್ತಾರಂತೆ. ನೂರಾರು ಜನ ಖಾಯಿಲೆಯೋರು, ಕಸಾಲೆಯೋರು ತುಂಬಿದ್ರಂತೆ ಮಾರಕ್ಕನ ಗುಡಿಯಾಗೆ.

'ಮಾವಾ' ಅಂದಳು. 'ಯಾಕೆ' ಅಂದ?

"ಮುಂದೆ ಹೋಗೋರಿಗೂ ದೇವರು ಐತೆ, ಹಿಂದೆ ಹೋಗೋರಿಗೂ ದೇವರು ಐತೆ, ದೇವರು ಎಲ್ಲೂ ಹೋಗಲ್ಲ. ಅವರ ಕಷ್ಟ ನಿಷ್ಠೂರನೆಲ್ಲಾ ಅವರು ನೋಡಿಕೊಂಡು ಈಚೆಗೆ ಬರಲಿ. ಈ ಬಾಗಲಾಗೆ ಕೂತುಕೊಂಡು ಬಿಡು ಸ್ವಲ್ಪ" ಅಂದಳು ಚಿನ್ನಮ್ಮ. ಅವರ ಕಷ್ಟ ನಿಷ್ಟುರನೆಲ್ಲಾ ಮುಗಿಸ್ಕೊಂಡು ಗೌರಸಂದ್ರದ ಮಾರಕ್ಕ ಮಂಗಳಾರತಿ ಬೊಟ್ಟು ಇಟ್ಟು ಅವರನ್ನೆಲ್ಲಾ ಸಾಗಾಕ್ಸಿ ಬಂದು ಚಿನ್ನಮ್ಮನ್ನ ನೋಡೋವೊತ್ತಿಗೆ

"ಯಾವಾಗ ಬಂದ್ರಿ ಚಿನ್ನಮ್ಮಾ ನೀವು ಗಂಡ ಹೆಂಡತಿ. ಸುಮ್ಮನೆ ಕೂತಿದ್ದೀರಲ್ಲಮ್ಮಾ. ಯಾವಾಗ ಬಂದಿರಮ್ಮಾ?" ಅಂದಳು ಮಾರಕ್ಕ.

"ಅಮ್ಮಾ ಮುಂದಲ ಪೂಜೆಗೆ ಸರ್‍ಯಾಗಿ ಬಂದಿದ್ದು. ಅವರದ್ದು ಕಷ್ಟ ನಿಷ್ಠೂರೆಲ್ಲಾ ಮುಗೀಲಿ ಆಮೇಲೆ ನಾವು ಕೇಳಾನ ಅಂತ ಕಾಯ್ತಿದ್ವಿ. ಈಗ ಕಾಯಿಪ್ರಸಾದ ಕೊಡಮ್ಮಾ" ಅಂತ ಪೂಜೆ ಪುನಸ್ಕಾರ ಎಲ್ಲಾ ಕೊಟ್ಟಳು.

"ಈಗೇನು ಚಿನ್ನಮ್ಮಾ ನೀನು ಬಂದಿದ್ದು ಕೆಂಗುರಿ ಮಲ್ಲೇಗೌಡನ್ನ ಕರಕೊಂಡು?",

"ಹಿಂದೆ ಕಳುವಾರ ಹಳ್ಳಿ ತಾವ ಬಾವಿನಾಗೆ ಬೀಳೋದಿನ 'ಮಕ್ಕಳ ಫಲವನ್ನು ಕೊಡುತೀನಿ ಅಂದಿದ್ದಿ ಮಾರಕ್ಕ. ಮಂಗಳವಾರದದಿನ ನಿಮ್ಮ ದೇವರ ಪೂಜೆಯನ್ನು ಸೋಮವಾರ ಗದ್ದಿಗೇಲಿ, ನಿಮ್ಮ ಮನೆದೇವರ ಪೂಜೇನೆ ಮುಗಿಸಿಕೊಂಡು ಬಾರಮ್ಮ ಗಂಡನ್ನ ಕರಕೊಂಡು' ಅಂತ ನೀನು ಹೇಳಿರೋ ದೃಷ್ಟಿ ಇಟ್ಟುಕೊಂಡು ಇಲ್ಲೀಗೆ ಬಂದಿದೀನಿ ಮಾರಮ್ಮ."

"ಮಂಗಳಾರತಿ ಮಾಡಿಸಿದೀಯಾ, ತೀರ್ಥಪ್ರಸಾದ ತೊಗೊಂಡಿದೀಯಾ, ಈಗ ಮುಂದೆ ನಿನಗೇನು?"

"ನನಗೇನಿಲ್ಲ ಹೆಣ್ಣು ಹುಟ್ಟಿದ್ದರೆ ಒಂದು ಮನೆ ಬೆಳಗೋದು ಇನ್ನೊಂದು ಮನೆ. ಅದಕ್ಕೆ ಸಂತಾನ ಕೊಡಬೇಕು ಮಾರಕ್ಕಾ",

"ಚಿನ್ನಮ್ಮಾ ಮಂಗಳವಾರದ ದಿನ ಕೆಟ್ಟ ಮಂಗಳವಾರದ ದಿನ ಇದೆಯಾ ಅಂತ ಕೇಳಬೇಕು. ಮಂಗಳವಾರದ ದಿನ ನೀನು ಕಳುವಾರಹಳ್ಳಿ ಬಾವಿಯಾಗೆ ಬೀಳಬೇಕು ಅಂತ ಬಂದ್ಯಲ್ಲಾ. ಇಷ್ಟೊತ್ತಿಗೆ ನೀನು ಸತ್ತಿದ್ದರೆ ಜನ ನಿನ್ನ ಮರೀತಿದ್ದರು. ನೀನು ಸತ್ಯವಂತಳಾಗಿದ್ದಕ್ಕೆ ಅವತ್ತು ನಿನಗೆ ಮಕ್ಕಳ ಫಲ ಕೊಡ್ತೀನಿ ಅಂತ ಹೇಳಿದ್ದು ನಿಜ. ನಿನ್ನ ಪ್ರಾಣ ಉಳಿಸಿದ್ದೀನಿ. ಆದರೆ ಹನ್ನೆರಡು ಹನ್ನೆರಡು ಇಪ್ಪತ್ನಾಲ್ಕು ವರುಷ ಬಾಳೇವು ಮಾಡಕ್ಕೆ ನೀವು ಮನ್ಯಾಗೆ ಇರಲಿಲ್ಲ. ಈವಾಗ ಮುಪ್ಪಿನಾಗಾದ್ರೂ ಗಂಡ ಹೆಂಡತಿ ಸುಖವಾಗಿ ಬಾಳಿ ಸಾಯಲಿ ಅಂತ ಹೇಳಿ ನಿಮಗೊಂದು ವಿದ್ಯಾಬುದ್ಧಿ ಕಲಿಸಾನಾ ಅಂತ ನಿಮ್ಮನ್ನ ಇಲ್ಲೀಗೆ ಕರಸ್ಕೊಂಡಿದೀನಮ್ಮ. ನಿಮಗೆ ಮಕ್ಕಳ ಫಲಕೊಡೋಕ್ಕಲ್ಲ." ಅಂದಳು. ಯಾರೂ? ಮಾರಕ್ಕಾ.

"ಅಮ್ಮ ಮಕ್ಕಳ ಫಲ ನೀನು ಕೊಟ್ಟಿದ್ರೆ ನಿಜವಾದರೆ ಈ ಭೂಮಿ ಮೇಲೆ ಆ ಕೂಡಲೇ ಈ ಪ್ರಾಣಹೋಗ್ಲಿ. ಮನ್ಯಾಗೇ ಹಚ್ಚೋದು ನಿನ್ನ ದೀಪ. ಹೇಳೋದು ನಿನ್ನ ಹೆಸರು. ಈ ನ್ಯಾಯಗಳನ್ನು ಕಟ್ಟಿಕೊಂಡು ನಾವು ನಿನ್ನ ಕೇಳೋಕೆ ಬಂದಿಲ್ಲ. ಒಂದು ಪುತ್ರ ಸಂತಾನ ನೀನು ಕೊಡಲೇಬೇಕು ಮಾರಮ್ಮಾ" ಅಂತ ಪ್ರತಿಜ್ಞೆ ಮಾಡಿ ಹೇಳೋಹೊತ್ತಿಗೆ "ಅಮ್ಮಾ ನಿನ್ನ ಹಿಂದಲೆ ಮುಂದಲೆ ಎಲ್ಲಾ ಬೆಳ್ಳಗಾಗಿ ವಯಸ್ಸು ಕಳೆದೈತೆ. ಕೆನ್ನೆಗೆ ನೆರೆ ಬಂದಾವೆ.

ಅಣ್ಣೇ ಹೂವಿನಾಂಗೆ ಕೆನ್ನೆಗೆ ನೆರೆಬಂದಾವೆ
ಇನ್ನೂ ಬೇಕೇನೆ ಫಲಗಳು
ಇಪ್ಪೇ ಹೂವಿನಾಂಗೆ ನೆತ್ತಿಗೂ ನೆರೆಬಂದಾವೆ
ಮತ್ತೆ ಬೇಡಮ್ಮ ಫಲಗಳು
ಅಣ್ಣೆ ಹೂವಂಗೆ ಕೆನ್ನೆಗೆ ನೆರೆಬಂದಾವೆ
ಇಪ್ಪೇ ಹೂವಿನಂಗೆ ನೆತ್ತಿಗೆ ನೆರೆ ಬಂದಾವೆ
ಅರ್ಧಾ ಆಯುಷ್ಯ ಕಳೆದೈತೆ
ಮುಪ್ಪಿನಾಗೆ ಯಾಕಮ್ಮ ಮಕ್ಕಳ ಆಸೆ'
ಅಂದಳು ಗೌರ ಸಂದ್ರದ ಮಾರಕ್ಕ.

"ಹೇಳೋಳು ನೀನು ಕೇಳೋಳು ನೀನು. ಮಕ್ಕಳ ಫಲ ಪಡೆಯೋಳ ನಾಮ ಹೇಳು. ಏನೇನು ಬರ್‍ತೈತೆ ಎಲ್ಲಾ ಹೇಳು."

"ನಿನಗೆ ಮಕ್ಕಳ ಫಲ ಕೊಡಬೇಕಾದರೆ ಚಿನ್ನಮ್ಮ ಹುತ್ತದಾಗಿನ ಸರುಪಾದ ಹೆಡೆ ಹಿಡಿದು ಹೊರಗೆ ಎಳೆದು ನಾಗರಹಾವು ಸಿಂಬೆ ಮಾಡಿ ನೆತ್ತಿಗೆ ಇಟ್ಟುಕೊಂಡು ಒಂದು ತೊಟ್ಟೂ ನೀರು ಕೆಳಕ್ಕೆ ಬೀಳದಂತೆ ಅರಳಿಮರಕ್ಕೆ ನೀರು ಹೊಯ್ದು ಒಣಗಿರೋ ಅರಳಿಮರ ಚಿಗುರಿಸು ಅನ್ನೋ ಅಂತ ಮನೆಮುರುಕ ಮಗ ಹುಟ್ಟುತ್ತಾನಮ್ಮ. ಬೇಡಾ ನಿನಗೆ ಮಕ್ಕಳ ಸಂತಾನ. ಈ ಮುಪ್ಪಿನಾಗೆ ಯಾಕೆ ನಿನಗೆ ಪುತ್ರ ಸಂತಾನದ ಆಸೆ"

"ಇಪ್ಪತ್ತಾಲ್ಕು ವರುಷದ ಭದ್ರೆ ಬಳ್ಳಿಗೆ
ಒರಗಿ ನಿದ್ರಾಗೆ ನಿಂತಲ್ಲೆ ಒರಗವ್ನೆ
ಕೆಂಗುರಿಮಲ್ಲೇಗೌಡ ಕೇಳವ್ವ ಅಕ್ಕಮಾರಿ
ಕೊಡು ಫಲ ನಮಗೆ"

ಅಂದಳು ಚಿನ್ನಮ್ಮ. ಇಪ್ಪತ್ತನಾಲ್ಕು ವರುಷ ಒಣಗಿರೋ ಅರಳಿ ಮರ ಚಿಗುರಿಸಿಬಿಟ್ಲು ಚಿನ್ನಮ್ಮ ಅಲ್ಲಿ ಫಳಿಗೆಯಾಗ್ಯೇನೇ.

"ಆ ಅರಳಿಮರ ಹ್ಯಾಂಗೆ ಗಾಳಿ ಆಡಿಸಿ ಗುಂಯ್‌ಗುಟ್ಟಿಸುತ್ತೋ ಹಾಂಗೆ ಗುಂಯ್‌ಗುಟ್ಟಿಸೋ ಒಂದು ಕಲಿಪುರುಷನ್ನ ಕೊಟ್ಟು ಬಿಡು ಮಾರಕ್ಕಾ" ಅಂದಳು.

"ಆಗಾಲೇ ಪುಟ್ಟಾಲಿ ಈಗಾಲೇ ಸಾಯಾಲಿ
ಬಂಜೆಂಬ ಸೊಲ್ಲೆಗರಿಸಮ್ಮೋ
ಚೆಂಜೇಲಿ ಹುಟ್ಟಾಲಿ ಮುಂಜಾನೆ ಸಾಯಾಲಿ
ಗೊಡ್ಡೆಂಬ ಸೊಲ್ಲ ಮರೆಸಮ್ಮ
ಮುಂಜಾನೆ ಹುಟ್ಟಾಲಿ ಸಂಜೇಲಿ ಸಾಯಾಲಿ

ಬಂಜೆಂಬ ಮಾತು ಒಲ್ಲೆ ಹರಸಮ್ಮಾ ಮಾರಕ್ಕಾ
ಈಗಾಲೇ ಹುಟ್ಟಿ ಈಗಾಲೇ ಸಾಯಾಲಿ
ಮುಂಜಾನೆ ಹುಟ್ಟಿ ಮುಂಜಾನೆ ಸಾಯಾಲಿ
ಸಂಜೇನೆ ಹುಟ್ಟಿ ಸಂಜೇನೆ ಸಾಯಾಲಿ

ಚಿನ್ನಮ್ಮ ಪುತ್ರ ಸಂತಾನ ಹಡೆದಿದ್ದಳಂತೆ, ಏನೋ ಬರಬಾರದ ವಿಪತ್ತು ಕಾಲ ಬಂದು, ಮಗು ಸತ್ತು ಹೋಯಿತಂತೆ ಅಂತ ಹೇಳಲಿ ಈ ಲೋಕದ ಮ್ಯಾಲೆ. ಅಂತೂ ನನ್ನ ಬಂಜೆತನ ಹರಿಸಿಕೊಡಬೇಕು ಮಾರಕ್ಕ."

"ಬೇಡಮ್ಮಾ ನಿನಗೆ ಬರಬಾರದ ವಿಪತ್ತು ಕಷ್ಟ ವನವಾಸ ಬರುತ್ತಾವೆ, ಬೀಳಬಾರದಂತ ನೋವಿಗೆ ಬೀಳುತೀಯಾ, ಸಿಕ್ಕಬಾರದಂತ ಸಿಕ್ಕಿಗೆ ಸಿಕ್ಕಿ ನರಳಬೇಕಾಯ್ತದೆ, ಚಿನ್ನಮ್ಮ ನೀನು ಕೇಳಬೇಡಾ ಮಕ್ಕಳ ಫಲ"

"ಆಕಾಶ ಎದ್ದರೆ ಅಪ್ಪುಗೊಂತೀನಿ, ಭೂಮಿ ಎದ್ದರೆ ತುಳುಕೊಂತೀನಿ
ಹಿಂದಕೆ ಬರೋವ್ರಿಗೆ ಹಿಂದಕೆ ಒದೀತೀನಿ,
ಮುಂದಕೆ ಬರೋವ್ರಿಗೆ ಮುಂದಕೆ ಒದೀತಿನಿ
ನೀನು ಮಕ್ಕಳ ಫಲ ಕೊಟ್ಟೇ ತೀರಬೇಕು ಮಾರಕ್ಕ."

"ಆದರೆ ನಿನಗೆ ಮಕ್ಕಳ ಫಲ ಕೊಡಬೇಕಾದ್ದೇನೂ ಇರಲಿಲ್ಲ. ಆಗಲೇ ಕೊಟ್ಟು ಬಿಟ್ಟಿದ್ದೆ. ನಿನಗೆ ನೋವುಗಳು ಬತ್ತಾವೆ ಕಣಮ್ಮಾ,"

"ಹುಟ್ಟೋದು ಒಂದು ದಿನ, ಸಾಯೋದು ಒಂದು ದಿನ. ನೀನು ಪುತ್ರ ಸಂತಾನ ಕೊಟ್ಟೇ ತೀರಬೇಕು ಮಾರಕ್ಕ. ಏನೇನು ಬತ್ತಾವೋ ನನಗೆ ನೋವುಗಳು ಮುಂದಲ ದಿನದಾಗೆ ಬರೋವೆಲ್ಲಾ ಹೇಳಿಬಿಡು ಮಾರಕ್ಕಾ"

"ಮುಂದೆ ಬರೋದು ಯಾರೂ ಹೇಳೋಕ್ಕಾಗಲ್ಲಾ, ಯಾರೂ ಕಾಣಕ್ಕಾಗಲ್ಲಾ, ಆದ್ರೆ ನೀನು ಹೇಳಿಬಿಡು ಮಾರಕ್ಕಾ, ಮುಂದೇನು ಬರ್ತೈತಿ ಹೇಳು ಮಾರಕ್ಕಾ"

"ಒಣಗಿದ ವನಕ್ಯಾಗೆ ಬತ್ತ ಕುಟ್ಟೋ, ವನಕ್ಯಾಗೆ ಒಳನಾರು ತೆಗೆಯೋಕೆ ಹಚ್ಚೋ ಮೂರು ಮಕ್ಕಳು ಹುಟ್ತಾವಲ್ಲೇ ಚಿನ್ನಮ್ಮ."

"ವನಕ್ಯಾಗೆ ಒಳನಾರು ತೆಗೆಯೋದು ನನಗೆ ಬಿಡು ಮಾರಮ್ಮ, ಅಂತಹ ಮಕ್ಕಳೇ ನನಗೆ ಬೇಕಾಗಿರೋದು. ಮುಂದಿಂದು ಏನು ಬರ್ತಾವೆ ನಿಜದ ಇಕ್ಕಟ್ಟುಗಳು ಹೇಳು ಮಾರಮ್ಮಾ"

"ಕಳುವಾರಹಳ್ಳಿ ಕೆರೆತುಂಬಿದ್ದು ತುಂಬಿದಹಾಗೆ ಇರ್ತದೆ. ಕರೆಕಂಬಳಿ ತೆರೆ ಕಟ್ಟಬೇಕು. ನೂರಾ ಒಂದು ಮಂಡಲ ಬರೀಬೇಕು. ಆಚೆ ಕೋಡಿಯಾಗೆ

ನೀನಿರಬೇಕು, ಈಚೆ ಕೋಡಿಯಾಗೆ ಮಕ್ಕಳಿರಬೇಕು ಚಿನ್ನಮ್ಮಾ. ಆಚೆ ಕಡಿಯಾಗೆ ನಿಂತುಕೊಂಡು ಎರೆಡೆರಡೂ ಕಡೆಯಿಂದಲೂ ನಿನ್ನ ಎದೆ ಹಾಲು ಕರೆಯಬೇಕು. ಏಳೇಳು ತೆರೆ ತಡೆ ಹಾದು ನೂರೊಂದು ಮಂಡಲ ತೆರೆ ಹಾದು ಮಕ್ಕಳ ಬಾಯಿಗೆ ಬಂದು ನಿನ್ನ ಎದೆ ಹಾಲು ಬೀಳಬೇಕು. ಅಂತಹ ಉರುಸೋನು ಮನೆ ಮುರುಕು ಮಗ ಹುಟ್ತಾನಮ್ಮ ನಿನಗೆ."

"ಏಳಾನೇ ಕೆರೆಯಾಗೆ ಕಂಬಳಿ ದಟ್ಟಿಯ ಕಟ್ಟಿ
ಸುತ್ತ ವನಮಂಡಲವ ಬರೆದೇನಾ ಮಾರಕ್ಕಾ
ಎದೆಹಾಲಕರೆತಂದು ಎದೆ ಹಾಲು ಬಂದೀಗ
ನಿಂತಿರುವ ಮಕ್ಕಳ ಬಾಯಿಗೆ ಬೀಳಬೇಕು.
ಅಂತಹ ಸಾಹಸವ ನಾನೀಗ ನೋಡ ಬೇಕು.
ಕರೆದೇ ಬಿಡ್ತೀನಿ,,,,,, ಮುಂದಿನ್ನೇನು ಬರ್ತಾವೆ ಹೇಳು ಮಾರಕ್ಕಾ"

"ಚಿನ್ನಮ್ಮ , ಇನ್ನೊಂದು ಗಂಡು ವಿದ್ಯೆ ಐತೆ ಕಣಮ್ಮಾ ಅದನ್ನು ಹೇಳ್ತೀನಿ ಕೇಳು ನನ್ನ ಮಗಳೇ, ಏನಮ್ಮಾ ಮೂವರು ಗಂಡು ಮಕ್ಕಳು ಮುಂದೆ ಹುಟ್ತಾರೆ. ಮೂವರ ಹಿಂದೆ ಮಟ್ಟ ಮಂಗಳವಾರದ ಹೊತ್ತಿಗೆ ತೊಡೆ ಒಡೆದು 'ಮಾರಿ ಹುಟ್ಟಿದ್ಲು ಮರಣಕ್ಕೆ' ಅಂತ ಒಬ್ಬ ಮಾರಕ್ಕೆ ಹುಟ್ತಾಳೆ. ಮಂಗಳವಾರದ ದಿನ. ಅವಳು ಹುಟ್ಟಿದ ದಿನವೇ ನಿನ್ನ ಗಂಡನಿಗೆ ಮರಣ ಕಾಣೇ ಚಿನ್ನಮ್ಮ. ಅವಳು ಹುಟ್ಟಿದ ದಿನವೇ ನಿನ್ನ ಗಂಡ ಸಾಯ್ತಾನೆ. ನೀನು ಮುಂಡೆಯಾಗಿ ಮೂವತ್ತು ವರ್ಷ ಬಾಳಬೇಕು. ನೀನು ಮುಂಡೆಯಾಗಿ ಈ ರಾಜ್ಯ ಆಳೋದು ಬ್ಯಾಡ. ಮುತ್ತೈದೆಯಾಗಿ ಸುಖದ ಸಂಪತ್ತಿನಾಗೆ ಬಾಳಮ್ಮ."

"ಮೂರನೆ ಗಂಡಿನ ಹಿಂದೆ ಮಧ್ಯಾಹ್ನ ಮಂಗಳವಾರ ಹೊತ್ತುಟ್ಟೋ ಹೊತ್ತಿಗೆ ಮಾರಕ್ಕ ಹುಟ್ಟಾಲಿ, ನನಗಂಡ ಸಾಯಾಲಿ, ಮುತ್ತೈದೆ ತನವು ಹೋದಾರೆ ಹೋಗಾಲಿ ಕೊಡಬೇಕು ಮಾರಕ್ಕ ವರಗಳ.

ಮೂರು ಗಂಡು ಮಕ್ಕಳ ಹಿಂದೆ ಮಂಗಳವಾರದ ದಿನ ತೊಡೆ ಒಡೆದು ಮಗಳು ಮಾರಿ ಹುಟ್ಟಿದ್ರೂ ಹುಟ್ಟಲಿ, ನನ್ನಗಂಡ ಸತ್ತರೂ ಸಾಯಲಿ. ನನ್ನ ಗೊಡ್ಡು ಮುಂಡೆ, ಬಂಜೆ ಮುಂಡೆ, ಅಂದಿರೋರ ಮನೆಗೆಲ್ಲಾ ಮಾರಿ ಕೊಡಬೇಕು. ಅವರ ಮನೆಯೋರೆಲ್ಲಾ ಮಕ್ಕಳು ಮಖಾಡೆಯಾಗಿ ಹಾಕಬೇಕು. ಅವರ ಕಂದನ್ನ ಕಾಲಡಿಯಾಗಿ ಹಾಕಬೇಕು. ಅವರ ಸೊಕ್ಕು ಮುರೀಬೇಕು. ನೆಲಕ್ಕೆ ಬಿದ್ದೋರಿಗೆ ಉಂಡ ಮನೆ ನಿಲ್ಲಬೇಕು.

ಹಳ್ಳಿ ಗೌಡಕಾರ ದಿಲ್ಲಿಗೆ ಓಲೆಕಾರ ಗೊಲ್ಲರ ಜುಂಜಪ್ಪ ಬಲಗಾರ ಎಂಬೋ ಸುದ್ದಿ ದಿಲ್ಲಿ ಪಟ್ಟಣದಾಗೆ ಸಾಸನ ಹೊಡಿಸಲೇಬೇಕು ಮಾರಕ್ಕಾ."

"ದಿಲ್ಲಿ ಬಾಗಿಲಿನಲ್ಲಿ ಸಾಸನ ಹೊಡಿಸಿ ನಾನು ಸಾಯ್ತೀನಿ. ಹಳ್ಳಿಗೆ ಅಧಿಕಾರ ದಿಳ್ಳಿಗೆ ಓಲೆಗಾರ ಗೊಲ್ಲರ ಜುಂಜಪ್ಪ ಬಲಕಾರ ಅನ್ನೋದು ಶಾಸನ ಹೊಡೆಸಬೇಕು. ಅವತ್ತೇ ಬೇಕಾದ್ರೆ ನಾನು ನನ್ನ ಮಗ ಸತ್ತು ಹೋಗಿ ಬಿಡಲಿ. ನೀನು ಮಕ್ಕಳ ಫಲ ಕೊಟ್ಟೇ ತೀರಬೇಕು. ನನ್ನ ಗಂಡ ಸಾಯಲಿ ಎಲ್ಲಾದರೂ ಒರಗಿ ಹೋಗಲಿ. ಇನ್ನೂ ಏನೇನೈತಿ ಹೇಳು ಮಾರಕ್ಕಾ" ಅಂದಳು.

"ನಿನ್ನ ಗಂಡ ಸತ್ತು, ಮಗಾ ಹುಟ್ಟಿ ಹದಿನಾರು ವರ್ಷಕ್ಕೆ ಸತ್ತಿರೋ ನಿನ್ನ ಗಂಡನ್ನ ಎಬ್ಬಿರಿಸಿ ಮಾತಾಡ್ಸೋ ಅನ್ನೋ ಮಗಾ ಹುಟ್ತಾನೆ, ಬೇಡಾ ನಿನಗೆ ಚಿನ್ನಮ್ಮ'

"ಸತ್ತ ನನ್ನ ಗಂಡನ್ನ ಎಬ್ಬಿಸಿ ಕುಳ್ಳಿರಿಸಿ ಮಾತಾಡೋದು ನನಗೆ ಸೇರಿದ್ದು. ನೀನು ಮುಂದಿಂದು ಹೇಳು ಮಾರಕ್ಕಾ" ಅಂದಳು

ಮುಂದಿಂದು ಕೇಳ್ತಾಳೆ ಹೊರತು ಅಲ್ಲೀಗೆ ನಿಲ್ಲುವಂಗೆ ಇಲ್ಲ. ಆದರೆ ಭಕ್ತಾದಿಗಳಿಗೆ ಏಕ ಒಂದೇ ದಾರಿ ಅನ್ನೋದು ಅದಕ್ಕೇಯ. ನಾಕು ಮುಖಕ್ಕೂನೂ ಗ್ಯಾನ ಮಾಡಬಾರದು. ನಾಲ್ಕು ಕಡೇಗೂ ಹೋಗಬಾರದು. ಒಂದೇ ಮನದಾಗೆ ಭಕ್ತಿ ಮಾಡಬೇಕು.

ಬಾಳೋರಿಗೆ ಒಂದ್ ಮಾತು ಬದುಕೋರಿಗೆ ಒಂದ್ ಮಾತು
ಬ್ಯಾಡಮ್ಮಾ ನಿನಿಗೆ ಮಕ್ಕಳಾ ಫಲವೇ ಕೊಟ್ಟರೆ
ಬರಬಾರದ ವನವಾಸ ಬರುತಾವೆ ಚಿನ್ನಮ್ಮ
ಬೀಳಬಾರದ ವನವಾಸ ಬೀಳುತೀಯ ನನಮಗಳೇ
ಕೇಳಬೇಡಮ್ಮಾ ವರಗಳ"

"ಮಾರಕ್ಕಾ ಬರೋದೆಲ್ಲಾ ಬರಲಿ, ಆ ಗೋವಿಂದನ ದಯವೊಂದಿರ್ಲಿ, ಮುಂದಿಂದು ಹೇಳು"

"ಇನ್ನು ಮೂರೇ ಮಾತು ಚಿನ್ನಮ್ಮಾ, ನೀನು ಕೇಳಬೇಕಾದ್ದು ಇನ್ನು ಯಾವುದೂ ಇಲ್ಲ. ಏನಮ್ಮಾ

ಅಪುತ್ರನ್ನ ಕೊಡೋಣ್ವೇ ಸುಪುತ್ರನ್ನ ಕೊಡೋಣ್ವೇ ಚಿನ್ನಮ್ಮ? ನಿನಗೆ ಒಂಬತ್ತು ತಿಂಗಳು ಗರ್ಭದಾಗೆ ಹುಟ್ಟೋ ಮಗ ಬೇಕೋ, ಒಂಬತ್ತು ದಿನದಾಗೆ ವರದಾಗೆ ಹುಟ್ಟೋ ಮಗ ಬೇಕೋ ಚಿನ್ನಮ್ಮ?"

"ಒಂಬತ್ತು ತಿಂಗಳು ಸೂತಕದ ಗರ್ಭದಾಗೆ ಅಂಟು ಮಂಟು ಸೂತಕದಾಗೆ ನಾಲ್ವರು ಬರೋ ದಾರಿಯಾಗೆ ಬರೋ ಮಗ ನನಗೆ ಬೇಕಿಲ್ಲವೆ ಮಾರಕ್ಕಾ. ಆದಿತ್ಯ ವಾರ ಆದಿತ್ಯವಾರಕ್ಕೆ ಎಂಟು, ಸೋಮವಾರ ಒಂಬತ್ತು, ಹೊತ್ತು ಹುಟ್ಟಿ ಬರೋ ಹೊತ್ತಿಗೆ ಕಳುವಾರ ಹಳ್ಳಿ ಕೆರೆತಾವ ಮುಂಗಾರಿನ ಸಿಡಿಲು

ಹೊಡೆದ ಹಾಗೆ ಬೆನ್ನಿಗೆ ಹೊಡೆಯುವಂತಹ ವರಕೊಟ್ಟು ಬಿಡು ಹಂಗಾರೆ."
"ಹ್ಞೂಂ, ಇನ್ನೇನಮ್ಮಾ?" "ಇನ್ನೇನೂ ಇಲ್ಲ."

"ಆದಿತ್ಯವಾರ ಆದಿತ್ಯವಾರಕ್ಕೆ ಎಂಟು, ಸೋಮವಾರಕ್ಕೆ ಒಂಬತ್ತು, ಕಳುವೇರ ಹಳ್ಳಿ ಸಾಲು ಬೇವಿನ ಮರದ ಅಡಿಯಾಗೆ ಸೋಮವಾರ ಸೂರ್ಯ ಹುಟ್ಟೋ ಹೊತ್ತಿನಾಗೆ ಬೆನ್ನಿನಾಗೆ ಅವನು ಒಡೀಬೇಕು. ಅಕ್ಕಾಗೆ ಪಕ್ಕಾಗೆ ಮಾರಣ್ಣ ಮೈಲಣ್ಣ ಮೂಡಬೇಕು, ಮೂವರು ಮಕ್ಕಳೂ ಹೋಗಿ ಮೂರಾಳು ಉದ್ದದ ಮೂಗುತ್ತದ ಮೇಲೆ ಇರಬೇಕು. ಇಂತಾ ವರಗಳನ್ನು ಕೊಡೋ ಹಾಗಿದ್ದರೆ ಕೊಡು. ಇಲ್ಲಾಂದ್ರೆ ಈ ನಾಲಗೆ ಕಿತ್ತುಕೊಂಡು ನಿನ್ನ ಪಾದಕ್ಕೆ ಇಟ್ಟು ಬಿಟ್ಟು ನನ್ನ ಪ್ರಾಣ ಬಿಟ್ಟುಬಿಡ್ತೀನಿ. ಗಂಡನ ಮನೆಯೂ ತವರು ಮನೆಯೂ ಎರಡೂ ಬೇಡ. ನನಗೆ ಸುಪುತ್ರನ್ನ ಕೊಡು. ಅಪುತ್ರನ್ನ ಬೇಡ."

"ಇನ್ನು ಏನು ಕೇಳ್ಕಂತೀಯಾ?"

"ಇನ್ನು ಯಾವುದೂ ಇಲ್ಲ ಇನ್ನು."

"ಇನ್ನು ನಾನು ಬರೋವರೆಗೂ ಇಲ್ಲೇ ನೀವು ಗಂಡ ಹೆಂಡತಿ ಇಬ್ರೂನೂ, ಇಲ್ಲೇ ಧೂಪ ಹಾಕ್ಕೊಂಡು, ದೀಪ ಹಚ್ಕೊಂಡು ಈ ಮಾರಿಯಮ್ಮನ ದೇವಾಲಯದಾಗೆ ಇರ್ರಮ್ಮ ನೀವು. ಇವತ್ತು ಆದಿತ್ಯವಾರ. ಹನ್ನೆರಡು ಗಂಟೆ ರಾತ್ರೀಲಿ ಶಿವನ ತಾವಕ್ಕೆ ಹೋಗಬೇಕು. ಅಲ್ಲಿ ವರ ಪಡೀಬೇಕು. ಅಲ್ಲಿ ಈಶ್ವರ, ಪಾರ್ವತಿ, ಬ್ರಹ್ಮದೇವ ಅವರು ಎಲ್ಲರಿಂದಲೂ ನಾನು ವರ ಪಡಕೊಂಡು ನಿನಗೆ ವರ ತರಬೇಕಾಗಿದೆ. ಸಾಮಾನ್ಯವಾಗಿ ನಾನು ಒಬ್ಬಳೇ ವರ ಕೊಡುವ ಹಾಗಿಲ್ಲ. ನಾನು ವರಪುತ್ರಿ, ಆದ್ರೆ ನಿನಗೆ ವರಕೊಡಬೋದು."

ಗಂಡಾನೆ ಹೆಂಡ್ತಿಗಳು ದೇವಾನೆ ನೆನೆಯುತ್ತಾ
ಮಾರಕ್ಕನ ಗುಡಿಯಾಗೆ ಪೂಜೆ ಪುನಸ್ಕಾರಗಳು
ಮಾಡಿಕೊಂಡು ಬರುವಾಗ
ಆದಿತ್ಯವಾರದ ದಿನ ಹನ್ನೆರಡು ಘಂಟೆಗೆ
ನೂರೊಂದು ಪೂಜೆಗೆ ನೂರೊಂದು ಪತ್ರೆ
ತೊಗೊಂಡು ಆ ಘಳಿಗ್ಯಾಗೇನೇ

ಶಿವನ ತಾವ ಏನು ವರ ಪಡೀತಾಳೆ ಗೌರಸಂದ್ರದ ಮಾರಕ್ಕ? ಈಶ್ವರ, ಪಾರ್ವತಿ, ದೇವೇಂದ್ರ, ಬ್ರಹ್ಮ ದೇವ ಎಲ್ಲಾರೂನೂ, ಕೃಷ್ಣ ಪರಮಾತ್ಮನೂ ಏನಮ್ಮಾ ಇಷ್ಟೊಂದು ಪೂಜೆ ಮಾಡಿದಿಯಲ್ಲಾ' ಅಂತ ಬಂದ್ರು.

"ಶಿವಾ ಏಳು ವರವುಂಟು ನಿನ್ನ ತಾವಕ. ಅದರಲ್ಲಿ ಒಂದು ವರ ನನಗೆ ಕೊಡು".

"ಏಳು ವರದಾಗೆ ಮಾರಕ್ಕ ಈ ಆರು ವರ ತೊಗೊಂಡೋಗು. ಆರರಾಗೆ ಮೂರು ತೊಗೊಂಡೋಗು, ಮೂರರಾಗೆ ಎರಡು ತೊಗೊಂಡೋಗು, ಏಳನೇ ವರದಾಗೆ ಈ ಕಟ್ಟುಗ್ರದ ವರ ಕೇಳಬೇಡ". "ಯಾಕಣ್ಣ?"

"ಈ ಏಳನೇ ವರದಾಗೆ ಹುಟ್ಟೋನ್ನ ನಾನು ನಿಗ್ರಹಿಸೋಕೆ ಆಗಲ್ಲ. ಪಾರ್ವತಿ ಅಂತಹವಳು ತಲ್ಲಣಿಸಿ ಹೋಗಿಬಿಟ್ಟವ್ಳೆ.. ಇದು ನಿನ್ನಿಂದ ಆಗಲ್ಲ, ಇದು ನನ್ನಿಂದಲೂ ಸಾಧ್ಯವಿಲ್ಲ. ಈ ಆರು ವರದಾಗೆ ಯಾವುದಾರ ಕೇಳು, ನಾನು ಕೊಟ್ಟು ಬಿಡ್ತೀನಿ. ಈ ಆರು ವರ ತೊಗೊಂಡೋಗಿ ಮಾರಮ್ಮನ ಗುಡಿಮುಂದೆ ಪಟ್ಟದ ಕೋಣ ಕಡಿಯೋ ಹಾಂಗೆ ಕಡೀ ಬೇಕಾದ್ರೆ" ಅಂದ ಈಶ್ವರ.

"ಕತ್ತೆ ಮೊಲೆಯಾಗೆ ಖಂಡುಗ ಹಾಲಿದ್ರೆ ದೇವರಿಗೆ ಏರಲಿಲ್ಲ, ದಿಂಡ್ರಿಗೆ ಏರಲಿಲ್ಲ. ಈ ಆರು ವರಗಳನ್ನು ನೀನೇ ಮಡಕ್ಕೊಂಡುಬಿಡು. ಏಳನೇ ವರವಾದ ಕಟ್ಟುಗ್ರದ ವರವನ್ನು ನೀನು ನನಗೆ ಕೊಡಬೇಕು. ತಿರುಗಾ ಕತ್ತಲು ಬೆಳಕಾಗಿ ಬಿಡಬೇಕು ಈ ವರದಾಗೆ. ಆ ಸಾಹಸ ನಿನಗಿದ್ರೆ ಕೊಡು. ಇಲ್ಲದಿದ್ರೆ ಬ್ಯಾಡ' ಅಂದಳು.

"ಏಳನೇ ವರದಾಗೆ ಯಾವ ವರಾನಮ್ಮ?"

"ಯಾವುದೂ ಇಲ್ಲ ಅಣ್ಣ. ಏಳನೇ ವರದಾಗೆ ಈಶ್ವರನ ಮಗ ಈರಬದ್ರ ಅನ್ನೋ ವರ. ಈರ್ಯೆ ಜುಂಜ. ಕಂಬಿಯೋರ ಗೆದ್ದ ಈರ ಜುಂಜ. ಇದರಾಗವನು ಗೊಲ್ಲರ ಮಗ ಅನ್ನೋ ಹೆಸರು ಬಂದು ಬಿಡ್ತು."

ಇದರಾಗೆ ಅವನು ಚಿನ್ನಮ್ಮಾಗೆ ಜನಿಸಿ ಮೂಡಿದ ದೆಸೆಯಿಂದ, ನಾವ್ಯಾರು ಜನಿಸಿದಂಗೆ ಜನಿಸಲಿಲ್ಲ. ಬೆನ್ನಾಗೆ ಒಡೀಲಿ, ಎತ್ಲಾಗಾರೂ ಒಡೀಲಿ ಗೊಲ್ಲರ ಜುಂಜಪ್ಪ ಅನ್ನೋ ಹೆಸರು ಬಂತು ಆ ಜುಂಜಪ್ಪಗೆ.

"ಈ ಅಳುವಿನೋರ ವೀರ ಈರ್ಯೆ ಜುಂಜ ಅನ್ನೋ ವರಕೊಡಬೇಕು ಶಿವನ ಮಗನೇ ಈರ್ಯೆ ಜುಂಜ".

"ಕೊಟ್ಟಿದೀನಿ ಕಣಮ್ಮಾ ವರವನ್ನು"

"ಏನಂತ ಕೊಟ್ಟಿದೀಯ?"

"ಆದಿತ್ಯ ವಾರ ಕಳೆದುಕೊಂಡು ಸೋಮವಾರ, ಸೋಮವಾರ ಎಂಟು ಒಂಬತ್ತು ದಿನ ಬಿಟ್ಟು ಬರೋ ಹೊತ್ತಿಗೆ ಕಳುವಾರ ಹಳ್ಳಿ ದಿಣ್ಣೆ ಹತ್ತಿರ ಕಂಬೇರ ಚಿನ್ನಮ್ಮನ ಬೆನ್ನಿನಾಗೆ, ಸೋಮವಾರ ಕಳೆಯೋ ಹೊತ್ತಿಗೆ ಸೂರ್ಯ ಉದಯವಾಗೋ ಹೊತ್ತಿಗೆ, ಮುಂಗಾರಿಗೆ ಸಿಡಿಲು ಹೊಡಿಯೋ ಹಂಗೆ ಅಂತಾ ಮಗನೇ ಹುಟ್ಟಲಿ ಅಂತಾ ವರ ಕೊಟ್ಟಿದೀನಿ ಹೋಗಮ್ಮಾ".

ಆ ಘಳಿಗೆಯಾಗೇನೇ ಆ ಈಶ್ವರನ ತಾವ ವರ ಪಡಕೊಂಡು ಅಲ್ಲಿಂದ ಸೀದಾ ಚಿನ್ನಮ್ಮ ಇದ್ದಲ್ಲಿಗೆ ಮಾರಮ್ಮ ಬರಬೇಕಾಗಿದ್ರೆ, ಆದಿತ್ಯವಾರ ಗಂಡ ಹೆಂಡತಿ ದೇವಾಲಯದಾಗೆ ಐದಾರು ದೀಪ ಹಚ್ಚಿಕೊಂಡು ಧೂಪ ಹಾಕ್ಕೊಂಡು ಅವರು ಅಲ್ಲಿ ಇರೋವಾಗ

"ಚಿನ್ನಮ್ಮಾ" ಅಂದಳು ಗೌರಸಂದ್ರದ ಮಾರಕ್ಕ.
"ಯಾಕಮ್ಮಾ?" ಅಂದಳು.

"ಏನಮ್ಮ ಈಗ ನಾನು ಪಡೆದಿರೋದು ವರದಾಗೆ ನಿನ್ನ ಬೆನ್ನಾಗೆ ಒಡೀತಾನೆ ನಿನ್ನ ಮಗನಾಗಿ ಈರ್ಯೆ ಜುಂಜ. ನಾನು ಎರಡು ವರ ಕೊಡ್ತೀನಿ. ನೀನು ನನ್ನ ಬೇಡಿದ್ದಕ್ಕಾಗಿ. ನಿನ್ನ ಅಕ್ಕ ಪಕ್ಕದಾಗೆ ಒಡಿಯೋರನ್ನ ಮಾರಣ್ಣ ಮೈಲಣ್ಣ ಅಂತ ಅವರಿಗೆ ಹೆಸರಿಡು. ಈಶ್ವರನ ಮಗ ಈರಭದ್ರ ನಿನ್ನ ಬೆನ್ನಾಗೆ ಒಡೀತಾನೆ. ಅವನ್ನ ಈರ್ಯೆ ಜುಂಜ ಅಂತ ಹೆಸರಿಡು. ಎರಡು ವರಾನ ಕೊಟ್ಟಿದೀನಿ ಹೋಗೇ ಚಿನ್ನಮ್ಮ.

ಕೆಂಗುರಿ ಮಲ್ಲೇಗೌಡ, ಸತ್ಯದಿಂದ ನಿನ್ನ ಹೆಂಡತಿಗೆ ವರ ಕೊಟ್ಟಿದೀನಿ. ಇವತ್ತಿನ ದಿನದಾಗೆ ಮುಂದೆ ಬರೋ ಕಷ್ಟ ನಿಷ್ಠೂರಗಳು ಗುಣ ಗುಣಾದಿಗಳಿಗೆಲ್ಲ ನೀನು ನಿನ್ನ ಹೆಂಡತಿ ಹೊಣೆ ಆಗ್ಬೇಕು. ನನ್ನ ಮೇಲೆ ಇನ್ನು ಯಾವ ತಪ್ಪೂ ಹೊರಿಸಬೇಡಿ" ಅಂತ ಗೌರಸಂದ್ರದ ಮಾರಕ್ಕ ಮೂರು ವರ ಕೊಟ್ಟು ಅವರನ್ನು ಸಾಗಹಾಕಿದಳು.

"ಆದಿತ್ಯವಾರದ ದಿನ ಹನ್ನೆರಡು ಘಂಟೆ ರಾತ್ರಿಯಾಗೆ ವರ ಪಡಕೊಂಡು ಬೆಳಕು ಹರಿಯೋವರೆಗೂ ಅಲ್ಲಿದ್ದುಕೊಂಡು ನಿಮ್ಮ ಊರಿಗೆ ಹೋಗ್ರಿ" ಅಂತ ಅವರನ್ನು ಸಾಗಹಾಕಿದಾಗ, ಆದಿತ್ಯವಾರ ಆದಿತ್ಯವಾರ ಎಂಟು ಸೋಮವಾರದ ದಿನ ಒಂಬತ್ತು ದಿನ ತುಂಬೋ ವರಿಗಾನೂ, ಇನ್ನೂ ಬರ್ತಾನೇ ಅವ್ರೆ ಹಗಲು ರಾತ್ರಿ ಪ್ರಯಾಣ ಮಾಡಿಕೊಂಡು, ಒಂದು ಕಡೆಯೂ ನಿಲ್ಲದಾಗೆ, ಅಡವಿ ಹಣ್ಣು ತಿಂದು ಮಡುವಿನ ನೀರು ಕುಡಕಂಡು ಅವರು ಮಕ್ಕಳ ಫಲ ತಕ್ಕೊಂಡು ಬರೋಹೊತ್ತಿಗೆ ಒಂಬತ್ತು ದಿನ ಆಗಿ ಹೋಯ್ತು. ಮಕ್ಕಳು ಫಲಕ್ಕೆ ಹೋಗೋ ದಿವಸ ಒಂದೇ ದಿನ ಒಂಬತ್ತು ಗಾವುದವೇ ಹೋಗಿಬಿಟ್ಟಿದ್ರು. ಬರಬೇಕಾಗಿದ್ರೆ ಒಂಬತ್ತು ದಿನ. ಕಳುವಾರಹಳ್ಳಿ ದಿಣ್ಣೆ ಹತ್ರ ಹೋಗಿ ನಿಲ್ಲೋಕು, ನವಮಾಸ ತುಂಬಬೇಕು, ಜುಂಜಪ್ಪ ಅಲ್ಲಿ ಹುಟ್ಟಬೇಕು. ಆಗ ಆದಿತ್ಯವಾರ ಆದಿತ್ಯವಾರಕ್ಕೆ ಎಂಟು ಸೋಮವಾರಕ್ಕೆ ಒಂಬತ್ತು ಕಳುವಾರಹಳ್ಳಿ ದಿಣ್ಣೇನೆ ಸೇರವರೆ ಒಂಬತ್ತನೆ ದಿನದಾಗೆ. ಸೋಮವಾರ ಸೋಮವಾರ ಮುಂಜಾನೆ ಮೊದಲನೆ ಕೋಳಿ ಕೂಗೋ ಹೊತ್ತಾಗೆ ಕಳುವಾರಹಳ್ಳಿ ದಿಣ್ಣೆ ತಲುಪಿದರಂತೆ.

"ಮಾವಾ" ಅಂದಳು.
"ಯಾಕೋ" ಅಂದ,.

"ಎಂಟು ದಿನದ ವರೆಗಾನು ಸುಖವಾಗಿ ಸುಸೂತ್ರವಾಗಿ ಬಂದೆ ಕೆಂಗುರಿ ಮಲ್ಲೇಗೌಡ. ಒಂಬತ್ತನೆ ದಿನದಾಗೆ ದಿಣ್ಣೆ ಹತ್ತುವಾಗ್ಗೆ ಹಿಂದಿದ್ದ ಹೆಜ್ಜೆ ಎತ್ತಿ ಮುಂದೆ ಇಡೋಕ್ಕೆ ಆಗಾಕಿಲ್ಲ. ಉರಿ ಹೊಡೆತ ಈ ಬಾರೀ ತಡೆಯೋಕೆ ಆಗಲ್ಲ. ನಿನ್ನ ಪಾದದಾಣೆ ನನಗೆ ಬ್ಯಾಡ ಈ ಮಕ್ಕಳ ಫಲ".

"ಯಾಕೆ ನೋವು ಬರ್ತಿದ್ದಾಗೆ ಹೆಂಗಸಿನ ಮಾತು ಎರಡು ತಲೆ ಮೃತ್ಯು ಕಂಬೇರ ಚಿನ್ನಿ. ಓಲೆಗಾರರ ಮಗಳು ಗೌರಸಂದ್ರದ ಮಾರಕ್ಕ ಮಕ್ಕಳ ಫಲ ಬ್ಯಾಡ ಅಂತ ಹೇಳಿರಲಿಲ್ಲವೇ. ಆಗ ನೀನು ನನಗೆ ಬೇಕೇ ಬೇಕು. ಆಕಾಶ ಬಿದ್ದರೆ ಅಪ್ಪುಗೋತೀನಿ. ಭೂಮಿ ಎದ್ದರೆ ತುಳುಕೋತೀನಿ. ಮುಂದು ಬರೋವಕ್ಕೆ ಮುಂದೆ ವದೀತೀನಿ. ಹಿಂದೆ ಬರೋವಕ್ಕೆ ಹಿಂದೆ ವದೀತೀನಿ ಅಂತ ಇವತ್ತಿಗೆ ಒಂಬತ್ತು ದಿನ ಆತು, ನನ್ನ ಆವಿನ ದನ ಯಾರಿಗೋ ಹೇಳಿ ಬಿಟ್ಟು ಬಂದಿದ್ದೆ. ಹುಲ್ಲೆಲ್ಲಿ ತಿಂದಾವೋ ನೀರೆಲ್ಲಿ ಕುಡಿದಾವೋ, ಕರಿತಲೆ ಮುಂಡೆ, ನಿನ್ನ ಹಣ್ಯಾಗೆ ಬರೆದಿರೋದನ್ನ ನೀನು ಅನುಭವಿಸ್ಕೋ" ಅಂತ ಹೇಳಿ ಹೊರಟೇ ಹೋದ.

ಕಳುವಾರ ಹಳ್ಳಿ ದಿಣ್ಣೆಯಾಗೆ ಕೆಂಗುರಿ ಮಲ್ಲೇಗೌಡ ಹೀಗೆ ಬಿಟ್ಟು ಹೋಗೋವಾಗ, ಚಿನ್ನಮ್ಮನ ಬಿಟ್ಟು ಮೂರು ಮೈಲಿ ಹೋಗೋವಾಗ, ಚಿನ್ನಮ್ಮ 'ತವರು ಮನೆಯಾಗೆ ನೋಡಿದ್ರೆ ಹಾಗೆ. ಈ ಗಂಡ ಹೀಗೆ ಬಿಟ್ಟುಹೋದ. ಈ ಜನ್ಮ ಇರೋದೆ ಬ್ಯಾಡ. ನಿನ್ನ ಮಕ್ಕಳ ಫಲಾನೂ ನನಗೆ ಬೇಡ. ಅಸಲು ನಾರು ಮರದ ತಾವ ಹೋಗಿ ಅಸಲು ನಾರು ತಂದು, ತೇಗದ ಮರದ ಮ್ಯಾಗೆ ಹತ್ತಿ ಹೋಗಿ ಕೊಂಬೆಯಾಗೆ ಹಗ್ಗ ಕಟ್ಟಿ ಸರಗುಣಿಕೆ ಮಾಡಿ ಕೆಳಕ್ಕೆ ಇಳಿಬಿಟ್ಟು ಕೆಳಗೆ ಬಂದು ಸುತ್ತ ಮುತ್ತಲು ದೇವರನ್ನೆಲ್ಲಾ ಧ್ಯಾನಮಾಡಿ, ನೆಲಕ್ಕೆ ತಾಗದ ಹಾಗೆ ನೇಣು ಹಾಕ್ಕೋಂಡು ನೇತಾಡಿ ಬಿಡಬೇಕು' ಅಂತ ನೇಣು ಹಾಕ್ಕೋಳ್ಳೋಕೆ ಹೋಗೋ ಹೊತ್ತಲ್ಲಿ ಹೊಟ್ಟೇಲಿಂದ ಜುಂಜಪ್ಪ

'ಅಮ್ಮಾ' ಅಂದ.

'ಯಾರೂ?' ಅಂತ ಸುತ್ತ ನೋಡಿದ್ಲೂ.

"ನರಮನುಷ್ಯರಾದ್ರೂ ಹೇಳಿ, ದೇವರಾದ್ರೂ ಹೇಳಿ, ಪೀಡೆ ಪಿಶಾಚಿಗಳಾದ್ರೂ ಹೇಳಲಿ, ಯಾರು ಅಮ್ಮ ಅಂದೋರು?".

"ಪೀಡೆಯಲ್ಲ, ಪಿಶಾಚಿಯಲ್ಲ. ಈಶ್ವರನ ಮಗ ಈರಭದ್ರನ ವರ ನೀನು ಪಡೆದದ್ದು. ಸೋಮವಾರ ಹೊತ್ತು ಹುಟ್ಟಿ ಬರ್ತಾ ಇದೀನಿ. ಹೊತ್ತು ಹುಟ್ಟಿದಾಗ ಕತ್ತಲು ಕಳೆದು ಮೂರು ಲೋಕನೂ ಬೆಳಗೋ ಬೆಳ್ಳಗಾಗಿ ಮಿಂಚು ಹೊಡೆಯೋದ್ರಾಗೆ ನಾನಿನ್ನ ಬೆನ್ನಿನಾಗೆ ಬರ್ತಿದೀನಿ. ಮಾರಣ್ಣ ಮೈಲಣ್ಣ ಅಕ್ಕ ಪಕ್ಕದಾಗೆ ಒಡೀತಾರೆ. ಮೂರು ಮಕ್ಕಳು ಹೋಗಿ ಮೂರು ತಿಂಗಳೇ ಆಗಲಿ, ಮೂರು ದಿನವೇ ಆಗಲಿ ಮೂಗುತ್ತದ ಮ್ಯಾಲೆ ಇರುತ್ತೀವಿ. ನೆರಳು ಹಾಯಿಸೋಕ್ಕೆ ಬರಬೇಡ. ಹೊಕ್ಕುಳ ಬಳ್ಳಿ ಕೊಯ್ಯಕ್ಕೆ ಬರಬೇಡ.

ತೊಡೆಮೇಲೆ ಹಾಕ್ಕೊಂಡು ಹಾಲು ಕುಡಿಸೋಕೆ ಬರಬೇಡ. ಮೂರು ಗಂಡು ಮಕ್ಕಳು ಹುಟ್ಟಿದರೂ ನಿನ್ನ ಬಂಜೆತನ ಹರೀಲಿಲ್ಲ ಚಿನ್ನಮ್ಮ. ನಿನ್ನ ಬಂಜೆತನ ಹರಿಯೋ ಮಾತು ಮುಂದೈತೆ. ನೀನು ಹತ್ರ ಬರಬಾರದು ದೂರ ಇರಬೇಕು" ಅಂತ ಹೊಟ್ಟೆಯಾಗೆ ಎಲ್ಲಾ ಮಾತನ್ನೂ ಆಡಿಬಿಟ್ಟ,

"ಸೂತಕವೆ ಕೆಡುತಾವೆ, ಹತ್ತಿರನೆ ಬರಬೇಡ
ಪುತ್ರ ಸಂತಾನ ತೊಡೆಯ ಮೇಲೆ ಹಾಕ್ಕೊಂಡು
ಮಕ್ಕಳಿಗೆ ಹಾಲು ಕೊಡಬೇಡ ತಾಯಮ್ಮ.
ಮಾರಣ್ಣ ಮಿಂಚಾದ, ಮೈಲಣ್ಣ ಗುಡುಗಾದ,
ದೊಡ್ಡೋನು ಜುಂಜಪ್ಪ ದೊಡ್ಡ ಬರಸಿಡಿಲಂಗೆ
ಚಿನ್ನಮ್ಮನ ಒಡಲಲ್ಲಿ ಸಿಡಿದವನೋ, ಬೆನ್ನಲ್ಲಿ ಸಿಡಿದವನೋ,"

ತಾಯಿಗೆ ಹೇಳೋದೆಲ್ಲಾ ಹೇಳಿ ಸೋಮವಾರ ಹೊತ್ತು ಹುಟ್ಟಿ ಬರೋಹೊತ್ತಿಗೆ ಚನ್ನಮ್ಮನ ಬೆನ್ನಾಗೆ ಮಾರಣ್ಣ ಮೈಲಣ್ಣ ಹುಟ್ಟವರೆ. ಮಿಂಚು ಗುಡುಗಿನ್ನಾಗೆ ದೊಡ್ಡೋನು ಜುಂಜಪ್ಪ ದೊಡ್ಡ ಬರಸಿಡಲು ಬಡಿದ್ಹಾಂಗ ಚಿನ್ನಮ್ಮನ ಬೆನ್ನೀಲೆ ಒಡೆದವನೋ. ಮಾರಣ್ಣಾ ಮೈಲಣ್ಣಾ ಜೊತೆಯಲ್ಲಿ ಜುಂಜಪ್ಪ ಮೂರು ಮಕ್ಕಳು ಹೋಗಿ ಮೂರಾಳುದ್ದದ ಹುತ್ತದ ಮ್ಯಾಲೆ ಕುಂತವ್ರೆ. ಚಿನ್ನಮ್ಮ ಮುಟ್ಟಲಾರದೆ ನಿಂತವ್ಳೆ. ಕಣ್ಣೀರು ಕರಕೊಂಡು ನೋವೆಲ್ಲಾ ತಡಕೊಂಡು ಶಿವ ಸ್ತೋತ್ರಣೆ ಮಾಡಿಕೊಂಡು ಕುಂತವ್ಳೆ. ಜುಂಜಪ್ಪ ಬೆನ್ನಲ್ಲಿ ಒಡೆದಿರೋ ರಭಸಕ್ಕೆ ಕೆಂಗುರಿ ಮಲ್ಲೇಗೌಡಗೆ ಅದು ಕೇಳೈತೆ. 'ನನ್ನ ಹೆಂಡತೀನ ಕಳುವಾರಹಳ್ಳಿ ಬೇಲಿಯಾಗೆ ಬಿಟ್ಟು ಬಂದುಬಿಟ್ಟೆ. ಪಡುವಲ ಕಡೆಯಿಂದ ಮೋಡ ಆಗಿ ಬಿಡ್ತು. ತೆಂಕಣ ಕಡೆಯಿಂದ ಧಡಾರನೆ ಸಿಡಿಲು ಹೊಡೆದು ಬಿಡ್ತಲ್ಲ. ಅವನ ಚಿನ್ನ ಬೆಳ್ಳಿ ಬಂಗಾರ ಚಿನ್ನಮ್ಮನ ಮೈ ಮೇಲೆ ಬೇಕಾದಷ್ಟು ಇದ್ದವು. ಅದನ್ನು ಅವುಚಿಕೊಳ್ಳೋದಿಕ್ಕೆ ಸಿಡಿಲು ಹೊಡೆದಿರಬೇಕು. ಸತ್ತಿದ್ರೆ ಒಡವೆ ವಸ್ತ್ರ ತೊಗೊಂಡು ಬರಾನ. ಬದುಕಿದ್ರೆ ಕರಕೊಂಡೇ ಬರಾನ' ಅಂತ ತಿರುಗಾ ಅಲ್ಲೀಗೆ ಓಡಿ ಹೋಗಿಬಿಟ್ಟ ಕೆಂಗುರಿ ಮಲ್ಲೇಗೌಡ. ಅಲ್ಲಿಗೆ ಓಡಿ ಹೋಗಿ ನೋಡಿದಾಗ ಅವಳು ಮೂಡು ಮುಖವಾಗಿ ಕುಂತಕೊಂಡಿದ್ದಳು. ಓಡಿ ಹೋಗಿ 'ಚಿನ್ನಮ್ಮಾ' ಅಂದ. "ಯಾರಿಗೆ ಹೊಡೀತು ಮುಂಗಾರಿ ಸಿಡಿಲು?."

'ಮಾಯದ ಮಳೆ ಬರಲಿಲ್ಲ. ಮದಗದ ಕೆರೆ ತುಂಬಲಿಲ್ಲ.
ಮುಂಗಾರಿ ಸಿಡಿಲಾನೆ ನನಗೆ ಹೊಡಿಯಾಲಿಲ್ಲ.
ಕೆಂಗುರಿ ಮಲ್ಲೇಗೌಡ, ಜುಂಜಪ್ಪ ಬೆನ್ನಾಗೆ ಒಡೆದವನೆ.
ಮಾರಣ್ಣ ಮೈಲಣ್ಣ ಪಕ್ಕ್ಯಾಗೆ ಒಡೆದವರೆ,
ಮೂವರು ಮಕ್ಕಳು ಒಡೆದ್ಹೋಗಿ
ಮೂರು ದಿನವಾಗಲಿ, ಮೂರು ತಿಂಗಳಾಗಲಿ,
ಮೂರಾಳು ಉದ್ದದ ಹುತ್ತದ ಮ್ಯಾಗೆ ಕುಂತವ್ರೆ,
ಹತ್ರಕ್ಕೆ ಹೋಗಬಾರ್ದಂತೆ, ಮಕ್ಕಳನ್ನು ಎತ್ತಿಕೋಬಾರ್ದಂತೆ,

ಹೊಕ್ಕುಳ ಕೊಯ್ಯ ಬಾರದಂತೆ,
ಮಕ್ಕಳನ್ನು ತೊಡೆ ಮ್ಯಾಲೆ ಹಾಕ್ಕೋಬಾರದಂತೆ,
ಸೂತಕ ಹರೀತಾವೆ, ಸಾಸ್ತ್ರ ಕೆಡುತಾವೆ ಅಂತ ಹೇಳವ್ನೆ.

ಇಷ್ಟು ಕರ್ತವ್ಯ ಇಲ್ಲಿ ನಡೀತು ಕಣೋ ಕೆಂಗುರಿ ಮಲ್ಲೇಗೌಡ."

"ನಡಿ ಹೋಗಾನ ಇವಾಗ" ಅಂದ ಕೆಂಗುರಿ ಮಲ್ಲೇಗೌಡ.

"ಎಲ್ಲಿಗೆ ಹೋಗಾನ?" ಅಂದ್ಲು.

"ಮೊದಲ ಹೆರಿಗೆ ಮೊದಲ ಬಾಣಂತನ ಮೂರು ದಿನ ಬೇಲಿ ಹೊರಗೆ ಆಲೆ ಸೊಪ್ಪು ತಂದು ನುಗ್ಗೆ ಸೊಪ್ಪು ತಂದು ತಿಂದರೂ ತವರು ಮನೆಯವರೇ ಮಾಡಬೇಕು ಚಿನ್ನಮ್ಮ ಈ ಬಾಣಂತನ. ಗಂಡನ ಮನೆಯೋರು ಬೇಕಾದಷ್ಟು ಬದುಕಿದ್ದರೂನೂ ಮಾಡಬೇಕಾದ್ದಿಲ್ಲ ಇದು. ಹಿಡಿ ನಿನ್ನ ತವರು ಮನೆ ದಾರೀಯಾ".

ಅಂದು ಚಿನ್ನಮ್ಮನ್ನ ಕರಕೊಂಡು ಹೋಗಿ ಕಂಬೇರ ಮನೆ ಹತ್ರ ಬಿಟ್ಟು ಬಿಟ್ಟ. ಅವರ ಅಣ್ಣದೀರಿಗೆಲ್ಲ ಹೇಳಿಕೆ ಕೊಟ್ಟು ಇವನು ಇವನ ಆವಿನ ದನದ ತಾವಕ್ಕೆ ಹೋದ. ಚಿನ್ನಮ್ಮನ್ನ ಮೂರು ತಿಂಗಳು ಆಚೆಗೆ ಇಟ್ಟುಕೊಂಡು ಗುಡಲು ಕಟ್ಟಿ ಏನೆಲ್ಲಾ ಬಾಣಂತನ ಮಾಡೋದೆಲ್ಲ ಮಾಡಿಕೊಂಡು ಮೂರುತಿಂಗಳು ತುಂಬಿದ ಕೂಡಲೆ ಚಿನ್ನಮ್ಮನ ದೇವಸ್ಥಾನದ ತಾವ ಕರಕೊಂಬಂದು ಪೂಜಾರಪ್ಪಗಳು ಬಂದು ಅಲ್ಲಿ ನಾಮಕರಣ ಮಾಡಿ 'ತೀರ್ಥ ಹಾಕ್ರಯ್ಯ' ಅಂದರು. ಪೂಜಾರಪ್ಪಗಳು ಯಾರು ಅಂದರೆ ಮಾರನವರ ಗೊಲ್ಲರು. ಅವರೇ ಏಳು ಮಂದಿ ಗುರು ಪೂಜಾರಪ್ಪಗಳು.

"ಯಾರಪ್ಪ ಚಿನ್ನಮ್ಮನೋರ ಅಣ್ಣದೀರು?" "ಕಂಬೇರಗೊಲ್ಲರು ನಾವೇಯಾ".

"ಚಿನ್ನಮ್ಮಾ ಮದುವೆಯಾಗಿ ಹನ್ನೆರಡು ಹನ್ನೆರಡು ಇಪ್ಪತ್ತನಾಲ್ಕು ವರುಷ ಆಯಿತು. ಮದುವೆಯಾಗಿ ಹದಿನೈದು ದಿವಸದಾಗೆ ಕೆಂಗುರಿ ಮಲ್ಲೇಗೌಡ ಹೋಗಿ ಕೊಂಕಿ ಜರಿಮಲೆ ಸೀಮ್ಯಾಗೆ ದನ ಮೇಯಿಸ್ಕೊಂತಾ ಇದ್ದ. ಗಂಡ ಹೆಂಡತಿ ಇಬ್ಬರೂ ಒಂದು ಹಾಸಿಗೆ ಮೇಲೆ ಬಾಳಲಿಲ್ಲ, ಬದುಕಲಿಲ್ಲ. ಇಪ್ಪತ್ನಾಲ್ಕು ವರುಷ ಕಾಡಿನಾಗೆ ಇದ್ದ. ಇವರು ಒಟ್ಟಿಗೆ ಬಾಳಲಿಲ್ಲ. ಬದುಕಲಿಲ್ಲ. ಗಂಡನ್ನ ಬಿಟ್ಟು ತವರು ಮನೆಯಾಗೆ ಇದ್ದಳು. ಇವು ಗಂಡಗೆ ಹುಟ್ಟಿದೋವೋ ಮಿಂಡರಿಗುಟ್ಟಿದ ಮಕ್ಕಳೋ ಇವು. ಇವಕ್ಕೆ ನಾಮಕರಣ ಶಾಸ್ತ್ರ ನಾವು ಮಾಡಲ್ಲ" ಅಂದರು.

ಆ ಮಕ್ಕಳು ಇನ್ನೂ ಹುತ್ತದ ಮ್ಯಾಲೆ ಐದಾರೆ. ಕರ್ಕೊಂಡು ಬಂದಿಲ್ಲ. ಚಿನ್ನಮ್ಮನ ಅಣ್ಣದೀರು ಸುಮ್ಮನೆ ಚಿನ್ನಮ್ಮಗೆ ಒಂದೀಟು ತೀರ್ಥಹಾಕಿ ಶುದ್ಧ ಆತು ಅಂತ ಗುರುಪೂಜಾರಪ್ಪ ಹೇಳೋ ಹೊತ್ತಿಗೆ ಚಿನ್ನಮ್ಮ ಗಂಡನ ಜೊತೆ ಬಾಳಲಿಲ್ಲ ಅಂತ ಮಿಂಡರಿಗುಟ್ಟಿದ ಮಕ್ಕಳಿಗೆ ನಾಮಕರಣ ಮಾಡಲಿಲ್ಲ. ಚಿನ್ನಮ್ಮನೋರ ಅಣ್ಣದೀರು

ಇರ್ತಾರ ಅಲ್ಲಿ ಈ ಮಾತು ಕೇಳಿದ ಮೇಲೆ? ತಲೆ ಮೇಲೆ ತಣ್ಣೀರು ಬಟ್ಟೆ ಹಾಕ್ಕೊಂಡು ಎಲ್ಲಾ ದೇವಸ್ಥಾನದ ಕಡೆ ಹೋದರು. ಬಟ್ಟುಭಂಡಾರ ಹಾಕ್ಕೊಂಡು ಮೂಡಲು ಉದಿಯಾಗೆ ಮುಖ ಮಾಡ್ಕೊಂಡು ಕುಂತಿದ್ಲು ಚೆನ್ನಮ್ಮ. ಮೂರು ತಿಂಗಳು ಮುಗಿದ್ವು.. ಮೂರು ತಿಂಗಳು ಮುಗಿದ ಕೂಡಲೇ ಕುಪ್ಪಳಿಸಿ ನೆಗೆದು ಎದ್ದುವಂತೆ ಮೂರು ಮಕ್ಕಳು. ಕುಪ್ಪಳಿಸಿ ನೆಗೆದು ಎದ್ದವನೇ ಜುಂಜಪ್ಪ

'ಯವ್ವಾ' ಅಂದ, 'ಯಾರೇನಂದ್ರು ಹೇಳವ್ವಾ, ಒಂದೇ ಒಂದು ಮಾತು, ಉರಿಗಣ್ಣು ಬಿರು ಬಾಣ ಬಿಟ್ಟು ಈಗಲೇ ಅವರ ವಂಶ ನಿರ್ನಾಮ ಮಾಡಿ ಬಿಡ್ತೀನಿ. ಹೇಳು ಚೆನ್ನಮ್ಮಾ' ಅಂದ.

'ಜುಂಜಪ್ಪಾ ಇಪ್ಪತ್ತನಾಲ್ಕು ವರ್ಷ ಗಂಡನ ಜೊತೆಗೆ ಇರ್ಲಿಲ್ಲ, ನೀವು ಗಂಡಗೆ ಹುಟ್ಟಿದ ಮಕ್ಕಳಲ್ಲ. ಮಿಂಡ್ರಿಗೆ ಹುಟ್ಟಿದ ಮಕ್ಕಳು ನೀವು. ಏಳು ಮನೆ ಗುರುಪೂಜಾರಿಗಳು ಏಳು ಮನೆಗೆ ಹೋಗೋದು, ಈ ಮಕ್ಕಳಿಗೆ ಗುರುಪೂಜೆ ಮಾಡೋಲ್ಲ ಅಂದರು ಜುಂಜಪ್ಪ. ನಮ್ಮ ಅಣ್ಣದೀರು ಅವರ ಮನೇಗೆ ಹೋದರು'.

'ಇಷ್ಟೇ ಏನಮ್ಮಾ,'
'ಹೌದು'

"ತಾಯಿ ನುಡಿಯೇ ಮುಂದಿನ ನುಡಿಯನ್ನ, ನೀನು ಒಂದು ವಾಕ್ಯ ಕೊಟ್ಟುಬಿಡು, ಅವರ ಮನೆ ನಿರ್ವಂಶ ಮಾಡಿ ಬಿಡ್ತೀನಿ. ಉರಿಗಣ್ಣು ಬಿಟ್ಟು ಸುಟ್ಟು ಬಿಡ್ತೀನಿ".

"ಸ್ವಾಮಿ ಈಶ್ವರನ ಮಗ ವೀರಭದ್ರ.. ನಿಂತಲ್ಲೆ ಏಳು ಉಕ್ಕಿನ ಬಾಗಿಲಿಗೂ ನೂರಾಒಂದು ಕಂಬಕ್ಕೂ ಬಿಟ್ಟು ಬಿಡು ನಿನ್ನ ಉರಿಗಣ್ಣು. ಅತ್ತ ಕಡೆ ಮಾತ್ರ ಬಿಡಬೇಡ ನಿನ್ನ ಉರಿಗಣ್ಣು."

ಸುಮ್ಮನೆ ಹಿಂಗೆ ದೃಷ್ಟಿ ಇಟ್ಟು ನೋಡಿದ್ನಂತೆ ಏಳು ಗೂಡಿನ ದನ, ಏಳು ಗೂಡಿನ ಆವು, ಏಳುಗೂಡಿನ ಮೇಕೆ, ಮಕ್ಕಳು ಮರಿ ಎಲ್ಲಾ ಜ್ವರ ಬಂದು ವಾಂತಿ ಬೇಧಿ ಹತ್ತಿ ಮಲಗಿಬಿಟ್ಟುವು. ಆ ಘಳಿಗೆಯಾಗೇನೇ ಬಂತು ನಮ್ಮ ವಂಶಕ್ಕೆ ಏನೋ ವಿಪತ್ತು ಕಾಲ ಅಂತ ಹೇಳಿ ಓಡಿಬಂದು ಚೆನ್ನಮ್ಮನ ಹತ್ರ 'ತಪ್ಪು' ಅಂತ ಕೇಳೋ ಹೊತ್ತಿಗೇನೆ

"ಚೆನ್ನಮ್ಮಾ ಭೂಮಿ ಭೂಲೋಕ , ಭೂಮಿ ನರಲೋಕದಾಗೆ ನಮ್ಮದು ತಪ್ಪಾತು" ಅಂದಾಗ

"ಇವತ್ತಿನ ದಿನದಾಗೆ ಈ ಏಳು ಜನ ಪೂಜಾರಿಗಳ ಕೈಲಿ ನಾಮಕರಣ ಮಾಡಿಸದೇ ಇದ್ರೆ ಈ ಮಕ್ಕಳಿಗೆ ನನ್ನ ಹಟ್ಟಿ ಉಳಿಯಲ್ಲ ಚೆನ್ನಮ್ಮ.

ಹಳೆಹಟ್ಟಿ, ಕಿರೆಹಟ್ಟಿ, ಚಿಕ್ಕ ದೇವರ ಹಟ್ಟಿನಾಗೆ ಅಕ್ಕನೆ ಆಲದ ಮರ, ಹಿರೆಹಟ್ಟಿ ಕೊಂಕಿ ಜರೆಮಲೆ ಸೀಮೆಯಾಗೆ ನೂರಾ ಒಂದು ಲಿಂಗ ಇರೋದು ಅಲ್ಲಿ. ಕೊಂಕಿ ಜರಿಮಲೆಗೆ ಹೋಗಬೇಕು ನಡಿಯಮ್ಮ ಅಲ್ಲಿಗೆ" ಅಂತ ಆಗ ಕೊಂಕಿ ಜರಿಮಲೆಗೆ ಕರಕೊಂಡು ಹೋಗೋಕೆ ಅಂತ ಅಲ್ಲಿಗೆ ಹೊರಟರು ಮೂರು ಜನ ಮಕ್ಕಳು.

ಅಲ್ಲಿ ನೂರಾ ಒಂದು ಲಿಂಗ ಬಿತ್ತನೆ ಮಾಡಿರೋದು ಅಲ್ಲಿನ ನಮ್ಮ ಹಿರಿಯೋರು. ಅಲ್ಲಿ ಹಿರೇಹಟ್ಟಿ ಕಿರೇಹಟ್ಟೀಲಿ ದೊಡ್ಡ ದೇವರು, ಚಿಕ್ಕದೇವರು, ರೊಪ್ಪದ ಹೆಣ್ಣು, ದೊಡ್ಡ ಆಲದ ಮರ, ಅಲ್ಲಿ ನಮ್ಮ ಗುರು ಪೂಜಾರಪ್ಪಗಳು ಇದಾರೆ. ಕೊಂಕಿ ಜರಿಮಲೆಗೆ ಹೋಗಬೇಕು ಅಂತ ಚಿನ್ನಮ್ಮ ಅಲ್ಲೀಗೆ ಹೊರಟಳು ಕೊಂಕಿ ಜರಿಮಲೆಗೆ. ಅಲ್ಲಿ ಇವರದ್ದು ನೂರಾ ಒಂದು ಲಿಂಗ. ಇವತ್ತು ಸ್ಥಾಪನೆ ಮಾಡಿರಾದು ಅಲ್ಲಿ ಗುರುಹಿರಿಯರು ಅಲ್ಲಿ ಚಿಕ್ಕ ದೇವರ ಹಟ್ಟಿ, ಅಲ್ಲಿಗೆ ಹೋಗಬೇಕು ಇವತ್ತು. ಅಲ್ಲಿಗೆ ಹೊರಡೋ ಹೊತ್ತಿಗೆ ಚಿನ್ನಮ್ಮ ಮೂವರು ಮಕ್ಕಳನ್ನೂ ಕರಕೊಂಡು ಕೊಂಕಿ ಜರಿಮಲೆ ಸೀಮೆಗೆ ಹೊರಟವಳೆ. ಗುರು ಪೂಜಾರಪ್ಪಗಳಿಗೆ ಅಲ್ಲೂ ನಾಮಕರಣ ಮಾಡದಂಗೆ ಮಾಡಬೇಕು ಅಂತ ತಾಳೆ ಗರಿಯಾಗೆ ಓಲೆ ಬರೆದು 'ಇವರು ಅಪ್ಪಗುಟ್ಟಿದ ಮಕ್ಕಳಲ್ಲ, ಮಿಂಡರಿಗೆ ಹುಟ್ಟಿದ ಮಕ್ಕಳನ್ನು ಕರಕೊಂಡು ಬರ್ತಾರೆ. ಗುರುಪೂಜಾರಪ್ಪಗಳೆ ಅಲ್ಲೂ ಗುರುಪೂಜೆ ಮಾಡಬ್ಯಾಡ್ರಿ' ಅಂತ ಓಲೆ ಬರದ್ರು.

"ಒಂಬತ್ತು ದಿನಕ್ಕೆ ಹೊಸ ಹಟ್ಟಿ ಮೂಡಲಲ್ಲಿ ನಾಮಕರಣ ಮಾಡರಿ, ಗುರುಪೂಜೆ ಮಾಡರಿ ಅಂತ ಜುಂಜಪ್ಪಗೆ ಹೇಳಿದ್ರೆ ಅಲ್ಲಿಂದ ಇಲ್ಲಿಗೆ ಮಾರನ ಹಳ್ಳಿಯಿಂದ ಇಲ್ಲಿಗೆ ಹೇಳಿ ಕಳಿಸವ್ರೆ, ನೀವು ಅಪ್ಪಗೆ ಹುಟ್ಟಿದ ಮಕ್ಕಳು ಅಲ್ಲವಂತೆ, ನಾವು ಇಲ್ಲೂ ನಿಮಗೆ ನಾಮಕರಣ ಮಾಡಲ್ಲ ಅಂದರು. ಕೇಳಿದಿಯೇನೋ ಜುಂಜಪ್ಪ" ಅಂದ್ಲು.

"ಅಮ್ಮಾ, ಅವರು ನುಡಿಯೋ ಮಾತು, ಗುರು ಪೂಜಾರಪ್ಪಗಳ ಮಾತು ಕೇಳೋಕೆ ಈ ಕಿವೀಗೆ ಆಗಾಕಿಲ್ಲ. ನೀನು ಒಂದು ಮಾತು ನುಡಿದು ಬಿಡು, ಉರಿಗಣ್ಣು ಬಿಟ್ಟು ಬಿಡ್ತೀನಿ. ಉರಿದೋಗ್ಲಿ. ನೂರಾ ಒಂದು ಲಿಂಗ ಚಿತ್ರದೇವರು, ಕಾಟಮದೇವರ ಪೂಜೆ ಮಾಡಿ ಅಲ್ಲಿಂದ ನಾನೇ ಈ ಎರಡು ಮಕ್ಕಳಿಗೆ ನಾಮಕರಣ ಮಾಡ್ತೀನಿ. ಕೊಡು ನಿನ್ನ ಆಶೀರ್ವಾದ" ಅಂತ ಸೀದಾ ದೃಷ್ಟಿ ಇಟ್ಟು ನೋಡಿದ್ನಂತೆ,

ಕಂಚಿನ ಗೋಡೆ, ಕಂಚಿನ ಬಾಗಿಲು, ಕಂಚಿನ ಕಂಬ, ಉಕ್ಕಿನ ಕಂಬ ಎಲ್ಲಾನೂ ನುಚ್ಚು ನೂರಾಗಿ ಬಿದ್ದು ಬಿಟ್ಟುವಂತೆ. ಹಸುವಿನ ಮಣಕಗಳೆಲ್ಲಾ ಹುಲ್ಲು ನೀರು ಬಿಟ್ಟು ಮನಗಿತು. ಇವರು ಏಳು ಜನ ಗುರು ಪೂಜಾರಪ್ಪಗಳು ಮಾತ್ರ ಹೊರಕ್ಕೆ ಅವ್ರೆ.. ಇಲ್ಲೇ ಗುಂಡಪ್ಪನ ಮನೆ ತಾವಕ್ಕೆ ಒಂದು ಬಯಲು ಮಂಟಪದ ತಾವ ಮಾರಿ ಹೊಡಕೊಂತ ಓಡಿ ಹೋಗೋವ್ರಂತೆ ಗುರುಪೂಜಾರಪ್ಪಗಳು. ಆ ಸಂದರ್ಭದಾಗೇನೇ

'ಗೌರಸಂದ್ರದ ಮಾರಕ್ಕ ನೀನು ಎಲ್ಲಿದ್ರೂನೂನು ಏಳು ಜನರ ದಾರೀಗೆ ಮುಳ್ಳಾಕಮ್ಮ' ಅಂದ ಜುಂಜಪ್ಪ. ಒಂದು ಹರಕು ಸೀರೆ ಉಟ್ಟುಕೊಂಡು ಒಂದು ಪಿಂಜಿ ತಲೆ ಮೇಲಿಟ್ಟುಕೊಂಡು 'ಅಕ್ಷಯವಾಗಲಿ ಸಿರಿವಂತರ ಮಕ್ಕಳಿಗೆ ಒಂದು ಐದು ಪೈಸೆ ದಾನ ಧರ್ಮ ಹಾಕ್ರಪ್ಪಾ' ಅಂತ ಅಂದಳಂತೆ ಈ ಕೊರವಂಜಿ ಗೌರಸಂದ್ರದ ಮಾರಕ್ಕ ಅವರು ಏಳು ಜನಕ್ಕೆ. 'ತಿರಿಕೊಂಡು ತಿನ್ನೋ ಮುಂಡೆ ನಾವು ಹಾಳಾಗಿ, ನಮ್ಮೂರೆ ಹಾಳಾಗಿ, ನಾವು ಓಡಿಹೋಗೋ ಹೊತ್ತಿಗೆ ಮಂಕಾಳಮ್ಮನ ಮೋರೆ ಬೀಳಾನ ಅಂತ ನಾವು ಹೋಗ್ತೀವಿ. ತಳ್ಳರೋ ಅವಳನ್ನು ಆಚೆಗೆ' ಅಂದ ಪೂಜಾರಿ ದೊಡ್ಡಯ್ಯ. ಅವಳನ್ನು ಹಿಡಿದು ಎಳೀಬೇಕು ಅಂತ ಅವಳನ್ನು ಹಿಡಕೋಬೇಕು ಅನ್ನೋ ಹೊತ್ತಿಗೆ ನೆಲಕೆ ಬಡಿದು ಮ್ಯಾಲಕ್ಕೆ ಎತ್ತಿದಳಂತೆ ಕೈನ, ನೂರಾ ಒಂದು ಜನ ಕೊರವಂಜಿಯೋರೇ ಆಗಿಬಿಟ್ಟರು.

"ಮಹಾತಾಯಿ ನಿನ್ನ ಹೀಯಾಳಿಸಿದ್ದು ಸರಿವಂತರ ತಪ್ಪು. ಈ ಮಹಾತಪ್ಪು ಅಪರಾಧಾನ ನಿನ್ನ ಹೊಟ್ಟೆಯಾಗಿಟ್ಟುಕೊಂಡು ನಮ್ಮೂರಿಗೆ ಹೊಕ್ಕಿರೋ ಮಾರಿ ಹೊಡಕೊಡಬೇಕು ಕಣಮ್ಮಾ."

"ನಿಮ್ಮೂರಿಗೆ ಬಂದಿರೋ ಮಾರೀನಾ ನಾನು ಹೊಡಕೊಡಬೇಕಾಗಿದ್ದರೆ ಕರೆ ಕಂಬಳಿ ಜಾಡಿ ಹಾಸಬೇಕು. ನಾಲ್ಕು ಮೂಲ್ಯಾಗೆ ನಾಲ್ಕು ಹಣ ಇಡಬೇಕು. ನಾಲ್ಕು ವಿಭೂತಿ ಗಟ್ಟಿ ಇಡಬೇಕು. ಮೂಡೆದ ಧೂಪ, ಮೂಡೆದು ದಪ್ಪ ಕೆಂಡ ತರಬೇಕು. ಏಳು ಕೊಂಬಿನ ಮ್ಯಾಕೆ ಹೊಡೆದು ತರಬೇಕು. ಏಳೇಳು ಉದ್ದ ತಾಳೆ ಮರಗಳ ಮ್ಯಾಲೆ ಹತ್ತಿ ಬುಡ ಕಡೀಬೇಕು. ಅನ್ನದ ರಾಶಿ ಹುಯ್ಯಬೇಕು. ಎದುರು ರೋಮದ ಕುರಿ ಕಡೀಬೇಕು. ಇಷ್ಟು ಮಾಡಿದ್ರೆ ನಿಮ್ಮೂರಿಗೆ ಬಂದಿರೋ ಮಾರಿ ನಾನು ಹೊಡೀತೀನಿ."

"ಮಹಾತಾಯಿ ನೀನು ಹೇಳಿರೋದ್ರಾಗೆ ಒಂದೂ ನಾವು ಮಾಡಕ್ಕೆ ಆಗೋದಿಲ್ಲ. ಏಳು ಕೊಂಬಿನ ಮ್ಯಾಕೆ ಹೋತ ಅಂದ್ರೆ ಎಲ್ಲೈತೆ. ಎರಡು ಕೊಂಬು ನಾಲ್ಕು ಕಾಲು ಒಂದು ಬಾಲ ಯಾವ ಪ್ರಾಣೀ ಜಾತಿಗೂ ಇರೋದೇಯಾ. ಏಳು ಕೊಂಬಿನ ಮ್ಯಾಕೆ ಹೋತಾನ ಎಲ್ಲಿ ತತ್ತಾರೆ. ಏಳಾಳುದ್ದದ ತಾಳೆ ಮರದಮ್ಯಾಗೆ ಹತ್ತಿ ಹೆಂಗೆ ಬುಡ ಕಡೀತಾರೆ?"

"ಏಳು ಕೊಂಬಿನ ಮ್ಯಾಕೆ ಹೋತ ಅಂದರೆ ಕೋಳಿ ಹುಂಜ ಸ್ವಾಮಿ. ಕೋಳಿ ಹುಂಜಕೆ ಏಳು ಕೊಂಬಿದ್ದಾವೆ. ಇನ್ನು ಯಾವುದಕ್ಕೂ ಏಳು ಕೊಂಬಿಲ್ಲ. ಮೇಟಿ ದನದ ರಾಶಿ ಹುಯ್ಯಬೇಕು ಅಂದರೆ ಗುಂಡಣ್ಣೋರು ಕಣ ಮಾಡಿಸಿದಾರೆ. ಮೇಟಿ ತಲೆಮ್ಯಾಕೆ ಒಂದು ವಿಘ್ನೇಶ್ವರನ ಮಾಡಿ ಇಕ್ಕುತೀರಾ."

"ಅದು ಇವರಿಗೆ ಎಡೆ ಬೇಕಲ್ಲ. ಎದುರು ರೋಮದ ಕುರಿ ಕಡೀಬೇಕು ಅಂದಳಲ್ಲ. ಭೀಮನ ಹೆಂಡತಿಗೆ ಅಂದ್ರೆ ಭೀಮನ ಮಗ ಘಟೋತ್ಕಚನ

ಅಮ್ಮನಿಗೆ ಮೂರು ರೋಮದ ಮುಖ ಇದ್ದಿದ್ದು ಇನ್ನು ಯಾರಿಗೂ ಇರ್ಲಿಲ್ಲ. ಇವು ಒಂದೂ ಮಾಡಕ್ಕೆ ಆಗಲ್ಲ ನಾವು. ಊರಿಗೆ ಬಂದಿರೋ ಮಾರಿ ಹೊಡೀಬೇಕು ಕಣಮ್ಮಾ." ಅಂದಾಗ

"ಇವತ್ತು ಮೂವತ್ತು ಮೂರು ನಾರಿ ಮುತ್ತೈದೆಯರನ್ನು ಕರಕೊಂಬನ್ನಿ. ಆ ಮಕ್ಕಳಿಗೆ ತೀರ್ಥಹಾಕಿ ಜೆನ್ನಿಗೆ ಹಾಕಿರಿ ಅಂದಾಗ ಏನು ವಿಚಿತ್ರ ಈ ನನ್ನ ಮಕ್ಕಳ್ರಾ , ಮಿಂಡ್ರಿಗೆ ಹುಟ್ಟಿದ ಮಕ್ಕಳ್ರಾ, ಇವ್ರಿಗೆ ನಾಮಕರಣ ಮಾಡಲ್ಲ ಅಂತ ಮಾರನಹಳ್ಳಿ ಕಡೆಯೋರು ಓಲೆ ಬರೆದಿರೋದು ನೋಡಿಕೊಂಡು ಜುಂಜಪ್ಪನ್ನ ಹೀಯಾಳಿಸಿದೀರಲ್ಲೋ. ಬಿಡ್ತಾನೆ ನೋಡಿ ಎರಡು ಉಕ್ಕಿನ ಬಾಣ, ಜುಂಜಪ್ಪ,. ನಿರ್ವಂಶ ಆಗಿ ಹೋಗ್ತದೆ ಈಗ ನಿಮ್ಮ ವಂಶವೆಲ್ಲ. ಈಗ ನೀವು ಏಳು ಜನರೂ ಕೂಡಲೇ ತಣ್ಣೀರು ಬಟ್ಟೆಯಾಗೆ ಹೋಗಿ ಹುತ್ತಕೆ ಪೂಜೆ ಮಾಡಿ ಹುತ್ತಕೆ ಹಾಲು ಹುಯ್ದು, ಚಿನ್ನಮ್ಮನ್ನ ಕರಕೊಂಬಂದು ಊರಮುಂದಕೆ ನಿಲ್ಲಿಸಿಕೊಂಡು ಜೆನ್ನಿಗೆ ಹೊಯ್ಯಿಸಿ ನಾಮಕರಣ ಮಾಡಿದ್ದೇ ನಿಜವಾದರೆ ನಿಮ್ಮ ಹಟ್ಟಿ ಮ್ಯಾಗಳದು, ನಿಮ್ಮ ಊರಮ್ಯಾಗಳದು, ಗೋಳು ಕೊಡಲ್ಲ ಹೋಗ್ರೋ ನನ್ನ ಮಕ್ಕಳರಾ ಇವಾಗ" ಅಂತ ಓಡಿಸಿಬಿಟ್ಟಳು.

ಅಲ್ಲಿಂದ ಬಂದು ಜುಂಜಪ್ಪಗೆ ಎಲ್ಲರೂ ಸೇರಿ ಭಕ್ತಿ ವಿಶೇಷದಿಂದ ನಾಮಕರಣ ಮಾಡ್ತವ್ರೆ.

"ಹುತ್ತದ ಪೂಜೆ ಮಾಡಿ, ಚಿನ್ನಮ್ಮನ್ನ ಕರಕೊಂಡು ಆ ಘಳಿಗೆಯಾಗೆ ಬಾರಮ್ಮ ನಿನಗೆ ತೀರ್ಥಹಾಕಿ ಜೆನ್ನಿಗೆ ಹಾಕಿ ನಾಮಕರಣ ಮಾಡ್ತೀವಿ" ಅಂತ ಅವರು ಏಳು ಜನ ಗುರುಪೂಜೆಗೆ ಹೋಗೋವ್ರು ಅಂತಾರೆ.

"ಯಮ್ಮೋ, ತಿರುಗಿ ಬಂದವ್ರೆ ಅವರು ನಾವು ಗುರುಪೂಜೇವ್ರು ತೀರ್ಥ ಹಾಕ್ತೀವಿ ಅಂತ. ಆ ಗೌರಸಂದ್ರದ ಮಾರಿ ಅಲ್ಲಿ ಹೇಳವ್ಳೆ ಇವ್ರಿಗೆ ಎಲ್ಲಾನೂ. ಈಗ ಕೆಟ್ಟು ಬಂದವ್ರೆ. ಇವರ ಕೈಲಿ ನಾನು ನಾಮಕರಣ ಮಾಡಿಸಿಕೊಳ್ಳಲ್ಲ. ನಾನೇ ನಿಮಗೆ ಪಟ್ಟದ ಪೂಜಾರಿ ಕಣಮ್ಮ."

"ಜುಂಜಪ್ಪ, ಮುಂದೆ ನಮ್ಮ ವಂಶಕ್ಕೆ ಏನು ವಕ್ರ ಘಳಿಗೆ ಬತ್ತಾವೋ ಏನೋ. ಆದ್ರೆ ನಾನು ಅನ್ನೋದು ಬ್ಯಾಡಾ. ನೀನೂ ಅನ್ನೋದು ಇರಬೇಕು. ಅವರು ಏಳುಮನೆ ಗುರುಪೂಜಾರಿಗಳು. ಗುರುಪೂಜೆ ಅವರ ಕಡೆಯಿಂದಲೇ ಸೇರಬೇಕು ಕಣಪ್ಪಾ. ಇವತ್ತು ನೀನು ಹುಟ್ಟಿದ ಮಗಾ. ಕೋಪ ತಣ್ಣಗೆ ಮಾಡಿಕೋ. ನಾನು ಅವರ ಕಡಿಂದಲೆ ನಾಮಕರಣ ಮಾಡಿಸ್ತೀನಿ ಕಣಪ್ಪಾ" ಅಂದಳು.

"ನಿನಗೆ ಅಕ್ಷಯವಾಗಲಿ ಹೋಗಿಬಾರಮ್ಮಾ" ಅಂದ.

ಮೂರು ಮಕ್ಕಳೂನೂ ಬೆತ್ತಲ ಬೋರಾಗಿ ಒಂದು ಹುತ್ತದ ಮೇಲೆ ನಿಂತಿದ್ರಂತೆ ಆಕೆ ಬರೋವರೆಗೂ. ಊರಾಗೆ ನಾಮಕರಣ ಮಾಡಿ, ಆವಿಗೆ ಹಾಕಿಸಿ, ಜೆನ್ನಿಗೆ ಹಾಕಿ ಹೋಳಿಗೆ ತುಪ್ಪದ ಆರೋಗಣೆ ಮಾಡಿಸಿ, ತುಂಬಾ ಜನಕ್ಕೆ ಊಟಾ ಮಾಡಿಸಿ, ಮೈಲಣ್ಣ, ಮಾರಣ್ಣ, ಜುಂಜಪ್ಪ ಮೂವರನ್ನು ಕರಕೊಂಡೋಗಿ ,

"ತಪ್ಪು ಕಣೋ ಜುಂಜಪ್ಪ ಹಿರೇವನು ನೀನು, ಹಾಲನೂ ನೀರನೂ ನಿನ್ನ ಹೊಟ್ಟೆಗೆ ಬೆರೆಸ್ಕೋ ಬೇಕು ನೀನು ಈಗ. ನಮ್ಮದು ಮಹಾತಪ್ಪು ಆಗಿಹೋಯ್ತು" ಅಂತ ಹೇಳಿ ಆಗ ಅವರು ಊಟಕ್ಕೆ ಬಡಿಸಿ ಅವರೆಲ್ಲಾ

"ಜುಂಜಪ್ಪ ದೊಡ್ಡೋನು ನೀನು, ನಮಗೆ ಅಗತ್ಯವಾದೋನು ನೀನು" ಅಂತ ಹೇಳಿ "ಹೋಗಿ ಬಾರೆ ಚಿನ್ನಮ್ಮ ನಿನ್ನ ಮಕ್ಕಳನ್ನು ಕರಕೊಂಡು" ಅಂತ ಏಳುಮನೆ ಗುರುಪೂಜಾರಪ್ಪಗಳು ಆಗ ಮಕ್ಕಳೊಂದಿಗೆ ಚಿನ್ನಮ್ಮನ್ನ ಸಾಗಹಾಕಿದರಂತೆ.

ಅಲ್ಲಿಂದ ಬಂದು ಒಂಬತ್ತು ದಿನದಾಗೆ ಸಾಲು ಬೇವಿನಮರದ ಕಳುವಾರಹಳ್ಳಿ ದಿಣ್ಣೆಯಾಗೆ ನಿಂತುಕೊಂಡ ಜುಂಜಪ್ಪ

"ಯಮ್ಮಾ ನೀನಿಲ್ಲಿ ನಿಲ್ಲಬೇಕು, ಮಾರಣ್ಣ, ಮೈಲಣ್ಣ ಏಣುಕಲ್ ಗುಡ್ಡದಾಗೆ ಕೆಂಗುರಿ ಮಲ್ಲೇಗೌಡ ದನ ಬಿಟ್ಟುಗೊಂಡು ಐದಾನೆ, ಅವನೇ ನಿಮ್ಮಪ್ಪ. ಅವನ್ನ ಕರಕೊಂಡು ದನ ಹೊಡಕೊಂಡು ಅಲ್ಲಿಂದ ಇಲ್ಲೀಗೆ ಬರಬೇಕು ತಮ್ಮದೀರ. ಮೂಡಲ ಸೀಮೆದಿಂದ ಪಡುವಲ ಸೀಮೆ ತನಕ ಮಿಂಡಿರಿಗುಟ್ಟಿದ ಮಕ್ಕಳಿಗೆ ನಾಮಕರಣ ಮಾಡಲ್ಲ ಅಂದಿದ್ದು ಕೆಟ್ಟಮಾತು ಆಯಿತಲ್ಲ ನಮ್ಗೆ. ನಾವು ಅಪ್ಪಗೆ ಹುಟ್ಟಿದ ಮಕ್ಕಳೋ ಯಾರಿಗೆ ಹುಟ್ಟಿದ ಮಕ್ಕಳೋ, ನಮ್ಮಪ್ಪನ್ನ ಮೂರು ಮಾತು ಕೇಳಲೇ ಬೇಕಲ್ರೋ ತಮ್ಮದೀರ ಇವತ್ತು" ಅಂದ ಜುಂಜಪ್ಪ.

ಮಾರಣ್ಣ ಮೈಲಣ್ಣ ಹೋಗಿ ಆವಿನ ದನ ಹೊಡಕೊಂಡು ಕೆಂಗುರಿ ಮಲ್ಲೇಗೌಡನ್ನ ಕರಕೊಂಡು ಮೂರುದಿನಕ್ಕೆ ಕಳುವಾರಹಳ್ಳಿ ಬೇವಿನ ಹಳ್ಳಿ ದಿಣ್ಣೆಗೆ ಬಂದು, ಸಾಲು ಬೇವಿನ ಮರದಡಿ ನಿಂತುಕೊಂಡರು. ಕೆಂಗುರಿ ಮಲ್ಲೇಗೌಡನ್ನ ನೋಡಿ ಜುಂಜಪ್ಪ

'ಯಪ್ಪೋ' ಅಂದ.

"ಯಾಕೆ ಜುಂಜಪ್ಪಾ" ಅಂದ ಕೆಂಗುರಿ ಮಲ್ಲೇಗೌಡ.

"ನಾವು ಮಿಂಡಿರಿಗುಟ್ಟಿದ ಮಕ್ಕಳೋ? ನಿನಗೆ ಹುಟ್ಟಿದ ಮಕ್ಕಳೋ? ಈ ದೇಶದಿಂದ ಆ ದೇಶಕ್ಕೆ ಓಲೆ ಬರೆದು ನಮ್ಗೆ ನಾಮಕರಣ ಮಾಡಬಾರದು

ಅಂದವ್ರೆ. ನಮ್ಗೆ ಈ ಮಿಂಡಿರಿಗುಟ್ಟಿದ ಮಕ್ಕಳ ಸತ್ಯ ಹೇಳ್ಬೇಕು ಕೆಂಗುರಿ ಮಲ್ಲೇಗೌಡ. 'ಹುಟ್ಟಿಸಿದ ತಂದೆಯಾಗಲೀ ನಾಲಗೆ ಕುಲ ಕೊಯ್ದು ನ್ಯಾಯ ಮಾಡಬೇಕು. ಹಡೆದ ತಾಯಾಗಲಿ ಎದೆ ಕುಯ್ದು ನ್ಯಾಯ ಮಾಡಬೇಕು.' ನಾವು ಯಾರ ಮಕ್ಕಳು? ನೀನು ಒಡೆದು ಹೇಳಬೇಕು ಒಂದು ಮಾತು".

"ಈಶ್ವರನ ಮಗ ನೀನು ಈರಭದ್ರ ಈರ್ಯೆ ಜುಂಜ. ನಿನ್ನ ಎದುರಿಗೆ ನಿಂತುಕೊಂಡು ಮಾತನಾಡಕ್ಕೆ ನಮ್ಮ ಕೈಲಿ ಸಾಧ್ಯವಾಗಲ್ಲ. ನಿನ್ನ ಉರಿಗಣ್ಣು , ಉಕ್ಕಿನ ಬಾಣ ತಗ್ಗಿಸಿ ತಣ್ಣಗೆ ಮಾಡ್ಕೋ, ನಾನು ಮುಂದೆ ನ್ಯಾಯ ಕೊಡ್ತೀನೋ ಮಗನೆ."

"ಮಾಡ್ಕಂಡಿದೀನಿ ಹೇಳಪ್ಪೋ" ಅಂದ.

"ಹನ್ನೆರಡು ಹನ್ನೆರಡು ಇಪ್ಪತ್ತನಾಲ್ಕು ವರುಷ ಮಕ್ಕಳ ಫಲವಿಲ್ಲದೆ ಚಿನ್ನಮ್ಮ ಹೋಗಿ ಅವತ್ತು ಈಶ್ವರನ್ನ, ಗೌರಸಂದ್ರದ ಮಾರಕ್ಕನ್ನ ವರ ಕೇಳಿದ್ಲು. ಶಿವನ ತಾವಕ್ಕೆ ಹೋಗಿ ವರಾ ತಂದಿದ್ದು ಮಾರಕ್ಕ. ಇದೇ ಗೌರಿ ಮರದ ಅಡಿಯಾಗೆ ಶಿವನ ಮಗ ವೀರಭದ್ರ ಚಿನ್ನಮ್ಮನ ಬೆನ್ನಾಗೆ ಒಡೆದವನೆ ನೀನು. ಮಾರಣ್ಣ ಮೈಲಣ್ಣ ಅಕ್ಕಾಗೆ ಪಕ್ಕ್ಯಾಗೆ ಒಡೆದರು. ನೀವು ಮೂವರೂ ವರ ಪುತ್ರರು. ನನಗೆ ಹುಟ್ಟಿದೋರೂ ಅಲ್ಲ. ಮಿಂಡ್ರಿಗೆ ಹುಟ್ಟಿದೋರೂ ಅಲ್ಲ. ಮಿಂಡ್ರಿಗೆ ಹುಟ್ಟಿದೋರು ಅಂತ ಹೇಳಿದವರ ಮನೆತನ ನಾಶನವಾಗಿ ಹೋಗಲಿ" ಅಂತ ಈ ಲೋಕದಲ್ಲಿ ಸತ್ಯವನ್ನು ಹೇಳಿಬಿಟ್ಟ ಕೆಂಗುರಿ ಮಲ್ಲೇಗೌಡ.

"ಏಳು ಗೂಡಿನ ದನಿನ ಮೇಲಿನ ಆಸೆ ಎಲ್ಲಾ ಬಿಟ್ಟು ನೀನು ನಿನ್ನ ಹೆಂಡತಿ ತುಪ್ಪಾ ಅನ್ನ ಉಂಡು ಸುಪ್ಪತ್ತಿಗೆ ಮೇಲೆ ಕಳುವಾರಹಳ್ಳೀಲಿ ಹೋಗಿ ಮನಗಬೇಕು. ಇವತ್ತು ಕಲ್ಲು ನೀರು ಕರಗೋ ಹೊತ್ತಿಗೆ ಚಿನ್ನಮ್ಮ ಇವತ್ತಿನ ದಿನದಾಗೆ ಕೆಂಗುರಿ ಮಲ್ಲೇಗೌಡ ಬಂದು ನಿನ್ನ ಸಂಗ ಮಾಡಿದ್ದರ ಪರಿಣಾಮವಾಗಿ ಒಂಬತ್ತು ತಿಂಗಳ ನೀರು ನಿನಗೆ ನಿಲ್ತದೆ ಚಿನ್ನಮ್ಮ. ನಮ್ಮಪ್ಪ ನಿನ್ನ ಸಂಗ ಮಾಡಬೇಕು. ನಮ್ಮಪ್ಪನ ಪಟ್ಟೆದಟ್ಟಿ ಮುಂಜೆರಗಿಗೆ ತಗುಲಿದರೂ ನಿನಗೆ ಒಂಬತ್ತು ತಿಂಗಳ ನೀರು ನಿಲ್ತದೆ ಚಿನ್ನಮ್ಮ. ಒಂಬತ್ತು ತಿಂಗಳು ತುಂಬಿ ಒಂಬತ್ತು ದಿನಕ್ಕೆ ಮಂಗಳವಾರ ನಿನಗೆ ಹುಟ್ತಾಳೆ ಚಿನ್ನಮ್ಮ. ಆಕೆನೇ ಮಾರಕ್ಕಾ. ತಾಯಮ್ಮ ಮೂರು ಗಂಡಿನ ಮ್ಯಾಗೆ ನಿನಗೆ ಹೊಟ್ಟೆ ಒಳಗೆ ಮಾರಕ್ಕ ಹುಟ್ತಾಳೆ. ನಿನ್ನ ಗಂಡ ಕೂಡ ಸಾಯ್ತಾನೆ. ನೀನು ಮುಂಡೆ ಆಗಿ ತೀರಬೇಕಮ್ಮ ನೀನು. ಮೊದಲಿಗೆ ಹೇಳಿದೀನಿ ಚಿನ್ನಮ್ಮಾ ನಿನಗೆ ನಿನ್ನ ಮನೆತನದಾಗೆ ಹೀಗಂತೆ" ಅಂತ ಹೇಳಿ ಜುಂಜಪ್ಪ

ಹೋಳಿಗೆ ತುಪ್ಪದ ಆರೋಗಣೆ ಮಾಡಿಸಿ ಊಟಕ್ಕೆ ಬಡಿಸಿ ಕಂಬೇರು ಚಿನ್ನಮ್ಮನ್ನ ಸಾಗಹಾಕಿದ.

ಮಟಮಟ ಮಧ್ಯಾಹ್ನ ಸರಿಹೊತ್ತಿನಾಗೆ ಚಿನ್ನಮ್ಮಗೆ ಹೆಣ್ಣುಮಗು, ಅದೇ ಮಾರಕ್ಕ ಹುಟ್ಟಿತು. ಅವತ್ತಿನ ದಿನದಾಗೆ ಕುರಿ ವ್ರತ ತಪ್ಪಿ ಬಲಿ ಕೊಡೋ ಮುಂದೆ ಮಂದೆ ಕುರಿ ನಾಲಗೆ ಹೊರಹಾಕಿದ್ರೆ ದೋಷ. ಹಿಂಗೆ ಕೆಂಗುರಿ ಮಲ್ಲೇಗೌಡನ ಎಲ್ಲಾ ಕುರೀನೂ ನಾಲಿಗೆ ಹೊರಹಾಕಿ ಬಲಿ ಆಗದೆ ಸತ್ತು ಹೋದವು. ಕೊನೆಗೆ ಅವನೇ ಅದಕ್ಕೆ ತಲೆಕೊಟ್ಟು ಸತ್ತ. ಇಲ್ಲಿಗೆ ಕೆಂಗುರಿ ಮಲ್ಲೇಗೌಡನ ಕಥೆ ಮುಗೀತು.

೨.೩.೨. ಸಾಣಿಕೆರೆ ಪುಟ್ಟಣ್ಣನ ಕಾವಲು

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

"ಮಲ್ಲೇಲಿಂಗ, ಕಲ್ಲೇಲಿಂಗ, ಮೈಲಾರಲಿಂಗ, ಅಂಗೈಲಿ ಆರುಕೋಟಿ ಲಿಂಗ, ಮುಂಗೈಲಿ ಮೂರುಕೋಟಿ ಲಿಂಗ , ಶಿವಚಿತ್ರ ಲಿಂಗ, ಕಾಟಮಲಿಂಗ, ಓಬಳ ನರಸಿಂಹ, ನೂರಾ ಒಂದು ದೇವರಿಗೆಲ್ಲಾ ಮಂಗಳಾರತಿ ಮಾಡಿಸಿದ್ದೀನಿ. ಹೋಳಿಗೆ ತುಪ್ಪದ ಆರೋಗಣೆ ಮಾಡಿಸಿದ್ದೀನಿ" ಅಂದ ಜುಂಜಪ್ಪ. ಆವತ್ತಿನ ದಿನದಾಗೆ ಪುರಲಹಳ್ಳಿ ಭೂತನ ಕರೆಸಿ ಕಳುವಾರಹಳ್ಳೀಲಿ, ಏಲೂರ ಹಳ್ಳೀಲಿ ನೂರಾ ಒಂದು ಎಲೆ ಕಟ್ಟಿಸಿದಂತೆ ಸೀಗೆ ಎಲೆ ಜಂಬೆ ಎಲೆಯಾಗೆ ಭೂತಪ್ಪನ ಕೈಲಿ ಕಟ್ಟಿಸಿದನಂತೆ, ಯಾರೂ? ಜುಂಜಪ್ಪ. ಚಿತ್ರದೇವರು ಬ್ಯಾಟೆ ಗುಡ್ಡದ ಬುಡದಾಗೆ ಕುಂತಿದ್ನಂತೆ. ಪುರಲಹಳ್ಳಿ ಭೂತ ನೂರಾ ಒಂದು ದೇವರಿಗೂ ಒಂದು ಎಡೆ ಕೊಟ್ಟು ಇನ್ನೊಂದು ಎಡೆ ಉಳೀತಂತೆ. "ಯಾವ ದೇವರು ಮರೆತಿದ್ದೀಯೋ ನೆನೆಸಿಕೊಳ್ಳೋ ಜುಂಜಪ್ಪ' ಅಂದರೆ "ಸಿಡ್ಲಘಟ್ಟದಾಗಿರೋನು ಕಡೆ ಕೊಟ್ಟಲು ಕಾವಲಮ್ಮ, ಯಾವ ದೇವರನ್ನೂ ಮರೆತಿಲ್ಲ" ಅಂದ. ಪುರಲಹಳ್ಳಿ ಭೂತನಿಗಿಂತ ಈಶ್ವರ ಹೆಚ್ಚಾಗಿರೋದು. ತನ್ನನ್ನೇ ಜುಂಜಪ್ಪ ಮರೆತಿರೋದು, ಜುಂಜಪ್ಪ

ಎಲ್ಲರಿಗೂ ಎಡೆ ಇಟ್ಟ. ಭೂತಪ್ಪನಿಗೆ ಎಡೆ ಇಡೋದು ಮರೆತು ಬಿಟ್ಟಿದ್ದಾನೆ ಈ ನೂರಾ ಒಂದು ದೇವರೆಲ್ಲಾ ಊಟ ಮಾಡ್ತಿರೋವಾಗ ಮೂರು ಆಳುದ್ದ ಗುದ್ದು ಬೀಳೋ ಹಾಗೆ ಬರೆ ಮಣ್ಣು ತಿಂದುಬಿಟ್ಟನಂತೆ ಪುರಲಹಳ್ಳಿ ಭೂತ.

ಎಲ್ಲಾರಿಗೂ ದೊಡ್ಡ ಭೋಜನದ ಊಟಾ ಕೊಟ್ಟು ವೀಳೆ ಕೊಟ್ಟು, ಎಲ್ಲರ್‍ನೂ ಹಿಂದಕ್ಕೆ ಸಾಗಾಕಿ ಜುಂಜಪ್ಪ ಬಂದ. ಪುರಲಹಳ್ಳಿ ಭೂತನಿಗೆ 'ಸಾಣಿಕೆರೆ ಬುಡ್ಡನ ಕಾವಲಿಗೆ ಹೋಗ್ತೀನಿ. ನೀನು ಬರಬಾರದು ಅಂತ ಅಲ್ಲ. ನೂರಾ ಒಂದು ದೇವರಿಗೆ ನೀನು ಕಾವಲಿರಬೇಕು ಅಯ್ಯಾ." ಎಲ್ಲಾ ದೇವರಿಂದನೂ ಆಶೀರ್ವಾದ ಮಾಡಿಸಿ, ತಂದೆ ತಾಯಿಯರನ್ನು ಬಿಟ್ಟು ಅಲ್ಲಿಂದ ಮುಂದೆ ಮಾರಣ್ಣ ಮೈಲಣ್ಣ ಮುಂದೆ ಹೋಗ್ತಾರೆ. ಜುಂಜಪ್ಪ ಹಿಂದೆ ಹೋಗ್ತಾನೆ.

"ಗೋವಿಂದ ಅಂದೋರಿಗೆ ಏನಂದ
ಮುದ್ದು ಮುಳ್ಳಿನ ಗಿರಿ
ಮೂವತ್ತು ಮಾರ ಹಾರಿದಿ ಅಂದು
ಜೈ ಪರಾಕ್ ಜೈ ಪರಾಕ್ ಜೈ ಪರಾಕ್"

ಅಂದನಂತೆ ಪುರಲಹಳ್ಳಿ ಭೂತಪ್ಪ..

'ಲೇಯ್ ಕಂಬೇರ ಚಿನ್ನಿ ಮಗನೇ, ನಿನ್ನ ಲೆಕ್ಕದಾಗೆ ಭೂಮೀಲಿ ಉಪ್ಪಿನಕಾಯಿ ತಿನ್ನೋ ದೇವರಿಗೆಲ್ಲಾ ಒಂದೊಂದು ಎಡೆ ಕೊಟ್ಟೆ. ತಿರುಗಾ ಅವರಿಗೆಲ್ಲಾ ಒಂದೊಂದು ಎಡೆಇಟ್ಟು ಹೋಳಿಗೆ ತುಪ್ಪದ ಆರೋಗಣೆ ಮಾಡಿಸಿದ್ದೆ. ಆದರೆ ನನಗೆ ಮೂರು ಮಣ ಮಣ್ಣು ತಿನ್ನಿಸಿದೆ. ಇವತ್ತು ನನ್ನ ಬಿಟ್ಟು ಹೋಗ್ತೀನಿ ಅಂತ ಅಂತೀಯಲ್ಲಾ, ಸಾಣೆಕೆರೆ ಪುಟ್ಟಣ್ಣನ ಕಾವಲಿಗೆ ಹೊಂಟಿದೀಯಲ್ಲಾ. ಅಲ್ಲಿ ಬರಬಾರದ್ದು ವಕ್ರ ಗತಿ ಬರ್ತದೆ. ಅವತ್ತು ನಾನು ಬರ್ತೀನೋ ಈ ಉಪ್ಪಿನಕಾಯಿ ತಿಂದ ದೇವರು ಬರ್ತಾರೋ ನೋಡಾನ ನಡೆಯಲೇ ನನ್ನ ಮಗನೆ' ಅಂತ ಪುರಲಹಳ್ಳಿ ಭೂತಪ್ಪ ಅಂದುಕೊಂಡ. ಮಾರಣ್ಣ ಮೈಲಣ್ಣ ಮುಂದೆ ಮುಂದೆ ಹೋದ್ರು. ಆವುಗಳು ಅವರ ಹಿಂದೆ, ಆವುಗಳ ಹಿಂದೆ ಜುಂಜಪ್ಪ ನಡೆದ. ದಾರೀಲಿ ಇರುವೋ ಕಾವಲಿನ ದೇವರುಗಳಿಗೆಲ್ಲಾ ಎಡೆ ಕೊಟ್ಟುಕೊಂತಾ ಮುಂದೆ ನಡೆದರು.

"ಸಿದ್ಧರದ ಬೆಟ್ಟದಾ ನೇಗಲದಾಗಿರುವೋಳೆ
ನೇಗಿಲದಾಗಿರುವ ಮಾರಮ್ಮನ ಕಾವಲದಮ್ಮ
ನಾವು ಇವತ್ತಿನ ದಿನದಾಗೆ ನಿನಗೆ ಒಂದು ಎಡೆ ಕೊಟ್ಟಿದೀನಿ."
'ನೂರಾ ಒಂದು ಎಡೆ ಮಾಡಿಕೊಂಡು ನಡೆಯಪ್ಪಾ'
'ನಾವೆಲ್ಲಾ ಒಂದಾಗಿ ಇವತ್ತು ಮುಂದುವರಿಸಿಕೊಂಡು ಹೋಗಬೇಕು'

ಮೂರು ತಿಂಗಳದಾಗೆ ಸಾಣಿಕೆರೆ ಪುಟ್ಟನ ಕಾವಲಿಗೆ ಹೋದ ಜುಂಜಪ್ಪ ಮೂರು ತಿಂಗಳಿಗೆ ಹೋಗಿ ಕೆರೆಯಾಗೆ ನೀರು ಕುಡಿಸಿಕೊಂಡು ಮೂಡು ಮುಖನಾಗೆ ನೋಡಿದರೆ

ಸಾಣಿಕೆರೆ ಪುಟ್ಟಣನ ಕಾವಲಾಗೆ ಹುಲ್ಲು ನೀರು ಬೆಳೆದು ಅಲ್ಲಾಡೋವಂತೆ. ನಾರಾಯಣನೆಂಬೋ ನಾಮಗೊಡಲಿ ಶಿವನೆಂಬೋ ಚಿಪ್ಪುಗೊಡಲಿ ತೊಗೊಂಡು, ನೂರಾ ಒಂದು ದಾರಿ ಮಾಡಿ, ನೂರಾ ಒಂದು ಮುಖಕ್ಕೂ ನೂರಾ ಒಂದು ಆವನ್ನು ಕರೆದು ಬಿಟ್ಟ. ಪುಟ್ಟನ ಕಾವಲಿಗೆ ಆವಿನ ದನ ಬಿಟ್ಟು ಬಿಟ್ಟ ಪಟ್ಟದಟ್ಟಿಯೋನು ದೊಡ್ಡೋನು ಜುಂಜಪ್ಪ.

"ಇವತ್ತಿನ ದಿನದಾಗೆ ಮೂರು ವರುಷ ಮೂರುತಿಂಗಳು ಮೇಯೋದಂತೆ ಅಂತಾ ಹುಲ್ಲುಗಾವಲನ್ನು ಮೂರು ತಿಂಗಳಲ್ಲಿ ಎಲ್ಲಾ ಧೂಳು ಎಬ್ಬಿಸಿಬಿಟ್ಟುವಲ್ಲ. ಇನ್ನು ಯಾವ ಕಾವಲು ತಡೆಯುತ್ತಣ್ಣಾ ನಮ್ಮ ಆವಿನ ದನಕ್ಕೆ" ಅಂದ್ರು ಮಾರಣ್ಣ ಮೈಲಣ್ಣ.

"ಐದು ಖಂಡುಗದ ಅಕ್ಕಿ, ಕೆಂಬತ್ತದ ಗದ್ದೆ ಐತೆ ಅದನ್ನೂ ಮೂರು ತಿಂಗಳು ಮೇಯಲಿ. ಕರೀರಲೆ ಕೆಂಬತ್ತದ ಗದ್ದೆಗೆ ಆವಿನ ದನಾನ" ಅಂದ ಜುಂಜಪ್ಪ.

"ಕೆಂಬತ್ತದ ಗದ್ದೆಗೆ ಆವಿನ ದನ ಕರೀಬೇಕಾಗಿದ್ದರೆ ಜುಂಜಪ್ಪ, ಸಾಣಿಕೆರೆ ಪುಟ್ಟ, ಓಲೆಕಾರರ ಮಗ ಮಾಟ ಮಾಡೋವ್ರ ಮಗ, ನೂರಾ ಒಂದು ಮಾಟ, ಶೂನ್ಯ ಮಂತ್ರ ಮಾಡವ್ನೆ, ಅಂತಾ ಪ್ರವೀಣನಂತೆ ಓಲೆಕಾರತನ ಮಾಡೋದ್ರಾಗೆ. ಅವನ್ನ ಒಂದು ಮಾತ್‌ನಾರೂ ಕೇಳಬೋದಣ್ಣಾ" ಅಂದರು.

"ನಾನು ಮೂರು ಲೋಕದ ಗಂಡ, ಚೇಳಿನ ತಲೆದಿಂಬು ಮಾಡಿಕೊಂಡು ಮಂಚಕ್ಕೆ ಮುಖ ಅಡಿಯಾಗಿ ಮಲಗಿರೋನು ಹಿರೇಜುಂಜ, ನಾನು ಹೋಗಿ ಅವನ್ನ ಕೇಳಬೇಕ ನಿನ್ನ ಕಾವಲಿಗೆ ನಾನು ದನಬಿಡ್ತೀನಿ ಅಂತ, ಏನೂ ಕೇಳಲ್ಲ' ಅಂದ.

ಕೆಂಬತ್ತದ ಗದ್ದೆಗೆ ದನಬಿಟ್ಟು ಮಾರಣ್ಣ ಮೈಲಣ್ಣನ ಜೊತೆಗೆ ಗೋಲಿ ಗಜ್ಜುಗ ಆಡಿಸಿಕೊಂಡು, ಪಗಡೆ ಅಡಿಸಿಕೊಂಡು ಮಲಗವ್ನೆ ಜುಂಜಪ್ಪ. ಸಾಣಿಕೆರೆ ಪುಟ್ಟಣ್ಣ ಏನು ಕೆಲಸ ಮಾಡವ್ನೆ ಅಂದ್ರೆ ನೂರಾ ಒಂದು ಜನ ನಾರಿಯರು ಸಿಹಿನೀರ ಬಾವಿಗೆ ಸೆರೆ ಹಾಕ್ಕೊಂಡವ್ನೆ. "ಸಾಣಿಕೆರೆ ಪುಟ್ಟನ ನೀರು ಕುಡಿಯಾಕ್ಕಾಗಲ್ಲ. ಕಲ್ಯಾಣಿ ಬಾವಿಗೆ ಹೋಗಿ ನೀರು ತರಾನ ನಡೀರಮ್ಮಾ" ಅಂತ ಹೊರಟು ನೀರು ತಗಂಡು ಬರೋವಾಗ ಯಾರೋ ಒಬ್ಬನು ಮೂಡು ಮುಖದಾಗೆ ಮುಖ ಹಾಕ್ಕೊಂಡು ಮಲ್ಗವ್ನೆ. ಕೆಂಬತ್ತದ ಗದ್ದೆ ಕೆದರಿತ್ತಂತೆ, ಇವನ ಹಟ್ಟಿ ದನ ಎಲ್ಲಾ ತಿಂದು ಬಿಟ್ಟಿತ್ತು.

"ಅತ್ತೆಮ್ಮ" ಅಂದಳು.

"ಯಾಕಮ್ಮಾ"

"ಗೊಲ್ಲಗೋವು ಯಾವ ಪಾಳೆಗಾರನೋವೋ ಆವಿನ ದನವೆಲ್ಲ ಬಂದು ಈ ಕೆಂಬತ್ತದ ಗದ್ದೆಯಾಗೆ ಕೆದರಿವೆಯಲ್ಲಮ್ಮಾ.

"ನಡೀರಿ ಸಾಣೆಕೆರೆ ಪುಟ್ಟಣ್ಣಂಗೆ ಹೇಳೋಣ ನಡೀರಿ".
ಅವನ ಅರಮನೆ ಮುಂದೆ ನಿಂತು ಎಲ್ಲಾ ಸೇರಿ ಹೇಳವ್ರೆ
"ಯಾವ ಸೀಮೆಯವ್ನೋ, ಯಾವ ಗೊಲ್ಲನವ್ನೋ, ಯಾವ ಪಾಳೇಗಾರನವ್ನೋ ನಿನ್ನ ಕೆಂಬತ್ತದ ಗದ್ಯಾಗೆ ಇಳಿದಾವಲ್ಲ ಸಾಣೆಕೆರೆ ಪುಟ್ಟಾ" ಅಂತ ನೂರಾ ಒಂದು ಜನ ಸೂಳೇರು ಹೇಳವ್ರೆ.

"ಅವನೆಂತಾ ಗಂಡು ಕೆಂಬತ್ತದೆ ಗದ್ದೆಗೆ ದನಾ ಬಿಡಬೇಕಾಗಿದ್ರೆ" ಅಂತ ಹೇಳಿ ಅರಮನೆ ಮಹಡಿ ಮೇಲೆ ನಿಂತ್ಕಂಬಿಟ್ಟ. ಮೇಲ್ಮಹಡಿ ಮೇಲೆ ನಿಂತುಕೊಂಡು ಮಾಡಬಹುದಾದಂತಾ ಮಾಟ ಎಲ್ಲಾ ಮಾಡಿಬಿಟ್ಟ. ಜುಂಜಪ್ಪ ಅವನ್ನೆಲ್ಲಾ ಕರೆಕಲ್ಲುಗಳನ್ನು ಮಾಡಿ ನಿಲ್ಲಿಸಿ ಬುಟ್ಟನಂತೆ ಮಾಟ ಮಂತ್ರಗಳನ್ನೆಲ್ಲಾ. ಇಲ್ಲೀಗೆ ಅವನ ಮಾಟ ಮಂತ್ರಗಳೆಲ್ಲಾ ಮುಗಿದಾವೆ. 'ಇನ್ನೂ ಉಳಿದಿದಾನೆ ಈಗೇನು ಗತಿ ಮಾಡಾನ' ಅಂತ ಕೇಳಿದ ಸೂಳೇರ್ನ ಪುಟ್ಟ. "ನೀನು ಮಾಟ ಮಂತ್ರದಾಗೆ ನಮ್ಮ ಗಂಡಂದಿರನ್ನ ಹಿಡಿದಿಟ್ಟುಕೊಂಡಿದೀಯಾ. ನಿನ್ನ ವಂಶ ಹಾಳಾಗಿ ಹೋಗ" ಅಂದರು ಪುಟ್ಟಣ್ಣನ್ನ ಸೂಳೇರು. ಕೊನೆಗೆ ಅವನ ಎಲ್ಲಾ ವಿದ್ಯೇನೂ ಮುಗಿದಾವೆ.

"ಒಂದೇ ಒಂದು ಗಂಡು ವಿದ್ಯೆ ಇರಾದು. ಅದನ್ನು ಮಾಡ್ತೀನಿ ಇವಾಗ. ನೀವು ನೂರಾ ಒಂದು ಜನ ಉಟ್ಟಿರೋದು ಮುಟ್ಟಿನ ಸೀರೆ ಬಿಚ್ಚಿ ಕಟ್ಟಬೇಕು" ಅಂದ.

ಸೂತಕ ಸಂಬಂದ ಅಂದ್ರೆ ಆಗಲ್ಲ ಜುಂಜಪ್ಪಗೆ. ಅದಕ್ಕೆ ಅವರು ಉಟ್ಟ ಬಟ್ಟೆ ಬೀಸಿ ಒಗೆದು ಬಿಟ್ಟವ್ನೆ ಪುಟ್ಟಣ್ಣ. ನೂರಾ ಒಂದು ಜನರ ಮುಟ್ಟು ಸೀರೆ ಬಿಚ್ಚಿಸಿ ಇಟ್ಟವ್ನೆ. ಅದನ್ನು ಸಿಂಬೆಸುತ್ತಿ ಎಸೆದವನೆ. ಅದು ಜುಂಜಪ್ಪನ ಮುಂದಿನ ಸಾಲಿನಾಗೆ ಹೋಗಿ ಬಿದ್ದೈತೆ. ಮುಂದಕ್ಕೆ ಮಾರಣ್ಣ, ಹಿಂದಕ್ಕೆ ಮೈಲಣ್ಣ , ಮಧ್ಯಕೆ ಬಿದ್ದವನೆ ಜುಂಜಪ್ಪ. ಶಾಸ್ತ್ರವು ಕೆಡತಾವೋ ಸೂತಕದ ಬಟ್ಟೆ ಬಿದ್ದೈತೆ, ಎದ್ದೇಳ್ರೋ ಮ್ಯಾಕೆ ಮಾರಣ್ಣ ಮೈಲಣ್ಣ ಇವನು ಮಾಡಬಾರದ್ದು ಮಾಡಿಬಿಟ್ಟವನೆ. ಕಲ್ಲೇಲಿಂಗ, ಮಲ್ಲೇಲಿಂಗ, ಮೈಲಾರಲಿಂಗ, ಚಿತ್ರಲಿಂಗ, ಕೋಡುಗಲ್ಲ ಬಸವಣ್ಣ ಅಂತ ಬಿದ್ದವನೆ. ಇದ್ದೆಲ್ಲಾ ದೇವರನ ನೆನೆದವನೆ, ಜಾಗರಣೆ ಮಾಡವನೆ, ಒಂದೇ ಒಂದು ದೇವ್ರು ಬರಲಿಲ್ಲ. ಆ ಸೂತಕ ಸಂಬಂಧಕ್ಕೆ ಒಂದೇ ಒಂದು ದೇವರೂ ಬರಲಿಲ್ಲ. ಅಲ್ಲಿಗೆ ಬರಲೇ ಇಲ್ಲ.

"ಅಣ್ಣಾ" ಅಂದರು.
"ಏನ್ರಲೇ ತಮ್ಮದೀರಾ?"
"ಆ ಸೂತಕ ಸಂಬಂಧಕ್ಕೆ ಒಂದೇ ಒಂದು ದೇವರೂ ಇಲ್ಲೀಗೆ ಬರಲಿಲ್ಲ.

ಮೂರು ಜಾವದಾಗೂ ಪುರಲಹಳ್ಳಿ ಭೂತನ್ನ ನೆನೆಸಿದಿಯೇನಣ್ಣಾ,"

"ಅಗಾಳ್ರಲೋ, ಅದೊಂದನ್ನ ಮರೆತಿದ್ದೆ. ಗೋವಿಂದ ಗೋವಿಂದ ಗೋವಿಂದಾ" ಅಂತ ಅಂದ.

ಆಗ ಮುರಲಹಳ್ಳಿ ಭೂತ "ಏನೂ?" ಅಂದ.

"ನೀನೂ ನನ್ನ ಕೈಬಿಟ್ಟೆಯೇನೋ" ಅಂದ ಜುಂಜಪ್ಪ.

"ಅವತ್ತು ನೂರಾ ಒಂದು ಎಡೆ ಇಟ್ಟಾಗ ನನ್ನನ್ನು ಮರೆತಿದ್ದೆ. ಇವತ್ತು ನೀನು ಮಾಡಿದ್ದಕ್ಕೆ ಅನುಭವಿಸು, ನೀನು ಎಡೆಇಟ್ಟ ನೂರಾ ಒಂದು ದೇವರು ಬಂದು ನಿನ್ನ ಬಿಡಿಸಲಿ" ಅಂದ ಮುರಲಹಳ್ಳಿ ಭೂತಪ್ಪ.

"ಮರೆತಿದ್ದು ಮರೆವಿದ್ದು ಸರಿವಂತರ ತಪ್ಪಲ್ಲ. ನಿನ್ನ ಹೊಟ್ಟೆಯಾಗೆ ತಪ್ಪು ಇಟ್ಟುಕೊಳ್ಳಪ್ಪ" ಅಂದ ಜುಂಜಪ್ಪ.

"ಅಲ್ಲಿ ಮರ್ತು ಬಂದಿದ್ದಕ್ಕೆ ಒಂದೀಟು, ಈಗ ಈ ಅಪತ್ತು ಬಂದಿದ್ದಕ್ಕೆ ಒಂದೀಟು ತಪ್ಪು ಕಾಣಿಕೆ ಕೊಡ್ತೀನಿ, ಹೊಡಿಯಲೇ ಮುರಲಹಳ್ಳಿ ಭೂತಪ್ಪ" ಅಂದ.

"ಸೋಮವಾರ ಹೊತ್ತು ಹುಟ್ಟೋ ಮೊದಲು ಈ ಕಷ್ಟ ಹೊಡಿಯೋದು ನನಗಿರಲಿ ಮಾರಣ್ಣ, ಮೈಲಣ್ಣ" ಅಂದ ಮುರಲಹಳ್ಳಿ ಭೂತಪ್ಪ.

"ದತ್ತೂರಿನ ಬಲಗೈಯಾಗೆ ಹಿಡಕೊಂಡ ಆಕಾಶದ ಕಡೆ ಆರು ಹೊಡೀತೀನಿ, ನಿಂತ ಮೆಟ್ಟಿಗೆ ಅಲುಗೋನಲ್ಲ ಮುರಲಹಳ್ಳಿ ಭೂತಪ್ಪ ನಾನು, ಜುಂಜಪ್ಪ ಇದ್ದಲ್ಲೇ ನೀವುಗಳು ಧೈರ್ಯವಾಗಿ ಇರ್ರೋ ಮಾರಣ್ಣ ಮೈಲಣ್ಣ,".

ಪಟ್ಟೆದಟ್ಟಿಯೋನು ದೊಡ್ಡೋನು ಜುಂಜಪ್ಪ ನೋಡ್ತಿದ್ದಂಗೆ, ಹನ್ನೆರಡು ಹನ್ನೆರಡಡಿ ಮೊಳ ಮೇಲಕ್ಕೆ ಹಾರಿ ಮುರಲಹಳ್ಳಿ ಭೂತಪ್ಪ, ಆ ಬ್ಯಾತಾಳ, ಕೋಪದಾಗೆ ಎರಡು ತುಂಡು ಕಡಿದುಬಿಟ್ಟು. ಮಂದಾರ ಗಿರಿ ಬುಡುದಾಗೆ ಬೆಂಕಿ ಹಾಕಿ ಅವನ್ನೆಲ್ಲಾ ಸುಟ್ಟು ಬೂದಿ ಮಾಡಿ ಬಿಟ್ಟನಂತೆ ಆ ಬಟ್ಟೆನೆಲ್ಲಾ. ಬೂದಿಮಾಡಿ ನಾಮ ಮಾಡಿ ಧರಿಸಿಕೊಂಡು ಬಿಟ್ಟನಂತೆ.

"ನೋಡು ಜುಂಜಪ್ಪ ನೀನು ದೊಡ್ಡೋನೋ ನಾನು ದೊಡ್ಡೋನೋ. ಸೊಕ್ಕಿನಲ್ಲಿ ಎದುರು ನಿಲ್ಲೋರಿಗೆ ನೀನು ದೊಡ್ಡೋನು, ಸೂತಕ ಸಂಬಂಧಗಳ ಮಾಟ ಅಡ್ಡ ಇಡೋರ್ನ ಹೊಡೆಯೋದ್ರಲ್ಲಿ ನಾನು ದೊಡ್ಡೋನು" ಅಂತ ಭೂತಪ್ಪ ಅಂದರೆ

"ಹೌದು ಕಣೋ ಮುರಲಹಳ್ಳಿ ಭೂತ" ಅಂದ ಜುಂಜಪ್ಪ

"ಆವತ್ತಿನ ದಿನದಾಗೆ ಓಲೆಗಾರರ ಗಂಡ, ಮಾಟಗ ಮಾಡೋರ ಗಂಡ ಈ ಬವಣೆಯಾಗೆ ನಾವು ಗೆದ್ದಿದೀವಿ. ಮಾರಣ್ಣ ಮೈಲಣ್ಣ ಈ ಕೆಂಬತ್ತದ ಗದ್ಯಾಗೆಲ್ಲಾ ನೀವು ಮೇಯಿಸ್ಕಳ್ಳಿ. ನಾನು ಹೋಗಿ ಆ ಸಾಣಿಕೆರೆ ಪುಟ್ಟನ್ನ ಒಂದು ಕೈ ನೋಡಿಕೊಂಬರ್ತೀನಿ. ಅವನ ಅರಮನೆಗೆ ಹೋಗಿ" ಅಂತ ಹೊರಟ ಜುಂಜಪ್ಪ.

ಪುರಲಹಳ್ಳಿ ಭೂತಪ್ಪ "ಮಾಟಗ ಮಾಡೋರ ಗಂಡ ಓಲೆಗಾರರ ಗಂಡ ನೂರಾ ಒಂದು ಜನ ಸೂಳೇರ ಸೆರಗು ಸೇರಿರೋ ಪುಟ್ಟನ್ನ ಮೀರಿಸೋ ಅಂಥ ಶೂರ ಬಂದು ನಿಂತವ್ನೆ, ಹೊರಗೆ ಬಂದು ಮೂರು ಮಾತನಾಡಬಾರದೇನೋ, ಮೂರು ಮಾರುದ್ದ ಇರೋ ಈ ಹುಡುಗನ ತಾವ ತಟಕ್ಕನೆ" ಅಂದ.

ಗೇಣುದ್ದ ಹೊಟ್ಟೆಯೋನು ಪುರಲಹಳ್ಳಿ ಭೂತ "ಹೊರಗೆ ಬಾರೋ ಪುಟ್ಟೇ ಗೌಡ" ಅಂದ. ಪುರಲಹಳ್ಳಿ ಭೂತನ್ನ ಕಂಡು ಅವನಿಗೆ ಅಡ್ಡಬಿದ್ದ ಸಾಣಿಕೆರೆ ಪುಟ್ಟಣ್ಣ.

"ನೂರಾ ಒಂದು ಸೂಳೇರ ಜೊತೆ ಪುಟ್ಟಣ್ಣ ನಿಂತಿದ್ದೀಯಲ್ಲಾ"

"ಸ್ವಾಮಿ, ನಮಗೆ ಅರಿವಿರಲಿಲ್ಲ. ನಾವಿರೋ ಕಡೆಯಿಂದ ನಮ್ಮನ್ನ ತಂದು ಇಲ್ಲಿ ಇಟ್ಕೊಂಡವನೆ. ಇವನ ವಂಶ ನಾಶನ ಆಗಿ ಹೋಗಲಿ" ಅಂತ ಶಪಿಸಿದರು ಆ ನೂರಾ ಒಂದು ಜನ ಹೆಣ್ಣುಮಕ್ಕಳು.

ನೂರಾ ಒಂದು ಜನ ಹೆಣ್ಣು ಮಕ್ಕಳನ್ನು ಕರಕೊಂಡು ಹೋಗಿ ಅವರವರ ಗಂಡಂದಿರಿಗೆ ಹೆಂಡತೀರನ್ನ ಮಾಡಿ ಹೆಂಡತೀರಿಗೆ ಗಂಡಂದಿರನ್ನು ಮಾಡಿ, ತಾಯಿದೀರಿಗೆ ಮಕ್ಕಳನ್ನು ಮಾಡಿ, ಮಕ್ಕಳಿಗೆ ತಾಯಂದರನ್ನು ಮಾಡಿ ಒಂದಕ್ಕೆ ಒಂಬತ್ತಾಗಿ ಬೆಳೀಲಿ ನಿಮ್ಮ ವಂಶ ಅಂತ ಪುರಲಹಳ್ಳಿ ಭೂತ ಆಶೀರ್ವಾದ ಕೊಟ್ಟು

"ಜುಂಜಪ್ಪ ನನ್ನ ವಾರ ಇವತ್ತು. ನನ್ನ ಬಂಡಿ ಬಾಗಿನಗಳನೆಲ್ಲ ಬಂಡಿಮೇಲೆ ಹೇರಿಕೊಂಡು ಹೋಗಿ ಬಿಡಬೇಕು ಇವತ್ತು. ನೀನು ಈವಾಗ ಮಾಡಿದಂತೆ ಯಾವುದೇ ಅನುವು ಆಪತ್ತು ಬಂದ್ರು ನನ್ನನ್ನು ಕರಿ. ಬಂದು ನಿನಗೆ ಸಹಾಯ ಮಾಡ್ತೀನಿ" ಅಂತ ಹೇಳಿ ಹೊರಟ ಪುರಲಹಳ್ಳಿ ಭೂತಪ್ಪ. ಶನಿವಾರದ ಹೊತ್ತಿಗೆ ಪುರಲಹಳ್ಳಿ ಭೂತಪ್ಪಗೆ ಸತ್ಯವಾದ ಊಟ ಕೊಟ್ಟೇ ಬಿಟ್ರು. ಅಷ್ಟು ಹೊತ್ತಿಗೆನೇ ಜುಂಜಪ್ಪ, "ಬೇವಿನ ಹಳ್ಳಿ ಕಳುವಾರಹಳ್ಳಿ ಎಲ್ಲಾ ಕಡೆಯಿಂದ ನಿನಗೆ ಬಲಿ ಕೊಡಿಸ್ತೀನಿ, ಮೊದಲ ಪೂಜೆ ನಿನಗೆ ನಂತರದ ಪೂಜೆ ನನಗೆ.. ಮೊದಲು ಕಾಯಿ ಒಡೆಯೋದು ನಿನಗೆ" ಅಂತ ಹೇಳಿದ ಜುಂಜಪ್ಪ.

ಮೂರು ವರುಷ ಮಾರಣ್ಣ, ಮೈಲಣ್ಣ, ಜುಂಜಪ್ಪ ಮೂವರೂ ಸಾಣಿಕೆರೆ ಪುಟ್ಟಣ್ಣನ ಕಾವಲಿನಾಗೆ ಆವಿನದನ ಮೇಯಿಸಿದರು. ಕೆಂಬತ್ತದ ಗದ್ದೆಯಲ್ಲಿ ಹೊಲವೆಲ್ಲ ಮೇಯಿಸವನೆ ಮಾರಣ್ಣ ಮೈಲಣ್ಣರ ಜೋಡೀಲಿ. ಮೂರುವರುಷ ರಾಜ್ಯಭಾರ ಆಳವ್ರೆ ಹೊರಡಬೇಕು ಅನ್ನೋವಷ್ಟರಲ್ಲಿ ಸಾಣಿಕೆರೆ ಪುಟ್ಟನ ಮನೆಯಲ್ಲಿ ಅವನಿಗೆ ಆನೆ ಅಂಬಾರಿ ಐಬೋಗ. ಹೀಗೆ ಐತೆ ನೋಡ್ರಿ;

ಅವನು ಒಂದಾದ ಮೇಲೆ ಒಂದು ಕಾವಲಿಗೆ ಹೋಗಿದಾನೆ. ಅವು

ಸಾಣಿಕೆರೆ ಪುಟ್ಟನ ಕಾವಲು.
ಉಂಡೆ ಬುಳ್ಡಪ್ಪನ ಕಾವಲು,
ಬಾಬಾ ಬುಡ್ಡನ ಗಿರಿಕಾವಲು,
ಚಿಂಡೂರು ಗೊಂದಿ ಕಾವಲು,
ಬಾಳೆ ಮಲೆ ಬಚ್ಚಿಮಲೆ, ಜರಿಮಲೆ, ಕರಿಮಲೆ,
ಉದ್ದಾರಿಕನ ಉರಿವೆ ಕಣಿವೆ ಕಾವಲು,
ಮಾರಿಕಣಿವೆ ಕಾವಲು,
ಬೂದಾಳು ಭದ್ರನ ಕಾವಲು,
ಏಣುಕಲ್ಲು ಗುಡ್ಡದ ಕಾವಲು,
ಗುಡ್ಡೆಗಳ್ಳಿ ಹೊರೆಯಾದೊಂದು ಕಾವಲು,
ಗುಡ್ಡದ ರಂಗೇಗೌಡನ ಕಾವಲು,
ಬರಗೂರು ರಾಮೇಗೌಡನ ಕಾವಲು,
ಹುಲಿಕುಂಟೆ ತಮ್ಮಣ್ಣನ ಕಾವಲು ದಾಟಿ ಬರುವಲ್ಲಿಗೆ
ಅಲ್ಲಿಗೆ ತುಂಬಿತು ಜುಂಜಪ್ಪಗೆ ಹನ್ನೆರಡು ವರುಷವಲ್ಲೊ.

೨.೩.೩. ಹುಲಿಕುಂಟೆ ತಮ್ಮಣ್ಣನ ಕಾವಲು

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.
ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

ಜುಂಜಪ್ಪನಿಗೆ ಹನ್ನೆರಡು ವರ್ಷ ತುಂಬಿತು. ಅಲ್ಲಿ ಬರಬೇಕಾಗಿದ್ರೆ ಒಂದು ಹೊಟ್ಟೆ ಕರ ತೊಗೊಂಡು ಹೋಗಿ ಕಂಬೇರ ಗೊಲ್ಲರು, ಪಾಳೆಗಾರರ ಜೊತೆ ಸೇರಿ ಅಲ್ಲಿ ಮಾಟ ಮಾಡಿಸಿ ದಾರೀಲಿ ಹೂಳಬೇಕು. ಜುಂಜಪ್ಪನ ದನ ಬರೋ ದಾರೀಲಿ ಹೂಳಬೇಕು. ಆದ್ದರಿಂದ ಜುಂಜಪ್ಪನ ದನ ಸಾಯಬೇಕು. ಮಾರಣ್ಣ ಮೈಲಣ್ಣ, ಜುಂಜಪ್ಪರೂ ಸಾಯಬೇಕು ಅಂತ ಯೋಚ್ನೆ ಮಾಡಿ ಅಲ್ಲಿ ಮಾಟ ಮಾಡಿಸಿ ಕರುವಿನ ಹೂಳಿದಾರೆ. ಇದರಾಚೆಗೆ ಜುಂಜಪ್ಪಂದು ಕಥೆ ಮಹತ್ವ ಇರಾದು.

ಇದಕ್ಕೆ ಮೊದಲು ನೋಡಿ ದೇವರ ದಯಮಾರ ಕಂಬಕ್ಕ ಅವರದ್ದು ಒಂದು ತಲೆ. ದೇವರ ದಯಮಾರ ಸತ್ತ. ಒಂದು ತಲೆ ಕಳೀತು.

ಆಮೇಲೆ ಕೆಂಗುರಿ ಮಲ್ಲೇಗೌಡ ಹುಟ್ಟಿದ್ದು, ಅವನು ಹೊನ್ನಟ್ಟಿ ಆಲೆಗೌಡನ ಮನೆಯಾಗೆ ಬೆಳೆದಿದ್ದು, ಜಾನಕಲ್ ದೊಡ್ಡಕ್ಕ ಆಲೆಗೌಡನ ಮಕ್ಕಳಿಗೆ ಮದುವೆ ಮಾಡಿಸಿದ್ದು. ಚಿನ್ನಮ್ಮನ್ನ ಮದುವೆ ಆಗಿದ್ದು, ಜುಂಜಪ್ಪ ಮಾರಣ್ಣ ಮೈಲಣ್ಣ ಮಾರಕ್ಕ ಹುಟ್ಟಿದ್ದು ಅಲ್ಲಿಗೆ ಇನ್ನೊಂದು ತಲೆ ಕಳೀತು.

ಮಟಮಟ ಮದ್ಯಾಹ್ನ ಸರಿಹೊತ್ತಿನಾಗೆ ಚಿನ್ನಮ್ಮಗೆ ಹೆಣ್ಣುಮಗು ಅದೇ ಮಾರಕ್ಕ ಹುಟ್ಟಿತು. ಆವತ್ತಿನ ದಿನದಾಗೆ ಕುರಿ ವ್ರತತಪ್ಪಿ ಬಲಿಕೊಡೋ ಮುಂದೆ ಮಂದೆ ಕುರಿ ನಾಲಿಗೆ ಹೊರಹಾಕಿದ್ರೆ ದೋಷ. ಹೀಗೆ ಕೆಂಗುರಿ ಮಲ್ಲೇಗೌಡನ ಎಲ್ಲ ಕುರೀನೂ ನಾಲಿಗೆ ಹೊರಹಾಕಿ ಬಲಿ ಆಗದೆ ಹಾಗೇ ಸತ್ತು ಹೋದವು. ಅದಕ್ಕೆ ಕೊನೆಗೆ ಅವನೇ ತಲೆಕೊಟ್ಟು ಸತ್ತ. ಇಲ್ಲೀಗೆ ಕೆಂಗುರಿ ಮಲ್ಲೇಗೌಡನ ತಲೆ ಮುಗೀತು.

ಈಗ ಕಂಬೇರು ಗೊಲ್ಲರು ಜುಂಜಪ್ಪನ ಮಾವದೀರಿಗೂ ಭೋ ಹೋರಾಟ ಕಾಣಲ. ಇಲ್ಲಿಂದ ಮುಂದೆ ಜುಂಜಪ್ಪ ದನ ಬರೋ ದಾರಿಗೆ ಒಂದು ಹೊಟ್ಟೆಕರ ಹೋರಿಕರನ್ನ ಮಾಟ ಮಾಡಿ ನೆಲದಾಗೆ ಹುಗಿದಿಟ್ಟುಬಿಟ್ಟರು ಕಂಬೇರ ಗೊಲ್ಲರು. ಇವನ ಮಾವದೀರು. ಜುಂಜಪ್ಪ ಸಾಮಾನ್ಯದವನೇನಲ್ಲ. ಈ ಭೂಮಿ ಮ್ಯಾಗಿನ ಪಾಳೇಗಾರ್ರನೆಲ್ಲ ಎದುರಿಸಿ ಜಯಿಸಿ ತನ್ನ ಆವಿನ ಗೂಡಿನ ದನಾನೆಲ್ಲ ಪಾಳೇಗಾರರ ಕಾವಲಲ್ಲಿ ಮೇಯಿಸಿಕೊಂಡು ಬಂದೋನು. ಅಂಥ ವೀರ ಜುಂಜಪ್ಪ. ಜುಂಜಪ್ಪ ಸಾಮಾನ್ಯನಲ್ಲ ಅಂತ ಜನಕ್ಕೆ ಗೊತ್ತಾಗಿದೆ.

ಕೆಂಬತ್ತದ ಗದ್ದೆ ಆಮೇಲೆ ಕಾವಲುಗಳು ಕೋಟೆ ಕೊತ್ತಳಗಳು ಎಲ್ಲಾ ಮೇಯಿಸಿಕೊಂಡು ಪುರಲಹಳ್ಳಿ ಭೂತ "ನೀನು ಸಾಣಿಕೆರೆ ಪುಟ್ಟ ರಾಯನ ರಾಜ್ಯವಾಳಿ ಒಡೆತನ ಆಳಿ ಬರಬೇಕು" ಅಂತ ಹೇಳಿ ಭೂತಪ್ಪ ಅಲ್ಲಿಂದ ಹೊರಟುಬಿಟ್ಟ. ಮೂರು ವರುಷ ಆ ಸಾಣಿಕೆರೆ ಪುಟ್ಟನ ದೊರೆತನಕ್ಕೆ ಎದುರಾಗಿ ಮಾರಣ್ಣ, ಮೈಲಣ್ಣ ಜುಂಜಪ್ಪ ಕೆಂಬತ್ತದ ಹೊಲ ಎಲ್ಲಾ ಆಳಿದರು. ಮೂರುವರುಷ ಮೇಯಿಸಿಕೊಂಡು ಆ ದೊರೆತನಾನ ಆಳಿ ಮೂರು ವರುಷಕ್ಕೆ ಅವರು ಹೊರಡಬೇಕು ಅನ್ನೊ ಹೊತ್ತಿಗೆ ಸಾಣಿಕೆರೆ ಪುಟ್ಟನ ಸಂಸಾರ ಸಾಲುಕಟ್ಟಿ ಧ್ವಂಸ ಮಾಡಿ ಬಿಡಬೇಕು ಅನ್ನೋವಾಗ್ಗೆ ಒಂದು ಹುಡುಗ ಬಂತು. ಪುಟ್ಟನ ವಂಶದ್ದು. "ಸ್ವಾಮಿ ನಮ್ಮಪ್ಪ ಪುಟ್ಟಣ್ಣ ದುರಹಂಕಾರ ಮಾಡಿದ್ದರಿಂದ ಇಷ್ಟೆಲ್ಲಾ ಬಂದೋಗಿ ಬಿಡ್ತು. ಈಗ ಹೇಳಕ್ಕೆ ಹೆಸರಿಲ್ಲದಾಂಗೆ ಆಗುತ್ತೆ ನಮ್ಮ ವಂಶ. ಈ ವಂಶಕ್ಕೆ ಒಂದು ಸುಳಿ ಬಿಟ್ಟು ಹೋಗಬೇಕು ಸ್ವಾಮಿ" ಅಂತ ಜುಂಜಪ್ಪನ್ನ ಕೇಳಿಕೊಂಡ. ಆ ಹುಡುಗನಿಗೆ "ನಿಮ್ಮ ಅಪ್ಪದೀರು ಮಾಡಿದಂತೆ ಮಾಟ ನೀನು ಮಾಡೋದು ಬ್ಯಾಡಪ್ಪ. ನೀತಿಯಿಂದ ಭಯದಾಗೆ ಬಾಳಿಕೊಂಡು ಹೋಗಪ್ಪ. ವಂಶಕ್ಕೊಂದು ಸುಳಿ ಬಿಟ್ಟಿದೀನಿ" ಅಂತ ಆ ಹುಡುಗನಿಗೆ ಆಶೀರ್ವಾದ ಮಾಡಿ ಆಗ ಹೊರಡ್ತಾರೆ ಅವರು.

ಸಾಣಿಕೆರೆ ಪುಟ್ಟಣ್ಣನ ಕಾವಲು ಬಿಡ್ತಿದ್ದಹಾಗೆ ಉಂಡೆ ಬುಳ್ಡಪ್ಪನ ಕಾವಲು, ಚೆಂಡರುಗೊಂದಿ ಕಾವಲು, ಬಾಳೆ ಮಲೆ, ಬಚ್ಚೆಮಲೆ, ಕರಿಮಲೆ, ಜರಿಮಲೆ, ಒಳಮಲೆ,

ಹೊರಮಲೆ, ಕುದುರೆ ಕಣಿವೆ ಕಾವಲು, ಮತ್ತೋಡು ರಂಗಪ್ಪನ ಕಾವಲು, ಬೂದಾಳು ಈರಭದ್ರನ ಕಾವಲು, ಏಣುಕಲ್ ಗುಡ್ಡದ ಕಾವಲು, ಅಡ್ಡೇಣಿನಾಗಿರೋ ದೊಡ್ಡ ಕಾವಲು, ಗುಡ್ಡದ ರಂಗೇಗೌಡನ ಕಾವಲು, ಬರಗೂರು ರಾಮೇಗೌಡನ ಕಾವಲು, ಹುಲಿಕುಂಟೆ ತಮ್ಮಣ್ಣನ ಕಾವಲಿಗೆ ಹನ್ನೆರಡು ವರ್ಷಕ್ಕೆ ಬಂದಿದಾರೆ. ಹತ್ತೊಂಬತ್ತು ಕಾವಲು ಹನ್ನೆರಡು ವರ್ಷಕ್ಕೆ ಚಿಕ್ಕ ಹುಲಿಕುಂಟೆ, ದೊಡ್ಡ ಹುಲಿಕುಂಟೆ ಅಂತ ತಮ್ಮಣ್ಣನ ಕಾವಲಿಗೆ ಬರೋಹೊತ್ತಿಗೆ, ಅಸಾಸೂರ ಮಾಟ ಮಂತ್ರ ಮಾಡೋದ್ರಾಗೆ ಅಂತಹವರ ಕಾವಲಿಗೆ ಬಿಟ್ಟ ದನಾನ.

ಮಾರಣ್ಣಗೆ ಮೈಲಣ್ಣಗೆ ಗೋಲಿ ಗಜ್ಜುಗ ಆಡಿಸಿಕೊಂಡು ಜುಂಜಪ್ಪ ಕೂತಿರೋ ಹೊತ್ತಿಗೆ ಈ ಪಾಳೇಗಾರರು ಹೋಗಿ, ಕಂಬೇರ ಗೊಲ್ಲರ ಕೈಲಿ ಏನು ಹೇಳಿದ್ರೂ ಅಂದ್ರೆ "ನಿನ್ನ ತಂಗಿ ಮಕ್ಕಳ ದನ ದೇಶದ ಮೇಲೆ ಹುಲ್ಲು ನೀರಿಗೆ ಹೊರಟ್ರೆ ಮುಂದೂ ಇಲ್ಲದೆ ಹಿಂದೂ ಇಲ್ಲದ ಹಾಂಗೆ ಅಡವಿ ಹುಲ್ಲು ಉಂಡು ಮಡುವಿನ ನೀರು ಕುಡಿಸಿಬಿಡ್ತಾನೆ ಜುಂಜಪ್ಪ. ನಾವು ಯಾರ ಕಾವಲಿಗೆ ಹೋಗಾನ ಅಂದ್ರೂ ಕೊಟ್ಟಿದುದೆಲ್ಲಾ ತಕ್ಕೊಂಡು ನಾವು ಹೋಗಾಕೆ ನಮ್ಮ ದನೀಗೆ ಒಂದು ಹುಲ್ಲು ಕಡ್ಡೀನೂ ಬಿಡಲ್ಲ" ಅಂದರು. ಅದೇ ಸಮಯದಾಗೆ ಜುಂಜಪ್ಪ "ಇದು ನಿಮ್ಮ ತಂಗೀ ಮಗಂದು ದನ. ನಾನು ಬಂದು ಹುಲಿಕುಂಟೆ ತಮ್ಮಣ್ಣನ ಕಾವಲಿಗೆ ತಂದು ಬಿಟ್ಟಿದೀನಿ. ಕಂಬೇರ ಗೊಲ್ಲರಿಗೆ ಹೇಳಲಿಲ್ಲ ಒಂದು ಮಾತು ಅನ್ನೋದು ಬ್ಯಾಡ. ಈಗ ಹೇಳ್ತಾ ಇದೀವಿ. ಈವಾಗ ಏಳುಗೂಡಿನವರ ದನಗಳೂ ಹುಲಿಕುಂಟೆ ತಮ್ಮಣ್ಣನ ಕಾವಲಿನಲ್ಲಿ ಮೇಯ್ತಾ ಇವೆ." ಅಂದ. ಅದನ್ನು ಕೇಳಿಕೊಂಡು ಊರಮನೆಯವರೆಲ್ಲಾ

"ಎಲ್ಲಾ ಕಾವಲಲ್ಲೂ ಜುಂಜಪ್ಪನೇ ಮೇಯಿಸ್ಕೊಂಡು ಬರ್ತಾನಲ್ಲಾ. ನೀವೆಲ್ಲಾ ಯಾಕೆ ಮೇಯಿಸೋಕೆ ಆಗಲ್ಲಾ? ಅಂತ ಬೇರೇವ್ರು ನಮ್ಮನ್ನ ಕೇಳ್ತಾರೆ. ಆದರೆ ನಮಗೆ ಆಗಲ್ಲ."ಅಂದ್ರು.

ಕಂಬೇರ ಗೊಲ್ಲರು ಏನು ಹೇಳಿದ್ರೂ "ಗಂಟು ಕಾಲಿನ ಚಿನ್ನ, ಶಿವಚಿತ್ರಲಿಂಗ, ನೀವಿಬ್ರೂ ಆಚಾರ್‍ರು ಓಲೆಕಾರರನ್ನ ಕರಕೊಂಡು ಸೋಮವಾರ ಹೊತ್ತು ಹುಟ್ಟೋ ಮುಂಚೆ ಕೆರೆಗೆ ನೀವು ಬರಬೇಕು. ಜುಂಜಪ್ಪನ ದನೀಗೆ ನಾವು ಮಂತ್ರ ಮಾಟ ಮಾಡಿಸಬೇಕು" ಅಂತ ಹೇಳಿ ಇಬ್ರನ್ನೂ ಸಾಗಹಾಕಿಬಿಟ್ಟರು. ಸಾಣಿಕೆರೆ ಪುಟ್ಟಣ್ಣ ಸೊಂಡೂರು ಬೊಮ್ಮಣ್ಣನ್ನ ಕರಕೊಂಡು ಬರಬೇಕು ನೀವು ಹೋಗಿ ಅಂತ ಹೇಳಿದರೆ ಈ ಏಳು ಜನರಾಗೆ ಗಂಟು ಕಾಲಿನ ಚಿನ್ನ, ಬಿಳಿಯಾಲ ಬೇವಿನ ಚಿನ್ನ ಇಬ್ರನ್ನೂ ಸಾಗಹಾಕಿ ಐದು ಜನರೂನೂ ಊರಲ್ಲಿ ನಿಂತರು ಅವರಿಗೆ ಕಾಯಕೊಂತ. ಇವರಿಬ್ರೂ ಶನಿವಾರ ಹೋದೋರು ಸೋಮವಾರ ಹೊತ್ತು ಹುಟ್ಟೋ ಹೊತ್ತಿಗೆ ಇಬ್ರನ್ನೂ ಕರಕೊಂಡು ಬರ್ತಾ ಅವ್ರೆ; ಇವರು ಐದು ಜನ ಒಂದು ಹೋರಿ ಕರ ಹಿಡಕೊಂಡು ಹುಲಿಕುಂಟೆ ಕೆರೆಗೆ ಹೋಗ್ತಾ ಅವ್ರೆ. ಇವ್ರು ಅತ್ತಲಿಂದ ಓಲೆಕಾರನ್ನ ಇತ್ಲಾಗೆ ಕರಕೊಂಡು ಬರ್ತಾ ಅವ್ರೆ. ಜುಂಜಪ್ಪನ ದನ ನೀರಿಗೆ ಬರೋದಾರಿಯಾಗೆ ಅವರುದ್ದ ಗುಂಡಿ ತೆಗೆದುಬಿಟ್ಟು ಆ ಹೋರಿಕರನ್ನ ಸೀದಾ ಇಳಿಸಿ ಜಾಡು ಕಳೆದು ಅದನ್ನು ಆ ಗುಂಡೀಲಿ

ಮುಚ್ಚಿಬಿಟ್ಟರು. ತುಗ್ಗಲಿಮುಳ್ಳು, ಮೂರುಸುತ್ತಿನ ಕಾರೆ ಮುಳ್ಳು, ನಿಂಬೆ ಕಾಯಿ, ನೂರಾ ಒಂದು ತೆಂಗಿನ ಕಾಯಿ, ಅಲ್ಲಿ ಏನೇನು ಬೇಕೋ ಅದೆಲ್ಲಾ ಹಾಕಿ ಅದನ್ನ ದಾಟದ ಹಾಗೆ ಮಾಡೋದೆಲ್ಲಾ ಮಾಡಿಬಿಟ್ಟರು. ಯಾರೂ? ಕಂಬೇರಗೊಲ್ಲರು. ಅಲ್ಲಿ ತಿರುಗಾ ಒಂದು ಗಟ್ಟಿ ಭದ್ರವಾಗಿ ಜಾಡಿ ಪೂಜೆ ಮಾಡಿದ್ರು. ಮಾರಣ್ಣ, ಮೈಲಣ್ಣ, ಜುಂಜಪ್ಪ ಮೂವರೂ ಬಂದು ಈ ಹೋರಿ ಕರ ಮುಚ್ಚಿರೋ ಗುಡ್ಡೆ ಎತ್ತಾ ಇದ್ದಂಗೆ ಅವರಲ್ಲಿ ಸತ್ತು ಹೋಗಿ ಬಿಡಬೇಕು ಅಷ್ಟು ಗಟ್ಟಿ ಭದ್ರವಾಗಿ ಮಾಡಿಸಿಬಿಟ್ಟರು. ಜುಂಜಪ್ಪನ ಒಂದು ದನಾ ಇತ್ತಲ್ಲಾ ಚಿನ್ನಮ್ಮಗೆ ಕಂಬೇರ ಗೊಲ್ಲರು ಒಂದು ಹಸುವಿನ ಮಣಕನ್ನ ಬಳುವಳಿ ಅಂತ ಕೊಟ್ಟಿದ್ದರು. ಅದು ಒಂದರಾಗೆ ಏಳುಗೂಡಿನ ದನ ಬೆಳೆದಿದ್ದು, ಹೊಟ್ಟೆ ಉರಿ ತಡೀಲಾರದೆ ಆ ಕಂಬೇರಗೊಲ್ಲರು ಹೋಗ್ಬಿಟ್ಟು ಆ ಕೆರೆಯಾಗಿರೋ ನೀರಿಗೆ ನೂರಾ ಒಂದು ರೀತಿ ಮಾಟ ಮಾಡಿಸಿ ಆ ನೀರಿಗೆ ವಿಷ ಹುಯ್ಯಿಸಿಬಿಟ್ಟರು. ನೀರು ಕುಡೀತಿದ್ದಂಗೆ ಜುಂಜಪ್ಪನ ದನ ಅಲ್ಲಿ ಸಾಯಬೇಕು. ಈ ಹೋರಿ ಕರು ಮುಚ್ಚಿರೋ ಗುಡ್ಡೇಲಿ ಇವರು ಇಲ್ಲೇ ಸಾಯಬೇಕು. ಅವರನ್ನ ಇಲ್ಲಾ ಅನ್ನಿಸಿಬಿಡಬೇಕು. ಅವರ ಹೆಸರೇ ಇಲ್ಲದ ಹಾಗೆ ಮಾಡಿಬಿಡಬೇಕು ಅಂತ ಹೇಳಿ ಬಿಟ್ಟರು. ಇಷ್ಟು ಮಾಡಿಸಿ ಆ ಓಲೆಕಾರರಿಗೆ ಒಬ್ಬೊಬ್ರಿಗೂ ಒಂದೊಂದು ಸಾವಿರ ರೂಪಾಯಿ ಕೊಟ್ಟುಬಿಟ್ಟು ಅವರನ್ನೂ ಸಾಗಹಾಕಿ ಇವರು ಏಳು ಜನ ಕಂಬೇರಗೊಲ್ಲರೂನೂ ಹಟ್ಟಿ ಸೇರಿಬಿಟ್ಟರು. ಸೋಮವಾರ ಹನ್ನೆರಡು ಗಂಟೆ ಟೇಮಿಗೆ ಸರ್‍ಯಾಗಿ ಆ ಹುಲಿಕುಂಟೆ ತಮ್ಮಣ್ಣನ ಕಾವಲಾಗೆ ಹುಲ್ಲು ನೀರು ಎಲ್ಲಾ ಮುಕ್ತಾಯ ಆತು. ಮಾರಣ್ಣ ಮೈಲಣ್ಣ ಇಬ್ಬರೂ ಬಾಯಾರಿಬಿಟ್ಟರು. ಈಗ ಹನ್ನೆರಡು ಗಂಟೆ ಒಂದು ಗಂಟೆ ಟೇಮಾಗಿಬಿಟ್ಟಿತು. 'ಮೂಲೆಗುಂಟ ಕೆರೆನೀರಿಗೆ ಹೋಗಲಿ. ಆವಿನ ದನ ಕರಕೊಳ್ರಪ್ಪಾ' ಅಂತ ಜುಂಜಪ್ಪ ಮಾರಣ್ಣ ಮೈಲಣ್ಣರ ಮಗ್ಗುಲುನಾಗೆ ಬರುತ್ತಾನೆ.

ಅಕ್ಕರಂಭೆ, ಚಿಕ್ಕರಂಬೆ, ದೊಡ್ಡೋಳು ಗೊಡ್ಡುಗಾಳಿ
ಅನ್ನೋ ಮೂರು ಹಸುಗಳು ಮುಂದೆ ಬರಬೇಕು
ಇನ್ನು ಮಿಕ್ಕ ದನಗಳೆಲ್ಲಾ ಹಿಂದೆ ಬರಬೇಕು.
ಮೂರು ಹಸುಗಳಿಗಂತೂ ಮುಂದೆ ಏನಾಗ್ಯೆತೆ ಅಂತ
ಸಂಜೀವಿನಿ ನೀರು ಎದುರ್‍ಯೆತೆ ಅಂತ ನೋಡ್ತಾನೆ.
ಆದ್ರೆ ಮುಂದೆ ಅಲ್ಲಿ ಏನಾಗ್ಯೆತೆ ಅಂತ ಅವಕ್ಕೆ ಗೊತ್ತಾಗ್ತ್ಯೆತೆ.
ಅವು ಮುಂದೆ ಬರ್ತಾ ಇದ್ದವು
ಜುಂಜಪ್ಪ ಕೊಳಲೂದಿಕೊಂಡು ಹಿಂದಕ್ಕೆ ಬರ್ತಾ ಇದ್ದ.

ಆ ಮೂರು ದನಗಳು ಕೆರೆಗೆ ಇಳೀಬೇಕು ಅನ್ನೋ ಹೊತ್ತಿಗೆ ಆ ಹೋರಿ ಕರು ಮುಚ್ಚಿರೋ ಗುಡ್ಡೆ ನೋಡಿಬಿಟ್ಟು ಬೆದರಿ ಹೋಗಿ ಹದಿನಾಲ್ಕು ಗೂಡಿನ ದನಾನೆಲ್ಲ ಅಡ್ಡ ಹಾಕ್ಕೊಂಡು ಬಿಟ್ಟವೆ ಆ ಮೂರು ಹಸುಗಳು. ಹದಿನಾಲ್ಕು ಗೂಡಿನ ದನಾನು ಅಡ್ಡ ಹಾಕ್ತಿದ್ದಂಗೆ ಮಾರಣ್ಣ ಮೈಲಣ್ಣ ಬಂದು ನಾಯೀನೋ ನರೀನೋ ಇರಬೇಕು ಅಂತ ನೋಡ್ತಾರೆ.

ಹುಲಿಕುಂಟೆ ಕೆರೆಯಾಗೆ ಹೋಗಿ "ನೋಡ್ರಪ್ಪಾ" ಅಂದ ಜುಂಜಪ್ಪ. ಮಾರಣ್ಣ ಮೈಲಣ್ಣ ಬಂದು ಆ ಕೆರೆ ಏರಿ ಮ್ಯಾಲೆ ನಿಂತು ನೋಡಿದ್ರು.

"ಚಿಕ್ಕ ಹುಲಿಕುಂಟೆಯೋರು, ದೊಡ್ಡ ಹುಲಿಕುಂಟೆಯೋರು ಯಾರೋ ತೀರಿಹೋಗವ್ರೆ. ಅವರನ್ನ ತೊಗೊಂಡು ಹೋಗಿ ಸಮಾಧಿ ಮಾಡಿ ಹೋಗವ್ರೆ. ಬಾಳೆ ಕಂದು ತೆಂಗಿನ ಕಾಯಿ ನೋಡಿ ಆ ಹಸುಗಳು ಬೆದರಿ ಹಿಂದಕೆ ಬಂದವೆ ಕಾಣಣ್ಣ" ಅಂದರು.

ತಡೀರಿ ನೋಡನ ಅಂತ ಎದ್ದು ಬಂದ ಜುಂಜಪ್ಪ.

"ಇಲ್ಲಿ ಯಾರೋ ಚಿಕ್ಕಹುಲಿಕುಂಟೆಯೋರೋ ದೊಡ್ಡಹುಲಿ ಕುಂಟೆಯೋರೋ ಸತ್ತಿಲ್ಲಪ್ಪಾ. ನಿಮ್ಮ ತಾಯಿಕಡೆ ಸೋದರ ಮಾವಗಳು ಕಾಳಮಾರಿ ಅನ್ನೋ ಹಸುವಿನ ಕರ ತಂದು ಈ ಜುಂಜಪ್ಪ ಮಾರಣ್ಣ ಮೈಲಣ್ಣ ಈ ಮೂರು ಜನ ಚಿನ್ನಮ್ಮನ ಮಕ್ಕಳು ಸಾಯಲಿ ಅಂತ ಹುಲಿಕುಂಟೆ ತಮ್ಮಣ್ಣ, ಸಾಣಿಕೆರೆ ಬುಡ್ಡಣ್ಣ ಅವರಿಬ್ಬರನ್ನೂ ಕರೆಸಿ ಮಾಟ ಶೂನ್ಯ ಮಾಡಿಸಿ ಈ ಹೋರಿ ಕರ ಮುಚ್ಚಿ ಹೋಗಿ ಬಿಟ್ಟಾರೆ. ಇನ್ಯಾರೂ ಸತ್ತಿಲ್ಲ. ನೀವಿಬ್ಬರೂ ಯಾಕೆ ಎದೆ ಹಾರಿ ಬೀಳ್ತೀರಾ." ಜುಂಜಪ್ಪಗೆ ಎಲ್ಲಾ ಗೊತ್ತಾಗಿಬಿಡ್ತು. 'ಆವಿನ ದನ ಈ ಕಡೆ ಹೊಡ್ಕೊಳಿ' ಅಂತ ಹೇಳಿ "ಮುಂದಿನ ಕಾರ್ಯಕ್ರಮಗಳು ಏನೇನು ನಡೆಸವ್ರೋ ನಮ್ಮ ಮಾವಗಳು ನೋಡ್ಕಂಡು ಬತ್ತೀನಿ" ಅಂತಹೇಳಿ ಹೋಗಿ ಜುಂಜಪ್ಪ ಆ ನೀರಿನ ದಂಡೆಯಾಗೆ ನಿಂತು ನೋಡಿದ.

ಪಡುಗಡೆ ಗಾಳಿ ಬೀಸಿದರೆ ನೂರಾ ಒಂದು ಮಂಡಲ ಬರೋದಂತೆ ಆ ವಿಷದ ಮಂಡಲ. ಶಿವಾ, ಪಾರ್ವತಿ, ಚಿತ್ರಲಿಂಗ, ಕಾಟಮಲಿಂಗ ಅಂತ ಹೇಳಿ ಆ ಗುರುಹಿರಿಯರನ್ನ ನೆನೆಸಿ ಸ್ತೋತ್ರ ಮಾಡಿ ಮೂರೇ ಮೂರು ಬೊಗಸೆ ಜುಂಜಪ್ಪನೇ ಆ ನೀರು ಕುಡಿದುಬಿಟ್ಟ. ಆ ಕೋಡಿ ಹಳ್ಳಕ್ಕೆ ಕಾರೆ ಮುಳ್ಳಿನಾಗೆ ವಿಷಾನೆಲ್ಲಾ ತಿರುಗಿಸಿಬಿಟ್ಟ.

"ಮಾರಣ್ಣಾ ಮೈಲಣ್ಣ "ಅಂದ.

"ಯಾಕಣ್ಣಾ?" ಅಂದ್ರು.

"ಈ ನೀರಿನ ಮ್ಯಾಗಳ ಅಮೃತಾನೆಲ್ಲ ನಾನೇ ಸೇವನೆ ಮಾಡಿದೀನಿ" ಅಂದ.

ವಿಷ ಅಂದಿಲ್ಲ ಅವನು ಅಮೃತ ಅಂದ.

"ಈಗ ಆವಿನ ದನ ಬಿಡ್ರಪ್ಪಾ ನೀರಿಗೆ" ಅಂದ.

ಆವಿನದನಾನ ನೀರಿಗೆ ಬಿಟ್ಟುಬಿಟ್ರು. ಹದಿನಾಲ್ಕು ಗೂಡಿನ ದನ ನೀರು ಕುಡಿದು ಒಂದು ಕೆರೆ ಅಂಗಳದಾಗೆ ಮನೀಕ್ಕೊಂಡವು. ಘಂಟೆ ಹೊತ್ತು ನೋಡಿದರೂ ಯಾವುದಕ್ಕೂ ಏನೂ ಆಗಲಿಲ್ಲ. ಹೆಚ್ಚು ಕಮ್ಮಿ ಏನೂ ಆಗಲಿಲ್ಲ.

"ಅಕ್ಕರಂಭೆ ಚಿಕ್ಕರಂಭೆ ದೊಡ್ಡೋಳೂ ಗೊಡ್ಡುಗಾಳಿ ನೀವು ಮೂವರೂ ಬನ್ನಿರಮ್ಮ, ನಿಮ್ಮ ಭೂ ಚಕ್ರದ ಕೊಂಬು ಭೂಮಿಗೆ ತೂರಿಸಿ ಈ ಸುದ್ದಿನಾಗೆ (ಮಣ್ಣುಮುಚ್ಚಿದ ಗುಂಡಿಯಲ್ಲಿ) ಒಂದು ಹೊಟ್ಟೆ ಕರ ಐತೆ. ಇದನ್ನು ಮೇಲಕ್ಕೆ ಎತ್ತಬೇಕ್ರಮ್ಮಾ. ಮಾರಣ್ಣಾ ಮೈಲಣ್ಣಾ ನೀವು ಮಾತ್ರ ಹತ್ತಿರಕ್ಕೆ ಬರಬೇಡಿ. ನಾವು ಮೂವಾರೂ ಸಾಯಲಿ ಅಂತ ಮಾವದೀರು ಮಾಟ ಮಾಡಿಸಿರಾದು" ಅಂದ ಜುಂಜಪ್ಪ.

ಮೂರು ಹಸುಗಳು ಹಣೆಕೊಟ್ಟು ಕೊಂಬು ತೂರಿಸಿ ದೂಕಿ ಎತ್ತುವಾಗ ಗೊಡ್ಡುಗಾಳಿ ಅನ್ನೋ ಹಸುವಿನಾಗೆ ಬಂದು ಬಿದ್ದು ಆ ಹಸುವಿನ ಕರು. ಅಂಬಾ ಅಂತು. ಆ ಘಳಿಗ್ಯಾಗೆ ಏನೇನು ಮಾಡಬೇಕೋ ಮಾಡೋದೆಲ್ಲಾ ಮಾಡಿದ ಜುಂಜಪ್ಪ. ಜುಂಜಪ್ಪ ಮಾರಣ್ಣ ಮೈಲಣ್ಣನ್ನ ಕರೆದು ಹೇಳಿದ:

"ನಿಮ್ಮ ಮಾವಂದಿರ ದನದಾಗೆ ಕಾಳಮಾರಿ ಅಂತ ಒಂದು ದನ ಐತೆ. ಆ ಹಸುವಿಂದು ಈ ಹೋರಿ ಕರು. ಈಗ ನೀವು ಏನಂತ ಈ ಹೋರಿಕರುವನ್ನು ತೊಗೊಂಡು ಹೋಗಿ ಬಿಡ್ತೀರ ನಿಮ್ಮ ಮಾವಂದಿರ ಹಟ್ಟಿ ತಾವಕೆ. ಅವ್ರಿಗೆ ಹೇಳಿ 'ಶಾನುಭೋಗರ ದೊಡ್ಡ ಹುಲಿಕುಂಟೆ ತಾಕೆ ಹೋಗಿ ಚಿಕ್ಕ ಹುಲಿಕುಂಟೆ ದಿಣ್ಣೆಯಾಗೆ ಹಾಸಿ ಬರೋ ಹೊತ್ತಿಗೆ ಜುಂಜಪ್ಪ ಈ ಹೋರಿಕರ ಹೊಂಗೆ ಹಳ್ಳದ ಕಡೆಯಿಂದ ಅರಸಿಕೊಂಡು ಬಂತು. ನಮ್ಮ ಅಣ್ಣಗೆ ಅಡ್ಡ ಹೋರಿ ಸಿಕ್ತಂತೆ. ನಿಮ್ಮ ಮಾವಂದಿರ ದನಿನ್ಯಾಗಳದ್ದು ಕಣಲೇ ಈ ಹಸುವಿನ ಕರ ಎಲ್ಲೋ ತಪ್ಪಿಸ್ಕೊಂಬುಟ್ಟೈತೆ. ಈ ಕೆರೆ ನೀರಿಗೆ ಬಂದು ನೀರು ಕುಡಿಸಿಕೊಂಡು ಹೋಗಿ ಬರೋಹೊತ್ತಿಗೆ ಈ ಕರ ತಪ್ಪಿಸಿಕೊಂಡು ಎಲ್ಲೋ ಮಲಗಿ ಬಿಟ್ಟೈತೆ. ಎಲ್ಲೆಲ್ಲಿ ಹುಡುಕಾಡ್ತಾರೋ ಮಾವಂದಿರು. ಹಸಾ ಎಷ್ಟು ಕೆಚ್ಚಲು ಕಟ್ಟಿಕೊಂಡು ಅಂಬಾ ಅನ್ನುತ್ತೈತೋ. ಈ ಹೋರಿಕರ ಇಲ್ಲಿ ಅರಸಿಕೊಂಡು ಬಂತು ನಮ್ಮ ಅಣ್ಣಗೆ ಸಿಕ್ತಂತೆ' ಅಂತ ಹೇಳಿ ಆ ಕಂಬೇರಗೊಲ್ಲರಿಗೆ ಕೊಟ್ಟು ಬಾ ಹೋಗ್ರಪ್ಪಾ ಅಂದ.

ಮಾರಣ್ಣ ಮೈಲಣ್ಣ ಆ ಹೋರಿಕರನ್ನ ಹೊತ್ತುಕೊಂಡು ಹೋಗಿ ಹಟ್ಟಿ ಮುಂದಿನ ಉದಿಯಾಗೆ ನಿಲ್ಲಿಸಿದರು. ಸೋದರಮಾವಗಳು ಬಂದರು.

"ಈ ಹೋರಿಕರ ನಿಮ್ಮದೆ ಅಂತ ನಮ್ಮಣ್ಣ ಕಳಿಸವ್ನೆ. ಇಟ್ಕಳಿ ನಿಮ್ದು ಈ ಕರ".

"ಇವತ್ತಿಗೆ ಒಂಬತ್ತು ದಿನದಾಗೆ ಸತ್ತ ಕರ ಕಂದು ಹಾಕ್ಕಂಡಿತ್ತು. ಆ ಹಸ ನಮ್ಮದಲ್ಲ. ನಮ್ಮದಲ್ಲ ಕರ. ನೀವು ಈ ದೇಸದ ಮ್ಯಾಗಳ ಕಾವಲುಗಳನ್ನೆಲ್ಲ ಮೇಯಿಸಿಕೊಂಡು ಬರೋ ಹೊತ್ತಿಗೆ ಎಲ್ಲೋ ಕಾಡಲ್ಲಿ ಗ್ಯಪ್ತಿ ಇಲ್ಲದೆ ಕಳೆದು ಈ ಆವಿನ ಕರನೇ ತಂದು ನಾವು ಸಾಯಲಿ ಅಂತ ನಮ್ಮ ದನದ

ಜೊತೆಗೆ ಸೇರಿಸ್ತಾ ಇದೀರಾ" ಅಂತ ಆ ಏಳು ಜನ ಮಾವುಗಳು ಸೇರಿ ಈ ಮಾರಣ್ಣ ಮೈಲಣ್ಣಗೆ ಚೆಂದಾಗಿ ಹೊಡೆದು ಬಿಟ್ರು. ತಿರುಗಾ ಆ ಕರ ಹೊತ್ತುಕೊಂಡು ಹುಲಿಕುಂಟೆ ದಡಕ್ಕೆ ಬಂದು "ಅಣ್ಣಾ ಹಿಂಗಿಂಗಾತು, ಮಾವದೀರು ಹೊಡೆದವ್ರೆ, ನಾವು ತಿರುಗಾ ಹೋಗಲ್ಲ" ಅಂದ್ರು.

"ಗಂಗಮ್ಮನಂತಹವಳು ಮೂರು ಸಲ ಮುಳುಗ್ಗಿ ಮೂರುಸಲ ಗೆಲ್ಲುಸ್ತಾಳೆ. ನೀವು ಇನ್ನೊಂದ್ಸಾರಿ ಹೋಗಿ ಬನ್ನಿ. ಇನ್ನೊಂದಸಾರಿಗೆ ನಾನು ಹೋಗ್ತೀನಿ" ಅಂತ ಜುಂಜಪ್ಪ ಮಾರಣ್ಣ ಮೈಲಣ್ಣರನ್ನ ಎರಡನೆ ಸಲ ಕಳಿಸಿದ. ಆಗಲೂ ಕರ ನಮ್ಮದಲ್ಲ ಅಂದ್ರು ಸೋದರ ಮಾವಗಳು.

"ನೀನೇ ಹೋಗಿ ಬಾ ಜುಂಜಪ್ಪ" ಅಂದರು ಮಾರಣ್ಣ ಮೈಲಣ್ಣ.

"ಅತ್ತಕಡೆ ಇನ್ನೊಂದು ಸಾರಿ ಹೋಗಿ ಬನ್ರಪ್ಪಾ. ಇದೊಂದೇ ಸಾರಿ. ಆಮೇಲೆ ನಾನು ಹೋಗ್ತೀನಿ ಅಂದ ಜುಂಜಪ್ಪ. "ಜೀವದಾಗೆ ಇದ್ದಿದ್ರೆ ಮೊದಲೇ ಹೋರಿಕರ ಹೊತ್ತುಕೊಂಡು ನಮ್ಮ ಹಟ್ಟಿ ತಾವಕ್ಕೆ ಬಂದುಬಿಡೋನು ಜುಂಜಪ್ಪ. ಅವನು ಸತ್ತೋಗಿ ಬಿಟ್ಟವ್ನೆ. ಇವರಿಬ್ರೂ ಎಲ್ಲೋ ಹೋರಿಕರ ಹೊತ್ಕಂಡು ಬತ್ತಾ ಅವ್ರೆ. ಬಂದರೂ ಇನ್ನೂ ಒಂದು ಸಾರಿ ಬರಬಹುದು. ನಡೀರಲೆ" ಅಂತ ಹೇಳಿ ಊರ ಗೌಡರ ಹುಣಿಸೆ ಬನಕ್ಕೆ ಹೋಗಿ ಏಳೇಳು ಹುಣಿಸೇ ಬರಲು ಕಡಿದು ಕಾಸಿ ತಿದ್ದಿ ಬಡಿದು ನೇರ ಮಾಡಿಕೊಂಡು ಕುಂತಿದ್ರು ಈ ಕಂಬೇರಗೊಲ್ಲರು.

ಅದೇ ಸಮಯಕ್ಕೆ ಸರಿಯಾಗಿ ಈ ಮಾರಣ್ಣ ಮೈಲಣ್ಣ ಕರ ಹೊತ್ತುಕೊಂಡು ಬರೋ ಹೊತ್ತಿಗೆ ಸೋದರ ಮಾವಗಳು ಅವರಿಬ್ರ ಜುಟ್ಟು ಗಂಟು ಹಾಕಿಬಿಟ್ರು. ಮೂಡಲು ಉದಿಯಾಗೆ ಕರ ಕಟ್ಟಿ ಹಾಕಿಬಿಟ್ರು. ಸೊಂಟದ ಕೆಳಕ್ಕೆ ಅವರಿಗೆ ಚೆನ್ನಾಗಿ ಬಾರಿಸಿ ಬಿಟ್ರು..

"ಮಾವದೀರ ಕರ ನಮ್ಮದಾಗಲಿ, ನ್ಯಾಯ ನಮ್ಮದಾಗಲಿ, ತಪ್ಪು ಅಪರಾಧ ಫಿರ್ಯಾದಿ ಆಗಲಿ. ನಿಮ್ಮ ತಂಗಿ ಮಕ್ಕಳು, ಭಾವ, ಮೈದುನ ಅನ್ನೋ ಆಸೆ ಅಕ್ಕರೆ ಚೂರು ಇಲ್ಲವಲ್ಲ ನಿಮ್ಮ ತಾವ" ಅಂತ ಹೇಳಿ ಹೊರಟು ಬಿಟ್ಟರು ಆಗ ಹೋರಿ ಕರು ಹೊತ್ತುಕೊಂಡು. ಜುಂಜಪ್ಪ ಮುಂದೆ ಬಂದು ಅಣ್ಣ, ಮಾವದೀರು ಮೂರು ಮೂರು ಸಾರಿ ಹುಲಿಕುಂಟೆ ಹುಣಿಸೆ ಬರಲು ಮುರಿಯೋ ತನಕ ನಮ್ಮನ್ನ ಹೊಡೆದು ಬಿಟ್ಟರು. ನಮಗೇನೂ ಅಣ್ಣ ತಮ್ಮದೀರ ಸ್ಥಾನ ಬೇಡ. ನಾವಿನ್ನು ಊರಿಗೆ ಹೋಗಿಬಿಡ್ತೀವಪ್ಪಾ" ಅಂದರು.

ಜುಂಜಪ್ಪ ಹೇಳಿದ ತಮ್ಮದೀರಾ. ಸತ್ಯವಂತರಿಗೆ ಶತಕೋಟಿ ವಿಘ್ನಗಳಂತೆ ಬರೋದು. ಹೊಡೀತಾರಂದ್ರೆ ಬಿಟ್ಟು ಬಿಡಿ ಹೋಗಬೇಡಿ ಮಾವಂದಿರಹತ್ರ.

ನೀವಿನ್ನು ಹೋಗಿ ಸಾಣಿಕರೆ ಪುಟ್ಟಣ್ಣ, ಸುಂಡನೂರು ಬೊಮ್ಮಣ್ಣ,, ಮದ್ದನೂರು ರಂಗಣ್ಣ, ಬೂದನಾಳು ಈರ ಬದ್ರ, ಕಳುವಾರಳ್ಳಿ ಹೊನ್ನಟ್ಟಿ ಆಲೆಗೌಡರ ಒಕ್ಕಲು ಮಗ ಗುಡ್ಡದ ರಾಮೇಗೌಡ, ಬರಗೂರು ರಾಮೇಗೌಡ, ಹುಲಿಕುಂಟೆ ತಮ್ಮಣ್ಣ ಇಷ್ಟು ಜನ ನ್ಯಾಯಸ್ಥರನ್ನ ಕರಕೊಂಡು ಹುಲಿಕುಂಟೆ ಕೆರೆಗೆ ಬರ್‍ರಿ, ನ್ಯಾಯದಾಗೆ ಕಂಬೇರ ಗೊಲ್ಲರನ್ನ ಎದ್ರುಗೆ ಕುಂಡಿರಿಸಿಕೊಂಡು, ಅವರು ಕೇಳಲು ಅವರಿಗೆ ನೋವು ಕೊಡಬೇಕಾದ್ದೇ ಹೊರತು, ನಾವು ಮೂವರೇ ನೋವು ಕೊಟ್ಟರೆ ಸಾಲಲ್ಲ ಅವರಿಗೆ. ಹತ್ತಾರು ಜನ ಅದನ್ನು ನೋಡಬೇಕು. ನ್ಯಾಯಸ್ಥರನ್ನೆಲ್ಲ ಕರಕೊಂಬರ್‍ರಿ." ಅಂದ ಜುಂಜಪ್ಪ.

ಮಾರಣ್ಣ ಮೈಲಣ್ಣ ಅತ್ತ ಹೋಗಿಬಿಟ್ಟರು. ಈ ಕಡೆ ಸೋದರಮಾವಗಳು ಏನು ಮಾತಾಡಿಕೊಂಡರು. ಮಾರಣ್ಣ ಮೈಲಣ್ಣ ನಾವು ಹುಣಿಸೆ ಬರಲಿನಾಗೆ ಹೊಡೆದದ್ದರಿಂದ ಊರನ್ನೇ ಬಿಟ್ಟು ಹೊರಟೇಬಿಟ್ಟರು ಅಂತ ಮಾತಾಡಿಕೊಂಡರು.

"ಮಾರಣ್ಣ ಮೈಲಣ್ಣ ನೀವು ಹೋಗಿ ಆ ನ್ಯಾಯಸ್ಥರನ್ನೆಲ್ಲ ಕರಕೊಂಬರಬೇಕು. ನಾನು ಸೋಲತೀನೋ, ಮಾವಂದಿರು ಸೋಲುತಾರೋ ಮುಂದಲ ನ್ಯಾಯ ಮುಂದಾಗುತ್ತೆ" ಅಂತ ಜುಂಜಪ್ಪ ಅವರನ್ನು ಸಾಗಹಾಕಿಬಿಟ್ಟ.

ಜುಂಜಪ್ಪ ಆವಿನ ದನ ಬಿಟ್ಟುಕೊಂಡು ಇರುವಾಗ್ಗೆ ಸೋದರ ಮಾವಗಳು ಬಂದೇ ಬಿಟ್ಟರು. ಇವರು ಮೂವರೂ ಬಿದ್ದು ಸತ್ತು ಹೋಗಿಬಿಟ್ಟಿದಾರೆ. ಆಲೆಕುಂಟೆ ಕೆರೆಯಾಗೆ ಮೂವರನ್ನು ಒಂದು ಕುತ್ರಕ್ಕೆ ಹಾಕಿ ಬಿಟ್ಟು ನಾವು ಮಣ್ಣುಮಾಡಿ ಬಿಡೋಣ. ಅವರ ಆವಿನ ದನ ನಮ್ಮವೇ ಆಗಿಬಿಟ್ಟವು. ನಡೀರಿ ಹೋಗಾನ ಅಂತ ಹೋಗ್ತಾ ಅವ್ರೆ ಕಂಬೇರ ಗೊಲ್ಲರು. ಅವರು ಹೋಗುವಾಗ್ಗೆ ಅವರನ್ನ ಸ್ವಾಮಿ ಜುಂಜಪ್ಪ ನೋಡಿಬಿಟ್ಟ. ಆ ಏಳು ಗೂಡಿನ ದನೀನಾಗೆ ಒಂದು ಗೊಡ್ಡು ಗಾಳಿ ಅನ್ನೋ ಹಸೀನ ಮರಿ ಇತ್ತು. ಅದರ ಹತ್ರ ಕರಿ ಕಂಬಳಿ ಕೊಪ್ಪೆ ಹಾಕ್ಕೊಂಡು ಅಲ್ಲಿ ಅಡಗಿಬಿಟ್ಟ. ಇವರಿಗೆ ಎಲ್ಲೆಲ್ಲಿ ಬೇಕೋ ಅಲ್ಲೆಲ್ಲಾ ನೋಡಿದರು. ಎಲ್ಲೆಲ್ಲಿ ನೋಡಿದರೂ ಜುಂಜಪ್ಪನ ನೆಲೆ ಇಲ್ಲ. 'ಎಲ್ಲೋ ಬಿದ್ದು ಸತ್ತೋಗಿ ಬಿಟ್ಟಿದಾರೆ. ಅವರನ್ನು ಮಣ್ಣುಮಾಡೋಕೆ ನಮಗೆ ಯೋಗ ಇಲ್ಲದಂಗೆ ಆಯ್ತು' ಅಂತ ಹೇಳಿ ಆಗ ಬಂದ್ರು ನೀರಿನ ತಾವಕ್ಕೆ. ದನ ಹೊಡ್ಕೊಳ್ಳಿ ಎಲ್ಲಾ ಹೋಗಿ ಬಿಡೋಣ ಅಂತ ಹೇಳಿ ಸುತ್ತ ಮುತ್ತಾ ಬರುವಾಗ

"ಯಾರನ್ನಯ್ಯಾ ಹೆಂಗ ಮಾಡಿದ್ರಿ?" ಅಂತ ಧಡಕ್ಕನೆ ಎದ್ದನಂತೆ ಸ್ವಾಮಿ ಜುಂಜಪ್ಪ.

"ಜುಂಜಪ್ಪಾ ನೀನು ಇನ್ನೂ ಉಳಿದಿದ್ದೀಯಾ, ನೀನು ಮೊಟ್ಟ ಮೊದಲೇ ಹೋಗಿದೀಯಾ, ತಮ್ಮದೀರು ಈಗ ಹೋಗವ್ರೆ ಮೂವರನೂ ಈಗ ಮಣ್ಣು ಮಾಡಿ ಈ ಆವಿನ ಗೂಡಿನ ದನಾನ ನಾವು ಹೊಡಕೊಂಡು ಹೋಗಾನ ಅಂತ ನಾವು ಬಂದುವಲ್ಲವೋ"

ಇಲ್ಲೇ ನಿಂತುಕೊಂಡು ನಡುಬೆನ್ನಿನಾಗೆ "ಮಾವ ಸಮಯಬಂತು ಅಂದಾಗ ನಾನೂ ಹೋಗೋದೆ, ನೀವು ಹೋಗೋದೆ. ಆದ್ರೆ ನೀವು ಏನು ಮಾತಾಡಿಕೊಂಡು ಬಂದಿದ್ದು? ಸತ್ಯ ಏನು?"

"ಚಿನ್ನಮ್ಮನ ಮಕ್ಕಳು ನಾವು ಮೂವರನ್ನೂ ಮಣ್ಣುಮಾಡಿ ಹೋಗೋಣಾಂತ ನಾವು ಬಂದಿದ್ದು ನಿಜ" ಅಂದರು.

"ನಾನು ಸಾಯಬೇಕು ಅಂದರೆ ಹದಿನಾರು ವರ್ಷಕ್ಕೆ, ನನಗೀಗ ಹನ್ನೆರಡು ವರ್ಷ. ಇನ್ನೂ ಅಷ್ಟು ವರ್ಷ ಐತೆ ಸ್ವಾಮಿ. ಅಲ್ಲೀ ತನಕ ನಾನು ಸಾಯಲ್ಲ. ಮುಂದೆ ಕಥೆ ಏನೂ" ಅಂದ.

"ಇವತ್ತಿನ ದಿನದಾಗೆ ನಾವು ಇಲ್ಲಿ ಇರಬೇಕು. ನ್ಯಾಯಸ್ಥರೆಲ್ಲಾ ಬರಬೇಕು. ನೀವೂ ಇರಬೇಕು. ಈಗ ಮೂರು ಹಗಲು, ಮೂರು ಇರಳು ಈ ಹುಲಿಕುಂಟೆ ಕೆರೆಯಾಗೆ ನ್ಯಾಯ ಮಾಡಿದರೆ ನ್ಯಾಯದಾಗೆ ನೀವು ಗೆದ್ದದ್ದೇ ನಿಜವಾದರೆ ಆ ತಪ್ಪು ಅಪರಾಧಕ್ಕೆ ನಾನು ಗುರಿಯಾಗ್ತೀನಿ. ಇಲ್ಲಾ ನೀವು ಸೋತರೆ, ನಾನು ಗೆದ್ದರೆ ಆ ಮುಂದಲ ನ್ಯಾಯ ಮುಂದಲ ಹೊಟ್ಟೆ ಕರುವಿನ ನ್ಯಾಯ ಮತ್ತೊಂದು ಮಗದೊಂದು ಯಾವುದಿದ್ದರೂ ಅವೆಲ್ಲ ನನಗಿರಲಿ. ನೀವಿಲ್ಲಿ ಇರಬೇಕು" ಅಂದ.

"ಪುರಲಹಳ್ಳಿ ಭೂತಪ್ಪ, ಗೌರಸಂದ್ರದ ಮಾರಕ್ಕ" ಅಂದ ಸ್ವಾಮಿ. ಬಲಗಡೇಲಿ ಮಾರಕ್ಕ ಬಂದಳು.

ಪುರುಲಹಳ್ಳಿ ಭೂತಕ್ಕೆ ಅವತ್ತು ಶನಿವಾರ. "ಶನಿವಾರ ಇವತ್ತು ನನ್ನ ವಾರ. ಅಕ್ಕಿ ಮೂಟೆ ತೆಂಗಿನ ಕಾಯಿಗಳನ್ನೆಲ್ಲಾ ಹೊತ್ತು ಬಿಟ್ಟು ಬಂದಿರ್ತಾರೆ. ಇವತ್ತು ನನ್ನ ವಾರ. ಅಲ್ಲಿ ನಾನು ಹೋಗಿ ಬಿಡಬೇಕು. ನಾನಿಲ್ಲಿ ನಿಲ್ಲೋರ ಮಗನಲ್ಲ, ಯಾವುದಿದ್ರೂ ಹೇಳು. ಭೂಮಿಗೆ ತುಳಿದ್ಹೋಗಿಬಿಡ್ತೀನೊ ಜುಂಜಪ್ಪ" ಅಂದ ಭೂತಪ್ಪ.

"ಏನಿಲ್ಲ ಇವರು ಏಳುಜನ ಕಂಬೇರಗೊಲ್ಲರನ್ನ ಸಾಲು ಹುಣಸೇಮರಕ್ಕೆ ಬಿಗಿಬೇಕು"

ಏಳು ಜನನ್ನೂ ಆ ಸಾಲು ಹುಣಿಸೇಮರಕ್ಕೆ ಕಟ್ಟಿ

"ಜುಂಜಪ್ಪ ನಾನಿನ್ನು ಹೊಂಟೋಗ್ತೀನಿ. ಪುರಲಹಳ್ಳೀಲಿ ನನ್ನ ರಾಜ ಅಂಗಳದಲ್ಲಿ ಜನ ಬಂದು ಸೇರಿರ್ತಾರೆ. ಇವತ್ತು ರಣಾಗ್ರ. ನಾನು ಅಲ್ಲಿರಲೇಬೇಕು. ಹೋಗಿಬಿಡ್ತೀನೆ" ಅಂತ ಭೂತರಾಯ ಹೇಳಿ ಹೊರಟುಬಿಟ್ಟ. ಮಾರಣ್ಣ, ಮೈಲಣ್ಣ ಮೂರುದಿನಕ್ಕೆ ಸರಿಯಾಗಿ ನ್ಯಾಯಸ್ಥರನ್ನೆಲ್ಲಾ ಕರಕೊಂಡು ಬರುವೊತ್ತಿಗೆ ಹುಲಿಕುಂಟೆ ಕೆರೆಗೆ ಅವರೆಲ್ಲಾ

ಬಂದರು. ಮೂರು ಇರುಳು ಮೂರು ಹಗಲು ಕಂಬೇರುಗೊಲ್ಲರನ್ನ ಬಿಡದಂಗೆ ನ್ಯಾಯಮಾಡಿದರು.

"ನಮ್ಮ ತಂದೆ ತಾಯಿ ಪಾದದಾಣೆ ಕರ ನಮ್ಮದಲ್ಲ" ಅಂದರು.

"ಇದು ನಮ್ಮದಲ್ಲ ಅಂದಾಗ ಇನ್ನು ನ್ಯಾಯ ಮಾಡೋದು ಏನೈತೆ, ಈ ನ್ಯಾಯಸ್ಥರೆಲ್ಲಾ ನೋಡ್ತಾ ಇರಿ" ಅಂತ ಹೇಳಿ ಜುಂಜಪ್ಪ,

"ಮಾರಣ್ಣಾ, ಮೈಲಣ್ಣಾ" ಅಂದ.

"ಯಾಕಣ್ಣಾ?"

"ಈ ಹೋರಿಕರದ ಮೈತೊಳೆದು ಬಿಡಿ. ನ್ಯಾಯ ನಮ್ಮದೇ ಆಗಲಿ. ವಾದಿ ಫಿರ್ಯಾದಿ ಎಲ್ಲಾ ನಮ್ಮದೇ ಆಗಿಹೋಯ್ತೂ. ಹೋಗಲಿ ಹಸುಮಾತ್ರ ನಿಮ್ಮದೇ ಆಗಲಿ. ಹೊಡ್ಕೊಂಡು ಹೋಗ್ರಿ" ಅಂತ ಹೇಳಿ "ಮುಂದಿನ ನ್ಯಾಯ ನಾನು ನೋಡ್ಕಂತೀನಿ. ನೀವು ನಡೀರಿ" ಅಂತ ಎಲ್ಲರನ್ನೂ ಸಾಗಾಕಿ ಬಿಟ್ಟು ಹೋರಿಕರುವಿಗೆ ಒಂದು ಗಂಗೆ ದೇವತೆ ಮಾಡಿ ಗಣಯಜ್ಞ ಮಾಡಿಬಿಟ್ಟು

"ಇದಕ್ಕೆ ಏನಂತ ನಾಮಕರಣ ಮಾಡ್ತೀರಪ್ಪಾ ತಮ್ಮದೀರ" ಅಂತ ಕೇಳಿದ ಮಾರಣ್ಣ, ಮೈಲಣ್ಣನ್ನ. ಯಾರೂ? ಜುಂಜಪ್ಪ.

"ಈಗ ನೀನೇ ಮಾಡಬೇಕು ಹಿರಿಯಣ್ಣಾ, ನಾವು ಮಾಡಾಕೆ ಆಗಲ್ಲ. ಕಾಲಿನಲ್ಲಿ ಕಡು ಚೆಲುವ. ನಾಲಗೇಲಿ ನಕ್ಷತ್ರ, ಕೊಂಬಿನಲ್ಲಿ ಗಂಭೀರವಂತ, ಬಾಲದಲ್ಲಿ ಬಲವಂತ, ಬುದ್ಧಿಯಲ್ಲಿ ಬುದ್ಧಿವಂತ, ಮುಖದಲ್ಲಿ ನೋಡಿದ್ರೆ ಸುಂದರ ಸುಕ್ಕೆ ಬೊಟ್ಟಿನ ಚೆಲುವ, ಬಡಮೈಲ ಬಟ್ಟಣ್ಣ, ಮುಂದಲಯೋಗ ಬಲ್ಲೋನು, ಮುಂದನದು ಸ್ವಪ್ನದಾಗೆ ಬಲ್ಲೋನು, ಮುಂದಾಕ್ಷಿ ಬಟ್ಟಣ್ಣ ಬಡಮೈಲ" ಅಂತ ನಾಮಕರಣ ಮಾಡಿ 'ಇವನಿಗೆ ಮುಂದಾಗಿ ನಾನೇ ಪ್ರಾಣ ಬಿಟ್ಟರೂನೂ ಕಂಬೇರ ಗೊಲ್ಲರಿಗೆ ಎದುರಾಗಿ ನೀನು ಪಾರ್ಟಿ ನಿಲ್ಲಬೇಕು' ಅಂತ ಹೇಳಿ ಬಟ್ಟಣ್ಣ ಮುಂದಲಯೋಗ ಬಲ್ಲೋನು, ಮುಂದನದು ಸ್ವಪ್ನದಾಗೆ ಬಲ್ಲೋನು, ಮುಂದಾಗಿ ಬಟ್ಟಣ್ಣ ಬಡಮೈಲ ಅಂತ ನಾಮಕರಣ ಮಾಡಿದನಂತೆ. ವಾರವಾರ ಹದಿನೈದು ದಿನ ಆಗೋವಾಗ್ಗೆ ಎಲ್ಲಾ ಹಸುಗಳದ್ದೂ ಹಾಲು ಊಡಿಕೊಂಡು ಈಗ ಬೆಳಿ ಅಂದ್ರೆ ಅದು ಆಗಲೇ ಬೆಳೀತಂತೆ. ಹದಿನೈದೇ ದಿನಕ್ಕೆ ದೊಡ್ಡ ಬಸವ ಆಗಿ ಹೋಗಿಬಡ್ತು. "ಇವತ್ತಿನ ದಿನದಾಗೆ ಬೇರೆ ಹಸುಗಳು ಗೊಡ್ಡು ಹಸುಗಳು ಈದ ಹಸುಗಳು ಎಲ್ಲಾ ಐದಾವೆ. ಅವುಗಳಿಗೆ ನೀನು ಒದೆಯೋದು ಗುದ್ದೋದು ಮಾಡಬೇಡ." ಅಂದ ಜುಂಜಪ್ಪ.

"ಸ್ವಾಮಿ ಜುಂಜಪ್ಪ, ನಿನ್ನ ಆಶೀರ್ವಾದದಿಂದ ನನಗೆ ಹಾಲುಕುಡಿದು ಹೆಚ್ಚಾಗಿದೆ. ನೆಣ ಆ ಕೊಬ್ಬು ನನಗೆ ಹಿಂಗೆ ಮಾಡಿಸ್ತಾ ಐತೆ. ಈಗ ನಿನ್ನ ಆಶೀರ್ವಾದಿಂದ ನಾನು ಬೆಳೆದಿದ್ದೀನೆ"

"ಆದರೆ ಜುಂಜಪ್ಪ ನೀನು ಹೇಳು ಮತ್ತೇನಾಗಬೇಕು ನಿನಗೆ"

"ಏನಿಲ್ಲಾ ನಿನಗೆ ಅಷ್ಟು ದುರಹಂಕಾರ ಜಾಸ್ತಿ ಆಗಿದ್ದರೆ ಚೇಳೂರಾಗಿರೋ ಕಾವಲಿಗೆ ಹೋಗಿ ಹುಲ್ಲು ನೀರು ನೋಡ್ಕೊಂಡು ಬರಬೇಕು ಕಣೋ ಬಡಮ್ಯೆಲ" ಅಂತ ಅಪ್ಪಣೆ ಕೊಟ್ಟ ಜುಂಜಪ್ಪ.

೨.೩.೪. ಚೇಳೂರು ಕಾವಲಿನಲ್ಲಿ ಬಡಮ್ಯೆಲನ ಸಾಹಸ

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್‍ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

"ನಿನ್ನ ಆಶೀರ್ವಾದ ಕೊಟ್ಟಿಬಿಡು ಸ್ವಾಮಿ ನಾನು ಹೊಗ್ತೀನಿ. ಏನಂತ ಕೊಡ್ತೀಯ?" ಅಂದ ಬಡಮ್ಯೆಲ.

"ಸರಿಯಾದ ಬಸವ ಬರ್ತಿದೆ ಚೇಳೂರು ಕಡೆಗೆ ಅಂತ ಮರ ಹತ್ತಿದೋರ್‍ನ ಬಿಟ್ಟು ಬಿಡು. ನಿನಗೆ ಅಡ್ಡ ಬಿದ್ದೋರನ್ನ ಬಿಟ್ಟುಬಿಡು. ವೀರಾವೇಶದಿಂದ ಯಾರು ದೊಡ್ಡದಾಗಿ ಎದುರು ಮಾಡಿಕೊಂಡು ಬತ್ತಾರೆ ಅವರನ್ನ ನಾಶನ ಮಾಡಿಕೊಂಡು ಹೋಗೋ ಬಡಮ್ಯೆಲ" ಅಂತ ಆಶೀರ್ವಾದ ಮಾಡಿದ.

ಅವನ ಆಶೀರ್ವಾದ ತೊಗೊಂಡು ಹೊರಟ ಬಡಮ್ಯೆಲ. ಹೊಸಹಳ್ಳಿ, ಕುಂಬಾರಹಳ್ಳಿ, ಕಳ್ಳಂಬೆಳ್ಳ, ಹೊನ್ನೋರಲಹಳ್ಳಿ, ರಂಗನಹಳ್ಳಿ, ಮಳೇಕೋಟೆ, ಮದ್ದನ ಕುಂಟೆ, ಕರಿಯಾಲ, ಜಾವಗಲ್ಲು, ತಾವರಕೆರೆ, ಅಂದಾನಳ್ಳಿ, ಅಂದನಳ್ಳಿ, ಕ್ಯಾವರೆಹಳ್ಳಿ, ಮದ್ದಕನಹಳ್ಳಿ ತಾಂಡ್ಯದ ಮೇಲೆ ಹಾಸಿ ತಾವರೆಕೆರೆ ಹಳೆಹಟ್ಟಿ,ಹಿರೆಹಟ್ಟಿ ಮೂರು

ರೇಪುಗಾರನ್ನು ಹಾಯಿಸಿ ಮಾರಕ್ಕನ ಗುಡಿ ಮುಂದಲಾಗೆ ಹಾಯಿಸಿ, ಕೆರೆಏರಿ ಮೇಲೆ ಹಾಸಿ, ಹೊಸಹಳ್ಳಿ ನಿಂಬೆಮರನಹಳ್ಳಿ ಎಡಕ್ಕೂ ಬಲಕ್ಕೂ ಬಿಟ್ಟುಕೊಂಡು, ಮರಡಿಗುಡ್ಡೆ ರಂಗಪ್ಪನ ಕಾವಲು ಹಾಯಿಸಿ ಒಂಭತ್ತು ಗಾವುದಕ್ಕೆ ಪುರಸಕ್ಕನ ಕೆರೆಗೆ ಬಂದು ಬಿಟ್ಟನಂತೆ. ಮೂರು ಸಾರಿ ನಿಂತು, ಮಾರುಸಾರಿ ನೆಗೆದು ಅಲ್ಲಿಂದ ಜಾಜಿ ಕೆರೆ ಏರಿಮೇಲೆ ಹಾಸಿ ಕಳುವೇರಹಳ್ಳಿ ಗುಡಿಮುಂದೆ ಹಾಸಿ ಕಳ್ಳಂಬೆಳ್ಳ, ಶನಿದೇವರ ಗುಡಿ ಮೇಲಾಗಿ ಹಾಸಿ, ಅಮ್ಮಸಂದ್ರ, ದಾನಪ್ಪನ ಹಳ್ಳ, ಕಾಡಿಗೆ ಪಾಳ್ಯ ಕುರಬರಹಳ್ಳಿ ಪಕ್ಕಾಗೆ ಹಾಸಿ, ಊರ ಮುಂದೆ ಹಾಸಿ, ರಂಗನಹಳ್ಳಿಯ ಕೆರೆಪಕ್ಕಗಾಸಿ ಚೇಳೂರು ಕಾವಲಿಗೆ ಬಂದನಂತೆ ಬಡಮ್ಮೈಲ.

ಇಷ್ಟೂ ಊರುಗಳನ್ನೆಲ್ಲಾ ದಾಟಿ ಬಡಮ್ಮೈಲ ಚೇಳೂರು ಕಾವಲಿಗೆ ಬಂದು ಚೇಳೂರು ಕೆರೆ ಏರಿ ಮೇಲೆ ನಿಂತುಕೊಂಡು ಮೂರುಮಗ್ಗುಲಲ್ಲಿ ನೋಡ್ತಾನೆ. ನೂರಾಒಂದು ಆಳು. ನೂರಾಒಂದು ಬಾಗಿಲಿನ ಕಾವಲು ಚೇಳೂರು ರಂಗಪ್ಪನ ಕಾವಲು. ಆ ದ್ವಾರಬಾಗಿಲಿಗೆ ನೂರಾಒಂದು ಬಾಗಿಲಿಗೆ ಒಂದು ಆಳು. ಪಾಳೇಗಾರರ ನೂರಾಒಂದು ಆಳನ್ನ ನೋಡಿ 'ಇಲ್ಲಿ ನನ್ನ ಬೇಳೆ ಏನೂ ಬೇಯಲ್ಲ. ಪಟ್ಟೆ ದಟ್ಟಿಯೋನ ತಾವಕ್ಕೆ ಹೊತ್ತಾರೆ ಹೋಗಿ ಅವನಿಗೆ ಹೇಳಿಬಿಡಾನ. ಅಲ್ಲಿ ತೋಟ ಬಂದೂಕ ರೆಡಿ ಮಾಡ್ಕೊಂಡು ನಿಂತವರೆ ಪಾಳೇಗಾರರು. ಹೊಡೆದುಬಿಡತಾರೆ ನಾನು ಕಾವಲಿಗೆ ಹೋದರೆ ಅಂತ ಹೇಳಿ ಕೆರೆಏರಿಮೇಲೆ ನಿಂತು ಕಾಲು ಕೆದುರಿ ಗುಟುರಿಕೆ ಹಾಕಿ ಹೊಂಟನಂತೆ. ಬಡಮ್ಮೈಲ ವಾಪಸು ಹಿಂದಕ್ಕೆ ಹೊಂಟುಬಿಟ್ಟ.

ವಾಪಾಸು ಹಿಂದೆ ಹೋಗಿ 'ಜುಂಜಪ್ಪ' ಅಂದ

'ಯಾಕೋ?'

"ಅಂತಾ ಹುಲ್ಲು ನೀರು ಇರೋ ಜಾಗದಾಗೆ ಪಾಳೇಗಾರ್ರುನ್ನ ನೋಡಿ ನಾನು ಹಿಂದಕ್ಕೆ ಬಂದುಬಿಟ್ಟೆ ಜುಂಜಪ್ಪ."

"ನೀನು ಗ್ಯಾರಂಟಿ ಹೋಗಿಲ್ಲ, ಮಾರಣ್ಣ ಮೈಲಣ್ಣ, ಇವನೆಲ್ಲೋ ನೆರಳಾಗೆ ಮಲಗಿ ಬಂದು ನಮಗೆ ಈ ಸುಳ್ಳು ಸುದ್ದಿ ಕೊಡ್ತಾ ಇದಾನೆ. ನನಗೆ ಗೊತ್ತಿಲ್ಲ, ಇವ್ನು ಇಷ್ಟು ಬೇಗ ಬಂಧ್ಬಿಟ್ಟದಾನೆ ಇರಲಿ. ನಾನೇ ಹೋಗಿ ಹುಲ್ಲು ನೀರು ನೋಡಿಕೊಂಡು ಬರ್ತೀನಿ" ಅಂತ ತಾನೇ ಹೊಂಟುಬಿಟ್ಟ ಜುಂಜಪ್ಪ.

ಬಡಮ್ಮೈಲ ಹಿಂದಕ್ಕೆ ಬಂದಿದ್ದು ಇವನಿಗೆ ಅಸಮಾಧಾನ ಆಗಿಬಿಡ್ತು. ಇಷ್ಟು ಬೇಗ ಬಂದುಬಿಟ್ಟನಲ್ಲ. ಇವನು ಹೋಗಬೇಕಾಗಿದ್ರೆ ಚೇಳೂರು ಕೆರೆ ಏರಿ ಮೇಲೆ ಒಂದು ಬಲಗಾಲನಾಗೆ ಕಾಲು ಕೆರೆದು ಒಂದು ಗುಟುರಿಕೆ ಹಾಕಿದ್ದು ಒಂದು ಮೊಳದುದ್ದ ಗುರಿಕೆ ಬಿದ್ದದೆ. "ಹೋಗಿ ನೋಡು ಹೋಗಪ್ಪಾ, ನೀನೇ ದೊಡ್ಡೋನು ಜುಂಜಪ್ಪ" ಅಂದ ಬಡಮ್ಮೈಲ. "ಮಾರಣ್ಣ ಮೈಲಣ್ಣ ಬಡಮ್ಮೈಲ ಆವಿನ ದನೀನ ಕಡೆ ಜೋಪಾನ" ಅಂತ ಹೇಳಿ ಸ್ವಾಮಿ ತಾನೇ ಹೊಂಟುಬಿಟ್ಟ. ಒಂಭತ್ತು ಗಾವುದಕ್ಕೆ ಬಂದು ಪುರಸಕ್ಕನ

ಕೆರೆಗೆ ಬಂದ. ಅಲ್ಲಿ ಏನು ಬಡಮ್ಮೈಲ ಬಂದಿದ್ದ ಅದೇ ಊರ ಮೇಲೆ, ಅದೇ ಕಾವಲಿನ ಮೇಲೆ ಅದೇ ಹಾದಿ ಮೇಲೆ ಹಾಸಿ ಬಂದು ಬಿಟ್ಟ ಚೇಳೂರು ಕಾವಲಿಗೆ. ಅದೇ ಊರು, ಅದೇ ದಾರಿ, ಅದೇ ಮಾರ್ಗದಾಗೆ ಬಂದು ಚೇಳೂರು ಕೆರೆ ಏರಿ ಮೇಲೆ ನಿಂತುಕೊಂಡು ನೋಡ್ತಾನೆ ಒಂದು ಮೊಳದುದ್ದ ಗುದುರು ಗುಂಡಿ ಬಿದ್ದಿತ್ತಂತೆ ಬಡಮ್ಮೈಲ ಕಾಲುಕೆರೆದಿದ್ದಕ್ಕೂ. ಅದು ನೋಡಿ ಅಲ್ಲೇ ನಿಂತುಬಿಟ್ಟ.

"ಏನಯ್ಯಾ, ಯಾರಯ್ಯ ನೀನು ಹೀಂಗ ನಿಂತಿದಿಯಾ ಇಲ್ಲಿ" ಅಂತ ಇವನನ್ನು ಪಾಳೇಗಾರರೆಲ್ಲಾ. 'ಯಾವೂರಯ್ಯ' ಅಂತ ಕೇಳಿದ್ರು.

"ಯಾವೂರಯ್ಯ ಅಂದ್ರೆ ಏನು ಹೇಳಲಿ ಸ್ವಾಮಿ. ಗೊಲ್ಲಗೆ ಒಂದು ಊರಲ್ಲ. ಪಟ್ಟಣಕ್ಕೆ ಒಂದು ಕೆರೆಯಲ್ಲ; ವಾಲೆಕಾರಗೆ ಒಂದು ಚಾವಡಿಯಲ್ಲ. ಹುಲ್ಲು ನೀರು ಎಲ್ಲೈತೋ ಅಲ್ಲೇ ಗೊಲ್ಲನ ಅರಮನೆ, ತಳಮನೆ. ಈ ಕಾಡಿನಾಗೆ ಹುಟ್ಟಿರೋ ಕಾಡುಗೊಲ್ಲಂಗೆ ಯಾವೂರು ಅಂತ ಹೇಳನ ಸ್ವಾಮಿ?"

"ನೀನು ಹುಟ್ಟಿರೋ ಊರು ಯಾವುದು?"

"ಹುಟ್ಟಿರೋ ಊರು ಹೇಳಬೇಕಾಗಿದ್ರೆ ಅಷ್ಟು ಸಮಾಧಾನ ಇದ್ದರೆ ನೀವು ಕಲೀತೀರೇನಯ್ಯ" ಅಂದ.

"ಹೇಳು" ಅಂದರು.

"ಹೊಸಹಳ್ಳಿ, ಕುಂಬಾರಹಳ್ಳಿ, ಕಳುವಾರಹಳ್ಳಿ, ಬೆಮ್ಮೊರನಹಳ್ಳಿ, ರಂಗನಹಳ್ಳಿ, ಮಳೆಕುಂಟೆ, ಮದ್ದನಕುಂಟೆ, ಕರಿಯಾಲ, ದೇವನಹಳ್ಳಿ, ತಾವರೆಗೆರೆ, ಅಂಡೇನಹಳ್ಳಿ, ಜಾವರಹಳ್ಳಿ, ಮದ್ದಕ್ಕನಹಳ್ಳಿ, ಮಳೇದಹಳ್ಳಿ ಇಷ್ಟು ಊರೈತೆ ನಾವು ಹುಟ್ಟಿರೋದು. ಯಾವ ಅರ್ಥ ಮಾಡಿದ್ರಿ ನೀವು."

"ಸ್ವಾಮಿ ನಮಗೆ ಅರ್ಥವಾಗಲಿಲ್ಲ" ಅಂದರು.

"ಇರ್ಲಿ ಬಿಡಿ" ಅಂದ.

"ಈಗ ನೀವು ಬಂದಿರೋದೇನು ಸ್ವಾಮಿ?" ಅಂತ ಕೇಳಿದರು.

"ನಾವು ಕಾಡುಗೊಲ್ಲರು ಕಾಡಿನಾಗೆ ಇರೋರು. ಒಂದು ಗಿಡ ಮೂಲಿಕೆ ರಸ ಮೂಗಿಗೆ ಹಿಂಡಿದ್ರೆ ಎಂಥಾ ಜಡ್ಡು ಬಂದಿದ್ರೂ ಮ್ಯಾಕೆ ಏಳ್ತಾವೆ. ಎದ್ದು ಬಿಡ್ತಾವೆ. ಎರಡು ಗಿಡಮಟ್ಟೆ ಬೇಕಾಗಿತ್ತು. ಒಂದು ಸಿಕ್ಕಿದೆ. ಇನ್ನೊಂದು ಸಿಕ್ಕಿಲ್ಲ. ನಮ್ಮ ಮನೆದೇವರು ಚಿತ್ರದೇವರು ಅಪ್ಪಣೆ ಕೇಳಿದೆ. ಚಿತ್ರದೇವರ ಏನು ಹೇಳಿದನಪ್ಪಾ ಅಂದ್ರೆ 'ಚೇಳೂರು ಪಾಳೇಗಾರ ರಂಗಣ್ಣನ ಕಾವಲಾಗೆ ಐತೆ. ನಿನಗೆ ಬೇಕಾದ ಗಿಡಮೂಲಿಕೆ ಬೇರು' ಅಂತ. ಅದಕಾಗೆ ಬಂದಿದೀವಯ್ಯಾ. ಪಾಳೆಗಾರನ ಕಾವಲಿನೊಳಕೆ ಬಿಟ್ಟು ಕೊಡಬೇಕು ನನ್ನ.

ಆ ಗಿಡಮೂಲಿಕೆ ಕಿತ್ತುಕೊಂಡು ಬರಬೇಕು" ಅಂತ ಅಲ್ಲೊಂದು ಸುಳ್ಳು ಹೇಳಿದ ಜುಂಜಪ್ಪ,

"ಹೋಗಲಿ ಬಿಡ್ರಲೇ" ಅಂತ ನೂರಾ ಒಂದು ಬಾಗಿಲನ್ನು ತೆಗೆದುಬಿಟ್ಟರು.

ಒಳಗೆ ಹೋದ. ಗಿಡಮೂಲಿಕೇನೂ ನೋಡಲಿಲ್ಲ ಏನೂ ನೋಡಲಿಲ್ಲ. ಆ ಹುಲ್ಲು ನೀರು ನೋಡಿದ. ಮೂರು ಹಿಡಿ ಹುಲ್ಲನ್ನು ತಡವಿ ತೆಕ್ಕೊಂಡೋವ್ನೆ ಕರೆಕಂಬಳಿ ಮಧ್ಯೆ ಮುಚ್ಚಿಟ್ಟ, ಮುಂದಕೆ ಹೋಗಿ ಮೂರು ಮುಂದಾರೆ ಕಾಯಿ, ಕಾರೆಕಾಯಿ ಕಿತ್ತುಕೊಂಡು, ಅವನು ಅದನ್ನ ಒಳಗೆ ಕಂಬಳೀಲಿ ಮುಚ್ಚಿಟ್ಟ, ಅವನ್ನ ಒಳಗೆ ಕಂಬಳೀಲಿ ಇಟ್ಟುಕೊಂಡು ಬರುವಾಗ್ಗೆ ಒಂದು ಎಕ್ಕೆ ಬೇರು ಒಂದು ಬುಕ್ಕೆ ಬೇರು ಒಂದು ಕಕ್ಕೆ ಬೇರು ಮೂರು ಬೇರನ್ನೂ ಕಿತ್ತುಕೊಂಡು ಮುಂದೆ ಕೈಯಾಗೆ ಇಟ್ಟುಕೊಂಡು ಅವರಿಗೆ ತೋರಿಸ್ದ. ಈಚೆ ಬಂದು ಬಿಟ್ಟ. ಹೋಗಿ ನನ್ನ ದನಗಳು ಬರೋ ಹೊತ್ತಾಗಿ ಬಿಟ್ಟಿತು. ಇನ್ನು ಇಲ್ಲೆಲ್ಲೂ ನಿಲ್ಲಲಾರೆ ಅಂತ ಸೀದಾ ಕೆರೆ ಏರಿಗೆ ಬಂದೋನೆ ಮೂರು ಬೇರನ್ನೂ ಹೊರಗೆ ಎಸೆದುಬಿಟ್ಟ. ಮೂರು ಮಂದಾರೆ ಬುಲ್ಡೆ ತುಂಬ ನೀರು ತುಂಬಿಕೊಂಡುಬಿಟ್ಟ. ಅಲ್ಲಿಂದ ಹೊರಟೋವನು ಅಡ್ಡ ಆರುಗಾವುದ ಉದ್ದ ಮೂರುಗಾವುದ ದಾಟಿ ಒಂಭತ್ತು ಗಾವುದಕ್ಕೆ ಕಳುವಾರಹಳ್ಳಿ, ಬೇವಿನ ಹಳ್ಳಿ ತಾವ ಹೊಂಟೋಗಿ ಬಿಟ್ಟ. ಅಲ್ಲಿಗೋಗಿ ಬಿಟ್ಟು ಕಳುವಾರಹಳ್ಳಿ ದಿಣ್ಣೆಯಾಗೆ ನಿಂತುಕೊಂಡು ಮೂರುಹಿಡಿ ಹುಲ್ಲನ್ನಾ ತೆಗೆದು ಎಸೆದು ಬಿಟ್ಟ. ಏಳುಗೂಡಿನ ದನದ ಎದುರೂ ಬಿದ್ದವಂತೆ, ಏಳೇಳು ಮಾರಿನೋವು, ಮೂರು ಬಣವೆ ಹುಲ್ಲು ಬಿತ್ತು. ಮೂರು ಹಿಡಿಗೆ ಮಂದಾರ ಬುಲ್ಡೆಯ ನೀರು ತೊಗೊಂಡು ಕಳುವಾರಹಳ್ಳಿ ಕೆರೆಗೆ ಬಿಟ್ಟನಂತೆ. ಮುಕ್ಕಾಲು ಕೆರೆ ತುಂಬಿಹೋಯಿತು. ನೀರಾಗಿ ಹೋಯಿತು.

"ಮಾರಣ್ಣ ಮೈಲಣ್ಣಾ ಬಿಡ್ರಲ ಆವಿನ ದನಾನ. ಹುಲ್ಲುನ್ನ ನೀರನ್ನ ತಂದಿದ್ದೀನಿ. ನೋಡ್ರಿ".

ಒಳ್ಳೆ ತಡಕ್ಕೊಂಡಿದ್ದವು ಏಳೇಳು ಹದಿನಾಲ್ಕು ಗೂಡಿನ ದನ ಹುಲ್ಲು ಮೇಯಿದೋವು ಏಳಕ್ಕೆ ಆಗಲಿಲ್ಲ.

"ಮುಂದಿನ ದನ ಹುಲ್ಲು ತಿನ್ನೋವು, ನೀರು ಕುಡಿಯೋವು, ಹಿಂದ್ಲಿನ ದನಕ್ಕೆ ಏನೂ ಇಲ್ಲ. ಈ ಹುಲ್ಲು ನೀರು ತರಕ್ಕೆ ಹೋಗಿದ್ದೆಯಾ ಜುಂಜಪ್ಪ" ಅಂದರು.

"ಮಾರಣ್ಣಾ ಮೈಲಣ್ಣಾ ಮೂರು ಹಿಡಿ ಅಲ್ಲ ಆರು ಹಿಡಿ ತಂದಿದ್ರೂ ಈ ಹದಿನಾಲ್ಕು ಗೂಡಿನ ದನಕ್ಕೆ ಇದು ಸಾಕಾಗ್ತಾ ಇರಲಿಲ್ಲ. ಪಾಳೇಗಾರರಿಗೆ ಹೆದರಿಕೊಂಡು ಮೂರು ಹಿಡಿಹುಲ್ಲು ಮೂರು ಬುಲ್ಡೆ ನೀರು ತಂದೆ. ಏಳುಗೂಡಿನ ದನ ಹುಲ್ಲು ತಿಂದು ನೀರು ಕುಡಿದಾವೆ. ಇನ್ನು ಏಳು ಗೂಡಿಗೆ ಹುಲ್ಲೂ ಇಲ್ಲ. ನೀರೂ ಇಲ್ಲ. ನಡೀರಿ ಎಲ್ಲಾ ದನಗಳನ್ನೂ

ಹೊಡೆಯೋಣ. ಸಾಯೋವು ಸಾಯಲಿ. ಉಳಿಯೋವು ಉಳೀಲಿ. ಚೇಳೂರು ಕಾವಲಿಗೆ ಹೊಡೆಯೋಣ ಎಲ್ಲಾ ದನಗಳನ್ನು" ಅಂದ. ನಾರಾಯಣನಂಬೋ ನಾಮಗೊಡಲಿ ಶಿವನೆಂಬೋ ಚಿಪ್ಪು ಗೊಡಲಿ ತೊಕೊಂಡು "ನೀವು ಸೀರ್‍ಯಾದ ಪೇಟೆ ಮೂಡುಗಡೆಗೆ ಬಿಟ್ಟುಕೊಂಡು ಆವಿನ ದನ ತಡಕೊಂಡು ಇರಿ. ನಾನು ತಾಯಿ ತವರು ಮನೆಗೆ ಕಳುವಾರ ಹಳ್ಳಿಗೆ ಹೋಗಿ ನಮ್ಮ ಚಿನ್ನಮ್ಮನ ಕೈಲಿ ಒಂದಿಷ್ಟು ರೊಟ್ಟಿ ಬುತ್ತಿ ಕಟ್ಟಿಸ್ಕೊಂಡು ಬರ್ತೀನಿ" ಅಂತ ತಮ್ಮದೀರನ್ನ ಸಾಗಹಾಕಿ ಹನ್ನೆರಡು ವರುಷದಿಂದ ಹದಿಮೂರು ವರುಷಕ್ಕೆ ಸರಿಯಾಗಿ ಹೊರಟುಹೋಗಿಬಿಟ್ಟ ಕಳುವಾರಹಳ್ಳಿಗೆ, ಯಾರು? ಜುಂಜಪ್ಪ.

"ಯಮ್ಮಾ" ಅಂದ

'ಯಾಕಪ್ಪಾ?'

"ಇಲ್ಲೀಗೆ ಹನ್ನೆರೆಡು ವರ್ಷಕೆ ತುಂಬಿ ಹದಿಮೂರು ವರುಷಕ್ಕೆ ಬಂದಿದೀವಿ ಇಷ್ಟು ಕಾವಲೆಲ್ಲಾ ಜಯಿಸಿ. ಈಗ ಮಾರಣ್ಣಾ ಮೈಲಣ್ಣಾ ಚೇಳೂರು ಕಾವಲಿಗೆ ಹೊರಟಿದ್ದಾರೆ. ಕೆಂಬಕ್ಕಿ ಅನ್ನ ಮೊಸರುಬುತ್ತಿ ಅನ್ನ ಒಂದಿಷ್ಟು ಕಟ್ಟಿಕೊಡಮ್ಮಾ ರೊಟ್ಟಿಬುತ್ತಿ ಸೇರಿಸಿ ನಾವು ಹೊಂಟೋಗಿ ಬಿಡಬೇಕು" ಅಂದ.

"ಇಂದಿಗೆ ಹದಿಮೂರು ವರುಷ ಆತಲ್ಲೋ ನೀನೇ ಬಂದಿಲ್ಲ. ಮಾರಣ್ಣ ಮೈಲಣ್ಣರ ಮುಖನೋಡಬೇಕು. ನಾನೇ ಅವರಿಗೆ ಸಾನಮಾಡಿಸಿ, ಬಟ್ಟೆಹಾಕಿ ಅವರ ಕೈಗೆ ರೊಟ್ಟಿಬುತ್ತಿಕೊಟ್ಟು ಕಳಸುತ್ತಾ ಇದ್ದೆ. ಆದರೆ ನೀನೇ ಬಂದ್ಯಲ್ಲೋ ಜುಂಜಪ್ಪ" ಅಂದಿದ್ದಕ್ಕೆ "ತಾಯಿ ನುಡಿಯೇ ಶುಭನುಡಿಯೋ ಮುಂದೆ ಆತು" ಅಂತ ಹೇಳಿ "ಹಿಂದಕೆ ಹೆಜ್ಜೆ ಇಕ್ಕೊ ಮಗನಲ್ಲ" ಅಂತ ಮನಸಿಗೆ ಬೇಸರ ಮಾಡಿಕೊಂಡು ತಾಯಿ ಹತ್ತಿರ ಬೇಸರಿಕೆ ಮಾಡಿಕೊಂಡು ಮಂಚದ ಮೇಲೆ ಮುಖಅಡಿಯಾಗಿ ಬಿದ್ದು ಮಲಗಿ ಬಿಟ್ಟು ಜುಂಜಪ್ಪ.

ಅವನ ಮೇಗೆ ಮೂರಾಳು ಉದ್ದ ಬೆಳೀತಂತೆ ಮೂಗ್ತುತ್ತ. ಮೂರಾಳುದ್ದದ ಮೂಗ್ತುತ್ತದಾಗೆ ಜುಂಜಪ್ಪಗೆ ಹಾವಿನ ಹಾಸಿಗೆ ಚೇಳಿನ ಗದ್ದುಗೆ, ತಲೆದಿಂಬು, ಮೂರು ತಿಂಗಳು ಮುಚ್ಚಿದಕಣ್ಣು, ಮುಚ್ಚಿದಬಾಯಿ ಇಟ್ಟುಕೊಂಡು ಮನಗಿ ಬಿಟ್ಟ, ಮೂರುತಿಂಗಳು ಮನಗಿಬಿಟ್ಟ. ಅವನು ಅಲ್ಲಿ ಮನಗ್ಯವನೇ. ಜುಂಜಪ್ಪ ಅಲ್ಲಿ ಮನಿಕ್ಕೊಳಕೆ, ಮಾರಣ್ಣಾ ಮೈಲಣ್ಣ ಆ ಜಾಜಿಕೆರೆ ಬಡ್ಡೆಯಾಗೆ ಆವಿನ ದನ ಬಿಟ್ಟುಕೊಂಡು ಮೂರು ದಿನ ನೋಡ್ತಾರೆ 'ಅಲ್ಲಿ ಬಂದಾನಲ್ಲವೆ ಇಲ್ಲಿ ಬಂದಾನಲ್ಲವೆ. ಏನಾರ ತಂದಾನಲ್ಲವೇ ತಿಂದೇವು ಅಲ್ಲವೇ' ಅಂದ್ರೂ ಜುಂಜಪ್ಪನ ಸುಳಿವೇ ಇಲ್ಲ. ಮೂರು ದಿನಾ ಆದ್ರು, ಅವರು ಗೋಳು ಗೋಳಾಡುವಾಗ್ಗೆ ಕಾಲಿನಾಗೆ ಗುಟ್ರಕೆ ಹಾಕಿ ಎದ್ದನಂತೆ ಬಡಮ್ಯೆಲ, ಎದ್ದುನಿಂತು

"ಮಾರಣ್ಣ ಮೈಲಣ್ಣ, ನಿಮ್ಮ ಅಣ್ಣನಿಗೆ ನಿಮ್ಮ ತಾಯಿ ಏನೋ ಅನ್ನಬಾರದ್ದು ಅಂದವ್ಳೆ. ಆ ಮಾತಿಗಾಗಿ ಮಂಚಕ್ಕೆ ಮುಖ ಅಡಿಮಾಡಿ ಬಿದ್ದವ್ನೆ. ಮೂರಾಳುದ್ದ ಮೂಗ್ಹುತ್ತ ಬೆಳೆದೈತೆ. ಮೂರು ತಿಂಗಳು ತುಂಬಬೇಕು. ಅವನು ಎದ್ದೇಳಬೇಕಾದ್ರೆ ಇನ್ನೂ ನಿಮ್ಮ ಅಣ್ಣನ ಸಾಹಸ ಸತ್ಯಾನೆಲ್ಲ ನಾನೇ ತಿರುವಿಬಿಡ್ತೀನಿ ಇವತ್ತು. ಹಿಂದೆ ಜುಂಜಪ್ಪ ಏನು ನಾಮಕರಣ ಮಾಡಿದ್ದ, ದೊಡ್ಡ ಹುಲಿಕುಂಟೆ ತಾವ 'ಕಾಲಿನಲ್ಲಿ ಕಡುಚೆಲುವ, ನಾಲಗೇಲಿ ನಕ್ಷತ್ರ, ಕೊಂಬಿನಲ್ಲಿ ಗಂಭೀರವಂತ, ಬಾಲದಲ್ಲಿ ಬಲವಂತ, ಮುಖದಲ್ಲಿ ನೋಡಿದ್ರೆ ಸುಂದರ ಸುಕ್ಕೆ ಬೊಟ್ಟಿನ ಚೆಲುವ, ಬಡಮೈಲ ಬಟ್ಟಣ್ಣ. ನಾವು ಸತ್ರೂನೂ ಕಂಬೇರಗೊಲ್ಲರ ವಂಶಕ್ಕೆ ನೀನೇ ಮುಂದೆ ಎದುರು ನಿಲ್ಲಬೇಕು' ಅಂತ ಹೇಳಿ ಬಡಮೈಲ ಬಟ್ಟಣ್ಣ ಅಂತ ನಾಮಕರಣ ಮಾಡಿದ್ದ ಜುಂಜಪ್ಪ. ಆ ಸಾಹಸವನ್ನ ನಾನೀಗ ತೋರಿಸಲೇಬೇಕು" ಅಂತ

'ಹದಿನಾಲ್ಕು ಗೂಡಿನ ಆವಿನದನ ಕರಕೊಂಡು ನೀವು ಮಗ್ಗುಲಮೇಲೆ ಬರ್ರಿ ನಾನು ಮುಂದೆ ಹೋಗ್ತೀನಿ'

ಅಂತ ಹೇಳಿ ಚೇಳೂರು ದಾರಿ ಹಿಡಿದ ಬಟ್ಟಣ್ಣ ಬಡಮೈಲ. ಮತ್ತೆ ಮೂರುದಿನಕ್ಕೆ ಸಿರಾದ ಪ್ಯಾಟೆ ತಾವಿಂದ ಚೇಳೂರು ಕಾವಲಿಗೆ ಬಂದು ನೀರು ಕುಡಿಸಿ ಆ ಕೆರೆ ಏರಿಮೇಲೆ ಕೂತುಕೊಂಡು ಮೂರುಮಗ್ಗಲಿಗೂ ನೋಡಿದ್ನಂತೆ. ನೂರಾಒಂದು ಆಳು ಕಾವಲುಗಾರರು ಒಬ್ರೂ ಇರಲಿಲ್ವಂತೆ ಅಲ್ಲಿ. ಯಾಕೆ ಇಲ್ಲಿಲ್ಲ ಅಂದ್ರೆ 'ಚೇಳೂರು ರಂಗಪ್ಪ, ದಿನಾ ನಾವು ಕೆಲಸಾ ಮಾಡ್ತೀವಿ, ಬಿಸಿಲಾಗಿ ಕೂತುಕೊಂಡು, ಒಣ ಹೊಡೆತ ಹೊಡೆಸಿಕೊಂಡು ನಾಕಾಣಿ ಕೂಲಿ ಕೊಡುತಾನೆ. ನಮ್ಮ ಹೆಂಡ್ರು ಮಕ್ಕಳು ಬಿಟ್ಟು ಬಂದ್ರೆ ಊಟಕ್ಕೆ ಆಗಲ್ಲ. ಭದ್ರಾವತಿ ಶಿವಮೊಗ್ಗದ ಹತ್ರ ಬಿದಿರುಕಡಿಯಾಕೆ ಹೋಗಿಬಿಟ್ರೆ, ಆ ಕಾಲಕ್ಕೆ ದಿನಕ್ಕೆ ೨೫–೩೦ರೂಪಾಯಿ ಕೊಡ್ತಾರಂತೆ. ಅಷ್ಟೇ ನಿಮ್ಮ ಕಾವಲು ಕಾಯೋಲ್ಲ' ಅಂತ ಈ ಕಾವಲುಗಾರರೆಲ್ಲ ಹೋಗಿ ಶಿವಮೊಗ್ಗ ಭದ್ರಾವತಿ ಸೇರಿ ಬಿಟ್ಟರಂತೆ. ಒಬ್ರು ಕಾವಲುಗಾರರು ಇಲ್ಲ ಅವತ್ತು. "ನಾರಾಯಣ ಎಂಬೋ ನಾಮಗೊಡಲಿ ಶಿವನೆಂಬೋ ಚಿಪ್ಪುಗೊಡಲಿ ತಗೊಂಡು ನೀವು ಒಂದು ಕಡೆ ಮಗ್ಗುಲಿಂದ ಬಾಗಿಲು ಕಡಕೊಂಡು ಬಂದು ಬಿಡ್ರಿ ಮಾರಣ್ಣಾ ಮೈಲಣ್ಣಾ" ಅಂದ. ಯಾರು? ಬಡಮೈಲ ಬಟ್ಟಣ್ಣ ಹೇಳಿದ್ನಂತೆ. ನೂರಾಒಂದು ಬಾಗಿಲನ್ನು ಕಡಿದು ಹಾಕಿದ್ರಂತೆ. ಬಟ್ಟಣ್ಣ ಕಾವಲಿಗೆ ದನಾಬಿಟ್ಟು ಏರಿಮ್ಯಾಗೆ ಬಂದು ನಿಂತುಕೊಂಡು ಏನು ಹೇಳಿದ "ಮಾರಣ್ಣಾ ಮೈಲಣ್ಣಾ ಆವಿನಾಗೆ ಹಾಲು ಕುಡಿದುಕೊಂಡು ಅಡವಿ ಹಣ್ಣು ತಿನ್ನಕೊಂಡು ಮಡುವಿನ ನೀರು ಕುಡಿದುಕೊಂಡು ನಾವು ಬರೋವರೆಗೂ ನೀವು ಆಂದವಾಗಿ ಇರಬೇಕು. ಇನ್ನು ಮೂರು ತಿಂಗಳಿಗೆ ಬರಲಿ ಜುಂಜಪ್ಪ, ಮೂರು ದಿನಕ್ಕೆ ಬರಲಿ, ಮೂರು ವರ್ಷಕ್ಕೆ ಬರಲಿ, ಯಾವಾಗೇ ಬರಲಿ ಜುಂಜಪ್ಪ. ಈ ಕೆರೆ ಏರಿಮೇಲೆ ಬಂದು ಇಲ್ಲಿ ನಿಂತುಕೊಂಡು 'ಮಾರಣ್ಣ ಮೈಲಣ್ಣ ಬಟ್ಟಣ್ಣ ಬಡಮೈಲ ಅಂತ ಕೂಗುವವರೆಗೂನೂ ಈ ಮೂವತ್ತು ಮೂರು ಹಳ್ಳಿ ಹುಲ್ಲಿನ ಕಾವಲಿನಾಗೆ ಹುಲ್ಲು

ಮೇಯಬೇಕು ಅಂತ." ಆಶೀರ್ವಾದ ಮಾಡಿಬಿಟ್ಟ. ಯಾರು? ಬಡಮೈಲ. ಮೂರು ತಿಂಗಳು ತುಂಬೋವರೆಗೂನೂ ಆ ಚೇಳೂರು ರಂಗಪ್ಪನ ಕಾವಲಿನಾಗೆ ಆವಿನ ದನ ಮೇಯ್ತಾ ಐತೆ. ಮೂರು ತಿಂಗಳು ತುಂಬೋದಕ್ಕೆ ಮೂರೇ ದಿನ ಇರೋದು. ಅವಾಗಲಾಗಲೇ ಅವನಿಗೆ ಅಲ್ಲಿ ಮುಂಗನಸು ಬಿದ್ದು ಬಿಟ್ಟಿತು. ಕಾವಲಿಗೆ ಬಿಟ್ಟಿದ್ದು ಅವರೆಲ್ಲ ಸುಖವಾಗಿ ಇರಲಿ. ಅಲ್ಲಿ ಮಲಗಿದ್ದನಲ್ಲ ತಾಯಿಕೈಲಿ ಮುನಿಸಿಕೊಂಡು ಚಿನ್ನಮ್ಮನ ಕೈಲಿ ಅವನೀಗ ಮಲಗಿದ್ದನಲ್ಲ. ಅಲ್ಲೇ ಮೇಲೆ ಮೂರಾಳು ಉದ್ದದ ಮೂಗ್ಗುತ್ತ ಬೆಳೆದಿತ್ತು. ಹಾವಿನ ಹಾಸಿಗೆ, ಚೇಳಿನ ಗದ್ದುಗೆ ಬಿಟ್ಟು ಮೇಲೆ ಏಳುವಹೊತ್ತಿಗೆ

'ಯಮ್ಮಾ' ಅಂದ

'ಯಾಕಪ್ಪ?'

'ಇಲ್ಲೀಗೆ ಮೂರು ತಿಂಗಳು ತುಂಬಿತು. ನನ್ನ ತಮ್ಮದೀರು ಏನಾದ್ರೋ ನನ್ನ ಆವಿನದನ ಏನಾದವೋ. ನನಗಿಂತಾ ಕೇಡಿನ ನಿದ್ರೆ ಬಂದು ಮಲಗಿಬಿಟ್ಟಿದೀನಿ ನಿನ್ನ ಕೈಲಿ ಮನ ಮುನಿಸು ಮಾಡಿಕೊಂಡು. ರೊಟ್ಟಿ ಬುತ್ತಿ ರೆಡಿಯಾಗೈತೇನು ಚಿನ್ನಮ್ಮಾ'

'ಐತೆ ಕಣ್ ಜುಂಜಪ್ಪಾ, ಗಡಿಗೆಯಾಗೆ ನೀರು ಕಾಯಿಸಿದೀನಿ ಹಂಡ್ಯಾಗೆ ನೀರೈತೆ ನೀರು ಹಾಕ್ಕೊಂಡು ಹೋಗು ಬಾ' ಅಂತ ಕರೆದು ಮಂಡೆಗೆ ಎಣ್ಣೆ ಸವರಬೇಕು ಅನ್ನೋಹೊತ್ತಿಗೆ ಬೆಳ್ಳಿ ಬಟ್ಟಲಿಗೆ ಕಲ್ಲೆಣೆ ಹೊಯ್ಯಕೊಂಡು ಜುಂಜಪ್ಪಗೆ ಹಚ್ಚೋವತ್ತಿಗೆ ಇಲ್ಲಿ ಚೇಳೂರು ಕಾವಲು ಕತ್ತಲಿನಾಗೆ ಏನೇನು ಆಗತೈತೆ ಅನ್ನೋದು ಎಣ್ಣೇಲಿ ಅವಳಿಗೆ ಕಂಡು ಬಿಡ್ತು. ಮುಂದೆ ಅವಳಿಗೆ ಗೊತ್ತು 'ಯೋಗವೇನೈತೆ' ಅಂತ ಯಾರಿಗೆ? ಚಿನ್ನಮ್ಮಗೆ. ಆದ್ರೂ ಅವಳು ಒಡೆದು ಹೇಳಿರಲಿಲ್ಲ. "ನಾನು ಹೊರಟು ಬಿಡ್ತೀನಮ್ಮಾ ಈಗ" ಅಂದ ಜುಂಜಪ್ಪ.

'ಒಳ್ಳೇದಾಗಲಿ ಈಗ ಜುಂಜಪ್ಪ. ಆದರೆ ಇವತ್ತಿನ ದಿನದಾಗೆ ನೀನು ಹೋಗಬೇಕಾದ್ರೆ ಮಾರಣ್ಣಾ ಮೈಲಣ್ಣನ್ನ ನಿನ್ನ ಅಕ್ಕ ಪಕ್ಕ ಹಾಗೆ ಇಟ್ಟುಕೊಂಡು ನೀನು ಸ್ವಲ್ಪ ಜೋಪಾನದಾಗೆ ಇರಬೇಕು ಕಣಪ್ಪಾ'.

"ಆತು ಹೇಳಮ್ಮ ಇಲ್ಲೀಗೆ ಹನ್ನೆರಡು ವರುಷ ಆಯ್ತು. ಹದಿಮೂರು ವರುಷದಿಂದಲೂನೂ ಕಾಪಾಡಿಕೊಂಡು ಬಂದಿದೀನಿ. ಇವತ್ತು ನಾನು ಮಕ್ಕಳಿಗೇನು ಅನ್ಯಾಯ ಮಾಡಲ್ಲ" ಅಂದ.

ಆಗ ಇವರು ಬಂದು ಮಾರಣ್ಣಾ ಮೈಲಣ್ಣ ಈ ಚೇಳೂರು ಕಾವಲಿಗೆ ಬಿಟ್ಟಾರಲ್ಲ. ಆದ್ರೂ ಮೂರು ತಿಂಗಳು ತುಂಬೋ ತನಕ ಜುಂಜಪ್ಪ ಅಲ್ಲಿ ಮಲಗ್ಯವ್ನೆ. ಇವರು ಇಲ್ಲಿ ಮೇಯಿಸ್ತನೇ ಅವ್ರೆ. ಈ ಏಳುಜನ ಮಾವದೀರು ಇದ್ದರಲ್ಲ ಅವರು ಕಂಬೇರ ಗೊಲ್ಲರು, ಸಾವಿರ ಹಣ ಸಾಲ ನಿಲ್ಲಿಸಿ ಪಾಳೇಗಾರರಿಗೆ ಹೊಡಕೊಟ್ಟಿದ್ರಂತೆ ಬಡ ದನಗಳನ್ನು ಕುಯಿಸಕ್ಕೆ, ಈಗ ಸಾಬರಿಗೆ ಬಡ ದನಗಳನ್ನು ಹೊಡೀತಾರಲ್ಲ ಹಾಗೆ. ಏಳು ಸಾವಿರದ

ಹೋರಿ ಹೊಡೆದಿದ್ದರು. 'ನಾವು ಹೋಗಿ ಪಾಳೆಗಾರ ರಂಗಣ್ಣನ ತಾವಕ್ಕೆ ಹಣ ಇಸ್ಕೊಂಬರ್ಲಿಲ್ಲ. ನಡೀರಲೇ ಈಗ ಹೋಗಿ ಹಣ ಇಸಕೊಂಡು ಬರೋಣ' ಅಂತ ಅವರು ಬಂದುಬಿಟ್ಟು ಚೇಳೂರಿಗೆ ಬಂದು ಏರಿವ್ಯಾಲೆ ನಿಂತುಕೊಂಡು ನೋಡಾಬೇಕಾಗಿದ್ರೆ 'ಆ ಅಪ್ಪನೋವು ಹಸುಗಳು ಬಂದಾವೆ. ಇವ್ಯಾರಾವೋ. ಇವು ಆವಿನ ದನ ಬಣ್ಣಕ್ಕೆ ಲಕ್ಷ ಬೆಳ್ಳಿ ನಾಣ್ಯದ ದನ ಅಂತ ಆ ಫಳಿಗ್ಯಾಗೆ ನೋಡಿಕೊಂಡು ನೀರು ಕುಡಿದು ಮಾತಾಡೋ ಹೊತ್ತಿಗೆ ಆ ನಮ್ಮ ಅಪ್ಪನೋವು ಬಂದಾವೆ. ಹುಲ್ಲು ನೀರಿಗೆ ಬಂದ ಮೇಯಿಸ್ತವ್ರೆ. ನಮಗೆ ಆ ಯೋಗ ಇರ್ಲಿಲ್ಲ, ನಾವ ಮೇಯಿಸಲಿಲ್ಲ. ನಡೀರಲೇ ಯಾರೋವಾರೇ ಆಗಲಿ' ಅಂತ ಹೇಳಿ ಉದ್ದಕ್ಕೆ ಕರೆ ಕಂಬಳಿ ಹಾಸಿ ಅಡ್ಡಬಿದ್ದರಂತೆ ಆವಿನದನಕ್ಕೆ. ಅಡ್ಡಬಿದ್ದು ಮುಂದಕ್ಕೆ ಮೂರು ಹೆಜ್ಜೆ ಹೋಗುವಾಗ್ಗೆ ಮಾರಣ್ಣ ಮೈಲಣ್ಣ ಹಳ್ಳದಾಗೆ ಗೋಲಿಗಜ್ಜುಗ ಆಡ್ತಾ ಇದ್ದವರು ಎದ್ದು ಈಚೆಗೆ ಓಡಿ ಬಂದುಬಿಟ್ಟರು.

'ಅಯ್ಯೋ ಇವರ ಮನೆ ಹಾಳಾಗ, ಕಂಬೇರ ಚಿನ್ನಮ್ಮನ ಮಕ್ಕಳು ಅಲ್ಲವಾ. ಜುಂಜಪ್ಪನ ತಮ್ಮದೀರು ಅಲ್ಲವಾ ಇವರು. ಜುಂಜಪ್ಪನೋವು ಕಣ್ರಲೇ ಇವು ಆವಿನ ದನ. ಆಗ್ದೇ ಇರೋನ ದನೀಗೆ ಅಡ್ಡಬಿದ್ದವಲ್ಲೋ. ನಮಗೇನು ಬಂತು ಗ್ರಹಚಾರ ಇದು.' ಅಂದರು. ಜುಂಜಪ್ಪನೋವು ದನ ಅನ್ನೋದೇ ಗೊತ್ತಿರ್ಲಿಲ್ಲ. ಮಾರಣ್ಣ ಮೈಲಣ್ಣನ್ನ ಯಾವಾಗ ನೋಡಿದರೋ, 'ಅಜ್ಞಾನದೋನಿಗೆ ಅಡ್ಡ ಬಿದ್ದವಲ್ಲೋ ಆ ಬೋಳೀಮಗನ ದನೀಗೆ ನಾವು ಯಾಕೆ ಅಡ್ಡ ಬೀಳೋಕೆ ಹೋಗೋನ. ಪ್ರಾಯದಾಗಿದ್ದಾಗೆ ಯಾರ್‍ಯಾರ ಸಂಸಾರ ಹೊಲಮನೆ ಕಿತ್ತುಕೊಂಡು ಯಾರ್‍ಯಾರಿಗೆ ಏನೇನು ಅಕ್ರಮತನಗಳು ಮಾಡಿದ್ವೋ ಆ ಪ್ರಾಯದಾಗೆ ಮಾಡಿದ ಕರ್ಮ ಈ ಮುಪ್ಪಿನಾಗೆ ಹರಿದು ಹೋಗಲಿ. ನಮ್ಮ ನಮ್ಮ ಕಾಲಿಗೆ ನಾವು ಅಡ್ಡ ಬಿದ್ದುಕೊಳ್ಳೋಣ. ನಮ್ಮ ನಮ್ಮ ಕಾಲಿಗೆ ನಾವು ಅಡ್ಡ ಬಿದ್ದುಕೊಂಬಿಡಾನಾ." ಅಂದುಕೊಂಡು ಅವರವರ ಕಾಲಿಗೆ ಅವರವರೆ ಅಡ್ಡ ಬಿದ್ದುಕೊಂಡು ಹೋಗಿ ದೊರೆ ಅರಮನೆ ಮುಂದೆ ನಿಂತುಕೊಂಡು

"ರಂಗಪ್ಪ" ಅಂದರು.

"ಯಾಕ್ರಯ್ಯ?" ಅಂದ.

'ಒಂದಿನ ಎರಡುದಿನ ಬಾರದಿದ್ರೆ ನೀವು ಅಥವಾ ನಿಮ್ಮ ಹೋರೀನ ವಾಪಾಸು ಹೊಡೆದಿದ್ರೆ ನೀವು ಬರೋದು ಸರಿ. ನಿಮ್ಮ ಹಣಕ್ಕೆ ನಾನು ಇಲ್ಲಾ ಅಂದಿದ್ನ. ಹೀಗೆ ಬಂದು ಊರಮುಂದೆ, ಮನೆಮುಂದೆ ನಿಂತು ಬಾಯಿ ಮಾಡಿದರಲ್ಲ. ಒಂದಿನ ಆದ್ರೂ ಬಂದು ನೀವು ನನ್ನ ಹಣ ಕೇಳಿಲ್ಲ. ನಾನೂ ಕೊಡಲ್ಲ ಅಂದಿಲ್ಲ. ನೀವು ಹೀಗೆ ಯಾಕೆ ಬಾಯಿ ಮಾಡಿದಿರಿ. ಯಾಕ್ರಯ್ಯಾ?' ಅಂತ ದೊರೆ ಕೇಳಿದ.

'ನಮ್ಮ ಏಳು ಸಾವಿರದ ಹೋರಿ ಆವಿಗೆ ಕಲ್ಲು ಬಿದ್ದು ಹೋಗಲಿ ರಂಗಪ್ಪಾ, ನಾವು ಹೋರಿ ಆವಿಗೆ ಬಂದವರಲ್ಲ. ನಮ್ಮ ತಂಗಿ ಮಕ್ಕಳ ದನ ಬಂದು

ಇಲ್ಲಿಗೆ ಮೂರು ವರುಷವಲ್ಲ ಆರು ವರುಷವಾಗ್ಯೆತೆ ಇಲ್ಲಿಗೆ ಬಂದು ಹುಲ್ಲು ನೀರಿಗೆ. ಒಂದು ಗಾಳಿ ಬೀಸಿದ್ರೆ ಕೆಂಧೂಳಿ ಕೆದರಿ ಏಳುತ್ತೆ. ಹುಲ್ಲಿಲ್ಲ, ನೀರಿಲ್ಲ. ನಿನ್ನ ಹೇಳಿಕೆ ಕೇಳಿಕೆ ಕೇಳಿ ಬಿಟ್ಟಿದ್ರೋ ಹಂಗೇ ಬಿಟ್ಟಿದ್ರೋ ರಂಗಪ್ಪ.'

"ನನ್ನ ಏನೂ ಕೇಳಿಲ್ಲ ಕಣಪ್ಪಾ ದೊಡ್ಡಚಿನ್ನೇಗೌಡ."

"ಅವನು ಎಷ್ಟು ಲಕ್ಷಕ್ಕೆ ಐದಾನೆ, ಎಷ್ಟು ಕೋಟಿಗೆ ಐದಾನೆ. ಅವನ ಹೊಟ್ಯಾಗೆ ಎಷ್ಟು ಮಡಗವ್ನೆ ಹಣಾನ. ಅವನ ದಟ್ಯಾಗೆ ಎಷ್ಟು ಮಡಗವ್ನೆ. ಅವನನ್ನ ಒಂದುಕೈ ನೋಡ್ಕಂತೀನಿ. ಎಲ್ಲವ್ನೆ ಅವ್ನು ಈವಾಗ" ಅಂತ ಚೇಳೂರು ದೊರೆ ಅವುನ್ನ ಕೇಳಿದ.

ದೊರೆಗೇನು ಅಡ್ಡವಾ? ದೊರೆ ಕೇಳಿದಾಗ "ಅವ್ನು ಮೂರುತಿಂಗಳು ಚಿನ್ನಮ್ಮನ ಕೈನಾಗೆ ಮನ ಮುನಿಸು ಮಾಡಿಕೊಂಡು ಮಂಚಾದಾಗೆ ಮುಖ ಅಡಿಯಾಗಿ ಮಲಗವ್ನೆ. ನಾವು ನೋಡಿಯೇ ಬಂದಿರೋದು ಇವಾಗ. ಅವನ ತಮ್ಮದೀರು ಇಬ್ಬರು ಬಂದವ್ರೆ. ಅವನು ಕಳುವಾರಹಳ್ಳಿ ತಳಮನೆಯಾಗೆ ಅವನೆ. ಅವನ ತಮ್ಮದೀರು ಇಬ್ರು ಅವರೆ ಮಾರಣ್ಣ, ಮೈಲಣ್ಣ. ಬಡಮೈಲ ಅಂತ ಹೇಳೋದೊಂದು ಬಸವ ಐತೆ. ಆ ಬಸವನಾಗೆ ಐತೆ ಜುಂಜಪ್ಪನ ತಾಕತ್ತೆಲ್ಲಾ ಅಂತ. ನಮ್ಮ ದನೀನಾಗಿಂದೆ ಹೊಟ್ಟೆ ಕರ" ಅಂತ ಅವರೆಲ್ಲ ಹೇಳಿಬಿಟ್ಟರು.

"ಅಲ್ಲೆ ಹುಲಿಕುಂಟೆ ಕೆರೆತಾವ ಜಾಡಕಳೆದು ಅಲ್ಲಿ ಮುಚ್ಚೆಬಿಟ್ಟಿದ್ವು. ಆ ಹೋರಿಕರುಗೆ ಅದು ಇನ್ನೇನು ನಾಮಕರಣಮಾಡವ್ನೋ ಆ ಜುಂಜಪ್ಪ, ಆ ಜುಂಜಪ್ಪನ ತಾಕತ್ತೆಲ್ಲಾ ಆ ಬಸವನಲ್ಲಿ ಸೇರಿಕೊಂಡ್ಯೆತೆ. ಆ ಬಸವನ್ನ ಒಂದು ನೀನು ಹೊಡೆಸಿದ್ರೆ ನಾವು ಏಳುಜನಾನೂ ಹೋಗಿ ಸೀರ್ಯಾದಾಗೆ (ಸಿರಾದಾಗೆ) ಚಿಕ್ಕ ಅಂಗಡಿಯಾಗೆ ಕೆರೆ ಕೋಮಟಿಗ ಶೆಟ್ಟಿ ಅಂಗಡಿಯಾಗೆ ಏಳು ತೊಲ ಮದ್ದು ತೂಗಿಸಿಕೊಂಡು ಬರ್ತೀವಿ. ಏಳು ತೊಲ ಮದ್ದು ತೂಗಿಸಿಕೊಂಡು ಬಾಳೆಹಣ್ಣಿನಾಗೆ ಬೆರಸಿಕೊಂಡು ಬಂದು ನಾವು ಅವನಿಗೆ, ಅವರಿಬ್ಬರಿಗೆ ಕೊಟ್ಟು ಅವರು ಇಬ್ರನ್ನೂ ತಿಂದು ಹಾಕೋದು ನಮಗಿರಲಿ. ಹದಿನಾಲ್ಕು ಲಕ್ಷದ ದಂಡು, ತೋಟದವರು, ಫಿರಂಗಿಯವರು, ಮದ್ದುನೋರು, ಗುಂಡಿನೋವರು ಎಲ್ಲಾರ್ನೂ ಕರೆಸಿ ಬಂದೂಕದಾಗೆ ಹೊಡೆಸಿ ಚೇಳೂರಿನ ಏಳು ಸುತ್ತು ಕೋಟೆ ಒಳಗಿರೋ ಎಂಟು ಏಣಿನ ಕಲ್ಲುಕಂಬಕ್ಕೆ ತಂದು ಇದುನ್ನ ಸೆರೆ ಹಾಕಿಸೋದು ನಿನಗಿರಲೇನೋ ರಂಗಪ್ಪ' ಅಂತ ಹೇಳಿಬಿಟ್ರು"

ಮತ್ತೆ ಇವರು ಹೊಂಟುಬಿಟ್ಟರು. ಇವರು ಸಿರಾದಾಗೆ ಚಿಕ್ಕ ಅಂಗಡಿಯಾಗೆ ಹೋಗಬೇಕಾಗಿದ್ರೆ ಏಳು ಏಳು ಹದಿನಾಲ್ಕು ಲಕ್ಷದ ದಂಡು ಎಲ್ಲಾ ರೆಡಿಮಾಡಿಸಿ

ಬಿಟ್ಟನಂತೆ. ಅವನ ದೊರೆತನಕ್ಕೆ ಏನು ಕಡಿಮೆ ಇರಲಿಲ್ಲ. ದೊರೆತನಕ್ಕೆ ಏನು ಬಡತನ. ಅವನು ಪಾಳೇಗಾರ. ಇವರು ಹೋಗಿ ಕೆರೆ ಕೋಮಟಿಗ ಶೆಟ್ಟಿ ಅಂಗಡಿಗೆ ಹೋಗಿ

'ಶೆಟ್ಟಿ' ಅಂದರು.

'ಏನ್ರಯ್ಯ' ಅಂದ.

'ಯಾವ ಯಾವ ಮಳಿಗೆಯಾಗೆ ಎಂತೆಂಥಾ ಮದ್ದು ಮಡಗಿದ್ದೀಯಾ ಹೇಳಯ್ಯ ಶೆಟ್ಟಿ' ಅಂದರು.

'ಯಾತಕ್ಕೆ ಸ್ವಾಮಿ ಮದ್ದು?'

"ಒಂದು ಹುಲಿ, ಕಿರುಬ ಎರಡು ಸೇರಿಕೊಂಡಿವೆ ಈ ಗುಡ್ಡದ ರಂಗಪ್ಪನ ಗುಡ್ಡದಾಗೆ. ಒಂದು ಗವಿ ಐತೆ. ಆ ಗವಿಯಾಗೆ ಕುಂತಕೊಂಡು ನಾವು ದಿನಾ ಆ ಗುಡ್ಡದಾಗೆ ದನ ಮೇಯಿಸೋಕೆ ಹೋದರೆ ದಿನಾ ಒಂದೊಂದು ಗಬ್ಬದ ಹಸುಗಳನ್ನು ಕೆಡವಿಬಿಡುತ್ತದೆ. ಆ ಹುಲೀನ ನಾವು ಹೊಡೀಬೇಕು ಇವತ್ತಿನ ದಿನದಾಗೆ. ಅದಕ್ಕೆ ಇವತ್ತು ಏಳು ತೊಲ ಮದ್ದನ್ನು ನೀನು ತೂಗಿಯೇ ತೀರಬೇಕು. ಆ ಮಾಂಸಕ್ಕೆ ಅದನ್ನು ಬೆರೆಸಿ ಅವಕ್ಕೆ ಹಾಕಿಬಿಟ್ಟು ಇಟ್ಟರೆ ಅದನ್ನು ತಿಂದು ಹುಲಿ, ಕಿರುಬ ಎರಡೂ ಸತ್ತುಹೋಗಿ ಬಿಡ್ತಾವೆ. ಅಂತಹ ಮದ್ದು ನೀನು ಕೊಡಬೇಕು ಕಣಯ್ಯ. ಹಾವಿಗೆ ಮದ್ದುಂಟು, ಚೇಳಿಗೆ ಮದ್ದುಂಟು, ಮಾನವರಿಗೆ ಮದ್ದೇ ಇಲ್ಲ. ಕಣ್ರಯ್ಯ. ಹಾವಿಗೆ ಚೇಳಿಗೆ ಮದ್ದು ಮಡಗವ್ನಿ ಆದರೆ ಮಾನವರಿಗೆ ಮದ್ದು ಇಲ್ಲ. ಮಾನವರಿಗೆ ಕೊಲ್ಲೋಕೆ ಏನೂ ಇಟ್ಟಿಲ್ಲ".

'ಮಾನವರಿಗೆ ಅಲ್ಲಪ್ಪಾ, ನಾವು ಆ ದುಷ್ಟ ಜಂತುಗಳನ್ನ ಕೊಲ್ಲೋಕೆ ಬಂದೋರು.'

ತಗ್ಗಾಳೆ ಗಲ್ಲಾನೆ ಕೈಯಾಗೆ ಹಿಡಕೊಂಡು ಕೋಮಟಿಗನೆ ಶೆಟ್ಟಿಯಲ್ಲೋ
ಒಲ್ಲದೆನೆ ಒಂದಾನೆ ಮಂಡಲದ ಮದ್ದಾನೇ ತೂಗಲುವಾಗೆ
ಅಳೆವಾಗೆ ಬಾಗಿಲಗೆ ಹಲ್ಲಿ ನುಡಿಸಾವಲ್ಲೋ,
ಮೂರಾನೆ ಮಂಡಲದ ಮದ್ದಲನೇ ತೂಗಲುವಾಗ್ಗೆ
ತೊಲೆಮ್ಯಾಗೆ ಗೌಳಿ ನುಡಿದಾವಲ್ಲೋ

"ಯೋ, ದೊಡ್ಡ ಚಿನ್ನೇಗೌಡ, ಮೂರು ಮಂಡಲ ಮದ್ದು ತೂಗುವಾಗ್ಗೆ ಮೂರು ಅಪಶಕುನ ಆಗಿದಾವಲ್ಲೋ, ಯಾಕ್ರಯ್ಯಾ ನೀವು ಮದ್ದು ತೂಗ್ಸೋದು?"

"ಉಚ್ಚೆ ಹೊಯ್ಯಲಾರದೆ ಎಲ್ಲೋ ಒಂದು ಹಲ್ಲಿ ಲೇಕ ಲೇಕ ಲೇಕ ಅನ್ನಬೋದು. ಈ ಹಲ್ಲಿದೆಲ್ಲಾ ಯಾವ ಶಕುನ, ತೂಗಯ್ಯಾ ಮದ್ದನ್ನ. ಐದಾನೇ ಮಂಡಲದ ಮದ್ದ ತೂಗುವಾಗ್ಗೆ ಶೆಟ್ಟೀ ಮಗನೀಗೆ ಮುಂದೇನೇ ವಾಂತಿಯಲ್ಲೋ ಹಿಂದೇನೇ ಭೇಧಿಯಲ್ಲೋ, ಆರನೇ ಮಂಡಲದ ಮದ್ದ

ತೂಗುವಾಗ್ಗೆ ಸತ್ತವ್ನೋ ಶೆಟ್ಟಿ ಮಗನಲ್ಲಿ. ಆರನೇ ಮಂಡಲದ ಮದ್ದು ತೂಗುವಾಗ್ಗೆ ಅಲ್ಲಿ ಶೆಟ್ಟಿ ಮಗ ಸತ್ತುಹೋದ. ಒಬ್ಬನೇ ಮಗ ಶೆಟ್ಟಿಗೆ. ಅವನ್ನ ತೊಗೊಂಡ್ಹೋಗಿ ಚಿಕ್ಕ ಕೆರೆಯಾಗೆ ಮಣ್ಣುಮಾಡಿ ಪುನಃ ಬಂದು ಐದು ಮಂಡಲ ಮದ್ದು ತೂಗಿಸುವಾಗ್ಗೆ ಶೆಟ್ಟಿನೇ ಹೆಣತಿಗೆ ಮುಂದಲ್ಲೂ ವಾಂತಿಯಲ್ಲೋ ಹಿಂದೇನೇ ಬೇಧಿಯಲ್ಲೋ, ಆರಾನೇ ಮಂಡಲದ ಮದ್ದ ತೂಗಿಸುವಾಗೆ ಸತ್ತವಳೋ ಶೆಟ್ಟಿ ಹೆಣ್ತಿ ಅಲ್ಲೋ.'

"ಅಲ್ರಯ್ಯ ನನ್ನ ವಂಶಾನೇ ತೆಗುದ್ರಲ್ಲೋ, ನನ್ನ ವಂಶಾನೇ ಹೊರಟು ಹೋಯ್ತು. ದೊಡ್ಡ ಚಿನ್ನೇಗೌಡ, ಕಂಬೇರಗೊಲ್ಲರು ನೀವು, ಯಾಕ್ರಯ್ಯ ನೀವು ಮದ್ದು ತೂಗಿಸೋದು?."

"ಅಲ್ಲಯ್ಯೋ ಅವರ ಸಾಯೋ ಘಳಿಗೆ ಬಂತು ಅವರು ಸತ್ತು ಹೋದರು. ಅವರು ಮುಂದೆ ಸಾಯ್ತಾರೆ. ನಾವು ಹಿಂದೆ ಸಾಯ್ತಿವಿ. ನಮ್ಮ ಪಟ್ಟೆ ದಟ್ಟಿಲಿರೋ ಬೆಳ್ಳಿ ವರಹ ದುಡ್ಡು ಎಲ್ಲಾ ತಂದು ಇಲ್ಲಿ ಸುರಿದು ಬಿಡ್ತೀವಿ. ನೀನು ಹಾಸಿಕೊಂಡು, ಹೊದ್ದುಕೊಂಡು, ತಲೆದಿಂಬು ಮಾಡಿಕೊಂಡು, ಮನೀಕ್ಕೊಂಡು, ಉಂಡು ತಿಂದು ಮಲಗಿದ್ದರೂ ಇನ್ನೂ ನಿನ್ನ ತಾವ ಹಣ ಉಳಿಯತ್ತೆ' ಅಂದರು. ಯಾವಾಗ ದುಡ್ಡು ತೆಗೆದು ಅವರ ಮುಂದೆ ಸುರಿದ್ರೋ ಶೆಟ್ಟಿ ದುಡ್ಡಿನ ಆಸೆಗೆ ಕಟ್ಟುಬಿದ್ದು ತೂಗೇ ಬಿಟ್ಟ ಮದ್ದುನ್ನ. ತೂಗೇ ಬಿಟ್ಟ ಏಳು ತೊಲ ಮದ್ದುನ್ನ. ಏಳು ತೊಲ ಮದ್ದು ತುಂಬಿಕೊಟ್ಟು ಅವರನ್ನ ಸಾಗಾಕಿ ಅರ್ಧತೊಲದ ದುಡ್ಡನ್ನು ಒಳಗಿನ ಮನೆಯಾಗೆ ತುಂಬವ್ನೆ, ಅರ್ಧ ಈಚೆಗೆ ಐತೆ ಪಡಸಾಲೆಯಾಗೆ. ಗುಮ್ಮನಹಳ್ಳಿ ಗೊಲ್ಲರ ಹಟ್ಟಿ ತಾವ ಏಳುಜನ ಕಂಬೇರ ಗೊಲ್ಲರು ಬರುವೋ ಹೊತ್ತಿಗೆ ಇನ್ನೂ ಶೆಟ್ಟಿ ಪಡಸಾಲೆಯಾಗೇ ಅವ್ನೆ.

'ಮದ್ದನ್ನೇ ತೂಗಿದರು ಮರೆಯಲ್ಲಿ ಜುಂಜಪ್ಪ
ಮದ್ದನ್ನ ಹಾಳಾಗಿ ಹೋದವಲ್ಲೋ
ಶೆಟ್ಟೀನ ಮನೆತನ ಮಧ್ಯಾನಕ್ಕೆ ಕಾಲವಾಗಿ ಹೋಗುವ ಘಳಿಗ್ಯಾಗೆ
ಏಳುಜನ ಕಂಬೇರು ಅಲ್ಲಿಂದ ಮೂರಾನೇ ದಿನದಾಗೆ ಬಂದವ್ರೆ
ಚೇಳೂರ ರಂಗಣ್ಣನ ಅರಮನೆ ಮುಂದಲ್ಲಿ ನಿಂತವ್ರು
ಆ ಘಳಿಗ್ಯಾಗೆ ತಂದೇವೂ ರಂಗಣ್ಣ ಉರಿಮದ್ದು.'
'ನಾವು ಉರಿಮದ್ದು ತಂದಿದೀವಿ ರಂಗಣ್ಣಾ ಆ ಶೆಟ್ಟಿ ಮನೆತನ
ನಾಶವೇ ಮಾಡಿ ಬಂದಿದೀವಿ, ಮದ್ದು ತೊಗೊಂಡು. ಈಗ
ಹದಿನಾಲ್ಕು ಲಕ್ಷದ ದಂಡೆಲ್ಲಾ ರೆಡಿಯಾಗೈತಾ.'
'ರೆಡಿ ಮಾಡಿದ್ದೀನಿ ಕಣಯ್ಯಾ, ಅಶ್ವತ್ಥದ ಕಟ್ಟೆಮ್ಯಾಗೆ ರೆಡಿ ಮಾಡಿವ್ನಿ.'

ಆಶ್ವತ್ಥ ಅರಳಿಮರದ ಕೆಳಗಿನ ಕಟ್ಟೆಯಾಗೆ ಹದಿನಾಲ್ಕು ಲಕ್ಷದ ದಂಡು ಹಿಂದೆ ಬರಬೇಕು. ಏಳುಜನ ಕಂಬೇರ ಗೊಲ್ಲರು ವಾದ್ಯ ತಾಳ ಮೇಳ ವಾದ್ಯವ ಮಾಡಿಸ್ಕೊಂಡು ಅವರು ಮುಂದೆ ಬರಬೇಕು. ಇಲ್ಲಾಗಲೇ ಬಸವಣ್ಣ ಬಡಮ್ಮೈಲಗೆ ಮುಂಗನಸು. ಏಳುಗೂಡಿನ ದನಾ ಕಾವಲು ಬಿಟ್ಟುಕೊಂಡು ಮೇಯಿಸಿಕೊಂಡು ಇದ್ದನಲ್ಲ ಬಡಮ್ಮೈಲ 'ಎದ್ದೇಳೋ ಮಾರಣ್ಣಾ, ಎದ್ದೇಳೋ ಮೈಲಣ್ಣಾ, ಏಳು ಜನ ಮಾವಗಳು ಸಿಗ್ಗನೆ ಸಿರಾಕ್ಕೆ ಹೋಗಿ ಕರಿಯ ಕೋಮಟಿಗನೆ ಶೆಟ್ಟಿಯಾ ಅಂಗಡಿಯಾಗೆ ಹೋಗಿ ಏಳುವಾಗೋನೆ ಮದ್ದನ್ನ ಇಸಕೊಂಡು ಏಳುಜನ ಮಾವುಗಳು ಹೊತ್ತಾರೆದ್ದು ತಾಳೇನ ವಾದ್ಯಗಳ ಮಾಡಿಸ್ಕಂಡು ಹದಿನಾರು ಲಕ್ಷ ದಂಡೆಲ್ಲಾ ಸೇರಿದವರು ಬಂದವ್ರೆ. ಏಳನೇ ತೊಲದಷ್ಟು ಮದ್ದು ತೂಗಿಸಿಕೊಂಡು ಏಳುಜನ ಮಾವಂದಿರೂ ಮುಂದೆ ಬರ್ತಾ ಅವ್ರೆ. ದಂಡು ಹದಿನಾಲ್ಕು ಲಕ್ಷದ ದಂಡು ಹಿಂದೆ ಬಿಟ್ಟುಕೊಂಡು. ಫಿರಂಗಿಯೋರು, ಮದ್ದಿನೋರು, ಗುಂಡಿನೋರು, ತೋಟದೋರು, ಬಂದೂಕಿನೋರು ಎಲ್ಲಾ ಈಗ ರೆಡಿಯಾಗಿ ಬರ್ತಾ ಅವ್ರೆ.'

'ಕಂಬೇರು ಗೊಲ್ಲರನ್ನ ನಂಬದಿರೋ ಜುಂಜಪ್ಪ,
ನೀನಾಗಿ ಹೊಡೆಯೋ ಹೊರಗೂಡು.
ನೀನಾಗಿ ಹೊಡಿಯೋ ಹೊರಗೂಡು
ಕಂಬೇರು ತಂದಾರೆ ಇಲ್ಲಿ ಉರಿಮದ್ದು.
ಕೆಂದಾವಿನ ಹಾಲಾಗೆ ಮದ್ದಾನೆ ತಂದವರೆ
ನಾಳೇನೇ ಜುಂಜಪ್ಪಗೆ ಅಳೀವೂಟ
ಹೇಳಿ ಕಳಿಸವರಲ್ಲೋ ಈ ಏಳು ಮಾವಗಳು.

ಅಲ್ಲಿಗೆ ಏಳು ಜನ ಮಾವಗಳು ಮುಂದೆ ಬಂದರು, ತಾಳ ಮೇಳ ಮಾಡಿಸಿಕೊಂಡು. ಹದಿನಾಲ್ಕು ಲಕ್ಷದ ದಂಡು ಹಿಂದೆ ಬರ್ತಾ ಐತೆ, ಚೇಳೂರು ಕೆರೆ ತಾಕೆ ಏರಿ ಹಿಂದೆ ಬಾವಿ. ಅದೇ ಬಾವಿತಕ್ಕೆ ಬಂದು

'ಮಾರಣ್ಣಾ, ಮೈಲಣ್ಣಾ' ಅಂದರು ಮಾವಗಳು..

'ಯಾಕ್ಮಾವಾ ಇಲ್ಲಿ ಬಂದ್ರಿ?'

'ಎಲ್ರೋ ನಿಮ್ಮ ಹಿರಿಯಣ್ಣ?'

'ಎಲ್ಲೋ ನೀರು ಕೆರೆ ಕಡೀಕೆ ಹೋಗವ್ನೆ' ಅಂದರು.

'ಬಿಡಿ ಮಾವಾ, ಬನ್ನಿ ಮಾವ ಯಾವಾಗ ಬಂದ್ರಿ?'

'ನಾವು ಚೇಳೂರು ಕಾವಲಿಗೆ ಹುಲ್ಲುನೀರು ನೋಡಿಕೊಂಡು ಹೋಗಾನ ಅಂತ ಬಂದಿದ್ವಿ. ಚೇಳೂರು ದೊಡ್ಡೂರು ಬಾಗಿಲಾಗೆ ಹಾಸಿ ಹೋಗೋವಾಗ್ಗೆ "ಯಾರೋ ನಿನ್ನ ತಂಗಿ ಮಕ್ಕಳ ದನ ಬಂದಾವೆ. ಕಾವಲಾಗೆ ಅವೆ" ಅಂದರು. "ಅದಕ್ಕಾಗಿ ನೋಡಿಕೊಂಡು ಹೋಗಾವ ಅಳಿಯಂದಿರನ್ನ ಅಂತ ಬಂದಿದೀವಿ. ಈಗ ಆ ಚೆನ್ನಮ್ಮ ಕಟ್ಟಿರೋ ರೊಟ್ಟಿ ಬುತ್ತಿ ಮುಗಿದೈತೋ ಐತೋ ಅದೂ ನಮಿಗೆ ಗೊತ್ತಿಲ್ಲ. ಈಗ ನಾವು ಕೆಂಪಕ್ಕಿ ಅನ್ನ ಕೆನೆಮೊಸರು ಬುತ್ತಿ, ರೊಟ್ಟಿಬುತ್ತಿ, ಬಳ್ಳೆಬುರುಗು, ಬಾಳೆಹಣ್ಣು ಎಲ್ಲಾ ಕಟ್ಟಿಸಿಕೊಂಡು ಬಂದಿದೀವಿ. ನಾವು ಕೊಡ್ತೀವಿ. ಬರ್ರಪ್ಪಾ ನೀವು ಊಟಾಮಾಡಿ" ಅಂತ ಹೇಳಿ ಕರೆದ್ರು.

'ಮಾವದೀರಾ, ನಾವು ಬಾಳೆ ಬುರುಗು ಮತ್ತೊಂದು ಮಗದೊಂದು ತಿನ್ನೋರಲ್ಲ. ನಮ್ಮ ತಾಯಿ ಕಟ್ಟಿರೋ ಬುತ್ತಿ ರೆಡಿಯಾಗೈತೆ. ಊಟಾ ಮಾಡಿ ಹೆಚ್ಚಾಗಿರೋದನ್ನ ಇನ್ನೂ ಅತ್ತಿ ಮರದ ಬುಡದಾಗೆ ಮಡಗಿ ಬಂದಿದೀವಿ. ನಾವು ಮಾತ್ರ ಮುಟ್ಟಲ್ಲ. ಈಗ ನೀವು ಬಂದ ನ್ಯಾಯ ಏನು?' ಅಂತ ಕೇಳಿದ್ರು.

'ನಾವು ಬಂದಿರೋ ನ್ಯಾಯ ಏನೂ ಇಲ್ಲಪ್ಪಾ ಮಾರಣ್ಣಾ ಮೈಲಣ್ಣಾ. ಏಳೇಳು ಹದಿನಾಲ್ಕು ಲಕ್ಷದ ದಂಡು ಇವತ್ತು ಬಂದೈತೆ ಇಲ್ಲೀಗೆ. ಏಳು ಜನ ಕಂಬೇರಗೊಲ್ಲರ ಹೆಣ್ಣುಮಕ್ಕಳು ಇದ್ದಂಗೆ ಚೇಳೂರ ರಂಗಣ್ಣಗೆ ಏಳು ಜನ ಹೆಣ್ಣು ಮಕ್ಕಳು. ಆ ಏಳು ಜನ ಹೆಣ್ಣು ಮಕ್ಕಳ ಮದುವೇನೂ ಇವತ್ತು ಆಗ್ತಾ ಬಂದೈತೆ.

ಹೆಣ್ಣು ಗಂಡು ಮೆರವಣಿಗೆ ಮಾಡಿಕೊಂಡು
ಮರಡಿ ಬಸವಣ್ಣನ ಗುಡಿ ತಾಕೆ ಹೋಗಿ
ಅಲ್ಲಿ ಹಣ್ಣು ಕಾಯಿ ಮಾಡಿಸಿಕೊಂಡು
ಚೇಳೂರು ಬಾವಿ ತಾಕೆ ಬಂದು
ಬಾವಿ ಸ್ನಾನ ಮಾಡಿಕೊಂಡು
ದೊಡ್ಡೂರು ಊರ ಬಾಗಿಲತಾಕೆ ಬಂದು
ಅಲ್ಲಿ ಒಂದು ಮಡುವು ಕಟ್ಟಿಸಿಕೊಂಡು
ದೊರೆ ಅರಮನೆ ತಾವಕೇ ಬಂದು
ಹೆಣ್ಣು ಗಂಡು ಮೆರವಣಿಗೆ ಮಾಡಿಕೊಂಡು

ಬಂದರೆ ನಮ್ಮ ದನೀಗೆ ಕಾಲಿಗೆ ಕಾಲುಗೆಜ್ಜೆ ಕೊಡ್ತಾರಂತೆ, ಕೋಡಿಗೆ ಕೋಡುಹಣಸು ಗೆಜ್ಜೆ ಕೊಡ್ತಾರಂತೆ, ಹಣೆಗೆ ಹಣೆಗಣಸು ಕೊಡ್ತಾರಂತೆ. ಮೂರುಸಾವಿರ ರೂಪಾಯಿ ಜೂಲು ಕೊಡ್ತಾರಂತೆ, ಹನ್ನೆರಡು ಸಾವಿರ

ರೂಪಾಯಿ ವರದಕ್ಷಿಣೆ ಕೊಡ್ತಾರಂತೆ ಈ ಹೋರಿನ ನೀವು ಹೊಡಕೊಡ್ರಿ. ನಾವು ಬಹುಮಾನ ತರ್ತೀವಿ. ನಾವು ಮೆರವಣಿಗೆ ಮಾಡಿಕೊಂಡು ಅಂತ ಹೋಗಿ ಕೇಳಿದರು ಈ ಬಡಮೈಲನ್ನ ಹೊಡಕೊಡಿ' ಅಂತ.

"ಮೂರು ಮೂರು ಸಾರಿ ಈ ಹುಲಿಕುಂಟೆ ಕೆರೆಯಿಂದ ನಿಮ್ಮ ಹಟ್ಟಿ ತಾವಕೆ ಈ ಹೊಟ್ಟೆಕರ ಹೊತ್ತುಕೊಂಡು ನಿಮ್ಮ ಮನೀಗೆ ಬಂದಾಗ ಏಳೇಳು ಹುಣಿಸೆ ಬರಲು ತಕ್ಕೊಂಡು ಉರಿಯೋ ಹಾಂಗೆ ಹೊಡದಿದ್ರಿ. ನಮ್ಮ ತಂದೆ ತಾಯಿ ಪಾದದಾಣೆ ನಮ್ಮದಲ್ಲ ಈ ಕರ ಅಂತ ಆಣೆ ಪ್ರಮಾಣ ಮಾಡಿದ್ರಿ. ಇವತ್ತು ಈ ಹೋರಿಕರ ಹೆಂಗಾಯ್ತು ನಿಮ್ದು ಅಂತ. ಬಹುಮಾನ ಹೆಂಗೆ ತೊಗೋತೀರ. ಎಚ್ಚರಿಕೆಯಾಗಿ ಮಾತಾಡ್ರಿ. ನೀವು ಏಳು ಜನ ಇರಬೋದು. ನಾವು ಇಬ್ರೇ ಇರಬಹುದು. ನ್ಯಾಯ ನ್ಯಾಯ. ನ್ಯಾಯವಾಗಿ ಮಾತಾಡ್ರಿ ಮಾವಗಳ" ಅಂತ ಕೇಳಿದಾಗ

"ಈ ಬೋಳಿಮಕ್ಕಳು ಇಬ್ರೂ ನಮಗೆ ಇದಿರು ಹತ್ತಿ ನಿಂತುಕೊಂಡುಬಿಟ್ರು. ಇದಿರು ನಿಂತು ಮಾತಾಡಿದರಲ್ಲ. ಇವರ ಮುಖ ನೋಡೋದೇನು ಹಿಡಕೊಳ್ರಲೇ" ಅಂದ ದೊಡ್ಡ ಚಿನ್ನೇಗೌಡ.

ಮೂರು ದಿನ ಹಾಕ್ಕೊಂಡು ಹೋದ್ರಂತೆ ಆ ಕರಿಮಲೆ ಜರಿಮಲೆ ಕಾಡಿನಾಗೆ. ಮೂರು ದಿನ ತಿರುಗಿದ್ರೂ ಮಾರಣ್ಣಾ ಮೈಲಣ್ಣಾ ಇವರ ಕೈಗೆ ಸಿಕ್ಕಿಲ್ಲ. ಮೂರು ದಿನ ಹುಲ್ಲು ನೀರು ಇಲ್ಲದೆ ಅಲೆದ್ರಂತೆ ಇವರೆಲ್ಲಾ. ತಿರುಗಾ ಬಂದು ಆ ಚೇಳೂರು ಕೆರೆ ಏರಿಮೇಲೆ ಬಂದು ಅನ್ನಕ್ಕೆ ಅಳು ಬಂದಂಗಾಗಿ ತಲೆ ತಿರುಗಿ ಮಲಗಿಬಿಟ್ರಂತೆ ಮರದ ಕೆಳಗೆ. ಏಳು ಜನದಾಗೆ ಐದು ಜನ ಬಂದು ಅದಮಿಕೊಂಡರು ಮಾರಣ್ಣಾ ಮೈಲಣ್ಣನ್ನ. ಏಳು ಜನದಾಗೆ ಇಬ್ರು ಹೋಗಿ ಆಕಲು ಮರದಾಗೆ ಆಕಲು ನಾರು ತಂದು ಮಡಿದು ಅವರನ್ನ ಅತ್ತ ಮುರಿದು ಇತ್ತ ಮುರಿದು ಕೈಕಾಲು ಕಟ್ಟಿದರಂತೆ. ಕಾಲು ಮೇಲೆ ಮುಳ್ಳು ಹಾಕಿದ್ರು.

ಮಾರಣ್ಣ ಮೈಲಣ್ಣನ ಕೈಕಾಲು ಕಟ್ಟಿದರೋ
ಆ ಮರದ ನೆರಳಾಗೆ ಉರುಳ್ಹಾಕಿ ಮಾವುಗಳು
ಚೇಳೂರಿಗೆ ಹೋರಿ ಹೊಡೆಯೋನು.
ಕಾಲು ಕೈ ಕಟ್ಟಿ ಕಾದ ಮುಳ್ಳಾಗೆ ಉರುಳ್ಹಾಕಿ
ಮಂಗಾರೆ ಕಳ್ಳಿ ಕಂದು ಮಖದ ಮೇಲೆ ಉರುಳ್ಹಾಕಿ
ಮುಖದ ಮ್ಯಾಗೆ ಒಂದು ದೊಡ್ಡ ಬಂಡೆ ಎಳೆದ್ಹಾಕಿ.

'ನಡೀರಲೇ ಬಿಡ್ರಲೇ ಇವರಿಬ್ರು ಇಲ್ಲೇ ಸತ್ತೋಗಲಿ ಜುಂಜಪ್ಪ ಅಲ್ಲೇ ಸಾಯ್ತಾನೆ. ಈ ಬಸವನ್ನ ತೊಗೊಂಡ್ಹೋಗಿ ಕೆರೆ ಕಲ್ಲು ಕಂಬಕ್ಕೆ ಸೆರೆ ಹಾಕಿ ಬಿಡಬೇಕು' ಅಂದರು.

ಮಾರಣ್ಣ ಮೈಲಣ್ಣನ ಕೈಕಾಲು ಕಟ್ಟಿ ಆ ತ್ಯಾಗದ ಮರದ ನೆರಳಾಗೆ ಉರುಳ್ಳಾಕಿ ಮಾವುಗಳು. ಚೇಳೂರಿಗೆ ಹೋರೀನ ಹೊಡೆಸೋಕೆ ಹೊರಟವ್ರೆ ಮಾವುಗಳು ಏಳೇಳು ಹದಿನಾಲ್ಕು ತೋಟದೋರು, ಪರಂಗಿಯೋರು, ಬಂದೂಕಿನೋರು, ಮದ್ದಿನೋರು, ಗುಂಡಿನೋರು ಹದಿನಾಲ್ಕು ಲಕ್ಷದ ದಂಡೆಲ್ಲಾ ಹೊರಡ್ತು, ಹುಡುಕ್ತು. ಆ ದನ ಸಿಗಲಿಲ್ಲ. ಮೂರುದಿನ ಮೂವತ್ತನಾಲ್ಕು ಹಳ್ಳಿ ಹುಡುಕಿದ್ರು. ಸಿಕ್ಕಿಬಿಡ್ತು ಗ್ರಾಚಾರ ಕೆಟ್ಟು. ಹದಿನಾಲ್ಕು ಲಕ್ಷ ದಂಡೆಲ್ಲಾ ಹುಡುಕುವಾಗ ಬೆರೆಸಿದ್ರು ಅದನ್ನ. ಅದಲ್ಲದೆ ಹದಿನಾಲ್ಕು ಲಕ್ಷ ದಂಡಿನೋರು ಹೊಡೆದ ಗುಂಡೆಲ್ಲಾ ಅದರ ಮೈಯಾಗೆ ತುಂಬಿಕೊಂಡಿದ್ದವಂತೆ ಬಡಮ್ಯೆಲನ ಮೈಯಲ್ಲಿ. ಮೂರುದಿನ ಹಿಂಗೆ ಸುತ್ತಿ ಚೇಳೂರಿಗೆ, ಮೂವತ್ತುಮೂರು ಲಕ್ಷ ಹೊಲ ಮನೆ ತಿರುಗಿ ಬಂತು. ಚೇಳೂರಿನಾಗೆ ಶಾನುಭೋಗರ ಗದ್ದೆಯಾಗೆ ಒಂದು ಹೊಂಗೆಮರ, ಹೊಂಗೆಮರದ ಅಡಿಯಾಗೆ ಮುಚ್ಚಿದ ಕಣ್ಣು, ಮುಚ್ಚಿದ ಬಾಯಿ ಇದ್ದಂಗೆ ಬಿದ್ದುಕೊಂಡು ಬಿಡ್ತು. ಹುಲ್ಲಿಲ್ಲ ನೀರಿಲ್ಲ. ಕಾದಾಡಿ ಹೋರಾಡಿ ಬಂದು ಅಲ್ಲಿ ಮನಗಿಬಿಡ್ತಂತೆ.

'ಚೇಳೂರು ಕಲ್ಲು ಕಂಬಕ್ಕೆ ಹೊರಡ್ತೀಯೇನಲೇ ಬಡಮ್ಯೆಲ' ಅಂತಲೆ ಕೇಳಿದ್ರಂತೆ ಕಂಬೇರಗೊಲ್ಲರು.

'ಚೇಳೂರು ಕಲ್ಲುಕಂಬಕ್ಕೆ ನಾನು ಬರಬೇಕು ಅಂದರೆ ನನ್ನ ತಮ್ಮದೀರನ ಅಪ್ಪಣೆ ಕೇಳಬೇಕು' ಅಂತು.

'ಹೋಗಿ ಕೇಳಿಕೊಂಡುಬಾ ಹೋಗು' ಅಂದರು.

ಮಾರಣ್ಣಾ ಮೈಲಣ್ಣಾ ಚೇಳೂರು ಅರಮನೆಗೆ ನನ್ನ ಕರಕೊಂಡು ಹೋಗಿ ಕಲ್ಲುಕಂಬಕ್ಕೆ ಸೆರೆ ಹಾಕ್ತಾರಂತೆ ಇವತ್ತು. ಏಳ್ನೂರು ವರಹ ರಾಣಿಯರ ಪಗಡಿ ಪಡೀಬೇಕಂತೆ. ಚೇಳೂರು ಕಲ್ಲುಕಂಬಕ್ಕೆ ನಾನು ಬರಬೇಕಾಗಿದ್ರೆ ಒಂದು ಮಾತು ನನ್ನ ತಮ್ಮದೀರನ ಅಪ್ಪಣೆ ಕೇಳಿಬಂದಿತು.

'ಇವತ್ತು ನಾನು ಹೋಗನೆ ಅಥವಾ ಈ ಹೊಂಗೇ ಮರದ ಅಡಿಯಾಗೆ ನನ್ನ ಕೊಡೋನೇನಪ್ಪಾ' ಅಂತ ಕೇಳಿದ.

'ಇನ್ನೂ ಮೂರುದಿನ ಐತೆ ನಮ್ಮ ಅಣ್ಣಗೆ ಮೂರುತಿಂಗಳು ನಿದ್ದೆ ಕಳೆಯೋಕೆ ಬಡಮ್ಯೆಲ. ಕಳುವಾರಹಳ್ಳಿ, ಬೇವಿನಹಳ್ಳಿಯಿಂದ ಎದ್ದುಬಂದು ರನ್ನದ ಪಿಳ್ಳಾಗೋವಿ, ಚಿನ್ನದ ಪಿಳ್ಳಾಗೊವಿ ಊದ್ತಾನೆ ನಮ್ಮ ಅಣ್ಣ ಬಂದು. ಆಗ ನೀನು ಕಲ್ಲು ಕಂಬ ಮುರಿದು ಓಡಿಬಂದು ನಮ್ಮ ಅಣ್ಣನ ಕರಕೊಂಡು ಬಂದು ನೀವು ನಮ್ಮ ಕೈಕಾಲು ಬಿಚ್ಚಿಸಬೇಕು. ನೀನು ಇವತ್ತು ಮಾತ್ರ ಹೊಂಗೆ ಮರದಡಿಗೆ ಇರಬೇಡ. ನಿನ್ನ ಕುಯ್ಯಿಸಿಬಿಟ್ಟು ಕಳಿಸಿಬಿಡ್ತಾರೆ. ಈ ಹೊಂಗೆ ಮರದಡಿಯಾಗೆ ನೀನು ಇರಬೇಡ. ಇವತ್ತು ಚೇಳೂರು ಕಲ್ಲುಕಂಬಕ್ಕೆ ನೀನು ಹೋಗೇ ತೀರಬೇಕು ಬಡಮ್ಯೆಲ. 'ಹೆತ್ತಿರೋರು, ಸತ್ತಿರೋರು, ಸೂತಕವಾಗಿರೋರು ಎಲ್ಲರ್ರೂ ನಾನು ಬೆರೆಯೋಂಗಿಲ್ಲವಲ್ಲ.' ನೀನೇನೂ ಚಿಂತೆ ಮಾಡಬ್ಯಾಡ. ನಮ್ಮಣ್ಣ ಬಂದೋನು ಎಲ್ಲಾರ್ರೂ ಶುದ್ದಿ ಮಾಡ್ಕೋಂತಾನೆ. ಇವತ್ತು ನೀನು ಹೋಗಿಯೇ ತೀರಬೇಕು' ಅಂದರು.

ಹೊರಟ ಈಗ ಬಡಮ್ಮೈಲ. ಈ ಹದಿನಾಲ್ಕು ಲಕ್ಷ ದಂಡು ಸೈನ್ಯ ಇತ್ತು. ಕೋಟೆಬಾಗಿಲು ತೆಗೆದು ನೂರಾಒಂದು ಸಾಸಿನ ಮೇಲೆ ನಿಂತಿರೋರಂತೆ ಈ ಇವರೆಲ್ಲ. ಜುಂಜಪ್ಪನ ಬಸವ ಬತ್ತೈತೆ ಅಂತ. ಸುಮ್ಮನೆ ಹಿಂಗೆ ಅರಗಣ್ಣಿನಾಗೆ ನೋಡಿದ್ನಂತೆ ಈ ಹದಿನಾಲ್ಕು ಲಕ್ಷದ ದಂಡು ನನಿಗೆ ಅಸಾಧ್ಯವಾ ಇದು, ಅಗಾಧವಾ ಇದು. ಹದಿನಾಲ್ಕು ಲಕ್ಷದ ದಂಡಿನಾಗೆ ಹೊಡೆದಿರೋ ಈ ಮದ್ದುಗುಂಡನ್ನೆಲ್ಲಾ ನಾನು ಶರೀರದಾಗೆ ತುಂಬಿಸಿಕೊಂಡು ಬಿಟ್ಟಿದೀನಿ. ಈ ದಂಡು ಯಾವ ಸಾಹಸಕ್ಕೆ ಅಗಾಧವಾಗಿ ಇದೆ ನನಗೆ. ಇವರ ಬಾಗಿಲು ತೆಗಿಸಿಕೊಂಡು ಇವರ ಬಾಗಿಲಗ್ಯಾಕೆ ಹೋಗಬೇಕು ನಾನು. ನನ್ನ ಚಳಕ ತೋರಿಸಬೇಕು ಇವತ್ತು, ಮೂವತ್ತಮೂರು ಹಳ್ಳಿಗೆಲ್ಲಾ ನನ್ನ ಬೆಳಕು ತೋರಿಸಬೇಕು ಅಂತ ಹೇಳಿ ಉತ್ತರ ಮುಖವಾಗಿ ನಿಂತುಕೊಂಡು ಉತ್ತರ ಮೂಲೆಗೆ ಇಪ್ಪತ್ತೈದು ಆಳುದ್ದ ಕೋಟೆ ಬೇಲಿ ಮೇಲೆ ರಭಸವಾಗಿ ಹಾರಿ ಬಿಟ್ಟನಂತೆ. ಕಬ್ಬಿಣದ ಸರಪಣಿ ಹಾಕಿ ಜಡಾಯಿಸಿ ಬಿಗಿದುಬಿಟ್ಟರಂತೆ ಒಂದೊಂದು ತೊಡೆಗೆ ಹಾಕಿ ಒಂದೆರೆಡು ಸರಪಣೀನಾ. ಸರಪಣಿ ಹಾಕಿ ಬಿಗಿದು 'ರಂಗಪ್ಪಾ' ಅಂದರು.

'ಯಾಕ್ರಯ್ಯ?' ಈ ಬಡಮ್ಮೈಲ ಅನ್ನೋ ಬಸವನ್ನ ತಂದು ಈ ರಣಕಂಬಕ್ಕೆ ನಾವು ಸೆರೆಹಾಕಿದ್ದೀವಿ. ಇನ್ನು ಸ್ವಾಮಾರದ ದಿನ ಯಾರೂ ಆರು ಹೂಡಲ್ಲ. ಬೇಸಾಯ ಹೂಡಲ್ಲ. ಅವತ್ತೆಲ್ಲ ರಜ. ಸೋಮವಾರ ನೀನು ಏಳು ಹಳ್ಳಿಯವರನ್ನೂ ಕರೆಸಿ ಏಳೂರ ರಾಣಿಯರ ಕಡೆ ಕಳಿಸಿಬಿಡು. ಈ ಬಸವನ್ನ ಕುಯ್ಯಿಸಿ ಮಾರಣ್ಣ ಮೈಲಣ್ಣ ಅಲ್ಲಿ ಸತ್ತವ್ರೆ ಜುಂಜಪ್ಪ ಅಲ್ಲಿ ಸತ್ತವ್ನೆ ಅಂತ ಹೇಳಿಬಿಡಿ. ನಾವಿನ್ನು ಹೊಂಟೋಗಿ ಬಿಡ್ತೀವಿ' ಅಂತ ಹೊಂಟರು. ಯಾರು? ಮಾವುಗಳು ಕಂಬೇರಗೊಲ್ಲರು. ಹೀಗೆ ಬಸವನ್ನ ಕಲ್ಲು ಕಂಬಕ್ಕೆ ಸೆರೆ ಹಾಕಿಸಿದರು. ಬಡಮ್ಮೈಲನ್ನ ಶನಿವಾರ ಸೆರೆ ಹಾಕಿ ಹೊರಟರು. ಶನಿವಾರ ಒಂದು ಭಾನುವಾರ ಎರಡು, ಸೋಮವಾರ ಮೂರು ಹನ್ನೆರಡು ಘಂಟೆವರೆಗೂನು ಆ ಬಡಮ್ಮೈಲ ಚೇಳೂರ ಅರಮನೆಗೆ ಹತ್ತಿರದ ಆ ಕಲ್ಲುಕಂಬದ ಹತ್ತಿರವೇ ನಿಂತವ್ನೆ. ಹುಲ್ಲಿಲ್ಲ ನೀರಿಲ್ಲ. ಮಾರಣ್ಣ ಮೈಲಣ್ಣ ಮೂರು ದಿನದವರೆಗಾಗೂ ಅಲ್ಲಿ ಮಲಗವ್ರೆ. ಮೂರು ತಿಂಗಳು ನಿದ್ದೆ ಮುಗೀತು ಜುಂಜಪ್ಪಗೆ. ಎದ್ದವನೇ

'ಯಮ್ಮಾ' ಅಂದ, 'ಕಟ್ಟಿದೀಯ ಬುತ್ತಿ?' ಅಂದ.

'ಕಟ್ಟಿವ್ನಿ, ಇಲ್ಲಿ ಈ ಪರಿಗ್ಯಾಗೆ ನೀರುಕಾಸಿವ್ನಿ. ನೀರು ಹಾಕ್ಕೊಂಡು ಹೋಗಿ ಬಿಡು ಜುಂಜಪ್ಪ' ಅಂದಳು. ಎಣ್ಣೆ ಹಚ್ಚಿಕೊಂಡು ನೀರು ಹೊಯ್ಯಾಕೆ ಬೆಳ್ಳಿ ಲೋಟದಲ್ಲಿ ಹರಳೆಣ್ಣೆ ಹುಯ್ಯಕೊಂಡು ಅವನಿಗೆ ಅದೇ ಈ ಜುಂಜಪ್ಪನಿಗೆ ಎಣ್ಣೆ ಹಚ್ಚೋವತ್ಗೆ

ಗೊತ್ತಾಗುತ್ತೆ ಈ ಚಿನ್ನಮ್ಮಗೆ...
'ಕಂಚಿನಬಟ್ಲಾಗೆ ಮಿಂಚೆಣ್ಣೆ ಹುಯ್ಯಕೊಂಡು
ಕೆಂಚನೆ ಜುಂಜಪ್ಪಾಗೆ ಉಗುರೆಣ್ಣೆ ಹಚ್ಚುವಾಗ
ಜುಂಜಪ್ಪನ ಸುದ್ದಿ ಅಲ್ಲಿ ಅರುದಾವೋ,'

'ಏನಮ್ಮ ಹಿಂಗೆ ಪದ ಹೇಳಿಕೊಂಡು ಎಣ್ಣೆ ಹಚ್ತಾ ಇದಿಯಾ?' ಅಂದ.

'ಮಾರಣ್ಣ ಮೈಲಣ್ಣನ ಕೈಕಾಲು ಕಟ್ಟಿ ಗಿರೆಮುಳ್ಳಾಗೆ ಉರುಳ್ತಾಕ್ಯಾರೋ' ಅಂತಹ ಸ್ವಪ್ನ ಕಂಡೆ' 'ಹರಳೆಣ್ಣೆ ಒಳಗೆ ಇನ್ನು ಏನೇನು ಕಂಡಿ?' 'ಅದರಲ್ಲಿ ಬಡಮೈಲನ್ನ ಕಲ್ಲುಕಂಬಕ್ಕೆ ಎಂಟು ದಿನ ಸೆರೆಹಾಕಿಸಿ ಸೋಮವಾರ ಹನ್ನೆರಡು ಘಂಟೆಗೆ ಕತ್ತಿ ಕೆರಡಾರಗಳನೆಲ್ಲಾ ಮಸೀತಾ ಐದಾರೆ ಬಸವನ್ನ ಕೊಯ್ಯುಕ್ಕೆ' ಅಂತ. ಅಂತಹ ಕೇಡು ಸ್ವಪ್ನ ಕಂಡೆ. ಅಂದರೆ 'ಇನ್ನೂ ಏನೇನು ಕಂಡ್ಯಮ್ಮ?',

'ಕಂಡಿರೋದು ಅಲ್ಲಿರಲಿ, ಇದೊಂದೇ ಮಾತು ತಕ್ಷಣ ಹೊರಟುಬಿಡಬೇಕು ನೀನು ಜುಂಜಪ್ಪ,'

'ನೀನು ಒಳ್ಳೇದು ಅನ್ನಮ್ಮ ಚಿನ್ನಮ್ಮ ಬರ್‍ತೀನಿ' ಅಂತ 'ಒಳ್ಳೇದು' ಅನ್ನಿಸ್ಕಂಡು ಅಲ್ಲಿದ ಹೊಂಟು ಒಂಭತ್ತು ಗ್ರಾಮಕ್ಕೆ ಒಂದು ಪುರಸಕ್ಕನ ಕೆರೆಯಾಗೆ ಮೂರು ಮುಳುಗು ಹಾಕಿ ಅಲ್ಲಿ ತಣ್ಣೀರು ಸ್ನಾನ ತಣ್ಣಬಟ್ಟೆ ಮಾಡಿಕೊಂಡು ಕಲಾರದಹಳ್ಳಿ, ಸಾಸ್ವೆಹಳ್ಳಿ, ಮಣ್ಣು ಮಾಗುಡಿ, ತುಪ್ಪದ ಕೊಳ್ಳ, ಕೆಂಚಿನಹಳ್ಳಿ, ಎರವಳ್ಳಿ, ಜೋಗಿಹಳ್ಳಿ, ಮಂಚಲದಾರಿ, ಮುಂಚೇನಹಳ್ಳಿ, ಎಡಕ್ಕು ಬಲಕ್ಕು ಬಿಟ್ಟುಕೊಂಡು ಮತ್ತಗ, ಮತ್ತಗ ಇಲ್ಲಿಂಗೆ ಕಾಣಿಸ್ತೈತೆ ಒಂಭತ್ತು ಗ್ರಾಮದ ದೂರಕ್ಕೆ ಬಂದು ಮತ್ತುಗದ ಮೇಲೆ ಬಂದು ಒಂದು ಕೆರೆ ಬಂಡೆ ಮೇಲೆ ಕುಂತಕೊಂಡು ರನ್ನದ ಪಿಳ್ಳಗೋವಿ, ಚಿನ್ನದ ಪಿಳ್ಳಗೋವಿ ನಾಗಸ್ವರದ ಪಿಳ್ಳಂಗೋವಿ ಹಿಡಕೊಂಡು

'ಕಲ್ಲುಕಂಬ ಮುರಿದು ಬುಡದರಿಸಿ ಉದ್ದು
ಚೇಳೂರ ಸೆರೆಮುರಿದು, ಮುದ್ದು ಚೇಳೂರ ಸೆರೆ ಮುರಿದು
ಬಡಮೈಲು ಗೆದ್ದುಬಾರೋ ಜಾವದ ಘಳಿಗೆಯಾಗೆ' ಅಂದ.
ತಿರುಗ ಅವನು ಹೇಳಿದ
'ಚೇಳೂರೆಂಬುದು ಏಳುಸುತ್ತಿನ ಕೋಟೆ
ಗಾಳಿ ಬೀಸಿದರೆ ಬಲು ಪೆಮ್ಮು,
ಗಾಳೀ ಬೀಸಿದರೆ ಬಲು ಪೆಮ್ಮು, ಸುಮ್ಮನ್ಯಾಕವ್ನೆ ಬಡಮೈಲ'

ಅವನೋವು ಎರಡು ಪದಗಳು ಸುಗಲು ಬಂದು ಇವನ ಕಿವಿಗೆ ಬಿದ್ದಕೂಡಲೆ ಮತ್ತು ಮೂರುದಿನಕ್ಕೆ ಮುಚ್ಚಿದ ಕಣ್ಣು ಮುಚ್ಚಿದಹಾಗೆ ಇಟ್ಟಕೊಂಡು ನಿಂತಿದ್ದ ಬಡಮೈಲ. ಆಗ ಹೇಳಿದ ಇವನು ಸುಗಲು ಅದರ ಕಿವಿಗೆ ಬಿದ್ದು ಬಿಡ್ತು. ಬುಟ್ಟನಂತೆ ಬಡಮೈಲ ಕಣ್ಣ. ಮೂಡು ಮೂಲಕೆ ಒಂದು ಕೆಂಡ ಬಿದ್ದಹಾಗೆ ಆಯ್ತಂತೆ ನೋಡೋರಿಗೆಲ್ಲಾ ಈ ಪ್ರಜೆಗಳಿಗೆಲ್ಲಾ. ಆಗ ಕಣ್ಣು ಬಿಟ್ಟುಬಿಟ್ಟು ಆ ನೋಡೋರಿಗೆಲ್ಲಾ ಹೇಳಿದನಂತೆ ರಣಕಂಬದಾಗೆ

'ಕಂಬಕ್ಕೆ ಹಾಕವ್ರೆ ಹೊಂಬಣ್ಣ ಹುನಗಾನ
ನಂದಿಯ ಮುಖದ ಚೆಲುವಾನ,

ನಂದಿಯ ಮುಖದ ಚೆಲುವ ಬಟ್ಟಣನ
ಕಂಬಕ್ಕೆ ಹಾಕಿದಾರೆ ಹಣಿಯವರು?

ಅಂದನಂತೆ ಪದದಾಗೆ ಹೇಳಬಿಟ್ಟನಂತೆ ಬಡಮ್ಯೆಲ ಕಂಬೇರಗೊಲ್ಲರು ತನ್ನನ್ನ ಕಂಬಕ್ಕೆ ಹಾಕವ್ರೆ ಅಂತ. 'ಕಂಬಕ್ಕೆ ಹಾಕವ್ರೆ ನಂದಿಯ ಮುಖದ ಚೆಲುವ ಬಟ್ಟಣ್ಣನ ಕಂಬಕ್ಕೆ ಹಾಕವ್ರೆ ಹಣಿಯೋರು, ಹೊಂಬಣ್ಣ ಹೊನ್ನುಗನ ನಂದಿಯ ಮುಖದ ಚೆಲುವನ್ನ' ಅಂತ ಹೇಳಿದನಂತೆ. ಹಂಗೆ ಅಂದಿದ್ದೇ ಒಂದ್‌ದಪ್ಪಾ, ತಿವಿದನಂತೆ. ಕಬ್ಬಿಣದ ಸರಪಣಿ ಎಲ್ಲಾ ಸುಕಡಾ ಬಕಡಾ ಆಗಿಹೋಯ್ತಂತೆ. ಮೇಲಕ್ಕೆ ಹಾರಿ ತಿರುಕ್ಕಂಬರುವಾಗ ಏಳುಸುತ್ತಿನ ಕೋಟೆ ಮ್ಯಾಕೆ ಹೋಯ್ತಂತೆ ಬಂಗಾರದ ತೆನೆ. ತಿರುಗಿ ಬರುವಾಗೆ ಕಾಲಿನಿಂದ ಆ ತೆನೆ ಒದ್ದು ಅದನ್ನ ಬೀಳಿಸಿದನಂತೆ ಆ ತೆನೆ ಹೋಗಿ ಏಳುಸುತ್ತಿನ ಕೋಟೆಮೇಲೆ ಬಿತ್ತಂತೆ. ಆಗ ಅದಕ್ಕೆ ಏಳುಸುತ್ತಿನಕೋಟೆ ಭೂಮಿ ಪಾಲಾಗಿ ಹೋಯ್ತಂತೆ ತಿರುಗಾ ಮೇಲಕ್ಕೆ ಹಾರುವಾಗ್ಗೆ ಮುಂಗೊರಸು ದೊರೆ ಅರಮನೆಗೆ ತಗುಲುತಂತೆ ಹನ್ನೆರಡು ಅಂತಸ್ತಿನ ಆ ಅರಮನೆಯೆಲ್ಲಾ ಪಟ್ಟುಗುಟ್ಟಕೋತ ಸುರುದೋಯ್ತಂತೆ. ಮೇಲಕ್ಕೆ ಹಾರಿ ಬರುವಾಗ

'ಲೇ ಚೇಳೂರು ರಂಗ' ಅಂದನಂತೆ ಬಡಮ್ಯೆಲ

'ಯಾಕ್‌ಸ್ವಾಮಿ?'

'ಈ ಚೇಳೂರನ್ನ ಹಾಳೂರು ಮಾಡಿಯೇ ನಾನು ಹೋಗೋದು ನನ್ನ ಮಗನೆ. ನನ್ನ ಆಳಿರೋ ಅಂತ ದೊಡ್ಡೋನು ಜುಂಜಪ್ಪ ಮಂಚದ ಮೇಲೆ ಪಿಳ್ಳಗೋವಿ ಹಿಡಿದವ್ನೆ, ಆತು ಈಗ ಕಬ್ಬಿಣದ ಸರಪಣಿ ಆತು, ಬಂಗಾರದ ಗೋಪುರ ಆತು, ಏಳುಸುತ್ತಿನ ಕೋಟೆನೂ ನಿನ್ನ ಅರಮನೇನು ಆತು, ಬಂಗಾರದ ತೆನೇನು ಆತು, ಚೇಳೂರು ರಂಗ ಕಂಬೇರಗೊಲ್ಲರ ಮಾತು ಕೇಳಿ ಹಾಕಿಸ್ಕಂಡೆ ನಿನ್ನ ವಂಶಕ್ಕೆ ಕೊಡಲೀಯಾ. ಚೇಳೂರ ಗೆದ್ದುಹೋದ ಬಡಮ್ಯೆಲ ಅನ್ನಬೇಕು ಚೇಳೂರ ಕದ್ದುಹೋದ ಅನ್ನಬಾರದು.

ಆ ಚೇಳೂರ ಗೆದ್ದ ಸೇದೋಬಾವಿ
ಮೇಲೇನ ಗೆದ್ದ ಬಡಮ್ಯೆಲ,
ಮೇಲೇನ ಗೆದ್ದ ಬಡಮ್ಯೆಲ
ಚೇಳೂರ ಗೆದ್ದ ಬಡಮ್ಯೆಲ

'ಬರ್ತೀನೋ' ಅಂದ. ಅಂಗಂದವನೆ ಅಲ್ಲಿ ಮಾರಣ್ಣ ಮ್ಯೆಲಣ್ಣ ಇರೋ ತಾವಕೆ ಹಾರಿ ಹೋಗಿ 'ತಮ್ಮದೀರ, ಪ್ರಾಣ ಮಾತ್ರ ಬಿಡಬ್ಯಾಡ್ರಿ, ನಿಮ್ಮ ಅಣ್ಣನ್ನ ಕರಕೊಂಡು ಬಂದಿವ್ನಿ, ನಿಮ್ಮಣ್ಣನ್ನ ಕರಕೊಂಡು ಬಂದು ನಿಮ್ಮನ್ನ ಬಿಡಿಸಿಕೊಳ್ತೀನಿ ಪ್ರಾಣ ಬಿಡಬ್ಯಾಡ್ರಿ, ನಿಮ್ಮದಾಗಿ ಜೀವ ಇರಲಿ' ಅಂತ ಆ ಘಳಿಗೆಯಾಗೇನೋ ತಮ್ಮದೀರಿಗೆ ಹೇಳಿ, ಅಲ್ಲಿ

ಕುಪ್ಪಳಿಸಿ ನೆಗೆದಾನೆ ನೋಡಿ. ಇಲ್ಲಿ ಬಂಡೆಮ್ಯಾಗೆ ಅದರದ್ದು ಗುರುತೈತೆ. ಚೇಳೂರಾಗೆ ನೆಗೆದು ಬಂದು ಇಲ್ಲಿ ಬಂಡೆಮ್ಯಾಗೆ ಮೊಳಕಾಲೂರಿ, ಬಂಡೆ ಮೇಲೆ ಕಾಲು ಊರಿರೋದು ದೊಗ್ಗಾಲುಮಂಡಿ ತ್ಯಾಮನಹಳ್ಳಿ ಬಂಡೆಮೇಲೆ ಗುರುತುಬಿದ್ದಿದೆ. ಅದನ್ನ ನೀವು ನೋಡಬಹುದು. ನೋಡಿ ಬನ್ನಿ, ಅದೇ ಗುರುತು. ಇಲ್ಲಿಗೂ ಮದಗದ ದಾರಿ ಹನ್ನೆರಡು ಮೈಲಿ. ಅಲ್ಲಿಗೆ ನೆಗೆದನಂತೆ. ಅಲ್ಲಿ ಪಾದ ಊರಿ ಅಲ್ಲಿಂದ ಮದಗಕ್ಕೆ ನೆಗೆದನಂತೆ. 'ಸೂತಕ ಬರ್ತಾವೆ, ಸಾತಕೆಟ್ಟವೆ, ಬಟ್ಟಣ್ಣ ಬಡಮೈಲ ಹತ್ರಕ್ಕು ಬರಬೇಡ ನೆರಳು ಹಾಯಿಸಬೇಡ ಚೇಳೂರಿಗೆ ಸೂತಕದವರು, ಹೆತ್ತಿರೋರು, ಮೈನೆರದಿರೋರು ಏಸು ಜನ ಇದ್ದರು ನೀನು ದುರಗಕ್ಕೆ ಹೋಗಿದ್ದೀಯ, ಮೂರುದಿನ ಚೇಳೂರಾಗೆ ಇದೀಯ, ಈಗ ಸೂತಕವೇ ಬರ್ತೈತೆ ನನಗೆ ನೆರಳ ಹಾಯಿಸಬೇಡ, ನೀನು ಪುರುಸವ್ವನ ಕೆರೆಗೆ ಹೋಗಿ, ಒಂಭತ್ತು ಸಾರಿ ಮುಳುಗಿ ಒಂಭತ್ತು ಸಾರಿ ಎದ್ದು, ಹೊಳೆಬೆಳಗಾಗಿ ಬಾ ಹೋಗು' ಅಂತ ಜುಂಜಪ್ಪ ಹೇಳಿದ. ಪುರಸವ್ವನ ಕೆರೆಯಲ್ಲಿ ಒಂಭತ್ತು ಸಾರಿ ಮುಳುಗಿ ಒಂಭತ್ತು ಸಾರಿ ಎದ್ದು ಬಂದು ಕೂಡಲು 'ಬಡಮೈಲಗೆ ಮೂರುಸುತ್ತಿನ ಕಾರೆ ಮುಟ್ಟಗೆ ಮುಂಗಾಲು ಅಂಗಾಲು ಸುಟ್ಟವ್ನೆ, ಬೇವಿನ ಕಡ್ಡಿಯಾಗೆ ಎರಡೂ ಕೊಂಬಿನ ನಡುವೆಯೂ ಸುಟ್ಟಿದಾನೆ ಜುಂಜಪ್ಪ. ಅರಳಿ ಎಲೆಯಾಗಿ ನಾಲಗೆ ಕುಯ್ದು, ಕೊಬ್ಬು ರಕ್ತ ಕೆಳಕ್ಕೆ ಕೆಡವಿ, ಆ ರಕ್ತದಾಗೆ 'ಚೇಳೂರಾಗೆ ಏನೇನು ನಡೀತು ಹೇಳೋ ಬಡಮೈಲ' ಅಂತ ಕೇಳಿದ. 'ಚೇಳೂರು ನಗರದಾಗೆ ಹೇಳೋದು ಇನ್ನೇನು ಸ್ವಾಮಿ, ನಿಮ್ಮ ಏಳು ಜನ ಮಾವದೀರು ಬಂದು ಮಾರಣ್ಣ ಮೈಲಣ್ಣನ ಕೈಕಾಲು ಕಟ್ಟಿ ಕಾನುಮುಳ್ಳಾಗೆ ಉರುಳಾಕಿ, ನನ್ನ ಎಂಟಾಳಿನ ಕಲ್ಲುಕಂಬಕ್ಕೆ ಸೆರೆಹಾಕಿಸಿ, ಇಷ್ಟೆಲ್ಲಾ ಮಾಡಿದಾರೆ ಕಣ್ ಜುಂಜಪ್ಪಾ. ನಡೆದೈತೆ ನನ್ನ ಸಾಹಸ ನಿನಗೆ ತೋರಿಸಬೇಕು ಅಂತ ಹದಿನಾಲ್ಕು ಲಕ್ಷ ದಂಡಿನ ಗುಂಡನ್ನು ದೇಹದಾಗೆ ತುಂಬಿಕೊಂಡಿದ್ದೀನಿ ನೋಡು ಜುಂಜಪ್ಪಾ' ಅಂತ ಮೈನ ಕೊಡವಿದನಂತೆ ಈ ಬಡಮೈಲ ಬಸವ. ಅಲ್ಲಿ ಸುರಿದವಂತೆ ಗುಂಡು.

'ಈಗ ಒಪ್ಪಿದೆಯೇನೋ ಜುಂಜಪ್ಪ' ಅಂದ

'ಒಪ್ಪಿದೆ ಕಣಪ್ಪಾ' ಅಂದ

ನಡಿ ಹೊಂಟೋಗಿ ಬಿಡೋಣ ಅಂತ ಹೊರಟ್ರಂತೆ. ಹಲಸಿನ ಕಾನು ಆ ಕಡೆ ಅಂತೆ ಮಾರಣ್ಣ ಮೈಲಣ್ಣನ್ನ ಕಟ್ಟಾಕಿದ್ದು. ಆ ಘಳಿಗೆಯಾಗ್ಯೇನೆ ಅವರ ಕೈಕಾಲು ಬಿಚ್ಚಿಕೊಂಡು

'ದೊಡ್ಡೋನು ಜುಂಜಪ್ಪ, ಮಾರಣ್ಣ, ಮೈಲಣ್ಣ

ಇರುವಾನೇ ಜಾಗಕ್ಕೆ ಬಂದವನೇ ಬಟ್ಟಣ್ಣ ಬಡಮೈಲ,

ದೊಡ್ಡೋನು ಜುಂಜಪ್ಪ, ಎದ್ದೇಳೊ ಮಾರಣ್ಣ ಎದ್ದೇಳು ಮೈಲಣ್ಣ

ಇದೇ ಸ್ಥಳದಾಗೆ ಇವರನ್ನ ಕೈಕಾಲು ಕಟ್ಟಿ ಮುಳ್ಳು ಹಾಕಿರೋದು ಆ ಕಾರೆಮುಳ್ಳಿರೋ ಬಂಡೆ ಎಳೆದಿದ್ರಲ್ಲ. ಬಡಮೈಲ ಅದರ ನಡುವೆ ಕೊಂಬು ತೂರಿಸಿ ಅದನ್ನ ಅತ್ತ ಎಸೆದು ಬಿಟ್ಟ, ಎಸೆದು ಬಿಟ್ಟು "ನೋಡು ಜುಂಜಪ್ಪ ತಮ್ಮದೀರನ್ನ" ಅಂದ.

"ಆನೆ ಹೊಟ್ಯಾಗೆ ಸೂನುಹಂಗೆ ಹುಟ್ಟಿದಹಾಗೆ ನೀವು ನನ್ನ ಅಕ್ಕ ಪಕ್ಯಾಗೆ ಬರಬಹುದೆ ಮಾರ ಮೈಲ". ಅವರು ಬೇಡರಿಗೆ ಇವತ್ತು ತಲೆ ಕೊಟ್ಟರೇನೋ ಅಂದ. ದುಃಖ ಬಂದುಬಡ್ತು ಅವರಿಗೆ. ಅವರಿಬ್ರೂನ್ನ ಎಬ್ಬರಿಸಿಕೊಂಡು ಕರೆಕಂಬಳಿ ಹಾಸಿ ಇತ್ತಿಲಿಂದ ಅತ್ಲಾಗೆ ಬಂದನಂತೆ. ಅವರ ಪಕ್ಕೆ ಎಲ್ಲ ನೋವು ಬಂದು ಬಿಟ್ಟಿತ್ತು. ಕಾರೆಮುಳ್ಳು ಹಾಸಿನಾಗೆ ಮನಿಕ್ಕೊಂಡು. ಬಸವಣ್ಣ ಗುಡಿ ದೇವಸ್ಥಾನದ ತಾವಕ್ಕೆ ಹೋಗಿ ಹಾಲುಬಾವಿ, ನೀರುಬಾವಿಯಾಗೆ ಮೂರು ಸಾರಿ ಮುಳುಗಿಸಿ ಮೂರು ಸಾರಿ ಎತ್ತುವಾಗ್ಗೆ ಅರಗಿನ ಕಂಬ ಉರದಂಗೆ ಉರಿದುಬಿಟ್ಟರಂತೆ ಮಾರಣ್ಣ ಮೈಲಣ್ಣ. ಚೇಳೂರ ಕೆರೆ ಏರಿ ಮೇಲೆ ಕರಕೊಂಬಂದು ಮರದಡಿಯಾಗೆ ಚಿನ್ನಮ್ಮ ಕಟ್ಟಿದ ರೊಟ್ಟಿಬುತ್ತಿ ಅನ್ನದ ಬುತ್ತಿ ಅವರಿಗೆ ಕೊಟ್ಟು ಅವರಿಬ್ಬರನ್ನೂ ಕುಂಡ್ರಿಸಿಕೊಂಡು

'ಏನ್ರಪ್ಪಾ, ಈಗ ಹೇಳ್ರಪ್ಪಾ ಈ ಚೇಳೂರಿನ ರಂಗಪ್ಪನ ಕಾವಲಿಂದು' ಅಂದ.

'ಎಲ್ಲಾ ನಮ್ಮ ಮಾವದಿರಿಂದಾನೇ ಈ ಕಾಯಕ ಎಲ್ಲಾ ನಡೆದಿದ್ದು. ಆದರೆ ಅವರ ವಂಶ ಎಂದು ನಾಶನ ಮಾಡ್ತೀಯ ಜುಂಜಪ್ಪ? ನಮ್ಮ ಹೊಟ್ಟೆ ಉರಿ ಎಂದು ಕಡಿಮೆ ಮಾಡ್ತೀಯ?'

'ತಮ್ಮದೀರ ಕಣ್ಣೀರು ಹಾಕಬೇಡಿ, ಧೈರ್ಯವಾಗಿರಿ. ಸಜ್ಜನರಿಗೆ, ಸತ್ಯವಂತರಿಗೆ ಭಾಳ ಕಷ್ಟ ಬರೋದು. ನಿಮಗೆ ಗೊತ್ತಾಗಲ್ಲ ಬಾಲಕರು. ಹದಿನಾರು ವರುಷ ತುಂಬಬೇಕು ಅವರ ವಂಶಾನ ನಾನು ನಿರ್ಮೂಲ ಮಾಡಬೇಕು. ಕೌರವರು ಪಾಂಡವರಿಗೆ ಎಂಗೆ ಕುರುಕ್ಷೇತ್ರದಾಗೆ ಯುದ್ಧ ನಡೆಸೋ ಹಂಗೇ ಅದರಂತೇನೇ ಕಂಬೇರಗೊಲ್ಲರಿಗೂ ನನಗೂ ಒಂದು ಕಥೆ ನಡೀಬೇಕು. ಹದಿನಾರು ವರುಷ ತುಂಬುವುದರಾಗೆ ಅವರಿಗೂ ನನಗೂ ಕಥೆ ಪೂರ್ಣವಾಗುತ್ತೈತೆ. ಆಮೇಲೆ ಒಂದೇ ಏಟಿಗೆ ಅವರನ್ನು ಪೂರ್ಣ ನಾಶನ ಮಾಡಬೇಕು. ಅಲ್ಲಿವರೆಗೂ ಸ್ವಲ್ಪ ನೀವು ತಡಕೋಬೇಕು. ಅಲ್ಲಿಯವರೆಗೂ ಕಥೆ ನಡೀಲಿ ಮುಂದಕೆ ಅಂದ ಸ್ವಾಮಿ. ಕಥೆನಡೀಲಿ, ಸ್ವಲ್ಪ ನಿಧಾನಮಾಡಿ ಅಂದ ಅಲ್ಲಿಗೆ ಅವನ ದೊರೆತನ ಆಳಬೇಕೆ ಜುಂಜಪ್ಪ ಎಲ್ಲವನ್ನೂ ಅಲ್ಲಿ ಸಮಾಧಾನ ಮಾಡಿಕೊಂಡು ಕೆಂಬಣ್ಣನ ಅನ್ನ ಕೆಂಬಕ್ಕನ ಗದ್ದೆಯಾಗೆ ಅನ್ನವರೆ ಹೊಲ. ಅಲ್ಲಿಗೆ ಆ ಕಾವಲಿಗೆ ಹೋಗಿ ಮೂರುತಿಂಗಳು ಆಗಿತ್ತು. ಮಾರಣ್ಣ ಮೈಲಣ್ಣನ ಕರಕೊಂಡು ಅವರಿಗೊಂದು ವಿದ್ಯಾಬುದ್ಧಿ ಹೇಳಿಕೊಂಡು ಬರುವಲ್ಲಿಗೆ ಚೇಳೂರುಕಾವಲು ಮಾರಣ್ಣ, ಮೈಲಣ್ಣ ಜೋಡೀಲಿ ಜುಂಜಪ್ಪ ಚೇಳೂರು ಕಾವಲಾಗೆ ಏನೇನು ಮಾತಾಡ್ಯಾರೋ, ಚೇಳೂರಿಗೆ ಹಿಪ್ಪ ತೋಪಿಗೆ ಬಂದು ಕಳ್ಳಿ ಕಡಿದು ಏಳು ಕರುವಿನ ಗೂಡು ಹಾಕಿದ್ನಂತೆ. ಕಾರೆಕಳ್ಳಿ ಕಡಿದು ಏಳುದನವಿನ ಗೂಡುಹಾಕಿದ್ನಂತೆ, ತುಗ್ಗಲಿ ಕಳ್ಳೆ ಕಡೆದು ಬಗ್ಗಿಸಿ ಗೂಡುಹಾಕಿದ್ನಂತೆ. ಯಾರೂ? ಜುಂಜಪ್ಪ. ತುಗ್ಗಲಿ ಕಳ್ಳೆ ಕಡಿದು ಬಗ್ಗಿಸಿ ಗೂಡುಹಾಕಿಕೊಂಡು

ಮಾರಣ್ಣ ಮೈಲಣ್ಣರ ಜೊತೆಯಾಗೆ ಅವತ್ತಿನ ದಿನದಾಗೆ ಮೂವರು ಅಣ್ಣ ತಮ್ಮದೀರೂನು ಚೇಳೂರು ಕಾವಲಾಗೆ ಅಷ್ಟೊತ್ತಿನಾಗೆ ಮೂವರು ಒಟ್ಟಿಗೆ ಮೂರು ತಿಂಗಳಿಗೆ ಬಂದು ಊಟ ಮಾಡಿದ್ರಂತೆ. ಮೂರುತಿಂಗಳಿಗೆ ಊಟಮಾಡಿ ಆ ಘಳಿಗೆಯಾಗ್ಯೇನೇ ಮೂವರು ಮಲಗಿದ್ದು ಆ ಆವಿನ ಗೂಡಿನ ಬಾಗಲಾಗೇನೇ ಹಿಪ್ಪೆ ತೋಪಿನಾಗೆ. ಈ ರಾತ್ರೋರಾತ್ರಿ ಹೋಗಿ ಬಿಟ್ಟರು ಕಂಬೇರಗೊಲ್ಲರು. ಆಗ ರಂಗಪ್ಪ 'ಜುಂಜಪ್ಪ ಅಲ್ಲಿ ಸತ್ತ ಅಂದಿದ್ರು, ಮಾರಣ್ಣ ಮೈಲಣ್ಣ ಅಲ್ಲೇ ಸತ್ತರು ಅಂತ ಹೇಳಿದ್ರು ಇಲ್ಲಿ ನೋಡಿದ್ರೆ ಮೂವರೂ ಒಟ್ಟಾಗಿ ಇದ್ದು ಬಿಟ್ಟವ್ರೆ. ಇವ್ನು ಅಸಾಧ್ಯದೋನು ಇವನು ಚಿನ್ನಮ್ಮನ ಮಗ ಅಂದ್ರೆ ಏನು. ನಾಳೆ ಹೊತ್ತು ಹುಟ್ಟೋ ಹೊತ್ತಿಗೆ ಏನು ಮರಣ ನಿನಗೈತೋ ಏನು ನಮಗೇ ಐತೋ ಈಗ ಹೆಂಗೆ ಮಾಡಾನಯ್ಯ' ಅಂದರು.

'ಈಗ ಹೆಂಗೂ ಮಾಡೋದು ಬೇಡ ಸ್ವಾಮಿ, ನೀವು ಹೆಂಗೆ ಹೇಳ್ತೀರೋ ಹಾಗೆಯೇ ಮಾಡಾನ, ಹೆಂಗೂ ಹೇಳಾದು ಬೇಡ. ಇನ್ನು ಮಾಡ ಹಾಳಾಗಿ ಕಾಡಿಗೆ ನೋಡ್ಲಿ. ಬೇಡಕ್ಕೇನು ಇಲ್ಲ. ಚಿನ್ನಮ್ಮನ ಮಕ್ಕಳು ವಿದ್ಯಾವಂತರಲ್ಲ. ದಡ್ಡರು. ಅವರಣ್ಣ ನೀನು. ಇಲ್ಲಿ ಸೋಲಿಸಬೇಕಾದರೆ ನೀನು ಅವರನ್ನು ಕರೆಸಿಕೊಂಡು ಪಗಡೆ ಆಟ ಆಡಿ ನೀನು ಅವರನ್ನ ಗೆಲ್ಲಬೇಕು. 'ಮೂರು ಇರುಳು ಮೂರು ಹಗಲು ನ್ಯಾಯ ಮಾಡಿ ಮೂರು ವರುಷ ಬಿಟ್ಟುಬರಬೇಕು ನಮಗೆ ಆಗಬೇಕು ಈ ನ್ಯಾಯ" ಅಂದರು.

ಆಗ ಇಪ್ಪತ್ತೈದು ಜನರನ್ನು ಕಳಿಸಿದ್ನಂತೆ ಚೇಳೂರು ದೊರೆ. ಆಗ ಇಪ್ಪತ್ತೈದು ಜನ ಬರೊವೊಳಗೆ ಆಗ ಜುಂಜಪ್ಪ ಕಣ್ಣು ಬಿಡುವೊತ್ತಿಗೆ ಕೆಂಡ ಉದುರಿದ್ವಂತೆ. ಎದ್ದು ನೋಡಿದ್ರೆ 'ನ್ಯಾಯ ನೀತಿಗೆ ಅಂತ ಜನ ಕಳಿಸ್ಯೆತೆ. ಈಗ ನೀವು ಬರಬೇಕು ಜುಂಜಪ್ಪ' ಅಂತ ಹೇಳಿ ಕಳಿಸಿದ್ರಂತೆ.

"ನ್ಯಾಯ ಪಗಡೆಗೆ ಬರಬೇಕೂಂತಿದ್ರೆ ಏಳುಜನ ಕಂಬೇರ ಗೊಲ್ಲರು, ಹದಿನಾಲ್ಕು ಲಕ್ಷದದಂಡು, ಬಡಮೈಲನ ತೊಗೊಂಡು ಹೋಗಿ ಸೆರೆಹಾಕಿದ್ದಂತಹ ಜಾಣರು. ಧೀರರೆಲ್ಲ ಬರಬೇಕು ಇವತ್ತು. ಎರಡು ಅಗ್ರಿಮೆಂಟ್ ಬರೀಬೇಕು ಇವತ್ತು. ಅಗ್ರಿಮೆಂಟ್‌ನ ಏನಂತ ಬರೀಬೇಕು?" ಜುಂಜಪ್ಪ ಕೇಳಿದ.

"ದಾಯಾ ಪಗಡೆಯಾಗೆ ಸೋತರೆ ಮಾರಣ್ಣ ಮೈಲಣ್ಣ ಜುಂಜಪ್ಪ ಮೂವರನ್ನು ಸಿಗಿಸಿ ಚೇಳೂರು ದೊಡ್ಡೂರು, ಊರಬಾಗಿಲಿಗೆ ತೋರಣ ಕಟ್ಟಬೇಕು. ಜುಂಜಪ್ಪನೇ ದಾಯಾ ಪಗಡೆಯಾಗೆ ಗೆದ್ದು ಈ ರಂಗಪ್ಪನೇ ಸೋತರೆ ಐದು ಖಂಡಗದ ಅಕ್ಕಿ ಕೆಂಬಕ್ಕಿ ಗದ್ದೆ, ಸಾಣಿಕೆರೆ ಹೊಲ

ಚೇಳೂರು ದೊರೆತನ ಮೂರನ್ನೂ ಜುಂಜಪ್ಪನಿಗೆ ಬಿಟ್ಟು ಕೊಡಬೇಕು ರಂಗಪ್ಪ."

ಹೀಗಂತ ಆ ಘಳಿಗೆಯಾಗೆ ಎರಡು ಅಗ್ರಿಮೆಂಟ್ ಬರೆಸಿಬಿಟ್ಟು ಸಾಣಿಕೆರೆ ಪುಟ್ಟಣ್ಣ, ಸೊಂಡೂರು ಬೊಮ್ಮಣ್ಣ ಆ ನ್ಯಾಯಸ್ಥರನೆಲ್ಲಾ ಬರಬೇಕು ಅಂತ ತಾಳೆಗರಿಯಾಗಿ ಓಲೆ ಬರೆಸಿಬಿಟ್ಟು ಬಂದು ಗುಂಗಾರಿ ಹುಳುವಿನ ಕಾಲಿಗೆ ಕಟ್ಟಿ ಬಿಟ್ಟನಂತೆ ಜುಂಜಪ್ಪ. ಅದು ತೊಗೊಂಡೋಗಿ ಪುಟ್ಟಣ್ಣನ ತೊಡೆಮ್ಯಾಗೆ ಹಾಕಿ ವಾಪಾಸು ಬಂದಾಗ "ದೊಡ್ಡೋನು ಜುಂಜಪ್ಪ ಈ ನಾಡಿನಿಂದ ಆ ನಾಡಿಗೆ ಹೋಗಿ ವಾಲೆ ಕೊಟ್ಟು ಬಂದೋರಿಗೆ ನನಗೆ ಏನು ಕೊಡ್ತೀಯಾ" ಅಂತ ಕೇಳಿತು.

"ನೋಡಯ್ಯ ಗುಂಪಣ್ಣ, ಗುಡ್ಡದಾಗೆ ಇರು. ಒಂದು ತೆಂಗಿನ ಮರ ಆಲದ ಮರದ ಕೆಂಚಿನಾಗೆ ಇರು. ಇದು ಜೇನು ಹಿಕ್ಕೆ ಅಂತ ನೋಡಿ ನಿನ್ನ ತಗೊಂಡೋಗಿ ಕುರಿಹುಡುಗರು ದನಿನ್ನ ಹುಡುಗ್ರು ಎಲ್ಲಾ ಮಡಿಕ್ಕೊಂಡು ದೇವಾನು ದೇವತೆಗಳೆಲ್ಲ ಒಂದು ಗುಣ ಭಜನೆ ಮಾಡಿಸಿದ ದಿವಸ ಈ ದೇವಾನು ದೇವತೆಗಳಿಗೆಲ್ಲಾ ಉತ್ತುತ್ತಿ, ಎಳ್ಳು ದ್ರಾಕ್ಷಿ, ಖರ್ಜೂರ, ಬಾದಾಮಿ, ಎಲ್ಲ ಕುಟ್ಟಿ ಮಿಲಾಗತಿ ಮಾಡಿ ತುಪ್ಪದ ಒಳಕ್ಕೆ ಹಾಕಿ ದೇವಾನುದೇವರಿಗೆಲ್ಲ ಅಭಿಷೇಕ ಮಾಡಕ್ಕೂ ನಿನ್ನ ಹೇಲು ಅನ್ನುವಂತದ್ದು ತುಪ್ಪವಾಗಲಿ ಜೇನುತುಪ್ಪ, ಈ ತುಪ್ಪ ಇಲ್ಲದಿದ್ದ ಮೇಲೆ ಯಾವ ದೇವರಿಗೂ ಅಭಿಷೇಕವಾಗುವುದಿಲ್ಲ."

ಅಷ್ಟು ಮಾಡಿಬಿಡುವ ಹೊತ್ತಿಗೆ ಆ ನ್ಯಾಯಸ್ಥರೆಲ್ಲಾ ಅಲ್ಲಿಗೆ ಬಂದರು. ಅವರು ಬಂದರು. ಇವರು ಬಂದರು ಅನ್ನೋ ಹೊತ್ತಿಗೆ ಈ ಕಡೆ ಕೆರೆದಂಡೆಯಾಗೆ ಜುಂಜಪ್ಪನ ದಂಡು ಬಂದು ಡೇರೆಹೊಡೆಸಿದ್ರು, ಆ ಕಡೆ ರಂಗಪ್ಪನ ಕಡೆ ದಂಡು ಬಂದು ಡೇರೆ ಹೊಡೆದು ಆಗಣ್ಣಿನೋರು ಈಗಣ್ಣಿನೋರು ಎಲ್ಲಾ ಮೂರು ಇರುಳು ಮೂರು ಹಗಲು ಚೇಳೂರಾಗೆ ಕುಂತು ನ್ಯಾಯ ಮಾಡಿದರು.

'ನ್ಯಾಯ ನಮಗೆ ಬೇಕಿಲ್ಲ. ದಾಯಾ ಪಗಡೆ ಆಡಿಯೇ ತೀರಬೇಕು' ಅಂದ ರಂಗಪ್ಪ.

'ದಾಯ ಪಗಡೆ ಆಡಿಯೇ ತೀರಬೇಕು' ಅಂತ ರಂಗಪ್ಪ ಹೇಳಿದಾಗ

'ನಾವು ದಾಯ ಪಗಡೆ ಆಡಕ್ಕೆ ಸಿದ್ಧ ಅದರೆ ಅಗ್ರಿಮೆಂಟ್ ಬರೀಬೇಕು. ಆಡಬೇಕು. ನೀವು ಅಗ್ರಿಮೆಂಟ್ ಬರ್ದಿದ್ದೀರಾ. ನೀವು ಮೂವತ್ತ ಮೂರು ಹಳ್ಳಿ ಜನವೆಲ್ಲಾ ಚೇಳೂರು ರಂಗಣ್ಣಂದು ನೀವು ಬರೀರಿ, ಬಡಗಲ ಸೀಮೆ ಜುಂಜಪ್ಪನ ನ್ಯಾಯಸ್ಥರೆಲ್ಲ ಜುಂಜಪ್ಪನ ಕಡೆ ಅವರು ಆ ಕಡೆ ಬರೀಲಿ. ಎರಡೂ ಕಡೆಯವರೂ ಎರಡು ಅಗ್ರಿಮೆಂಟ್‌ನ್ನು ಬರೆದು ಸಾವಿರಾರು ಜನರ ಮಧ್ಯೆ ಮಡಗಲಿ. ನೀನು ಹಾಕ್ತಿಯೋ, ನಾನು ಹಾಕನೋ ಪಗಡೆ' ಅಂದ ಜುಂಜಪ್ಪ.

'ಗೆಲ್ಲುವವ ನಾನೇ ಹಾಕಬೇಕು ಕಣ್ಲಾ ಮುಂದಾಗಿ' ಅಂದ ರಂಗಣ್ಣ.

'ಹಾಕು' ಅಂದ. ಮೂರುಮೂರು ಕೈ ಹಾಕಿದ ಚೇಳೂರುರಂಗಪ್ಪ, ಸೋಲು ಬಂತು.

'ಸೋತ್ಯೇನೋ' ಅಂದ.

'ದೇವರ ಆಸೆ ದೇವರಿಗೆ ಹೋಯಿತು. ಮೊದಲನೆ ಆಟ ದೇವರ ಆಟ ಮೊದಲಿಂದ ಹಾಗ್ತೀನೋ ಜುಂಜಪ್ಪ' ಅಂದು ತಿರುಗಾ ಮೂರು ಕೈ ಹಾಕಿದ. ತಿರುಗಾ ಮೂರುಕೈ ಸೋಲುತು. 'ಸೋತ್ಯೇನೋ ರಂಗಣ್ಣ' ಅಂದರು.

ಆಳು ಮನೆ ಮಾಯಕಾರ
ಕಂಬೇರಗೊಲ್ಲರ ಮಾತಾನೇ ಕೇಳೀಗ
ಗೊಡ್ಡು ಗಾಳಿಯೋರ
ಕೆಟ್ಟವನೋ ಚೇಳೂರು ರಂಗಣ್ಣೋ

'ಜುಂಜಪ್ಪ ಆಳುಮನೆ ಕಂಬಿಯೋರ ಗೊಲ್ಲರ ಮಾತು ಕೇಳಿ ಚೇಳೂರು ರಂಗಪ್ಪ ಸೋತ. ಈಗ ನೀನು ದಾಯ ಪಗಡೆ ಹಾಕಬೇಕು ಕಣೋ ಜುಂಜಪ್ಪ' ಪ್ರಜೆ ಎಲ್ಲಾ ಹೇಳಿಬಿಟ್ಟರು.

ದಾಯಾ ಪಗಡೆ ಕೈಯಲ್ಲಿ ಹಿಡಕೊಂಡು ಕಲ್ಲೆಲಿಂಗ, ಮಲ್ಲೆಲಿಂಗ, ಮೈಲಾರಲಿಂಗ, ಅಂಗೈಲಿ ಆರುಕೋಟಿಲಿಂಗ, ಮುಂಗೈಲಿ ಮೂರುಕೋಟಿಲಿಂಗ, ಶತಕೋಟಿ ಸಾವಿರ ಲಿಂಗದಾಣಿ, ಚಿತ್ತಯ್ಯ, ಚಿಕ್ಕೋನು ನರಸಿಂಹ, ಹಿರಿಯೋನು ಹಿರೋಬಳದಯ್ಯ ನೀವೆಲ್ಲ ದೇವರು ನನ್ನ ಪರವಾಗಿ ಇರಬೇಕು. ಗೌರಸಂದ್ರದ ಮಾರಿಗೂ ಹೇಳಿದ್ದ. ಪಗಡೆ ಕೈಯಾಗೆ ತಗೊಂಡು ಎಲ್ಲ ದೇವರಿಗಿಂತಲೂ ಮುಂದಾಗಿ ಕೊರವಂಜಿ ವೇಷದಲ್ಲಿ ಬಂದು ಕೂತುಕೊಂಡಳು. ಆ ಸ್ಥಳಕ್ಕೆ ಜುಂಜಪ್ಪ ಬಂದು ಕೂತಾಗ

'ಅತ್ತ ಇತ್ತ ಹೇಳೋ ಪಗಡೆನೆಲ್ಲಾ ನನ್ನ ಮುತ್ತಿನ ಸೆರಗಿನಾಗೆ ಹೊಡಕೊಂಡು ಬಂದು ಒಂಭತ್ತು ತರದ ಪಗೆಡೇನು ಭೂಮಿಗೆ ಹಾಕಿಸಿ ನಿನ್ನೇ ಗೆಲ್ಲಿಸುತ್ತೀನಿ ಹಾಕು ಪಗಡೇಯಾ' ಅಂದಳು.

ಆರು ಮೂರು ಒಂಭತ್ತು ಅಂತ ಪಗಡೆ ಹಾಕಿದ ಜುಂಜಪ್ಪ. ಗೆಲುವೇ ಬಂದು ಬಿಡ್ತು.

'ಜುಂಜಪ್ಪ ಗೆದ್ದ, ಜುಂಜಪ್ಪ ಗೆದ್ದ ಗೆದ್ದ ಗೆದ್ದ ಅಂದುಬಿಡ್ತು' ಆ ಪ್ರಜೆ ಎಲ್ಲಾ.

'ಜುಂಜಪ್ಪ ಗೆದ್ದ' ಅಂತಿದ್ದ ಹಾಗೆ ಹದಿನಾಲ್ಕು ಗೂಡಿನ ದನ ಎಲ್ಲಾ ಕಾಲು ಕೆರೆದು ಗುಟುರಿಕೆ ಹಾಕಿಬಿಟ್ವು. ಗುಟುರಿಕೆ ಹಾಕಿದ ಬಡಮ್ಮೈಲನ

ಕಾಲಗೆರಸಿಂದ ಕೆಂದೂಳು ಎದ್ದು ಚೇಳೂರನೇ ಮುಚ್ಚಿಹಾಕಿಬಿಡ್ತು.

"ಮಾರಣ್ಣ ಮೈಲಣ್ಣ ಕೆಂಬಕ್ಕಿ ಗದ್ದೆ ಅವರೆ ಹೊಲ ನಿಮ್ಮದು. ಚೇಳೂರು ದೊರೆತನ ನಿಮ್ಮ ಅಣ್ಣಂದು. ದಾಯ ಪಗಡೇಲಿ ನಿಮ್ಮ ಅಣ್ಣ ಗೆದ್ದು ಬಿಟ್ಟ ಜುಂಜಪ್ಪ. ಕರೀರಲೇ ನನ್ನ ಆವಿನ ದನಗಳನ. ಕೆಂಬತ್ತದ ಗದ್ದೆಗೆ ಹೋಗಾನ".

'ಮಾರಣ್ಣ ಮೈಲಣ್ಣ ಜೋಡಿಲೀ ಬಡಮೈಲ
ಆವಿನ ದನವೆಲ್ಲಾ ಕರಿಯಾಣೋ ಇವಾಗ
ಆಕ್ಕೋಳು ಅಕ್ಕಮಾರಿ ಚಿಕ್ಕೋಳು ಚಿಕ್ಕಮಾರಿ
ದ್ಯಾವಕ್ಕ ದಾಯಮಾರಿ, ಕಡೆಹುಟ್ಟಿನ ಕಲ್ಯಾಣಿ,
ಬುದ್ಧಿಯಲ್ಲಿ ಬುದ್ಧಿವಂತೆ ಕೊಂಬಿನಲ್ಲಿ ಗಂಭಿರವಂತೆ
ಬಾಲದಲ್ಲಿ ಬಲವಂತೆ, ಮುಖದಲ್ಲಿ ನೋಡಿದ್ರೆ
ಸುಂದರ ಸುಕ್ಕ ಬೊಟ್ಟಿನ ಚೆಲುವೆ,
ದೊಡ್ಡಾಳಿಗೇನು ಗೊಡ್ಡಗಾಳಿಯೋರು
ಬನ್ನಿರಮ್ಮ ಕೆಂಬಕ್ಕಿ ಗದ್ದೇಗೆ ಮೇಯಕ್ಕೆ ಹೋಗಾನ
ಅಂತ ಕರೆದಾವೋ

ಕರೆದು ಬಿಟ್ಟ ಬಡಮೈಲ. ಅಷ್ಟು ಆವಿನಗೂಡಿನ ದನ ಹೋಗಿ ಕೆಂಬತ್ತದ ಗದ್ದೆಗೆ ಬಿದ್ದಾವೆ. ಈ ನ್ಯಾಯಸ್ಥರನೆಲ್ಲಾ ಸಾಗಹಾಕಿ ಶನಿವಾರ ಹೊತ್ತು ಹುಟ್ಟೋ ಹೊತ್ತಿಗೆ ಹತ್ತಿದ ಚೇಳೂರು ದೊರೆತನಾನ ಜುಂಜಪ್ಪ.

ಚೇಳೂರು ರಂಗಣ್ಣಗೆ ಏಳು ಜನ ಹೆಂಡತಿಯರು, ಏಳುಜನ ಮಕ್ಕಳು. ಹದಿನಾಲ್ಕು ಜನ, ದೊರೆ ಒಬ್ಬ ಹದಿನೈದು ಜನ. ಬಿಟ್ಟರು ಜುಂಜಪ್ಪಗೆ ಸಿಂಹಾಸನ.

'ಜೋಳಿಗೆ ಹಾಕ್ಕೊಂಡು ದಿನಾ ಮೂವತ್ತಮೂರು ಹಳ್ಳಿ, ಹದಿನಾರು ಹಳ್ಳಿ, ತಿರುಗೋರು ಅವರು.

ಬಾಳು ಎಂಬೋರ ಮಕ್ಕಳಿಗೆ ಬಾಳಿಲ್ಲ, ಏಳು ಬಳಗದ ನನ್ನ ಮಕ್ಕಳಿಗೆ ಏಳಿಗೆ ಇಲ್ಲ' ಎಂದ

ಹಗೆ ಅಂಗೆ ಬಂದು ಹೋಗಿಬಿಡ್ತು ಇವರ ವ್ಯವಹಾರ. ಇವತ್ತು ಅವರು ದಿನಾ ತಿರುಕ್ಕೊಂಡು ತಿನ್ನಬೇಕು ಅಂತಾದ್ದು ಬಂದು ಹೋಗಿಬಿಡ್ತು ಇವರದ್ದು ವ್ಯವಹಾರ. ಮೂರುವರುಷ ಚೇಳೂರು ರಂಗಪ್ಪನ ದೊರೆತನಾನ ಆಳಿದನಂತೆ ಜುಂಜಪ್ಪ.

ಕೆಂಬಕ್ಕಿ ಗದ್ದೆ, ಹಣ್ಣು ಅವರೆ ಹೊಲ, ಕಾವಲು ಕಟ್ಟಣೆ ಎಲ್ಲಾ ಮೂರು ವರುಷದ ತನಕ ಮಾರಣ್ಣ, ಮೈಲಣ್ಣ, ಬಡಮೈಲ ಮೂವರು ಮೇಯಿಸಿಕೊಂಡು ಇದ್ದು ಬಿಟ್ಟರಂತೆ. ಹನ್ನೆರಡು ಮನೆ ನೀರುಗಂಟಿಯೋರು ಬಂದು ಬಾಯಿಬಡಕೊಂಡರಂತೆ.

"ಸ್ವಾಮಿ ಮೂಲೆ ಮುಡುಕನಾಗಿ ಇರೋರು ನಾವು. ಕುರಿಕಣ್ಣಿ ಹರಕೊಂಡು ನಮ್ಮ ಜಲ್ಮ ಹರಕೋಂತೀವಿ. ನಮ್ಮ ಮಕ್ಕಳು ಮರಿ ಉಪವಾಸ ಸಾಯ್ತಾವೆ. ಈಗ ಆರು ತಿಂಗಳಿಂದ ನೀರುಗಂಟಿತನ ಮಾಡಿದೀವಲ್ಲ ಜುಂಜಪ್ಪ." ಅಂತ ಕೇಳಿದರು.

"ಮೊದಲು ಮೂಲೆನಾಗೆ ಇರೊದನ್ನ ಕೊಯ್ದು ಒಕ್ಕಲು ಮಾಡಿ ಕಾಳು ನಿಮ್ಮನೆಯಾಗೆ ಒಯ್ದು ಹಾಕ್ಕೋಳಿ. ಇನ್ನೊಬ್ಬರಿಗೆ ಒಂದು ಕಾಳು ಕೊಡಬೇಡ್ರಿ" ಅಂದ. ಹಂಗಂದೇಟಿಗೆ ಅವರ ಮನೆಯಾಗೆ ತುಂಬಿ ಹೋಯ್ತಂತೆ ಭತ್ತ.

'ಹರಿಯಾ ಸೀರಂಗಿ ಉರಿಯೋ ಕೆಂಡಕೆ ನಿಂತ
ಉಚ್ರಾಯಕೆ ನಿಂತವ್ನೆ ದೊರೆಯಾಗಿ ನಿಂತವ್ನೆ
ಜುಂಜಪ್ಪ ಬಡವರಿಗೆ ನಿಂತ ಜೊತೆಯಾಗಿ
ವಗ್ಗಾಳಾಗಾರುತಿ ಸುಜ್ಜದ ಬಾಯಬೀಗ
ಮಧ್ಯಾಹ್ನದ ಬಿಸಿಲಾಗೆ ಬರಲರಿವ
ಜುಂಜಪ್ಪ ಒಪ್ಪಿಸಿಕೊಳ್ಳೋ ಗರಿಕೆಯಾ'

ಅವರೂ ಪದ ಹೇಳಿಕೊಂಡು ಜಲ ಜಾಸ್ತಿ ಮಾಡಿಕೊಂಡು ನೀರುಗಂಟೆಯೋರು, ಆರುಮನೆಯೋರು ಆರತಿ ಕೋರಿ ಹೊಲಿಸಿ

ಉಣ್ಣೋದು ನಿನ್ನ ಅನ್ನ ಹೇಳೋದು ನಿನ್ನ ಹೆಸರು
ದೊಡ್ಡೋನು ಜುಂಜಪ್ಪ ನಮಗೆ ಹಾವು ಚೇಳು
ಮಂಡರಗಪ್ಪೆ ಯಾವುವೂ ಕಾಣದಂತೆ ಮಾಡಬೇಕಪ್ಪಾ, ಅಂದರು.

ಮೂರು ವರುಷ ದೊರೆತನ ಆಳ್ತಾ ಇದಾನೆ ಜುಂಜಪ್ಪ, ಚೇಳೂರು ರಂಗಪ್ಪನ ಹೆಂಡರು ಮಕ್ಕಳೆಲ್ಲ ಊರೂರು ಸುತ್ತಿಕೊಂಡು ಊಟಕ್ಕಾಗಿ ಅವರು ಅಲೀತಾ ಅವ್ರೆ. ಆವಾಗ್ಗೆ ಇವನು ಮೂರುವರುಷ ದೊರೆತನ ಆಳಿದ. ಕೆಂಬಕ್ಕಿ ಅವರೆಹುಲ್ಲು ಎಲ್ಲ ಆ ಮಾರಣ್ಣ ಮೈಲಣ್ಣ ಮೇಯಿಸ್ತಾ ಇದಾರೆ. ಮಣ್ಣಿ ಮಾದ್ರಿ ಕಾವಲು, ಬಿದಿರೆ ಕಣಿವೆಕಾವಲು, ಚೇಳೂರು ಕಾವಲು ಇಪ್ಪತ್ತಮೂರುಹಳ್ಳಿ ಕಾವಲು ಎಲ್ಲಾ ಕಾಯಿಸ್ತಾ ಇದಾರೆ. ಮೂರು ವರುಷ ಜುಂಜಪ್ಪ ಚೇಳೂರು ದೊರೆತನ ಆಳ್ತಾ ಇದಾನೆ. ಚೇಳೂರು ರಂಗಣ್ಣನಿಗೆ ಬಂತು ಬಡತನ. ಯಾರ‍್ಯಾರೋ ದೊಡ್ಡದೊಡ್ಡೋರು ಕರೆದು 'ಚೇಳೂರು ರಂಗಪ್ಪಗೆ ಅವನ ದೊರೆತನ ನೀನು ಬಿಟ್ಟು ಕೊಡಬೇಕು ಜುಂಜಪ್ಪ. ಅವನ ಹೆಂಡತಿ ಮಕ್ಕಳ ಬಡತನ ನೋಡೋಕಾಗಲ್ಲ' ಅಂತ ಹೇಳಿದರು. ಒಂದು ನ್ಯಾಯ ಮಾಡಿದರು. ಆಗ ಜುಂಜಪ್ಪ ಮೂರುವರುಷ ತುಂಬೋತನಕ ದೊರೆತನ ಆಳಿ ಅವನ ದೊರೆತನ ಬಿಡ್ತಾನೆ.

'ಚೇಳೂರು ರಂಗಣ್ಣ ಇನ್ನು ನಿಮ್ಮ ಹೆಂಡತಿ ಮಕ್ಕಳು ಎಲ್ಲಾ ಆನಂದವಾಗಿ ಇರ‍್ರಿ, ನನಗೆ ಇನ್ನು ಟೈಮ್ ಬಂದುಹೋಯಿತು.ಮೂರುವರುಷ ದೀಪಾವಳಿ

ಮಾಡಲಿಲ್ಲ, ಚಿತ್ರದೇವರು, ಕಾಟಮದೇವರಿಗೆ, ಹಾಲುಹೊಯ್ಯಲಿಲ್ಲ, ಹಬ್ಬ ಮಾಡಲಿಲ್ಲ, ನಾನು ಹೊರಟೋಗಿಬಿಡ್ತೀನಿ' ಅಂತ ಅವನು ಅಂದ. ರಂಗಣ್ಣನ ಹೆಂಡತಿ ಮಕ್ಕಳನೆಲ್ಲಾ ದೊರೆತನದ ಮೇಲೆ ಬಿಟ್ಟು ಮಾರಣ್ಣ, ಮೈಲಣ್ಣ, ಬಡಮೈಲ ಎಲ್ಲರನ್ನು ಕರಕೊಂಡು ಹೊರಟ. ಅವರು ಹೊರಡಬೇಕಾಗಿದ್ರೆ

'ಸ್ವಾಮಿ, ನಾನೇನೋ ಕಂಬೇರಗೊಲ್ಲರ ಮಾತುಕೇಳಿ ಮೋಸಹೋದೆ. ಈಗ ನೀನು ಹುಟ್ಟಿರೋ ಸ್ಥಳಮನೆ ಒಂದು ಹೇಳು' ಅಂತ ಕೇಳಿದ ಚೇಳೂರು ರಂಗಪ್ಪ

ಜುಂಜಪ್ಪ 'ದೊರೆ ನನ್ನ ಅರಮನೆ, ಗುರುಮನೆ ನಾನು ಹುಟ್ಟಿರೋ ಸ್ಥಳಮನೆ ನೀನು ಅರ್ಥಮಾಡ್ಕಂತೀಯನೋ ಹೇಳ್ತೀನಿ' ಅಂದ.

ತ್ಯಾಗದ ಹಳ್ಳಿ, ದೊಡ್ಡಹಳ್ಳಿ, ಗಿಡದಹಳ್ಳಿ, ಮಡಗು, ಜುಂಜಪ್ಪನ ಹಿರಿಹಟ್ಟಿ, ದಾವರಿಗಿರಿ, ಹುಲಿಮನೆ, ಹುಲಿಗುಂಟೆ, ಕುದುರೆಕುಂಟೆ, ಕೂವೂರೂ, ಎಡೆಹಳ್ಳಿ, ಗಂಗೆವಾರು, ಸದರೂ ಗೌಡಿ, ಗೂಗಂಗಲ್ಲು, ಚಿಕ್ಕಕಳುವಾರಹಳ್ಳಿ, ತಳುಕಿನಹಳ್ಳಿ, ಬಗಲಲ್ಲಿ' ಅಂದವನೋ ಅಂದ ಜುಂಜಪ್ಪ.

'ಒಂದೂ ಅರ್ಥವಾಗಲಿಲ್ಲ ಕಣಪ್ಪ' ಅಂದ ರಂಗಪ್ಪ.

ಜುಂಜಪ್ಪ 'ನೀನೇ ಅರ್ಥಮಾಡಿಕೋ' ಅಂದ. ಇನ್ನು ಒಂದು ಹೇಳ್ತೀನಿ. ಅರ್ಥ ಮಾಡ್ಕೋ ಅಂದ. 'ಕಡಪ ನಮ್ಮದಲ್ಲ, ಕೊಲ್ಲೂರು ನಮ್ಮದಲ್ಲ, ಕದಿರೆ ನಮ್ಮದಲ್ಲ, ಬಿದಿರೆ ನಮ್ಮದಲ್ಲ, ಚೆಂಚೂರು ನಮ್ಮದಣ್ಣ, ಹಾಗಲವಾಡಿ ಅರಮನೆ ಗಾಜಿನ ಕಂಬ ಹೋಗಿ ನೋಡೊರಿಗೆ ಋಣವಿಲ್ಲೋ' ಅಂದ.

'ಇದೂ ಅರ್ಥವಾಗಲಿಲ್ಲ ಜುಂಜಪ್ಪ' ಅಂದ.

'ಇನ್ನೂ ಒಂದು ಹೇಳ್ತೀನಿ ಅರ್ಥಮಾಡಿಕೋ'

'ಚಿಕ್ಕೆರೆ, ದೊಡ್ಡಕೆರೆ, ಚಿತ್ತಿನಗುಡಿ ಅಪ್ಪತಾನಲ್ಲ, ವಾಝಿಲ್‌ಗುಡ್ಡ ಗುಡ್ಡ ಅಲ್ಲ, ಗುಡ್ಡದುತ್ತಯ್ಯನ ಅದಲ್ಲ, ದೊಡ್ಡ ಆಲದ ಮರವೇ ದನದ ಬಾಲುಗೆಡ್ಡೈಗೌಡ ಜೂಜನಾಡಿ ಎತ್ತ ಕರೆದವನೋ' ಅಂದ.

'ಒಂದೂ ಅರ್ಥವಾಗಲಿಲ್ಲ ಜುಂಜಪ್ಪ' ಅಂದ. 'ಅರ್ಥವಾಗಲಿಲ್ಲದ ಮೇಲೆ ನಿನ್ನ ಅರಮನೆ ಮೇಲೆ ನೀನು ಇರು. ಬೇಕಾದಷ್ಟು ಜನ ಈ ತೆಂಕಲು ಸೀಮೆಗೆ ಹುಲ್ಲುನೀರಿಗೆ ಹೋಗುವವರು ಬಂದರೆ ನನಗೆ ಕೊಟ್ಟಂತಹ ಕಷ್ಟ ಅವರಿಗೆ ಕೊಡಬೇಡ. ನಾನಿನ್ನು ಹೊಂಟೋಗಿ ಬಿಡ್ತೀನಿ. ಕುರಿಕಾಯೋರು, ದನಕಾಯೋರು, ಇಲ್ಲಿ ಹುಲ್ಲು ನೀರಿಗೆ ಬಂದರೆ ಅವರಿಗೆ ಕಷ್ಟಕೊಡಬೇಡ' ಅಂತ ಹೇಳಿ ಮಾರಣ್ಣ, ಮೈಲಣ್ಣ ಜುಂಜಪ್ಪ ಶನಿವಾರದ ದಿನ ಹೊರಟರು. ಶನಿವಾರದ ದಿನ ಹೊರಟವರು ಶನಿವಾರ ಬಂದು ಮೂವರು ಒಂದ್ಹೊತ್ತು ಉಪವಾಸದಾಗೆ ಸೋಮಾರದ ದಿವಸ, ಒಂದ್ಹೊತ್ತು ಉಪವಾಸ

ಇದ್ದರು. ಅವರು ಮೂರು ವರುಷ ಹಬ್ಬ ಬಿಟ್ಟಿದ್ದರು. ದೀಪಾವಳಿ ಹಬ್ಬ. ಅವರು ಹಬ್ಬ ಬಿಟ್ಟ ದೆಸೆಯಿಂದ ಮೂಡಲ ಉದಿಯಾಗೆ ಒಂದು ಝುಂಡೇವು ಮೂರುಕಡೆ ನಿಲ್ಲಿಸಿ ಝುಂಡೇವು ನಡುಹಟ್ಟಿಯಾಗೆ ಬಂದು ಝುಂಡೇವು ಮೂರು ಕಡೆ ನಿಲ್ಲಿಸಿ ಮೂರು ಉಕ್ಕಿನ ಕಂಬ ನಿಲ್ಲಿಸಿ, ಮೂವರು ಅಣ್ಣತಮ್ಮಗಳನೂನು ಮೂರು ಅಡ್ಡೆ ಹಾಲು ಕರಕಂಬಂದು ಅವರ ಆವಿನ ದನೀನ್ನು ಚಿತ್ರದೇವರು ಕಾಟಮ ದೇವರಿಗೆ ಕಟ್ಟೆ ಹಾಲುಹೊಯ್ದು ಅವರು ದೀಪಾವಳಿ ಹಬ್ಬ ಮಾಡಿದ್ರು. ಮೂರು ಝುಂಡೇವು ಅಂದರೆ ಮೂಡಲ ಉದಿಯಾಗೆ ಇರೋವು ಝುಂಡೇವು ಚಿತ್ರದೇವರದ್ದು. ನಡುಹಟ್ಟಿಯಾಗಿ ಇರೋ ಝುಂಡೇವು ನರಸಿಂಹದೇವರದ್ದು. ಪಡುಗಡೆ ಉದಿಯಾಗೆ ಇರೋ ಬಿಳೀ ಝುಂಡೇವು ಕಾಟಮದೇವರದ್ದು. ಮೂರು ಝುಂಡೇವು ಎತ್ತಿ ಮೂರು ಉಕ್ಕಿನ ಕಂಬ ಎತ್ತಿ ಮಾರಣ್ಣ, ಮೈಲಣ್ಣ, ಜುಂಜಪ್ಪ ಮೂವರು ಮೂರು ವರುಷ ಹಬ್ಬ ಬಿಟ್ಟಿದ್ದಕ್ಕೆ ಅವರು ದೀಪದ ಕಂಬ ನಿಲ್ಲಿಸಿ ಅವರು ದೀಪಾವಳಿ ಹಬ್ಬ ಮಾಡಿದರು. ನೂರಾರು ಜನಕ್ಕೆಲ್ಲಾ ಬೇಕಾದಷ್ಟು ಅನ್ನಭತ್ರ ಇಡಿಸಿ, ನೂರಾರು ಜನಕ್ಕೆಲ್ಲಾ ಅನ್ನ ಹಾಕಬೇಕು ಅನ್ನೋವಾಗ್ಗೆ

'ಮಾರಣ್ಣ ಮೈಲಣ್ಣ' ಅಂದ ಜುಂಜಪ್ಪ.

'ಯಾಕಣ್ಣ?'

'ಚಿನ್ನಮ್ಮ ಮಾರಕ್ಕ ಇಬ್ರುನ್ನೂ ಕರಕೊಂಡು ಬರ್ರಿ ಅವರೂ ಒಂದು ಸ್ವಲ್ಪ ಊಟಾಮಾಡಿಕೊಂಡು ಹೋಗ್ಲಿ. ಚಿನ್ನಮ್ಮನ್ನೂ ಮಾರಕ್ಕನ್ನೂ ಕರಕೊಂಡು ಬರಲಿ. ಆಗ ಅಮ್ಮ ತಂಗಿ ಇಬ್ರುನ್ನೂ ಕರೆಸಿ ಅವರಿಗೆ ಊಟಕ್ಕೆ ಬಡಿಸಿ ತಾಂಬೂಲಕೊಟ್ಟು

'ಅಮ್ಮ' ಅಂದ.

"ಇಲ್ಲೀಗೆ ಸಾಣಿಕೆರೆ ಪುಟ್ಟಣ್ಣನ ಕಾವಲು, ಉಂಡೆ ಬುಳ್ಳಪ್ಪನ ಕಾವಲು, ಬಾಬಾ ಬುಡ್ಡನಗಿರಿ ಕಾವಲು, ಚೆಂಡೂರು ಗೊಂದಿಕಾವಲು, ಬಾಳೆಮಲೆ, ಬಚ್ಚಮಲೆ, ಕರಿಮಲೆ, ಜರಿಮಲೆ, ಒಳಮಲೆ, ಹೊರಮಲೆ, ಹುಕ್ಕೋರಿ ಕಾವಲು, ಮಾರಿಕಣಿವೆ ಕಾವಲು, ಮತ್ತೋಡು ರಂಗಪ್ಪನ ಕಾವಲು, ಬೂದಾಳು ಈರಭದ್ರನ ಕಾವಲು, ಏಣುಕಲ್‌ಗುಡ್ಡ, ಗುಡ್ಡೇವು, ಗುಡ್ಡೆಳ್ಳಿ, ಅಡ್ಡ ಏಣಿನಾಗೆ ಇರೋ ಗುಡ್ಡಳ್ಳಿ, ಬರಗೂರು ರಾಮೇಗೌಡನ ಕಾವಲು, ಹುಲಿಕುಂಟೆ ತಮ್ಮಣ್ಣನ ಕಾವಲು, ಸೀರ್ಯದರಂಗಣ್ಣನ್ನ ಕಾವಲು, ಚೇಳೂರು ಬಿದಿರೆ ಕಾವಲು ಅಂತ ಇಲ್ಲೀಗೆ ಹದಿನೈದು ವರ್ಷಕ್ಕೆ ಎಲ್ಲಾ ಗೆದ್ದು ಬಂದಿದ್ದೀನಿ. ಹದಿನೈದು ವರ್ಷ ಇಲ್ಲೀಗೆ. ಹದಿನೈದು ವರ್ಷಕ್ಕೆಲ್ಲಾ ಗೆದ್ದು ಇಲ್ಲೀಗೆ ಬಂದಿದೀನಿ. ಇನ್ನು ಪಡುವಲ ಸೀಮೆಯಾಗೆ ತಾಳೆದುರ್ಗಿ ಕಾವಲು ಅಂತ, ಅದೊಂದು ಕಾವಲು ಐತಂತೆ ಅಮ್ಮಾ, ಅದೊಂದು ಕಾವಲಿಗೆ ಹೊರಡಬೇಕು ನಾನು. ಅದಕ್ಕೆ ನೀನು ಆಶೀರ್ವಾದ ಕೊಡಬೇಕು ಕಣಮ್ಮಾ" ಅಂತ ಕೇಳಿದ.

೨.೩.೫ ತಾಳೇದುರ್ಗಿ ಕಾವಲು

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.
ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ‍್ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

ತಾಯಿ ಚಿನ್ನಮ್ಮನ್ನ, ತಂಗಿ ಮಾರಕ್ಕನ್ನ ಕರೆಸಿ ಊಟ ಮಾಡಿಸಿ ದೊರೆತನದ ಸಂಭ್ರಮ ತೋರಿಸಿದ. ಚಿನ್ನಮ್ಮ ತಾಯಿಗೆ ಹೇಳಿದ 'ಎಲ್ಲಾ ಕಾವಲನೂ ಗೆದ್ದು ಬಂದಿದೀನಿ, ಪಡುವಲದಾಗೆ ಇರೋ ತಾಳ್ಯದ ದುರ್ಗಿ ಕಾವಲು ಒಂದು ಉಳಿದೈತೆ. ಅದೊಂದನ್ನು ಗೆದ್ದು ಬರ್ತೀನಿ' ಅಂತ .

"ತಾಳೆದುರ್ಗಿ ಕಾವಲಿಗೆ ಹೊರಡಬೇಕಾಗಿದ್ರೆ, ಜುಂಜಪ್ಪ ನಿನ್ನ ತಂಗಿ ಮಾರಕ್ಕನು, ನೀನು ಚೇಳೂರು ಕಾವಲಿಗೆ ಹೋಗಿ ಮೂರುತಿಂಗಳು ತುಂಬಿರಬೇಕಾದ್ರೆ ಹೆಣ್ಣಾದಳು. ನೀನು ಹಿಂದಕ್ಕೆ ಬರುವಾಗ್ಗೆ ಮೂರುವರುಷ ತುಂಬಿತು. ಮೂರುವರುಷ ತುಂಬ್ತಾ ಇದ್ದಹಾಗೆ, ಈಗ ಮಾರಕ್ಕನ್ನ ಯಾರಿಗೆ ಕೊಡಬೇಕು ಅನ್ನೋದು ಐತೆ. ಕೊಟ್ಟು ನೀವು ಲಗ್ನಾ ಮಾಡಿ ಹೋಗಬೇಕು ಕಣಪ್ಪಾ. ನೀವು ಮೂರುಜನ ಅಣ್ಣ ತಮ್ಮಂದಿರು. ನಾನೆಷ್ಟು ದಿನ ಈ ಮಗಳನ್ನು ಮನೇಲಿ ಇಟ್ಟುಕೊಂಡು ಇರಾದು' ಅಂತ ತಾಯಿ ಕೇಳಿದ್ಲು ಜುಂಜಪ್ಪನ್ನ.

"ಅಮ್ಮಾ ನಿನ್ನ ಆತ್ಮ ಸಂತೋಷವಾಗಿ ಯಾರಿಗೆ ಕೊಡಬೇಕು ಅನ್ನೋದು ಐತೆ ಹೇಳೇ ಚಿನ್ನಮ್ಮ ನಿನಗೆ" ಅಂತ ಕೇಳಿದ.

"ನೀನು ಎಲ್ಲಿಗೆ ಕೊಡ್ತೀಯೋ ಅಲ್ಲಿಗೆ ಕಣಪ್ಪಾ, ನಾನೂ ಬರ್ತೀನಿ, ನಾನೇ. ಕೊಡ್ತೀನಿ ಅಂತ ಹೇಳಲ್ಲ" ಅಂದಳು.

"ಹಿಂದೆ ಹೋಗಿ ಕಂಬೇರ ಗೊಲ್ಲರ ವಂಶದಾಗೆ ನಿನ್ನ ತಂದು ನಮ್ಮ ಅಪ್ಪ ಕೆಂಗುರಿ ಮಲ್ಲೇಗೌಡಗೆ ಮದುವೆ ಮಾಡಿಕೊಂಡ ದೆಸೆಯಿಂದ

ಮೂವರು ಗಂಡು ಮಕ್ಕಳು ಹುಟ್ಟಿದೀವಿ, ಮಾರಕ್ಕ ಒಬ್ಬಳು. ನಾವು ಹೆಣ್ಣು ಗಂಡು ಕೂಡ ಹಡೆದಿದ್ದೇ. ಈಗ ಅವರು ಮನೆ ಹೆಣ್ಣು ನಮ್ಮ ಮನೆ ಹೊಕ್ಕು ನಮ್ಮ ಮನೆ ಬೆಳದೈತೆ. ಈಗ ನಮ್ಮ ಮಾವದೀರಿಗೂ ನಮಗೂ ಎಗನೆಸ್ಟ್ ಪಾರ್ಟಿ ಇದ್ದರೆ ಅವರಿಂದ ನಾನೇ ಒಂದಿನ ಮಡಿಯಬಹುದು, ನನ್ನಿಂದ ಅವರೆ ಒಂದಿನ ಮಡಿಬಹುದು. ಈ ಪಾಯಿಂಟ್‌ಗೂ ನ್ಯಾಯಕ್ಕೂ ಸಂಬಂಧವಿಲ್ಲ. ಕುರಿ ಕೊಟ್ಟೋರಿಗೆ ಮರಿಕೊಡಬೇಕು ಅಂತ ಹಿರೇರು ಮಾಡಿರೋ ಗುರುವಾಕ್ಯ ತಪ್ಪಲ್ಲ ಗೊತ್ತಾ ಚಿನ್ನಮ್ಮ' ಅಂದ. 'ಅಷ್ಟುಮಾಡಿದ್ರೂನೂ ಅವರಿಗೆ ಕೊಡಬೇಕು' ಅಂದ. ನ್ಯಾಯ ಉಳೀಬೇಕಲ್ಲ.

'ನಿನ್ನ ಇಷ್ಟದಂತೆ ನಾನು ಬತ್ತೀನಿ ಮಾಡಪ್ಪಾ' ಅಂದಳು.

ಸೋಮವಾರದ ದಿನ ಮಾರಣ್ಣ, ಮೈಲಣ್ಣ, ಚಿನ್ನಮ್ಮ ಮೂವರೂ ಹೋಗಿ ಅಲ್ಲಿ ನಿಶ್ಚಯ ಮಾಡಿಕೊಂಡು ನುಡಿದು ಅವರ ದಾರಿಮಾರ್ಗ ಎಲ್ಲಾ ಪೂರ್ಣವಾಗಿ ಮಾತಾಡಿ ಅರಿತುಕೊಂಡು ಬಂದರು. ಅತ್ತಲ ಸೋಮವಾರದದಿನ ಮಾವದೀರೆಲ್ಲಾ ಬಂದರು. ಅವರೂ ಎಲ್ಲಾ ಬಂದು ಕಂಡುಕೊಂಡರು ದಾರಿ, ಮಾರ್ಗ. ಅವರಿಗೂ ಎಲ್ಲಾ ಸರಿ ಸರಿಬಂದುಬಿಡ್ತು. ಅಲ್ಲಿಂದ ವಾರವಾರ ಹದಿನೈದು ದಿನಕ್ಕೆ ಏಳುಜನದಾಗೆ ಕಂಬೇರ ಕರಿಚಿನ್ನ ಅನ್ನೋನಿಗೆ ಕೊಟ್ಟು ಮಾರಕ್ಕನ್ನ ವಿವಾಹ ಮಾಡಿಬಿಟ್ಟರು. ವಿವಾಹ ಮಾಡಿ ತಿಂಗಳು ತುಂಬೋವರೆಗೂ ಹೆಣ್ಣಿನೋರ ಮನೆಯಾಗೆ ಹೆಣ್ಣಿತ್ತು. ಗಂಡಿನೋರ ಮನೆಯಾಗೆ ಗಂಡು ನಿಲ್ತು. ಬುಧವಾರದ ದಿನ ಅವಳನ್ನು ಕಳಿಸಿಕೊಡ್ರಿ ಅಂತ ಜುಂಜಪ್ಪನ್ನ ಅವರು ಕೇಳಿದ ಹಾಗೆ ಆಯ್ತು.

'ಒಳ್ಳೇದಾಗಲಿ ಹೋಗ್ರಪ್ಪಾ ಕರಕೊಂಡು ಹೋಗ್ರಿ' ಅಂದ ಜುಂಜಪ್ಪ.

ಮಾವಂದಿರು ಬಂದವ್ರೆ ಕರಕೊಂಡು ಹೋಗಕ್ಕೆ, ಹೋಗಮ್ಮ, ಬಾಳಿಕೊಂಡು ಬದಿಕ್ಕೊಂಡು ಹೋಗು' ಅಂದ. ' ಜುಂಜಪ್ಪ, ಮನೆ ಒಳಕ್ಕೆ ಹೋಗೋದಿನ ಮಾರಣ್ಣ, ಮೈಲಣ್ಣನ್ನ ಕಳಿಸಿದ್ದೆ. ತಿಂಗಳು ತುಂಬಿದ ದಿನ ನೀನು ಬರಬೇಕು. ನೀನು ಬರದ ಮೇಲೆ ನಾನು ಸೀರೆ ಉಡಲ್ಲ, ಕುಂಕುಮ ಇಡಲ್ಲ, ನೀನು ಬಂದ ಹೊರತು ನಾನು ಹೋಗಲ್ಲ ಕಣಣ್ಣ' ಅಂದಳು.

'ಇದು ನ್ಯಾಯ ಉಳಿಯಲ್ಲ ಮಾರಕ್ಕ. ನಿನ್ನ ಗಂಡದೀರಿಗೂ ನನಗೂ ಬೇಕಾದಷ್ಟು ಎಗನೆಸ್ಟ್ ಪಾರ್ಟಿ ಇತ್ತು. ಅಂತಾ ಪಾರ್ಟಿಯಾಗೂನೂ ಮಾರಕ್ಕನ್ನ ಅವರಿಗೆ ಕೊಡಬೇಕು ಅಂತ ಕೊಟ್ಟು ಮಾಡಿದ್ದೀನಿ. ಈ ನ್ಯಾಯ ಉಳೀಬೇಕು ಅಂತ. ಅವರಿಗೂ ನನಗೂ ಆಗಲ್ಲ. ನೀನು ಸಂತೋಷವಾಗಿ ಹೋಗಿ ಬಾಳಿಕೊಳ್ಳಬೇಕು.'

'ನೀನು ಬರದಿದ್ದ ಮೇಲೆ ನಾನು ಹೋಗಲ್ಲ ಕಣಣ್ಣ. ಬೇಕಾದಷ್ಟು ನೋವುಗಳನ್ನು ಹೊಟ್ಟೆ ಒಳಗೆ ಇಟ್ಟುಕೊಂಡಿದ್ದೀಯ. ಮಾರಣ್ಣ, ಮೈಲಣ್ಣನ್ನ ಕಳಿಸಿದ್ದೀಯ. ಆದರೆ ನನ್ನನ್ನ ಊರಿಗೆ ಬಿಟ್ಟು ಬರೋಕೆ ನೀನು ಬರಬೇಕು ಜುಂಜಪ್ಪಾ'.

'ನಾನು ಬರಬೇಕಾದ್ರೆ ನಾನು ಮುಖ ಗಟ್ಟಿಮಾಡಿಕೊಂಡು ಬರಬೇಕು ಯಾವತ್ತಿದ್ರು' ಅಂದ. ಮೊದಲು ಬರಲ್ಲ ಅಂದರೂ

'ಮಾರಣ್ಣ ಮೈಲಣ್ಣ ಆವಿನ ದನೀನ ಕಡೆ ಜೋಪಾನ: ಅಮ್ಮ ನೀನೂ ಜೋಪಾನವಾಗಿರು ಮನೆಕಡೆ, ನಾನು ಹೋಗೇ ಬರ್‍ತೀನಿ' ಅಂತ ಹೇಳಿಬಿಟ್ಟ.

ಕೇಳಲಿಲ್ಲ ಈಯಮ್ಮ. ಸೀರೆ ಉಟ್ಟುಕೊಂಡು ಮಡಿಲಕ್ಕಿ ಕಟ್ಟಿಸಿಕೊಂಡು ಅರಿಸಿನ ಕುಂಕುಮ ಎಲ್ಲಾ ಇರಿಸಿಕೊಂಡು ಹೊರಟು ಗುರುವಾರದ ದಿನ ಹೊತ್ತು ಮುಳುಗೋ ಹೊತ್ತಿಗೆ ಸರಿಯಾಗಿ ಕಂಬೇರಗೊಲ್ಲರ ಹಟ್ಟಿಗೆ ಹೋದರು.

'ಜುಂಜಪ್ಪ ಹೆಣ್ಣುಕೊಟ್ಟು ಮದುವೆ ಮಾಡವ್ನೆ. ಇವತ್ತು ಜುಂಜಪ್ಪ ಮನೆಗೆ ಬಂದವ್ನೆ. ಅವನಿಗೆ ಇವತ್ತು ನಮ್ಮ ಮನೆಯಾಗೆ ನೀರು ಕಾಸಿ ಎಣ್ಣೆ ನೀರು ಹಾಕ್ತೀವಿ. ಇವತ್ತು ಹೋಳಿಗೆ ತುಪ್ಪದ ಊಟ ಮಾಡಿಕೊಂಡು ಹೋಗಬೇಕು. ನಮಗೂ ನಿಮಗೂ ಎಗನೆಸ್ಟ ಪಾರ್ಟಿ ಇನ್ನು ಬೇಡಾ. ನಮ್ಮನೆ ಹೆಣ್ಣನ್ನ ನಿಮ್ಮ ಅಪ್ಪಗೆ ಕೊಟ್ಟಿದ್ವಿ. ನಿಮ್ಮ ತಂಗೀನ ನಮ್ಮ ಮನೇಗೆ ತರ್‍ತೀವಿ. ಅದರಾಗೆ ಯಾರೂ ನೋವು ತಗೊಳ್ಳೋದು ಬ್ಯಾಡಾ. ನಾವು ನೀವು ಎಲ್ಲಾ ರಾಜಿ ಆಗಿ ಬಿಡೋಣ. ಜುಂಜಪ್ಪಾ ನೀನು ನೀರು ಹಾಕ್ಕಂಡು ಊಟಾ ಮಾಡಿಕೊಂಡು ಹೋಗು' ಅಂದರು.

'ಮಾವದೀರಾ ನಾನು ಊಟಾ ಮಾಡಿಕೊಂಡು ಹೋಗಬೇಕಾಗಿದ್ರೆ ಶಾನೆ ತಪ್ಪು, ಅಪರಾಧಗಳು ಇದಾವೆ. ನಮಗೂ ನಿಮಗೂ ನ್ಯಾಯ ಬಗೆ ಹರಿದಿಲ್ಲ. ನಾನು ಹೆಣ್ಣು ಕೊಟ್ಟಿದ್ದೀನಿ. ಮದುವೆ ಮಾಡಿದ್ದೀನಿ. ಇನ್ನೊಂದು ವರ್ಷ ಟೈಮ್ ಐತೆ. ನಿಮ್ಮ ಮನೆಯಾಗೆ ಅನ್ನ ತಿನ್ನಬೇಕಾಗಿದ್ರೆ. ವರುಷದೊಳಗಾಗಿ ನೀವೇ ಮಡಿಬಹುದು, ನಾನೇ ಮಡಿಬಹುದು, ಎರಡರಾಗೆ ಒಂದು ಆಗೋವರಿಗೂ ನಿಮ್ಮ ಮನೆಯಾಗೆ ಅನ್ನ ತಿನ್ನಲ್ಲ. ಇವತ್ತಿನ ದಿನದಾಗೆ ಸ್ವಾಮಿ ಇದು ಸತ್ಯ. ಈ ಸಾಲು ಬೇವಿನ ಮರದಡಿಯಾಗೆ ಈ ನ್ಯಾಯ ಹರೀಬೇಕು. ಅವತ್ತು ನಿಮ್ಮ ಮನೆಯ ಅನ್ನ ತಿನ್ನಬೇಕು ಇವತ್ತು ನಾನು ತಿನ್ನಲ್ಲ' ಅಂತ ಹೊರಟುಬಿಟ್ಟ ಸ್ವಾಮಿ.

ಹೊರಟು ಬಂದು ಸಾಯಂಕಾಲ ಹೊತ್ತು ಮುಳುಗುವ ಹೊತ್ತಿಗೆ ಕಳುವಾರಹಳ್ಳಿ ದಿಣ್ಣೆ ಆವಿನ ಗೂಡಿನ ತಾವಕ್ಕೆ ಬಂದ. ಮಾರಣ್ಣಾ ಮೈಲಣ್ಣ ಚೆನ್ನಮ್ಮ ಮೂವರೂ ಏಣುಕಲ್ಲುಗುಡ್ಡದಿಂದ ದನ ಮೇಯಿಸಿಕೊಂಡು ಅವರೂ ಆವಿನ ಗೂಡಿನ ತಾವಕ್ಕೆ ಬಂದರು.

'ಯಮ್ಮಾ' ಅಂದ.

'ದೊಡ್ಡೋನು ಜುಂಜಪ್ಪ ಸಲೀಸಾಗಿ ಬಂದು ಬಿಟ್ಟ ಕಣಮ್ಮ',

'ಏನು ಅಣ್ಣದೀರು ನಿನ್ನ ಜೊತೆ ರಾಜಿ ಆದರೇನಪ್ಪಾ?

'ತಾಯಿ,'

'ಏನು ಜುಂಜಪ್ಪ, ನಿಮ್ಮ ಮಾವದೀರು ಆಳಿಯದೀರು ಎಲ್ಲಾ ರಾಜಿ ಆದರೇನಪ್ಪಾ?'

'ಚಿನ್ನಮ್ಮಾ, ಈ ಮೂವತ್ತು ಮೂರು ಹಳ್ಳಿಯೋರಿಗೆಲ್ಲ ಚಪ್ಪರ ಕಟ್ಟಿಸಿ ಅನ್ನ ಹಾಕಿಸಿದ್ರು ನಿಮ್ಮ ಅಣ್ಣದೀರು ಇವತ್ತು. ನನಗೆ ಅಂಗೈಯಾಗೆ ಹಾಕಿದ ತುಪ್ಪ ಮುಂಗೈಯಾಗೆ ಹರಿದು ಹೋಗೋವಷ್ಟು ಹಾಕಿ ಉಣ್ಣಾಕೆ ಇಕ್ಕಿಬಿಟ್ಟರು. ನಿನ್ನ ತವರು ಮನೆಯೋರು ನಾವು ಎಲ್ಲಾ ರಾಜಿಯಾಗಿದ್ದೀವಿ ಕಣಮ್ಮಾ' ಅಂದ.

'ಹೆಣ್ಣು ಕೊಟ್ಟಮೇಲೆ ರಾಜಿ ಆಗಲೇಬೇಕು. ನಾವೆಲ್ಲಾ ರಾಜಿ ಆಗಿದ್ದೀವಮ್ಮಾ. ನೀನು ಗಂಡ ಸತ್ತ ಮುಂಡೆ, ನಿನ್ನ ತವರು ಉಳಿಸಿದ್ದೀನಿ, ಆದರೂ ನನಗೆ ಎಗನೆಸ್ಟ್ ಐತಿ. ಇರಲಿ ನೀನು ಆನಂದವಾಗಿ ಇದ್ದುಬಿಡು' ಅಂದ.

'ಯಮ್ಮಾ' ಇಲ್ಲೀಗೆ ಎಲ್ಲಾ ಮುಗಿಸಿದ್ದೀನಿ. ನಿನ್ನ ತಲೆಮ್ಯಾಗಳ ಭಾರಾನೂ ಇಳಿಸಿದ್ದೀನಿ. ಪಡುವಲ ಸೀಮೆಯಾಗೆ ತಾಳೆದುರ್ಗಿ ಕಾವಲು ಅಂತ ಐತಂತೆ. ಅದೊಂದು ಕಾವಲು ಗೆದ್ದು ಬರತೀನಿ' ಅಂದ.

'ಸ್ವಾಮೀಯ ನೆನದೇವು, ಸ್ವಾಮಾರದಯ್ಯನ
ಎಣ್ಣೇನೇ ಮಜ್ಜಣದ ಒಡೆಯಾ ಜುಂಜಪ್ಪನ
ಉದಯದ್ಹೊತ್ತಿಗೆ ನೆನದೇವಲ್ಲೋ
ಅಂಜದಿರಲಿ ಮನವೇ, ಮಂದೀಯ ಬಲವೈತೆ
ಮುಂದೇನೇ ಗದ್ದಲದ ಹುಲಿಯೈತೆ
ನೆರಳಾಗೆ ಗುರುವಿನ ಬಲವೇ ನನಗಿರಲೋ,
ಹಬ್ಬವ ನೆನದಾರೆ ಆ ಕಾಲ ಸಪ್ಪಳಿಲ್ಲ.
ಕಳುವೇರಹಳ್ಳಿ ಅಪ್ಪ ಆಡಿದ ಮಾತೋ ಹುಸಿಯಲ್ಲೋ,
ದೇವರ ನೆನೆದರೆ ವಿಷವಿಲ್ಲ.
ಮನೆದೇವರೆ ನನಗೆ ಸಾಕ್ಷಿಯಾಗಿ ಬಂದರೆ" ಅಂದ.

'ಇನ್ನು ಮೇಲೆ ನರಲೋಕ ಸುರಲೋಕ ದೇವಲೋಕದ ಮೇಲೆ ಮನೆದೇವರು ನನಗೆ ಎದುರಿಗೆ ಕಾಯವಾಗಿ ಬಂತು. ದೇವರೆ ಎದುರಿಗೆ ಬಂತು ಅಂದರೆ ಇಲ್ಲಿ ಕುಂತಿರೊರಿಗೆಲ್ಲಾ ಕಾಫಿ ಕಾಯಿಸಿಕೊಡಲಿ ಅಂತ ಸಂತೋಷಕ್ಕೆ ಬಂತು. ಏಳೆಡೆ ಸರ್ಪ

ಇದಿರಿಗೆ ಬಂತು ಅಂದರೆ ತಾಳೆದುರುಗಿ ಕಾವಲಿಗೆ ದಾರಿತೋರ್ಸಕ್ಕೆ ಬಂದವನೆ? ಸರ್ಪ ಯಾರು? ನಾನೇ ಸರ್ಪ, ಹಾವಿನ ಹಾಸಿಗೆ, ಚೇಳೀನ ಗದ್ದುಗೆ ನಾಗರ ತಲೆದಿಂಬು ಮಾಡಿಕೊಂಡು ಮುಖ ಅಡಿಯಾಗಿ ಮಲಗಿರೋ ಅಂತ ವೀರಾಧಿವೀರ ಈರ್ರೈ ಜುಂಜ. ಈಶ್ವರನ ಮಗ. ಕಂಬೇರ ಚಿನ್ನಮ್ಮನ ಮಗಗೆ ಸರ್ಪ ಎದುರಿಗೆ ಬಂದೈತೆ ಅಂದರೆ ತಾಳೆದುರುಗಿ ಕಾವಲಿಗೆ ದಾರಿತೋರ್ಸೋಕೆ ಬಂದೈತೆ ತಮ್ಮದೀರಾ. ನಮಗೆಲ್ಲಾ ಅಕ್ಷಯವಾಗೈತಪ್ಪಾ. ಇನ್ನೇನೂ ತೊಂದರೆ ಇಲ್ಲ. ಮಾರಣ್ಣ, ಮೈಲಣ್ಣ ಇದೀಗ ಅಪಶಕುನವಲ್ಲ. ಎತ್ತಿದಹೆಜ್ಜೆ ಹಿಂದಕೆ ಇಡೋದುಬ್ಯಾಡ.' ಅಂತ ಮಾರಣ್ಣ ಮೈಲಣ್ಣ ಜೋಡೀಲಿ ಜುಂಜಪ್ಪ ಏಳೇಳು ಹದಿನಾಲ್ಕು ಗೂಡಿನ ದನವೆಲ್ಲಾ ಹೊಡಕೊಂಡು ಆದಿತ್ಯವಾರ ಆದಿತ್ಯವಾರಕ್ಕೆ ಎಂಟು ಸ್ವಾಮವಾರಕ್ಕೆ ಒಂಭತ್ತು ದಿನಕ್ಕೆ ಹೊರಟುಹೋಗಿ ಬಿಟ್ಟವು. ತಾಳೆದುರಗಿ ಕಾವಲಿಗೆ. ಎಲ್ಲೂ ಏನೂ ತಂಟೆತಕರಾರು ಇಲ್ದೇ ಇದ್ವಾಂಗೆ ಹೊರಟುಹೋಗಿ ಬಿಟ್ಟ ತಾಳೆದುರಗಿ ಕಾವಲಿಗೆ ಆವಿನದನ ಹೋಗುವಾಗೆ ತಾಳೆದುರುಗಮ್ಮನ ನೂರ ಒಂದು ಆಳುಗಳು ನೋಡಿಬಿಟ್ಟರು. ಜುಂಜಪ್ಪನ ದನ, ಕೊಂಬು ಕೋಡು ಒಂದೊಂದು ಮಾರುದ್ದ. ಹದಿನಾಲ್ಕು ಗೂಡಿನ ದನ ಮೂಡಲ ಸೀಮೆಯಾಗಿಂದ ಬಂದು ಬಿಡ್ತು. 'ಈಗ ನಮ್ಮನ್ನ ಕೊಂಬುತೂರಿಸಿ ಹಿಂಗ ಅಂದು ಬಿಟ್ರೆ ಹೊಟ್ಟ ಹರಕೊತ್ಯೆತೋ ರಕ್ತ ಈಚೆಗೆ ಬರುತ್ಯೆತೋ ಅದು ದೇವರ ಕಡೆಗಿನ ಮಾತು. ತಾಳೆದುರುಗಮ್ಮನ ಸಂಬ್ಳಾನೂ ಬೇಡಾ, ಕೂಲೀನೂ ಬೇಡ, ನಮ್ಮ ಹೆಂಡ್ರು ಮಕ್ಕಳು ಮುಂಡೇರಾಗ್ತಾರೆ, ಓಡ್ರಲೇ ಅತ್ಲಾಗೆ' ಅಂತ ನೂರ ಒಂದು ಆಳೆಲ್ಲ ಹೋಗಿ ಊರು ಸೇರಿ ಬಿಟ್ಟರು. ನೂರ ಒಂದು ಆಳೆಲ್ಲಾ ಹೋಗಿ ಊರು ಸೇರುವಾಗ್ಗೆ ಆ ಘಳಿಗೆಯಾಗೇನೇ ಜುಂಜಪ್ಪ

ಏಳ್ರೋ ಮೈಲಣ್ಣ ಮಾರಣ್ಣ
ಅಂಜಬ್ಯಾಡ್ರಿ, ಅಳುಕಬ್ಯಾಡ್ರಿ, ಸಗ್ಗಬ್ಯಾಡ್ರಿ, ಬಗ್ಗಬ್ಯಾಡ್ರಿ,
ನಾರಾಯಣನೆಂಬೋ ನಾಮಗೊಡಲಿ,
ಶಿವನೆಂಬೋ ಚಿಪ್ಪುಗೊಡಲಿ

ಅವೆರೆಡೂ ಕೊಡಲಿಗಳನ್ನು ತೊಗೊಂಡು ಈಗ ನೂರ ಒಂದು ಬಾಗಿಲನ್ನು ಕಡಿಯಕ್ಕೆ ಹೊಂಟ ಜುಂಜಪ್ಪ. ನೂರ ಒಂದು ಬಾಗಿಲುಗಳನ್ನು ಕಡಿದು, ಹದಿನಾಲ್ಕು ಗೂಡಿನ ದನಗಳನ್ನು ಕಾವಲಿಗೆ ಬಿಟ್ಟು ಬಿಟ್ಟ ಜುಂಜಪ್ಪ. ಆವಿನ ದನಗಳು ಬೆನ್ನ ಮೇಲೆ ಬಾಲ ಹಾಕ್ಕೊಂಡು ಆನಂದವಾಗಿ ದನ ಆಹಾರ ಮೇಯ್ತಾ ಅದಾವೆ. ಮೇಯ್ತಾ ಇರುವಾಗ್ಗೆ ಮಾರಣ್ಣ ಮೈಲಣ್ಣಗೆ ಜುಂಜಪ್ಪ ಗೋಲಿ ಗಜ್ಜುಗ ಆಡಿಸಿಕೊಂಡು ಆನಂದವಾಗಿ ಇದಾನೆ.

ಮುಂದಕೆ ಇಕ್ಕಿದ ಹೆಜ್ಜೆ ಹಿಂದಕ್ಕೆ ಇಕ್ಕೊದು ಬ್ಯಾಡ,
ಮಾರಣ್ಣ ಮೈಲಣ್ಣ ಏಳೇಳು ಹದಿನಾಲ್ಕು ಗೂಡಿನ ದನಗಳನ್ನು ಕರಕೊಂಡು
ಹೊರಟವ್ರೆ ತಾಳೆದುರುಗಮ್ಮನ ಕಾವಲಿಗೆ, ಜುಂಜಪ್ಪ ಹೊರಟವ್ನೋ.

ತಾಳೆಯ ದುರುಗಮ್ಮನ ಕಾವಲಿಗೆ ಹೋಗುವಾಗ

ಕಳುವಾರಹಳ್ಳಿ ಬೇವಿನಹಳ್ಳಿ ದಿಗ್ಗನೆ ಹೇಳವ್ನೋ ಸ್ವಾಮಿ ಒಂದು ಮಾತನ್ನು, 'ಮಾರಣ್ಣ, ಮೈಲಣ್ಣ ತಾಳೆದುರುಗಿ ಕಾವಲಿಗೆ ಹೋಗಬೇಕು ಅಂತ ಹೊರಟಿರೋದು ನಿಜ. ತಾಯಿ ಹೋಗಬೇಡ್ರಿ ಅಂದಿರೋದು ನಿಜ. ಈಗ ಎತ್ತಿದ ಬಾಣ ಮತ್ತೆ ಕುಕ್ಕಬಾರದು. ಮುಂದಕ್ಕೆ ಇಟ್ಟ ಹೆಜ್ಜೆ ಹಿಂದಕ್ಕೆ ತೆಗೀಬಾರದು. ನಾನು ಹೊರಟದೀನಿ. ನಾನು ನಿಲ್ಲೋರ ಮಗನಲ್ಲ, ಈ ನಾಡಿನಲ್ಲಿ ನರಲೋಕ ಭೂಮಿ ಭೂಲೋಕ ಎಲ್ಲಾ ಗೆದ್ದಿದ್ದೀನಿ, ನಾರ್ಗೆರೆ ಬುಡ್ಡಣ್ಣನ ಕಾವಲು, ಉಂಡೆ ಬುಳ್ಳಪ್ಪನ ಕಾವಲು, ಒಳಮಲೆ, ಹೊರಮಲೆ, ಕುದುರೆ ಕಣಿವೆ ಕಾವಲು, ಮಾರಿಕಣಿವೆ ಕಾವಲು, ಮತ್ತೋಡು ರಂಗಪ್ಪನ ಕಾವಲು, ಬೂದಾಳ ಈರಭದ್ರನ ಕಾವಲು, ಏಣುಕಲ್ ಗುಡ್ಡದ ಕಾವಲು, ಗುಡ್ಡ ಗುಳ್ಳವು, ಗುಡ್ಡದ ರಂಗಪ್ಪನ ಗುಡಿ ಕಾವಲು, ಬರಗೂರು ರಾಮೇಗೌಡನ ಕಾವಲು, ಹುಲಿಕುಂಟೆ ತಮ್ಮಣ್ಣನ ಕಾವಲು, ಸೀರ್ಯಾದ ರಂಗಣ್ಣನ ಕಾವಲು, ಚೇಳೂರು ರಂಗಣ್ಣನ ಕಾವಲು ಇವೆಲ್ಲಾ ಕಾಯ್ದು ಬಂದಿದೀನಿ. ಇವತ್ತಿಗೆ ಹದಿನೈದು ವರುಷಕ್ಕೆ ನಡುವೆ.

'ತಂಗಿ ಮಾರಕ್ಕನ ಮದುವೆ ಮಾಡಿ ಇವತ್ತು ತಾಳೆದುರಗಿ ಕಾವಲಿಗೆ ಹೊರಟ್ಟಿದ್ದೀವಿ? ಚಿತ್ರದೇವರು ಕಾಟಮದೇವರಿಗೆ ನಮಸ್ಕಾರಮಾಡಿ. ಆಶೀರ್ವಾದ ಮಾಡಲಿ. ಹೊರಹೋಗಿ ಬಿಡಾನ, ತಾಳೆದುರಗಿ ಕಾವಲಿಗೆ' ಅಂತ ಜುಂಜಪ್ಪ ಕೇಳಿದ.

ಕಳುವಾರಹಳ್ಳಿ ಬೇವಿನಹಳ್ಳೀಲಿ ಚಿತ್ರದೇವರಿಗೆ ಕೈಮುಗಿದು ಮೂರು ಹೆಜ್ಜೆ ಇಕ್ಕವಾಗ್ಗೆ ಸೋಮವಾರ ಸೆಗಣಿತಟ್ಟಿ ಕಟ್ಟಿಗೆ ಹೊರೆ ಇದಿರಿಗೆ ಬಂತು,

'ಸೆಗಣಿ ತಟ್ಟಿ, ಕಟ್ಟಿಗೆ ಹೊರೆ ಎದುರಿಗೆ ಬಂತು' ಅಂದ ಜುಂಜಪ್ಪ.

'ಆಗಬಾರದ ಈ ಅಪಶಕುನಗಳೆಲ್ಲ ಇಲ್ಲಿ ಆಗ್ಯಾವೆ. ಬ್ಯಾಡ ಕಣಣ್ಣ, ತಾಳೆದುರಗಿ ಕಾವಲಿಗೆ, ಈವತ್ತು ಬ್ಯಾಡಾ' ಅಂದರು.

'ಸೌದೆಹೊರೆ ಎದುರಿಗೆ ಬಂತು. 'ಅಪಶಕುನ ಅಲ್ಲವ?' ಅಂದರು

'ತಮ್ಮದೀರಾ ಸೌದೆ ಹೊರೆ ಇದಿರೀಗೆ ಬಂದರೆ ಇಲ್ಲಿ ಕೂತೋರಿಗೆಲ್ಲ ಕಾಫಿ ಕಾಯಿಸಿಕೊಡಲಿ ಅಂತ ಸಂತೋಷಕ್ಕೆ ಬಂದೈತೆ. ಸೆಗಣಿ ತಟ್ಟಿ ಇದಿರಿಗೆ ಬಂತು ಅಂದರೆ ಹೊಲದ ಬೆಳೆ ಬೆಳೆಯಾಕೆ ಸೆಗಣಿ ಆಗಬೇಕು. ಶುದ್ಧ ಮಾಡೋಕ್ಕೂ ಸೆಗಣಿ ಆಗಬೇಕು. ಎತ್ತಪ್ಪ, ಜುಂಜಪ್ಪ, ವರುಷಕ್ಕೆ ಒಂದಪ ದೀಪಾವಳಿ ಹಬ್ಬದಾಗೆ ಬಂದು ವಿಘ್ನೇಶ್ವರನ್ನ ಮಾಡಕ್ಕೆ ಸೆಗಣಿಬೇಕು."

'ಏಳು ಹೆಡೆಸರ್ಪ ಎದುರಿಗೆ ಬಂತು. ಇದು ಅಪಶಕುನ' ಅಂದರೆ ಜುಂಜಪ್ಪ

'ಏಳು ಹೆಡೆಸರ್ಪ ತಾಳೆದುರುಗಮ್ಮನ ಕಾವಲಿಗೆ ದಾರಿ ತೋರ್ಸಕ್ಕೆ' ಅಂದ.

'ದೇವಾನಾ ನೆನೆದರೆ ವಿಷವಿಲ್ಲ' ಈರಣ್ಣನ ನೆನದಾರೆ ಭಯವಿಲ್ಲೋ

'ಎಲ್ಲಾ ಇಲ್ಲೀಗೆ ಗೆದ್ದಿದೀನಮ್ಮಾ, ಇನ್ನು ತಾಳೆ ದುರ್ಗಿ ಕಾವಲಿಗೆ ಒಂದಕ್ಕೆ ಹೋಗಬೇಕು, ನೀನು ಆಶೀರ್ವಾದ ಕೊಟ್ಟೇತೀರಬೇಕು ಚಿನ್ನಮ್ಮಾ' ಅಂದ.

'ಜುಂಜಪ್ಪಾ ತಾಳೆದುರುಗಿ ಕಾವಲಿಗೆ ಹೋಗಬೇಕಾಗಿದ್ರೆ ಸಾಮಾನ್ಯಕ್ಕೆ ಆಗಲ್ಲ. ತಾಳೆದುರ್ಗಿ ಅಂದರೆ ದುರ್ಗಿ. ನೂರಾ ಒಂದು ಜನರ ಮುಟ್ಟಿನ ಸೀರೆ ಎಲ್ಲಾ ಅವಳ ಮೈಮೇಲೆ ಹಾಕ್ಕೊಂಡು ಇದ್ದಳು ಅಂದರೆ ಕಳುವಾರಹಳ್ಳಿ ಹೊಲಮನೆ ತುಳುಕೊಂಡು ಬರ್ತಾಳೆ. ನೀನು ಹೋದರೆ ನಿನ್ನ ಸಾಹಸ ಉಳಿಯಲ್ಲ. ನೀನು ಹೋಗೋದು ಬ್ಯಾಡ ಕಣೋ ಜುಂಜಪ್ಪಾ' ಅಂದಳು. ಯಾರೂ? ಚಿನ್ನಮ್ಮ. ಸ್ವಾಮಿಗೆ ಗೊತ್ತಿತ್ತು. ಮುಂದಲ ಯೋಗದಾಗೆ ಇವಳು ಹೇಳಿಬಿಟ್ಟಳು.

'ಬಿಡ್ರಿ' ಅಂದರು.

'ಯಾಕ್ರಣ್ಣಾ',

'ಚಿನ್ನಮ್ಮ ಹೇಳಿದ್ಲು ಹಿಂದೆ ಚೇಳೂರು ಕಾವಲಿಗೆ ಹೋಗಬೇಡ ಅಂತ. ಆದರೆ ನಾನು ಮುನಿಸು ಮಾಡಿಕೊಂಡು ಮೂರು ತಿಂಗಳು ಮಲಗಿದ್ದೆ. ಈಗ ಬ್ಯಾಡ ಅಂತಾಳೆ. ಇವಳು ತಾಯಿ ಅಲ್ಲ ನಾವು ಮಕ್ಕಳು ಅಲ್ಲ, ಇವತ್ತಿನ ದಿನದಾಗೆ ನಾವು ಹೋಗೋ ಕಾವಲಿಗೆಲ್ಲ ಅಪಶಕುನ ನುಡೀತಾಳೆ. ತಾಯಿ, ಅಲ್ಲಿ ಏನೇ ಆಗಲಿ, ಏನೇ ಬರಲಿ ಆ ತಾಳೆದುರ್ಗಿ ಕಾವಲಿಗೆ ನಾವು ಹೋಗುತೀವಿ. ಮುಂದಕ್ಕೆ ಇಕ್ಕಿದ ಹೆಜ್ಜೆ ಹಿಂದಕ್ಕೆ ಇಕ್ಕೋ ಮಗನಲ್ಲ ನಾನು. ಏನೇ ಆದರೂ ಎತ್ತಿದ ಬಾಣ ಹಿಂದಕ್ಕೆ ಇಕ್ಕಬಾರದು. ಹೋಗಿಬರ್ತೀನಿ ಚಿನ್ನಮ್ಮ. ನೀನು ಆಶೀರ್ವಾದ ಕೊಡು ಬಿಡು. ಮಾರಣ್ಣ ಮೈಲಣ್ಣ ಬಿಲ್ಲು ಬಾಣಾನೆಲ್ಲಾ ರೆಡಿಮಾಡಿಕೊಂಡು ಬನ್ನಿ. ತಾಳೆದುರುಗಿ ಕಾವಲಿಗೆ ನಾವು ಹೊರಟೋಗಿ ಬಿಡಬೇಕು. ತಾಳೆದುರುಗಿ ಕಾವಲಿಗೆ ಹೋಗಿಬರ್ತೀವಿ.

> ಸೊಲ್ಲುಸೊಲ್ಲಿಗೆ ಮುನ್ನ ಎಲ್ಲಾ ದೇವರ ನೆನೆದೇವು .....
> ಬಿಲ್ಲುಬಾಣಗಳ ನೆನೆದೇವು ....
> ಕಲಿವೀರಜುಂಜಪ್ಪ ನೆನೆದೇವು ....
> ಮೂಡಲ ಮೂಡಗಿರಿಯಪ್ಪನ ನೆನೆದೇವು ....
> ನಿದ್ದೇಲು ನಾವು ನೆನದೇವು ಸ್ವಾಮೀನ ನೆನದೇವು..

'ಮಾರಣ್ಣ, ಮೈಲಣ್ಣ ಎದ್ದರೇನೋ? ಮಾರಣ್ಣ, ಮೈಲಣ್ಣ ಎದ್ದರೇನೊ ತಮ್ಮದೀರ. ತಾಳೆದುರ್ಗಿ ಕಾವಲಿಗೆ ಹೋಗುಬೇಕು, ಏಳೇಳೂ ಹದಿನಾಲ್ಕು ಗೂಡಿನ ಆವಿನ ದನಗಳ ಕರಕೊಂಡು.

ನಾರಾಯಣನೆಂಬೋ ನಾಮಗೊಡಲಿ,
ಶಿವನೆಂಬೋ ಚಿಪ್ಪುಗೊಡಲಿ,
ಚಿನ್ನದ ಪಿಳ್ಳಗೋವಿ, ಪಟ್ಟೆದಟ್ಟಿ, ಕೋರೆರುಮಾಲು,
ಏಳುಗಣ್ಣಿನ ಬಿದಿರುಗೋಲು, ಸುರನಾರಿಬಿಲ್ಲು
ಬೆನ್ನಿಗೆ ಕಟ್ಟಿಕೊಂಡು, ನೆತ್ತರ ಬಾಣ ನೆತ್ತಿಮೇಲೆ ಕಟ್ಟವನೆ,
ಉಕ್ಕಿನಬಾಣ ಪಕ್ಕಗೆ ಕಟ್ಟವನೆ ಬಿಲ್ಲುಬಾಣ
ಅವನ ಎದೆಯಾಗೆ ಧರಿಸವ್ನೆ,
ನಾರಾಯಣನೆಂಬೋ ನಾಮಗೊಡಲಿ
ಶಿವನೆಂಬೋ ಚಿಪ್ಪುಗೊಡಲಿ ರನ್ನದ ಪಿಳ್ಳಗೋವಿ ಚಿನ್ನದ ಪಿಳ್ಳಗೋವಿ
ಎಲ್ಲಾ ಧರಿಸವ್ನೆ ದೊಡ್ಡೋನು ಜುಂಜಪ್ಪ

ಆವಾಗ ನೂರ ಒಂದು ಆಳು ಅಲ್ಲಿಗೆ ಹೋಗಿ ಏನು ಹೇಳಿದಾರೆ ಅಂದರೆ

'ತಾಳೆದುರುಗಮ್ಮ, ಮೂಡಲ ಸೀಮೆಯಾಗಳಿಂದ ಬಣ್ಣಕ್ಕೆ ಬೆಳ್ಳಿ ನಾಣ್ಯ, ಕೊಂಬು ನಕ್ಷತ್ರ ಕಾಲು ನೋಡಿದ್ರೆ ಕದಲಿಕಂಬ, ಒಂದೊಂದು ಭುಜ ಮೂರು ಮೂರು ಮೊಳ ಉದ್ದಕ್ಕಿದ್ದು, ತಿದ್ದಿದ ಗೊಂಬೆ ಇದ್ದಾಗೆ ಇರೋ ಹದಿನಾಲ್ಕು ಗೂಡಿನ ದನ ಬಂದು ಬಿಡ್ತು ಮೂಡಲ ಸೀಮೆಯಿಂದ. ನಮಗೆ ಭಯವಾಗಿಬಿಡ್ತಮ್ಮ. ಅದನ್ನು ಬಿಟ್ಟು ಬಂದು ಬಿಟ್ಟಿವಿ, ಕಾವಲನ್ನು ಬಿಟ್ಟು ಬಂದು ಬಿಟ್ಟಿವಿ' ಅಂದರು.

'ನೀವೆಲ್ಲಾ ಊಟಮಾಡ್ರಿ ನಾನು ಹೋಗಿ ಒಂದ್‌ಕೈ ನೋಡಿಕೊಂಡು ಬರ್ತೀನಿ ಅವನ್ನ. ಚಿತ್ರದೇವರು, ಕಾಟಮದೇವರು, ಓಬುಳನರಸಿಂಹ, ಹಿರಿಯೋನು ಹಿರಿ ಓಬಳದಯ್ಯಾ, ಚಕ್ಕೋನು ಕಲ್ಲೇಲಿಂಗ, ಮಲ್ಲೇಲಿಂಗ, ಅಂಗೈಲಿ ಆರುಕೋಟಿ ಲಿಂಗ, ಮುಂಗೈಲಿ ಮೂರುಕೋಟಿ ಲಿಂಗ ದೇವರುಗಳು ಯಾರೂ ನನ್ನ ಕಾವಲಿಗೆ ದನ ಬಿಟ್ಟಿರಲಿಲ್ಲ. ಅಂತಂತಹ ಪಾಳೇಗಾರರ ಸಮಸಮ ನಿಂತಾಗ ಯಾವ ಪಾಳೇಗಾರ್ರೂ ಬಿಟ್ಟಿರಲಿಲ್ಲ. ಇವತ್ತಿನ ದಿನದಾಗೆ ಅವನು ನನ್ನ ಕಾವಲಿಗೆ ದನ ಬಿಟ್ಟಿರಬೇಕಾದ್ರೆ ಅವನು ಎಷ್ಟು ಲಕ್ಷಕ್ಕೆ ಐದಾನೆ. ಎಷ್ಟು ಕೋಟಿಗೆ ಐದಾನೆ, ಹೊಟ್ಟಾಗೆ ಎಷ್ಟು ಮಡಗವ್ನೆ, ಅವನು ದಟ್ಟಿಯಾಗೆಷ್ಟು ಮಡಗವ್ನೆ, ಪಟ್ಟೆ ದಟ್ಟಿಯಾಗೆ. ತಡೀರಿ ನಾನು ನೋಡಿಕೊಂಡು ಬರ್ತೀನಿ, ನೀವು ಊಟಾ ಮಾಡಿರಿ'.

ಅಂತ ಹೇಳಿ ಮನಗಿದ್ದವಳು ಮ್ಯಾಕೆ ಎದ್ದೇಳಬೇಕಾದರೆ ಇಡೀ ಜಗತ್ತಿಗೇ ಕತ್ತಲೆ ಕವೀತಂತೆ. ಮೂರು ಲೋಕನೂ ಕತ್ತಲೆ ಕವೀತಂತೆ. ಮಂಜುಗವಿದಂತೆ ಆಗುತ್ತಿದ್ದಂತೆ

ಆಗ ಎದ್ದು ಅಡಿಕೆಚೀಲ ಕೈಯಲ್ಲಿ ಹಿಡಕೊಂಡು ಹೊಸಗಾವಲು ಹಳೆಗಾವಲು, ಹೊಸಗಾವಲು ಹಳೆಗಾವಲು, ಹೊಸಗಾವಲು ಹಳೆಗಾವಲು ಅಂತ ಎದ್ದು ಊರಗಲ ಹಿಡಿಂಬಿ ರಾಕ್ಷಸಿಹಾಂಗೆ ಅವಳು ನಡಕೊಂಡು ಬರ್‍ತಾ ಇರಬೇಕಾದ್ರೆ ಎಲೆ ಅಡಿಕೆ ಹಾಕ್ಕೊಂಡುಬರ್‍ತಾ ಇದ್ಲಲ್ಲಾ, ಅವಳ ಹಲ್ಲಿಗೆ ನಡುವೆ ಒಂದು ಅಡಿಕೆ ನುಚ್ಚು ಸಿಕ್ಕಿಹಾಕಿಕೊಂಡು ಬಿಡ್ತು. ಅದನ್ನು ತೆಗೆದುಕೊಳ್ಳೋಣ ಅಂದರೆ ಎದುರಿಗೆ ಒಂದು ತಾಳೆಮರ, ತಾಳೆಮರ ಅಂದರೆ ಎತ್ತರಕ್ಕೆ ತೆಂಗಿನಮರ ಇದ್ದಾಂಗೆ ಇರ್‍ತದೆ. ಆದರೆ ಕೇದಿಗೆ ತಲೆ ಇದ್ದಂಗಿರುತ್ತೆ. ತಾಳೆಮರ, ಆ ತಾಳೆಮರನ್ನ ಝಾಡಿಸಿ ಎಳೆದು ಬಿಟ್ಟಳಂತೆ ಎಡಗೈಯಾಗೆ. ಆ ತಾಳೆಮರ ಅಲ್ಲಾಡಿಸಿಕೊಂಡು ಮರಕ್ಕೆ ಮರಾನೇ ಅಲ್ಲಾಡಿಸಿಕೊಂಡು ಮರದ ನೇರ ನಿಂತು ಅಡಿಕೆ ನುಚ್ಚು ತೆಕ್ಕೊಂಡು ಬರುವಾಗ್ಗೆ, ಒಂದು ದೊಡ್ಡದೊಂದು ಆಲದ ಮರ ಸಿಕ್ಕಿಬಿಡ್ತಂತೆ. 'ಕಾವಲಿಗೆ ಬಿಟ್ಟವ್ರೋ ಇಲ್ಲವ್ರೋ ನೋಡನ' ಅಂತ ಆಲದಮರ ಹತ್ತಿ ಅವಳು ಅವುಚಿ ನಿಂತಕೂಡ್ಲೆ ಅಷ್ಟು ದಪ್ಪ ಆಲದ ಮರ ಮುರುಕೊಂಡು ಬಿತ್ತು. ಆ ಮರವನ್ನು ನೋಡಿ ನಾನು ಎಳೆದಕೂಡಲೇ ಈ ತಾಳೆಮರ ಮುರುದು ಬಿತ್ತು. ಈ ಆಲದ ಮರಾನೂ ಮುರ್ದಿದೀನಿ, ಈ ತಾಳೇ ಮರಾನೂ ಮುರ್ದಿದೀನಿ. ಇದೇ ನನಗೆ ಸಾಕ್ಷಿ. ಇನ್ನೂ ಈ ಕಂಬೇರ ಚಿನ್ನಿ ಮಗ ದೊಡ್ಡೋನು ಜುಂಜಪ್ಪ ಬಂದವ್ನೆ ಅಂತ ನನ್ನ ನೂರಾ ಒಂದು ಆಳು ಬಂದು ಹೇಳವ್ರೆ. ಅವನನ್ನೂ ಹೀಗೆ ಒಂದು ಕೈ ನೋಡ್ಕತೀನಿ. ಒಂದೊಂದು ಮೊರದಗಲ ಆದಿಶಕ್ತಿ ಮಹಾಮಾಯೆ ಜಗದಶಕ್ತಿ ಮಹಾಮಾತೆ ಗೌರಸಂದ್ರದ ಮಾರಕ್ಕ ನೂರಾಒಂದು ರೂಪನೂನು ಆಕಿ ತಾಳಿಕೊಂಡೇ ಬಂದುಬಿಟ್ಟಳು. ಈ ಜುಂಜಪ್ಪನ ದನ ಹದಿನಾಲ್ಕು ಗೂಡಿನ ದನ ಪಹರೆ ಬೇಲಿ ಬಿಟ್ಟು ಆಚೆಗೆ ನೆಗೆದು ಬಿಟ್ಟವು. ಆ ಅಬ್ಬರಕ್ಕೆ ತಡೆಯಲಾರದೆ. ಹದಿನಾಲ್ಕು ಗೂಡಿನದನ ಆಚೆಗೆ ನೆಗೆದುಬಿಟ್ಟವು. ಇವನಿಗಾಗಲೇ ಅನುಮಾನ ಶುರುವಾಗಿಬಿಡ್ತು. 'ಏನುಮಾಡಾದು?' ನೂರಾ ಒಂದು ಗಾವುದ ಹೋಗ್ಯಾನಂತೆ. ಅವಳು ಮುನ್ನೂರು ಗಾವುದ ಆಕೆ ಅವನ್ನ ಮೈಮ್ಯಾಗೆ ಹಾಕ್ಕೊಂಡು ಊರಬಸವಿ ಹೋದಂಗೆ ಹೋಗಿಬಿಟ್ಟಳು.

ಈ ಸೂತಕ ಹರಿತ್ಯೆತೆ, ಶಾಸ್ತ್ರ ಹರಿದ್ಯೆತೆ
ನಾ ಒಂಭತ್ತು ತಿಂಗಳ ಗರ್ಭದಲ್ಲಿ ಜನಿಸಿದವನಲ್ಲ.
ನಾನು ವರಪುತ್ರ. ಈಶ್ವರನ ಮಗ ವೀರಭದ್ರ.
ಈ ಮೂರು ಲೋಕಕ್ಕೆ ಗಂಡ ಅನ್ನಿಸಿಕೊಂಡಿದ್ದು
ಈ ಹೆಂಗಸಿಗೆ ನಾನು ಕಮ್ಮಿ ಆಗಿಬಿಟ್ಟನಲ್ಲ ಅಂತ ಓಡ್ದ

ಓಡೇಬುಟ್ಟ. ಇವನು ಓಡಿದ ಹಾಗೂ ಅವಳೂ ಇವನ್ನ ಬೆನ್ನಟ್ಟಿ ಬಂದುಬಿಟ್ಟಳು. ಮೂರು ಮೂರು ಮೈಲಿ ಫಾಸಲೆ ಒಳಗೆ ಅವರು ದೂರದಾಗಿಲ್ಲ. ದೇವಾನುದೇವತೆಗಳನೆಲ್ಲ ನೆನಪು ಮಾಡಿದ್ನಂತೆ. ಕಲ್ಲೇಲಿಂಗ, ಮಲ್ಲೇಲಿಂಗ, ಮೈಲಾರಲಿಂಗ, ಅಂಗೈಲಿ ಆರುಕೋಟಿಲಿಂಗ, ಮುಂಗೈಲಿ ಮೂರುಕೋಟಿಲಿಂಗ, ಶತಕೋಟಿ ಸಾವಿರಲಿಂಗ, ಶಿವಚಿತ್ರಲಿಂಗ, ಕಾಟಮಲಿಂಗ, ಓಬಳನರಸಿಂಹ, ಹಿರಿಯೋನು ಹಿರಿ

ಓಬಳದಯ್ಯ, ಗೌಡಸಂದ್ರದ ಮಾರಮ್ಮ, ಸಾಗರದ ಮುಂಬಲಮಾರಿ, ನಿಡಿಗಲ್ ಬಸವಣ್ಣ ದೇವಾನುದೇವತೇರನೆಲ್ಲಾ ಕರೆದ.

'ಕರಿಯಮ್ಮ, ಬೇವಿನಹಳ್ಳಿ ಕರಿಯಮ್ಮ, ಗುಂಟಲೂರು ಕರಿಯಮ್ಮ, ಎಂಟು
ಜಾಜೂರು ಕರಿಯಮ್ಮ, ಸಿದ್ದರ ಬೆಟ್ಟದ ದೊಡ್ಡಮ್ಮ ಎಲ್ಲಾ ಅಮ್ಮನೋರು
ನನ್ನ ಕೈ ಬಿಟ್ರೇನಮ್ಮ ಇವತ್ತು.'

ಅಂತ ಶತಕೋಟಿ ಸಾವಿರ ಲಿಂಗದ ದೇವರುಗಳನ್ನು ಸ್ತೋತ್ರಣೆ ಮಾಡಿಬಿಟ್ಟ ಇವತ್ತು. ಒಂದೇ ಒಂದು ದೈವವೂ ಅಲ್ಲಿಗೆ ಬರಲಿಲ್ಲವಂತೆ. ಆ ಮಾರಿ ಯಮನ ಮಾರಿ. ಇದರ ಎದುರಿಗೆ ಯಾವ ದೇವರು ಬತ್ತದೆ?

'ಮಾರಣ್ಣಾ ಮೈಲಣ್ಣ' ಅಂದ.

'ಯಾತಕ್ಕಣ್ಣ?' ಅಂದರು,

'ಶತಕೋಟಿ ಸಾವಿರಲಿಂಗದ ದೇವರನ್ನೆಲ್ಲರನ್ನೂ ನಾನು ಸ್ತೋತ್ರಣೆ ಮಾಡಿದೀನಿ. ಒಂದು ದೈವವೂ ನನ್ನ ಕಣ್ಣಿಗೆ ಕಾಣಲಿಲ್ಲ ಇವತ್ತು. ಎಲ್ಲಾ ಕರೆ ಕಲ್ಲಾಗಿ ಬಿಟ್ಟವೋ ತಮ್ಮದೀರಾ'

'ಯಣ್ಣಾ' ಅಂದರು.

'ಯಾಕ್ರಪ್ಪಾ?'

'ಪುರಲಹಳ್ಳಿ ಭೂತಪ್ಪನ ನೆನಸಿದೆಯೇನಣ್ಣ?'

'ಅವನ್ನೊಂದು ಮರ್ತು ಬಿಟ್ಟಿದ್ದೆ ಕಣ್ರಲೇ'

'ಪುರಲಹಳ್ಳಿ ಭೂತ ಮೂರುನಾಮದವನೇ,
ಮುತ್ತಿನ ಭಾವನಾಶಿಯೋನೇ,
ನೀನು ನನ್ನ ಕೈ ಬಿಟ್ಟಿಯೇನೋ ಇವತ್ತು' ಅಂದ.

'ನಿನ್ನ ಮನವೇ ನೆನದೇನೋ,
ಮಂದೀಯ ನೆನದೇನೋ,
ಮುಂದೇನೇ ಗದ್ದಲವ,
ಹುಲಿಯೈತೋ ಹುಲಿಗುಂಟೆ
ಭೂತನ ಬಲವೇ ನನಗೈತೋ,
ಪುರಲಹಳ್ಳಿ ಭೂತ' ಅಂದ.

ಕತ್ತಲು ಕರಿಮಲೆಯ ಕರೆಬಂಡೆ ಮೇಲೆ ನಿಂತ 'ಯಾರು ಮೂರು ನಾಮದೋನು ಗೋವಿಂದಾ' ಅಂದನಂತೆ. ಅಲ್ಲಿಂದ ಆಕಾಶಮಾರ್ಗಕ್ಕೆ ಕೇಳಿಸಿ ಅಲ್ಲಿಂದ ಹಿಂದಕ್ಕೆ ಬಂತಂತೆ ಆ ಗೋವಿಂದನ ಸ್ಮರಣೆ. ಈಗ ಒಂದು ಭಾವನೆ ಕೂಡಲಿ, ಹೂಂಕಾರ ಮಾಡಲಿ, ಕಥೆ ಪ್ರಾರಂಭಮಾಡಲಿ, ಒಂದು ಹರಿಕಥೆ ಮಾಡಲಿ, ಒಂದು ಗೋವಿಂದನ್ನ

ಇಟ್ಟುಕೊಂಡರೆ, ಬಿಟ್ಟೋ ಇಟ್ನೋ ಇಕ್ಕೋದೇ ಇಲ್ಲ. ಅದು ಗೋವಿಂದ ಅಂದಿದ್ದು ಶಿವನಿಗೆ ಮುಟ್ಟಿ ಹಿಂದ್ಕೆ ಬಂತಂತೆ. ಆ ಫಳಿಗೆಯಾಗೇನೇ ಆ ಕರೆಬಂಡೆಮೇಲೆ ನಿಂತುಕೊಂಡು 'ಗೋವಿಂದ' ಅಂದದ್ದು ಇವರು ಮೂವರಿಗೂ ಕೇಳಿಸ್ತು.

"ಮುದ್ದು ಮೂಡಲಗಿರಿ ಮೂವತ್ತು ಗಾವುದದಯ್ಯ,
ಮುತ್ತಿನ ಭಾವನಾಶಿಯವ್ನೆ, ಪುರಲಹಳ್ಳಿ ಭೂತ ನೀನು ಬರಬೇಕು ಕಣಪ್ಪಾ,
ಇಲ್ಲಿಗೆ ಈ ಪವಾಡ ನೀನು ಗೆದೀಬೇಕು" ಅಂದ.

ಪುರಲಹಳ್ಳಿ ಭೂತಪ್ಪ ಹೇಳುತಾನೆ "ಈ ಕಾವಲಿಗೆ ಬರುವ ದಿನ ಸಾಣಿಕೆರೆ ಪುಟ್ಟಣ್ಣನ ಕಾವಲಿಗೆ ಹೋಗೋವಾಗ ಈ ಕಾವಲಿಗೆ ಬರೋದಿನ ಶತಕೋಟಿ ಸಾವಿರಲಿಂಗದ ದೇವರಿಗೆಲ್ಲಾ ಒಂದೊಂದು ಎಡೆಕೊಟ್ಟದ್ದೆಲ್ಲೋ ಜುಂಜಪ್ಪ. ಏಳೂರಲ್ಲಿ ಆಗಲಿ ಸೀಗೆ ಎಲೆ ಹಸಿರು ಎಲ್ಲ ಸೇರಿಸಿ ನಾನು ನೂರಾ ಒಂದು ಎಲೆ ಕಟ್ಟಿದ್ದೇನೆ. ನಾನು ಭಂಟ, ಚಿತ್ರದೇವರ ಬೆನ್ನ ಹಿಂದಿರೋ ಬ್ಯಾಟೆ ಗಿಡದಲ್ಲಿ ನಾನು ಇದ್ದಾಗೆ ಶತಕೋಟಿ ಸಾವಿರ ಲಿಂಗದ ದೇವರುಗಳಿಗೆಲ್ಲಾ, ಉಪ್ಪಿನಕಾಯಿ ತಿನ್ನೋ ದೇವರುಗಳಿಗೆಲ್ಲಾ ಒಂದೊಂದು ಎಡೆ ಕೊಟ್ಟಿದ್ದೆ. ಅವತ್ತು ನನಗೊಂದು ಎಡೆಕೊಟ್ಟಿರಲಿಲ್ಲ. ನನ್ನ ಭವನಾಶಿ ತುಂಬಿರಲಿಲ್ಲ. ಮೂರು ಮೊಳ ಕುತ್ತರಿ ಬೀಳುವಹಾಗೆ ಮಣ್ಣು ತಿಂದಿದ್ನಲ್ಲೋ ಜುಂಜಪ್ಪ. ಅವತ್ತು ಹಸಿವು ಹತ್ತಿತ್ತು. ಅವತ್ತು ಉಂಡದೇವರೆಲ್ಲಾ ಇವತ್ತು ಹೊಡೀಲಿ ನಿನ್ನ ಕಷ್ಟನೆಲ್ಲಾ. ಈ ತಾಳೆದುರ್ಗಿನ ಎದುರಿಸೋ ಜಯಿಸೋ ಅಂತ ಧೀರರು. ನಿಮ್ಮ ಮನೆದೇವರು ಚಿತ್ತಯ್ಯ, ಕಾಟಯ್ಯ, ಓಬಳ ನಾರಸಿಂಹ, ಕಾಟಮಲಿಂಗ ಎಲ್ಲಾರು ಹೋಡೀಲೋ ನಿನ್ನ ಕಷ್ಟಾನ. ಮೂಡೆ ಗಾತ್ರದ ಹೊಟ್ಟೆಯೋನು, ಮೂಗು ಮುಖ ಸಿಂಬಳದೋನು. ನನ್ನ ಕೈನಾಗೆ ಏನಾಗುತ್ತೆ. ನಿನ್ನ ದೇವ್ರು ದಿಂಡ್ರು ಯಾವುದು ಇದ್ರೂನು ಹೊಡೆಸೋ ಜುಂಜಪ್ಪ ಈವಾಗ."

"ಪುರಲಹಳ್ಳಿ ಭೂತ ನಾಲಿಗೆ ತಪ್ಪು ನಿನ್ನ ಮರೆತಿದ್ದೂ ತಪ್ಪು,
ಕೊಡೋದೂ ಕೊಡದಿದ್ದದ್ದು ತಪ್ಪು,
ನಿನ್ನ ಭವನಾಸಿನ ತುಂಬದೇ ಇದ್ದಿದ್ದೂ ತಪ್ಪು,
ಈ ತಪ್ಪು ಅಪರಾಧಗಳನ್ನೆಲ್ಲಾ ನೀನು ಮನ್ನಿಸಿಕೊಂಡು
ಈ ಬಂಧನ ಈ ಪಿಶಾಚೀನ ನೀನು ಹೊಡೀಬೇಕು ಕಣೋ
ಪುರಲಹಳ್ಳಿ ಭೂತ ನಿನಗೆ ಮೊದಲ ಮಂಗಾಳಾರತಿ ಮಾಡುಸ್ತೀನಿ.
ಈ ಪಿಶಾಚಿನ ನೀನು ಹೋಡೀಬೇಕೀಗ."

"ಮಾರಣ್ಣ ಮೈಲಣ್ಣ ದೊಡ್ಡೋನು ಜುಂಜಪ್ಪ, ನಾನು ಭೂತನ ಗುಂಡಾಗಲಿ ಗಾಳಿ ತುಳೀತೀನಿ. ಅಟ್ಟುಬಟ್ಟೆ ಉಟ್ಟ ಬಟ್ಟೆಯಾಗೆ ಮುಟ್ಟಿಸಿ ಮುಟ್ಟಿಸಿ ಹೊಡೆಯೋ ಪುರಲಹಳ್ಳಿ ಭೂತಗೆ ಈಗ ಸೂತಕ ಬಂದಿದೆಯೋ ಜುಂಜಪ್ಪ. ಸಾವಿರಾರು ಗಾಳಿ ಹೊಡೆದು ಸಾವಿರಾರು ಗಾಳಿ ಕಂಡು ಮನಗಿರೋ ಅಂಥ ಈ ಪುರಲಹಳ್ಳಿ ಭೂತಕ್ಕೆ ಗಾಳಿ ಪೀಡೆ ಪಿಚಾಚಿ ಏನು ಹೆಚ್ಚು."

ಜುಂಜಪ್ಪ ಧೈರ್ಯವಾಗಿರಿ ನೀವು. ನೀವು ಒಂದು ಜಾಗದಾಗೆ ಬಂದವರಲ್ಲ.

ನೀವು ಮೂವರೂ ತ್ರಿಮೂರ್ತಿಗಳು, ಇವತ್ತಿನ ದಿನದಾಗೆ. ಒಂಭತ್ತು ದಿನದ ವರಪುತ್ರರು ನೀವು. ಆನಂದವಾಗಿ ಇರ್‍ರಿ. ಆದರೆ, ತಪ್ಪಿಗೆ ಎರಡು ಊಟ ನೀನು ಕೊಟ್ಟೇ ತೀರಬೇಕು. ಹೊಡೆಯೋದು ನಾನು ಗ್ಯಾರಂಟಿ ಜುಂಜಪ್ಪ".

"ತಪ್ಪಿಗೆ ಎರಡೂಟ ಕೊಡತೀನೋ ಮರಲಹಳ್ಳಿ ಭೂತ ನಿನಗೆ"

ಅಂತ ಜುಂಜಪ್ಪ, ಮಾರಣ್ಣ, ಮೈಲಣ್ಣ ಮೂವರು ಈವಾಗ ಒಪ್ಪಿಕೊಂಡುಬಿಟ್ಟರು. ಆಗ ನೀವು ಮೂವರು ರೆಡಿಯಾಗಿರಿ ಅಂತ ಹೇಳಿ ಬಲಮುರಿ ದೊಣ್ಣೆ ಎಡಗೈಯಾಗೆ ಹಿಡಕೊಂಡು, ಬಲಗೈಯಾಗೆ ಕಡಸೂರಿ ಹಿಡಕೊಂಡು, ಅವನ ಆಯುಧ ಮುಸ್ತಾಫಗಳು ಚಾಕುಗಳು ಆಯುಧಗಳು ಎಲ್ಲಾ ಧರಿಸಿಕೊಂಡುಬಿಟ್ಟ.

ಅವನು ರುದ್ರನ ಅವತಾರ ತಾಳಿಕೊಂಡು ಮುಂದಕ್ಕೆ ಬರ್‍ತಾ ಇದ್ದಾನೆ. ಪಡುಗಡೆ ಮುಖದಾಗೆ ಮಾರಿ ಹೇಗೆ ಇದಾಳೆ? ತಲೆ ಕೆದರಿಕೊಂಡು ಮಾರಿ ತಾಳೆದುರ್ಗಿ, ನೂರಾಒಂದು ರೂಪ, ನೂರಾಒಂದು ಅವತಾರಾನೇ ತಾಳಿಬುಟ್ಟವಳೆ, ಅವಳು ಆದಿಶಕ್ತಿ ಆಗಿ ಬುಟ್ಟವಳೆ. ಆ ಘಳಿಗೆಯಾಗೇನೇ ಇವನು ಬಂದು ಅವಳ ಎದುರಿಗೆ ನಿಂತುಕೊಂಡ,

'ಯಾರೋ ನೀನು?' ಅಂದಳು.
'ನಾನು ಒಬ್ಬ ಗುಂಡ್ಯಾಗಳ ಗಾಳಿ
ಭೂಲೋಕದ ಗಾಳಿಬೀಸಿ ಹೊಡೀತೀನಿ,
ಆಕಾಶದ ಗಾಳಿ ಅಟ್ಟಿ ಹೊಡೀತೀನಿ,
ಉಟ್ಟಬಟ್ಟೆ ಒಲೆಚೆನ್ನಾಗಿರೊವುನ್ನೆಲ್ಲ ಮುಟ್ಟಿಸಿ ಮುಟ್ಟಿಸಿ
ಹೊಡೆಯೋ ಅಂತ ಮರಲಹಳ್ಳಿ ಭೂತ
ನಾನು ನಿನ್ನ ಮಿಂಡ ಅಲ್ಲೇನಲೇ ತಾಳೆದುರುಗಿ' ಅಂದ.

'ಎಲಾ ನನ್ನ ಮಗನೇ, ನಿನ್ನ ಹೊಟ್ಟೆ ನೋಡೀರೆ ಐವತ್ತು ಸೇರಿನ ಮೂಟೆ ಅಂದರೆ ಕಾಳಿನ ಮೂಟೇನೆ ಕಾಣುತ್ತೆ. ಗೇಳುದ್ದ ಸಿಂಬಳ ಗೊಣ್ಣೆ ಮೂಗಿನಾಗೆ ತೊಟ್ಟಿಕ್ಕತ್ತವೆ. ನನ್ನ ಎಡಗೈಯಾಗಿನ ಕಿರುಬೆರುಳಿನ ಚಳ್ಳಗುರು ತಗುಲಿದರೆ ನಿನ್ನ ಹೊಟ್ಟೆ ಪಟ್ಟನೆ ಒಡೆದು ಹೋಗುತ್ತೈತೆ. ತಡೀಲೇ ಗೊಣ್ಣೆ ಕುರಿಮರಿ' ಅಂದಳಂತೆ. ಆ ಘಳಿಗೆಯಾಗೆ ಹೇಳಿದನಂತೆ,

'ಗೌಡಸಂದ್ರದ ಮಾರಕ್ಕನ ಮಾಡಿ
ಬೇವಿನಹಳ್ಳಿ ಕರಿಯಮ್ಮನ ಮಾಡಿ
ಇಪ್ಪತ್ತೈದು ಮರಿಕಡಿದಿದ್ರು ಮಾದೇನಹಳ್ಳೀಲಿ
ಇಪ್ಪತ್ತೈದು ಮರಿ ತುಂಡನ್ನು ಕಿತ್ತೆಸೆದು ಕಂತೆಕಟ್ಟಿ
ಎಡೆಹಾಕಿ ನನಗೆ ಇಡಿಸಿದ್ದರು ಗೊತ್ತೇನು.
ಇಪ್ಪತ್ತೈದು ಮರಿ ಹಿಟ್ಟೇತೋಟು ತಿಂದಿದೀನಿ.
ಇಪ್ಪತ್ತೈದು ದೊನ್ನೆ ಮಾಂಸದ ಸಾರು ತಂದು ನನಗೆ ಎಡೆಗೆ ಇಕ್ಕಿದ್ದರು.

ಅದನ್ನು ತಿಂದು ಬಿಟ್ಟಿದ್ನೀ, ಬರಬೇಕಾಗಿದ್ರೆ ಆ ಕೊನೆಯಾಗಳೂ ಬಸವನ ಬಾಗಿಲಿಗೆ ಒಂದು ಮಡುವಿನಾಗಿನ ನೀರು ಪೂರ್ತಿಕುಡಿದು ಬಿಟ್ಟಿದೀನಿ. ರಾತ್ರಿ ಎಲ್ಲ ನಿದ್ದೆಕೆಟ್ಟುಗೊಂಡು ಬರುವಾಗ್ಗೆ ಮೂಡಗದ್ದೆಯಾಗೆ ಹೀರೆತುಂಡು ಕಾಯಿತುಂಡು ಎಲ್ಲಾ ತಿಂದುಕೊಂಡು ಈಗ ಗೇಣುದ್ದ ಸಿಂಬಳ. ಕುರಿಬಾಡು ತಿಂದು ಬರೋಹೊತ್ತಿಗೆ ಸಿಂಬಳ ಸೋರಲೂಬಹುದು. ನಿನ್ನ ಎಡಗೈ ಹೆಬ್ಬೆರಳಿನಾಗೆ ಇರೋ ಚೆಳ್ಳುಗುರು ತಗುಲಿ ಹೊಟ್ಟೆಯ ಈ ಮ್ಯಾಗ್ಲ ಚರ್ಮ ಹರಿಕೊಳ್ಳಲೂಬಹುದು. ಒಳಗೆ ಏಳು ಏಳು ಹದಿನಾಲ್ಕು ಪದರ ಅವೆ ತಾಳಿದುರ್ಗಿ' ಅಂದ.

ಆಮೇಲೆ 'ನನ್ನ ಒಂದು ಮಣಿ ಉದುರಿಸು, ಈ ಮಣಿ ಹಾಕತೀನಿ, ಈ ಒಂದು ಮಣಿಯಾಗೆ ತೋರುಸ್ತೀನಿ ನನ್ನಸಾಹಸ' ಅಂದನಂತೆ. ಹಿಂಗಿಂಗೆ ಅಂದೆಲ್ಲ ಒಂದು ಬಟ್ಟೆ ಹಾಸಿ ನಾಲ್ಕು ಮೂಲೇಲೂ ನಾಲ್ಕು ಕಾಯಿ ತುಂಡು ತೆಗೆದು ಇಕ್ಕಿ, ಬಲಮುರಿ ಕಡಸೂರಿ ಹಿಡಿದು ತಾಳೆದುರ್ಗಿ ಅಂದ. ಈ ಹೊಟ್ಟೆ ಒಳಗೆ ನೋಡ್ತಾ ಇರು ನೀನು ಒಂಭತ್ತು ಸುತ್ತು ಸುತ್ತುತೀ, ನೀನು ನೋಡೋ ಹೊತ್ತಿಗೇನೇ ನೋಡ್ತಾ ಇರು. ಎಲ್ಲೀಗೆ ಬೆಳೀತಾನೆ, ಎಲ್ಲಿಗೆ ನಿಲ್ಲುತಾನೆ ಮಾಡ್ತಾನೆ ಅನ್ನೋದು ನೀನು ನೋಡ್ತಾ ಇರು. ನಾನು ಏಳುಸುತ್ತು ಬರ್ತಿನೋ, ನೀನು ಅಷ್ಟು ಸುತ್ತು ಬರಬೇಕು. ಒಂದು ಸುತ್ತು ಕಮ್ಮಿ ಆಯ್ತು ಅಂದರೆ ನಿನಗೆ ತಗೊಳ್ಳಲೇ ಅಂದರೆ ಅದು ಹೆಚ್ಚು ಕಡಿಮೆ ಆಗೇ ಆಗುತ್ತೆ. ಈ ಭೂತಪ್ಪ ಕರೆ ಗುಂಡಕಲ್ಲು ಆಗಿ ಒಂಭತ್ತು ಸುತ್ತು ಸುತ್ತಿಕೊಂಡು ಇವಳು ಮೂರು ಸುತ್ತು ಬರೋಳಂತೆ ನನ್ನಂತೆ ನೀನು ಯಾಕೆ ಒಂಭತ್ತು ಸುತ್ತು ಬರೋಕೆ ಆಗೋದಿಲ್ಲ, ಅಂತ ಅನ್ನೋದು. ಆ ದೊಣ್ಣೆಯಿಂದ ಒಂದು ಬಿಡೋದು ಭೋಪರಾಕು ಅನ್ನೋದು. ಏನು ಮಾಡಿದ್ರೂನೂ ಇವಳು ಒಂಭತ್ತು ಸುತ್ತು ಬರೋಕೆ ಆಗಲಿಲ್ಲ.

'ಸ್ವಾಮಿ ನನ್ನಿಂದ ಸಾಧ್ಯವಿಲ್ಲ ಪುರಲಹಳ್ಳಿ ಭೂತ.'

'ನಿನ್ನ ತಾಳೆದುರ್ಗಿ ಅಂತ ಕರೀತಿದ್ರಲ್ಲ. ನಿನ್ನ ಕೀರ್ತಿ ಎಲ್ಲಿಂದ ಎಲ್ಲೀತನಕ ಐತೆ ಬೆಳೀ ನೋಡಾನ. ನಿನ್ನ ಸಾಹಸ ಎಲ್ಲೀತನಕ ಬೆಳೀತದೆ ನೋಡೋಣ.'

ಆಕಾಶ ಮುಗಿಲುಗೂ ಒದ್ದುಕೊಂಡು ನಿಂತು ಬಿಟ್ಟಳಂತೆ ತಾಳೆದುರ್ಗಿ.

'ಸಾಕು ತಗ್ಗಿಸು' ಅಂದನಂತೆ ಆಗ ನಮ್ಮಂತೆ ನರಮನಷ್ಯರಂತೆ ನಿಂತುಕೊಂಡಾಗ,

"ನೀನು ಎಲ್ಲಿ ಉಳೀತೀಯ ನೋಡೋಣ ಪುರಲಹಳ್ಳಿ ಭೂತ ಅಂದಳಂತೆ. ನಾನು ಬೆಳೆಯೋದು ಹೀಗಲ್ಲ, ಕೈಯಿಂದ ಮೂರುಗುದ್ದಿ ನಾನು ಚಿಮ್ಮಿ ಬೆಳೀಬೇಕು. ಆಗ ನಾನು ಬೆಳೆಯೋದು ನೋಡು ಅಂದ" ಹಂಗಿದ್ದಾಗ "ನಾನು ಮೂರುಗುದ್ದು ಗುದ್ದೋನೇ" ಅಂದ.

"ಗುದ್ದು" ಅಂದಳಂತೆ ದಮ್ಮು ಕಟ್ಟಿ ಗುದ್ದೆಬಿಟ್ಟ ಅವಳಿಗೇ.

ದಮ್ಮುಕಟ್ಟಿ ಉಸಿರುಕೆಟ್ಟು ನಿಂತುಬಿಟ್ಟಳಂತೆ. ಅವಳು ಅವನಿಗೆ ಒಂದು ಗುದ್ದಿದಳು. ಒಂದು ಕೊರೆಕಡೆದ ಹಾಗೆ ಆಗಲಿಲ್ಲ,

'ಹೊಟ್ಟೆಮೇಲೆ ನಿನ್ನ ಸೇಡು ತೀರಿಸಿಕೊಂಡೆಯಾ' ಅಂದನಂತೆ.

'ತೀರಿಸಿಕೊಂಡೆ' ಅಂದಳಂತೆ,

'ನಿನ್ನ ಸೇಡು ಮುಗಿಸಿಕೊಂಡೆಯೇನೆ' ಅಂದನಂತೆ

'ಹೂಂ' ಅಂದಳಂತೆ

ಇವನು ದಮ್ಮು ಕಟ್ಟಿ ಉಸಿರು ಕಟ್ಟಿದ. ಇವನಿಗೆ ಏಟು ಬೀಳಲಿಲ್ಲ. ಅವಳು ಏನು ದಮ್ಮು ಕಟ್ಟಿದಳು ಎರಡು ಗುದ್ದು ಗುದ್ದಿಸಿಕೊಂಡಳು. ನಿಧಾನಕ್ಕೆ ಗುದ್ದಿದ. ಮೂರನೇ ಸಾರಿ ಭುಜದ ಮೇಲೆ ಜಗ್ಗಿ ಸುಳಿದು ಬಿಟ್ಟಳಂತೆ ತಾಳೆದುರ್ಗಿ. ನೆಲದೊಳಕ್ಕೆ ತುಳಿದುಬಿಟ್ಟ, ಪಾತಾಳಕ್ಕೆ ತುಳಿದುಬಿಟ್ಟ. ಅವಳದ್ದು ಎರಡು ಜಡೆ ಇದ್ದುವಲ್ಲ ಈ ಎರಡು ಜಡೆಗಳನ್ನು ಬಾಗಿ ತುಳಿದುಕೊಂಡು ಹಿಡಿಕೊಂಡ. 'ಪಟ್ಟೆದಟ್ಟಯೋನೇ ದೊಡ್ಡೋನೆ ಜುಂಜಪ್ಪ ನಂದೆಲ್ಲಾ ಮುಗಿದೈತೆ. ಇಂಥಾ ನೂರಾರು ಶತಕೋಟಿ ಗಾಳಿಗಳ ಹೊಡೆದಿದ್ದೆ. ಆದರೆ ಇವತ್ತಿನ ದಿನದಾಗೆ ಈ ಶಕ್ತಿ ಸಾಮರ್ಥ್ಯವನ್ನೆಲ್ಲಾ ಕದ್ದಿರೋ ನಿನ್ನ ಬಿಡಲ್ಲ ನಿನ್ನ ಬಿಡಲ್ಲಾ" ಅಂತ ಜುಂಜಪ್ಪನಿಗೆ ಕರೆದಳಂತೆ. ನಡುಗಿ ಬಿಡೋದಂತೆ ಅವಳ ಶರೀರೆಲ್ಲಾ.

"ಪುರಲಹಳ್ಳಿ ಭೂತ ಧೈರ್ಯವಾಗಿರು. ನಾನೊಂದು ಉಪಾಯ ಹೇಳಿಕೊಡ್ತೀನಿ, ಇಂತಾ ಸಾವಿರ ಗಾಳಿ ಹೊಡೆದಿದ್ದೀಯಾ. ಈ ಲೋಕದ ಮೇಲೆ ಪುರಲಹಳ್ಳಿ ಭೂತ ಸಾಮಾನ್ಯದ್ದೇನು ಅಲ್ಲ. ನೀನು ಹೆದರಬೇಡ, ಧೈರ್ಯವಾಗಿರು. ನಾನೊಂದು ಮಾತು ನಿನಗೆ ಹೇಳಿಕೊಡ್ತೀನಿ" ಅಂದನಂತೆ. ಯಾರು? ಜುಂಜಪ್ಪ.

"ನೀನು ಹೆದರಬೇಡ, ಅದರಬ್ಯಾಡ,
ಅಂಜಬ್ಯಾಡ, ಅಳುಕಬ್ಯಾಡ, ತಗ್ಗಬೇಡ,
ಬಗ್ಗಬೇಡ. ಇಂಥಾ ಸಾವಿರಗಾಳಿ ಹೊಡೆದಿದ್ದೀಯಾ
ಆಮೇಲೇನು ಕುಂಟ ಪುರಲಹಳ್ಳಿ ಭೂತ
ಅಂದ್ರೆ ಏನು ಸಾಮಾನ್ಯವೇ? ಹೆದರಬೇಡ.
ನಿನ್ನ ಆಯುಧಮುಸ್ತಾಫಗಳೆಲ್ಲಾ ಎಷ್ಟೈದಾವೆ
ಅವೆಲ್ಲಾ ತಂದು ಮಡಗಿಕೊಂಡುಬಿಡು.

ಅವನ್ನೆಲ್ಲಾ ಬಳಕೆ ಮಾಡಿಕೊಂಡುಬಿಡು. ಈ ಹೊಟ್ಟೆಗೂ ಪಕ್ಕೆಗೂ ಈ ಬೆನ್ನಿಗೂ ಆಯುಧಗಳ ಹೊಂದಿಗೆಯಾಗಿ ನೋಡ್ತಾ ಇರಬೇಕು. ಈ ಆಯುಧಗಳನ್ನೆಲ್ಲಾ ಕಟ್ಟಿಕೊಂಡು

ಬಿಟ್ಟು ಜುಟ್ಟು ಹಿಡಿದು ಮೇಲಕ್ಕೆ ಎತ್ತಿಬಿಡು ಅವಳನ್ನ. ಮೇಲಕ್ಕೆ ಎತ್ತಿದ ಹಾಗೆ 'ಆಂಫ್'ಅಂತ ಹಾಗೇ ಹೋಗಿಬಿಡ್ತೀಯಾ ಮೂಗಿನ ಸೊಳ್ಳೆಗೆ ಹಾಸಿ, ನೀನು ಹಾಗೆ ಒಳಕ್ಕೆ ಹೋದಕೂಡಲೇ ನಿನ್ನ ಆಯುಧಗಳು ಅವಳ ಹೊಟ್ಟೇನ ಹೇಗೆ ಬೇಕೋ ಹಾಗೆ ಅತ್ತತ್ತಾಗೆ ಹರಿದು ಬಿಡ್ತಾವೆ. ಆಗ ನೀನು ಕುಪ್ಪಳಿಸಿ ಕುಣಿದು ನೆಗೆದು ನಿಂತುಕೊಂಡು ಬಿಡಬೇಕು. ಕಡುಚೂರಿ ತೊಗೊಂಡು ಬಲಗಡೆ ಮಗ್ಗಲಗೆ ಸಿಗಿದು ಮೂಡಲು ಸೀಮೆಗೆ ಹಾಕಿಬಿಡಬೇಕು. ಬಿಸಿಲು ಮಾರಿ ಆಗಬೇಕು ಅವಳು ಅಲ್ಲಿ. ಅವಳ ಎಡಗಡೆ ಮಗ್ಗಲಿಗೆ ಸಿಗಿದು ಬಿಟ್ಟು ಮಲೆನಾಡಿಗೆ ಎಸೆದುಬಿಡು. ಅಲ್ಲಿನ ಮೂಲೆಯಾಗೆ ನೀನು ಮಲೆನಾಡು ಮಾರಿಜೊಂಡಾಗಿ ಬಾಳು ಹೋಗು ಅನ್ನು. ಈ ದೇಶದ ಮೇಲೆ ಒಂದು ಕೆರೆದಂಡೆಯಾಗೆ ಹಳ್ಳದ ದಂಡೆಯಾಗೆ ನಶೆಹುಲ್ಲು ಆಗಿ ಬೆಳೆದು ಮಾರಿಕೂದಲು ಆಗಿ ಮಾರಿಯರೇ ಮೇಯಬೇಕು' ಅಂದ.

ಪುರಲಹಳ್ಳಿ ಭೂತಪ್ಪ ಎಲ್ಲಾ ಆಯುಧ ಮುಸ್ತಾಫ್‌ಗಳನ್ನು ಹಾಗೇ ಧರಿಸಿಕೊಂಡ. 'ಆಂಕ್' ಅಂತ ನುಂಗಿಬಿಟ್ಟಳು.

ಇಲ್ಲಿಂದ ನಾಲ್ಕು ಮಖಕ್ಕೂ ತೂತುಬಿದ್ದು ಒಡಕೊಂಡು ಧಡಕ್ಕಂತ ಬಿದ್ದು ಬಿಟ್ಟಳು. ಕಡಚೂರಿ ತೊಗೊಂಡು ಬಲಗಡೆ ಮಗ್ಗಲು ಸಿಗಿದು ಮೂಡಲು ಸೀಮೆಗೆ ಹಾಕಿದ. "ನೀನು ಬಿಸಿಲುಮಾರಿಯಾಗಿ ಹೋಗು" ಅಂದ. ಎಡಗಡೆ ಸಿಗಿದು ಮಲೆನಾಡಿಗೆ ಹಾಕಿಬಿಟ್ಟು "ನೀನು ಮಲೆನಾಡು ಮಾರಿಯಾಗಿ ಹೋಗಿಬಿಡು" ಅಂದ. ಜುಂಜಪ್ಪ. ಅದೇ ಇವತ್ತು ಈ ಭೂಮಿಯ ಮ್ಯಾಗೆ ನಶೆಹುಲ್ಲು ಜೊಂಡು ಹುಲ್ಲು ಆಗಿ ಬೆಳೆದಿರೋದು. ಆಕೆ ಪ್ರತಾಪ ಅಲ್ಲಿಗೆ ಮುಗೀತು ಆ ಛಳಿಗೆಯಾಗೇನೇ. ಕಡಚೂರಿ ಈಗ್ಲೂ ಅದೆಯಂತೆ ಪುರಲಹಳ್ಳಿ ಭೂತನ ಕೈಯಾಗೆ. ಅವನು ಹೇಳಿದ್ದನಂತೆ

> 'ಜುಂಜಪ್ಪ ನೀನು ಹೇಳಿದಂತೆ ನಾನು ತಾಳೆದುರಗೀನ ಸಂಹಾರ ಮಾಡಿದ್ದೀನಿ. ಈಗ ಮುಂದೇನು ಅಪ್ಪಣೆ ನನಗೆ' ಅಂದ. ಜುಂಜಪ್ಪ ಹೇಳಿದ 'ಈ ಕಾವಲಾಗೆ ಹುಲ್ಲು ನೀರು ಎಲ್ಲಾ ಮುಗಿಸಿಕೊಂಡು ನಾವು ಹೊರಟುಹೋಗಿ ಬಿಡೋಣ. ಇನ್ನು ನೀನು ಧೈರ್ಯವಾಗಿರು. ಕೊಲ್ಲಾಪುರಿ. ಮಹಾಮಾಯಿ ದೇವಾನುದೇವತೆ, ಗೌರಸಂದ್ರದ ಮಾರಕ್ಕ, ಉದ್ದನಹಳ್ಳಿ ಮಾರಿ, ಬೇವಿನಹಳ್ಳಿ ಮಾರಿ ಎಲ್ಲಾ ವಿಚಾರದಲ್ಲೂ ಇವಳೇ ಇದ್ದಳು ಕಣೋ ಪುರಲಹಳ್ಳಿ ಭೂತಪ್ಪ. ಇವಳನ್ನು ಜಯಿಸಿದ್ದೀಯ. ಮೂರು ತಿಂಗಳಾಗೆ ಈ ಕಾವಲಿನಾಗೆ ಹುಲ್ಲು ನೀರು ಮುಗಿಸಿಕೊಂಡು ನಾವು ಹೋಗಾನ' ಅಂತ ಮಾರಣ್ಣ, ಮೈಲಣ್ಣ ಜೊತೇಲಿ ಜುಂಜಪ್ಪ ಪುರಲಹಳ್ಳಿ ಭೂತಪ್ಪ ಮೂರನೇ ತಿಂಗಳಿಗೆ ಹುಲ್ಲನ್ನೇ ನೀರನ್ನೇ ಮುಗಿಸಪ್ರೆ, ತಾಳ್ಯಾದ ದುರುಗವ್ವನ ಕಾವಲನೆಲ್ಲ ಮುಗಿಸೀನೆ ನಾಲ್ವರು ಬರುತಾರೆ. ಮೂರುತಿಂಗಳಿಗೆ ಆ ಕಾವಲಿನ ಹುಲ್ಲು ನೀರು ಎಲ್ಲಾ ಮುಗಿಸಿಕೊಂಡು ಬರ್ತಾ ಇದಾರೆ.

ಈ ಕಡೆ ಈ ಕಂಬೇರಗೊಲ್ಲರು ಏನು ಕೆಲಸ ಮಾಡ್ತಾರೆ? ಏಳು ಸೀಮೆಯಾಗಿನ ಕಾವಲುಗಳನೆಲ್ಲಾ ಈ ಜುಂಜಪ್ಪ, ಚಿನ್ನಮ್ಮನ ಮಗ, ಒಂದು ಬಿಡದಂಗೆ ಜಯಿಸಿ ಬಂದುಬಿಟ್ಟ. ತಾಳೆದುರ್ಗಿ ಕಾವಲು ಒಂದು ಐತೆ ಅಂದೆ. ಅವಳ ಸೂತಕವೇ ಕಾವಲು ಆ ಸಾಹಸಕ್ಕೆ ಜುಂಜಪ್ಪ ಹೋಗಲ್ಲ. ಸೂತಕ ಅಂದ್ರೆ ಜುಂಜಪ್ಪನಿಗೆ ಆಗಲ್ಲ. ನಾವು ತಾಳೆದುರ್ಗಿ ಕಾವಲು ಜಯಿಸಿ ಬರೋಣ ಅಂತ ಏಳುಬೀಡ ಅಕ್ಕಿ ಅನ್ನದ ರಾಶಿ ಹೊಯ್ದು, ತಾಳೆದುರ್ಗದ ತಳಿನ್ಮಂದೆ ಮಾಡಿಕೊಂಡು ಬರ್‍ರಲಾ ಅಂತ ನೂರ ಒಂದು ಸೇವೆ ಮಾಡಕ್ಕೆ ಅಂತ ಈ ಕಂಬೇರಗೊಲ್ಲರು ತಾಳೆದುರ್ಗಿ ಕಾವಲಿಗೆ ಹೊರಟವ್ರೆ. ಮುಂದಾಗಿರೋ ಕೆಲಸ ಅವರಿಗೆ ಗೊತ್ತಿಲ್ಲ. ಸಾಣಿಕೆರೆ ಪುಟ್ಟ, ಪದಹೇಳೋ ಶಿವಣ್ಣ, ಹೂಂಗುಟ್ಟೋ ಚಂದ್ರಣ್ಣ ಇವರು ಮೂವರೂ ಯಾವುದೋ ಊರಿಗೆ ಹೋಗಿ ಜುಂಜಪ್ಪನ ಪದಹೇಳಿ ಬರ್‍ತಾ ಇದ್ರು, ಜುಂಜಪ್ಪನ ಕಥೆ ಮಾಡಿ ಬರ್‍ತಾ ಇದ್ರು.

"ಯಾವುರವರಯ್ಯ ಗಾಡಿಯೋರು?" ಅಂದ್ರು.

"ಕಂಬೇರ ಹಟ್ಟಿಯೋರು ಕಣಯ್ಯ" ಅಂದ್ರು .

"ಎಲ್ಲಿಗೆ ಹೋಗ್ತಿದೀರಿ?"

"ತಾಳೆ ದುರ್ಗಮ್ಮನಿಗೆ ಮಂಗಳಾರತಿ ಮಾಡಿಸಿ, ಹುಲ್ಲು ಬನ್ನಿ ಮಾಡಿಸಿ ಕಾಣಿಕೆ ಕಟ್ಟಿ ಅವಳ ಕಾವಲು ನಮ್ಮಂತೆ ಮಾಡಿಕೊಂಡು ಬರೋಕ್ಕೆ ಹೊಂಟಿದೀವಿ ಕಣಪ್ಪಾ" ಅಂದರು ಕಂಬೇರ ಗೊಲ್ಲರು.

"ಹೊಯ್, ನಿಮ್ಮ ಮನಿ ಹಾಳಾಗಿ ಹೋಗ, ಮೂರು ತಿಂಗಳ ಕೆಳಗೆ ಪುರಲಹಳ್ಳಿ ಭೂತನ ಕೈಯಲ್ಲಿ ಜುಂಜಪ್ಪ ತಾಳೆದುರ್ಗೀನ ಸಿಗ್ಸಿ ಹಾಕಿ ಬಿಟ್ಟ. ಆಕೆ ಮಲೆನಾಡು ಸಿವುಡು, ಬಯಲುಸೀಮೆ ನಶೆಯಾಗಿ ಬೆಳೆದವಳೆ. ಎಮ್ಮೆಗೊಡ್ಡುಗಳು ಹಳ್ಳ ಕೊಳ್ಳದಾಗೆಲ್ಲಾ ಮೇಯ್ತಾ ಅದಾವೆ. ಇನ್ಯಾವ ದುರುಗಮ್ಮಗೆ ನೀ ಆಹಾರ ಕೊಡೋಕೆ ಹೋಗ್ತೀರಾ"? ಅಂತ ಚಂದ್ರಣ್ಣನೂ ಶಿವಣ್ಣನೂ ಹೇಳಿದ್ರು. "ಇಂತಾ ತಾಳೆ ದುರುಗೀನ ಜಯಿಸಿರೋವ್ನು ನಮ್ಮನ್ನ ಬಿಡ್ತಾನ. ನಮ್ಮ ಎಂಡ್ರು ಮಕ್ಕಳು ಮುಂಡೇರಾಗ್ತಾರೆ. ಏಳು ಜುಟ್ಟಿನ ಹೋತಾನೂ ಬ್ಯಾಡಾ. ಓಡ್ರೋ ಊರು ಬೀಳೋತನಕ" ಅಂತ ಹೇಳಿ ಏಳು ಜನಾನೂ ಬಂದು ಕಂಬೇರ ಕಾಣಿಹಟ್ಟಿ ಸೇರಿಬಿಟ್ಟರು. ಈ ಪದ ಹೇಳೋನು ಹೂಂಗುಟ್ಟೋನು ಗಾಡಿ ತಾವನೆ ಇದ್ದರು. ಅತ್ತಲಿಂದ ಅವರು ಬಂದು "ಯಾವೂರೋರಯ್ಯ ಗಾಡಿಯೋರು?" ಅಂದರು. "ಸ್ವಾಮಿ ನಮ್ಮೋವು ಅಲ್ಲ ಎತ್ತುಗಾಡಿ."

ಮತ್ತೆ ಯಾರದು? ಜುಂಜಪ್ಪನ ಸ್ವಾದರ ಮಾವುಗಳಂತೆ ಕಂಬೇರಗೊಲ್ಲರು ಏಳು ಗೂಡಿನ ದನ ಹೊಡಕೊಂಡು ಏಳು ಖಂಡುಗದ ಅಕ್ಕಿ ಅನ್ನದ ರಾಶಿ ಹೊಯ್ದು ಹುಲ್ಲು ಬಂದಿ ಕಟ್ಟಿ ತಾಳೆದುರುಗವ್ವನ ಕಾವಲು ಅವರಂತೆ ಮಾಡಿಕೊಂಡು ಹೋಗಕ್ಕೆ ಬಂದಿದ್ದರಂತೆ. ನಾವು ಹಿಂಗಿಂಗೆ ಅಂತ

ಹೇಳಿಬಿಟ್ಟವು ಜುಂಜಪ್ಪ. ಓಡಿಬಿಟ್ರು ಕಣಯ್ಯಾ", "ಮುರಲಹಳ್ಳಿ ಭಂಟ ಎಲ್ಲಕ್ಕೂ ಆದವನೆ ನೆಂಟ. ಏಳುಖಂಡುಗದ ಅಕ್ಕಿ ನಿಂತು ಕಾಲಲ್ಲಿ ಬಿಟ್ಹೋಡವ್ರೆ. ಇವುನ್ನ ಗಾಡಿ ಮೇಲೆ ಹಾಕು. ಮಾರಣ್ಣ ಮೈಲಣ್ಣ ನಡೀರಿ ಹೊಂಟೋಗಿ ಬಿಡಾನ ಈಗಾನ.

ಮಾರಣ್ಣ ಮೈಲಣ್ಣ ಜೋಡೀಲಿ ಜುಂಜಪ್ಪ
ಏಳಾನೆ ಖಂಡುಗದ ಅಕ್ಕೀನೆ ಮೂಟೆಯಲ್ಲೋ
ಎದ್ದು ಬಂಡಿಮ್ಯಾಲೆ ಹೇರಿಕೊಂಡು ಬಂದು
ಬರುವಾಗ ಅಣ್ಣಗಳು ನಾಲ್ವರು ಬಂದು ಬಿಟ್ಟರು.

ಮುರಲಹಳ್ಳಿ ಭೂತ, ಮಾರಣ್ಣ ಮೈಲಣ್ಣ ಜುಂಜಪ್ಪ ಈ ನಾಲ್ವರು ಎಲ್ಲೀಗೆ ಬಂದ್ರು ಅಂದರೆ ಜೆನ್ನಿಗೆ ಹಳ್ಳಕ್ಕೆ ಬಂದು ಜೆನ್ನಿಗೆ ಹಾಕಿಸಿಕೊಂಡು, ಗಂಗಮ್ಮನ ಹಳ್ಳಕ್ಕೆ ಬಂದು ಗಂಗೆ ಹಾಕಿಸಿಕೊಂಡು ಅಲ್ಲಿಂದ ಜುಂಜಪ್ಪ ಕರೆಕಂಬಳಿ ಕೊಪ್ಪಿಗೆ ಇಕ್ಕೊಂಡ. ಇವತ್ತಿಗೇನು ಅಗ್ಗಾ ಅಂತ ಕೇಳಿದ್ರು. ಇವತ್ತು ಮುರಲಹಳ್ಳಿ ಭೂತನ್ನ ನೆಲೆಕಾಣಸಕ್ಕೆ ಭೂತಪ್ಪನ್ನ ಸ್ಥಾಪನೆಮಾಡಕ್ಕೆ ಅಂತ ಹೇಳಿದ. ಎಲ್ಲೆಲ್ಲಿ ನಿಲಿಸ್ತೀಯಾ. ಹೊಸಳ್ಳಿ ಕುಂಬಾರಳ್ಳಿ ಈ ಜನರ ಹಳ್ಳಿ, ಕೊಮಾರನ ಹಳ್ಳಿ, ರಂಗನಹಳ್ಳಿ, ಹುಲಿಕುಂಟೆ, ಕರಿಯಾಲ ದೇವನ ಹಳ್ಳಿ, ತಾವರೆ ಹಳ್ಳಿ, ಅಂಡೇನ ಹಳ್ಳಿ, ಮಲೆಮಾಚನಕುಂಟೆ, ಮಾಚನ ಕುಂಟೆ, ಪಕ್ಕರಿಗೆ ಮುರಲಹಳ್ಳಿ ತಾವ ಒಂದು ಬ್ಯಾಟೆ ಗಿಡ ಐತೆ. ಆ ಬ್ಯಾಟೆಗಿಡದ ಬುಡದಾಗೆ ತೊಗೊಂಡೋಗಿ ಈ ಮುರಲಹಳ್ಳಿ ಭೂತನ್ನ ನೆಲೆಗೊಳಿಸಬೇಕು ಕಣ್ರೋ ತಮ್ಮಗಳ ಆ ಶುಕ್ರವಾರ ಶುಕ್ರವಾರಕೆ ಎಂಟು ಶನಿವಾರಕ್ಕೆ ಒಂಬತ್ತು ದಿನಕ್ಕೆ ಬಂದು ಬಿಟ್ಟರು. ಅ ಮುರಲಹಳ್ಳಿ ದಿಣ್ಣೆಗೆ , ಅಲ್ಲಿದ್ದ ಬ್ಯಾಟೆ ಗಿಡದ ಬುಡಕ್ಕೆ ಮೂರುಕಲ್ಲನ್ನು ಅಲ್ಲಿ ಸ್ಥಾಪನೆ ಮಾಡಿ ಏಳು ಖಂಡುಗದ ಅಕ್ಕಿ ಅನ್ನದ ರಾಶಿಹೊಯ್ದು ಅಲ್ಲಿ ಮುರಲಹಳ್ಳಿ ಭೂತನ್ನ ಅಲ್ಲಿ ಸ್ಥಾಪನೆ ಮಾಡಿ ಅಲ್ಲಿ ಏಳರ ತಲೆ ಭೂಮಿ ಒಳಗೆ ಹೋಗಿ ಆ ಏಳು ತಲೆ ಮ್ಯಾಲೆ ಬೆನಕನ್ನ ಇಲ್ಲಿರಾದು ಅದರ ಮುಂದೆ ವಿಗ್ರಹ. ಅಲ್ಲಿಂದ ಮುಂದೆ ಇದಿರು ಭೂತಪ್ಪ. ಅವರು ಹಾಕಿರೋ ಕಲ್ಲು ಅದರ ಮುಂದೆ ಇವತ್ತು ಮರಕಡಿಯೋದು. ಶನಿವಾರ ಹೊತ್ತು ಹುಟ್ಟೋ ಹೊತ್ತಿಗೆ ನೆಲೆಗಾಣಿಸಿ ಮುರಲಹಳ್ಳಿ ಭೂತನ ಮುಂದೆ ಏಳು ಖಂಡುಗ ಅಕ್ಕಿ ಅದರ ಮುಂದೆ ಹಾಕಿ ಏಳು ಮ್ಯಾಕೆ ಹೊಡೆದು ಅಲ್ಲಿ ಅವನ್ನ ಸ್ಥಾಪನೆ ಮಾಡಿ

"ಶನಿವಾರ ಸ್ಥಾಪನೆ ಮಾಡಿದ್ದೀನಿ. ಈ ಮೂರು ಲೋಕದೋರಿಗೆಲ್ಲಾ ಮಕ್ಕಳು ಇಲ್ಲದೋರಿಗೆ ಮಕ್ಕಳ ವರ ಕೊಡು. ಗಾಳಿದೆವ್ವ ಹಿಡಿದರೋರ್ನೆಲ್ಲ ಬಿಡಿಸು. ನೀನು ಮೂರು ಲೋಕದ ಗಂಡನಾಗು. ಏಳು ಖಂಡುಗದ ಅಕ್ಕಿ, ಏಳು ಮೇಕೆ ಕೊಟ್ಟಿದೀನಿ. ಸತ್ಯವಾಗಿ ಭೂತ, ಶನಿವಾರ ನಿನ್ನ ಪೂಜೆ ಆಗಲಿ. ಸೋಮವಾರ ನನ್ನ ಪೂಜೆ ಆಗಲಿ. ಲೆಕ್ಕವಿಲ್ಲದ ಊಟ ದುಃಖವಿಲ್ಲದ ಪೂಜೆ ನಿನಗೆ ಆಗಿ ಹೋಗಲಿ"

ಲೆಕ್ಕವಿಲ್ಲದ ಊಟವಲ್ಲೋ ದುಃಖವಿಲ್ಲದ ಪೂಜೆಯಲ್ಲೋ
ಸೋಮವಾರ ನನಪೂಜೆ ಶನಿವಾರ ನಿನಪೂಜೆ
ಇವತ್ತು ನಿನಗೆ ಪ್ರತಿಯೊಂದು ಲೋಕವು
ನಿನ್ನ ಹೆಸರು ಹೇಳಲಿ ಪುರಲಹಳ್ಳಿ ಭೂತಪ್ಪ

ಇವತ್ತಿಗೂ ಹಾಗೇ ಐತೆ. ಪುರಲಹಳ್ಳಿ ಭೂತನ ಹೆಸರು ಸಾಹಸ ಕೀರ್ತಿ ಈ ಲೋಕದ ಮೇಲೆ ಇರಲಿ. ಜುಂಜಪ್ಪ ಹೇಳಿದ.

"ಪುರಲ ಹಳ್ಳಿ ಭೂತ ಪುರಲ ಹಳ್ಳಿ ದಿಣ್ಣೆ ಮೇಲೆ ನಿನ್ನ ಸ್ಥಾಪನೆ ಮಾಡಿದೀನಿ. ಮಡಿ ಬೇಕಾಗಿದ್ರೆ ಇನ್ನು ನನ್ನ ಟೈಮ್ ಹತ್ತಿರಕ್ಕೆ ಬಂದೈತೆ. ನನಗೆ ಹದಿನಾರು ವರುಷ ತುಂಬ್ತಾ ಬಂದೈತೆ. ಕಳುವಾರ ಹಳ್ಳಿ ಕಾವಲು ಬೇವಿನ ಮರದಡಿಯಾಗೆ ಮುಂದಕ್ಕೂ ಕಳುವಾರಹಳ್ಳಿ ಹಿಂದಕ್ಕೂ ಬೇವಿನಹಳ್ಳಿ ನಡುವಂತರ ಕಾಣಾಕ್ಷಿಗೆ ಹುಟ್ಟಿರೋದು ನಾನು ಕಾಣಾಕ್ಷಿಗೆ ಮಡಿಯೋದು. ಆದ್ರೆ ನಾನಿರೋ ಜಾಗಕ್ಕೂನೂ ನೀನಿರೋ ಜಾಗಕ್ಕೂನೂ ಮೂರು ಮೂರು ಮೈಲಿ. ನಾನು ಸುಖ ಭೋಜನದೋನು ಕಳುವರಹಳ್ಳಿ ದಿಣ್ಣೇದಾಗೆ ಇರ್ತೀನಿ. ನೀನು ರಣ ಭೋಜನದೋನು. ನೀನು ಪುರಲಹಳ್ಳಿ ದಿಣ್ಣೆನಾಗೆ ಇರು. ನನಿಗೆ ಬಂದೋರು ನಿನಗೂ ಬರಲಿ. ನಿನಗೆ ಬಂದೋರು ನನಗೂ ಬರಲಿ" ಅಂತ ಹೇಳಿ ಅವನಿಗೆ ಸ್ಥಾಪನೆ ಮಾಡಿ ಆ ಎತ್ತು ಗಾಡೀನ ಬಡವರು ಬಗ್ಗರಿಗೆ ದಾನಧರ್ಮ ಮಾಡಿದ. ಆಗ ಏಳು ಏಳು ಹದಿನಾಲ್ಕು ಗೂಡಿನ ದನಾ ಕರಕೊಂಡು ಮಾರಣ್ಣಾ ಮೈಲಣ್ಣಾ ದೊಡ್ಡೋನು ಜುಂಜಪ್ಪ ಎಲ್ಲಿಗೋಗವ್ರೋ ಅಂತ ಗುಡ್ಡ ಗುಡ್ಡೇರಿಯ, ಗಂಗಸವಳ್ಳಿ ವಡ್ಡೇನ ಗುಡ್ಡೆ, ವೇಣುಕಲ್ ಗುಡ್ಡ ಇರೋ ಜಾಗಕ್ಕೆ ಹೋಗಿ ಆ ದಿನ ದನ ಮೇಯಿಸಿಕೊಂಡು ಮಾರಣ್ಣ ಮೈಲಣ್ಣ ದೊಡ್ಡೋನು ಜುಂಜಪ್ಪ ರನ್ನದ ಪಿಳ್ಳಗೋವಿ, ಚಿನ್ನದ ಪಿಳ್ಳಗೋವಿ ನಾಗಸ್ವರದ ಪಿಳ್ಳಗೋವಿ ಹಿಡೀತಾರೆ ಊದುತ್ತಾರೆ.

ಇದಕ್ಕೆ ಮೊದಲು ಕಂಬೇರ ಗೊಲ್ಲರು ಬಂದು ಚಿನ್ನಮ್ಮಗೆ ಏನು ಹೇಳಿದ್ರು ಇವರು ಅಂದರೆ

> "ಚಿನ್ನಮ್ಮಾ ನಿಮ್ಮ ಮಕ್ಕಳು ತಾಳೆದುರ್ಗಿ ಕಾವಲಿಗೆ ಹೋಗಿದ್ರಂತೆ. ಆ ತಾಳೆದುರ್ಗಿ ಆ ಮೂವರನ್ನು ಸಿಗಿಸಿ ಕಾವಲಿನ ಬಾಗಿಲಿಗೆ ತೋರಣ ಕಟ್ಟಿ ಬಿಟ್ಟವಳಂತೆ. ಚೇಳೂರೊಳಗೆ ಈ ಬಡಮೈಲನ್ನ ಕಲ್ಲು ಕಂಬಕ್ಕೆ ಕಟ್ಟಿ ಹಾಕಿದ್ರಲ್ಲ ಅದೇ ರೀತಿ ಇವಳು ಕೊಯ್ಸಿ ಬಿಟ್ಟಿದಾಳಂತೆ. ಇನ್ನ ಹದಿನಾಲ್ಕು ಗೂಡಿನ ದನ ಕರಾವು ಕರೆಯೋವನ್ನ ಕರೆಯೋರಿಗೆ ಕೊಟ್ಟವರಂತೆ, ಕುಡಿಯೋರು ತಿನ್ನೋರಿಗೆ ಅಂತಾ ಆವುನ್ನ ಕೊಟ್ಟವರಂತೆ. ಬಂಡಿ ಹೊಡೆಯೋರಿಗೆ ಗಾಡಿ ಹೊಡೆಯೋರಿಗೆ ಅಂತಾವುನ್ನ ಕೊಟ್ಟರಂತೆ. ಆಯ್ತು ಕರೆ ನಿನ್ನ ಮಕ್ಕಳ ಕಥೆ. ಇನ್ನು ಯಾಕೆ ಇದೀಯಾ ನೀನು. ವಿಷಗಿಷ ಕುಡಿದು ಸಾಯೋದು ವಾಸಿ ನೀನು" ಅಂತ ಅಕ್ಕ ತಂಗಿಕೈಲಿ ಹೇಳಿಸಿಬಿಟ್ಟರು.

ಇನ್ನು ಅನ್ನ ತಿಂತಾಳ ಚಿನ್ನಮ್ಮ. ಇಲ್ಲ ಮಂಚದಾಗೆ ಮುಖ ಅಡಿಯಾಗಿ ಮನಗ್ಯೆತೆ ಚಿನ್ನಮ್ಮ. ಆಗ ಪಿಳ್ಳಗೋವಿ ಸ್ವರಬಂದು ಚಿನ್ನಮ್ಮಾನ ಕಿವಿಯಾಗೆ ಬಿದ್ದು ಬಿಡ್ತು. ಕೂಡಲೇ ಚಂಗನೆ ಎದ್ದು ಕುಂತಾಳೆ. 'ನನ್ನ ಮಕ್ಕಳನ್ನು ಯಾರೂ ಸಿಗಿದಿಲ್ಲ. ತೋರಣ ಕಟ್ಟಿಲ್ಲ. ನಮ್ಮ ಅಣ್ಣದೀರು ಬಂದು ನನಗೆ ಸುಳ್ಳು ಹೇಳಿ ಬಿಟ್ಟರು. ನನ್ನ ಮಗನು ವೇಣುಕಲ್ ಗುಡ್ಡದಾಗೆ ಕುಂತು ಪಿಳ್ಳಂಗೋವಿ ನುಡಿಸೋನು ಜುಂಜಪ್ಪನೇ ಹೊರತು ಇನ್ಯಾರೂ ಅಲ್ಲ. ಇದೇನೋ ಮೋಸ. ಈ ಮೋಸ ಹಾಳಾಗಿ ಹೋಗಲಿ ಅಂತ ನೆರಿಗೆ ಕೊಡವಿಕೊಂಡು, ಸೆರಗು ಕೊಡವಿಕೊಂಡು ನಿಲ್ಲುವಾಗ್ಗೆ ವೇಣುಕಲ್ಲುಗುಡ್ಡದಾಗೆ ಕೊಳಲು ನುಡಿಸ್ತಾ ಇದ್ದನಂತೆ ಜುಂಜಪ್ಪ. ಹಟ್ಟಿ ಬಿಟ್ಟು ಮೂರು ಫರ್ಲಾಂಗು ಓಡಿ ಹೋಗಿ ಬಿಟ್ಟಳಂತೆ ಚಿನ್ನಮ್ಮಾ ಮಕ್ಕಳನ್ನು ನೆನೆಸಿಕೊಂಡು. ಅವರು ಏಳು ಜನ ಕಂಬೇರು ಗೊಲ್ಲರಿಗೆ ಗೊತ್ತಾತು. ಚಿನ್ನಮ್ಮಗೆ ಗೊತ್ತಾತು ಮಕ್ಕಳು ಬದುಕಿದ್ದಾರೆ ಅನ್ನೋದು ಅಂತ. ಅವರು ಹೇಳಿದ್ರು

"ಚಿನ್ನಮ್ಮ ನಮಗೆ ಗೊತ್ತಿಲ್ಲ. ಯಾರೋ ಹೇಳಿದ್ರು ಯಾರೋ ಭದ್ರಾವತಿ ಕಡೆಯೋರಂತೆ ಬಿದಿರು ಕಡಿಯೋಕೆ ಅಂತ ಹೋಗಿದ್ರು . ಅವರಿಗೆ ಅಲ್ಲಿಂದ್ಯಾರೋ ಹೇಳಿದ್ರು. ಆ ಬಾಯಿ ಹರುಕ ನನ್ನ ಮಗನ ಮಾತು ಕೇಳಿ ನಾವು ನಿನ್ನ ತಾವ ಹೀಗೆ ಹೇಳಿದವು. ಈಗ ನಿನ್ನ ಮಕ್ಕಳನ್ನು ಯಾರೂ ಸಿಗಿದಿಲ, ಬಗೆದಿಲ್ಲ. ಅವರು ಬಂದು ಏಣುಕಲ್ ಗುಡ್ಡದಾಗೆ ಪಿಳ್ಳಂಗೋವಿ ಊದ್ತಾ ಅವರೆ" ಅಂತ ಚಿನ್ನಮ್ಮನ ಮುಂದೆ ಅಂದರು.

"ಕಾಲಕಾಲಕ್ಕೆ ನೀವೇ ಬರ್ತೀರಲ್ಲೋ ನನ್ನ ಮುಂದೆ ಮನೆಹಾಳರ" ಅಂದ್ಲು.

"ಚಿನ್ನಮ್ಮಾ ನಮ್ಮನ್ನ ಮನೆಹಾಳರು ಅನ್ನಬೇಡ" ಅಂದರು.

"ಯಾವತ್ತು ಯಾರು ಮನೆ ಹಾಳು ಇದ್ರೋ ಅಂತ ಗೊತ್ತಾಗೋದು ಅಂದಳು ಚೆನ್ನಮ್ಮ."

"ನಾವು ಕೇಳಿರಲಿಲ್ಲ. ಯಾರೋ ಹೇಳಿದ ಮಾತು ಕೇಳಿಕೊಂಡು ಬಂದು ನಿನ್ನ ಕೈಲಿ ಹಾಗಂದ್ವಿ. ನಮ್ಮುನ್ನ ಮನೆ ಮುರುಕರು ಅನ್ನಬ್ಯಾಡ. ನಮ್ಮನೆಯಲ್ಲಿ ಇದ್ದೀಯಾ. ನಮ್ಮನೇಲಿ ಬೆಳೆದಿದ್ದೀಯಾ, ಆ ಮಾರನವರ ಗೊಲ್ಲರ ಮನೆಗೆ ಕೊಟ್ಟಿದೀವಿ ನಿನ್ನ. ಇವತ್ತು ಅವರ ಮನೆಯಾಗೆ ನೀನು ಬಾಳಬೇಕಾದ್ದು ಅನಿವಾರ್ಯ. ಹಿಂಗೆಲ್ಲಾ ನೀನು ಹೇಳಬಾರ್ದು.

"ಮೂರು ಜನ ಮಕ್ಕಳು ಮುಖ ನೋಡದೆ ಇವತ್ತಿಗೆ ಮೂರು ವರ್ಷ ಆತು. ಏಳೂರೋರು ಸೋಮವಾರದ ದಿನ ಮನೋಜಯ ಮಾಡಾಕೆ ಬರ್ತಾರೆ. ಹಿರೇಮಗ ಆಗಲೇ ಮೂವತ್ತು ಮೂವತ್ತೈದು ವರ್ಷದವನಾಗಿ ಕಾಣ್ತಾನೆ ನಮ್ಮ ಕಣ್ಣಿಗೆ. ಎದೆ ಮೇಲೆ ರೋಮ ತುಂಬಿದಾವೆ. ಇವಾಗ ಇರೋಹೊತ್ತಿಗೆ ಆ ಹಿರೇಮಗ ಒಂದು ಮಗಾನ ಒಪ್ಪಿಕೊಂಡು ಮದುವೆ ಆಗಲಿ. ನಿನ್ನ ತಲೆಯಾಗೆ ನೆರೆ ಬಂದಾವೆ.

ಹಿಂದಲೆ ಮುಂದಲೆ ಎಲ್ಲಾ ಬೆಳ್ಳಗಾಗಿ ಹೋಗಿವೆ. ಈ ಮುಪ್ಪಿನಾಗೆ ಯಾಕೆ ಈ ಕಷ್ಟ ಕಟ್ಟಿಕೊಳ್ತಿಯಾ. ಮನೆಗೆ ಸೊಸೆ ಬಂದರೆ ಕಷ್ಟ ನಿಷ್ಠೂರ ಸಹಾಯಕ್ಕೆ ಬರ್‍ತಾಳೆ. ಸೋಮವಾರದ ದಿನ ಹಿರೇ ಜುಂಜನ ಮನೆಗೆ ಕಳಿಸಿಬುಡೆ" ಅಂತ ಹೇಳಿ ಇವರು ಏಳು ಜನ ಬಂದು ಹಟ್ಟಿ ಇಳುಕೊಂಡರು. ಚಿನ್ನಮ್ಮ ಹೋಗಿ ಸೋಮವಾರದ ದಿನ ಹನ್ನೆರಡು ಘಂಟೆಗೆ ಏಣುಕಲ್ಲ ಗುಡ್ಡದ ಮುಂದೆ ನಿಂತವ್ಳೆ.

ಉರಿಯೋ ಬಿಸಿಲಾಗೆ "ಅಮ್ಮ" ಅಂದ.

"ಯಾಕಪ್ಪಾ?" ಅಂದ್ಲು

"ಅಮ್ಮಾ, ನಿನ್ನ ಅಪ್ಪದೀರು ಸಾಕಬೇಕಾಗಿದ್ರೆ ಹಿಂದೆ ಏಳು ಜನ ಗಂಡು ಮಕ್ಕಳು ಹಿಂದೆ ನೀನು ಹುಟ್ಟಿದ್ದು. ಕಡೆ ಹುಟ್ಟಿನ ಕಲ್ಯಾಣಿ ಏಳು ಮಲ್ಲಿಗೆ ಮೊಗ್ಗು ಒಂದು ತಕ್ಕಡಿ ಮ್ಯಾಕೆ ಇದ್ದವಳು ನೀನು ಒಂದು ತಕ್ಕಡಿ ಮ್ಯಾಕೆ ಇಟ್ಟುಗೊಂಡು ಸಾಕಿದವರು ಕಂಬೇರಗೊಲ್ಲರು. ಅಂಥಾ ಬಾಳುವೆ ಮಾಡಿದ ಹೆಣ್ಣುಮಗಳು ಈ ಉರಿಯೋ ಬಿಸಿಲಾಗೆ ಬಂದು ನಿಂತಿದ್ದೀಯಲ್ಲಾ ಏನಮ್ಮ ಹೇಳು.

"ಅಪ್ಪಾ, ಬಂದಿರೋ ಮಾತು ಆಗಿರೋ ನ್ಯಾಯ ಆಮೇಲೆ ಹೇಳಾನ. ಇಲ್ಲ ಹಿಂದೆ ಹೋಗಿರಾದು ಹೇಳಾನ."

ಜುಂಜಪ್ಪ ಹೇಳಿದ "ಹಿಂದಿಂದು ಪಾಂಡುರಾಜನ ಜೊತೆ ಹೋಗ್ಲಿ. ಇಂದು ನಾನು ಹುಟ್ಟಿರೋದು ಈ ಕಲಿಯುಗದಾಗೆ. ಕಲಿಪುರುಷ ನಾನು ದ್ವಾಪರ, ಕೃತ ತ್ರೇತಾ ಯುಗದಾಗೆ ಆಗಿದ್ದರೆ ಅದು ನಮಗೆ ಗೊತ್ತಿಲ್ಲ. ಆದರೆ ಈಗ ಬಂದಿರೋದು ಯಾಕೆ ಅಂತ ಹೇಳಮ್ಮಾ"

"ಏಳು ಜನ ಹೆಣ್ಣು ಮಕ್ಕಳು ಕಂಬೇರ ಗೊಲ್ಲರ ಮನೆಯಾಗೆ ಹೆಣ್ಣಾಗವ್ರೆ ಅಂತೆ. ಏಳು ಜನರ ಕಾಲು ತೊಳೆದು ಕನ್ಯಾದಾನ ಮಾಡಿ ಧರ್ಮದ ದಾನ ಮಾಡಿ ಮದುವೆ ಮಾಡಿ ಹೆಣ್ಣು ಗಂಡು ಸಾಗಿ ಹಾಕ್ತಾರಂತೆ ನೀನು ಹೋಗಿ ಮದುವೆ ಆಗೋಕ್ಕೆ ಸೋದರ ಮಾವಂದಿರ ಮನೆಗೆ ನೀನು ಬರಬೇಕಂತೆ ಜುಂಜಪ್ಪ."

"ಈ ಕಥೆ ಇಲ್ಲಿಗೆ ನಿಲ್ಲಿಸಿಬುಡು ಸಾಕು. ತಾಯಿ ನಿನ್ನ ಬಾಯಿನಾಗೆ ಬಂಗಾರದ ಭಂಡಾರದಂತಾ ಮೂರು ನುಡಿ ನುಡಿದಿದ್ದೀಯಾ. ಪಿತೃವಾಕ್ಯ, ಮಾತೃವಾಕ್ಯ ಮರೀಬಾರದು. ಈ ಒಂಬತ್ತು ದಿನದ ಮದುವೆ ಮಾತು ಒತ್ತಟ್ಟಿಗಿರಲಿ. ಈ ಒಂಬತ್ತು ದಿನ ಮುಖ ಅಡಿಯಾಗಿ ಮಲಗಿದ್ದೆಯಲ್ಲಾ ಅನ್ನ ನೀರು ಬಿಟು ಯಾಕೆ ಮಲಗಿದ್ದೆ ಚಿನ್ನಮ್ಮಾ" ಅಂದ.

ಅವನಿಗೆ ಗೊತ್ತು ಆಗಲೇ ಮುಂದಲ ಯೋಗ.

"ಯಾರಪ್ಪಾ ಹೇಳಿದೋರು."

"ಯಾರೂ ಹೇಳಲಿಲ್ಲ. ನನ್ನ ಆಯಸ್ಸು ಇದು ಎಲ್ಲಾ ನನಗೆ ಈಗ ಗೊತ್ತಾಗಿ ಬಿಟ್ಟಿದೆ." ಅಂದ ಜುಂಜಪ್ಪ

"ತಾಳೆದುರ್ಗಿ ಕಾವಲಿಗೆ ದನಬಿಟ್ಟ ನೀನು ನಿನ್ನ ತಮ್ಮದೀರು ಅಂದರೆ ನನ್ನ ಮಕ್ಕಳನ್ನೆಲ್ಲಾ ತಾಳೆದುರ್ಗಿ ಸಿಗಿಸಿ ಎಲ್ಲಾ ಕೆಲಸ ಮಾಡಿಸವ್ಳೆ ಅಂತ ನನ್ನ ಅಣ್ಣದೀರು ಬಂದು ನನ್ನ ಕೈಲಿ ಹೇಳಿದ್ರು. ನಿನ್ನ ಮಾವದೀರು. ಅದಕ್ಕಾಗಿ ಒಂಬತ್ತು ದಿನ ಅನ್ನ ನೀರು ಬಿಟ್ಟು ಮಲಗಿದ್ದೆ ಜುಂಜಪ್ಪ."

"ಹೇಳಾದು ಅವರಿಚ್ಚೆ, ಕೇಳಾದು ನಿನ್ನಿಚ್ಚೆ ಅಲ್ಲ. ಅನ್ನ ನೀರು ಬಿಟ್ಟು ಮಲಗಕ್ಕೂ ನಿನ್ನ ಇಚ್ಚೆ ಅಲ್ಲ. ಆದರೆ ತಾಯಿ ಮಾಡಿದ್ದೇ ಮಕ್ಕಳಿಗೆ ಉಳಿತದೆ. ಗಂಡ ಮಾಡಿದ್ದೆ ಹೆಂಡ್ತಿಗೆ, ಹೆಂಡ್ತಿ ಮಾಡಿದ್ದು ಗಂಡಗೆ ಉಳೀತದೆ ಚಿನ್ನಮ್ಮ. ನಿನಗೆ ಬರಬೇಕಾದ ನ್ಯಾಯ ಇತ್ತು. ನಿನಗೆ ಬಂತು". "ಯಾಕೆ ಬಂತು ಜುಂಜಪ್ಪಾ?."

"ಹಿಂದೆ ನನ್ನ ತಮ್ಮದೀರನ್ನ ಕಳಿಸಿ ಬಡಮ್ಮೈಲನ್ನ ಜೊತೆ ಸೀರ್ಯಾದ ಪೇಟೆಗೆ ಅವರನ್ನು ಇರಿ ಅಂತ ನಾನು ರೊಟ್ಟಿ ಬುತ್ತಿ ತಕ್ಕೊಂಡು ಕಟ್ಟಿಸಿಕೊಂಡು ಹೋಗಕ್ಕೆ ಅಂತ ಕಳುವರಹಳ್ಳಿ ಹತ್ರ ಬರುವಾಗ ಇಲ್ಲಿಗೆ ಹನ್ನೆರಡು ವರ್ಷ ಆಗಿತ್ತು. ಹುಲಿಕುಂಟೆ ಕೆರೆಗೆ ಜಾಡು ಕಳೆದು, ಹೋರಿಕರ ಹೂಳಿದ್ದಾಗ, ನನ್ನ ಮಕ್ಕಳ ಮುಖ ನೋಡಲಿಲ್ಲ. ಅಂತ ನನಗೆ ಅನ್ನಬಾರದ್ದು ಅಂದು ಮೂರು ತಿಂಗಳು ಮುಖ ಅಡಿಯಾಗಿ ಅನ್ನ ನೀರು ಬಿಡಿಸಿ ಮಲಗಿಸಿದ್ದೆಯಲ್ಲಾ ಚಿನ್ನಮ್ಮ ಆ ದೋಷ ಇವಾಗ ನಿನಗೆ ಬಡಿದೈತೆ., ಇಲ್ಲಿಗೆ ಇದು ತೀರ್ಮಾನವಾಯಿತು. ಇನ್ನು ನೀ ಏನೂ ಚಿಂತೆ ಮಾಡಬೇಡ. ನೀವು ಹೋಗಿ ತುಪ್ಪ ಅನ್ನ ತಿಂದು ಹಾಲು ಅನ್ನ ಊಟಮಾಡಿಕೊಂಡು ನೀನು ಅರಮನೆಯಾಗೆ ಇರಮ್ಮ ನಡೆಯಮ್ಮ. ನಾನು ಬರ್ತೀನಿ."

"ನನ್ನ ಮದುವೆ ಮಾಡಾಕೆ ಅಂತ ಕರೆಸಿಲ್ಲ ಅಮ್ಮ. ದೊಡ್ಡ ಮದುವೆ ಮಾಡಾಕೆ ಹೇಳಿ ಕಳಿಸಿದ್ದಾರೆ. ನಾನು ಹೊಂಟೀನಿ ಚಿನ್ನಮ್ಮ". ನಿನ್ನ ತವರು ಮನೆಗೆ .

"ಜುಂಜಪ್ಪ ನಾನು ಮದುವೆ ಮಾಡಿಕೊಂಡು ತಿಂಗಳು ತುಂಬಿದ ದಿನ ನಿನ್ನ ಅಪ್ಪ ನನ್ನ ಕರಕೊಂಡು ತವರು ಮನೆಯಿಂದ ಬರೋದಿವಸ ನಮ್ಮ ಅಣ್ಣದೀರು ಏಳು ಜನ ಒಂದು ಹಸಿ ಮಣಕನ್ನ ಬಳುವಳಿ ಕೊಟ್ಟಿದ್ದು ಅದೊಂದು ಹಸಿಮಣಕದಾಗೆ ಇವತ್ತು ಏಳು ಗೂಡಿನ ದನ ಆಳಿದ್ದ. ಉಣ್ಣೋದು ಅವರದ್ದು, ಹಚ್ಚೋದು ಅವರ ದೀಪ. ಅವರಿಗೆ ಕೇಡು ಎಣಿಸಬೇಡ. ನೀನು ಹೋಗಿ ಬರಬೇಕು"

"ಬಿಡೂ ನನ್ನ ಮ್ಯಾಗಳ ಆಸೆ ಇವತ್ತು ಅಮ್ಮಾ ಚಿನ್ನಮ್ಮ."

ಮಾರಣ್ಣ, ಮೈಲಣ್ಣ, ಮಾರಕ್ಕ ಮೂವರು ಅವರ ಮೇಲೆ ಒಂದು ಅಂತಃ ಕರಣ ಆಶ್ರಯ ಒಂದು ಆಸೆ ಇರಲಿ ನಿನಗೆ.

ಅನ್ನೋ ಅರ್ಥಕ್ಕೆ ಈಗ ಹೇಳ್ತಾಳೆ.

"ನೋಡು ಸಿಗ್ಗಾನೆ ಮಾವುಗಳಿಂದ ಗೆದ್ದಾಡಿದನಲ್ಲೋ, ಗೆಲುವೀರ ಗೆದ್ದಾಡಿದನಲ್ಲೋ ಗೆಲುವೀರ ಈರೈ ಜುಂಜ ಹೋಗಿ ಬಾರೋ ಅವರ ಬೆಡಗೀಗೇ" ಅಂದಳು ಚಿನ್ನಮ್ಮ.

"ತುಪ್ಪ ಅನ್ನವೇನೋ ಚಿಕ್ಕೋನು ಸಿರ‍್ಯಾದ ಅಂಗಡಿಯಲ್ಲೋ

ಉರಿಮದ್ದು ತಂದು ಮಡಗವ್ರೆ ಅಮ್ಮ ಕಂಬೇರು" ಅಂದ ತಿರುಗಾ.

ಅವಳು ಹೇಳ್ತಾಳೆ; ಸೋದರ ಮಾವುಗಳು, ಹಾಲು ಘನವೇನಮ್ಮ

ರಾಯನ ಮಗನಿಗಂತಾ ಸೀರ‍್ಯಾದ ಅಂಗಡಿಯಿಂದ ಮದ್ದು ತಂದು ಮಡಗವ್ರೆ ಕಂಬೇರು

ಉರಿಗರಿಯುವ ದತ್ತೂರಿ ಗಡ್ಡೆಯನೇ ಉರಿಮದ್ದು ಚಿನ್ನಮ್ಮನ ಮಗನೀಗೆ ಮಾಡವ್ರೆ ಕಂಬೇರು

ಇವೆಲ್ಲಾ ಹೇಳಿಬಿಟ್ಟ ಮುಂದಲ ಆಗಬಹುದಾದ್ದೆಲ್ಲಾ.

ಏಯ್ ಜುಂಜಪ್ಪ, ತೌಡು ತಿಂದರೂ ತೌರುಮನೆ. ಬೇಲಿ ಮೇಲಿನ ಆಲೆ ಸೊಪ್ಪು ತಿಂದರೂ ತೌರುಮನೆ

ನೆಲ್ಲಕ್ಕಿ ತೌಡು ನುಣ್ಣಗೆ ನಿಂತುಕೊಂಡು ತಿಂದು ಬಂದರೂ ನನ್ನ ತೌರು ಮನೆ ಮೇಲಿನ ಆಸೆ ನನಗೆ ನನ್ನ ಹೀಯಾಳಿಸಬೇಡಾ, ಅಂತ ಸೋದರಮಾವುಗಳ ಮನೆಗೆ ಹೋಗು ಅಂದಾಳು. "ಅವನು ಹೋಗುತೀನಿ ಚಿನ್ನಮ್ಮಾ ನಿನ್ನ ಅಣ್ಣದೀರ ಮನೆಗೆ, ನನ್ನ ಸೋದರಮಾವುಗಳ ಮನೆಗೆ, ನೀನು ಕಣ್ಣೀರು ಹಾಕಬೇಡ"

ಅಂತ ಹೇಳಿ ಈಗ ಕಳುವಾರಹಳ್ಳಿ ಬೇವಿನಹಳ್ಳಿ ದಿಣ್ಣೆ ಹತ್ತಿ ಆಗ ಬಂದು ಚಿನ್ನಮ್ಮನ್ನ ಮುಂದೆ ಮತ್ತೆ ಬಂದು ನಿಂತ.

"ಅಮ್ಮಾ, ನಿನ್ನ ನಾಡು ನರಲೋಕ, ಭೂಮಿ ಭೂಲೋಕದ ಮೇಲಿನ ಕಾವಲುಗಳನ್ನೆಲ್ಲ ಜಯಿಸಿದ್ದೀನಿ.

ಜುಂಜಪ್ಪ ಬಲಕಾರ ಎಂಬ ಸುದ್ದಿ ದಿಲ್ಲಿ ಹಳ್ಳಿಗೆ ಮುಟ್ಟಿದೆ.

ದಿಳ್ಳಿಗೆ ಓಲೆಕಾರ ಜುಂಜಪ್ಪ ಬಲಕಾರ ಎಂಬ ಸುದ್ದಿ ಬಾಗಿಲಿಗೆ ಶಾಸನ ಹೊಡೆಸಿದ್ದೀನಿ ಚಿನ್ನಮ್ಮಾ.

ಯಮ್ಮಾ, ನಾ ಸತ್ರೂನೂ ನನ್ನ ಸಾಹಸ ಈ ಲೋಕದ ಮೇಲೆ ಸಾಯುವ ಹಾಗಿಲ್ಲ.

ಇವತ್ತಿನ ದಿನದಾಗೆ ಗುರುಮುಖದಾಗೆ ಗುಡ್ಡ ಸೇರಬೇಕು

ಮಾರಣ್ಣ, ಮೈಲಣ್ಣ, ಮಾರಕ್ಕ ಅವರೂ ನಿನ್ನ ಮಕ್ಕಳೇಯಾ, ಅವರನ್ನು ಊರಿಗೆ ತಂದು ಆಚೆ ಬಿಡು ಅವರನ್ನು ಚೆನ್ನಾಗಿ ನೋಡಿಕೋ.

ನನಗೆ ಮದುವೆ ಮಾಡಕ್ಕೆ ಅಂತ ಅವರು ಹೇಳಿ ಕಳಿಸಿಲ್ಲ. ಬಿರುದು ಕೊಡೋಕು ನಿಮ್ಮ ಅಣ್ಣದೀರು ಹೇಳಿ ಕಳಿಸಿಲ್ಲ. ನನಗೆ ದೊಡ್ಡ ಮದುವೆ ಮಾಡಕ್ಕೆ ಅಂತ ಹೇಳಿ ಕಳಿಸವ್ರೆ. ಮಾರಣ್ಣ ಮೈಲಣ್ಣನ ಹಕ್ಕೆ ಪಕ್ಕೆಯಾಗೆ ಇಟ್ಟುಕೊಂಡು ಕಾಪಾಡು. ಹಾಲು ನೀರು ಕೊಟು ಅವರನ್ನು ಕಾಪಾಡು. ಅಂತಹ ಮಕ್ಕಳನ್ನು ಇವತ್ತು ನಾನು ಬಿಟ್ಟುಹೋಗಬೇಕಾಗಿದ್ರೆ ಈ ಪರಮಾತ್ಮ ಮುಂದಕ್ಕೆ ಹೋಗಾನ ಅಂದ್ರೆ ಹಿಂದಕ್ಕೆ ಎಳಿತಾ ಐತೆ" ಅಂತ ತಾಯೀನ ಸಾಗಾಕಿ ಹೇಳವ್ನೆ ಜುಂಜಪ್ಪ, ತಮ್ಮದೀರಿಗೆ ಒಂದು ಮಾತು ಹೇಳಿದ.

ಮಾರಣ್ಣ, ಮೈಲಣ್ಣ ಆವಿನ ದನವೆಲ್ಲಾ ಜೋಪಾನ ಈವಾಗ ಈ ಆವಿನ ದನದ ಕಡೆಗೆ ಜೋಪಾನವಾಗಿರಬೇಕು ನೀವು. ಚೆನ್ನಮ್ಮನ್ನ ಸಾಗಾಕಿದ್ದೀನಿ. ವಿದ್ಯಾಬುದ್ಧಿ ಹೇಳಿ. ಈ ದೇಶದ ಮ್ಯಾಗಳ ಕಾವಲುಗಳೆಲ್ಲಾ ಇಲ್ಲೀಗೆ ಮುಗಿದುಹೋಗಿಬಿಟ್ಟಿದಾವೆ. ಇನ್ಯಾವಾವಾದ್ರೂ ಸಂದಿಗೊಂದ್ಯಾಗಿ ತಪ್ಪಿಸಿಕೊಂಡು ಬಿಟ್ಟಿದ್ರೆ ತಮ್ಮ ಚಿತ್ರದೇವರು, ಕಾಟಮದೇವರು ಹೋಗಿ ಅಪ್ಪಣೆ ಕೇಳಿ ಬರ್ತೀನಿ. ಆ ಕಾವಲಿಗೆ ಹೋಗಿ ದನ ಬಿಟ್ಟು ಬಿಡೋಣ ತಪ್ಪಿಸಿಕೊಂಡು ಇರೋವು ಇದ್ರೆ.' ಅಂದ ಜುಂಜಪ್ಪ ಅಲ್ಲಿಂದ ಕಂಬೇರ ಹಟ್ಟಿ ಕಡೆಗೆ ಹೊರಟ.

೨.೩.೬. ಜುಂಜಪ್ಪನಿಗೆ ಮದ್ದು ಇಕ್ಕಿದ್ದು

ಸೊಲ್ಲೆತ್ತುವ ಮುನ್ನ ಎಲ್ಲಾ ದೇವರನೂ ನೆನೆದೇವೋ
ಧರಣಿ ದೊಡ್ಡಯ್ಯನ ಬಿಲ್ಲುಬಾಣಗಳ ನೆನೆದೇವೋ.

ಮೊದಲೇನ ನೆನೆದೇವೋ ಮದನಾರಿ ವೀರನ
ಮದಗದ ಗುಡ್ಡದ ಕಲಿವೀರ ಜುಂಜಪ್ಪನ ನೆನೆದೇವೋ.

ಸಿದ್ಧರು ಬಂದರು ಎಂದು ಎದ್ದು ನೋಡಲು ಬಂದೆ
ಸಿದ್ಧರು ನಮ್ಮಕೈಗೆ ಸಿಗಲಿಲ್ಲಾ ಈ ಹೊತ್ತು
ರುದ್ರಾಕ್ಷಿ ತೋಪೇ ಮರೆಯಾದೋ

ಭೂಮಿಯ ನೆನೆಮನವೆ ಭೂ ಲೋಕ ನೆನೆಮನವೆ
ಎಳ್ಳು ಜೀರಿಗೆ ಬೆಳೆಯೋ ಭೂಮವ್ವನ

ಎದ್ದೊಂದರಘಳಿಗೆ ನೆನೆದೇವೋ

ಸ್ವಾಮೀನ ನೆನೆದೇವೋ ಸ್ವಾಮಾರದಯ್ಯಾನ
ಬೆಣ್ಣೆ ಮಜ್ಜನದ ಒಡೆಯ ಸ್ವಾಮಿ ಜುಂಜಪ್ಪನ ನೆನೆದೇವೋ

ನಿಡುಗಲ್ಲ ದಡದಾಗೆ ನೀಟಾಗಿ ಬೆಳೆದಮ್ಮ
ಬೆನವಣ್ಣನ ಬೆಟ್ಟದಾಗೆ ಹಸನಾಗೆ ಬೆಳೆದಮ್ಮ
ಸ್ವಾಗೆ ಗಿರಿ ಬಡ್ಯಾಗೆ ಸೊಗಸಾಗಿ ಬೆಳೆದಮ್ಮ
ಏಣುಕಲ್ಲುಗಿರಿ ಬೆಟ್ಟದಾಗೆ ಗೇಣಾಗೆ ಬೆಳೆದಮ್ಮ

ಚುಂಚನ ಗಿರಿ ಬೆಟ್ಟದಾಗೆ ಮಿಂಚುದಲೆ ಬಿದಿರಾದೆ
ದೊಡ್ಡೋನು ಜುಂಜಪ್ಪಗೆ ಒಡ್ಡಿದರು ಬಿಲ್ಲಾದೆ
ಮೂಡಲಗಿರಿ ತಿಮ್ಮಪ್ಪಗೆ ಮಾಯದಲೆ ಸಜ್ಜಾದೆ

ಕುಂಟನಿಗೆ ಕೋಲಾದೆ ಭಂಟನಿಗೆ ದೊಣ್ಣೆಯಾದೆ
ಮೇಕೆಕಾಯುವಣ್ಣನಿಗೆ ಬಲಿತ ಕಣ್ಣಿನ ಕೋಲಾದೆ
ಕುರಿಯ ಕಾಯುವಣ್ಣನಿಗೆ ಎಳೆಗಣ್ಣಿನ ಕೋಲಾದೆ
ಎತ್ತು ಕಾಯೋ ಅಣ್ಣನಿಗೆ ಮುದ್ದಿನ ಕೋಲಾದೆ
ಒಕ್ಕಲಿಗರ ಮುದ್ದಣ್ಣಗೊಂದಗ್ಗಲಿಗೆ ಕೋಲಾದೆ
ಸಾಲು ಹೊಡೆಯಣ್ಣನಿಗೆ ಕೂರಿಗೆ ನೀನಾದೆ
ಏಳೋನಿಗೆ ಬಲವಾದೆ, ಊದೋನಿಗೆ ಗಣೆಯಾದೆ

ನಡೆ ತಪ್ಪೋ, ನುಡಿತಪ್ಪೋ, ನುಡಿದ ನಾಲಿಗೆ ತಪ್ಪೋ
ಸತ್ಯವಂತರು ಶಿವನುಡಿಯ ಸೊಲ್ಲೆತ್ತಿ ಬರಬೇಕು
ನಾಲಿಗೆ ತೊಡರುಗಳ ನೇರಕೆ ಬಿಡಿಸಬೇಕು
ನೆರೆದ ಯಾರ್ಯಾರಿಗೆಲ್ಲಾ ಬಿದಿರಮ್ಮ ಸರಸ್ವತಿಯೋ

"ಚಿತ್ರಲಿಂಗ ಮನೆಸ್ವಾಮಿ, ಕಾಟಮಲಿಂಗ, ಚಿಕ್ಕೋನು ನರಸಿಂಹ ಇವತ್ತು ನಮ್ಮ ಸೋದರ ಮಾವುಗಳು ಯಾತಕ್ಕಾಗಿ ಹೇಳಿಕಳಿಸವ್ರೆ ಬುದ್ಧಿ ಒಡೆದು ಹೇಳಬೇಕು ಚಿತ್ತಯ್ಯ" ಅಂತ ಚಿತ್ರದೇವರ ಅಪ್ಪಣೆ ಕೇಳಿದ.

ಜುಂಜಪ್ಪ ಸ್ವಾದರ ಮಾವುಗಳ ಮನೇಗೆ ಹೋಗಬೇಕೂಂತ ಹೊರಟ. ಆದರೆ ಹೋಗೋ ಮೊದಲು ಚಿತ್ರಲಿಂಗನ್ನ ನೋಡಿಹೋಗಬೇಕಂತ ಶಿವಚಿತ್ರಲಿಂಗ ಇರೋ ಚಿತ್ರಹಳ್ಳಿಗೆ ಬಂದ. ಚಿತ್ರಲಿಂಗನಿಗೆ ಮುಂದಾಗೋದೆಲ್ಲಾ ಗೊತ್ತು. "ನಿನ್ನ ಒಳ್ಳೇದಕ್ಕೆ ಹೇಳಬೇಕು ಜುಂಜಪ್ಪ,

ಮುಂದೆ ನೀನು ಕಂಬೇರ ಮಾವಂದಿರ ಮನೆ ಊಟಕ್ಕೆ ಯಾಕೆ ಹೋಗ್ತೀಯಾ?" ಅಂದ.

"ಇವತ್ತು ಗುರುವೇ ಚಿತ್ರಲಿಂಗ, ನಾನು ಹೇಳಿದ ಮೇಲೆ ನಿಲ್ಲೋರ ಮಗನಲ್ಲ. ಕಂಬೇರ ಹಟ್ಟಿಗೆ ನಾನು ಹೋಗಿಯೇ ತೀರುತ್ತೀನಿ. ಆ ರುದ್ರಭೂಮಿಗೆ ಹೋಗುತ್ತೀನಿ. ಈ ವಾಕ್ಯ ಮೀರಿ ನಡೆಯೋರ ಮಗ ನಾನಲ್ಲ. ಅವರಿಂದ ನಾನೇ ಮಡೀಲಿ ನನ್ನಿಂದ ಅವರಿಗೇ ಮರಣವಾಗಲಿ ಈ ಲೋಕದ ಮ್ಯಾಲೆ. ಆದರೆ ನಾನು ದಿನ ವಾಕ್ಯಕೆ ತಪ್ಪಲ್ಲ. ಹೊರಟೆ ಕಣಯ್ಯ ಚಿತ್ತಯ್ಯ

"ಜುಂಜಪ್ಪ ಇಲ್ಲೀಗೆ ನಿನ್ನ ಆಯುಸ್ಸು ಸೈ. ಎಲ್ಲಾ ಆಗಕ್ಕೆ ನಿನ್ನ ಇಚ್ಚೆ ಅಲ್ಲ. ಮಕ್ಕಳ ಫಲಕ್ಕೆ ಹೋಗಿದ್ದಾಗ ಅಪುತ್ರನ್ನ ಕೊಡಲೋ ಸುಪುತ್ರನ್ನ ಕೊಡಲೋ ಅಂದಿದ್ದಾಗ ಅಪುತ್ರನ್ನ ಕೊಡಬೇಡ. ಸುಪುತ್ರನ್ನ ಕೊಡು. ಒಂಬತ್ತು ತಿಂಗಳು ಹೊಟ್ಟೆಯಾಗೆ ಬೆಳೆದು ಬರೋ ಮಗಾ ಬೇಡಾ. ಒಂಬತ್ತು ದಿನದಾಗೆ ಒಡೆದು ಹುಟ್ಟುವ ಮಗಾ ಕೇಡು. ಕಳುವರಹಳ್ಳಿಯಲ್ಲಿ ದಿಣ್ಣೆ ಸಾಲಿನಲ್ಲಿ ಬೇವಿನಮರದಡೀಲಿ ಸಿಡಿಲು ಹೊಡೆದಂಗೆ ಒಡೆಯೋ ಅಂತ ವರಕೊಡು ಅಂದಿದ್ದು ನೀನು ವರಪುತ್ರ. ಹದಿನಾರು ವರುಷದ ವರಕೇಳಿದ್ದರಿಂದ ಹದಿನಾರು ವರುಷದ ಪುತ್ರನನ್ನು ನೀನು ಕೇಳಿದ್ದಿದ್ದು. ಶಿವ ಕೊಟ್ಟಿದ್ದದ್ದೂ ಹದಿನಾರು ವರುಷದ ಪುತ್ರನನ್ನೇ. ಈ ನರಲೋಕಕ್ಕೆ ಹೋಗಿ ಹದಿನಾರು ವರುಷಕ್ಕೆ ಸೊರಲ ಮುರಿದು, ದಿಳ್ಳಿ ಬಾಗಿಲಿಗೆ ಶಾಸನ ಹೊಡೆದು ನಾನು ಇರೋ ಜಾಗಕ್ಕೆ ಬರಬೇಕು ಕಣೋ ವೀರಭದ್ರ ಈಶ್ವರನ ಮಗ ಈರೇಳು ಲೋಕದ ವೀರ ಈರ್ರೈ ಜುಂಜ. ಈಶ್ವರನ ಮಗ ನೀನು ಜುಂಜಪ್ಪ. ಶಿವನ ಮಗ ನೀನು. ಅವನ ಮಗನೇ ಇಲ್ಲಿ ಜನಿಸಿದ್ದು. ಒಂಬತ್ತು ದಿನದಲ್ಲಿ ಚಿನ್ನಮ್ಮನ ಬೆನ್ನಲ್ಲಿ ಒಡೆದಿದ್ದ. ಅಂತಹ ವರ ಅವಳು ಪಡೆದಿದ್ದಳು.

ಇವತ್ತಿನ ದಿನದಾಗೆ ಕಂಬೇರ ಗೊಲ್ಲರಿಂದ ನೀನೇಮಡಿಯಬಹುದು. ನಿನ್ನಿಂದ ಅವರೇ ಮಡಿಯಬಹುದು. ಇವತ್ತು ಆ ರುದ್ರಭೂಮಿಗೆ ನೀನು ಹೋಗಿಯೇ ತೀರಬೇಕು. ಮಾರಣ್ಣ, ಮೈಲಣ್ಣ, ಮಾರಕ್ಕ ಇವರು ಮೂವರು ಮತ್ತು ನೀನು ಒಟ್ಟು ನಾಲ್ವರು ಚಿನ್ನಮ್ಮಗೆ ಮಕ್ಕಳಾಗಿರಲಿ. ಈ ನಾಲ್ವರ ಮಗ್ಗುಲಾಗೆ ನಿನ್ನ ಆಯಸ್ಸು ಮುಗಿದೈತೆ. ಹೆಚ್ಚಿನ ಆಯುಸ್ಸು ಕೊಡಾಕೆ ಹೇಳಿ ಕಳಿಸಿಲ್ಲ. ಹೆಚ್ಚಿನ ಬಿರುದು ಕೊಡಾಕೆ ಹೇಳಿ ಕಳಿಸಿಲ್ಲ. ನಿನ್ನ ಕಾಲು ತೊಳೆದು ಕನ್ಯಾದಾನ ಮಾಡಕ್ಕೆ ಹೇಳಿಕಳಿಸಿಲ್ಲ. ನಾನು ಹೇಳೋ ಮಾತನ್ನೆಲ್ಲ ನೀನು ಕೇಳಿಕೊಳ್ಳೋ ಜುಂಜಪ್ಪ. ನಾನೇ ಗುರುವು, ನೀನೇ ಶಿಷ್ಯ. ನನಗೂ ನಿನಗೂ ಅನ್ನ ನೀರಿನ ಋಣ ಹರೀತು ಜುಂಜಪ್ಪ. ಹದಿನಾರು ವರುಷಾ ತುಂಬುತಾ ಬಂದೈತೆ. ಮಾವದೀರು ಕರೆದವ್ರೆ ನೀನು ಬಾರೆಂದು," ಎಂದ ಚಿತ್ರಲಿಂಗ.

ಅಲ್ಲಿಂದ ಹೊರಟು ಜುಂಜಪ್ಪ, ಅಕ್ಕವ್ವನ ಕೆರೆಯಾಗೆ ಹೊಳೆಬೆಳಗ ಇದ್ದು ಸೀರ್ಯದ ಕುಂಟೆ ಮಾಲಿಂಗನ ಹಳ್ಳಿ, ಮದ್ಯಾಕ್ಕ ಹಳ್ಳಿ ಬಂಡೆಮೇಲೆ ಹಾಸಿ, ಮೊಸರಕುಂಟೆ ಮಾಲಿಂಗನ ಗುಡಿ ಹಾಸಿ, ಪುರಲಹಳ್ಳಿ ಭೂತಪ್ಪನ ಗುಡಿಗೆ ಬಂದ ಜುಂಜಪ್ಪ. ಸ್ವಾಮಿ ಮೂರು ನಾಮದೋನ, ಮುತ್ತಿನ ರಾಶಿಯೋನ, ಪುರಲಹಳ್ಳಿ ಭೂತ ಮುತ್ತಿನಂತಹವನು. ನಾನೇ ಭಂಟ ಇವತ್ತಿನ ದಿನದಾಗೆ. ನಮ್ಮ ಸೋದರ ಮಾವಗಳು ಕರೆದವರೆ. ನಿನ್ನ ಆಶೀರ್ವಾದ ಇರಲಿ ನನ್ನ ಮೇಲೆ ಅಂತ ಆಗ ಮಹಾಮಂಗಳಾರತಿ ಮಾಡಿಸಿಕೊಂಡು ಪ್ರಸಾದ ತೊಗೊಂಡಾಗ ಜುಂಜಪ್ಪ ಬಲಗಡೆ ಹೂವು ಬೀಳಲಿಲ್ಲ. "ಸೋದರ ಮಾವದೀರು ಹೇಳಿಕಳಿಸಿದ್ದು ಸರಿ ಅಲ್ಲ. ಹೋಗಬೇಡಾ ಜುಂಜಪ್ಪ ಹೋಗಬೇಡಾ." ಅಂದ ಪುರಲಹಳ್ಳಿ ಭೂತ. ಗುರುವಾಕ್ಯ, ನಮ್ಮ ಗುರು ಹೇಳಿದ ಮಾತು ಶಿವಚಿತ್ರಲಿಂಗಪ್ಪ ಮಾತನ್ನೇ ಹೇಳ್ತೀನಿ. "ಆದರೆ ಮೂರು ನಾಮದೋನು ನೀನು ಈ ಮೂರು ಲೋಕದ ಗಂಡ ನೀನು. ಈ ದೇವರ ಮೇಲೆಲ್ಲಾ ನಿನ್ನ ಕೀರ್ತಿ ಬೆಳೀಲಿ. ಆ ಸೋದರ ಮಾವಂದಿರಿಂದ ನಾನೇ ಮಡೀಬಹುದು. ನನ್ನಿಂದ ಅವರೇ ಮಡೀಬಹುದು. ಜಯವಾಗಲಿ ಅನ್ನು. "ಅಪಶಕುನ ನುಡಿಬೇಡ." ನೀನು ನೆಂಟ ನಾನು ಭಂಟ ಆಗಲಿ, ಹೋಗಿ ಬಾರೋ.

ಜುಂಜಪ್ಪ ಸ್ವಾದರ ಮಾವುಗಳ ಕಂಬೇರ ಹಟ್ಟಿಗೆ ಸಾಗುವಾಗ ದಾರೀಲಿ ಒಂದು ಕಡೆ ತುಂಬಾ ಇಲಿ ಸತ್ತು ಬಿದ್ದಿರುತ್ತವೆ. ಯಾವುದೋ ಪಾಷಾಣದ ಬಿಸಿಗೆ ಇಲಿ ಎಲ್ಲಾ ಸತ್ತು ಬಿದ್ದಾವೆ. ನೋಡಿದ. ಅಲ್ಲೊಬ್ಬ ಹುಡುಗ, ಇಲಿ ಎಲ್ಲಾ ಹಿಡಕೊಂತಾ ಹುತ್ತದ ಬಾಯಿಗೆ ಕೈ ಹಾಕ್ತಾ ಇದ್ದ. ಅವನ್ನ ಹಿಡಿದು ಯಾರೋ ನೀನು ಅಂದ. ನಾನು ಪಾಳೇಗಾರರ ಹುಡುಗ ಸ್ವಾಮಿ. ಇಲ್ಲಿ ಬಂದಿದ್ದೆ, ಇಲಿಗಳೆಲ್ಲಾ ಸತ್ತು ಬಿದ್ದಿದ್ದುವಲ್ಲಾ ಎಲ್ಲಾವನ್ನೂ ಹೊರಗೆ ಎಳಕಂತಿದ್ದೆ.

ಅಯ್ಯೋ ಮಗನೇ, ಆ ಬಿಲದಾಗೆ ಇಲಿ ಜೊತೆಗೆ ಹಾವೈತೋ, ಚೇಳೈತೋ ಯಾರಿಗೆ ಗೊತ್ತು ಮಗನೇ, ಈ ಮಧ್ಯಾಹ್ನದ ಬಿರು ಬಿಸಲಲ್ಲಿ ಅದು ಕಡಿದು ವಿಷವೇರಿ ಬಿದ್ದರೆ ನಿನಗೆ ಯಾರು ನೋಡ್ತಾರೆ, ಈ ಕೆಲಸ ನೀನು ಮಾಡಬೇಡ ಅಂತ ಆ ಹುಡುಗನ್ನ ಕರೆದು ಪಟ್ಟೆದಟ್ಟಿ ಬಿಚ್ಚಿ ಮೂರು ಬೊಗಸೆ ಹೊನ್ನು ತೆಗೆದು ಆ ಹುಡುಗನ ಮಡಿಲಿಗೆ ಹಾಕಿ ಬಿಟ್ಟನಂತೆ, ಸ್ವಾಮಿ. "ನಿನ್ನ ಬಡತನ ಬಯಲಾಗಿ ಹೋಗಲಿ, ಸಿರಿತನ ಬಂದು ನಿನ್ನ ಮನೆಯಾಗೆ ಕೂಡಲಿ. ಕರಡೇರ ಜುಂಜಪ್ಪ ಕೊಟ್ಟಿದ್ದ ಮೂರು ಬೊಗಸೆ ಹೊನ್ನ ಅಂತ ಪ್ರಪಂಚದಲ್ಲಿ ಯಾರೂ ನೀನು ಹೇಳಕೋಬ್ಯಾಡ." ನೀನು ಆನಂದವಾಗಿರು. ನಾನು ಐಶ್ವರ್ಯ ಕೊಟ್ಟು ಹೋಗ್ತೀನಿ ನೀನು ಹೇಳೀಕೋಬ್ಯಾಡ. ಅಂತ ಆ ಹುಡುಗನಿಗೆ ವರಹಾ ಕೊಟ್ಟುಬಿಟ್ಟ. ಆ ಹುಡುಗನ ಹತ್ತಿರ ಇದ್ದಂತಹ ಜೂಲುನಾಯಿ ಹಿಡಕೊಂಡು ಈ ಜುಂಜಪ್ಪ ಎಲ್ಲಿಂದ ಬರ್ತಾ ಇದಾನೆ ಅಂದರೆ

ಹೊಸಹಳ್ಳಿ, ಕುಂಬಾರ ಹಳ್ಳಿ, ಕಳುವರಹಳ್ಳಿ,
ಕೊಮಾರನ ಹಳ್ಳಿ, ರಂಗನಹಳ್ಳಿ, ಕುಳುಂಡೆ,
ಕರಿಯಾಲ, ಮಾಚನಕುಂಟೆ, ತ್ಯಾವರಹಳ್ಳಿ,

ಬಂಡೇನ ಹಳ್ಳಿ, ಮದ್ದನಕುಂಟೆ, ಮೊಸರು ಕುಂಟೆ,
ಗುಡುಲ ಏರಿಯಾಗೆ ಹಾಸಿ ಮದ್ದಕ್ಕನ ಬಂಡೆಮ್ಯಾಗೆ ಹಾಸಿ ಹಳೆಹಟ್ಟಿ,
ಮೂಡಲ ಉದಿಯಾಗೆ ಹಾಸಿ,
ಮಾರಕ್ಕನ ಗುಡಿ ಎಡದಾಗೆ ಹಾಸಿ,
ಪುರಸಂದ್ರದ ಕೆರೆ ಏರಿಮ್ಯಾಲೆ ಹಾಸಿ,
ಕಂಬದಹಳ್ಳಿ ಮಂದನಹಳ್ಳಿ ಎಡಕ್ಕೂ ಬಲಕ್ಕೂ ಬಿಟ್ಟುಕೊಂಡು ರಂಗಪ್ಪನ ಕಾವಲು ಹಾಸಿ ಜುಂಜಪ್ಪ ಬಂದವನೆ ಪುರಸಕ್ಕನ ಕೆರೆಗಲ್ಲೋ,
ಪುರುಸಕ್ಕನ ಕೆರೆ ಅಂದ್ರೆ ಅಷ್ಟು ಆನಂದ ಜುಂಜಪ್ಪಗೆ.

ಹಾಗೆ ಸಾಗುವಾಗ ಕಳುವರಹಳ್ಳಿ ದಿಣ್ಣೆ ಇಳಿದು ಬರೋಹೊತ್ತಿಗೆ ಕಂಬೇರು ಗೊಲ್ಲರು ಏಳುಜನ ಹೆಣ್ಣು ಮಕ್ಕಳು ನೀರಿನ ಕೊಡ ಹೊತ್ತುಕೊಂಡು ನೀರಿನ ಬಾವಿ ತಾವಕ್ಕೆ ಅವರು ಬಂದರು. ನೀರಿನ ಬಾವಿ ತಾವಕ್ಕೆ ಅವರು ಬಂದು ನೀರು ತುಂಬಿಕೊಂಡು ಹೋಗಾನ ಅನ್ನೋ ಹೊತ್ತಿಗೆ ಪಟ್ಟೆ ದಟ್ಟಿ ಉಟ್ಟುಕೊಂಡು ದೊಡ್ಡೋನು ಜುಂಜಪ್ಪ ಹೋಗೋ ಬಿರುಸಿಗೆ ಕೆಳಗಿನ ಕಲ್ಲೆಲ್ಲಾ ಪುಡಿ ಪುಡಿ ಆಗೋದಂತೆ. "ನಮ್ಮ ಅಪ್ಪದೀರಿಗೂ ನಮ್ಮ ಇವಗೂ ಅಷ್ಟು ಎಗನೆಷ್ಟ ಪಾರ್ಟಿ ಇತ್ತಲ್ಲಾ ಅಂತಾದ್ರಲ್ಲಿ ಈ ಜುಂಜಪ್ಪ ಯಾಕೆ ಇತ್ಲಾಗೆ ಬರ್ತಾ ಅವ್ನೆ ನಮ್ಮೂರ ದಾರಿ ಹಿಡಿದು, ಯಾಕೆ ಬತ್ತಾ ಅವನೆ? ಕೇಳಾನ ನಡೀರಿ" ಅಂತ ಇವರೇಳು ಜನ ಸಿಹಿನೀರು ಬಾವಿತಾಕೆ ಕೊಡಪಾನ ಮಡಗಿಬಿಟ್ಟು ಏಳುಜನ ಓಡಿಹೋಗಿ ಜುಂಜಪ್ಪಗೆ ಅಡ್ಡ ಆಗಿಬಿಟ್ಟರು.

"ಮಾವಾ" ಅಂದರು.

"ಯಾಕ್ರಮ್ಮಾ"

"ಏನ್ ಸ್ವಾಮಿ, ನಮ್ಮ ತಂದೆಯವರಿಗೂ ನಿನಗೂ ಬೇಕಾದಷ್ಟು ಎಗನೆಷ್ಟ ಪಾರ್ಟಿ ಇದ್ದರೂ ಮುಂದಲ ಊರುನಿಂದಂತೆ ಹಿಂದಲ ನೀರು ನಿಂದಂತೆ ಹರಿಹಾಯೋ ನೀರು ನಿಂದಂತೆ ಬೆಳೆಯೋ ಹುಲ್ಲು ನಿಂದಂತೆ. ದೇಶದ ಮೇಲಿರೋ ಕಾವಲುಗಳೆಲ್ಲಾ ನಿಂದಂತೆ ಇವತ್ತು ಯಾತಕ್ಕಾಗಿ ನಮ್ಮ ಅಪ್ಪದೀರಿಗೂ ನಿನಗೂ ಇಷ್ಟುಂದು ಎಗೆನಷ್ಟ. ಅಷ್ಟು ಬೇಜಾರಿತ್ತಲ್ಲ ಇವತ್ತು ಪಟ್ಟೆ ದಟ್ಟಿಯೋನೇ ಯಾಕೆ ಇವತ್ತು ನಮ್ಮೂರ ದಾರಿಯಾಗೆ ಬರ್ತಾ ಇದೀಯಾ. ದೊಡ್ಡೋನು ಜುಂಜಪ್ಪ ಯಾಕಾಗಿ ಬರ್ತಾ ಇದೀಯಾ?" ಅಂತ ಆ ಹೆಣ್ಣುಮಕ್ಕಳು ಕೇಳಿದರು.

ಹಿರೇಮನುಷ್ಯರು ಹೇಳಿದ ಮಾತಿಗೆ ಧರ್ಮದ ಧಾರೆ ಎಳೆದು ಕನ್ಯಾದಾನ ಮಾಡಿ ಮನೆ ಮಗಳನ್ನು ಗಂಡಗೆ ಹೆಂಡತಿ ಮಾಡಿ ಹೆಂಡತಿಗೆ ಗಂಡನ ಮಾಡುತೀವಿ ನಿನ್ನ ಮಗನ್ನ ಕಳಿಸಿ ಕೊಡೇ ಚೆನ್ನಮ್ಮ ನಿನ್ನ ಹಿರೇ ಮಗನ್ನ ಅಂತ ಅವಳ ಅಣ್ಣದೀರು ಅಂದರೆ ನಿಮ್ಮ ಅಪ್ಪದೀರು ಬರಕ್ಕೆ ಹೇಳಿದ್ದರಂತೆ. ಅದಕ್ಕಾಗಿ ಬಂದಿದ್ದೀನಿ ಕಣ್ರಮ್ಮಾ. ಸೊಸೆ ಮುದ್ದುಗಳಾ ಅದಕ್ಕಾಗಿ ಬಂದಿದ್ದೀನಿ."

"ಸ್ವಾಮೀ ನಾವು ಏಳುಜನ ಹೆಣ್ಣುಮಕ್ಕಳು ಮೈ ನೆರೆದು ಋತುಮತಿ ಆಗಿಲ್ಲ. ನಮಗಿನ್ನೂ ಮದುವೆ ಕಾಲ ಕೂಡಿ ಬಂದಿಲ್ಲ. ನಿನ್ನೆಯಾಕೆ ಕರುದಾರೋ ನಮ್ಗೆ ತಿಳಿಯಾಕಿಲ್ಲ" ಅಂದ್ರು.

ಜುಂಜಪ್ಪಗೆ ನಡೆಯೋದೆಲ್ಲಾ ಗೊತ್ತಾಗಿ ಹೋಯ್ತು. "ಸೂರ್ಯ ಚಂದ್ರ ನಕ್ಷತ್ರ ಸಾಕ್ಷಿಯಾಗಿ ಮುಂದೆ ನಡೆಯೋದು ನಡೆದು ಹೋಗುತ್ತೆ. ಕಂಬೇರ ವಂಶದ ಗಬ್ಬದ ಪಿಂಡಗಳೂ ನಡುಗಿ ಹೋಗುವ ಕಾಲ ಬಂದು ಬಿಡ್ತು" ಅಂತ ಅಂದುಕೊಂಡರೂ

"ಸೊಸೆದೀರಾ ಮಾವಾ ನನ್ನ ಕರುದಾಗ ಬರದಿರೋದು ಧರ್ಮ ಅಲ್ಲ ಅಂತ ಬಂದೀನಿ, ಮುಂದಿನ ಕರ್ಮ ನಿಮ್ಮ ಅಪ್ಪಗಳದೇ ಹೊರತೂ ನನದಲ್ಲ" ಅಂದ.

"ಸ್ವಾಮಿ ನಾವು ಏಳು ಜನ ಹೆಣ್ಣುಮಕ್ಕಳು ಮೈನೆರೆದು ಆಗಿಲ್ಲ. ನಮ್ಮನ್ನ ಏಳು ಊರಿನವರು ನೋಡಕ್ಕೆ ಅಂತ ಬಂದಿಲ್ಲ. ಆದರೆ ಮಡುವಿನ ನೀರು ನಿಂದಂತೆ ಬೆಳೆಯೋ ಹುಲ್ಲು ನಿನ್ನದಂತೆ. ಚೇಳೂರು ಕಾವಲಿನಾಗಿ ನೀನೇ ಮುಂದಂತೆ, ದೇಶದ ಮ್ಯಾಗಳ ಕಾವಲು ಕಾವಲೆಲ್ಲ ನಿಂದೇ ಅಂತೆ. ಅದಕ್ಕಾಗಿ ಕುಂಬಾರನಿಗೆ ಎತ್ತಿ ಕಟ್ಟವ್ರೆ. ಏಳು ಏಳು ಪದರ ಹದಿನಾಲ್ಕು ಪದರ ಒಂದೇ ಸೋರ್ಯಾಗೆ ಮಡಿಸವ್ರೆ ಬಾಳೆಲೆ ಜುಂಜಪ್ಪ. ಊರಾಗೆಲ್ಲಾ ಕಂಬೇರ ಗೊಲ್ಲರ ಹೆಣ್ಣುಮಕ್ಕಳಿಗೆಲ್ಲ ಮದುವೆ ಅಂತ ಟಾಂ ಟಾಂ ಹೊಡಿಸವ್ರೆ. ಬಂದ ಜನಕ್ಕೆಲ್ಲಾ ಪಾಯಸವ ಅಡಿಗೆ ಊಟಾ ಮಾಡಿಸವ್ರೆ ಜುಂಜಪ್ಪ. ಆದರೆ ಅವರು ನಮಗೆ ಮದುವೆ ಮಾಡಕ್ಕೆ ಹೊರಟಿಲ್ಲ. ನಿನಗೆ ದೊಡ್ಡ ಮದುವೆ ಮಾಡಲಿಕ್ಕೆ ಅಂತ ಉರಿಮದ್ದು ಮಾಡಿ ಇಟ್ಟವರಲ್ಲೋ ನಿನ್ನ ಮಾವಗಳು."

ಇವತ್ತಿನ ದಿನದಾಗೆ ಮುಂದಕ್ಕೆ ಇಟ್ಟಿರೋ ಹೆಜ್ಜೆ ಹಿಂದಕ್ಕೆ ಇಕ್ಕೋರ ಮಗ ನಾನಲ್ಲ. ಇವತ್ತಿನ ದಿನದಾಗೆ ನಿಮ್ಮ ತಂದೆಯವರಿಂದ ನಾನೇ ಮಡಿಯಬಹುದು. ಎಲ್ಲಾನೂ ಚಿತ್ರದೇವರು ನನಗೆ ಹೇಳವ್ರೆ. ನಾನು ಹೆದರೋ ಮಗನಲ್ಲ.

ಹಾಗೇನೇ ನುಡಿದವನೇ ಎಡದಾಗೆ ತಿರುಗವನೋ
ಮಾಳವ್ವನ ಗುಡಿಯ ಮುಂದೆ ಧೂಪದ ಮರವನ್ನೇ
ಒರಗವನೋ
ರೆಂಬೇನೇ ಅಲುಗಾಡಿ ಭೂಮಂಡಲನೇ ತಿರುಗೋ ಹಾಗೇನೇ
ಮಾಳವ್ವನ ಗುಡಿಮುಂದೆ ಗಂಧದ ಮರ ಒರಗವನೋ

"ನಾವು ಏಳು ಜನ ಹೆಣ್ಣುಮಕ್ಕಳೂ ಇನ್ನೂ ಹೆಣ್ಣಾಗಿಲ್ಲ. ನಾವು ಹೆಣ್ಣಾದ ದಿನ ನಿನಗೊಂದು ಆಳು ಹೇಳಿ ಕಳುಹಿಸುತ್ತೀವಿ. ನಿನ್ನ ಮದುವೆಯಾಗ್ತೀವಿ. ನಿನಗೆ

ನಿನ್ನ ಸೋದರ ಮಾವುಗಳು ಅಂದರೆ ನಮ್ಮ ಅಪ್ಪಗಳು ಅನ್ಯಾಯವಾಗಿ ನಿನಗೆ ಮದ್ದು ಇಕ್ಕಿ ಅನ್ಯಾಯವಾಗಿ ಸಾಯಿಸಿಬಿಡ್ತಾರೆ ಸ್ವಾಮಿ. ಅದಕ್ಕೆ ದಯವಿಟ್ಟು ನೀನಿವತ್ತು ನಮ್ಮೂರಿಗೆ ಬರಬ್ಯಾಡಾ ಜುಂಜಪ್ಪ" ಅಂದರು.

"ಅಮ್ಮಾ ಹೆಂಗಸಿನ ಮಾತು, ಎರಡು ತಲೆ ಮೃತ್ಯು. ಅವರ ಮಾತು ಕೇಳುವವರ ಮಗನಲ್ಲ. ನಮ್ಮ ತಾಯಿ ವಾಕ್ಯ ತೊಗೊಂಡು ಬಂದಿದೀನಿ, ನಮ್ಮ ಗುರು ಶಿವ ಚಿತ್ರಲಿಂಗ ಹೇಳವ್ನೆ. ನಮ್ಮ ಮಾರಣ್ಣ ಮೈಲಣ್ಣ ಅವರನ್ನ ಮಾತ್ರ ಇಬ್ಬರು ಹೋಗಿ ಮದುವೆ ಆಗ್ರಿ. ನಾನು ನಿಮಗೆ ಗಂಡ ಅಲ್ಲ. ನೀವು ನನಗೆ ಹೆಂಡತೀರು ಅಲ್ಲ. ನೀವು ನಿಜವಾಗಿ ನನಗೆ ತಾಯದೀರು ಆಗಬೇಕು ಕಣ್ರಮ್ಮಾ. ಇಷ್ಟು ಬುದ್ಧಿ ಮಾತು ನೀವು ನನಗೆ ಹೇಳಬೇಕಾಗಿದ್ರೆ ಆ ದುರ್ಮಾರ್ಗಿಕರ ಹೊಟ್ಟೆ ಕಿಚ್ಚು ನೋಡಿ ಹೇಳಿದೀರ. ನಿಮಗೆ ಒಳ್ಳೇದಾಗಲಿ" ಅಂದು ಅವರ ಮಾತು ಕೇಳದೆ ಮುಂದಕ್ಕೆ ಮೂರು ಹೆಜ್ಜೆ ಹಾಕಿದ.

ಬಸಿರೋರು, ಬಾಣಂತಿಯೋರು, ಮಕ್ಕಳೋರು ಬೇಕಾದಷ್ಟು ಜನ ಇದಾರೆ ಅವರೆಲ್ಲಾ ಜುಂಜಪ್ಪನ್ನ ಒಪ್ಪಿಸಿ ನಮ್ಮ ಹಟ್ಟಿಗೆ ಕರಕೊಂಡು ಹೋಗಾನ ನಡೀರಲೆ ಅಂತ ಹಣ್ಣುಕಾಯಿ ತೊಗೊಂಡು ಮೂಡಲ ಉದಿಯಾಗಿ ಕಾದುನಿಂತು ಬಿಟ್ಟರು.

ಏಳುಜನ ಕಂಬೇರಗೊಲ್ಲರು ಸಾಲು ಬೇವಿನ ಮರ ನಿಂತ ಹಾಗೆ ನಿಂತುಕೊಂಡು ಚಿನ್ನಮ್ಮನ ಮಗ ಬರ್ತಾನೋ ಇಲ್ಲವೋ ನೋಡ್ತಾ ಇದ್ದರಂತೆ. ಅವರು ನಿಂತು ನೋಡ್ತಾ ಇದ್ದ ಹಾಗೆ ಅವರು ಹೇಳಿದ್ರಲ್ಲಾ ಮದುವೆ ಮಾಡಿ ಕಳುಹಿಸುತ್ತೇವೆ ಅಂತ. ಇವನು ಬರ್ತಾ ಇದಾನೆ. ಕೋರೆ ರುಮಾಲು ಪಟ್ಟೆದಟ್ಟಿ, ಎಲ್ಲಾ ಕಡೆ ಆಯುಧ ಮುಸ್ತಾಫ, ಇವನು ಹೋಗೋ ಜರಬ್ಯಾಗೆ ಅವನಿಗೆ ಎಲ್ಲಾ ಕಾಣೋದಂತೆ, ಎಲ್ಲಾ ಹೇಳಿಬಿಟ್ಟವನೆ ಚಿತ್ರಲಿಂಗ. ಮನೆ ದೇವರು ಚಿತ್ತಯ್ಯ. ಏಳು ಜನ ಮಾವದೀರು ಕರೆ ಕಂಬಳಿ ಜಾಡಿ ಹಾಕಿಕೊಂಡು ಮಾವದೀರು ಏಳು ಜನ "ಜುಂಜಪ್ಪ" ಅಂದರು.

"ಯಾಕ್ರೀ ಮಾವ?" ಅಂದ.

"ಈ ಕರಿ ಕಂಬಳಿ ಜಾಡಿ ಹಾಕಿ ಎತ್ತಿನ ಗೂಡಿನಾಗೆ ಉತ್ತರ ಪೂಜೆ ಮಾಡಬೇಕು ನೀನು. ಈ ಎರಡೂ ಪೂಜೆ ಮಾಡಿಕೊಂಡು ಬರಬೇಕು. ಬಸಿರಿಯೋರು, ಬಾಣಂತಿಯೋರು, ಮಕ್ಕಳಿರೋರು ಭಾಳ ಜನ ಇದಾರೆ. ನಮ್ಮ ಹಟ್ಟಿಯಾಗೆ ಜುಂಜಪ್ಪ ನೀನು ಹುತ್ತದ ಪೂಜೆ ಮಾಡ್ತೋಕೆ ರೆಡಿಯಾಗೋ." ಆವಿನ ಗೂಡೀಲಿ ಎತ್ತಿನ ಪೂಜೆಗಳ ಜುಂಜಪ್ಪ ಮಾಡವನಲ್ಲೋ, ಅರಘಳಿಗೆಯಲ್ಲಿ ಪೂಜೆ ಮಾಡವ್ನೋ, ಎರಡೂ ಪೂಜೆ ಮುಗಿಸಿಕೊಂಡು ಮೂಡಲ ಉದಿಯಿಂದ ಜೂಲುನಾಯಿ ಹಿಡಕೊಂಡು ಕಂಬೇರಗೊಲ್ಲರ ಹಟ್ಟಿಯಾಗಿನ ದೊಡ್ಡಚಿನ್ನೇಗೌಡನ ಮನೆಕಡೆ ಹೋಗ್ತಾನೆ. ದೊಡ್ಡ ಮದುವೆ ಮನೆಗಿಂತ ದೊಡ್ಡ ಚಪ್ಪರದಡಿಯಾಗೆ ತೊಡೆಮೇಲೆ ಜೂಲುನಾಯಿ ಮಲಗಿಸಿಕೊಂಡು ಚಕ್ಕರಮಕ್ಕಳ ಕಾಲು ಹಾಕಿಕೊಂಡು ಕರೆಕಂಬಳಿ ಮೇಲೆ ಕುಂತ ಜುಂಜಪ್ಪ. ಆ ಕರೆ ಕಂಬಳಿ ಸುತ್ತ ಇವತ್ತಿನ ದಿನಾ ಸುತ್ತಾ ಮೂರು ಹಳ್ಳಿ ಜನಾ

ಊಟಕ್ಕೆ ಬರಬೇಕು ಅಂತ ಟಾಂಟಾಂ ಹೊಡಿಸಿದ್ದರಲ್ಲ, ಬಂದ ಜನಕ್ಕೆಲ್ಲಾ ಮೂರುಮೂರು ಫರ್ಲಾಂಗ್ ಕೂಡಿಸಿ ಬಿಟ್ಟಿದ್ದಾರೆ ಕಂಬೇರ ಗೊಲ್ಲರು. ಮೂವತ್ತು ಮೂರು ಹಳ್ಳಿ ಜನಕ್ಕೆಲ್ಲಾ ಕೂಡಿಸಿದಲ್ಲಿ ಕಂಬೇರಗೊಲ್ಲರು ನಡಕೊಂಡು ಬರ್ತಾ ಇದಾರೆ. ಕರೆ ಕಂಬಳಿ ಜಾಡಿ ಹಾಕಿದಲ್ಲಿ ಜುಂಜಪ್ಪ ಚಪ್ಪರದಡಿಯಾಗೆ ಕುಂತು ಬಿಟ್ಟ. ಹ್ಞಾಂ, ಎಲ್ಲಾ ಪಂಕ್ತಿ ಕುಂತಾತು, ಬಡಿಸಬೇಕು, ಉಣ್ಣಾಕೆ. ಎಲ್ಲಾ ಊಟ ಮಾಡ್ರಯ್ಯ ಅಂತ ಕಂಬೇರ ಗೊಲ್ಲರು ಎಲ್ಲಾ ಪ್ರಜೆಗಳಿಗೂ ಹೇಳ್ತಾ ಇದಾರೆ. ಆ ಘಳಿಗೆಯಾಗೇನೇ ಆ ಪ್ರಜೆಯೆಲ್ಲಾ ಈ ಜುಂಜಪ್ಪನ್ನ ನೋಡಿಬಿಟ್ಟರು.

ಎಂಜಲು ಮುಸುರೆ ಆಗಲ್ಲ ನಿನಗೆ. ಅಂಟು ಮಂಟು ಆಗಲ್ಲ,
ಸೂತಕ ವೃದ್ಧಿ ಆಗಲ್ಲ
ಮುಂದಾಗಿ ಮೂರು ತುತ್ತು ನೀನು ಮುಂದಾಗಿನದು ಆಗಿ ಬಿಟ್ಟರೆ
ಆಮೇಲೆ ನಾವೆಲ್ಲಾ
ಅಗತ್ಯವಾಗಿ ಆ ಮೇಲೆ ಊಟಾ ಮಾಡ್ತೀವಿ ಅಂತ ಪ್ರಜೆಯೆಲ್ಲಾ
ಜುಂಜಪ್ಪಗೆ ಕೈ ಮುಗಿದಿದ್ದಾರೆ.

"ಅಯ್ಯ, ಕಂಬೇರ ಗೊಲ್ಲರ, ಬಂದಿರೋರು ಯಾರಿಗೂ ಪರಸ್ಥಳದಾಗೆ ಬಲುಕಷ್ಟ. ಆದ್ದರಿಂದ ನೀವೆಲ್ಲಾ ಮೊದಲು ಊಟಮಾಡ್ರಿ, ನಿಮ್ಮೆಲ್ಲರದೂ ಆದಮೇಲೆ ನಾನು ಊಟಮಾಡ್ತೀನಿ." ಅಂತ ಹೇಳಿದ ಸ್ವಾಮಿ. ಆಗ ಅವರೆಲ್ಲ ಊಟಾ ಮಾಡಿದ್ರು.

ಸ್ವಾಮಿಗೆ ಕರೆಕಂಬಳಿ ಸಿಂಹಾಸನ ಜಾಡಿ ಹಾಕಿಸಿಬಿಟ್ಟು ಆಗ "ಮಾವದೀರ" ಅಂದ.

"ಯಾಕಪ್ಪಾ"

"ನನಗೂ ಈಗ ಹೊಟ್ಟೆ ಹಸಿವಾಗಿದೆ. ನನಗೂ ಏನುಮಾಡಿದೀರೋ ಅದನ್ನೇ ಇಡ್ರಿ ಮಾವಾ, ಅಂದ."

ನೆಲಸಾರಿಸಿ, ಬಾಳೆ ಎಲೆ ಇಡಿಸಿ, ರಂಗೋಲೆ ಪುಡಿ, ಹಾಕಿಸಿ ತುಪ್ಪ ಬಡಿಸಿ ಒಂದು ಬೇರೆ ಜಾಗದಾಗೆ ಇವನಿಗೇಂತ ಒಂದು ವ್ಯವಸ್ಥೆ ಮಾಡಿದ್ರು, ಇವನಿಗೆ ಎಂಜಲು ಮುಸುರೆ ಆಗಲ್ಲ ಅಂತ. ಈಗ "ನನಗೆ ಅಂತ ಬ್ಯಾರೆ ಜಾಗದಾಗೆ ಊಟಮಾಡಿದ್ರೆ ನಾಕು ಜನದಾಗೆ ಭೇದ ಮಾಡಿದ ಹಾಗೆ ಆಗುತ್ತೆ. ಅದಕ್ಕೆ ನಾನು ಇಲ್ಲೇ ಊಟಾ ಮಾಡ್ತೀನಿ ಮಾವದೀರ. ನಾನು ಒಬ್ನೇ ಬಂದಿದೀನಿ ಊಟಕ್ಕೆ ಈ ಪ್ರಜೆಗೆ ನಾನು ಅನ್ಯಾಯ ಮಾಡಿ ಬೇರೆ ಕುಂತು ಊಟ ಮಾಡೋರ ಮಗನಲ್ಲ. ನಾನು ಹತ್ತಾರು ಜನ ಊಟ ಮಾಡ್ತಿರೋ ಅಲ್ಲೇ ನಾನೂ ಊಟಾ ಮಾಡಬೇಕು. ತರ್ರಿ ಇಲ್ಲೇ, ನೀವ್ಯಾರೂ ಅನುಮಾನ ತಿಳುಕೋಬ್ಯಾಡ್ರಿ" ಅಂತಾನಲ್ಲ.

"ನಾವು ಏಸು ಕರೆದ್ರೂ ಈ ಕಂಬೇರ ಚಿನ್ನಿ ಮಗ ಬರದಿಲ್ಲ ಅಂತಾ ಇದಾನಲ್ಲ, ನಾವು ಚಿಕ್ಕ ಮನೆಯಾಗೆ ಕರಕೊಂಡು ಹೋಗಿ ಉರಿಯೋ ಮದ್ದು ಇಕ್ಕಬೇಕು ಅಂತ ಕರದ್ರೆ ಇವನು ಬರೋದಿಲ್ಲ ಅಂತ ಇದಾನಲ್ಲಾ ಅಂತ. ಇವನು ಸಾಮಾನ್ಯದೋನಲ್ಲ. ಇವನಿಗೆ ನಾವು ಮದ್ದು ಇಕ್ಕೋಕೆ ಆಗೋದಿಲ್ಲ. ಮತ್ತೆ ಯಾರು ತಂದು ಮದ್ದು ಇಕ್ಕಬೇಕು ಇವನಿಗೆ." ಏಳುಜನದಾಗೆ ಜುಂಜಪ್ಪನ ತಂಗಿ ಮಾರಕ್ಕನನ್ನ ಕಡೆ ಹುಟ್ಟಿನ ಕಟ್ಟಾಣಿಗೆ ತಂದಿದೀವಲ್ಲಾ ಆಕೆ ಕೈಯಲ್ಲಿ ಮದ್ದು ಇಕ್ಕಿಸಿದರೆ ಅಣ್ಣನ ಕೊಂದಿರೋ ದೋಷ ಆ ತಂಗೀಗೆ ಹೋಗಲಿ," ಅಂದರು ಅಣ್ಣದೀರು.

"ಜುಂಜಪ್ಪಗೆ ಇಕ್ಕಿದ ಮದ್ದಿನ ದೋಷ, ಅವರಿಗೆ ಇಕ್ಕಿದ ಮದ್ದಿನ ದೋಷಾನ ಅವರ ತಂಗಿ ಮಾರಕ್ಕನೆ ಹೊತ್ತುಕೊಂಡು ಹೋಗಲಿ. ಅವರಣ್ಣ ಜುಂಜಪ್ಪಗೆ ಅವನ ತಂಗಿ ಮಾರಕ್ಕನೇ ಮದ್ದು ಇಕ್ಕಿ ಬಿಡಲಿ" ಅಂತ ಮಾತಾಡ್ತಾ ಅವ್ರೆ.

"ಮಾರಕ್ಕ" ಅಂತ ಕರೆದ್ರು.

"ಯಾಕ್ರ ಮಾವಾ?"

"ಬಾರೇ ನಿಮ್ಮ ಅಣ್ಣ ನೋಡು ಅಪರೂಪಕ್ಕೆ ಬಂದವನೆ. ಕೈಕಾಲು ಮುಖ ತೊಳೆದು ಪಾದ ಪೂಜೆ ಮಾಡಿ ವಿಭೂತಿ ಪಟ್ಟೆ ಹಾಕಿ ತೊಗೊಂಡು ಹೋಗಿ ತಿನ್ನೋಕೆ ಇಕ್ಕು ಬಾರೆ" ಅಂತ ಮಾರಕ್ಕಗೆ ಹೇಳಿದರು ಮಾವದೀರು.

"ನೀವೇ ಇಕ್ಕಿದರೂ ಬ್ಯಾರಲ್ಲೋ ನಾನಿಕ್ಕಿದರೂ ಬ್ಯಾರಲ್ಲೋ
ಇಕ್ಕೋ ಮಾವಗಳ ಭಾವಮೈದಾಗೊಂದು ಹಿಡಿ ಊಟಾ"
ಅಂದಳು ಮಾರಕ್ಕ.

"ಎದುರುನಿಂತು ಮಾತಾಡಬಾರದು ತೊಗೊಂಡು ಹೋಗಿ ಇಡಬೇಕು ಕಣಲೇ ಮಾರಿ" ಅಂದರು.

ಆಗ ಆಕಾಶವಾಣಿ ಆಯ್ತು. ಸೂರ್ಯ ಚಂದ್ರ ನಕ್ಷತ್ರ ಪಾರ್ವತಿ ಎಲ್ಲಾ ನೀವೇ ಸಾಕ್ಷಿ. ನಾನು ಇಡ್ತೀನಿ ಅಂತ ಹೇಳಿ ನೆಲದಲ್ಲಿ ತಣ್ಣಗೆ ಹರಡಿದಳು.

ಆವಿನ ಗೂಡಿನ ಮೊದಲಿನ ಪೂಜೆ ನಿಮದಲ್ಲೋ ದೇವರ ಪೂಜೆಯಿಂದ ಚಿನ್ನಮ್ಮ ಸೋದರಳಿಯನ ಕಳಿಸಮ್ಮಾ ಅಂತ ಅವರು ಹೇಳ್ತಾರೆ .

ಇವನು ಹೇಳ್ತಾನೆ ಕೊನೆಯಾದ ಹಾಲಾಗೆ ಉಕ್ಕುಕ್ಕಿ ಹರಿದಾವೋ ಉರಿಮದ್ದು ಕೆಟ್ಟ ದತ್ತೂರಿ ಉರಿಮದ್ದು ಚಿನ್ನಮ್ಮಾನ ಪುತ್ರಗೆ ಮಾಡಿ ಮಡಗವ್ರೆ ಕಂಬೇರು ಅಂತ ಇವನು ಹೇಳಿಕೊಂಡು ಹೋಗ್ತಾ ಇದಾನೆ.

ಜುಂಜಪ್ಪ ಹೊರಟವನೋ ಆಗಲೇ
ದತ್ತೂರಿ ಉರಿಮದ್ದು ಹಾಕುತ್ತ

ಚಿನ್ನಮನೆ ಬಾಲಾಗೆ ಮಾಡ್ಯಾರೋ ಉರಿಮದ್ದು.

ಚಿಕ್ಕಮ್ಮನೇ ಮಾಡ್ಯಾಗೆ, ಉಜ್ಜುಜ್ಜಿ ಉರಿಮದ್ದು

ದೊಡ್ಡಮ್ಮ ಮಾವದೀರು ಉಜ್ಜುಜ್ಜಿ ಉರಿಮದ್ದು ಮಾಡ್ಯಾರೋ

ಏನು ಬೇಕೋ ಎಲ್ಲಾ ಅನುಕೂಲಾನೂ ಎಲ್ಲಾ ಮಾಡಿಟ್ಟು ಬಿಟ್ಟರು. ಅಗ್ರದ ಎಲೆ ಹಾಕಿ ಹದಿನಾರು ಬಗೆ ಪಾಷಾಣ ತಂದರು ಕಂಬೇರ ಗೊಲ್ಲರು. ಹದಿನಾರು ಪದರದಾಗೆ ವಿಷ ಇಕ್ಕಿ "ತೊಗೊಂಡು ಹೋಗಿ ಇಡಲೇ ಮಾರಕ್ಕ ಅಲ್ಲಿ ಊಟಾನ" ಅಂತ ಇವರು ಹಟ್ಯಾ ಹೊರಗಿನ ಮನೆಗೆ ಹೊಂಟು ಬಿಟ್ಟರು. ಯಾರೂ ಕಂಬೇರಗೊಲ್ಲರು.

ಸಿದ್ದರು ಬರುತಾರೆಂದು ಎದ್ದು ನೋಡಲು ಬಂದೆ

ಸಿದ್ದರುನೇ ನಮ್ಮ ಕೈಗೆ ಸಿಗಲಿಲ್ಲೋ

ಅತ್ತಿಕೆರೆ ತೋಪೇ ಮರೆಯಾದೋ

ಪರಶಿವನ ಗ್ಯಾನ ಮಾಡುವಾಗ ದುಗ್ಗಾಲಿ ವನದಾಗೆ ನಿಂತು

ಸುರುವಾರುದ ಬಾಣ ಬಿಡುತಾನಲ್ಲೋ.

ಮಾರಕ್ಕನಿಗೆ ಕರೆದು ಊಟ ಬಡಿಸಿದ್ದು ಎದುರಿಟ್ಟು ಬಾಳೆಎಲೆ ಮುಚ್ಚಿ ಅವರು ಹೊಂಟೋಗಿಬಿಟ್ಟರು.

"ಮಾರಕ್ಕನ್ನ ಕರೀರಿ. ಅವನ ತಂಗಿ ಕೈಲಿ ಅವನಿಗೆ ಮದ್ದು ಇಕ್ಕಿಸೋನ." ಅಂತ ಈ ಕಂಬೇರ ಗೊಲ್ಲರು ಒಳಗಿನ ಮನೆಯಾಗೆ ಮಾತಾಡಿಕೋತಾ ಅವ್ರೆ. ಮಾರಕ್ಕ ಆಗಲೇ ಮಾತಾಡದೇ ನಿಂತವಳೆ. "ಬಾರೇ ನಿಮ್ಮ ಅಣ್ಣಗೆ ಇಕ್ಕು ಬಾರೆ. ಪಾದದ ಪೂಜೆ ಮಾಡಿ, ವಿಭೂತಿ ಪಟ್ಟೆ ಹಾಕಿ, ಊದು ಬತ್ತಿ ಹಚ್ಚಿ, ಇಡಬಾರೆ ಮಾರಕ್ಕ ನಿಮ್ಮ ಅಣ್ಣಗೆ ಎಡೆಯಾ" ಅಂತ ಕರೆದ್ರು ಕಂಬೇರಗೊಲ್ಲರು. ಆಕಿಗೆಲ್ಲಾ ಗೊತ್ತು. ಮೂರು ರಾತ್ರಿ ಕಣ್ಣಿಗೆ ಎಣ್ಣೆ ಬಿಟುಕೊಂಡು ಮದ್ದು ಕುಟ್ಟಿದ್ದರಂತೆ, ಅರೆದಿದ್ದರಂತೆ ಕಂಬೇರ ಗೊಲ್ಲರು. ಆ ಮದ್ದನ್ನ ಮಾರಕ್ಕ ಇಕ್ಕಬೇಕು.

"ನಾನಿಕ್ಕಲಾರೆ ಉರಿಮದ್ದು" ಅಂದಳು ಮಾರಕ್ಕ

"ಏ ಮಾರಿ ಇಕ್ಕ ಬಾ ನಿಮ್ಮಣ್ಣಗೆ" ಅಂದರು.

ಆಗ ದತ್ತೂರಿ ಬೀಜದ ಉರಿಮದ್ದು ತುಂಬಿಟ್ಟು

'ಇಕ್ಕಾಲಾರೆನಾ ಉರಿಮದ್ದು' ಅಂತಾಳೆ ಮಾರಕ್ಕ.

'ಜುಂಜಪ್ಪ ನಿನಗೆ ನಾನು ಅನ್ನ ಇಕ್ತಾ ಇಲ್ಲ. ನನ್ನ ಮಾವದೀರು ನನ್ನ ಕೈಲಿ ನಿನಗೆ ಉರಿಮದ್ದು ಇಕ್ಕಸ್ತಾರೆ ಆ ಪಾರ್ವತಿ ಈಶ್ವರ ಎಲ್ಲಾ ದೇವರುಗಳ ಆಣೆ ನಾನು ಏನು ಮಾಡಲಿ.'

ಎದ್ದು ನೆನೆದೇವಲ್ಲೋ ಸಿದ್ಧ ಶಿವಯೋಗಿಯಾ,
ಬುದ್ದಿಯಾಗಿರುವ ಭೈರನ ನೆನೆದೇವೋ
ಇದ್ದ ಪಾಪಗಳೇ ಪರಿಹಾರೋ

ಅಲ್ಲಿ ಮಾರಕ್ಕನ್ನ ಮುಂದಿಟ್ಟುಕೊಂಡು ಮಾವದೀರು ಅಡುಗೆ ಎಲ್ಲಾ ಮಾಡಿಬಿಟ್ಟರು. ಬಗೆ ಬಗೆಯ ಭಕ್ಷ್ಯ ಮಾಡಿ ರುಚಿರುಚಿಯಾದ ಅಡುಗೆ ಮಾಡಿ ಊರ ಮಂದೀನೆಲ್ಲಾ ಊಟಕ್ಕೆ ಕರೆದ್ರು.

ಸೋದರ ಅಳೀಮಯ್ಯ ಅಪರೂಪಕ್ಕೆ ಬಂದಾನೆ ಅವನಿಗೆ ಬಾಳೆಎಲೆ ಎಡೆ ಇಡುತೀವಿ ಮಾರಕ್ಕಾ ಅಂದರು. ಅವನಿಗೆ ಸಿದ್ಧ ಮಾಡೀವಿ ಅಳಿಯೂಟ ಅಂತ ಬಾಳೆಲೆ ತೋರ್ಸಿದರು. ಮಾರಕ್ಕ ಆ ಕಡೆ ಹೋದ ಕೂಡಲೆ ಎಡೆಹಾಕೋಕೆ ಅಂತ ಒಂದು ಬಾಳೆಲೆ ತುಂಬ ಮಾಡಿದ ಅಡುಗೆನೆಲ್ಲಾ ಇಕ್ಕಿ ಮ್ಯಾಲಕೊಂದು ಬಾಳೆ ಎಲೆ ಮುಚ್ಚಿ ಎಡೆಹಾಕಿದ ಎಲೆ ಮೇಲೆ ಏಳೇಳು ಹದಿನಾಲ್ಕು ಪದರಗಳು ಪಾಷಾಣ ಸುರಿದು ಮ್ಯಾಲೆಕೊಂದು ಎಲೆ ಮುಚ್ಚಿ ಅವರು ಹೊರಟ್ಹೋಗಿ ಬಿಟ್ಟರು. ತೊಗೊಂಡ್ಹೋಗಿ ಇಡ್ಹೋಗಮ್ಮ ನಿಮ್ಮಣ್ಣಗೆ ಬಾನಾ ಅಂತ. ಮೂರು ಸುತ್ತು ಪ್ರದಕ್ಷಿಣೆ ಮಾಡಿಕೊಂಡು ಬಂದು ಒಳಕ್ಕೆ ಕೈ ತೂರಿಸಿ ಮೇಲಕ್ಕೆ ಎತ್ತುವಾತ್ಗೆ ಮ್ಯಾಲಕ್ಕೆ ಇಟ್ಟಿದ್ದ ಎಲೆ ಉರಿದು ಬೂದಿ ಯಾಗಿ ದೇವಲೋಕಕ್ಕೆ ಹೊಗೆಯಾಗಿ ಬಿಡ್ತಂತೆ ಧೂಪದ ಹೊಗೆ ಹೋದ್ಹಂಗೆ. "ಅಣ್ಣಾ" ಅಂದಳು. "ಯಾಕಮ್ಮಾ?

"ಮ್ಯಾಲಕ್ಕೆ ಮುಚ್ಚಿದ್ದ ಎಲೆ ದ್ಯಾವಲೋಕಕ್ಕೆ ಧೂಪದ ಹೊಗೆ ಹೋದಂಗೆ ಹೋಗ್ತಾ ಇದೆ. ಜುಂಜಪ್ಪ ಈ ನಡುವಾಗಿರೋ ಎಲೆ ಒಂದೇ ಉಳಿದಿರೋದು. ಈ ಎಲೆ ಹೆಂಗಣ್ಣಾ ತರೋದು, ಈ ಅಳಿಯ ಊಟ ಉಳಿದಿರೋದು ಈ ಎಲೆ ಹೆಂಗಣ್ಣಾ ತರೋದು ಈ ಅಳಿಯ ಊಟಾ" ಅಂತ ಕೇಳಿದಳು.

"ಅಮ್ಮಾ, ಮಾಡಿದ ಅರಿವೆಗೆ ಮಡಿವಾಳಸಾಕ್ಷಿ, ತೋಡಿದ ಬಾವಿಗೆ ಜಲವೇ ಸಾಕ್ಷಿ ನೋಡಮ್ಮ, ಇವತ್ತಿನ ದಿನದಾಗೆ ಅವರು ಮಾಡಿರೋದು ಅವರ ಸೆರಗಿನಾಗಿ ಇರ್ಲಿ. ನೀನು ತಗೊಂಬಂದು ನನ್ನ ಮುಂದಕೆ ಇಟ್ಟು ಬಿಡು. ಈ ಪ್ರಜೆಗೆಲ್ಲಾ ತೋರ್ಪಡಣೆ ಮಾಡಿ ಆ ಊಟಾನಾ ನಾನು ಸೇವನೆ ಮಾಡ್ತೇನಿ."

ಅಣ್ಣಯ್ಯಾ ಬರಲಾರೆನೋ, ಅಣ್ಣಯ್ಯಾ ತರಲಾರೆನೋ
ಹಾಲ ಮರೆಯ ಬುಡ್ಡ ನಾನೆಂಗೆ ತರಲೋ ಹಿರಿಯಣ್ಣೋ
ಬರಬೇಕು ತಂಗ್ಯಮ್ಮ ಬಲಗಾಲ ಮುಂದಿಕ್ಕಿ ಸಾವ್ರಾಳು ಸಮಯಕ್ಕೆ
ಸಾಲಾ ಚಪ್ಪರದಡಿಯೆ ಇಡಬೇಕು ಮಾರಕ್ಕ ಅಳೀವೂಟ ನನಗೀಗ.

"ಮಾರಕ್ಕಾ, ಈ ಸಾಲು ಚಪ್ಪರದಡಿ ಸಾವಿರಾರು ಪ್ರಜೆ ಎದುರು ನಿನ್ನ ಗಂಡದೀರು ಇಟ್ಟಿರೋ ಅಳೀವೂಟ ನಾನು ಸೇವನೆ ಮಾಡಬೇಕು ಇವತ್ತು ನೀನು ತಂದು ನನ್ನ

ಮುಂದೆ ಮಡಗಿ ನನ್ನ ಕಣ್ಣಿಗೆ ಕಾಣದಾಂಗೆ ನೀನು ಹೋಗಿ ಬಿಡಮ್ಮ. ನಾನು ಸೇವಿಸ್ತೀನಿ ಆ ಅಳೀವೂಟಾನ.

ಅಂಜಬ್ಯಾಡ ಅಳಕಬ್ಯಾಡ,
ತಗ್ಗಬ್ಯಾಡ, ಬಗ್ಗಬ್ಯಾಡ
ಹೆದರಬ್ಯಾಡ ಬೆದರಬ್ಯಾಡ
ನಾಳೆ ನಾಗಲೋಕ ಭೂಮಿ ಭೂಲೋಕ,
ಗುರುವಿನ ದಯೆ ಒಂದಿದ್ರೆ ನಾನು ಗೆದಿತೀನಿ ನ್ಯಾಯಾನ
ಆದರೆ ಮಾಡಿದರಿವಿಗೆ ಮಡಿವಾಳ ಸಾಕ್ಷಿ ,ತೋಡಿದ ಬಾವಿಗೆ ಜಲವೇ ಸಾಕ್ಷಿ,
ಕಣ್ಣಿಗೆ ಕಾಣ್ದಂಗೆ ಆಚೆಗೆ ಹೊರಟೇ ಹೋಗಿ ಬಿಡಬೇಕು ನೀನು ಮಾರಕ್ಕಾ.

"ಇತ್ತ ನೋಡಿದರೆ ಅಣ್ಣಾ, ಅತ್ತ ನೋಡಿದರೆ ಗಂಡದೀರು. ಇವತ್ತಿನ ದಿನದಾಗೆ ಅವರಿಗೆ ಅಣ್ಣನಿಗೆ ಅಳೀವೂಟ ಇಡಲಿಲ್ಲ ಅಂತಹೇಳಿ ನಿನ್ನ ಏಳುಜನ ಮಾವದೀರು ಅಲ್ಲಿ ನಿಂತು ನೋಡ್ತಾ ಇದಾರೆ ಬಾಗಿಲಲ್ಲಿ. ಅವರೀಗೆ ನೀನು ಕೆಟ್ಟೋಳಾಗಬೇಡ. ಹುಟ್ಟಿ ಹನ್ನೆರಡು ಹದಿಮೂರು ವರುಷದ ತನಕವೇ ತವರು ಮನೆ ಆಸೆ ಹೆಣ್ಣುಮಕ್ಕಳಿಗೆ. ಇವತ್ತು ಅವರ ವಂಶಕ್ಕೆ ಕೊಟ್ಟಿದೀನಿ. ನಿನಗೆ ಧರ್ಮದ ಧಾರೆ ಎರೆದಿದ್ದೇನೆ. ಈಗ ಅವರ ಹೇಳಿಕೆ ಕೇಳಿಕೆ ಹಂಗೇ ಇರಬೇಕು ನೀನು. ನಮ್ಮ ತವರು ಮನೆ ಹೇಳಿಕೆ ಕೇಳಿಕೆ ಕೇಳ್ತೀನಿ ಅಂದ್ರೆ ಅಣ್ಣ ಅಪ್ಪ ಅಮ್ಮ ತಮ್ಮದೀರು ಅದು ಬೇಡಾ ನಿನಗೆ. ಇವತ್ತಿನ ದಿನದಾಗೆ ಅವರು ಹೇಳಿದಂಗೆ ಕೇಳ್ಕಂಡು ಇರಬೇಕು. ಅವರು ಹೇಳ್ದಂಗೆ ನಡೀಬೇಕು. ನನ್ನ ಮುಂದೆ ಮಡಗಿ ಕಣ್ಣೀಗೆ ಕಾಣದಂಗೆ ಹೋಗಿ ಬಿಡಮ್ಮ ನಾನು ಸೇವನೆ ಮಾಡ್ತೀನಿ" ಅಂದ ಜುಂಜಪ್ಪ.

ಆ ಊಟಾನಾ ತಂದು ಜುಂಜಪ್ಪನ ಮುಂದೆ ಮಡಗಿ ಬಿಟ್ಟಳು. ಕೋಣೆ ಬಾಗ್ಲಾಗೆ ಹೋಗಿ ತಲೆಮೇಲೆ ಸೆರಗು ಹಾಕ್ಕೊಂಡು ಶಿವ ಸೋಕ ಮಾಡಿಕೊಂಡು ನಿಂತಿದ್ಲು ಮಾರಕ್ಕ. ಆಗ ಪ್ರಜೆಗೆಲ್ಲಾ ಹೇಳಿದ

'ಏನ್ರಯ್ಯಾ, ನೀವೆಲ್ಲರೂ ಊಟ ಮಾಡ್ರಿ.' ಅಂದ.

ಅವ್ರು "ನೀನೂ ನಮ್ಮತಾವ ಕೂತು ಊಟಮಾಡು" ಅಂದ್ರು.

"ನನಗಿಟ್ಟಿದ್ದು ಅಳೀವೂಟ ನಿಮ್ಮೆಲ್ಲರಿಗೂ ಇಟ್ಟಿದ್ದು ಎಸ್ರು ಅನ್ನದ ಪಾಯಸ. ನಿಮ್ಮೆಲ್ಲರ ಸಮದಾಗೆ ಕೂತ್ಕಂಡು ಊಟಮಾಡಿ ಅಂದ್ರಲ್ಲಾ. ನಿಮ್ಮೆಲ್ಲಾರ ಸಮಾಂತರದಾಗೆ ನಡುವಾಗೆ ಕೂತ್ಕಂಡು ನಾವು ಊಟ ಮಾಡಿದ್ರೆ ಜುಂಜಪ್ಪ ಸತ್ತ ಅಂತಹೇಳಿ ನೀವೆಲ್ಲಾ ಮೂವತ್ತು ಮೂರು ಹಳ್ಳಿ ಹೆಣ್ಣು ಗಂಡೆಲ್ಲಾ ಉಣ್ಣೋ ಊಟಾ ಬಿಟ್ಟು ಮ್ಯಾಲಕೆದ್ದಿದ್ರೆ ಏಸು ಜನದ ಒಂದು ಹಗಲು ಊಟಾ ನಾನು ಕಿತ್ಕೊಂಡಹಾಗೆ ಆಗಾದು. ಎಷ್ಟು ಪಾಪಕ್ಕೆ ನಾನು ಗುರಿಯಾಗಬೇಕಾಗಿತ್ತು. ನಿಮ್ಮೆಲ್ಲರುದು ಆಗ್ಲಿ ಈ ಎಸರು ಅನ್ನದ ಊಟ ಅಂತ ನಿಮಗೆಲ್ಲಾ ನಾನು ಹೇಳಿಕೆ ಕೊಟ್ಟಿದ್ದೆ. ಈಗ ಮೂವತ್ಮೂರು ಹಳ್ಳಿ

ಅಕ್ಕತಂಗೀರಾ, ಅಣ್ಣ ತಮ್ಮದೀರಾ ನಿಮ್ಮೆಲ್ಲರ ಎದುರಿಗೆ ನಮ್ಮ ಮಾವದೀರು ಇಟ್ಟಿರೋ ಅಳೀವೂಟಾನ ಈಗ ನಾನು ಸೇವನೆ ಮಾಡ್ತೀನಪ್ಪಾ."

ಅಂತ ಪ್ರಜೆಗೆಲ್ಲಾ ಹೇಳ್ಬಿಟ್ಟು ಮೂರು ಮಿದುಕಿ ಬಿಟ್ಟು ಜೂಲು ನಾಯಿ ಹಿಡಕೊಂಬಂದಿದ್ನಲ್ಲಾ ಆ ಹುಡುಗನ ತಾಕೆ ಆ ಜೂಲು ನಾಯಿ ಬಾಯಿಗೆ ಒಂದು ತುತ್ತು ಒಯ್ದು ಕೊಟ್ಟ . ಒಂದು ತುತ್ತು ತಿಂದದ್ದೇ ತಡ ಮುಗಿಲಿಗೆ ಹಾರಿಕೊಂಡು ಬಂದು ಜುಂಜಪ್ಪನ ತೊಡೆ ಮ್ಯಾಗೆ ಬಿದ್ದು ಪ್ರಾಣ ಬಿಟ್ಟು ಬಿಡ್ತು ಆ ಜೂಲು ನಾಯಿ. ಸೊಂಟದಗಳ ಕವಣೆ ಬಿಟ್ಟ. ಆ ಕವಣೆಯಾಗೆ ಆ ನಾಯಿ ಮಡಗಿ ಹೊಸಹಳ್ಳಿ ಕೆರೆ ಹಿಂದಕೆ ಮೂರು ಫರ್ಲಾಂಗು ಆಚೆ ಬೀಳೋ ಹಾಂಗೆ ಎಸೆದ . ಕಂಬೇರ ಗೊಲ್ಲರ ಹಟ್ಟಿಗೂನೂ ಆ ನಾಯಿ ಬಿದ್ದಿರೋ ಜಾಗಕ್ಕೂನೂ ಮೂರು ಫರ್ಲಾಂಗು. ಹೊಸಹಳ್ಳಿ ಕೆರೆ ಹತ್ತರ ಆವಿನ ಚಿಕ್ಕಣ್ಣೋರ ಬದಿನಾಗೆ ಒಂದು ನಾಯಿಗುಡ್ಡೆ, ಜೂಲು ನಾಯಿ ಗುಡ್ಡೆ. ನಾಯಿ ಅಲ್ಲಿಗೆ ಬೀಸಿ ಬಿಟ್ಟು ಇಲ್ಲಿಂದ ಹೋಗೋರು ಒಂದು ಕಲ್ಲಾಕ್ರಿ. ಆಚಿಂದ ಬರೋವ್ರು ಒಂದು ಕಲ್ಲುಹಾಕಿ, ಮೂರಾಳು ಉದ್ದ ಬೆಳೀಲಿ ಆ ಜೂಲ್ನಾಯಿ ಗುಡ್ಡೆ ಅಂತ ಆಶೀರ್ವಾದ ಕೊಟ್ಟ. ಈಗ ಹೇಳ್ತಾನೆ:

ಮುಂದಾಲ ತುತ್ತು ಕೆಂದನಾಯಿಗ್ಹಾಕಿ
ನೋಡಿರಿ ಬಂಧುಗಳ ಪರಪಂಚ
ನೋಡಿರಿ ಬಂಧುಗಳ ಪರಪಂಚ
ಮಾಡಿದೋರಿಗೆ ಸತ್ತು ಏಳುದಿನಕೆ ಬರುತೀನಿ

"ನಾಯಿ ಯಾವತರ ಸಾಯ್ತೋ ನಾನೂ ಅದೇ ತರವಾಗಿ ಸಾಯಬೇಕಾಗಿದೆ. ತಂದೆಯಂದಿರ, ತಾಯಂದಿರ ಈ ನಾಯಿ ಪ್ರಾಣ ಕಳೆದು ನಾನು ಈ ನರಲೋಕದ ಮೇಲೆ ಇರೋ ಮಗನಲ್ಲ. ಈ ನಾರಾಯಣ ಮಾಡಿದ್ದು ನರರಿಗಲ್ಲವೇನಯ್ಯಾ, ಈ ಮೂರುಲೋಕ್ದಾಗಿರೋದು ನಾರಾಯಣ ಮಾಡಿದ್ದು ನರರಿಗೆ, ಈ ನಾರಾಯಣನ ಪ್ರಾಣ ತೆಗೆದು ಇರೋರ ಮಗನಲ್ಲ" ಅಂತ ಹೇಳಿದ ಆ ಘಳಿಗೆಗೆ ಪ್ರಜೆಗಳಿಗೆಲ್ಲಾ ತಿಳಿಸಿ ಜುಂಜಪ್ಪ ದೊಡ್ಡೋನು ಮಂಡಿಯೂರಿ ಬಗ್ಗಿದ ಪಾಷಾಣಕೆ.

ಹೇಳ್ತಾಳೆ ಮಾರಕ್ಕ

ಅಣ್ಣಾ ನೀ ಉಳಿದೀರೋ, ಅಣ್ಣಯ್ಯ ಉಳಿದೀರೋ
ಅಣ್ಣಯ್ಯ ಹಿರೇಜುಂಜ ಉಳಿದೀರೋ/
ಅಣ್ಣಯ್ಯ ಹಿರೇ ಜುಂಜ ಉಳಿದೀರೊ
ಹಾಲಾಗೆ ಕಂಬೇರು ಮದ್ದ ಬೆರೆಸವ್ರೆ

ಅಂದ್ಲು ಮಾರಕ್ಕ.

ತಂಗಿ ಬಿಡ್ತನ್ನು, ತಂಗವ್ವ ಬಿಡ್ತನ್ನು,
ತಂಗಿ ಮಾರಕ್ಕ ಬಿಡ್ತನ್ನು.

ತಂಗಿ ಮಾರಕ್ಕ ಬಿಡ್ತನ್ನು
ನಾನಿನ್ನ ನಾಗರ ಹಾವಿನ ವಿಷವ ಧರಿಸೇನು

ಅಂದ ಜುಂಜಪ್ಪ.

"ಮಾರಕ್ಕ ಈ ನಾಗರ ಹಾವಿನ ವಿಷಾನೇ ನಾ ಧರಿಸುತ್ತೀನಿ. ನೀನು ಕಣ್ಣೀರು ಹಾಕಬೇಡ. ಹೋಗೋನು ನಾನು ಒಬ್ನೇ ಹೋಗೋನು ಈ ರುದ್ರ ಭೂಮಿಯಾಗೆ. ಇನ್ನೂ ಇಬ್ರು ಅಣ್ಣದೀರು ನಿನಗೆ ಉಳಿದಾರೆ ಮಾರಣ್ಣ ಮೈಲಣ್ಣ. ನಿನ್ನ ಕರೆಯೋರು ಕಳಿಸೋರು ಸೀರೆ ಉಡಿಸೋರು, ಮಡಿಲಕ್ಕಿ ಕಟ್ಟೋರು, ತವರುಮನೆ ನಡೆಸೋರು ಇನ್ನಿಬ್ರು ಉಳಿದವ್ರೆ ಬಿಡಮ್ಮ ನನ್ನ ಮ್ಯಾಗಳ ಆಸೆ ಇವತ್ತು"

ಅಂತ ಹೇಳಿ ದೊಗ್ಗಲು ಮಂಡಿ ಊರಿ ಪ್ರಜೆಗೆಲ್ಲಾ ಕೈ ಮುಗಿದು ಪ್ರಜೆಗೆಲ್ಲಾ ಕೇಳಿ ಮೂರೇ ಮೂರು ತುತ್ತು ಮೀಸಲು ಮಾಡವನೆ ಜುಂಜಪ್ಪ.

ಆವಾಗ ಮೂಗೊಳಗೋಗಿ, ಕೆಳಕೆಳಗೆ ಹೋಗಿ ಒಡಲುರಿ ತಡೀಲಾರ್ದೆ ಒಂದೊಂದು ಕಣ್ಣನ್ನ ಒಂದೊಂದು ನಿಂಬೆ ಕಾಯಿ ಗಾತ್ರ ಬಿಡಿಸವನೆ. ಅಷ್ಟ್ರಾಗೆ ದಾರ್‍ಯಾಗೆ ಕಳುವಾರಹಳ್ಳಿ ಕೆರೆ ದಾರಿ ಬದಿಯಾಗೆ ಮಾರಣ್ಣ ಮೈಲಣ್ಣ ಆವಿನ ದನ ತಡಕಂಡು ಮಲಗಿದ್ದವ್ರಿಗೆ ಮುಂದಾಗಿ ಮುಂಗನಸು ಬಿದ್ದೈತೆ.

"ನಮ್ಮಣ್ಣ ಇವತ್ತು ಕಂಬೇರ ಗೊಲ್ಲರ ಹಟ್ಟಿಗೆ ಹೋಗ್ಯವನೆ. ಏನೋ ಗರಸದೊಡಕು ನಡೆದೈತೆ. ಅದಕೇ ಕೇಡು ಸ್ವಪ್ನ ಕಂಡೆ. ಓಡಲೋ ಮಾರಣ್ಣ" ಅಂದ ಮೈಲಣ್ಣ.

ಇವರಿಬ್ರೂನೂ ಓಡಿ ಹಟ್ಟಿ ಮೂಡಲು ತುದಿಯಾಗೊಬ್ಬ ಪಡವಲು ತುದಿಯಾಗೊಬ್ಬ ಬಂದವ್ರೆ. ಆ ಜುಂಜಪ್ಪಗೆ ನಿಟ್ಟಿಲ್ಲ. ಒಂದೊಂದು ಕಣ್ಣನ್ನು ನಿಂಬೆಕಾಯಿ ಗಾತ್ರ ಬಿಡ್ತವನೆ. ಭೂಮಿ ಮ್ಯಾಕೂ ಕೆಳಕೂ ಕುಂತು ನಿಂತ್ಕೋತಾ ಅವ್ನೆ. ಅಷ್ಟು ಆ ಪಾಷಾಣದಿಂದ. ಅಷ್ಟು ಧಗೆಯಾಗಿಬಿಡ್ತು. ಜುಂಜಪ್ಪನ ಶರೀರ.

"ನಮ್ಮಣ್ಣನ್ನೇ ತಿಂದ್ಹಾಕಿರೋರು ನೀವು ಕಂಬೇರ ಗೊಲ್ಲರು ದುಷ್ಟರು, ಮನೆ ಮುರುಕರು. ನಾಳೆ ಹನ್ನೆರಡು ಘಂಟೆಗೆ ನಮ್ಮನ್ನು ಬಿಡ್ತೀರಾ . ನಾವು ಮೂರೂ ಜನ ಒಟ್ಟಿಗೆ ಹುಟ್ಟೋರು, ಒಟ್ಟೀಗೆ ಬೆಳೆದೋರು. ನಾವು ಮೂರೂ ಜನ ಒಟ್ಗೆ ಕಾಯಾ ಬಿಡಬೇಕು. ನಾವು ಅಣ್ಣನ್ನ ಬಿಟು ಇರೋರ ಮಕ್ಕಳಲ್ಲ. ನಾವೂ ಒಂದೊಂದು ತುತ್ತು ತಿಂದು ಪ್ರಾಣ ಬಿಡೋಣ." ಮಾರಣ್ಣ ಮೈಲಣ್ಣ. ಹೋಗಿ ಆ ಜುಂಜಪ್ಪನ ಆ ಕಡೆ ಈ ಕಡೆ ಪಕ್ಕೇಲಿ ಹೋಗಿ ಅವರು ಬಗ್ಗಿ ಬಿಟ್ರು ಆ ಪಾಷಾಣಕ್ಕೆ.

"ಈ ಲೋಕಾನೂ ಬ್ಯಾಡಾ , ನರಲೋಕಾನೂ ಬ್ಯಾಡ. ಮಾರಕ್ಕಾ ಚಿನ್ನಮ್ಮಗೆ ನೀ ಒಬ್ಬೇ ಮಗಳಾಗಿ ಇರಮ್ಮ ಈ ಲೋಕದ ಮ್ಯಾಲೆ. ನಮ್ಮ ಅಣ್ಣ ಸತ್ತೋದಾಗಲೇ ನಾವು ಸಾಯಬೇಕು." ದೊಗ್ಗಾಲು ಮಂಡಿ ಊರಿದರು ಮಾರಣ್ಣ ಮೈಲಣ್ಣ ಈ ಪಾಷಾಣಕ್ಕೆ ಆಗ್ಲೇನೂ ಹೇಳಿದ್ಳು ಮಾರಕ್ಕ . ಕೋಣೆ ಬಾಗ್ಲಿನಿಂದ,

"ಹೋಗೋನು ಅವನೊಬ್ಬ ಹೋಗವನೆ, ನೀವಿಬ್ರಾದ್ರೂ ಇರ್ರೋ ನನ್ನ ತವರು ಮನೆ ಉಳಿಸ್ರೋ" ಅಂತ ಹೇಳ್ತಾಳೆ.

ಉಳಿದೀರಾ ಅಣ್ಣಯ್ಯ ಉಳಿದೀರೋ ಅಣ್ಣಯ್ಯೋ
ಅಣ್ಣಾ ಮಾರ ಮೈಲ ಉಳಿದೀರೋ/ ಆ ಕಂಬೇರು
ತುಪ್ಪದಾಗೆ ಮದ್ದ ಬೆರೆಸಾರೆ
ತಂಗಿ ಬಡಿಸವ್ವಾ, ತಂಗ್ಯವ್ವಾ ಬಡಿಸವ್ವಾ
ನನ್ನ ತಂಗಿ ಮಾರಕ್ಕ ಬಡಿಸವ್ವಾ
ನಾನಿನ್ನು ಈ ಪಾಪವ ಧರಿಸೇವು
ಅಂದರು ಮಾರಣ್ಣ ಮೈಲಣ್ಣ.

"ನಮ್ಮಣ್ಣ ನಾಗರಹಾವಿನ ವಿಷ ಧರಿಸ್ಯಾನೆ ನಾವು ಹತ್ತಾವಿನ ವಿಷ ಧರಿಸ್ತೀವೆ ಬಿಡಮ್ಮಾ, ನೀನೊಬ್ಬಳೇ ಚಿನ್ನಮ್ಮಗೆ ಮಗಳಾಗಿರು ಈ ಲೋಕದ ಮೇಲೆ" ಅಂತಹೇಳಿ ಇವರು ಬರ್ತಿದ್ದಂಗೆ ಜುಂಜಪ್ಪ ಎಡಕ್ಕೂ ಬಲಕ್ಕೂ ಇರೋ ಇವ್ರಿಗೆ ನೋಡಿದ.

"ಅಯ್ಯೋ ಪಾಪಿ ನನ್ನ ಮಕ್ಕಳ್ರಾ, ನೀವಾರೂ ಚಿನ್ನಮ್ಮಗೆ ಮಕ್ಕಳಾಗಿ ಇರ್ಲಿ ಅಂತ ನಾನು ನಿಮ್ಮನ್ನ ಬಿಟ್ಟು ಬಂದಿದ್ದೆ. ಇದೇ ಈ ರುದ್ರಭೂಮಿ ವಿಧಿ ಮುಂಡೆ ನಿಮ್ಮನ್ನೂ ಇಲ್ಲಿಗೆ ಎಳಕೊಂಡು ಬಂದ್ಲೇನೋ ಈ ರಣ ಭೂಮಿಗೆ. ಹೋಗೋನು ನಾ ಒಬ್ಬ ಹೋಗೋನಾ ಅಂತ ಬಂದಿದ್ದೆ. ಈಗ ಈ ಮೂವರದು ಮೂರು ತುತ್ತು ನಾನೇ ಮೀಸಲು ಮಾಡಿಬಿಟ್ಟಿದೀನಿ. ನೀವು ಮಾತ್ರ ಇದನ್ನು ತಿನ್ನಬೇಡಿ ಆಕಾಶದಾಗಿದ್ರೆ ಆತುಗೊಂತೀನಿ. ಭೂಮ್ಯಾಗಿದ್ರೆ ತುಳುಕೊಂತೀನಿ ಹಿಂದೆ ಬರೋವುಕ್ಕೆ ಮುಂದಕೆ ಒದೀತೀನಿ. ಮುಂದೆ ಬರೋವುಕ್ಕೆ ಹಿಂದಕೆ ಒದೀತೀನಿ. ನೀವು ಹೆದ್ರ ಬ್ಯಾಡ್ರಿ, ಬೆದ್ರ ಬ್ಯಾಡ್ರಿ, ತಗ್ಗು ಬ್ಯಾಡ್ರಿ, ಬಗ್ಗಬ್ಯಾಡ್ರಿ, ಅಂಜುಬ್ಯಾಡ್ರಿ, ಅಳುಕಬ್ಯಾಡ್ರಿ ನೀವು ಮಾತ್ರ ಈ ಪಾಷಾಣ ತಿನ್ನಬ್ಯಾಡ ಕಣ್ರಪ್ಪಾ" ಅಂತ ಇಬ್ರನ್ನೂ ಹಾಂಗೇ ಬಾಚಿಕೊಂಡು ಬಿಟ್ಟ.

"ಮೂವಾರದು ಮೂರು ತುತ್ತು ಮೀಸಲು ಮಾಡಿದೀನಿ. ನೀವು ಮಾತ್ರ ತಿನ್ನಬೇಡಿ. ಯಾವ್ದು ಬಂದ್ರು ನಾನು ಜಯಿಸ್ಕಂತೀನಿ" ಅಂತ ಹೇಳಿ ಇಬ್ರನ್ನೂ ಬಾಚಿಕೊಂಡು ಅಪ್ಪಿಕೊಂಡು

"ಮಾರಕ್ಕ ನಾವು ಮೂರುಜನ ಅಣ್ಣದೀರು ಸತ್ರು ಅಂತ ನೀನು ನೇಣು ಹಾಕ್ಕೋ ಬೇಡಾ , ಬಾವಿಗೆ ಬೀಳಬೇಡ, ಸತ್ಯದಿಂದ ಇರು. ಇನ್ನು ಏಳು ದಿನದಾಗೆ ದೇವಲೋಕಕ್ಕೆ ಹೋಗಿ ಸತ್ಯ ಪಡಕೊಂಡು ಬರಬೇಕಮ್ಮ ನಾವು. ಕಂಬೇರ ಗೊಲ್ಲರ ವಂಶ ನಿರ್ಮೂಲಮಾಡ್ಬೇಕು ನಾನು. ನನಗೆ ಹದಿನಾರು ವರ್ಷ ತುಂಬ್ತಾ ಬಂತು. ಇವರ ವಂಶ ನಿರ್ಮೂಲ ಮಾಡಬೇಕು. ಈಗ ನಾನು ದೇವಲೋಕಕ್ಕೆ ಹೋಗಿ ತಂದೆ ಈಶ್ವರನ ಹತ್ರ ವರಪಡಕೊಂಡು ಬರ್ತೀನಿ. ನೀನು ಧೈರ್ಯವಾಗಿರು. ನೀನು ಇನ್ನೇನೂ ಚಿಂತೆ ಹಚ್ಚುಕೋ ಬೇಡ ನಿನ್ನಾತ್ಮಕ್ಕೆ" ಅಂತೇಳಿ ಆ ಒಡಲುರಿ ತಡಕೊಳ್ಳಲಾರದೆ ಮಾರಣ್ಣ ಮೈಲಣ್ಣ ಇಬ್ರನ್ನೂ ಬಾಚಿಕೊಂಡು ಆ ಕಳುವರಹಳ್ಳಿ ಹೊನ್ನಟ್ಟಿ ಆಲೆಗೌಡನ ಹುಲ್ಲಿನ ಬಣವೆ ಏಳೇಳು ಹದಿನಾಲ್ಕು ಮಾರು ಹಾಕಿಸಿದ್ನಂತೆ ಆ ಹುಲ್ಲಿನ ಬಣವೆಗೆ ಹೋಗಿ ಜುಂಜಪ್ಪ ಹುಲ್ಲಿನ ಬಣವೆ ತೂರಿಕೊಂಡು ಬಿಟ್ಟ. ಜಗ್ಗನೆ ಹತ್ತಿಕೊಂಡು ಬಿಡ್ತು. ಆ ಹುಲ್ಲಿನ ಬಣವೆ ಆ ಪಾಷಾಣದ ಕಾವಿಗೆ ಅವನು ಈ ಇಬ್ಬರು ಜೊತೆ ಬಣವೆ ನುಗ್ಗಿದಾಗ ಬೆಂಕಿ ಹತ್ತಿಕೊಂಡು ಬಿಡ್ತು ಆ ಹುಲ್ಲಿನ ಬಣವೆ. ಈ ಚಿನ್ನಮ್ಮನ ಮಕ್ಕಳು ಇಲ್ಲಿ ನುಗ್ಗಿದವು ಒಳ್ಳೇದಾತಲೇ ಅಂತ ಆ ಕಂಬೇರು ಹೊರಗಿನಿಂದ ಒಳ್ಳೇದಾಯಿತು ಅಂತ ಬೆಂಕಿ ಇಟ್ಟರು. ಅವರು ಹೊರಗ್ನಿಂದ ಬೆಂಕಿ ಇಡೋ ಮೊದಲೇ ಒಳಗ್ನಿಂದ ಬೆಂಕಿ ಹತ್ಕೊಂಡುಬಿಡ್ತು. ನಡೀರಲೇ ಇನ್ನು ನಮ್ದೇ ಎಲ್ಲಾ ಮುಂದಲ ಹುಲ್ಲು, ಮುಂದಲ ನೀರು, ಮಡುವಿನ ನೀರು ಎಲ್ಲಾ ನಮ್ದೇ ಆಗಿ ಬಿಡ್ತು. ಇನ್ನಾ ಆ ದುಷ್ಟರನ್ನು ಸಂಹಾರ ಮಾಡಿದ್ವು, ಆ ಏಳುಗೂಡಿನ ಆವಿನ ದನ ಎಲ್ಲಾ ನಮ್ದೇ ಆದ್ವು ನಡೀರಿ." ಅಂತ ಹೇಳಿ ಎಲ್ಲಾ ಏಳು ಜನ ಕಂಬೇರ ಗೊಲ್ಲರು ಕೋಲಾಟ ಹಾಕ್ಕೊಂಡು ಹೋಗ್ತಾ ಅವ್ರೆ.

ರುದ್ದರು ರುದ್ದರು ಮಲ್ಲೀಗೆ ರುದ್ದರೈದಾವೂ ಮಲ್ಲಿಗೆ
ಮುಂದಲ ಹುಲ್ಲು ನಮ್ಮದಾತು ಬಣವೆ ಹುಲ್ಲು ನಮ್ಮದಾತು
ಮಡುವಿನ ನೀರು ನಮ್ಮದಾತು ರುದ್ದರು ರುದ್ದರು ಮಲ್ಲಿಗೆ
ರುದ್ದರು ಗೋಪಾಲ
ಈರ್ಯೆ ಜುಂಜ್ಯೆಯಾಗೆ ನಿದ್ರೆ ಗೈದಾವು ಮಲ್ಲೀಗೆ
ಹಾಲು ಅನ್ನ ಉಂಡು ಮ್ಯಾಲೋಗರ ಉಂಡು ಮ್ಯಾಲೋದಿ ಗುರುವೆ
ರುದ್ದರು ರುದ್ದರು ಮಲ್ಲಿಗೆ
ರುದ್ದರು ಗೋಪಾಲ ಈರ್ಯೆ ಜುಂಜ್ಯೆಯಾಗೆ ನಿದ್ರೆ ಗೈದಾವು ಮಲ್ಲಿಗೆ
ಕಂಬೇರಿಕ್ಕಿದ ಮದ್ದು ಕೈಕಾಲಿಗಿಳಿದಾವೆ ರುದ್ದರು ರುದ್ದರು ಮಲ್ಲೀಗೆ
ಎಳೆಮೀಸೆ ಬರುವಾ ಮೂರು ಮುದ್ದು ಹುಡುಗಾರಿಗೆ ರುದ್ದುರುದ್ದುರು ಮಲ್ಲೀಗೆ
ಎಳೆಮೀಸೆ ಬರುವಾ ಹುಡುಗಾರಿಗೆ ಸಿಡಿಮದ್ದು ರುದ್ದು ರುದ್ದರು ಮಲ್ಲಿಗೆ
ಎದೆ ಮೇಲೆ ಗೆರೆಯ ಎಳೆದರು ಗುರುವೆ ಸಿಡಿಮದ್ದು ರುದ್ದು ರುದ್ದರು ಮಲ್ಲಿಗೆ

ಕೋಲಾಟ ಹೊಯ್ಕಂಡು ಹೋಗಿ ಬಿಟ್ಟರು. ಅಷ್ಟು ಖುಷಿ ಆಗೋಗಿ ಬಿಡ್ತು ಆ ಕಂಬೇರಗೊಲ್ಲರಿಗೆ. ಕೋಲಾಟ ಹೊಯಕೊಂಡು ಹೋದ ಆ ಕಂಬೇರು ಖುಷಿಯಾಗಿ ಕೋಲ್ ಗೂಟ ತೆಗೆದಿಟ್ಟು ಮೂಡಲು ಉದಿಯಾಗೆ ಏಳೇಳು ಜನ ನೀರು ಮುಟ್ಟಿಲ್ಲ. ಕಾಲು ತೋಳೀಲಿಲ್ಲ, ಕೈ ತೊಳಿಲಿಲ್ಲ. ಅದೇ ಕೈನಾಗಿ ಹೋಗಿ ಹಾಲು ಕರಕೊಂಡು ಬಂದರು. ಆ ಘಳಿಗೇಗೇನೆ ಒಂದು ಹಂಡೆಗೆ ಅವರು ಹಾಲು ಹೊಯ್ದು ಉಕ್ಕಿ ಹೋಗೋ ಹಾಗೆ ಕಾಯಿಸಿಬಿಟ್ಟು ಈಗೇನೇನು ಮಾತಾಡ್ತಾರೋ ಅಲ್ಲಿ ಅಂದ್ರೆ "ಜುಂಜಪ್ಪಗೆ ಮದ್ದಿಕ್ಕಿದೋರು ನಾವು, ಆ ಹುಲ್ಲು ಬಣವೆಗೆ ಬೆಂಕಿ ಇಕ್ಕಿ ಬಂದೋರು ನಾವು, ಈಗ ಅದೇ ಕೈಲಿಂದ ಕಾಲು ತೊಳೀಲಿಲ್ಲ. ಕೈ ತೊಳೀಲಿಲ್ಲ ಹಾಲು ಕರೆದು ಹಿಡಿಕೊಂಬಂದು ಹಂಡೆಗೆ ಹಾಲು ಹೊಯ್ದು ಹಾಲ ಕಾಯ್ಸಿ ಈಗ ಆ ಹಾಲು ತೊಗೊಂಡು ನಾವು ಕುಡಿದ್ರೆ ಅವರನ್ನು ಕೊಂದಿರೋ ದೋಷ ಏನಾರೂ ನಮ್ಗೆ ಬರ್ತೈತೋ ಏನೋ. ನಾವ್ಯಾರೂ ಕುಡ್ಯಾಕಿಲ್ಲ. ನಾವೇಳು ಜನ ಮದುವೆಯಾಗಿರೋರೆಲ್ಲ ಕರಡಿಯೋರು ಗೊಲ್ಲರ ಹೆಣ್ಣುಮಕ್ಕಳಲ್ಲವಾ ಜುಂಜಪ್ಪನ ಕಡೆಯವರು ಆ ಅಕ್ಕ ತಂಗಿಯರ ಕೈಲಿ ಹಾಲಿಸುಕೊಂಡು ನಾವು ಕುಡಿದರೆ ಅವ್ರ ಅಣ್ಣಂದರನ್ನ ಕೊಂದಿರುವ ಪಾಪ ಆವಿಳು ಜನ ಮುಂಡೇರ್ನ ಹೊತ್ತುಗೊಂಡೋಗ್ಲಿ. ನಮ್ಮ ನಮ್ಮ ಹೆಂಡಂದಿರ ಕೈಯಿಂದ ಹಾಲು ತೊಗೊಂಡು ಕುಡಿಯಾನ. ಅವರ ಅಣ್ಣದೀರನ್ನ ಕೊಂದಿರೋ ದೋಷ ಈ ಏಳುಜನ ಮುಂಡೇರ್ನ ಹೊತ್ತುಕೊಂಡು ಹೋಗಲಿ 'ಮಗ ಸತ್ರೆ ಮನೆ ಹಾಳು, ಸೊಸೆ ಸತ್ತರೆ ಸೋಬಾನ' ಹೂಂಕಣ್ರಲಲೇ".

"ನೀವು ಏಳುಜನ ಹೆಣ್ಣು ಮಕ್ಕಳು ತಲೆಮ್ಯಾಗೀನ ಸೆರಗು ತೆಗೀರೇ. ನಿಮ್ಮ ಅಣ್ಣದೀರು ಆಸಾಶೂರರು. ದಕ್ಷಬ್ರಹ್ಮನ ಮೀರಿ ನಡೆದಹಂಗೆ ನಡೀತಾಇದ್ದ ಕಂಬೇರಗೊಲ್ಲರ ಮಗ ದೊಡ್ಡೋನು ಜುಂಜಪ್ಪ. ಇವತ್ತಿಗೆ ನಾವೆಲ್ಲ ಹಣಿ ತೀರಿಸ್ಕೊಂಡಿದೀವಿ. ಹಾಲು ಅನ್ನ ಉಣ್ಣಬೇಕು ಇವತ್ತು. ಹಾಲುತುಪ್ಪಾನೇ ಕುಡೀಬೇಕು ಇವತ್ತು ಹಾಲು ಅಭಿಷೇಕಾನೇ ಮಾಡಬೇಕು. ಅವರವರ ಹೆಂಡತೀರು ಬಂದು ಅವರವರ ಗಂಡಂದಿರಿಗೆ ಹಾಲು ಕೊಡಬೇಕು" ಅಂತ ವಾಕ್ಯ ಕೊಟ್ಟುಬಿಟ್ಟರು.

ಏಳುಜನ ಹೆಂಡತೀರು 'ಆಕಾಶವಾಣಿ, ಭೂದೇವತೆ, ಶಿವ, ಪಾರ್ವತಿ, ಸೂರ್ಯ, ಚಂದ್ರ ನೀವೇ ಸಾಕ್ಷಿ, ನಾವು ಯಾವ ತಪ್ಪೂ ಅಪರಾಧಾನೂ ಕಂಡಿಲ್ಲ. ನೀರಿರೋ ತಾವ ಕೆಸರಾಗಲಿ. ಪಾಪ ಇರೋತಾವಕ್ಕೆ ಪಾಪಹೋಗಲಿ. ನೀವು ನೋಡ್ತಾಇರಿ' ಅಂತ ಆ ಶರಣರನ್ನೆಲ್ಲಾ ಸ್ತೋತ್ರಾಣಿ ಮಾಡಿ ಆಗಬಂದು ಮೂರುಸುತ್ತು ಪ್ರದಕ್ಷಿಣೆ ಮಾಡಿ ಹಾಲು ಹಂಡೆ ಇವತ್ತಿನ ದಿನದಾಗೆ ಅವರವರ ಹೆಂಡತೀರು ಅವರವರ ಗಂಡಂದಿರಿಗೆ ಗೋಲಕದ ತುಂಬ ತುಂಬಿ ಕೊಟ್ಟವ್ರೆ. ಮುಕ್ಕಾಲು ಹಸಿವಿನಿಂದ ಕುಡೀಲಿಲ್ಲ. ಹಗೆಯನ್ನು ಕೊಂದಿದ್ದೀನಿ ಅಂತ ಒಂದೇ ಸಮ ಗಟಗಟಗಟ ಕುಡಿದ್ರಂತೆ. ಅವರ ವಂಶ ನಾಶನಾವಾಗಿ ಹೋಗ. ಹೋದರು ಅವರೆಲ್ಲಾ ನಾಶನವಾಗಿ.

ಏಳುಜನರ ನಾಲಗೇನೂ ಒಂದೇ ತಾವಕೆ ಬಿತ್ತಂತೆ. ಬೀಳ್ತಿದ್ದ ಹಾಗೆ ಆ ಮಾರಕ್ಕ ಹೇಳಿದ್ಲಂತೆ

'ಅಕ್ಕ ತಲೇ ಮ್ಯಾಗಿನ ಸೆರಗು ತೆಗೀರಿ, ಕೃಷ್ಣಪರಮಾತ್ಮ ಹಾಕಿರೋ ಕಂಚಿನ ಕಡಗ ಬಲಗೈಯಾಗೆ, ಮುದ್ರೆ ಐತೆ, ಕೃಷ್ಣನ ಮುದ್ರೆ. ನಮ್ಮ ಗಂಡಂದಿರ ಸತ್ಯವಾಗೂ ನಾವೇನೂ ಮುಂಡೇರಾಗಿಲ್ಲ. ಅರಿಶಿನ ಕುಂಕುಮ ಅಕ್ಷಯ ಭಂಡಾರ. ಬಟ್ಟು ಭಂಡಾರ ಹಿಡೀಬಹುದು. ಪದ ಹೇಳಬಹುದು. ಎಲ್ಲಾ ಇದರಲ್ಲಿ ಆಗಬಹುದು. ಅದರಿಂದಾಗಿ ತಲೆ ಮೇಲಿನ ಸೆರಗು ತೆಗೀಬಹುದು. ನಮ್ಮ ಅಣ್ಣ ಬರ್ತಾನೇ ಈರ್ಯೆಜುಂಜ, ವನವಾಸ ಇನ್ನೂ ಏನೇನು ಐತೋ. ನಡೀರಮ್ಮ.' ಅಂತ ಹೇಳಿ ಹಟ್ಟಿ ಸೇರವ್ರೆ ಏಳುಜನ ಹೆಣ್ಣುಮಕ್ಕಳು. ಇವರು ಇಲ್ಲೆ ನಾಲಗೆ ಬಿದ್ದು ಪುಣ್ಯ ಪಡಕೊಳ್ಳಲಿ. ಮೂರುಜನ ಅಣ್ಣತಮ್ಮಗಳು ಆಗಲೇ ಹುಲ್ಲಿನ ಬಣವೆಗೆ ಹೋಗಿದ್ದರಲ್ಲ.

ಆಗ ಹೇಳಿದ ಜುಂಜಪ್ಪ 'ಮಾರಣ್ಣಾ, ಮೈಲಣ್ಣ ನಾವು ಎಲ್ಲಿ ಮಲಗಿದ್ದೀವಿ'.

'ಅಣ್ಣಾ ನಮಗೆ ಯಾವುದೂ ಗೊತ್ತಿಲ್ಲ. ಕಳುವಾರಹಳ್ಳಿ ಹೊನ್ನಟ್ಟಿ ಆಲೆಗೌಡ, ಜುಂಜಪ್ಪನ ಅಪ್ಪ ಕೆಂಗುರಿ ಮಲ್ಲೇಗೌಡನ್ನ ಸಾಕಿದವನು ಈ ಆಲೆಗೌಡ ಜುಂಜಪ್ಪಗೆ ತಾತನೇ ಆಗಬೇಕು. ಹೊನ್ನಟ್ಟಿ ಆಲೆಗೌಡನ ಹುಲ್ಲಿನ ಬಣವೆಯಾಗೆ ಮಲಗಿದ್ದೀವಲ್ಲೋ ಮಾರಣ್ಣ ಮೈಲಣ್ಣ.'

'ಭೂಲೋಕದ ಗಂಡ, ಬೂದಿ ಮುಚ್ಚಿದ ಕೆಂಡ,
ಹರಿಯೋ ಹಾವಿನ ಗಂಡ,
ಉರಿಯೋ ಹಾವಿನ ಮಿಂಡ,
ನಾಲಾರಿಗು ಗಂಡ,
ಭೂಲೋಕದ ಉದ್ದಂಡ
ಈ ಬೂದಿಮುಚ್ಚಿದ ಕೆಂಡ,'
ಭೂಲೋಕದ ಗಂಡ

ಈ ಬೂದಿಯಾಗೆ ಮನಗಿದಾರಲ್ಲೋ
ಮಾರಣ್ಣ, ಮೈಲಣ್ಣ, ಹೇಳ್ರಲಾ,
ಆ ಮುಂಡೇಗೆ ಇನ್ನು ಉಳಿವಿಲ್ಲ.
ಇಕ್ಕತೀನ್ರೋ ಬೆಂಕೀನ. ಹೇಳ್ರೋಲೋ
ಒಂದು ಹೆಚ್ಚಳದ ಪದಾನ,

'ಮಕ್ಕಳು ಸತ್ತಾರೆಂದು ದುಃಖ ಬೇಡಿ ಅಳಬೇಡ ತಿರುಗಿ ಬರುತೀವಿ, ಸತ್ತೇಳು ದಿನಕೆ ಬರುತೀವಿ, ಕಂಬೇರದ ಗುಡ್ಡೇನ ಕಾಲು ಘಳಗೆಯಾಗಿ" ಅಂದ ಜುಂಜಪ್ಪ. ಆಗ ಚಿನ್ನಮ್ಮಗೆ ಅರ್ಥವಾಗಿದೆ. ಮದುವೆ ಮನೇಗೆ ಅಂತ ಕರ್ಕೊಂಡು ಹೋಗಿ ನನ್ನ ಮಕ್ಕಳಿಗೆ ಮದ್ದು ಇಕ್ಕಿರೋದು ಮನೆಮುರುಕರು. ಈ ಶಾವೆ ಹುಲ್ಲಿನ ಬಣವೆಯಾಗೆ ಮಲಕ್ಕೊಂಡು ನನ್ನ ಮೇಲೆ ಪದ ಹೇಳಿದನಲ್ಲ,

"ಕಂಬೇರಳಿಯಾ ಜುಂಜಪ್ಪಗೆ ಮಾಡಿದರ್‍ಯಾರೋ ಉರಿಮದ್ದು' ಅಂದಳು ಚಿನ್ನಮ್ಮಾ.

ಈಗ ಗೊತ್ತಾಗಿಬುಡ್ತು ಅವಳಿಗೆ ಮದ್ದು ಇಕ್ಕಿರೋದು. ಈಗ ಇವನು ಹೇಳ್ತಾನೆ,

'ಮಾಡಿದರೆ ಮಾಡಲಿ, ಮಾವುಗಳೇ ಬಾಳಲಿ, ಬಾಳೆವನ ಬೆಳೆದಂಗೆ ಬೆಳೆಯಾಲಿ ಕಂಬೇರ ಆಡೋಮಕ್ಕಳಿಗೆ ಉಳಿವಿಲ್ಲ ಚಿನ್ನಮ್ಮಾ', ಇವನು ಹೇಳಿದ.

ಅವಳು ಹೇಳ್ಯಾಳೆ, 'ಬುಕ್ಕಿದ ಹುಲ್ಲಿನ ಬಣವ್ಯಾಗೆ ತಬ್ಬಿ ಮಲಗಿರೋ ಕಂಬೇರ ಅಳಿಯಾರು, ದೊಡ್ಡಾಳು ಕಂಬೇರಳಿಯಾ ಜುಂಜಪ್ಪಾಗೆ ಇಕ್ಕಿದರ್‍ಯಾರು ಉರಿಮದ್ದು' ಅಂತ ಈಗ ಇವರು ಹೇಳ್ತಾರೆ 'ಇಕ್ಕಿದರೆ ಇಕ್ಕಾಲಿ ನಿಮ್ಮಪ್ಪಗಳು ಕಿತ್ತಾಲೆ ಬೆಳೆಹಾಗೆ ಬೆಳೆಯಾಲಿ ಕಂಬೇರು, ಹುಟ್ಟೋ ಮಕ್ಕಳಿಗೆ ಉಳಿವಿಲ್ಲೋ ಚಿನ್ನಮ್ಮಾ', ಅಂದ ಜುಂಜಪ್ಪ.

ತಾಯಿಗೂ ಈ ಮಕ್ಕಳಿಗೂ ಈ ಪದ ಅಲ್ಲಿ ನಡೆದು, ಮಾರಣ್ಣ ಮೈಲಣ್ಣ ಇಬ್ಬರನ್ನು ಪಕ್ಕಗೆ ಕಟ್ಟಿಕೊಂಡು ಪುರಸವ್ವನ ಕೆರೆಗೆ ಹೋಗಿ ಒಂಭತ್ತು ಸಾರಿ ಮುಳುಗಿ ಒಂಭತ್ತು ಸಾರಿ ಎದ್ದು ಹೊಳೆಬೆಳೆಗಾಗಿ ಆಗ ದೇವಲೋಕಕ್ಕೆ ಜುಂಜಪ್ಪ ಓಲೆ ಬರೀತಾನೆ.

'ಈ ಹಿರೇಜುಂಜ, ಈರ್‍ಯೈಜುಂಜ ನೀರಾಗೆ ಇಳಿದವ್ನು ಮೈಯಾಡಿ ತೊಳೆದವ್ನೋ,

ನೀರಾಗೆ ಮೈಯಾ ತೊಳೆದು ಸ್ನಾನಾವ ಮಾಡಿ ದೇವೇಂದ್ರಗೆ ಓಲೆಯಾ ಬರೆದಾನೋ,

ದೇವೇಂದ್ರಗೆ ಓಲೆ ಬರೆದವ್ನೋ ಜುಂಜಪ್ಪ ಗುಡುಗು ಮಿಂಚುಗಳ ಹೊಡೆದವ್ನೋ

ಗುಡುಗು ಮಿಂಚುಗಳ ಜೊತೆಗೆ ಮಧ್ಯಾಹ್ನ ಹನ್ನೆರಡಕ್ಕೆ ಕಂಬೇರ ಹಟ್ಟಿಗೆ ಬರಬೇಕು

ನಾನು ನಿನ್ನ ಪಟ್ಟಣಕ್ಕೆ ಬರೋ ಹೊತ್ತಿಗೆ ನನ್ನ ಆಯುಧ ಮುಸ್ತಾಫನೆಲ್ಲ ತೆಗೆದು ಮಡಗಿರಬೇಕು

ಕಂಬೇರುಗೊಲ್ಲರ ವಂಶವನ್ನೇ ನಿರ್ಮೂಲ ಮಾಡಬೇಕು ಇವತ್ತು.

ಶಿವಾ ಪಾರ್ವತಿ ಹತ್ರ ಬಂದು 'ಇವತ್ತು ಓಲೆ ಬರೆದು ಹಾಕಿಬಿಟ್ಟದ್ದಾನೆ, ಈಗ ಅವನು ಬರುವಾಗ್ಗೆ ಅವನ ಆಯುಧ ಮುಸ್ತಾಫಗಳನ್ನೆಲ್ಲಾ ಸಿದ್ಧಮಾಡಿಡಬೇಕು. ಅವನು ಹೋಗಿ ಕಂಬೇರುಗೊಲ್ಲರ ವಂಶವನ್ನೆಲ್ಲ ನಿರ್ಮೂಲ ಮಾಡಿ ಅವನು ಇಲ್ಲಿಗೆ ಬರುವಾಗ್ಗೆ, ಅವನು ನರಮನುಷ್ಯನಾಗಿ ಹೋರಾಡಿ ಇಲ್ಲಿಗೆ ಹದಿನಾರು ವರ್ಷ. ಇನ್ನು ಅವನು ದೇವಲೋಕಕ್ಕೆ ಬರಬೇಕು. ನನ್ನಮಗ. ಈಶ್ವರನ ಮಗ ಈರಭದ್ರ. ಕಳುವೇರಹಟ್ಟಿ ಈರೈಜುಂಜ ಸಾಕಲ್ಲಿಗೆ ಅವನ ನರಲೋಕ. ಅವನ ಬಿಲ್ಲು ಬಾಣ ಸಿದ್ಧಮಾಡಿಡು ಪಾರ್ವತಿ' ಅಂದ ಶಿವ.

'ಎಲ್ಲಾಸಿದ್ಧ ಮಾಡಿದ್ದೀನಿ ಸ್ವಾಮಿ,'

ಮಾರಣ್ಣ, ಮೈಲಣ್ಣ, ಜುಂಜಪ್ಪ ಒಟ್ಟಿಗೆ ಹೋಗಿ ಪೂಜೆಮಾಡಿ

'ತಂದೆ' ಅಂದ.

'ಏನಪ್ಪಾ'?,

'ಎಲ್ಲಾ ನಿನ್ನ ಆಶೀರ್ವಾದದಿಂದ, ನಿನ್ನ ಸಹಾಯದಿಂದ ಕಳುವರಹಳ್ಳಿ ದಿಣ್ಣೆ ಹಾಲು ಬೇವಿನ ಮರದ ಕೆಳಗೆ ಆದಿತ್ಯವಾರ ಆದಿತ್ಯವಾರ ಎಂಟು ಸೋಮವಾರಕೆ ಒಂಭತ್ತು ಇಲ್ಲಿಗೆ ಸಾಲು ಬೇವಿನ ಮರದ ಕೆಳಗೆ ಇವತ್ತಿಗೆ ಹದಿನಾರು ವರುಷದ ಹಿಂದೆ ಚಿನ್ನಮ್ಮಾನ ಬೆನ್ನಗೆ ಒಡಿರೋ ಅಂತ ವರಕೊಟ್ಟಿದ್ದು ನಿಜವೇನೋ ಈಶ್ವರ ನೀನು. ಅಪುತ್ರನ್ನ ಕೊಡು, ಸುಪುತ್ರನ್ನ ಬ್ಯಾಡ ಅಂದಿದ್ದು ನಿಜವೇನೋ. ಒಂಭತ್ತು ತಿಂಗಳ ಗರ್ಭದಾಗೆ ಒಂಭತ್ತುತಿಂಗಳು ಅಂಟು ಮುಟ್ಟು ಸೂತಕದಾಗೆ ಬರೋ ಮಗ ಬೇಡ. ಆದಿತ್ಯವಾರ ಆದಿತ್ಯವಾರ ಎಂಟು ಸೊಮವಾರಕೆ ಒಂಭತ್ತು ದಿನಕ್ಕೆ ಚಿನ್ನಮ್ಮನ ಬೆನ್ನಾಗೆ ಒಡೆಯಾಬೇಕು ಅಂತ ವರಕೇಳಿದ್ದಕ್ಕೆ ವರಪುತ್ರನನ್ನು ಕೊಟ್ಟಿದ್ದು ನಿಜವೇನೋ ಈಶ್ವರ'.

'ನಿಜಕಣೋ ಈರೈಜುಂಜ',

'ಕೊಡು ನನಗೆ ಆಶೀರ್ವಾದ ಹೋಗಿ ಆ ವಂಶಾನ ನಿರ್ಮೂಲನ

ಮಾಡಿಬರಬೇಕು.

ಈ ವಂಶದ ಕಥೆ ಇಲ್ಲೀಗೆ ಮುಕ್ತಾಯ ಆಗಬೇಕು.

ನನ್ನ ಸೇಡನ್ನು ನಾನು ತೀರಿಸಿಕೊಂಡು ಬರಬೇಕು. ಕೊಡು ವರದಾನ' ಅಂತ ಬಿಲ್ಲು ಬಾಣ ತಕ್ಕೊಂಡು ಶಿವಾಪಾರ್ವತಿ ಅವರ ಆಶೀರ್ವಾದ ತಕ್ಕೊಂಡು ಮಾರಣ್ಣ ಮೈಲಣ್ಣ ಜುಂಜಪ್ಪ ಒಂದು ಕರೆಕಲ್ಲು ಐತೆ ಬೆಣಚಿಗೆ ಕರೆಕಲ್ಲು ಅಂತ ಕರೆಕಲ್ಲು ಗುಡ್ಡದ ತಾವಕ್ಕೆ ಬಂದು ಒಂದು ಪದ ಹೇಳ್ತಾನೆ ಈವಾಗ,

'ಮಾರಣ್ಣ, ಮೈಲಣ್ಣ ಹಿರಿಯೋನು ಜುಂಜಪ್ಪ
ಮೂವರು ಕಣಿವೆ ಇಳಿವಾಗ,

ಮೂವಾರು ಕಣಿವೆ ಇಳಿವಾಗ
ಕಂಬೇರ ಗಬ್ಬಾಗ ಕೂಸೇ ನಡುಗ್ಯಾವ್ರೋ' ಅಂದ.

ಕಣಿವೆ ಮೇಲೆ ಗುಡ್ಡದಂತ ಬಸುರಿ ಮಾರಕ್ಕ ಬಗ್ಗಿ ಭತ್ತ ಕುಟ್ಟುತ್ತಿದ್ದಳಂತೆ. ಸತ್ತ ಅಣ್ಣದೀರ ಮೇಲೆ ಪದಹೇಳಿಕೊಂಡು. ಜುಂಜಪ್ಪನ ತಂಗಿ, ಗುಡ್ಡದಂಥ ಬಸುರಿ. ಅವಳ ಹೊಟ್ಟೆ ಒಳಗಿನ ಪಿಂಡ ಗಡಗುಟ್ಟಿಕೊಂಡು ನಡುಗಿ ಬಿಡ್ತಂತೆ. ಹ್ಞಾಂ, ಇವತ್ತಿಗೆ ಏಳುದಿನ ತುಂಬಿತು. ನಮ್ಮ ಅಣ್ಣದೀರು ಬರ್ತಾರೆ. ಬರ್ತೀವಿ ಅಂದಿದ್ರು. ಎಲ್ಲೋ ಒಂದು ಬಾಣ ಬಿಟ್ಟಿರಬೇಕು ಅದಕ್ಕೆ ಧಡ ಗುಟ್ಟಿಸಿಕೊಂಡು ನಡುಗಿರಬೇಕು.

ಮಾರಕ್ಕ ಭತ್ತಾನೆ ಕುಟ್ಟುವಾಗ ಏನು ಹೇಳಿಕೊಂಡ್ಲು
ಸತ್ತ ಅಣದೀರ ಮೇಲೆ ಪದವನ್ನೆ ಹೇಳಿಕೊಂಡು
ಕುಟ್ಟುವಾಗ ಗಡಗುಟ್ಟಿಸಿ ನಡುಗಿತಲ್ಲೇ.
ಅವಳು ಹಟ್ಟಿ ಹೊರಗೆ ಬಂದು ನೋಡ್ತಾ ನಿಂತುಕೊಂಡಳು.

ಅವಳು ಅಲ್ಲಿ ಬಂದು ನೋಡೋಹೊತ್ತಿಗೆ ಇವರು ಮೂವರೂ ಕಣಿವೆ ಇಳಿದು ಮೂಡಲು ತುದಿಗೆ ಬಂದು ನಿಂತ್ಕಂಡು ಬಿಟ್ರು ಕಾಣೋಹಂಗೆ.

'ಪರಮಾತ್ಮ, ನಾನೇ ಮದ್ದು ಇಕ್ಕಿ ಆ ದುಷ್ಟರಿಗೆಲ್ಲಾ ಹಿಂದಕ್ಕೆ ಬಿಟ್ಟು ಆ ದುಷ್ಟರಿಗಿಂತ ನಾನೇ ಮೊದಲು ನಮ್ಮ ಅಣ್ಣನ ಬಾಣಕ್ಕೆ ಬೀಳೋ ಹಾಗೆ ಆಯ್ತಲ್ಲಾ ಶಿವಚಿತ್ರಲಿಂಗ, ಕಾಟಮಲಿಂಗ, ಓಬಳನರಸಿಂಹ ಇವತ್ತು ನಿಮ್ಮ ದಯ ಇರಲಿ ನನಗೆ' ಅಂತ ಹೇಳಿ ಹಾಡು ಹೇಳ್ತಾಳೆ.

'ಬಾಣಗಳ ಬಿಡು ರಾಯಾ
ಬಾಣ ಬಿಡು ಇನ್ಯಾಕೆ ನಾನಿರುತೇನೋ,
ಇನ್ಯಾಕೆ ನಾನಿರುತೇನೇ ಮತ್ತೊಂದು ಬಾಣ ಬಿಡು ನೀನು'

ಅಣ್ಣದೀರನ್ನ ಕೇಳಿಕೊಂಡಳು.

'ಕೊಟ್ಟ ಹೆಣ್ಣು ಕುಲಕ್ಕೆ ಹೊರಗು, ಅವಳಿದ್ದರೆ ಇರಲಿ. ಇಕ್ಕರೋ ಬಾಣಾನ ಅವರ ಕುಲ ನಾಶನವಾಗಿ ಹೋಗಲಿ ಇವತ್ತು' ಅಂದ ಯಾರು ಜುಂಜಪ್ಪ.

'ಅಣ್ಣಾ, ಗುಡ್ಡದಂಥಾ ಬಸುರಿ. ಆ ಬಸುರಿಗೆ ನಾವು ಬಾಣಬಿಡಕಾಗುತ್ತಾ, ಆದರೆ ಹಿಂದೆ ನಿನ್ನ ಆಶೀರ್ವಾದದಿಂದ ಪೂಜಾರ ದೊಡ್ಡಕ್ಕ ಅನ್ನೊ ಹೆಣ್ಣುಮಗಳು ಹಾಲು ಗೆನ್ನೆ ಕೂಸ ಹಡದು, ಬಿಸಾಡಿ ಅನ್ನೋವನಿಗೆ ಕೊಟ್ಟು ಹಾಗಲವಾಡಿ ಹಟ್ಟಿಬಿಟ್ಟು ಬಂದು ಮಾದೇವನ ಪಟ್ಟಣ ಸೇರಿದಾಗ ಗುಡ್ಡದಂಥ ಬಸಿರಿಗೆ ಹಿಂಸೆ ಕೊಟ್ಟರೆ ಮುಂದೆ ಬೆಳೆಯಾಕಿಲ್ಲ ಅಂತ ಮಾತುಕೊಟ್ಟ ನೀನು ಅದೇ ಗುಡ್ಡದಂತ ಬಸಿರಿಗೆ ಪ್ರಾಣಬಿಡು ಅಂತ ಕೇಳ್ತೀಯಲ್ಲ ಈರೈಜುಂಜ ಇದನ್ನು ಅರ್ಥ ಮಾಡಣ್ಣ' ಅಂದಳು.

ಮೂರುತಿಂಗಳವರೆಗೂ ಜುಂಜಪ್ಪ ಗುಂಗೆ ಹುಳುಗಳ ಪೆಂಟೆಯಲ್ಲಿ ಗುಂಗೆ ಹುಳುಗಳ ಕೈಯಿಂದ ಕಚ್ಚಿಸಿಕೊಂಡು ನರಳಿದ. ಅವನಿಗೆ ಹಗಲು ರಾತ್ರಿ ನಿದ್ರೆ ಬರದಂತಾಯಿತು. ಸಾವಿರ ಕೋಣ, ಸಾವಿರ ಕುರಿ ಬಲಿಕೊಡುವುದಾಗಿಯೂ, ತನಗೆ ಮೂರು ದಿನ ಮಲಗಲು ಜಾಗವನ್ನು ಕುರುಬರ ಕೇರಿಯಲ್ಲೋ, ಕುಂಬಾರರ ಕೇಯಲ್ಲೋ ಜಾಗ ಕೊಡಿಸಬೇಕೆಂದು ಜುಂಜಪ್ಪ ಸೀರ್‍ಯದ ದುರ್ಗಿಯನ್ನು ಬೇಡಿ ಕೊಂಡಾಗ ಅವಳು ಅವನಿಗೆ ಜಾಗ ಕೊಡಲು ಒಪ್ಪಲಿಲ್ಲ. ಅವನಿಗೆ ಜಾಗ ಕೊಟ್ಟರೆ ಅವನು ಸಿರಾ ಊರನ್ನೇ ಸುಟ್ಟು ಬೂದಿಮಾಡಿಬಿಡಬಹುದೆಂಬ ಹೆದರಿಕೆ ಅವಳಿಗಿತ್ತು. ಆದರೆ ಜುಂಜಪ್ಪ ಅಷ್ಟಕ್ಕೇ ಬಿಡಲಿಲ್ಲ. ಗೌರಸಂದ್ರದ ಮಾರಕ್ಕನನ್ನು ನೆನೆಸಿಕೊಂಡ. ಮೂರು ತಿಂಗಳ ಕಾಲ ಗುಂಗೆ ಹುಳುಗಳಿಂದ ಕಡಿಸಿಕೊಂಡಿದ್ದರಿಂದ ಹಗಲು ರಾತ್ರಿ ನಿದ್ರೆಗೆಟ್ಟಿರುವುದಾಗಿಯೂ, ಆದ್ದರಿಂದ ಸುಖವಾಗಿ ನಿದ್ರೆ ಮಾಡಲು ಅನುಕೂಲವಾಗುವಂತೆ ಸಿರಾ ಊರಿನಲ್ಲಿ ಸೀರ್‍ಯದ ದುರ್ಗಿಯಿಂದ ಜಾಗ ಕೊಡಿಸಿಕೊಡಬೇಕೆಂದು ಅವಳನ್ನು ಕೇಳಿಕೊಂಡ. ಅದರಂತೆ ಗೌರಸಂದ್ರದ ಮಾರಕ್ಕ ಸಿರಾದ ದುರ್ಗಮ್ಮನ ಬಳಿಗೆ ಓಡಿಹೋಗಿ ಜುಂಜಪ್ಪನ ಕಷ್ಟವನ್ನು ವಿವರಿಸಿ, ಅವನಿಗೆ ಕುರುಬರ ಕೇರಿಯಲ್ಲಿ ಮೂರುದಿನ ಮಲಗಲು ಅವಕಾಶ ಕೊಡಿಸಿಕೊಟ್ಟಳು. ಅದರಂತೆ ಜುಂಜಪ್ಪ ಗುಂಗೆ ಹುಳುಗಳ ಕಡಿತದಿಂದ ಮುಕ್ತಿ ಪಡೆದು ನಿರಾತಂಕವಾಗಿ ಮೂರುದಿನಗಳ ಕಾಲ ಕುರುಬರ ಕೇರಿಯಲ್ಲಿ ಮಲಗಿದ. ಮಲಗುವ ಮೊದಲು ಸೀರ್‍ಯದ ದುರ್ಗಮ್ಮನಿಗೆ ಸಾವಿರ ಕೋಣ, ಸಾವಿರ ಕುರಿಗಳನ್ನು ಕಡಿಸುವ ವ್ಯವಸ್ಥೆ ಮಾಡಲು ಜುಂಜಪ್ಪ ಒಂದು ಉಪಾಯವನ್ನು ಹುಡುಕಿ, ಬೇವಿನಹಳ್ಳಿ ಕರಿಯಮ್ಮ, ಸೋರೆಕುಂಟೆ ಕರಿಯಮ್ಮ ಮೊದಲಾದ ಏಳುಜನ ಮಾರಿಯರನ್ನು ಕರೆದು ಅವರಿಗೆ ತಾನು ಹುಡುಕಿದ ಉಪಾಯವನ್ನು ಸೂಚಿಸಿ, ಅದರಂತೆ ಕೆಲಸ ಮಾಡಬೇಕೆಂದು ಹೇಳಿ ತನ್ನ ಪಾಡಿಗೆ ತಾನು ಮಲಗಿದ.

ಸಿರಾದಲ್ಲಿ ಜನ ಇದ್ದಕ್ಕಿದ್ದಂತೆ ಸಾಯತೊಡಗಿದರು. ಜುಂಜಪ್ಪನಿಗೆ ಮೊದಲೇ ಮಾತುಕೊಟ್ಟಿದ್ದರಿಂದ ಸೀರ್‍ಯದ ದುರ್ಗಮ್ಮ ಏನೂ ಮಾಡುವಂತಿರಲಿಲ್ಲ. ಅವಳಿಗೆ ಆ ಮೂರು ದಿನ ಕಣ್ಣು ಕಾಣುವಂತಿರಲಿಲ್ಲ; ಕಿವಿ ಕೇಳುವಂತಿರಲಿಲ್ಲ. ಇದರಿಂದಾಗಿ ಅವಳು ಸಿರಾದ ಜನಗಳಿಗೆ ಏನೂ ಸಹಾಯಮಾಡಲಾಗದ ಸ್ಥಿತಿಯಲ್ಲಿದ್ದಳು. ಏಳು ಜನ ಮಾರಿಯರು ಈ ಮೂರು ದಿನಗಳ ಅವಧಿಯಲ್ಲಿ ಸಿರಾದ ಜನರಿಗೆ ರೋಗ ಬರಿಸಿ, ಅವರನ್ನು ಸಾಯಿಸಿ, ದಿನಕ್ಕೆ ಸಾವಿರ ಗುಂಡಿಗಳನ್ನು ತೆಗೆಸಿ, ಸಾವಿರ ಜನಗಳನ್ನು ಅದರಲ್ಲಿ ಹೂಳಿದರು. ಕೊನೆಗೆ ಸೀರ್‍ಯದ ರಂಗಣ್ಣನ ಮಗುವನ್ನು ಸಾಯಿಸಿದರು. ಸೀರ್‍ಯದ ರಂಗಣ್ಣ ಸತ್ತುಹೋದ ತನ್ನ ಮಗುವಿನ ಹೆಣವನ್ನು ಗುಂಡಿ ತೆಗೆದು ಹೂಳಿಬಂದ ಮೇಲೆ, ಆ ಮಗುವನ್ನು ಏಳು ಜನ ಮಾರಿಯರು ಗುಂಡಿಯಿಂದ ಹೊರಕ್ಕೆ ತೆಗೆದು, ಅದನ್ನು ಬದುಕಿಸಿ, ಅದರ ಕೈಗೆ ಗಿಲುಕಿ ಕೊಟ್ಟು ಆಡಿಸಿಕೊಂಡು, ರಂಗಣ್ಣನ ಬಳಿಗೆ ಕರೆದುಕೊಂಡು ಬಂದರು. ರಂಗಣ್ಣನಿಗೆ ಆ ಮಗುವನ್ನು ಕಂಡಾಗ ಮೊದಲು ನಂಬುವುದಕ್ಕೇ ಸಾಧ್ಯವಾಗಲಿಲ್ಲ. ಈ ಮಗು ತನ್ನದಲ್ಲ ಎಂದು ಮಾರಿಯರೊಡನೆ ವಾದಿಸಿದನು. ಅನಂತರ ಕೊರಚರ ಹೆಂಗಸರ ವೇಷದಲ್ಲಿದ್ದ ಏಳು ಜನ ಮಾರಿಯರೂ

ತಾವು ಮಗುವನ್ನು ಬದುಕಿಸಿದುದಾಗಿ ಹೇಳಿದರು. ರಂಗಣ್ಣ ಸೀರ್‍ಯದ ದುರ್ಗಮ್ಮನಿಗೆ ಸಾವಿರ ಕೋಣ, ಸಾವಿರ ಕುರಿ ಕಡಿಸುವುದಾದರೆ ಆ ಮಗುವನ್ನು ಹಿಂತಿರುಗಿ ಕೊಡುವುದಾಗಿ ಹೇಳಿದರು. ರಂಗಣ್ಣ ಅದಕ್ಕೆ ಒಪ್ಪಿಕೊಂಡು ಅದರಂತೆಯೇ ಬಲಿ ಕೊಡಿಸಿದ.

ಆ ವೇಳೆಗೆ ಮೂರು ದಿನ ಕಳೆದಿತ್ತು. ಮೂರು ದಿನದ ನಿದ್ರೆಯಿಂದ ಎಚ್ಚರಗೊಂಡ ಜುಂಜಪ್ಪ ಸೀರ್‍ಯದ ರಂಗಣ್ಣನ ಹೂವಿನ ವನವನ್ನೂ ಅದರಲ್ಲಿದ್ದ ಗುಂಗೆ ಹುಳುಗಳ ಪೆಂಟೆಯನ್ನೂ ಸುಟ್ಟು ಬೂದಿಮಾಡಿದ. ಸೀರ್‍ಯದ ದುರ್ಗಮ್ಮನಿಗೆ ರಂಗಣ್ಣ ಆಗಲೇ ಸಾವಿರ ಕೋಣಗಳನ್ನೂ, ಕುರಿಗಳನ್ನೂ ಬಲಿಕೊಟ್ಟಿದ್ದರಿಂದ ಆ ಕೆಲಸವೂ ಆಗಲೇ ಪೂರೈಸಿತ್ತು. ಸೀರ್‍ಯದ ದುರ್ಗಮ್ಮನಿಗೆ ಕೊಟ್ಟಿದ್ದ ಮಾತನ್ನು ಜುಂಜಪ್ಪ ಉಳಿಸಿಕೊಂಡ. ಅಷ್ಟು ಹೊತ್ತಿಗೆ ಪೂಜಾರಿ ಚಿತ್ತಯ್ಯ ಸಿರಾಕ್ಕೆ ಬಂದು ಜುಂಜಪ್ಪ ದೇವರನ್ನು ಹೊತ್ತುಕೊಂಡು ಚಿಕ್ಕದೇವರ ಹಟ್ಟಿಗೆ ಬಂದು ದೇವಸ್ಥಾನದಲ್ಲಿ ಅದನ್ನು ಮೊದಲಿನ ಜಾಗಕ್ಕೆ ಸೇರಿಸಿದ.

೩.೧.೨. ಗಿಡ್ಡೀರೇಗೌಡನಿಗೆ ಬುದ್ಧಿಕಲಿಸಿದ ಪ್ರಸಂಗ:

ದೇವಸ್ಥಾನದ ಒಳಕ್ಕೆ ಮೆಟ್ಟು ಹಾಕಿಕೊಂಡೇ ನುಗ್ಗಿ, ದುರಹಂಕಾರದಿಂದ ತನ್ನ ಉತ್ಸವ ಮೂರ್ತಿಯನ್ನು ಎತ್ತಿಕೊಂಡು ಹೋಗಿ, ಸೀರ್‍ಯದ ರಂಗಣ್ಣನ ಹೂವಿನ ವನದ ಗುಂಗೆ ಹುಳುಗಳ ಪೆಂಟೆಯೊಳಗೆ ಇಟ್ಟು ಮೂರುತಿಂಗಳ ಕಾಲ ನಿದ್ರೆ ಬಾರದಂತೆ ಗುಂಗೆ ಹುಳುಗಳಿಂದ ಕಡಿಸಿದ್ದಕ್ಕಾಗಿ ಜುಂಜಪ್ಪನಿಗೆ ಗಿಡ್ಡೀರೇಗೌಡನ ಮೇಲೆ ತುಂಬ ಕೋಪ ಬಂದಿತ್ತು. ಅವನಿಗೆ ಸರಿಯಾಗಿ ಬುದ್ದಿ ಕಲಿಸಲು ಸಮಯ ಕಾಯುತ್ತಿದ್ದ. ಒಂದು ಸಲ ಅಂತಹ ಅವಕಾಶ ಒದಗಿಬಂತು. ಚಿಕ್ಕದ್ಯಾವರ ಹಟ್ಟಿಯಲ್ಲಿ ತಿಗಳ ಬಾಳೇಗೌಡ ಎಂಬುವನು ಜುಂಜಪ್ಪನ ಪರಮ ಭಕ್ತನಾಗಿದ್ದ. ಅವನೂ ಸಹ ಗಿಡ್ಡೀರೇಗೌಡನ ವಂಶಕ್ಕೆ ಸೇರಿದವನೇ. ಒಂದು ಅವನಿಗೆ ಮತ್ತು ತಿಗಳ ಬಾಳೇಗೌಡನಿಗೆ ಹಟ್ಟಿಯ ಗೌಡಿಕೆಯ ಸಂಬಂಧವಾಗಿ ಜಗಳ ಆರಂಭವಾಯಿತು. 'ನಾನು ಈ ಹಟ್ಟಿಗೆ ಗೌಡ' ಎಂದು ತಿಗಳ ಬಾಳೇಗೌಡ, ' ನಾನು ಈ ಹಟ್ಟಿಗೆ ಗೌಡ' ಎಂದು ಗಿಡ್ಡೀರೇಗೌಡ ಇಬ್ಬರೂ ಜಗಳಕ್ಕೆ ಶುರುಮಾಡಿದರು. ಹಟ್ಟಿಯಿಂದ ಹೊರಗೆ ಮೂಡಲು ಉದಿಯ ಬಳಿಯಲ್ಲಿ ಗಿಡ್ಡೀರೇಗೌಡ ಒಂದು ಕೊಪ್ಪಲು ಹಾಕಿದ ಅದರ ಎದುರಿಗೇ ತಿಗಳ ಬಾಳೆಗೌಡ ಒಂದು ಕೊಪ್ಪಲು ಹಾಕಿದ. ಪ್ರತಿದಿನ ಇಬ್ಬರೂ ಊಟಮಾಡೋದು, ಜಗಳ ಆಡೋದು ಹೀಗೇ ಮಾಡಿದರು. ಮೂರು ಕಟ್ಟೆಮನೆಗಳಿಂದಲೂ ಪ್ರತಿನಿಧಿಗಳನ್ನೂ, ಬೇರೆ ಬೇರೆ ಹಟ್ಟಿಗಳ ಗೊಲ್ಲರ ಮುಖಂಡರನ್ನೂ ನ್ಯಾಯತೀರ್ಮಾನಕ್ಕೆ ಸೇರಿಸಿದರು. ಯಾರು ಎಷ್ಟು ಪ್ರಯತ್ನಮಾಡಿದರೂ ಸಹ ನ್ಯಾಯ ತೀರ್ಮಾನವಾಗಲೇ ಇಲ್ಲ. ಹನ್ನೆರಡು ವರ್ಷಗಳ ಕಾಲ ಇಬ್ಬರ ಜಗಳವೂ ಮುಂದುವರಿಯಿತು. ಇಬ್ಬರಿಗೂ ಸಾಕಷ್ಟು ನಷ್ಟವಾಯಿತು. ಹಟ್ಟಿಯವರಿಗೆಲ್ಲಾ ಬೇಸರವಾಯಿತು.

ಚಿಕ್ಕ ದ್ಯಾವರ ಹಟ್ಟಿಯಲ್ಲಿಯೇ ಚಿತ್ತಜ್ಜ ಎಂಬ ಒಬ್ಬ ಹಣ್ಣು ಹಣ್ಣು ಮುದುಕನಿದ್ದ. ಅವನು ಕರಡಿಗೊಲ್ಲ. ಅವನ ಮನೆಯಲ್ಲಿ ಸಾವಿರ ಹಸುಗಳು ಹಾಲು ಕೊಡುತ್ತಿದ್ದವು.

ಅವನ ಹೆಂಡತಿಯ ಹೆಸರು ಕಾಟಮ್ಮ. ಗಿಡ್ಡೀರೇಗೌಡ ಮತ್ತು ತಿಗಳ ಬಾಳೇಗೌಡ, ಹನ್ನೆರಡು ವರ್ಷಗಳಿಂದ ಜಗಳವಾಡುತ್ತಿದ್ದುದನ್ನು ನೋಡಿ ಚಿತ್ತಜ್ಜನಿಗೂ ಬೇಸರವಾಗಿತ್ತು. ಅವನು ಅವರಿಬ್ಬರ ಜಗಳವನ್ನೂ ಬಗೆಹರಿಸುವಂತೆ ನ್ಯಾಯತೀರ್ಮಾನ ಮಾಡುವ ಒಂದು ವಿಧಾನವನ್ನು ಸೂಚಿಸಿದ. ಅದಕ್ಕೆ ಅವರಿಬ್ಬರೂ ಒಪ್ಪಿಕೊಂಡರು. ಚಿತ್ತಜ್ಜನ ಮನೆಯಲ್ಲಿ ಹಾಲು ಕೊಡುತ್ತಿದ್ದ ಸಾವಿರ ಹಸುಗಳ ಹಾಲನ್ನು ಕರೆದು ಮೊಸರು ಮಾಡಿ, ಮೊಸರಿನಿಂದ ಬೆಣ್ಣೆ ತೆಗೆದು, ಬೆಣ್ಣೆಯನ್ನು ಕಾಯಿಸಿದಾಗ ಹದಿನಾಲ್ಕು ಗಡಿಗೆ ತುಪ್ಪ ಸಿಕ್ಕಿತು. ಶ್ರೀ ಗಂಧದ ಮರದ ಕೆಂಡಕೊಂಡವನ್ನು ಮಾಡಿದರು. ಹದಿನಾಲ್ಕು ಗಡಿಗೆ ತುಪ್ಪವನ್ನು ಒಂದು ದೊಡ್ಡ ತಾಮ್ರದ ಕೊಪ್ಪರಿಗೆಗೆ ಹಾಕಿ ಅದನ್ನು ಕೆಂಡಕೊಂಡದ ಮೇಲಿಟ್ಟು ಒಂದೇ ಸಮನೆ ಹನ್ನೆರಡು ದಿನಗಳ ಕಾಲ ಕಾಯಿಸಿದರು. ತುಪ್ಪ ಕುದಿಯುತ್ತಿತ್ತು. ಆಗ ಚಿತ್ತಜ್ಜ ತನ್ನ ಕೈಯಲ್ಲಿ ಹಾಕಿಕೊಂಡಿದ್ದ ಚಿನ್ನದ ಬಟ್ಟಿನ ಸಲಿಗೆಯನ್ನು ತೆಗೆದು ಕೊಪ್ಪರಿಗೆಯೊಳಕ್ಕೆ ಹಾಕಿದ್ದ. ಕುದಿಯುತ್ತಿದ್ದ ತುಪ್ಪದೊಳಕ್ಕೆ ಕೈಯಿಟ್ಟು ಬಟ್ಟಿ ಸಲಿಗೆಯನ್ನು ತೆಗೆದವನೇ ಹಟ್ಟಿಯ ಗೌಡನಾಗುತ್ತಾನೆ ಎಂದು ಹೇಳಿದ. ಇದಕ್ಕೆ ಗಿಡ್ಡೀರೇಗೌಡ ಮತ್ತು ತಿಗಳಬಾಳೇಗೌಡ ಇಬ್ಬರೂ ಒಪ್ಪಿದರು. ಗಿಡ್ಡೀರೇಗೌಡನದು ಮೊದಲನೆಯ ಸರದಿ. ಅವನು ಅಂಗಿಯಮೇಲೆ ಅಂಗಿಯನ್ನು ಹಾಕಿಕೊಂಡು, ಕೈಯನ್ನು ಬಹಳ ಜೋಪಾನವಾಗಿ ರಕ್ಷಿಸಿಕೊಂಡು, ದುರಹಂಕಾರದಿಂದ ಜುಂಜಪ್ಪನ ಹೆಸರನ್ನು ನೆನೆಯದೆಯೇ ಕೊಪ್ಪರಿಗೆಯೊಳಕ್ಕೆ ಕೈಯಿಟ್ಟ. ಅವನ ಕೈ ಕಳಚಿಕೊಂಡು ತುಪ್ಪದ ಕೊಪ್ಪರಿಗೆಯಲ್ಲಿಯೇ ಬಿದ್ದುಹೋಯಿತು. ಕೊಪ್ಪರಿಗೆಯಿಂದ ಅಂಗಿಯನ್ನು ಮೇಲಕ್ಕೆ ತೆಗೆದಾಗ ಅಂಗಿಯ ತೋಳು ಮಾತ್ರ ಜೋಲಾಡುತ್ತಿತ್ತು. ನೋವನ್ನು ತಡೆದುಕೊಳ್ಳಲಾರದೆ ಅವನು ಗೋಳಾಡಿದ. ಅವನ ಕೈ ಕಳಚಿಕೊಂಡು ಹೋಗಿದೆಯೆಂದು ಎಲ್ಲರಿಗೂ ತಿಳಿಯಿತು. ಅನಂತರ ತಿಗಳ ಬಾಳೆಗೌಡನ ಸರದಿ. ಅವನು ಹಾಕಿಕೊಂಡಿದ್ದ ಅಂಗಿಯನ್ನು ಬಿಚ್ಚಿ, ನೀರಿನಲ್ಲಿ ಮುಳುಗಿ, ಒದ್ದೆ ಬಟ್ಟೆ ಉಟ್ಟು, ಜುಂಜಪ್ಪನನ್ನು ಧ್ಯಾನಮಾಡಿ ಬರಿಯ ಕೈಯನ್ನೇ ತುಪ್ಪದ ಕೊಪ್ಪರಿಗೆಯೊಳಕ್ಕೆ ಇಟ್ಟ, ಕುದಿಯುತ್ತಿದ್ದ ತುಪ್ಪ ತಕ್ಷಣವೇ ತಣ್ಣಗಾಯಿತು. ಅವನು ಸಲೀಸಾಗಿ ಅದರೊಳಗೆ ಬಿದ್ದಿದ್ದ ಚಿನ್ನದ ಬಟ್ಟಿನ ಸಲಿಗೆಯನ್ನು ಹೊರಕ್ಕೆ ತೆಗೆದ. ಅವನ ಕೈ ಸ್ವಲ್ಪವೂ ಸುಟ್ಟಿರಲಿಲ್ಲ. ಮೊದಲಿನಂತೆಯೇ ಇತ್ತು. ಸ್ಪರ್ಧೆಯಲ್ಲಿ ತಿಗಳಬಾಳೆಗೌಡನೇ ಗೆದ್ದುದರಿಂದ ಅವನೇ ಚಿಕ್ಕದ್ಯಾವರಹಟ್ಟಿಯ ಗೌಡನೆಂದು ಅಲ್ಲಿ ಸೇರಿದ್ದವರೆಲ್ಲಾ ನಿರ್ಧರಿಸಿದರು. ಮೂರು ಕಟ್ಟೆಮನೆಗಳಿಂದಲೂ ಬಂದಿದ್ದ ಪ್ರತಿನಿಧಿಗಳು ಒಟ್ಟಾರೆ ಸೇರಿ ಚಿಕ್ಕದ್ಯಾವರ ಹಟ್ಟಿಯ ಗೌಡಿಕೆ ತಿಗಳ ಬಾಳೇಗೌಡನಿಗೆ ಸೇರಬೇಕೆಂದು ತಾಮ್ರದ ಜಯರೇಖೆಯನ್ನು ಬರೆದರು. ಗಿಡ್ಡೀರೇಗೌಡ ತಿಗಳಬಾಳೇಗೌಡನಿಗೆ ದಳವಾಯಿಯಾಗಿ ಇರಬೇಕೆಂದು ನಿರ್ಧರಿಸಿ ಅದಕ್ಕೂ ತಾಮ್ರದ ಜಯರೇಖೆಯನ್ನು ಬರೆದರು. ತಿಗಳ ಬಾಳೇಗೌಡ ಜುಂಜಪ್ಪನ ಭಕ್ತನಾದ್ದರಿಂದ ಹಟ್ಟಿಯ ಗೌಡನಾದ. ಆದರೆ ಗಿಡ್ಡೀರೇಗೌಡ ಜುಂಜಪ್ಪನ ಮೇಲೆ ಹಠ ಸಾಧಿಸಿ , ಅವಿಧೇಯನಾಗಿ ನಡೆದುಕೊಂಡಿದ್ದರಿಂದ ಮೊದಲಿದ್ದ ಗೌಡಿಕೆಯನ್ನೂ ಕಳೆದುಕೊಂಡು ಕೇವಲ ದಳವಾಯಿಯಾಗಿ ಉಳಿಯಬೇಕಾಯಿತು. ಸೀರ‍್ಯದ ಕುರುಬರ ಕೇರಿಯಲ್ಲಿ

ಮಲಗಿದ್ದುದರಿಂದ ಜುಂಜಪ್ಪ ದೇವರಿಗೆ ಮೈಲಿಗೆಯಾಗಿ ಹೊಲೆಸೂತಕ ಬೆರೆದಿತ್ತು. ತಿಗಳ ಬಾಳೇಗೌಡ ಚಿಕ್ಕದ್ಯಾವರ ಹಟ್ಟಿಯ ಗೌಡನಾದ ಮೇಲೆ ಜುಂಜಪ್ಪ ದೇವರನ್ನು ಪುರಸಕ್ಕನ ಕೆರೆಯ ಮೂಡಲು ಕೋಡಿಗೆ ಕರೆದುಕೊಂಡು ಹೋಗಿ, ಅಲ್ಲಿ ಗಂಗಾಸ್ನಾನ ಮಾಡಿಸಿ, ಮೂರು ತಿಂಗಳ ಕಾಲ ಅಲ್ಲಿ ಅನ್ನಸತ್ರ ಏರ್ಪಡಿಸಿದ. ಅನಂತರ ದೇವರನ್ನು ವಿಜೃಂಭಣೆಯಿಂದ ಚಿಕ್ಕದ್ಯಾವರ ಹಟ್ಟಿಗೆ ಕರೆದುಕೊಂಡು ಬಂದ. ಪೂಜಾರಿ ಚಿತ್ತಯ್ಯ ಜುಂಜಪ್ಪನನ್ನು ಭಕ್ತಿಯಿಂದ ಪೂಜೆ ಮಾಡುತ್ತಿದ್ದ.

೩.೧.೩. ಪೂಜಾರಿ ಚಿತ್ತಯ್ಯ ಜುಂಜಪ್ಪ ದೇವರನ್ನು ಕಟ್ಟಿಟ್ಟ ಪ್ರಸಂಗ

ಜುಂಜಪ್ಪ ದೇವರನ್ನು ಹಟ್ಟಿಯೊಳಗೆ ಗುಬ್ಬದಲ್ಲಿಟ್ಟಿದ್ದರೆ ಅಗಾಗ ಹೊಲೆಸೂತಕ ಅಗುತ್ತಲೇ ಇರುವ್ಯದೆಂದು ಹೆದರಿದ ಪೂಜಾರಿ ಚಿತ್ತಯ್ಯ ಪುರಸಕ್ಕನ ಕೆರೆಯ ಮೂಡಲು ಕೋಡಿಯಲ್ಲಿ ಆ ದೇವರನ್ನು ಕಟ್ಟಿಟ್ಟು ಹೂಳಬೇಕೆಂಬ ತೀರ್ಮಾನಕ್ಕೆ ಬಂದ. ಆದರೆ ಇದು ಜುಂಜಪ್ಪನಿಗೆ ಸ್ವಲ್ಪವೂ ಇಷ್ಟವಿರಲಿಲ್ಲ. ಒಂದೆರಡು ಬಾರಿ ಜುಂಜಪ್ಪ ಈ ವಿಷಯವನ್ನು ಪೂಜಾರಿ ಚಿತ್ತಯ್ಯನಿಗೆ ತಿಳಿಸಿದ. ಆದರೆ ದೇವರಿಗೆ ಹೊಲೆಸೂತಕ ಉಂಟಾಗುವ ಘಟನೆಗಳು ಹೆಚ್ಚು ಹೆಚ್ಚಾಗಿ ನಡೆಯಲು ಆರಂಭವಾದುದರಿಂದ ಪೂಜಾರಿ ಚಿತ್ತಯ್ಯ ಅನಿವಾರ್ಯವಾಗಿ ಜುಂಜಪ್ಪ ದೇವರನ್ನು ಕಟ್ಟಿಡಬೇಕಾಯಿತು. ಒಂದು ದಿನ ಪೂಜಾರಿ ಚಿತ್ತಯ್ಯ ಜುಂಜಪ್ಪ ದೇವರನ್ನು ಕರಿಯ ಕಂಬಳಿಯಲ್ಲಿ ಸುತ್ತಿಕೊಂಡು ಅದರಲ್ಲಿ ಕೆಲವು ಆಭರಣಗಳನ್ನಿಟ್ಟು, ಅವುಗಳನ್ನು ಎತ್ತಿಕೊಂಡು ಹೊರಟ. ಅವನ ಜೊತೆಯಲ್ಲಿಯೇ ಬಕ್ಕದಲೆ ಚಿತ್ತಯ್ಯ, ಬರಿದಲೆ ಚಿತ್ತಯ್ಯ ಮೊದಲಾದವರು ಸಲಿಕೆ ಗುದ್ದಲಿಗಳನ್ನು ತೆಗೆದುಕೊಂಡು ಪುರಸಕ್ಕನ ಕರೆಯ ಮೂಡಲ ಕೋಡಿಗೆ ಹೋಗಿ ಹದಿನಾಲ್ಕು ಮಟ್ಟ ಆಳವಾದ ಗುಂಡಿಯನ್ನು ತೆಗೆದರು. ಪೂಜಾರಿ ಚಿತ್ತಯ್ಯ ಆ ಗುಂಡಿಯೊಳಗೆ ಮೊದಲು ಆಭರಣಗಳನ್ನು ಹಾಕಿ ಅದರ ಮೇಲೆ ಜುಂಜಪ್ಪ ದೇವರನ್ನು ಕೂಡಿಸಿ ಮಣ್ಣು ಮುಚ್ಚಿ ಮೇಲೆ ಗುರುತಿಗೆ ಇರಲೆಂದು ದೇವರ ಬೆತ್ತವನ್ನು ನೆಟ್ಟ. ಅದರ ಪಕ್ಕದಲ್ಲಿಯೇ ಕರಿಯಮ್ಮ ದೇವರನ್ನು ಹೂಳಿ ಮೇಲೆ ಗುರುತಿಗೆಂದು ಒಂದು ಒಣಗಿದ ಬಿದಿರು ಕಡ್ಡಿಯನ್ನು ನೆಟ್ಟ. ಅಲ್ಲಿಂದ ಅವರೆಲ್ಲರೂ ಹೊರಟು ಬಂದರು. ಸ್ವಲ್ಪ ಕಾಲ ಕಳೆದ ಮೇಲೆ ಮೇಲೆ ಒಣಗಿದ್ದ ಬೆತ್ತ, ಒಣಗಿದ್ದ ಬಿದಿರು ಎರಡೂ ಚಿಗುರಿದವು. ಜುಂಜಪ್ಪ ದೇವರನ್ನು ಹೂಳಿದ ಮೇಲೆ ಪೂಜಾರಿ ಚಿತ್ತಯ್ಯ ಚಿಕ್ಕದ್ಯಾವರ ಹಟ್ಟಿಗೆ ಬಂದು ತನ್ನ ಹೆಂಡತಿ ಮಕ್ಕಳನ್ನು. ದನಕರುಗಳನ್ನು ಕರೆದುಕೊಂಡು ಬಂದು, ಬೂದಾಳು ಸೀಮೆಗೆ ಹೋಗಿ ಅಲ್ಲಿ ಕೂಲಿ ಮಾಡಿ ಜೀವನಮಾಡಬೇಕು ಎಂದು ನಿರ್ಧರಿಸಿ ಅಲ್ಲಿಂದ ಹೊರಟ. ಜುಂಜಪ್ಪ ದೇವರನ್ನು ಪೂಜಾರಿ ಚಿತ್ತಯ್ಯ ಹೂಳಿದಾಗ ಅದರೊಡನೆಯೇ ಆಭರಣಗಳನ್ನೂ ಹೂಡಿದ್ದನಷ್ಟೆ. ಅವು ಹೆಣ್ಣುಮಕ್ಕಳು ಧರಿಸಿದ್ದ ಆಭರಣಗಳಾದುದರಿಂದ ಜುಂಜಪ್ಪನಿಗೆ ಹೊಲೆ ಸೂತಕ ತಗುಲಿತು. ಆದ್ದರಿಂದ ಪುರಸಕ್ಕನ ಕರೆಯ ಮೂಡಲ ಕೋಡಿಯಲ್ಲಿ ಜುಂಜಪ್ಪ ಇರಲಾರದೆ ಅಲ್ಲಿಂದ ಹೊರಟು ಮರಡಿ ಗುಡ್ಡದ ಬಳಿ ಪೂಜಾರಿ ಚಿತ್ತಯ್ಯನನ್ನು ದಾರಿಯಲ್ಲಿ ಅಡ್ಡಗಟ್ಟಿದ. ಜುಂಜಪ್ಪ

ಬಳ್ಳಾರಿ ಕರಿ ತುರುಕನ ವೇಷ ಧರಿಸಿದ್ದುದರಿಂದ ಚಿತ್ತಯ್ಯನಿಗೆ ಅವನು ಜುಂಜಪ್ಪನೆಂದು ತಿಳಿಯಲೇ ಇಲ್ಲ. ತುರುಕನಿಂದ ತನಗೆ ಹೊಲೆಸೂತಕ ತಗುಲುವುದೆಂದು ಹೆದರಿ ದನಕರುಗಳನ್ನು ಅಲ್ಲಿಯೇ ಬಿಟ್ಟು ಹೆಂಡತಿ ಮಕ್ಕಳೊಡನೆ ಬೂದಾಳು ಸೀಮೆಗೆ ಓಡಿಹೋದ. ಜುಂಜಪ್ಪ ಪೂಜಾರಿ ಚಿತ್ತಯ್ಯನ ದನಗಳನ್ನು ಕಾಯಲು ನಾಯಿಗಳನ್ನು ನೇಮಿಸಿ ಹದಿನೈದು ದಿನಗಳ ಕಾಲ ಮರಡಿಗುಡ್ಡದ ಮೇಲೆ ಗುಂಗೆ ಹುಳುವಾಗಿ ಹಾರಾಡುತ್ತಿದ್ದ.

ಮೇಕೆ ಬಿಕ್ಕಣ್ಣ ಒಬ್ಬ ಪ್ರಮುಖ ವ್ಯಕ್ತಿ. ಅವನ ಬಳಿ ಒಂದು ಸಾವಿರ ಮೇಕೆಗಳು ಇದ್ದವು. ಅವನ ಹೆಂಡತಿಯ ಹೆಸರು ಕಂಬಕ್ಕ. ಅವರಿಬ್ಬರಿಗೂ ಒಬ್ಬಳೇ ಮಗಳು. ಒಂದು ದಿನ ಮೇಕೆ ಬಿಕ್ಕಣ್ಣ ಮರಡಿ ಗುಡ್ಡದ ಬಳಿ ಮೇಕೆಗಳನ್ನು ಕಾಯುತ್ತಿದ್ದಾಗ ಅವನಿಗೆ ಯಾರೋ ತನ್ನ ಹೆಸರು ಹಿಡಿದು ಕೂಗುತ್ತಿರುವ ಶಬ್ದ ಕೇಳಿಸಿತು. ಹಿಂತಿರುಗಿ ನೋಡಿದಾಗ ಅವನಿಗೆ ಜುಂಜಪ್ಪ ಕಾಣಿಸಿದ. ಜುಂಜಪ್ಪ ಮರಡಿ ಗುಡ್ಡದ ಮೇಲೆ ಅಲೆಯುವ ಕಾರಣವೇನೆಂಬುದನ್ನು ಮೇಕೆ ಬಿಕ್ಕಣ್ಣ ವಿಚಾರಿಸಿದ. "ಬಿಕ್ಕಣ್ಣಾ, ಉಪ್ಪರಿಗೆ ಮೇಲಿರೋರು ತಿಪ್ಪೆಮೇಲೆ, ತಿಪ್ಪೆ ಮೇಲೆ ಇರೋರು ಉಪ್ಪರಿಗೆ ಮೇಲೆ" ಎಂದ. ಏನು ಬಂತು ಸ್ವಾಮಿ ನಿಮಗೆ ಅಂಥ ಕಷ್ಟ ಅಂತ ವಿಚಾರಿಸಿದಾಗ ಪೂಜಾರಿ ಚಿತ್ತಯ್ಯ ತನ್ನನ್ನು ಪುರಸಕ್ಕನ ಕೆರೆಯಲ್ಲಿ ಹೂಳಿದ್ದನ್ನು ವಿವರವಾಗಿ ತಿಳಿಸಿ ಏನಾದರೂ ಮಾಡಿ ಪೂಜಾರಿ ಚಿತ್ತಯ್ಯನನ್ನು ಬೂದಾಳು ಸೀಮೆಯಿಂದ ತನ್ನ ಬಳಿಗೆ ಕರೆದುಕೊಂಡು ಬರಬೇಕೆಂದು ಹೇಳಿದ. ಬಿಕ್ಕಣ್ಣನ ಮಗಳಿಗೆ ಮೈನೆರೆಯುವ ವಯಸ್ಸಾಗಿತ್ತು. ಆದ್ದರಿಂದ ತನ್ನ ಮಗಳನ್ನು ಬಿಟ್ಟು ಎಲ್ಲಿಯೂ ಹೋಗುವಂತಿರಲಿಲ್ಲ. ತನ್ನ ಸಾವಿರ ಮೇಕೆಗಳನ್ನು ಬಿಟ್ಟು ಹೋದರೆ ಅವು ತೋಳಗಳಿಗೆ ಬಲಿಯಾಗುವುವು ಎಂಬ ಭಯವೂ ಅವನಿಗಿತ್ತು. ತನ್ನ ಕಷ್ಟಗಳನ್ನೆಲ್ಲಾ ಮೇಕೆ ಬಿಕ್ಕಣ್ಣ ಜುಂಜಪ್ಪನಿಗೆ ವಿವರಿಸಿ ಹೇಳಿದ. ಆ ಎಲ್ಲಾ ಜವಾಬ್ದಾರಿಯನ್ನು ತಾನು ಹೊರುವುದಾಗಿ ಜುಂಜಪ್ಪ ಹೇಳಿದ ಮೇಲೆ ಮೇಕೆ ಬಿಕ್ಕಣ್ಣ ಬೂದಾಳು ಸೀಮೆಗೆ ಬಂದು ಪೂಜಾರಿ ಚಿತ್ತಯ್ಯನನ್ನು ಬಹಳ ಕಷ್ಟಪಟ್ಟು ಹುಡುಕಿದ. ಇಬ್ಬರೂ ಮಾತುಕತೆಯಾಡಿದರು. ಜುಂಜಪ್ಪನನ್ನು ತೋರಿಸುವುದಾಗಿ ಮೇಕೆ ಬಿಕ್ಕಣ್ಣ ಪೂಜಾರಿ ಚಿತ್ತಯ್ಯನಿಗೆ ಹೇಳಿದ. ಆದರೆ ಆ ಮಾತಿನಲ್ಲಿ ಪೂಜಾರಿ ಚಿತ್ತಯ್ಯನಿಗೆ ಮೊದಲು ನಂಬಿಕೆಯೇ ಬರಲಿಲ್ಲ. ಮೂರುತಿಂಗಳ ಹಿಂದೆ ತಾನೇ ಪುರಸಕ್ಕನ ಕೆರೆಯಲ್ಲಿ ಹೂಳಿದ ದೇವರನ್ನು ಈ ಮೇಕೆ ಬಿಕ್ಕಣ್ಣ ಎಲ್ಲಿ ತೋರಿಸುತ್ತಾನೆ ಎಂದು ಅವನಿಗೆ ಆಶ್ಚರ್ಯವೂ ಆಯಿತು. ಹೊಲೆಸೂತಕ ತಗುಲಿ ಜುಂಜಪ್ಪ ಪುರಸಕ್ಕನ ಕೆರೆಯ ಮೂಡಲ ಕೋಡಿಯನ್ನು ಬಿಟ್ಟು ಮರಡಿ ಗುಡ್ಡದ ಮೇಲೆ ಅಲೆದಾಡುತ್ತಿರುವ ವಿಷಯವನ್ನು ಮೇಕೆ ಬಿಕ್ಕಣ್ಣ ಪೂಜಾರಿ ಚಿತ್ತಯ್ಯನಿಗೆ ವಿವರವಾಗಿ ತಿಳಿಸಿದ. ಆಗ ಪೂಜಾರಿ ಚಿತ್ತಯ್ಯನಿಗೆ ನಂಬಿಕೆಯುಂಟಾಗಿ ಜುಂಜಪ್ಪನನ್ನು ಕಾಣುವ ಉದ್ದೇಶದಿಂದ ಮೇಕೆ ಬಿಕ್ಕಣ್ಣನೊಂದಿಗೆ ಹೊರಟು ಪುರಸಕ್ಕನ ಕೆರೆಯ ಬಳಿಗೆ ಬಂದ.

ಪುರಸಕ್ಕನ ಕೆರೆ ನೀರಿಲ್ಲದೆ ಒಣಗಿ ಬೀಟು ಬಿಟ್ಟಿತ್ತು. ಜುಂಜಪ್ಪ ದೇವೇಂದ್ರನಿಗೆ ಒಂದು ಓಲೆಯನ್ನು ಬರೆದು ಕೂಡಲೇ ಮಳೆ ಬರಿಸಬೇಕೆಂದು ಆಜ್ಞೆ ಮಾಡಿದ.

ಮಳೆ ಜೋರಾಗಿ ಬಂದು ಪುರಸಕ್ಕನ ಕೆರೆ ಕೋಡಿ ಬಿದ್ದುಹೋಯಿತು. ಕೆರೆಯೊಳಗೆ ಹೂತಿದ್ದ ಜುಂಜಪ್ಪ ದೇವರ ಪೆಟ್ಟಿಗೆ ನೀರಿನಲ್ಲಿ ತೇಲಾಡಿತು. ಕೆರೆಯ ಕೋಡಿಯಲ್ಲಿ ಮಾತ್ರವಲ್ಲದೆ ಕೆರೆಯ ಏರಿಯ ಮೇಲೂ ನೀರು ಹರಿಯುತ್ತಿತ್ತು. ಆಗ ಬೇವಿನಹಳ್ಳಿ ಕರಿಯಮ್ಮ, ಗೌರಸಂದ್ರದ ಮಾರಕ್ಕ ಮೊದಲಾದ ಏಳುಜನ ಮಾರಿಯರು ಬಂದು ಒಡೆಯುತ್ತಿದ್ದ ಏರಿಗೆ ಮಣ್ಣು ಹಾಕಿದರು. ಅದರೂ ಕೋಡಿಯಿಂದ ನೀರು ಹರಿಯುವುದು ನಿಲ್ಲಲಿಲ್ಲ. ಆಗ ಜುಂಜಪ್ಪ ಪುರಲಹಳ್ಳಿ ಭೂತಪ್ಪನನ್ನು ನೆನೆಸಿದ. ಆಗ ಪುರಲಹಳ್ಳಿ ಭೂತಪ್ಪ ಬಂದು ಬಹಳ ಕಷ್ಟದಿಂದ ಕೆರೆಯ ಕೋಡಿಯಲ್ಲಿ ತೇಲಿಹೋಗುತ್ತಿದ್ದ ಜುಂಜಪ್ಪನ ಪೆಟ್ಟಿಗೆಯನ್ನು ಹಿಡಿದುಕೊಂಡ. ಆ ಪೆಟ್ಟಿಗೆ ಒಂದು ಸುರಹೊನ್ನೆ ಮರಕ್ಕೆ ಸಿಕ್ಕಿಕೊಂಡದ್ದರಿಂದ ಪುರಲಹಳ್ಳಿ ಭೂತಪ್ಪನಿಗೆ ಸಿಕ್ಕಿತು. ಇಲ್ಲದಿದ್ದರೆ ನೀರುಪಾಲಾಗಿ ಹೋಗುತ್ತಿತ್ತು. ಪುರಸಕ್ಕನ ಕೆರೆಯೆಲ್ಲಿನ ನೀರೆಲ್ಲಾ ಹೊರಟು ಹೋಗಿ ಕೆರೆ ಬರಿದಾಯಿತು. ಪುರಲ ಹಳ್ಳಿ ಭೂತಪ್ಪ ಮಾಡಿದ ಉಪಕಾರಕ್ಕೆ ಪ್ರತಿಯಾಗಿ ಅವನಿಗೆ ತನ್ನ ಭಕ್ತರೆಲ್ಲರೂ ಶನಿವಾರದ ದಿನ ಪೂಜೆ ಮಾಡಬೇಕೆಂದು ಜುಂಜಪ್ಪ ನಿಯಮ ಮಾಡಿದ. ಈ ಸಂಪ್ರದಾಯವೇ ಮುಂದೆ ನಿಗದಿಯಾಗಿ ಉಳಿಯಿತು. ಪೂಜಾರಿ ಚಿತ್ತಯ್ಯ ಮೇಕೆ ಬಿಕ್ಕಣ್ಣನೊಡನೆ ಪುರಸಕ್ಕನ ಕೆರೆಯ ಬಳಿಗೆ ಬರುವ ವೇಳೆಗೆ ಇಷ್ಟೆಲ್ಲಾ ನಡೆದು ಹೋಗಿತ್ತು. ಜುಂಜಪ್ಪನಿಗೆ ತಾನೇನೂ ಮಾಡಲು ಸಾಧ್ಯವಾಗಲಿಲ್ಲ ಎಂಬ ದುಃಖದಿಂದ ಪೂಜಾರಿ ಚಿತ್ತಯ್ಯ ಕೆಂಡ ಕೊಂಡವನ್ನು ತಯಾರಿಸಿ ಅದರಲ್ಲಿ ಬೀಳಲು ಸಿದ್ಧನಾದ. ಆದರೆ ಅವನ ಭಕ್ತಿಗೆ ಮೆಚ್ಚಿದ ಜುಂಜಪ್ಪ ಪೂಜಾರ ಚಿತ್ತಯ್ಯ ಕೊಂಡದೊಳಗೆ ಬೀಳದಂತೆ ತಡೆದ. ಆದರೆ ಪೂಜಾರಿ ಚಿತ್ತಯ್ಯನಿಗೆ ಬದುಕುವ ಆಸೆ ಉಳಿದಿರಲಿಲ್ಲ. ತನ್ನನ್ನು ಜುಂಜಪ್ಪ ಉರಿಗಣ್ಣಿನಿಂದ ಸುಟ್ಟು ಬೂದಿಮಾಡಬೇಕೆಂದು ಪೂಜಾರಿ ಚಿತ್ತಯ್ಯ ಪ್ರಾರ್ಥಿಸಿದ. ಅದರಂತೆಯೇ ಜುಂಜಪ್ಪ ಮರಡಿ ಗುಡ್ಡದ ಮೇಲೆ ಹತ್ತಿ ಅಲ್ಲಿಂದ ತನ್ನ ಉರಿಗಣ್ಣನ್ನು ಬಿಟ್ಟ, ಪೂಜಾರಿ ಚಿತ್ತಯ್ಯ ಸುಟ್ಟು ಬೂದಿಯಾದ. ಆಗ ಜುಂಜಪ್ಪ ಪೂಜಾರಿ ಚಿತ್ತಯ್ಯನ ಭಕ್ತಿಗೆ ಮೆಚ್ಚಿ ಅವನಿಗೆ ಒಂದು ಗುಡ್ಡೆಯನ್ನು ನಿರ್ಮಿಸುವಂತೆ ತನ್ನ ಭಕ್ತರಿಗೆ ತಿಳಿಸಿ ಅವನಿಗೂ ಪೂಜೆ ನಡೆಯುವಂತೆ ನಿಗದಿ ಮಾಡಿದ. ಅಲ್ಲಿಂದ ಚಿಕ್ಕದ್ಯಾವರ ಹಟ್ಟಿಗೆ ಹೋಗಿ ನೆಲೆಗೊಂಡ. ಅಲ್ಲಿಂದ ಕಳುವಾರಹಳ್ಳಿಗೆ ಹೋಗಿ ಸ್ಥಿರವಾಗಿ ನೆಲೆಗೊಂಡ. ಪೂಜಾರಿ ಚಿತ್ತಯ್ಯನ ಮೂರು ವರ್ಷದ ಮಗ ಬಾಳೆಕಾಯಿ ಬಟ್ಟ ಚಿಕ್ಕ ದ್ಯಾವರಹಟ್ಟಿಯಲ್ಲಿ ಜುಂಜಪ್ಪನ ಪೂಜಾರಿಯಾಗಿ ಮುಂದುವರಿದು ತನ್ನ ಕಾರ್ಯವನ್ನು ಯಶಸ್ವಿಯಾಗಿ ಮಾಡಿದ. ಇಲ್ಲಿಂದ ಮುಂದೆ ಜುಂಜಪ್ಪನ ಮಹಿಮೆ ಎಲ್ಲಾ ಕಡೆಗೂ ಹಬ್ಬಿತು. ಹೆಚ್ಚು ಹೆಚ್ಚು ಜನ ಜುಂಜಪ್ಪನ ಭಕ್ತರಾದರು. ಹಾಗಲವಾಡಿ ಮೊದಲಾದ ಕ್ಷೇತ್ರಗಳು ಜುಂಜಪ್ಪನ ಕ್ಷೇತ್ರಗಳಾದವು.

೩.೨. ಜುಂಜಪ್ಪನ ಕಾವ್ಯದಲ್ಲಿ ಬರುವ ಸ್ಥಳಗಳು

೧. **ಕೊಂಕಿ ಜರಿಮಲೆ ಚಿಕ್ಕದೇವರಹಟ್ಟಿ** : ಬಳ್ಳಾರಿ ಜಿಲ್ಲೆಯ ಕೂಡ್ಲಿಗಿ ತಾಲ್ಲೂಕಿನಲ್ಲಿರುವ ಒಂದು ಹಟ್ಟಿ. ಜುಂಜಪ್ಪನ ಪೂರ್ವಿಕರ ಸ್ಥಳ. ಇಲ್ಲಿ ಜುಂಜಪ್ಪನ ದೇವಸ್ಥಾನ ಇದೆ.

೨. **ಕಳುವಾರಹಳ್ಳಿ, (ಕಳುವೋರಳ್ಳಿ) ಮತ್ತು ಬೇವಿನಹಳ್ಳಿ** : ತಾಲ್ಲೂಕು ಕೇಂದ್ರವಾದ ಸಿರಾದಿಂದ ೨೦ ಕಿಲೋಮೀಟರ್ ದೂರದಲ್ಲಿರುವ ಹಟ್ಟಿಗಳು. ಜುಂಜಪ್ಪನ ಕಾರ್ಯಕ್ಷೇತ್ರಗಳು ಹಾಗೂ ಧಾರ್ಮಿಕ ಕೇಂದ್ರಗಳು

೩. **ಹಾಗಲವಾಡಿ** : ಗುಬ್ಬಿ ತಾಲ್ಲೂಕಿನಲ್ಲಿರುವ ಜುಂಜಪ್ಪನ ಒಂದು ಪ್ರಮುಖ ಧಾರ್ಮಿಕ ಕೇಂದ್ರ

೪. **ತಾಳ್ಯ** : ಹೊಳಲ್ಕೆರೆ ತಾಲ್ಲೂಕಿನಲ್ಲಿರುವ ತಾಳ್ಯದ ದುರ್ಗಿಯ ಧಾರ್ಮಿಕ ಕೇಂದ್ರ

೫. **ಚಿತ್ರಹಳ್ಳಿ** : ಹೊಳಲ್ಕೆರೆ ಚಿತ್ರದುರ್ಗ ಮಧ್ಯೆ ಇರುವ ಗ್ರಾಮ. ಚಿತ್ರದೇವರ ಧಾರ್ಮಿಕ ಕೇಂದ್ರ

೬ **ಕಂಬೇರಹಟ್ಟಿ** : ಕಳುವಾರಹಳ್ಳಿ ಹತ್ತಿರದಲ್ಲಿಯೇ ಇರುವ ಬೇಚರಾಕ್ ಹಟ್ಟಿ. ಇದನ್ನು ಕಂಬೇರಹಟ್ಟಿ ಹಾಳು ಎಂದು ಕರೆಯುತ್ತಾರೆ. ಜುಂಜಪ್ಪನ ಸೋದರಮಾವಂದಿರು ವಾಸವಾಗಿದ್ದ ಜಾಗ.

೭ **ಚೇಳೂರು** : ಗುಬ್ಬಿ ತಾಲ್ಲೂಕಿನಲ್ಲಿರುವ ಜುಂಜಪ್ಪನ ಇನ್ನೊಂದು ಪ್ರಮುಖ ಕೇಂದ್ರ.

೮. **ಪುರುಸಕ್ಕನ ಕೆರೆ** (ಪುರುಸವ್ವನ ಕೆರೆ, ಪುರುಷವ್ವನ ಕೆರೆ, ಅಕ್ಕವ್ವನ ಕೆರೆ). ಸಿರಾದಿಂದ ಹನ್ನೆರಡು ಕಿಲೋಮೀಟರ್ ದೂರದಲ್ಲಿದೆ.

೯. **ಸಿರಾ** : ತುಮಕೂರು ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ.

೧೦. **ಮರಡಿ ಗುಡ್ಡ** : ಜುಂಜಪ್ಪನ ಕಾವ್ಯದಲ್ಲಿ ಪ್ರಸ್ತಾಪವಾಗುವ ಗುಡ್ಡ ಹುಲ್ಲುಗಾವಲು ಪ್ರದೇಶ.

೧೧. **ಮದಗದ ಗುಡ್ಡ** : ಗುಬ್ಬಿ ತಾಲ್ಲೂಕಿನ ಮಂಚಲದೊರೆ ಗ್ರಾಮದ ಬಳಿ ಚೇಳೂರಿಗೆ ೧೫ ಕಿಲೋಮೀಟರ್ ದೂರದಲ್ಲಿದೆ.

೧೨. **ಸೊಂಡೂರು** : ಬಳ್ಳಾರಿ ಜಿಲ್ಲೆಯ ಒಂದು ತಾಲ್ಲೂಕು ಕೇಂದ್ರ. ಕಾಡು ಹಾಗೂ ಹುಲ್ಲುಗಾವಲುಗಳಿರುವ ಪ್ರದೇಶ.

೧೩. **ಮತ್ತೋಡು** : ಹೊಸದುರ್ಗ ತಾಲ್ಲೂಕಿನ ಒಂದು ಹೋಬಳಿ.

೧೪. **ತಾಳೆದುರ್ಗಿ ಕಾವಲು** : ಹೊಳಲ್ಕೆರೆ ತಾಲ್ಲೂಕಿನ ತಾಳ್ಯ ಗ್ರಾಮದ ಹುಲ್ಲುಗಾವಲು.

೧೫. **ಏಣುಕಲ್ಲುಗುಡ್ಡ (ವೇಣುಕಲ್ ಗುಡ್ಡ)** : ಸಿರಾ ತಾಲ್ಲೂಕಿನ ಕೊನೆಯಲ್ಲಿರುವ ಒಂದು ಗುಡ್ಡ. ಎತ್ತಪ್ಪ ದೇವರ ಪ್ರಮುಖ ಧಾರ್ಮಿಕ ಕೇಂದ್ರ

೧೬. **ಸಾಣಿಕೆರೆ** : ಚಳ್ಳಕೆರೆ ತಾಲ್ಲೂಕಿನ ಒಂದು ಗ್ರಾಮ.

೧೭. **ಹುಲಿಕುಂಟೆ** : ಸಿರಾ ತಾಲ್ಲೂಕಿನ ಒಂದು ಹೋಬಳಿ ಕೇಂದ್ರ.

೧೮. **ಗೌರಸಂದ್ರ** : ಮಾರಕ್ಕನ ಧಾರ್ಮಿಕ ಕೇಂದ್ರ, ಚಳ್ಳಕೆರೆ ತಾಲ್ಲೂಕಿನಲ್ಲಿದೆ.

೧೯. **ಪುರಲಹಳ್ಳಿ** : ಚಳ್ಳಕೆರೆ ಪರಶುರಾಮಪುರ ಮಧ್ಯೆ ಬರುವ ಭೂತಪ್ಪನ ಧಾರ್ಮಿಕ ಕೇಂದ್ರ.

೩.೩. ಗ್ರಂಥ ಸೂಚಿ

೩.೩.೧. ಕನ್ನಡ ಗ್ರಂಥಗಳು

೧. ಅಂಬಳಿಕೆ ಹಿರಿಯಣ್ಣ, ಜನಪದ ಮಹಾಕಾವ್ಯ, ೧೯೯೮, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨. ಕಾಳೇಗೌಡ ನಾಗವಾರ, ಕಾಡುಗೊಲ್ಲರ ಜಾನಪದ: ಒಂದು ಅಧ್ಯಯನ, ೧೯೮೪, ಬೆಂಗಳೂರು. ವಿಶ್ವವಿದ್ಯಾನಿಲಯದಿಂದ ಪಿಎಚ್.ಡಿ. ಪದವಿ ಪಡೆದ ಮಹಾಪ್ರಬಂಧ (ಅಪ್ರಕಟಿತ).

೩. ಕುರುವ ಬಸವರಾಜ, *ಜನಪದ ಮಹಾಕಾವ್ಯಗಳ ನಿರ್ಮಾಣ ಪ್ರತಿಭೆಯ ನೆಲೆಗಳು* ೨೦೧೧, ಗೀತಾಂಜಲಿ ಪಬ್ಲಿಕೇಷನ್ಸ್, ಬೆಂಗಳೂರು.

೪. ಕೇಶವನ್ ಪ್ರಸಾದ್ ಕೆ., ಮಲೆಯ ಮಾದೇಶ್ವರ, ೧೯೯೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೫. ಚಿಕ್ಕಣ್ಣ ಎಣ್ಣೆಕಟ್ಟೆ, *ವೀರ ಜುಂಜಪ್ಪ: ಸಮಗ್ರ ಕಥಾವಳಿ*, ೨೦೧೧, ಗಡಿನಾಡ ಜಾನಪದ ಸಂಪರ್ಕಾಭಿವೃದ್ಧಿ ಕೇಂದ್ರ ಪ್ರತಿಷ್ಠಾನ, ಶಿರಾ.

೬ ಚಿದಾನಂದಮೂರ್ತಿ ಎಂ., *ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ*, ೧೯೬೬, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು.

೭ ಚೆಲುವರಾಜು, *ಜುಂಜಪ್ಪ*, ೧೯೯೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೮. ಪರಮಶಿವಯ್ಯ ಜೀ. ಶಂ., *ಜನಪದ ಕಾವ್ಯ ಕಥೆಗಳು*, ೧೯೭೧, ಸುರುಚಿ ಪ್ರಕಾಶನ, ಮೈಸೂರು.

೯. ______ , ಮಂಟೇಸ್ವಾಮಿ ಕಾವ್ಯ, ೧೯೭೩, ಸಾಹಿತ್ಯ ಸದನ, ಮೈಸೂರು.

೧೦. ______ , *ದಕ್ಷಿಣ ಕರ್ನಾಟಕದ ಜನಪದ ಕಾವ್ಯ ಪ್ರಕಾರಗಳು*, ೧೯೭೯, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ.

೧೧. ಬೋರಲಿಂಗಯ್ಯ ಹಿ.ಚಿ., ಮಂಟೇಸ್ವಾಮಿ, ೧೯೯೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೨. ಮುತ್ತಯ್ಯ ಎಸ್. ಎಂ., ಕನ್ನಡ ಜನಪದ ಮಹಾಕಾವ್ಯಗಳು ಮತ್ತು ಪ್ರತಿ *ಸಂಸ್ಕೃತಿ*, ೨೦೦೮, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು.

೧೩. ಮೈತ್ರಿ ಕೆ. ಎಂ., ಕುಮಾರರಾಮ ಮತ್ತು ಕೃಷ್ಣಗೊಲ್ಲರ ಮಹಾಕಾವ್ಯ, ೧೯೯೭, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೪. ಮೈತ್ರಿ. ಕೆ. ಎಂ., ಕೃಷ್ಣಗೊಲ್ಲರ ಕಥನಕಾವ್ಯಗಳು, ೧೯೯೭ ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ.

೧೫. ನಿಂಗಪ್ಪ ಮುದೇನೂರು, ಕನ್ನಡ ಜನಪದ ಮಹಾಕಾವ್ಯಗಳ ಸಾಂಸ್ಕೃತಿಕ ವೀರರು, ೨೦೦೪, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೧೬. ಮೀರಾಸಾಬಿಹಳ್ಳಿ ಶಿವಣ್ಣ, *ಗೊಲ್ಲ ಕಡಗ*, ೧೯೯೯, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೧೭. ______ , ಮ್ಯಾಸ ಮಂಡಲ,೨೦೦೩, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು.

೧೮. ______ , *ಕಾಡುಗೊಲ್ಲರ ಸಂಸ್ಕೃತಿ*, ೨೦೦೪, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೧೯. ______ , *ಕಾಡುಗೊಲ್ಲ ಬುಡಕಟ್ಟು ವೀರರು*, ೨೦೦೫, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೦. ______ , *ಎತ್ತಪ್ಪ, ೨೦೦೨*, ಸಿವಿಜಿ ಪಬ್ಲಿಕೇಷನ್ಸ್, ಬೆಂಗಳೂರು.

೨೧. ನರಸಿಂಹಾಚಾರ್ ಡಿ. ಎಲ್., *ಕನ್ನಡ ಗ್ರಂಥ ಸಂಪಾದನೆ*, ೧೯೬೪, ಶಾರದಾ ಮಂದಿರ, ಮೈಸೂರು.

೨೨. ನಾವಡ ಎ. ವಿ., ರವೀಂದ್ರನಾಥ್. ಕೆ., *ಕವಳಿಗೆ*, ೨೦೦೬, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೨೩. ______ ನಾವಡ ವಿ.ವಿ. ಮತ್ತು ಇತರರು (ಸಂ), *ಸಿರಿಗನ್ನಡ*, ೨೦೧೩ ಆಳ್ವಾಸ್ ವಿರಾಸತ್ ೨೦೧೩ನೆಯ ನೆನಪಿನ ಸಂಪುಟ, ಆಳ್ವಾಸ್ ಪ್ರಕಾಶನ, ಮೂಡಬಿದರೆ.

೨೪. ನೇಗಿನಹಾಳ, ಎಂ. ಬಿ., *ಮೈಲಾರಲಿಂಗ– ಖಂಡೋಬ*, ೧೯೯೨, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ.

೨೫. ರಾಜಶೇಖರ. ಪಿ.ಕೆ., *ಮಲೆಯ ಮಾದೇಶ್ವರ*, ೧೯೭೩, ಹೊನ್ನಾರು ಗಾಯಕರು, ಮೈಸೂರು.

೨೬. ರಾಗೌ ಮತ್ತು ರಾಜಶೇಖರ. ಪಿ.ಕೆ, (ಸಂ.), *ಜನಪದ ರಾಮಾಯಣ*, ೧೯೭೩, ಶ್ವೇತಾದ್ರಿ, ಮೈಸೂರು.

೨೭. ______ , *ಪಿರಿಯಾ ಪಟ್ಟಣದ ಕಾಳಗ*, ೧೯೯೦, ಹೊನ್ನಾರು ಜನಪದ ಗಾಯಕರು, ಮೈಸೂರು

೨೮. ______ , ಜನಪದ ಬಸವ ಪುರಾಣ, ೧೯೮೧, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು

೨೯. ______ , ರಾಜಶೇಖರ. ಪಿ.ಕೆ. (ಸಂ.), ಜನಪದ ಮಹಾಭಾರತ, ೨೦೦೪, ಹೊನ್ನಾರು ಗಾಯಕರು, ಮೈಸೂರು

೩೦. ರಂಗರಾಜ ವನದುರ್ಗ, ಜನಪದ ಸಾಂಸ್ಕೃತಿಕ ವೀರರು, ೨೦೦೭, ಡಾ. ಬಿ. ಆರ್, ಅಂಬೇಡ್ಕರ್ ಅಧ್ಯಯನ ಕೇಂದ್ರ, ಕುವೆಂಪು ವಿಶ್ವ ವಿದ್ಯಾಲಯ

೩೧. ವಿವೇಕ ರೈ, ತುಳು ಜನಪದ ಸಾಹಿತ್ಯ, ೧೯೮೫, ಕನ್ನಡ ಸಾಹಿತ್ಯ ಪರಿಷತ್ತು, ಬೆಂಗಳೂರು,

೩೨. ವೀರಣ್ಣ ದಂಡೆ, ಜನಪದ ಹಾಲುಮತ ಮಹಾಕಾವ್ಯ, ೨೦೦೦, ಕನ್ನಡ ಪುಸ್ತಕ ಪ್ರಾಧಿಕಾರ, ಬೆಂಗಳೂರು

೩೩. ವೀರಣ್ಣ ದಂಡೆ, (ಸಂ), ಮೈಲಾರ ಲಿಂಗ, ೨೦೧೧, ಮೇಳಕುಂದಿ, ಕಲಬುರ್ಗಿ

೩೪. ವೆಂಕಟೇಶ. ಎಂ. ಎನ್. ಮೈಲಾರದ ಜಾತ್ರೆಗಳು: ಪ್ರದರ್ಶನಾತ್ಮಕ ಅಧ್ಯಯನ, ೧೯೯೮, ಅಭಿ ಆದರ್ಶ ಪ್ರಕಾಶನ, ಭದ್ರಾವತಿ

೩೫. ವೆಂಕಟೇಶ ಇಂದ್ವಾಡಿ, ಮಂಟೇಸ್ವಾಮಿ ಪರಂಪರೆ, ೧೯೯೯, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾಲಯ, ಹಂಪಿ

೩೬. ______ , (ಸಂ) ಮಂಟೆಸ್ವಾಮಿ ಕಾವ್ಯ: ಸಾಂಸ್ಕೃತಿಕ ಮುಖಾಮುಖಿ, ೨೦೦೪, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ

೩೭. ______ , (ಸಂ) ಮಲೆಯ ಮಾದೇಶ್ವರ: ಸಾಂಸ್ಕೃತಿಕ ಮುಖಾಮುಖಿ, ೨೦೦೮, ಪ್ರಸಾರಾಂಗ, ಕನ್ನಡ ವಿಶ್ವವಿದ್ಯಾನಿಲಯ, ಹಂಪಿ.

೩೮. ಶಂಕರನಾರಾಯಣ, ತೀ. ನಂ. ಜಾನಪದ ಮೈಲಿಕಲ್ಲುಗಳು, ೧೯೭೦, ತೀನಂಶ್ರೀ ಪ್ರಕಾಶನ, ಮೈಸೂರು.

೩೯. ______ , ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು, ೧೯೮೮, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾಲಯ

೪೦. ______ , ಜನಪದ ಮಹಾಕಾವ್ಯ, ೧೯೯೭, ಕರ್ನಾಟಕ ಸಂಘ, ಪುತ್ತೂರು

೪೧. ____ , (ಸಂ). ಕರ್ನಾಟಕ ಜನಪದ ಮಹಾಕಾವ್ಯಗಳು, ೧೯೯೮, ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪೨. ____ , ಫಿನ್ಲೆಂಡಿನ ಜಾನಪದ ವಿದ್ವಾಂಸರು ೨೦೦೧ ಕರ್ನಾಟಕ ಜಾನಪದ ಮತ್ತು ಯಕ್ಷಗಾನ ಅಕಾಡೆಮಿ, ಬೆಂಗಳೂರು

೪೩. ಶ್ರೀಕಂಠ ಕೂಡಿಗೆ, (ಸಂ), ಪಾಶ್ಚಾತ್ಯ ಮಹಾಕಾವ್ಯಗಳು, ೧೯೮೫, ಕನ್ನಡ ವಿಭಾಗ, ಬಿ. ಆರ್. ಪ್ರಾಜೆಕ್ಟ್, ಶಿವಮೊಗ್ಗ ಜಿಲ್ಲೆ.

೪೪. ವಾಮನ ನಂದಾವರ, *ಕೋಟಿ ಚೆನ್ನಯ*, ೨೦೦೧, ಹೇಮಾಂಗಿ ಪ್ರಕಾಶನ, ಮಂಗಳೂರು.

೪೫. ವಿರೂಪಾಕ್ಷಿ ಪೂಜಾರಹಳ್ಳಿ, *ಬೇಡ ಬುಡಕಟ್ಟಿನ ಚರಿತ್ರೆ ಮತ್ತು ಸಂಸ್ಕೃತಿ*, ೨೦೦೮, ಪ್ರಸಾರಾಂಗ, ಕನ್ನಡ ವಿವಿ, ಹಂಪಿ.

3.3.2 English Books

1. Appadurai, Arjun (et.al.), 1991, *Gender, Genre, and Power in South Asian Expressive Traditions,* Philadelphia, University of Pennsylvania Press.
2. Blackburn, Stuart. H. and Ramanujan A. K. , *Another Hormony, 1986,* Delhi: Oxford University Press.
3. Blackburn, Stuart, H. , *Singing of Birth and Death: Text in Performance, 1988,* Philadelphia: University of Pennsylvania Press.
4. Blackburn, Stuart. H., Claus Peter J. (et.al), *Oral Epics in India, 1989,* University of California Press, Berkeley.
5. Brenda Beck. E. F., *The Three Twins: The Telling of a South Indian Folk Epic,* 1982, Bloomington, Indiana University Press, New York: Oxford University Press
6. Claus, Peter J. , Handoo Jawaharlal and Pattanayak D.P., *Indian Folklore, Vol. II 1980,* Mysore, Central Institute of Indian Languages Mysore.
7. Hatto (ed.), *Traditions of Heroic and Epic Poetry,* 1980 London.
8. Lauri Honko (ed.), *Religion, Myth, and Folklore in the world's Epics: The Kalevala and its predecessors,* 1980 Berlin, New York; Mountain De Gruyter
9. Lauri Honko,(special Editor), *Epics along the Silk Roads*, (Proceedings of the first conference of the Folklore Fellows in oral epics) *Oral Tradition,* vol. 11. 1996, Slavic publishers, Columbia, Ohio, USA.
10. Lauri Honko, Handoo Jawaharlal and Foley John Miles (eds.), *The Epic: Oral and Written*, 1998, Central Institute of Indian Languages, Mysore.
11. Lauri Honko (ed.) *Textualisation of Oral Epics*, 2000, (Trends in Linguistics: studies and monographs 128, Mouton de Gruyter, Berlin- Newyork.
12. Lauri Honko, *The Kalevala and the World's Traditional Epics*, 2002, (Studia Finnica Folkloristica 12), Finnish Literature Society, Helsinki.

13. Lauri Honko, (ed.), FF Network, Vols 1-19 , 1990-98 Finnish Academy of Science and Letters, Helsinki.

14. Lauri Honko, (ed.), NIF News letter Vols 1-18, 1972- 1990, Nordic Institute of Folklore, Turku.

15. Lauri Honko, In collaboration with Chinnappa Gowda, Anneli Honko, and Viveka Rai, *The Siri Epic as performed by Gopalanaika, Part I and Part II, 1996,* FF communications, No. 265, Suomalainen Tiedeakatemia, Acedemia Scientiarum Fennica, Helsinki.

16. Lord Albert, *The Singer of Tales,* 1965, New York.

17. Mahendra Kumar Misra, *Oral Epics of Kalahandi*, 2007, National Folklore support Centre, Chennai.

18. Meerasabihalli Shivanna, *Ettappa (*The story of first cultural hero oF kadugolla tribe), CVG publications, Bangalore

19. Molly Kaushal (Ed.) *Chanted Narratives: The Living 'Katha – Vachana' Tradition*, 2001, Indira Gandhi National Centre for the Arts and D. K. Print world (p) Ltd, New Delhi.

20. Oinas Felix J. (ed.), *Heroic Epic and Saga,* 1978, Bloomington and London.

21. Sontheimer, Gunthur - Dietz, *King of Hunters, warriors, and shepherds: Essays on Khandoba*, 1997 (ed.) Anne Febthasus, Adithya Malik and Heidrun Bruckner, New Delhi, Indira Gandhi National Centre for Arts/ Manohar publications, New Delhi.

22. Sontheimer, Gunther-Deitz, *Pastoral Deities of Western India,* 1989, Oxford University Press, New York.

23. Ramachandran. C. N. and N.T. Bhat (Tr.) *Male Madeshwara: A kannada Oral Epic*, 2000, Sahithya Academy, New Delhi.

24. Roghair, Gene H., *The Epic of Palnadu: A study and Translation of Palnadu, Virula Katha, A Telugu Oral tradition from Andhra Pradesh,* India.

25. Shankaranarayana T.N., *Epic of Junjappa: Text and Performance, 1994,* RRC, MGM college, Udupi.

26. Shankaranarayana D. Pujari, (Tr.) *Epic of the warriors*, 2007, National Folklore Support Centre, Chennai.

27. Venkatesha. M. N., *Mylaralinga Jatre*, 2007, National Folklore Support Centre, Chennai.

೩.೪. ಅರ್ಥಕೋಶ

೧.	ಅದ್ನ	=	ಅಳತೆಯ ಮಾಪನ
೨.	ಅವರೆ ಹರಕಂಬರಾನಾ	=	ಅವರೆಕಾಯಿ ಕಿತ್ತುಕೊಂಡು ಬರೋಣ
೩.	ಅಸಾಸೂರ	=	ದೊಡ್ಡ ಶೂರ, ಅಸಹಾಯ ಶೂರ
೪.	ಅಗ್ರಿಮೆಂಟು	=	ಕರಾರು
೫.	ಅಡ್ಡೆ	=	ಎರಡು ಬಿಂದಿಗೆಗಳನ್ನು ಒಟ್ಟಿಗೆ ಹೊತ್ತುತರುವ ತಕ್ಕಡಿಯ ರೀತಿಯ ಸಾಧನ.
೬	ಅಗ್ಗಾ	=	ವಿಶೇಷ
೭	ಅಡ್ಡೆಣು	=	ಬೆಟ್ಟದ ಬುಡದ ಅಂಚು
೮.	ಅರಿವೆ	=	ಒಟ್ಟೆ
೯.	ಅಳಿಯೂಟ	=	ಅಳಿಯನಿಗೆ ಹಾಕುವ ವಿಶೇಷ ಊಟ
೧೦.	ಆತು	=	ಆಯಿತು
೧೧.	ಆತುಕೊಂತೀನಿ	=	ಹಿಡಿದುಕೊಳ್ಳುತ್ತೇನೆ
೧೨.	ಆವಿಗೆ	=	ಪವಿತ್ರವಾದ
೧೩.	ಆಕಲು ಮರ	=	ಒಂದು ಬಗೆಯ ಮರ
೧೪.	ಆರು ಹೂಡು	=	ಬೇಸಾಯ ಮಾಡು
೧೫.	ಆಗಣ್ಣಿನೋರು	=	ಆ ಕಡೆಯವರು
೧೬.	ಆಸರಿಕೆ	=	ನೀರು
೧೭.	ಇಸಕಂಬ್ರ	=	ಹಿಸುಕವರೆ ಹುಳಿ
೧೮.	ಇಕ್ಕೇರಿ ವರಹ	=	ಇಕ್ಕೇರಿ ಸಂಸ್ಥಾನದಲ್ಲಿ ಚಲಾವಣೆಯಲ್ಲಿದ್ದ ನಾಣ್ಯ
೧೯.	ಈರೈ ಜುಂಜಪ್ಪ	=	ವೀರಯ್ಯ ಜುಂಜಪ್ಪ
೨೦.	ಈಗಣ್ಣಿನೋರು	=	ಈ ಕಡೆಯವರು
೨೧.	ಉಚ್ಚಿಕೊಳ್ಳು	=	ಭೇದಿ ಮಾಡಿಕೊಳ್ಳು

೨೨.	ಉಗ್ಗು	=	ಎರಚು
೨೩.	ಉಗ್ಗುಳದಗಡಿಗೆ	=	ಗುಗ್ಗಳದ ಗಡಿಗೆ
೨೪.	ಉದಿ	=	ಹುದಿ=ಬೇಲಿಹಾಕುವ ಮೊದಲು ಸಿದ್ಧಪಡಿಸುವ ಮಣ್ಣಿನ ದಿಣ್ಣೆ
೨೫.	ಉಗುರೆಣ್ಣೆ	=	ಉಗುರಿನಿಂದ ಎಣ್ಣೆಹಚ್ಚುವ ಶಾಸ್ತ್ರ.
೨೬.	ಎಕ್ಕೆಬರ	=	ಭೀಕರ ಬರ
೨೭.	ಏಸು	=	ಎಷ್ಟು
೨೮.	ಎಳಬತ್ತಿ ಬಳಿದು	=	ಕುಂಬಾರನು ಸುಣ್ಣದ ತಿಳಿನೀರಿನಲ್ಲಿ ಹದ್ದಿದ ಹತ್ತಿಯ ಬತ್ತಿಯಿಂದ ಹೊಸಮಡಿಕೆಯ ಮೇಲೆ ಚಿತ್ತಾರ ಬರೆಯುವುದು
೨೯.	ಎಡೆ	=	ನೈವೇದ್ಯ
೩೦.	ಐಬು	=	ದೋಷ, ಕೊರತೆ
೩೧.	ಐತಲೇ	=	ಇದೆಯೋ
೩೨.	ಒಂದಪ	=	ಒಂದು ಸಲ
೩೩.	ಓಲೆಕಾರ	=	ಪತ್ರಗಳನ್ನು ತಲುಪಿಸುವವನು, ಮಾಟಗಾರ
೩೪.	ಕಕ್ಕಿಕೊಳ್ಳು	=	ವಾಂತಿಮಾಡಿಕೊಳ್ಳು
೩೫.	ಕಂದುಹಾಕುವುದು	=	ಹಸು ಸತ್ತ ಕರುವನ್ನು ಈಯುವುದು
೩೬.	ಕರಿ ತಲೆಯವರು	=	ಕರಿಯ ತಲೆಕೂದಲುಳ್ಳ ಹೆಂಗಸರು
೩೭.	ಕಳ್ಳೆ	=	ಮುಳ್ಳು, ಜಾಲಿಮರದ ಮುಳ್ಳು
೩೮.	ಕರಿಮಲೆ	=	ಕರಿಮಲೆ ಎಂಬ ಬೆಟ್ಟ
೩೯.	ಕಾಯಬಿಡುವುದು	=	ದೇಹತ್ಯಾಗ ಮಾಡುವುದು, ಸಾಯುವುದು
೪೦.	ಕಂಬಳಿ ಕರೆ ಕಟ್ಟಿ	=	ಕಂಬಳಿಯ ತುದಿಯ ದಾರವನ್ನು ಗಂಟು ಹಾಕುವುದು
೪೧.	ಕುಂದ್ರಿಸಿ	=	ಕುಳ್ಳಿರಿಸಿ
೪೨.	ಕೆದರು	=	ಕೋಪ
೪೩.	ಕೆರ	=	ಚಪ್ಪಲಿ
೪೪.	ಕಣ	=	ಧಾನ್ಯದ ಹುಲ್ಲು ತುಳಿಸುವ ಸ್ಥಳ
೪೫.	ಕಳು	=	ಕರುಳು
೪೬.	ಕೋರಚೀಲ	=	ಕೋರಿಬಟ್ಟೆಯ ಚೀಲ, ಚಿಕ್ಕಚೀಲ

೪೭.	ಕಟ್ಟುಗ್ರದವರ	=	ಕಟುವಾದಷ್ಟು ಉಗ್ರವಾದವರ
೪೮.	ಕೆಂಗುರಿಗಣ್ಣು	=	ಕೆಂಪಾದ ಉರಿಗಣ್ಣು ಕೋಪದಿಂದ ಕೆಂಪಾದ ಕಣ್ಣು
೪೯.	ಕೆಂಬತ್ತದ	=	ಕೆಂಪು ಬತ್ತದ
೫೦.	ಕೆದರಿತ್ತು	=	ಹರಡಿಕೊಂಡಿತ್ತು
೫೧.	ಕೋಡಣಸು	=	ದನಗಳ ಕೋಡಿನ ತುದಿಗೆ ಹಾಕುವ ಹಿತ್ತಾಳೆಯ ಆಭರಣ
೫೨.	ಕೆರಡಾರ	=	ಲೋಹದಿಂದ ಮಾಡಿದ ಒಂದು ಬಗೆಯ ಆಯುಧ
೫೩.	ಕಾನು ಮುಳ್ಳು	=	ಕಾಡಿನ ಮುಳ್ಳು
೫೪.	ಕಣ್ಣಿ ಹರಕೊಂಡು	=	ಹಗ್ಗದ ಗಂಟು ಬಿಚ್ಚಿಕೊಂಡು
೫೫.	ಕಾಯ	=	ಶರೀರ
೫೬.	ಕುತ್ತರ, ಕುತ್ತರಿ	=	ಕುತ್ರಿ, ಗುಂಡಿ
೫೭.	ಕಡಸೂರಿ	=	ಕಡಚೂರಿ, ಕತ್ತಿ
೫೮.	ಕೊಪ್ಪಿಗೆ	=	ಕಂಬಳಿಗುಪ್ಪೆ, ಕೊಪ್ಪೆ, ಕಂಬಳಿಯನ್ನು ತಲೆಗೆ ಧರಿಸುವ ಕ್ರಮ
೫೯.	ಕವಣೆ	=	ಕಲ್ಲು ಬೀಸಲು ಬಳಸುವ ಸಾಧನ
೬೦.	ಕತ್ತನಾರಿ	=	ಕತ್ತಾಳೆ ನಾರಿನಿಂದ ಮಾಡಿದ ಸೀರೆ
೬೧.	ಕಾಯ ಬೆರಸಿ	=	ಶರೀರ ಸಮೇತ
೬೨.	ಕೂರಿಗೆ	=	ಬೀಜ ಬಿತ್ತುವ ಸಾಧನ
೬೩.	ಗಟಕಿಸಿಕೊಂಡು	=	ಸೆಟೆದುಕೊಂಡು
೬೪.	ಗಾವುದ	=	ಮೂರು ಮೈಲಿ
೬೫.	ಗೆಪ್ತಿಯಾಗಿ	=	ಜ್ಞಾಪಕ ಇಟ್ಟುಕೊಂಡು
೬೬.	ಗೆರಸು	=	ಧಾನ್ಯ ತುಂಬುವ ಬುಟ್ಟಿ
೬೭.	ಗೆಜ್ಜಲಾರತಿ	=	ಒಂದು ಬಗೆಯ ಆರತಿ
೬೮.	ಗೇಣಾಗೆ	=	ಒಂದು ಗೇಣು ಉದ್ದದಷ್ಟು
೬೯.	ಗ್ಯಪ್ತಿ	=	ಜ್ಞಾನಪಕ
೭೦.	ಗುರಿಕೆ	=	ಗುಂಡಿ
೭೧.	ಗುಡಗು	=	ಗುಂಡಿ

೭೨.	ಗುಟ್ರಿಕೆಹಾಕಿ	=	ಗುಟುರುಹಾಕಿ, ಹೋರಿ ಶಬ್ದಮಾಡುವುದು
೭೩.	ಗೂಡು	=	ರೊಪ್ಪ
೭೪.	ಘತ್ನ	=	ಅಳತೆಯ ಮಾಪನ
೭೫.	ಚರ್ಮದೋರಿಗೆ	=	ಚಮ್ಮಾರರಿಗೆ
೭೬.	ಚರುಣೆ ಹಾಕುವುದು	=	ಕೆಂಪು ಅನ್ನವನ್ನು ದೋಷ ಕಳೆಯಲು, ಮಾಟದ ಪ್ರಭಾವ ಕಳೆಯಲು ಹಾಕುವುದು
೭೭.	ಜಾಡು	=	ದಾರಿ
೭೮.	ಜಾಡು	=	ದನಗಳು ಹೋಗುವ ದಾರಿಯಲ್ಲಿ ಮಾಟದ ಕಳೆಯುವುದು ಪ್ರಭಾವವನ್ನು ಹೋಗಲಾಡಿಸುವುದು
೭೯.	ಜಡ್ಡುತನ	=	ಕಾಯಿಲೆ
೮೦.	ಜಲ್ದಿ ಜಲ್ದಿ	=	ಬೇಗ ಬೇಗ
೮೧.	ಜೆನ್ನಿಗೆ	=	ಪವಿತ್ರವಾದ ಕುರಿಂಯ ಹಾಲು, ಕಾಡುಗೊಲ್ಲರಲ್ಲಿ ಹುಟ್ಟಿದ ಮಕ್ಕಳನ್ನು ಹಟ್ಟಿಯೊಳಕ್ಕೆ ಕರೆದುಕೊಳ್ಳುವ ಮೊದಲು ಶುದ್ಧೀಕರಿಸಲು ತೀರ್ಥದ ರೀತಿ ಈ ಹಾಲು ಕುಡಿಸುತ್ತಾರೆ.
೮೨.	ಚರಿಗೆ	=	ನೀರು ಕಾಯಿಸುವ ತಪ್ಪಲೆ / ಪಾತ್ರೆ
೮೩.	ರಕುತ	=	ಕಕ್ತ
೮೪.	ತೊಲೆ	=	ತಪ್ಪಿಗಳು
೮೫.	ತಡಕೊಂಡು	=	ತಡೆದುಕೊಂಡು
೮೬.	ತಗೊಂಬಂದು	=	ತೆಗೆದುಕೊಂಡು ಬಂದು
೮೭.	ತನಿ ಎರೆದು	=	ಹಾಲು ತುಪ್ಪ ಬಿಟ್ಟು
೮೮.	ತೋಳ ಸಣಿಗೆ	=	ತೋಳ ಸರಿಗೆ, ತೋಳಿನ ಆಭರಣ
೮೯.	ತೆಂಕಲು	=	ದಕ್ಷಿಣ
೯೦.	ತಳಮನೆ	=	ಸ್ಥಳಮನೆ
೯೧.	ತಿರುಕೊಂಡು	=	ತಿರುಪೆ ಬೇಡಿ
೯೨.	ತಿರುಗಂಚಿ	=	ಮದುವೆಯಾದ ಹೆಣ್ಣು ತವರು ಮನೆಗೆ, ಮರುಗಂಚಿ ಅಲ್ಲಿಂದ ಗಂಡನ ಮನೆಗೆ ಮತ್ತೆ ತವರು ಮನೆಗೆ ಶಾಸ್ತ್ರದಂತೆ ಹೋಗುವುದು ಬರುವುದು

೯೩.	ತೋರ್ಪಡಣೆ ಮಾಡಿ	=	ತೋರಿಸಿ
೯೪.	ದಟ್ಟುಬಂಢಾರ	=	ಅರಿಸಿನ
೯೫.	ದಟ್ಟಿನರಸು	=	ಸೊಂಟಕ್ಕೆ ದಟ್ಟಿಸುತ್ತಿದವನು
೯೬.	ದತ್ತೂರಿ	=	ದತ್ತೂರಿ ಗಿಡ
೯೭.	ದಿಗ್ಗನೆ	=	ತಕ್ಷಣ
೯೮.	ಧರಣಿ ದೊಡ್ಡಯ್ಯ	=	ಚಿತ್ರದೇವರು
೯೯.	ನಿಬ್ಬಳ ದಾಗೆ	=	
೧೦೦.	ನೆಕ್ಕುನೆಕ್ಕೊಂಡು	=	ನೆಗೆದು ನೆಗೆದುಕೊಂಡು
೧೦೧.	ನಿಂದರಿಸೋದು	=	ನಿಂದಿಸುವುದು
೧೦೨.	ನೀರು ನಿಲ್ಲುವುದು	=	ಬಸಿರಾಗುವುದು
೧೦೩.	ನಮ್ಮಪ್ಪನ ತಕ	=	ನಮ್ಮ ತಂದೆಯಿಂದ
೧೦೪.	ನಿನ್ನ ತಾವಕ	=	ನಿನ್ನ ಹತ್ತಿರ
೧೦೫.	ನೀರುಗಂಟಿ	=	ಕೆರೆಯ ನೀರು ಗದ್ದೆ ಮತ್ತು ತೋಟಕ್ಕೆ ಬಿಡುವವನು
೧೦೬.	ಪಂಚಾಂಗದಯ್ಯ	=	ಪಂಚಾಂಗ ನೋಡಿ ಮುಹೂರ್ತ ಗೊತ್ತು ಮಾಡುವವನು
೧೦೭.	ಪರಪಂಚ	=	ಪ್ರಪಂಚ
೧೦೮.	ಪಟ್ಟೆದಟ್ಟಿಯೋನು	=	ಪಟ್ಟೆದಟ್ಟಿ ಉಟ್ಟಿರುವ ಜುಂಜಪ್ಪ
೧೦೯.	ಪಡುವಲು	=	ಪಶ್ಚಿಮ
೧೧೦.	ಪಿಳ್ಳಾಗೋವಿ, ಪಿಳ್ಳಗೋವಿ	=	ಕೊಳಲು
೧೧೧.	ಪೆಮ್ಮು	=	ಚೆನ್ನ
೧೧೨.	ಪಟಿಗುಟ್ಟು ತೋಲೆ	=	ಪಟಪಟ ಎಂದು ಒದೆಯುತ್ತ
೧೧೩.	ಬಡಿದಾತು	=	ಹೊಡೆದು ಆಯಿತು
೧೧೪.	ಬಗರಿ	=	ಹೋತ
೧೧೫.	ಬೆರಸು ಹಸು	=	ಮಿಶ್ರತಳಿ ಹಸು
೧೧೬.	ಬರೋಮಟ	=	ಬರುವವರೆಗೆ

೧೪೩.	ರಣಾಗ್ರ	=	ಯುದ್ಧದ ವೀಳ್ಯ?
೧೪೪.	ವಿಷ ಸರೀತೈತೆ	=	ವಿಷ ಹೊರಕ್ಕೆ ಬರುತ್ತದೆ
೧೪೫.	ವೈನಾಗೈತೆ	=	ಚೆನ್ನಾಗಿದೆ
೧೪೬.	ಸುಕ್ಕೆ ಬೊಟ್ಟು	=	ಚುಕ್ಕಿ ಬೊಟ್ಟು
೧೪೭.	ಸರಿಮಾಡ್ಲಾಕೆ	=	ಸಾಯಿಸುವುದಕ್ಕೆ
೧೪೮.	ಸಂಚಿ	=	ಎಲೆ ಅಡಕೆ ಚೀಲ
೧೪೯.	ಸಿಕ್ಕಿಗೆ	=	ಕಷ್ಟಕ್ಕೆ
೧೫೦.	ಸಾಸನ	=	ಶಾಸನ
೧೫೧.	ಸಿಗ್ಗನೆ	=	ಬೇಗನೆ
೧೫೨.	ಸುಗಲು	=	ಸಂಗೀತ, ಹಾಡು
೧೫೩.	ಸುಕಡಾ ಬಕಡಾ	=	ಚೂರು ಚೂರು
೧೫೪.	ಸೂಲಂಗಿ	=	ಕಬ್ಬಿನ ಹೂವು
೧೫೫.	ಸುರನಾರಿ ಬಿಲ್ಲು	=	ಒಂದು ಬಗೆಯ ಬಿಲ್ಲು
೧೫೬.	ಸ್ತೋತ್ರಣೆ	=	ಸ್ತೋತ್ರ, ಪ್ರಾರ್ಥನೆ
೧೫೭.	ಹೊತ್ತಾತು	=	ಹೊತ್ತು ಆಯಿತು, ಸಮಯ ಮೀರಿತು
೧೫೮.	ಹೊಳವು	=	ದಾರಿ
೧೫೯.	ಹೊಟ್ಟೆಕರ	=	ಹಸುವಿನ ಹೊಟ್ಟೆಯೊಳಗಿನ ಕರು
೧೬೦.	ಹಾಸಿ	=	ಮೂಲಕ
೧೬೧.	ಹೊನ್ನು ಒಟ್ಗೊ ಆಲೇಗೌಡ	=	ಚಿನ್ನ ತುಂಬಿಕೊಳ್ಳುವ ಆಲೇಗೌಡ
೧೬೨.	ಹಟ್ಟಿತಾಕೆ	=	ಹಟ್ಟಿಯ ಹತ್ತಿರಕ್ಕೆ
೧೬೩.	ಹಿರೆಜುಂಜ	=	ಹಿರಿಯ ಜುಂಜಪ್ಪ
೧೬೪.	ಹಿಂಡು	=	ಗುಂಪು, ಹಾಲುಕರೆಯುವುದು
೧೬೫.	ಹುಣಿಸೆ ಬರಲು	=	ಹುಣಿಸೆ ಮರದ ಕೋಲು
೧೬೬.	ಹಣೆಗಣಸು	=	ಹಣೆಗೆ ಹಾಕುವ ಆಭರಣ
೧೬೭.	ಹಂಗಂದೇಟಿಗೆ	=	ಹಾಗಂದ ಕೂಡಲೇ

೧೧೭.	ಬಕ್ಕಸದಾಗೆ	=	ಬೊಕ್ಕಸದಲ್ಲಿ
೧೧೮.	ಬಡಗಲು	=	ಉತ್ತರ
೧೧೯.	ಬಗ್ಗ	=	ನಾಯಿ
೧೨೦.	ಬಾನ	=	ಊಟ
೧೨೧.	ಬುಲ್ಡೆ	=	ಬುರುಡೆ, ನೀರು ತುಂಬುವ ಸಾಧನ
೧೨೨.	ಬಡ್ಯಾಗೆ	=	ಬುಡದಲ್ಲಿ
೧೨೩.	ಬುಡದರಿಸಿ	=	ಬುಡಸಮೇತ
೧೨೪.	ಒಂದಪ	=	ಒಂದುಸಲ
೧೨೫.	ಭೂಮವ್ವ	=	ಭೂಮಿತಾಯಿ
೧೨೬.	ಮಣಸು	=	ಇನ್ನೂ ಬಸಿರಾಗದ ದೊಡ್ಡರರು
೧೨೭.	ಮಜ್ಜಿನ	=	ಸ್ನಾನ
೧೨೮.	ಮಿಸ್ಟೀಕ್	=	ತಪ್ಪು (Mistake)
೧೨೯.	ಮಜ್ಜೆ	=	ಮೂಳೆ
೧೩೦.	ಮುಸುರೆ ಮಾಡಿ	=	ಶುದ್ಧಿಮಾಡಿ
೧೩೧.	ಮುಸ್ತಾಫ	=	ಆಯುಧ
೧೩೨.	ಮಿಡಿನಾಗರ	=	ಚಿಕ್ಕ ನಾಗರಹಾವು (ಇದರ ವಿಷದ ತೀವ್ರತೆ ಹೆಚ್ಚು)
೧೩೩.	ಮಂಚುದಲೆ	=	ಹೊಳೆಯುವಂತಹ
೧೩೪.	ಮೂಡಲು	=	ಪೂರ್ವ
೧೩೫.	ಮಗಾ	=	ಮಗು
೧೩೬.	ಮನಗು	=	ಮಲಗು
೧೩೭.	ಮಿಳ್ಳೆ	=	ಮಕ್ಕಳಿಗೆ ಹಾಲು ಕುಡಿಸುವ ಸಾಧನ
೧೩೮.	ಮಿಂಡರಿಗೆ	=	ಅನೈತಿಕ ಸಂಬಂಧದಿಂದ ಹುಟ್ಟಿದ ಹುಟ್ಟಿದ
೧೩೯.	ಮುಂಗನಸು	=	ಮುಂದೆ ಆಗುವುದನ್ನು ತಿಳಿಸುವ ಕನಸು
೧೪೦.	ಮಡಿದು	=	ಜೆಜ್ಜಿ, ಸತ್ತು
೧೪೧.	ಮನೋಜಯ	=	ನಿಶ್ಚಿತಾರ್ಥ
೧೪೨.	ಮುಖ	=	ಮನಸ್ಸು ಗಟ್ಟಿ ಮಾಡಿಕೊಂಡು, ದೃಢನಿರ್ಧಾರ ಗಟ್ಟಿಮಾಡಿಕೊಂಡು ಮಾಡಿಕೊಂಡು

ನಮ್ಮ ಪ್ರಕಟಣೆಗಳು

ಕ್ರ.ಸಂ.	ಕೃತಿಯ ಹೆಸರು ಲೇಖಕ/ ಸಂಪಾದಕರ ಹೆಸರು	ಬೆಲೆ
೧.	ಇಂದಿನ ಕನಸು ನಾಳಿನ ನನಸು *ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ*	೧೦೦.೦೦
೨.	ಜಾನಪದ ವರ್ಷ–೨೦೧೧ *ಸಂ : ಡಾ. ಎಸ್.ಪಿ. ಪದ್ಮಪ್ರಸಾದ್*	೧೦೦.೦೦
೩.	ಜಾನಪದ ವಸ್ತುಕೋಶ *ಸಂ : ಪ್ರೊ. ಸ.ಚಿ. ರಮೇಶ*	೧೪೦.೦೦
೪.	ಕೇರಳದ ಜನಪದವೀರ ತಚ್ಚೋಳಿ ಒದೇನನ್ *ಡಾ. ಕೆ. ಕಮಲಾಕ್ಷ*	೧೪೦.೦೦
೫.	ಕಾಡುಗೊಲ್ಲರ ಕೋಲಾಟದ ಪದಗಳು *ಸಂ : ಮೋಹನಕುಮಾರ ಎನ್.*	೮೦.೦೦
೬.	ತುಳುನಾಡಿನ ಜನಪದ ಕತೆಗಳು *ಸಂ : ಡಾ. ಪಾಲ್ತಾಡಿ ರಾಮಕೃಷ್ಣ ಆಚಾರ್*	೧೦೦.೦೦
೭.	ಕರ್ನಾಟಕ ಸಂಶೋಧನ ಜಾನಪದ *ಸಂ : ಪ್ರೊ.ಎ.ವಿ. ನಾವಡ*	೯೫೦.೦೦
೮.	ಮಲೆನಾಡ ನುಡಿಕೋಶ *ಸಂ : ವೇಣಾಕ್ಷಿ ಎಸ್.ಡಿ.*	೧೫೦.೦೦
೯.	ಬುರ್ರಕಥಾ ಜಯಮ್ಮ *ಡಾ. ಕೆ. ಪ್ರೇಮಕುಮಾರ*	೪೦.೦೦
೧೦.	ಗೊಂಬೇಗೌಡರ ರಾಮನಗೌಡರು *ಡಾ. ಚಂದ್ರಪ್ಪ ಸೊಬಟಿ*	೮೦.೦೦
೧೧.	ನಮ್ಮ ಪರಿಸರದ ಲಂಬಾಣಿಗರು *ಡಾ. ಮಲ್ಲಿಕಾರ್ಜುನ ಕುಂಬಾರ*	೬೦.೦೦
೧೨.	ಕಾಡುಗೊಲ್ಲರ ಬೆಡಗಿನ ಪದಗಳು *ಸಂ : ಶ್ವೇತಾ ಎಂ.ಬಿ., ಶ್ರೀ ಮೋಹನಕುಮಾರ್ ಎನ್.*	೬೦.೦೦
೧೩.	ಹುಮಾಯೂನ್ ಹರಲಾಪುರ *ಡಾ. ವೃಷಭಕುಮಾರ*	೬೦.೦೦
೧೪.	ಅಪ್ಪಗೆರೆ ತಿಮ್ಮರಾಜು *ಶ್ವೇತಾ ಎಂ.ಬಿ.*	೮೦.೦೦
೧೫.	ನೆಲದ ನೆನಪು *ಡಾ. ಜಯಪ್ರಕಾಶ್ ಶೆಟ್ಟಿ ಹೆಚ್, ಡಾ. ಚಿಕ್ಕಮಗಳೂರು ಗಣೇಶ*	೨೦೦.೦೦
೧೬.	ನಮ್ಮ ಗಿಡಮರಬಳ್ಳಿಗಳು *ಶಾಂತಿ ನಾಯಕ*	೪೦.೦೦

೧೭. ದೇಶೀಯ ಕೃಷಿ ಹತೋಟಿ ಮತ್ತು ಸಂರಕ್ಷಣಾ ಕ್ರಮಗಳು
ಸಂ : ಪ್ರೊ. ಪ್ರಕಾಶ ಕಮ್ಮರಡಿ ೧೦೦.೦೦

೧೮. ಜಾನಪದ ವರ್ಷ–೨೦೧೨
ಸಂ : ಡಾ. ಕೆ.ವಿ. ಮುದ್ದವೀರಪ್ಪ ೧೨೦.೦೦

೧೯. ದಕ್ಷಿಣ ಭಾರತೀಯ ದೇಶೀ ಕೃಷಿವಿಜ್ಞಾನ ಕೋಶ (ಎರಡು ಸಂಪುಟಗಳು ಸೇರಿ)
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೧೦೦೦.೦೦
ಕಾ.ನಿ.ಸಂ : ಪ್ರೊ. ಆರ್ದ್ರಿಯಸ್ ಸುಂದರಂ,
ಸಂ : ಪ್ರೊ. ಸ.ಚಿ. ರಮೇಶ

೨೦. ವಿಸ್ತೃತ ಜಾನಪದ ಗ್ರಂಥಸೂಚಿ
ಪ್ರ.ಸಂ : ಪ್ರೊ. ಅಂಬಳಿಕೆ ಹಿರಿಯಣ್ಣ ೭೦೦.೦೦
ಸಂ : ಶ್ರೀ ಕ್ಯಾತನಹಳ್ಳಿ ರಾಮಣ್ಣ, ಶ್ರೀ ಟಿ.ಎಸ್. ರಾಜಪ್ಪ

೨೧. ಮೂಲತಾನದ ನಾಗಬ್ರಹ್ಮ ಮತ್ತು ಪರಿವಾರ ದೈವಗಳ ಪಾಡ್ದನ
ಸಂ : ಡಾ. ಇಂದಿರಾ ಹೆಗ್ಗಡೆ ೧೫೦.೦೦

೨೨. ಉತ್ತರ ಕನ್ನಡ ಕರಾವಳಿಯ ಜನಪದ ಕತೆಗಳು
ಸಂ : ಶಾಂತಿ ನಾಯಕ ೧೨೦.೦೦

೨೩. **Manteswamy Epic Tradition of South Karnataka**
Prof. Ambalike Hiriyanna ೨೮೦.೦೦

೨೪. **Dakshinatya Abhinaya Siddhanta**
Dr. Guru Rao Bapat ೧೦೦.೦೦

೨೫. ನಾಡವರ ಜಾನಪದ ತವನಿಧಿ
: ಪ್ರೊ. ಎನ್.ಆರ್. ನಾಯಕ ೨೬೦.೦೦

೨೬ **The Bayalatas of North Karnataka**
Dr. Basavaraja Malashetty
Translated by: Dr. Parvathi G. Aithal ೧೩೦.೦೦

೨೭. ತಾತ್ಯಾ–ಬಾಪು ಅವರ ಲಾವಣಿಗಳು
ಸಂ : ಡಾ. ಹರಿಲಾಲ ಪವಾರ ೮೦.೦೦

೨೮. ಪೂಜಾರಿ ಶಿವಣ್ಣ ಹೇಳಿದ ಜುಂಜಪ್ಪ ಮಹಾಕಾವ್ಯ
ಸಂ : ಡಾ. ತೀ.ನಂ. ಶಂಕರನಾರಾಯಣ, ಡಾ. ಎಂ.ಎನ್. ವೆಂಕಟೇಶ್ ೧೭೦.೦೦

೨೯. ಬೆಳಗಲ್ಲು ವೀರಣ್ಣ
ಡಾ. ಎಂ.ಎನ್. ವೆಂಕಟೇಶ್

೩೦. ಮಂಜಮ್ಮ ಜೋಗತಿ ೮೦.೦೦
ಡಾ. ಚಂದ್ರಪ್ಪ ಸೊಬಟಿ

೩೧. ಡಾ. ಪಿ.ಕೆ. ರಾಜಶೇಖರ
ಸಂಗಮೇಶ ಎಸ್. ಗಣಿ ೧೨೦.೦೦

೩೨. ಜಾನಪದ ಜಗಲಿ (ಸಂಶೋಧನಾ ಅರ್ಧವಾರ್ಷಿಕ ಪತ್ರಿಕೆ)
ಸಂಚಿಕೆ–೧, ೨, ೩ & ೪
ಬಿಡಿ ಪ್ರತಿಗೆ ೫೦.೦

ಕನ್ನಡದ ನೆಲದಲ್ಲಿ ಶಿಷ್ಟ ಸಾಹಿತ್ಯ ಪ್ರಕಾರದಲ್ಲಿ ಸಾಕಷ್ಟು ಅಧ್ಯಯನಗಳು ನಡೆದಿವೆ. ಆದರೆ ಜಾನಪದದಲ್ಲಿ ಆ ಪ್ರಮಾಣದ ಕೆಲಸಗಳ ಕೊರತೆ ಎದ್ದುಕಾಣುತ್ತದೆ. ಶಿಷ್ಟ ಸಾಹಿತ್ಯ ಅದರಲ್ಲೂ ಶಿಷ್ಟ ಮಹಾಕಾವ್ಯಗಳ ಅಧ್ಯಯನಗಳು ಪ್ರಾಮುಖ್ಯತೆ ಪಡೆದವು. ಪರಿಣಾಮ ಜನಪದ ಮಹಾಕಾವ್ಯಗಳ ಅಧ್ಯಯನಗಳು ಹಿನ್ನೆಲೆಗೆ ಸರಿದವು. ಸಾಹಿತ್ಯ ಅಧ್ಯಯನಗಳು 'ಸಾಂಸ್ಕೃತಿಕ' ಎನ್ನುವ ವಿಶಾಲ ನೆಲೆಯಲ್ಲಿ ಅಧ್ಯಯನಕ್ಕೆ ಒಳಗಾಗುತ್ತಿರುವುದು ಗಮನಾರ್ಹ. ಇದು ದೇಶೀ ಸಾಹಿತ್ಯ ಅಧ್ಯಯನದಲ್ಲಿ ಚಾರಿತ್ರಿಕವಾಗಿ ಮಹತ್ವದ ಪಲ್ಲಟ. ಬುಡಕಟ್ಟು ಸಮುದಾಯಗಳ ಧಾರ್ಮಿಕ ಪರಂಪರೆಯ ಪ್ರಾತಿನಿಧಿಕ ಅಂಶಗಳನ್ನು ಒಡಲಾಳದಲ್ಲಿ ಹುದುಗಿಸಿಕೊಂಡಿರುವ ಜನಪದ ಮಹಾಕಾವ್ಯಗಳು ವಿಶಿಷ್ಟವಾಗಿವೆ. ಬುಡಕಟ್ಟು ಸಮುದಾಯದ ಸಾಂಸ್ಕೃತಿಕ ಅನನ್ಯತೆಯನ್ನು ಅಭಿವ್ಯಕ್ತಿಸುವ ಜನಪದ ಕಾವ್ಯಗಳ ಪೈಕಿ ಜುಂಜಪ್ಪ ಕಾವ್ಯವೂ ಒಂದು. ಕಾವ್ಯವೊಂದರ ನಿರ್ದಿಷ್ಟ ಪಠ್ಯವು ಕಾಲದಿಂದ ಕಾಲಕ್ಕೆ ಸ್ವೀಕಾರ ಮತ್ತು ವಿಸರ್ಜನೆ ಪ್ರಕ್ರಿಯೆಗೆ ಒಳಪಡುತ್ತವೆ. ಈ ಹಿನ್ನೆಲೆಯಲ್ಲಿ ಜುಂಜಪ್ಪ ಕಾವ್ಯ ಭಿನ್ನ ಪಠ್ಯಗಳನ್ನು ಹೊಂದಿಯೂ ತನ್ನ ಅನನ್ಯತೆಯನ್ನು ಉಳಿಸಿಕೊಂಡಿದೆ. ಇಂತಹ ಕಾವ್ಯವನ್ನು ತುಮಕೂರು ಜಿಲ್ಲೆಯ ಗುಬ್ಬಿ ತಾಲ್ಲೂಕಿನ ಚೇಳೂರು ಹೋಬಳಿಯ ಮೆಣಸಿನಹಳ್ಳಿ ಗೊಲ್ಲರಹಟ್ಟಿಯ 'ಪದಹೇಳುವ ಶಿವಣ್ಣ' ಎಂದೇ ಖ್ಯಾತರಾದ ಶ್ರೀ ಪೂಜಾರಿ ಶಿವಣ್ಣ ನಿರೂಪಿಸಿದ ದೀರ್ಘಕಥಾರೂಪದ ಪಠ್ಯವನ್ನು ಪ್ರೊ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಸಂಪಾದಿಸಿದ್ದಾರೆ. ಜುಂಜಪ್ಪ ಕಾವ್ಯವನ್ನು ಸಂಗ್ರಹಿಸಿ, ಸಂಪಾದಿಸಿ, ವಿಶ್ಲೇಷಿಸುವ ಕಾರ್ಯಗಳು ಈವರೆಗೆ ನಡೆದಿವೆಯಾದರೂ ಜುಂಜಪ್ಪ ಕಾವ್ಯವನ್ನು ಕುರಿತ ಅಧ್ಯಯನಕ್ಕೆ ಪ್ರಕೃತ ಕೃತಿ ಸಹಾಯಕವಾಗಲಿದೆ. ಮೌಲಿಕ ಮೌಖಿಕ ಪಠ್ಯವೊಂದನ್ನು ಸಂಪಾದಿಸಿಕೊಟ್ಟಿರುವ ಪ್ರೊ. ತೀ.ನಂ. ಶಂಕರನಾರಾಯಣ ಮತ್ತು ಡಾ. ಎಂ.ಎನ್. ವೆಂಕಟೇಶ ಅವರಿಗೆ ವಿಶ್ವವಿದ್ಯಾಲಯದ ಅಭಿನಂದನೆಗಳು ಸಲ್ಲುತ್ತವೆ.

◆ ಪ್ರೊ. ಅಂಬಳಿಕೆ ಹಿರಿಯಣ್ಣ

ಕುಲಪತಿ

ವಿಸ್ತರಣೆ ಹಾಗೂ ಸಲಹಾ ಕೇಂದ್ರ
ಕರ್ನಾಟಕ ಜಾನಪದ ವಿಶ್ವವಿದ್ಯಾಲಯ

ISBN 978-93-83149-28-5

9 789383 149285

₹ : ೧೭೦/-

Printed at : Raja Printers, Bangalore-560 027, Ph.: 22234066